# ಭಾಗವತ ವಾಹಿನಿ

ತೆಲುಗು ಮೂಲ

**ಭಗವಾನ್ ಶ್ರೀ ಸತ್ಯಸಾಯಿ ಬಾಬಾ**

ಕನ್ನಡ ಅನುವಾದ

**ಹೆಚ್. ಎಂ. ಶಿವರಾಂ**

**ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರಿ)**
'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩
೨೦೧೮

*Bhagavata Vahini*—Translation of Telugu book written by Bhagavan Sri Sathya Sai Baba in Telugu, translated to English by Prof. N. Kasturi and translated to Kannada by H.M. Shivaram. Published by Sri Sathya Sai Publications Society (R), 'Sudhama House', Chickpet, Bengaluru 560 053, India. Demy octavo, Pages xiv+214.

© 2018
Sri Sathya Sai Publications Society, Bengaluru, India

೦೬/೨೦೧೮ (೨೦೦೦ ಪ್ರತಿಗಳು)

ಪುಟಗಳು : ೨೨೮

**ಬೆಲೆ : ₹ 60**

ಮುದ್ರಣ : ಪದ್ಮ ಶೇಖರ್ ಪ್ರಿಂಟರ್ಸ್, ಮೈಸೂರು; ✆ 98865 05878

ಬೇರೆ ಬೇರೆ ಧರ್ಮಗಳೆಲ್ಲ ಇರಲಿ,
ಎಲ್ಲ ಧರ್ಮಗಳೂ ವರ್ಧಿಸಲಿ,
ಭಗವಂತನ ಮಹಿಮೆಯನ್ನು ಎಲ್ಲ ಭಾಷೆಗಳಲ್ಲೂ
      ವಿವಿಧ ರಾಗಗಳಲ್ಲೂ ಹಾಡಲಿ.
ಧರ್ಮ ಧರ್ಮಗಳ ವ್ಯತ್ಯಾಸ ವೈಶಿಷ್ಟ್ಯಗಳನ್ನು ಗೌರವಿಸಿ.
ಭಾವೈಕ್ಯತೆಯ ಬೆಳಕನ್ನು ನಂದಿಸದಿರುವ
      ಧರ್ಮಗಳೆಲ್ಲ ಸತ್ವಯುತ ಎಂದು ಮನ್ನಿಸಿ.

**ಶ್ರೀ ಸತ್ಯಸಾಯಿ ಬಾಬಾ**

ಓಂ ಬ್ರಹ್ಮಾಂಡಕ್ಕೆ ಮೂಲವಾದ ಆದಿಮ ಶಬ್ದ. ಓಂಕಾರವು ಅನಾಹತ ಶಬ್ದ. ನಿಮ್ಮ ಹೃದಯದಲ್ಲೂ ವಿಶ್ವದ ಹೃದಯದಲ್ಲೂ ಸದಾ ನಿನದಿಸುತ್ತಿರುವ ಅದನ್ನು ಆಲಿಸಿರಿ.

ಅಹಂಕಾರವನ್ನು ಕತ್ತರಿಸಿ. ಅದು ಶಿಲುಬೆಯ ಮೇಲೆ ಅಳಿದು ಹೋಗಲಿ. ನಮಗೆ ಅಮರತ್ವವನ್ನು ತರಲಿ.

ಕಾರಣ–ಪರಿಣಾಮ, ಕಾರ್ಯ–ಅದರ ಫಲ—ಇವುಗಳ ಚಕ್ರವನ್ನು ಸದಾ ನೆನಪಿನಲ್ಲಿಡಿ.

ಚಂದ್ರನಿಂದ ದೂರ ಸರಿಯದ ನಕ್ಷತ್ರದ ಹಾಗೆ ನೀವೂ ಭಗವಂತನಿಂದ ಅತ್ತಿತ್ತ ಅಲುಗದೆ ಸ್ಥಿರವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಿರಿ.

ಬದುಕಿನ ಕಹಿಯೆಲ್ಲವನ್ನು ಈ ಪವಿತ್ರಾಗ್ನಿಯಲ್ಲಿ ಸಮರ್ಪಿಸಿ ಭವ್ಯರಾಗಿ, ಮಹಾನ್ ಆಗಿ ಪರಿಣಮಿಸಿರಿ.

# ಪರಿವಿಡಿ


ಪ್ರಿಯ ಓದುಗ . . . . . . . . . . . . . . . . . . . . . . . . . vii
ಪ್ರಧಾನ ಸಂಪಾದಕರ ಮಾತು . . . . . . . . . . . . . . . . . . . . ix
೧ ಭಾಗವತ . . . . . . . . . . . . . . . . . . . . . . . . . ೧
೨ ಭಾಗವತದ ಜನನ . . . . . . . . . . . . . . . . . . . . . ೭
೩ ಶಿಶು ಪರೀಕ್ಷಿತ್ ಮತ್ತು ಭವಿಷ್ಯವಾಣಿ . . . . . . . . . . . . ೧೨
೪ ಪ್ರಾಯಶ್ಚಿತ್ತಾರ್ಥ ಯಜ್ಞ . . . . . . . . . . . . . . . . . . . ೧೭
೫ ಯಜ್ಞ ಮತ್ತು ಹಿರಿಯರ ತಪಸ್ಸು . . . . . . . . . . . . . . . ೨೩
೬ ವಿದುರನ ತ್ಯಾಗ . . . . . . . . . . . . . . . . . . . . . . ೨೮
೭ ವಿದುರನ ಮಂತ್ರಾಲೋಚನೆ . . . . . . . . . . . . . . . . . ೩೧
೮ ಧೃತರಾಷ್ಟ್ರನ ಮನಃ ಪರಿವರ್ತನೆ . . . . . . . . . . . . . . ೩೭
೯ ಕೃಷ್ಣನ ನಿಷ್ಕ್ರಮಣ . . . . . . . . . . . . . . . . . . . . ೪೦
೧೦ ಕೃಷ್ಣ ಮಾಯೆ . . . . . . . . . . . . . . . . . . . . . . ೪೫
೧೧ ಪಾಂಡವರ ಶೋಕ . . . . . . . . . . . . . . . . . . . . . ೫೨
೧೨ ಕಲಿಯುಗದ ಉದಯ . . . . . . . . . . . . . . . . . . . ೫೫
೧೩ ಪರೀಕ್ಷಿತನ ಪಟ್ಟಾಭಿಷೇಕ . . . . . . . . . . . . . . . . . ೬೧
೧೪ ಪಾಂಡವರ ಮಹಾಪ್ರಸ್ಥಾನ . . . . . . . . . . . . . . . . ೬೫
೧೫ ಪರೀಕ್ಷಿತ್ ಚಕ್ರವರ್ತಿಯ ಆಳ್ವಿಕೆ . . . . . . . . . . . . . . ೭೦
೧೬ ಕೃಷ್ಣ ಭಕ್ತಿ . . . . . . . . . . . . . . . . . . . . . . . ೭೪
೧೭ ಗತಕಾಲ ಸ್ಮರಣೆ . . . . . . . . . . . . . . . . . . . . . ೭೬
೧೮ ಪಾರಾದ ತಕ್ಷಕ . . . . . . . . . . . . . . . . . . . . . ೮೩
೧೯ ದ್ರೌಪದಿಗೆ ಕೃಷ್ಣಾನುಗ್ರಹ . . . . . . . . . . . . . . . . . ೮೭
೨೦ ದುರ್ವಾಸ ಪ್ರಸಂಗ . . . . . . . . . . . . . . . . . . . . ೯೪
೨೧ ಕಿರಾತಾರ್ಜುನೀಯ . . . . . . . . . . . . . . . . . . . . ೧೦೨
೨೨ ಸಮರ ರಕ್ಷಕ . . . . . . . . . . . . . . . . . . . . . . ೧೦೭

೨೩ ಶಾಪಗ್ರಸ್ತ ಪರೀಕ್ಷಿತ್ . . . . . . . . . . . . . . . . . . . . ೧೧೧
೨೪ ಋಷಿಯ ಅನುತಾಪ . . . . . . . . . . . . . . . . . . . ೧೧೫
೨೫ ಶಾಪವೋ, ವರವೋ . . . . . . . . . . . . . . . . . . . . ೧೧೯
೨೬ ಶುಕಾಗಮನ . . . . . . . . . . . . . . . . . . . . . . . ೧೨೪
೨೭ ಮನಮೋಹಕ ಕಥೆ . . . . . . . . . . . . . . . . . . . . ೧೨೮
೨೮ ಸಂವಾದಾರಂಭ . . . . . . . . . . . . . . . . . . . . . ೧೩೧
೨೯ ಭಾಗವತ ಪಥ . . . . . . . . . . . . . . . . . . . . . . ೧೩೮
೩೦ ಪ್ರಶ್ನಾನುಮಾನಗಳು . . . . . . . . . . . . . . . . . . . ೧೪೪
೩೧ ಪುರಾಣಗಳು ಮತ್ತು ಅವತಾರಗಳು . . . . . . . . . . . . . ೧೫೦
೩೨ ರಾಮಾವತಾರ . . . . . . . . . . . . . . . . . . . . . . ೧೫೩
೩೩ ಕೃಷ್ಣಾವತಾರ . . . . . . . . . . . . . . . . . . . . . . ೧೫೯
೩೪ ಗೋಪಾಲ ಮತ್ತು ಗೋಪಗೋಪಿಯರು . . . . . . . . . . . ೧೬೯
೩೫ ಸಖ ಮತ್ತು ಪ್ರಭು . . . . . . . . . . . . . . . . . . . . ೧೭೪
೩೬ ದೈತ್ಯರಿಗಾದ ಗತಿ . . . . . . . . . . . . . . . . . . . . ೧೭೮
೩೭ ಕಾಳಿಂಗಮರ್ದನ . . . . . . . . . . . . . . . . . . . . ೧೮೩
೩೮ ಛಾತ್ರನಾದ ಸರ್ವಜ್ಞ . . . . . . . . . . . . . . . . . . . ೧೮೭
೩೯ ಮೃತದಿಂದ ಅಮೃತಕ್ಕೆ . . . . . . . . . . . . . . . . . . ೧೯೪
೪೦ ಕೃಷ್ಣಾವತರಣ ಸಂದೇಶ . . . . . . . . . . . . . . . . . ೧೯೯
೪೧ ನಂದನಂದನನಲ್ಲಿ ಫಲಿತ . . . . . . . . . . . . . . . . . ೨೦೪

# ಪ್ರಿಯ ಓದುಗ

ಭಾಗವತ ಮರಣದಂಡನೆಗೆ ಗುರಿಯಾದೊಬ್ಬ ವ್ಯಕ್ತಿಯ ಮತ್ತು ಆತ ಆ ಮರಣವನ್ನು ಪ್ರಸನ್ನಚಿತ್ತದಿಂದ ಸ್ವಾಗತಿಸುವಂತೆ ಮಾಡಿದ ಮಹಾಸಂತರ ನಡುವೆ ನಡೆದ ಸಂವಾದ. ನಾವೆಲ್ಲರೂ ಒಂದು ಅರ್ಥದಲ್ಲಿ ಮರಣದಂಡನೆಗೆ ಗುರಿಯಾಗಿ ಆ ದಿನವನ್ನು ಎದುರು ನೋಡುತ್ತಿರುವವರೇ. ನಮ್ಮ ಹೃದಯದ ಬಡಿತ ಕೇಳಿಸಿಯೂ ಕೇಳಿಸದಂತಹ ಮಸಣಯಾತ್ರೆಯ ತಮಟೆಯ ಸದ್ದೇ. ಕೆಲವರು ಮುಂದಾಗಿ ಕೆಲವರು ಹಿಂದಾಗಿ, ಬೇಗನೆ ಇಲ್ಲಾ ನಿಧಾನವಾಗಿ ಅಲ್ಲಿಗೆ ತಲುಪುತ್ತಾರೆ. ಮರಣವನ್ನು ನಿರ್ಲಿಪ್ತ ಮನದಿಂದ ನಿರೀಕ್ಷಿಸುವಂತೆ ನಮ್ಮನ್ನು ಸಿದ್ಧಗೊಳಿಸುವಂಥ ಮರಣದಾಚೆಯ ಅರಿವನ್ನು ಮೂಡಿಸಬಲ್ಲ ಮಹಾಸಂತರ ಬೋಧನೆಯ ಅವಶ್ಯಕತೆ ನಮ್ಮೆಲ್ಲರಿಗೂ ಇದೆ.

'ಭಾಗವತ' ನಿಜಕ್ಕೂ ಪಾವನ ಗಂಗೆ. ಜಗದೊಡೆಯನಿಂದ ಹೊಮ್ಮಿ ಅವನಲ್ಲೆ ಲೀನವಾಗುವ ಮೊದಲು ಭೌಗೋಲಿಕ ಪ್ರಾಕೃತಿಕ ಪ್ರದೇಶಗಳಲ್ಲಿ, ಇತಿಹಾಸದ ಯುಗ ಯುಗಗಳ ಘಟನಾವಳಿಗಳಲ್ಲಿ, ಧಾರ್ಮಿಕ ಶೋಧನೆ ಅನ್ವೇಷಣೆಗಳಲ್ಲಿ ಸುಧೀರ್ಘವಾದ ಪಯಣವನ್ನು ಮಾಡುತ್ತ ಕೃಷ್ಣಲೀಲಾ ಪ್ರಸಂಗಗಳ ಸ್ಫಟಿಕ ನಿರ್ಮಲ ಜಲದಿಂದ ಮಾನವರ ಮಾನಸ ಹೊಲಗದ್ದೆಗಳನ್ನು ಫಲವತ್ತಾಗಿಸುತ್ತದೆ.

ಮಾನವರಲ್ಲಿ ಧರ್ಮಜಾಗೃತಿ ಮಾಡಿ ಪುನಃ ಸಂಸ್ಥಾಪಿಸಲು ಭಗವಂತನು ಶ್ರೀ ಸತ್ಯಸಾಯಿ ರೂಪದಲ್ಲಿ ಮತ್ತೆ ಬುವಿಗೆ ಬಂದಿದ್ದಾನೆ. ಬೈಬಲ್, ಕುರ್‍ರಾನ್, ಜೆಂದಾ ವೆಸ್ತಾ, ತ್ರಿಪಿಟ್ಟಿಕಾ, ವೇದಗಳು, ಭಾಗವತ ಮುಂತಾದ ಪುರಾತನ ಪವಿತ್ರ ಗ್ರಂಥಗಳ ಬಗ್ಗೆ ಮತ್ತೆ ಭಕ್ತಿ ಗೌರವಗಳು ಉಂಟಾಗುವಂತೆ ಮಾಡುವುದೇ ಈ ಧಾರ್ಮಿಕ ಆಧ್ಯಾತ್ಮಿಕ ಪುನರುತ್ಥಾನದ ಪ್ರಮುಖ ಅಂಶ. ಹಿಂದಿನ ಆ ಪವಿತ್ರೋಕ್ತಿಗಳ ಮತ್ತು ಪೌರಾಣಿಕ ಕಥೆಗಳ ಅಂತರಾರ್ಥವನ್ನು ಸರಳ, ಸುಸ್ಪಷ್ಟ, ಸುಂದರ ಭಾಷೆಯಲ್ಲಿ ವಿವರಿಸಿ ರಸವತ್ತಾಗಿ ಹೇಳುತ್ತಿರುವುದು ಮೂಲ ಕೃತಿಗಳ ಸೃಷ್ಟಿಗೆ ಸ್ಫೂರ್ತಿ ಪ್ರೇರಣೆಗಳನ್ನು ನೀಡಿದ ಸಾಕ್ಷಾತ್ ಪರಮಾತ್ಮನೇ ಎಂದು ತಿಳಿದಾಗಲೇ ಈ ಕಾಲದಲ್ಲಿ ಈ ವಿಚಾರಗಳ ಬಗ್ಗೆ ಗೌರವ ಸಹಜವಾಗಿ ಉಕ್ಕುತ್ತದೆ.

ನಾರದ ಮಹರ್ಷಿಗಳ ಸೂಚನೆಯಂತೆ ವ್ಯಾಸರು ಭಾಗವತವನ್ನು ಬರೆದ ಮೇಲೆಯೆ ಪೂರ್ಣವಾದ ತೃಪ್ತಿಯನ್ನೂ ಮನಸ್ಸಮಾಧಾನವನ್ನೂ ಪಡೆದರಂತೆ. ಭಕ್ತಿಯ ಮಹಾಸಂಪುಟ ಎಂದು ಹೇಳಬಹುದಾದ ಇಂತಹ ಮಹತ್ವದ ಭಾಗವತ ಕಥೆಯನ್ನು ಭಗವಂತನೆ ಹೇಳಿರುವುದು ನಿಜವಾಗಿ ನೋಡಿದವರು ನಡೆದುದನ್ನು ನಡೆದಹಾಗೆ ಹೇಳಿದಂತಿದೆ.

ಇದು ಕೇವಲ ಪುಸ್ತಕ ಅಲ್ಲ. ಬಾಳಿನ ನೋವುಗಳನ್ನು ನಿವಾರಿಸುವ ಅಮೃತಾಂಜನ, ಸಮಸ್ಯೆಗಳನ್ನು ಪರಿಹರಿಸುವ ಮಂತ್ರ, ರಕ್ಷಿಸುವ ಉದ್ಧರಿಸುವ ಶಕ್ತಿ, ಮೋಹ

ಬಂಧನಗಳನ್ನು ಸಡಿಲಗೊಳಿಸಿ, ದುಃಖ, ನೋವು, ದಾಹಗಳಿಂದ ಮುಕ್ತಗೊಳಿಸುವ ಬೀಗದ ಕೈ. ನಮ್ರಭಾವದಿಂದ ಪುಟ ತೆರೆಯಿರಿ, ಮನಸ್ಸಿಟ್ಟು ಶ್ರದ್ಧೆಯಿಂದ ಓದಿರಿ, ಭಕ್ತಿಯಿಂದ ನಮಿಸಿರಿ, ದೃಢ ಸಂಕಲ್ಪ ಮಾಡಿ ಅದರ ಬೋಧನೆಯಂತೆ ನಡೆಯಿರಿ. ವ್ಯಾಸರು, ನಾರದರು ಮುಟ್ಟಿದ ಗುರಿಯನ್ನು ನೀವೂ ತಲುಪಿರಿ. ಶುಕ ಬೋಧಿಸಿದ್ದನ್ನು ಪರೀಕ್ಷಿತ್ ಕಲಿತ ಹಾಗೆ ಕಲಿಯಿರಿ. ಮಾನವರು ಬಯಸುವ ಇದಕ್ಕಿಂತ ಹೆಚ್ಚಿನ ಪ್ರತಿಫಲ ಮತ್ತಾವುದಿದೆ?

ಗುರು ಪೂರ್ಣಿಮಾ, ಪ್ರಶಾಂತಿ ನಿಲಯಂ **ನಾ. ಕಸ್ತೂರಿ**
೧೮.೭.೧೯೭೦

# ಪ್ರಧಾನ ಸಂಪಾದಕರ ಮಾತು

ಭಾಗವತ ಕಥೆಯನ್ನು ಮೊದಲು ಹೇಳಿದವನು, ಹುಟ್ಟಿದಾಗಲೆ ಭಕ್ತಿ, ಜ್ಞಾನ, ವೈರಾಗ್ಯಗಳಿಂದ ಕೂಡಿದ್ದ ಶುಕಮುನಿ. ಕೇಳಿ ಧನ್ಯನಾದವನು ಪರೀಕ್ಷಿತ್ ಚಕ್ರವರ್ತಿ. ಪರೀಕ್ಷಿತ್ ದೈವಭಕ್ತ. ಧರ್ಮಿಷ್ಠನಾದ ರಾಜ. ಆದರೆ ಕ್ಷಣದ ತಪ್ಪಿನಿಂದ ಶಮೀಕ ಋಷಿಯ ಮಗ ಬಾಲಕ ಶೃಂಗಿಯ ಶಾಪಕ್ಕೊಳಗಾದ. ಬಾಹ್ಯದ ಪರಿವೆಯೇ ಇಲ್ಲದೆ ಧ್ಯಾನಮಗ್ನನಾಗಿದ್ದ ತನ್ನ ತಂದೆಯ ಕೊರಳಿಗೆ ಸತ್ತ ಹಾವನ್ನು ಹಾರದಂತೆ ಹಾಕಿ ಅವಮಾನಿಸಿದ ದುರಹಂಕಾರಿ ಏಳು ದಿನಗಳೊಳಗೆ ಹಾವು ಕಚ್ಚಿ ಮರಣ ಹೊಂದಲಿ ಎಂದು ಶಾಪ. ಆ ವೇಳೆಗಾಗಲೆ ತನ್ನಿಂದ ಮಹಾಪರಾಧವಾಯಿತೆಂದು ಪಶ್ಚಾತ್ತಾಪ ಪಡುತ್ತಿದ್ದ ಪರೀಕ್ಷಿತ್ ರಾಜ, ಹಾವು ಕಚ್ಚಿ ಸತ್ತವರಿಗೆ ಸದ್ಗತಿಯಿಲ್ಲ ಎಂಬುದರಿಂದ, ಈ ಶಾಪದಿಂದ ಪಾರಾಗುವುದು ಹೇಗೆ ಎಂದು ಚಿಂತಿಸತೊಡಗಿದ. ಸಾಯುವ ಮುನ್ನ ಪಾಪಗಳನ್ನೆಲ್ಲ ಕಳೆದುಕೊಂಡು ಶುದ್ಧಾತ್ಮನಾಗುವುದೊಂದೇ ಉಳಿದಿರುವ ದಾರಿ. ಆದರೆ ಏಳು ದಿನಗಳ ಅಲ್ಪಾವಧಿಯಲ್ಲಿ ಪಾಪಗಳನ್ನೆಲ್ಲ ದಹಿಸಿಹಾಕಲು ಸಾಧ್ಯವೆ? ಸಾಧ್ಯ ಎನ್ನುವುದಾದರೆ ಹೇಗೆ? "ಭಾಗವತ ಶ್ರವಣದಿಂದ ಮಾತ್ರದಿಂದ ಸಾಧ್ಯ" ಎಂಬ ಉತ್ತರ ದೊರಕಿತು. ಪರಮ ಶ್ರೇಷ್ಠನಾದ ಶುಕಮುನಿಯಿಂದಲೇ ಭಾಗವತ ಕಥೆಯನ್ನು ಕೇಳುವ ಸುಯೋಗ ಪುಣ್ಯವಶಾತ್ ಪರೀಕ್ಷಿತ್ ರಾಜನಿಗೆ ಸಿಕ್ಕಿತು. ಭಾಗವತ ಕಥೆ ಎಂದರೆ ಪರಮ ದಯಾಳುವೂ ವಿಶ್ವರಕ್ಷಕನೂ ಆದ ಮಹಾವಿಷ್ಣುವಿನ ಲೀಲಾ ಕಥನ. ದುಷ್ಟ ಶಿಕ್ಷಣ–ಶಿಷ್ಟ ರಕ್ಷಣೆ ಮಾಡಲು, ಧರ್ಮ ಸಂಸ್ಥಾಪನಾರ್ಥವಾಗಿ ಪರಮಾತ್ಮನು ಯುಗಯುಗವೂ ಮಾನುಷ ದೇಹಧಾರಿಯಾಗಿ ಅವತರಿಸಿದ ದಶಾವತಾರದ ವೃತ್ತಾಂತಗಳು. ಜೊತೆಗೆ ಅಂತರ್ಗತವಾಗಿ ಹರಿಯುವ ಭಾಗವತ ತತ್ತ್ವ ವಾಹಿನಿ—ಇವುಗಳನ್ನೊಳಗೊಂಡುದೇ ಭಾಗವತ.

ತನ್ನ ಜೀವನ ಇನ್ನು ಏಳು ದಿನಗಳವರೆಗೆ ಮಾತ್ರ ಎಂದು ತಿಳಿದ ಪರೀಕ್ಷಿತ್ ರಾಜ ಆ ದಿನಗಳನ್ನು ಅತ್ಯಂತ ಸಾರ್ಥಕವಾಗಿ ಕಳೆದು ಪಾಪದಿಂದ, ಶಾಪದಿಂದ, ದುರ್ಮರಣದಿಂದ ಪಾರಾಗುವ ಪ್ರಯತ್ನಮಾಡಿದ್ದು ಒಂದು ಸಂಗತಿ. ಭಾಗವತ ಶ್ರವಣದ ನಂತರ ಆತನಲ್ಲಿ ಮರಣಕ್ಕೆ ಹೆದರದೆ ಹರ್ಷದಿಂದ ಸಿದ್ಧನಾಗುವಷ್ಟು ಜ್ಞಾನ ವೈರಾಗ್ಯಗಳು ಉಂಟಾದುದು ಇದಕ್ಕಿಂತ ಮುಖ್ಯ ಸಂಗತಿ.

ಇದು ವ್ಯಾಸರಚಿತ ಭಾಗವತದ ವಿಚಾರ. ಹದಿನೆಂಟು ಪುರಾಣಗಳನ್ನೂ ಮಹಾಭಾರತವನ್ನೂ ಬರೆದೂ ಮನಶ್ಶಾಂತಿಯುಂಟಾಗದ ಪೂಜ್ಯ ವ್ಯಾಸರು ನಾರದರ ಸೂಚನೆಯಂತೆ ಭಾಗವತವನ್ನು ಬರೆದು ಶಾಂತಿಯನ್ನು ಪಡೆದರಂತೆ. ಭಾಗವತದ ವೈಶಿಷ್ಟ್ಯವನ್ನು ಇದು ತೋರಿಸುತ್ತದೆ. ಗೋಪಿಯರ ಭಕ್ತಿ, ಅರ್ಜುನ ಭೀಷ್ಮರ ಭಕ್ತಿ ಎರಡನ್ನೂ ಶ್ರೀಕೃಷ್ಣ ಒಪ್ಪಿಕೊಂಡ. ಇವೆರಡನ್ನೂ ಪರಿಭಾವಿಸುವವರಿಗೆ, ವಿಶ್ವರೂಪದರ್ಶನ ಬೇಡ, ರಾಜನೀತಿಯ ಜಾಣ್ಮೆ ಕೌಶಲಗಳೂ ಬೇಡ, 'ಪ್ರೀತಿಗಾಗಿ ಪ್ರೀತಿ.' ದೇವರನ್ನು ಪ್ರೀತಿಸುವುದಷ್ಟೆ ಗೋಪಿಯರ ಸಹಜಭಕ್ತಿ ಶ್ರೇಷ್ಠ ಎಂದೆನಿಸದಿರದು.

ಶ್ರೀ ಸತ್ಯಸಾಯಿ ಬಾಬಾ ಅವರು ಭಾಗವತವನ್ನು ಸರಳವಾದ ಭಾಷೆಯಲ್ಲಿ ಪಾತ್ರಗಳ ಹಾಗೂ ಸನ್ನಿವೇಶಗಳ ಚಿತ್ರಣ ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾರೆ. ಧರ್ಮರಾಜ, ವಿದುರ, ಪರೀಕ್ಷಿತ್‌ರ ಮನದ ಸೂಕ್ಷ್ಮ ಆಲೋಚನೆಗಳನ್ನು ವಿಶ್ಲೇಷಿಸಿ ವರ್ಣಿಸುತ್ತಾರೆ. ಸ್ವಾಮಿ ಬರೆದಿರುವ ವಾಹಿನಿಗಳನ್ನು ಓದಿದವರ ಮನಸ್ಸು ಗಾಢವಾದ ಪ್ರಭಾವಕ್ಕೆ ಒಳಗಾಗುವುದು. ಪರಿವರ್ತನೆಯನ್ನು ಉಂಟುಮಾಡುವ ಸಾಮರ್ಥ್ಯ ಈ ವಾಹಿನಿಗಳಿಗಿವೆ.

ಇದರ ಇಂಗ್ಲಿಷ್ ಅನುವಾದವನ್ನು ಮೂಲವಾಗಿಟ್ಟುಕೊಂಡು ಕನ್ನಡಕ್ಕೆ ಶ್ರೀ. ಹೆಚ್.ಎಂ. ಶಿವರಾಂ ಅನುವಾದಿಸಿದ್ದಾರೆ. ಸಾಯಿಬಂಧು ಶ್ರೀ. ಶಿವರಾಂ ಶ್ರೀ ಸತ್ಯಸಾಯಿ ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತರು. ಸದ್ಭಕ್ತರು. ಒಳ್ಳೆ ಬರಹಗಾರರು. ಪ್ರೊ. ನಾ. ಕಸ್ತೂರಿಯವರ ಅಭಿಮಾನಿಗಳು. ೧೯೬೩ರ ನವೆಂಬರ್ ೨೩ರಂದು, ಶ್ರೀ ಸತ್ಯಸಾಯಿ ಬಾಬಾ ಅವರ ೩೮ನೇ ವರ್ಧಂತಿಯ ದಿನ, ಸ್ವಾಮಿಯ ಅನುಮತಿ ಮತ್ತು ಆಶೀರ್ವಾದಗಳನ್ನು ಪಡೆದು ಶ್ರೀ ಸತ್ಯಸಾಯಿ ಸಂದೇಶ, ಬೋಧನೆ ಮತ್ತು ಕಾರ್ಯಕ್ರಮಗಳನ್ನು ಪ್ರಕಟಿಸುವ ಏಕೈಕ ಧ್ಯೇಯದ 'ಪ್ರಶಾಂತಿ' ಎಂಬ ಹೆಸರಿನ ಮಾಸಪತ್ರಿಕೆಯನ್ನಾರಂಭಿಸಿದರು. ಆಗ ಅವರು ಶಿವಮೊಗ್ಗಾದಲ್ಲಿದ್ದರು. ಪತ್ರಿಕೆ ಬಹು ಬೇಗ ಸಾಯಿಭಕ್ತರ ಹಾಗೂ ಆಸಕ್ತಿ ಇರುವ ಇತರರ ಮನಸ್ಸನ್ನು ಸೆಳೆಯಿತು. ಇಂಗ್ಲಿಷ್ ಸನಾತನ ಸಾರಥಿಯಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

ಜನವರಿ ೧೯೭೨ರ ಸಂಚಿಕೆ ನಾ. ಕಸ್ತೂರಿಯವರ ಸಲಹೆಯಂತೆ ಸ್ವಾಮಿಯ ಸಮ್ಮತಿ ಪಡೆದು 'ಪ್ರಶಾಂತಿ' ಹೆಸರಿಗೆ ಬದಲು 'ಸನಾತನ ಸಾರಥಿ' ಆಯಿತು. ಕನ್ನಡದ 'ಸನಾತನ ಸಾರಥಿ' ಆರಂಭವಾದುದು ಹೀಗೆ. ೧೯೮೫ರವರೆಗೆ, ಶ್ರೀ. ಶಿವರಾಂ ಇದರ ಸಂಪಾದಕರಾಗಿ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದರು. ಅಳಿಕೆಯ ಶ್ರೀ ಸತ್ಯಸಾಯಿ ಲೋಕಸೇವಾ ಟ್ರಸ್ಟ್‌ನವರು 'ಸನಾತನ ಸಾರಥಿ' ಪತ್ರಿಕೆಯ ಕಾರ್ಯವನ್ನು ೧೯೮೮ರಲ್ಲಿ ವಹಿಸಿಕೊಂಡರು. ಇದಲ್ಲದೆ ಶ್ರೀ. ಶಿವರಾಂ ಅವರು ಶ್ರೀ ಸತ್ಯಸಾಯಿ ಬಾಬಾ ಅವರ ಭಾಗವತ ವಾಹಿನಿ, ರಾಮಕಥಾರಸ ವಾಹಿನಿ, 'ಭಗವದ್ವಾಣಿ' ಎಂಬ ಶೀರ್ಷಿಕೆಯಲ್ಲಿ ಇಂಗ್ಲಿಷ್‌ನ Sri Sathya Sai Speaksನ ಆರಂಭದ ಸಂಪುಟಗಳನ್ನು ಸ್ವತಃ ಕನ್ನಡಕ್ಕೆ ಅನುವಾದಿಸಿ ಬೆಂಗಳೂರಿನ ಪ್ರಶಾಂತಿ ಪ್ರಕಾಶನದ ಮೂಲಕ ಪ್ರಕಟಿಸುತ್ತಾ ಬಂದರು. ಶ್ರೀ ಸತ್ಯಸಾಯಿ ಬಾಬಾ ಅವರನ್ನು ಕುರಿತು ಬರೆದ ಪವಾಡ ಪುರುಷ, ಸತ್ಯಸಾಯಿ ಬಾಬಾ, ಶಿವ ಶಕ್ತಿ ಸ್ವರೂಪ, ದೇವರು ಭಾರತದಲ್ಲಿ ಜೀವಿಸಿದ್ದಾನೆ, ಇತ್ಯಾದಿ ಕೆಲವು ಪುಸ್ತಕಗಳನ್ನು, ಕನ್ನಡಕ್ಕೆ ಸೊಗಸಾಗಿ ಅನುವಾದಿಸಿದ್ದಾರೆ ಹಾಗೂ ಕೆಲವು ಕಿರು ಹೊತ್ತಿಗೆಗಳನ್ನು ಪ್ರಕಟಿಸಿದ್ದಾರೆ. ಶ್ರೀಯುತರು ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಯಲ್ಲಿ ಜಿಲ್ಲಾಧ್ಯಕ್ಷರಾಗಿ, ವಲಯ ಸಂಯೋಜಕರಾಗಿ, ಪ್ರಕಾಶನ ವಿಭಾಗದ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಕಸ್ತೂರಿಯವರೊಡನೆ ಕೇರಳ, ತಮಿಳುನಾಡು ಹಾಗೂ ಕರ್ನಾಟಕ ರಾಜ್ಯಗಳ ಅನೇಕ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ. ಈಗ ಬೆಂಗಳೂರಿನಲ್ಲಿ ನೆಲೆಸಿರುವ ಇವರು ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿಯ ಸಂಪಾದಕ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಾ ಇದ್ದಾರೆ.

ಮೈಸೂರಿನಲ್ಲಿರುವ ಸಾಯಿ ಬಂಧುಗಳಾದ ಶ್ರೀ. ವೀ. ಅನಂತಸ್ವಾಮಿಯವರು ಸಂಚಾಲಕರಾಗಿ, ಶ್ರೀ. ಆರ್. ಶಂಕರ, ಡಾ. ಎಂ.ಪಿ. ಶ್ರೀಧರ್, ಡಾ. ಜೇ.ಎನ್. ಭಟ್, ಶ್ರೀ. ಶ್ರೀರಾಮ ಭಟ್ ಮತ್ತು ಶ್ರೀ. ಎಂ.ಬೀ. ನಾರಾಯಣ ಸ್ವಾಮಿ, ಅಧ್ಯಕ್ಷರು, ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳು, ಮೈಸೂರು ಜಿಲ್ಲೆ ಸದಸ್ಯರಾಗಿ ಇರುವ ಸಲಹಾ ಸಮಿತಿಯೊಂದು ಪುಸ್ತಕಗಳನ್ನು ಆಯ್ದು, ಅನ್ಯಭಾಷೆಗಳಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಣೆಗೆ ಸಿದ್ಧಪಡಿಸಲೋಸುಗ ರಚಿತವಾಗಿದೆ.

ಸಂಪಾದಕ ಮಂಡಲಿಯ ಪ್ರಧಾನ ಸಂಪಾದಕನಾಗಿರುವ ಹೊಣೆಯನ್ನು ನನಗೆ ವಹಿಸಿದ್ದಾರೆ. ಈ ಮಂಡಲಿಯ ಸದಸ್ಯರುಗಳು ಸಾಯಿಬಂಧುಗಳಾದ ಶ್ರೀ. ಯು. ಗಂಗಾಧರ ಭಟ್, ಶ್ರೀ. ಹೆಚ್.ಎಂ. ಶಿವರಾಂ, ಶ್ರೀ. ಕೆ.ಎ. ಭಟ್ ಮತ್ತು ಡಾ. ವಿದ್ವಾನ್ ನಿಟಿಲಾಪುರ ಕೃಷ್ಣಮೂರ್ತಿ. ಇದು ನನಗೆ ತೋರಿದ ಗೌರವ ಎಂದು ಭಾವಿಸಿದ್ದೇನೆ. ಈ ಆತ್ಮೀಯರ

ವಿಶ್ವಾಸ ಇದರಲ್ಲಿ ಅಂತರ್ಗತವಾಗಿರುವ ಸ್ವಾಮಿಯ ಆದೇಶ, ಕೃಪೆ ಮತ್ತು ಸೇವಾವಕಾಶ – ಇವು ಮೂರು ನನಗೊದಗಿರುವ ಭಾಗ್ಯವಿಶೇಷವೆಂದು ಇದಕ್ಕೆ ಒಪ್ಪಿರುತ್ತೇನೆ.

ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ(ರಿ), ಕರ್ನಾಟಕ ಇದರ ಅಧ್ಯಕ್ಷರಾದ ಶ್ರೀ. ಯಾದಾಳಂ ಎನ್. ಗಂಗಾಧರ ಶೆಟ್ಟಿಯವರು, ಉಪಾಧ್ಯಕ್ಷರಾದ ಶ್ರೀ. ನಾಗೇಶ್ ಜೀ. ಧಾಕಪ್ಪನವರು (ಕರ್ನಾಟಕದ ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ರಾಜ್ಯಾಧ್ಯಕ್ಷರು), ಗೌರವ ಕಾರ್ಯದರ್ಶಿಗಳಾದ ಡಾ. ಆರ್.ಎಸ್. ಪದ್ಮನಾಭನ್ ಇವರುಗಳು ತೋರುವ ನಿರಂತರ ಆಸಕ್ತಿ, ಪ್ರೋತ್ಸಾಹ, ಮಾರ್ಗದರ್ಶನ ಹಾಗೆಯೇ ಪ್ರಕಾಶನದ ಸಂಪಾದಕ ಮಂಡಲಿ ಹಾಗೂ ಸಲಹಾ ಸಮಿತಿಗಳ ಎಲ್ಲ ಸದಸ್ಯರ ಶ್ರದ್ಧಾಯುಕ್ತ ಪರಿಶ್ರಮ ಪ್ರಧಾನ ಸಂಪಾದಕರ ಕೆಲಸವನ್ನು ಹಗುರಮಾಡಿದೆ, ಹರ್ಷೋತ್ಸಾಹಗಳನ್ನು ಹೆಚ್ಚು ಮಾಡಿದೆ. ಶ್ರೀಮತಿ ಉಮಾ ಚಂದ್ರಶೇಖರ್ ಶ್ರದ್ಧಾಭಕ್ತಿಗಳಿಂದ ಟೈಪ್‌ಸೆಟ್ಟಿಂಗ್ ಮಾಡಿಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು.

ಸೆಪ್ಟೆಂಬರ್, ೨೦೦೪ **ಕೆ.ಬಿ. ಪ್ರಭುಪ್ರಸಾದ್**
ಮೈಸೂರು ಪ್ರಧಾನ ಸಂಪಾದಕ



# ಭಾಗವತ ವಾಹಿನಿ

# ೧ ಭಾಗವತ

ಭಕ್ತರ ಮತ್ತು ಭಗವಂತನ ಸಂಬಂಧ ಪಡೆದವರ ಅನುಭವದ ವಿವರಣೆಗಳನ್ನೆಲ್ಲಾ ಭಾಗವತವೆಂದೇ ಹೇಳಬಹುದು. ಭಗವಂತ ಅನೇಕ ರೂಪಗಳನ್ನು ಧರಿಸಿ ಅನೇಕ ಬಗೆಯ ಲೀಲೆಗಳನ್ನು ತೋರಿಸುತ್ತಾನೆ. ಅವನ ಲೀಲೆಗಳಿಗೆ ಸಾಧನವಾದವರ, ಹಾಗೂ ಅವನ ಕೃಪೆಗೆ ಪಾತ್ರರಾದವರ ಅನುಭವಗಳನ್ನೂ ಆ ಭಕ್ತರಿಗೆ ಪ್ರತ್ಯಕ್ಷವಾದ ಅನೇಕ ರೂಪಗಳ ವಿವರಣೆಗಳನ್ನೂ ಭಾಗವತವೆನ್ನುತ್ತಾರೆ.

ಭಾಗವತ ಎಲ್ಲ ವೈದಿಕ ಆಚಾರ್ಯರುಗಳಿಗೂ ಸಾಮಾನ್ಯವಾದುದು. ದೈವಿಕ, ಮಾನಸಿಕ ಸಂಬಂಧವಾದ ಭವರೋಗಗಳಿಗೆ ಇದು ದಿವ್ಯೌಷಧ. ಭಾಗವತ ರಸವತ್ತಾದುದು. ಅಮೃತ ಸಮಾನವಾದುದು, ಲೀಲಾದೇಹಾದಿಗಳ ವರ್ಣನಾ ರೂಪ ಉಳ್ಳದ್ದು.

ಭಾಗವತಕ್ಕೆ ಮುಖ್ಯ ಆಧಾರ ಅವತಾರ ತತ್ವ. ಅವತಾರ ಕಥೆಯಲ್ಲಿ ರಕ್ತಿ, ಸಕ್ತಿ, ಭಾಗವತರ ಸಮಾವೇಶ ಇವುಗಳೆಲ್ಲಾ ಒಮ್ಮೆಲೇ ಕಾಣುವುವು. ನೀರಸವಾದುದು ಬಹಳ ಕಾಲ ಉಳಿಯುವುದಿಲ್ಲ. ರುಚಿಯಿಲ್ಲದ ಕೆಲಸದಲ್ಲಿ ರಸ ಸಿಕ್ಕುವುದಿಲ್ಲ. ಎಂತಲೇ ಮೊದಲು ಜಿಜ್ಞಾಸೆ ಮೂಡಿದವರಿಗೆ ಮಾತ್ರ ಭಗವತ್ ಕಥೆಯಲ್ಲಿ ರುಚಿ ಸಿಕ್ಕುವುದು. ಹಾಗೆ ರುಚಿ ಸಿಕ್ಕಮೇಲೆ, ಯಾರು ಭಗವಂತನ ಮೇಲಿನ ಅನುರಾಗವನ್ನು ಬೆಳೆಸಿಕೊಂಡು, ಭಕ್ತಿ ಭಾವಗಳನ್ನು ಬಾಹ್ಯ ಮತ್ತು ಅಂತರ್ ಇಂದ್ರಿಯಗಳ ಮೂಲಕ ಅನುಭವಿಸುವುದಕ್ಕೆ ತವಕಪಡುವರೋ ಅಂಥವರನ್ನು ಭಾಗವತರೆನ್ನುವರು.

ಭಗವದವತಾರ ಕೇವಲ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆಗಾಗಿಯೇ ಆಗುವುದೆಂದು ಲೋಕದಲ್ಲಿ ಸಾಮಾನ್ಯವಾಗಿ ತಿಳಿಯುವುದು ಸಹಜ. ಆದರೆ, ಅದು ಅವತಾರದ ಉದ್ದೇಶದಲ್ಲಿ ಕೇವಲ ಒಂದು ಭಾಗ ಮಾತ್ರ. ಅವತಾರ ಬರುವುದು ಭಕ್ತರ ತೃಪ್ತಿಗಾಗಿ, ಧರ್ಮರಕ್ಷಣೆಗಾಗಿ, ಸಾಧುಪೋಷಣೆಗಾಗಿ; ಭಕ್ತರ ಭಾವನಾರೂಪವೇ ಅವತಾರ; ಭಕ್ತರ ಆನಂದವೇ ಅವತಾರ. ಆದ್ದರಿಂದ, ಭಕ್ತರಿಗಾಗಿಯೇ ಅವತಾರ ಆಗುವುದು ಎಂದು ಕೂಡ ಧಾರಾಳವಾಗಿ ಹೇಳಬಹುದು.

ಭಕ್ತರು ಅವತಾರಕ್ಕೆ ಕಾರಣ ಎನ್ನುವುದು ಪ್ರಧಾನ. ಹಸುವಿನಲ್ಲಿ ಅದರ ಕರುವಿಗಾಗಿ ಹಾಲು ಉತ್ಪತ್ತಿಯಾಗುವುದಾದರೂ ಕರುವಿಗಾಗಿ ಇರುವ ಹಾಲನ್ನು ಇತರರೂ ಹೇಗೆ ಉಪಯೋಗ ಮಾಡಿಕೊಳ್ಳುವರೋ ಇತರರಿಗೂ ಅದು ಹೇಗೆ ಪ್ರಯೋಜನ ಕಾರಿಯಾಗುವುದೋ ಹಾಗೆಯೇ ಅವತಾರದಿಂದ ಇತರ ಪ್ರಯೋಜನಗಳೂ ಸಂಭವಿಸುವುವು. ದುಷ್ಟ ಶಿಕ್ಷಣ, ಧರ್ಮ ರಕ್ಷಣೆಯಂಥ ಪ್ರಾಸಂಗಿಕ ಮಹತ್ಕಾರ್ಯ ಗಳು ನಡೆದು ಅವುಗಳ ಪ್ರಯೋಜನವೂ ಲೋಕಕ್ಕೆ ಲಭಿಸುವುದು. ಭಗವದವತಾರ ಗಳು ಕೇವಲ ಮನುಷ್ಯ ರೂಪದಿಂದಲೇ ಆಗಬೇಕು ಎನ್ನುವ ನಿಯಮವಿಲ್ಲ. ಅದು ಯಾವ ರೂಪ ಬೇಕಾದರೂ ಧರಿಸಬಹುದು. ಎಲ್ಲಿ ಬೇಕಾದರೂ ಆಗಬಹುದು. ಭಕ್ತರ ರಕ್ಷಣೆಗೆ ಯಾವ ರೂಪದಲ್ಲಿ, ಯಾವ ಸ್ಥಳದಲ್ಲಿ, ಹೇಗೆ ಅವತರಿಸುವುದು ಅವಶ್ಯಕವೋ ಹಾಗೆ, ಆಯಾ ಸಮಯ ಸಂದರ್ಭಗಳನ್ನನುಸರಿಸಿ ಭಗವಂತ ತನ್ನ ಸಂಕಲ್ಪದಿಂದ ಆಯಾ ರೂಪದಲ್ಲಿ ಆಯಾ ಸ್ಥಳದಲ್ಲಿ ಅವತರಿಸವನು.

ಭಗವಂತ ದೇಶಕಾಲಗಳ ಬಂಧನಕ್ಕೆ ಅತೀತನು. ಅವನು ಗುಣರಹಿತನು, ಗುಣಾತೀ ತನು. ಅವನಿಗೆ ಜೀವಿಗಳೆಲ್ಲವೂ ಸಮಾನ. ಮಾನವ, ದಾನವ, ದೈವ, ಪಶು, ಮೃಗಾದಿಗಳು, ಕ್ರಿಮಿಕೀಟಗಳು ರೂಪನಾಮಗಳಲ್ಲಿ ಭೇದವುಳ್ಳವೇ ಹೊರತು, ಜೀವಭಾವದಲ್ಲಿ ಎಲ್ಲವೂ ಒಂದೇ. ಒಂದೊಂದು ಉಪಾಧಿಯಲ್ಲಿ ಒಂದೊಂದು ಕ್ರಿಯೆ ನಡೆಯುತ್ತಿರುವುದು. ಅಷ್ಟರಿಂದಲೇ ಜೀವಿಗಳಲ್ಲಿ ಭೇದವೆಣಿಸಬಾರದು. ಒಂದೇ ವಿದ್ಯುಚ್ಛಕ್ತಿ ಬಗೆಬಗೆಯ ಯಂತ್ರಗಳಲ್ಲಿ ಹರಿದು ಅನೇಕ ಬಗೆಯ ಕೆಲಸ ಮಾಡಿ ಹಲವು ಬಗೆಯ ಪ್ರಯೋಜನವನ್ನು ದೊರಕಿಸಿಕೊಡುವುದು. ಅಷ್ಟರಿಂದಲೇ ವಿದ್ಯುಚ್ಛಕ್ತಿಯಲ್ಲಿ ಭೇದ ಕಲ್ಪಿಸುವುದು ಅಜ್ಞಾನದ ಲಕ್ಷಣ. ಹಾಗೇ ಒಬ್ಬನೇ ಪರಮಾತ್ಮ ಒಂದೊಂದು ಉಪಾಧಿಯ ಮೂಲಕ ಜೀವತತ್ತ್ವವು ಒಂದೊಂದು ಮಾರ್ಗದಲ್ಲಿ, ಒಂದೊಂದು ಫಲ ಕೊಡುವಂತೆ ನಡೆಸುತ್ತಿರುವನು. ಪಾಮರರ ದೃಷ್ಟಿಗೆ ಅದು ಭಿನ್ನಭೇದವಾಗಿ ಕಂಡರೂ ಪರಮಾತ್ಮನ ದೃಷ್ಟಿಯಲ್ಲಿ ಅದೆಲ್ಲವೂ ಒಂದೇ. ಭಾವಾದ್ವೈತವನ್ನೇ ಭಗವಂತ ನೋಡುವುದು. ಕರ್ಮಾದ್ವೈತವನ್ನಲ್ಲ. ಕರ್ಮಫಲ ಕಾಯಭ್ರಾಂತಿಯುಳ್ಳವರಿಗೇ ವಿನಾ, ಆತ್ಮಭ್ರಾಂತಿಯುಳ್ಳವರಿಗೆ ಅದು ಅನ್ವಯಿಸುವುದಿಲ್ಲ. ಇಷ್ಟೇ ಅಲ್ಲದೆ, ಭಗವಂತನ ಅವತಾರಗಳಿಗೆ ಕೊನೆಮೊದಲಿಲ್ಲ. ಲೆಕ್ಕವಿಲ್ಲದಷ್ಟು ಅವತಾರಗಳು. ಅವುಗಳಲ್ಲಿ ಕಳಾವತಾರಗಳು ಕೆಲವು, ಅಂಶ ಅವತಾರಗಳು ಕೆಲವು, ಆವೇಶಾವತಾರಗಳು ಕೆಲವು, ಯುಗಾವತಾರಗಳು ಕೆಲವು. ಹೀಗೆ ಹಲವು ಹೆಸರುಗಳಿಂದ ಕರೆಯಲ್ಪಡುವ ಅವತಾರಗಳು ಅವೆಷ್ಟೋ.

ಯುಗಾವತಾರದ ಕಥಾಶ್ರವಣಕ್ಕೆ ಭಾಗವತಸೇವಾ ಎನ್ನುವರು. ಭಕ್ತರ–ಭಗವಂತನ ಲೀಲಾ ನಾಟಕ ಭಾಗವತ. ಅದರ ಶ್ರವಣವು ಆತ್ಮಸಾಕ್ಷಾತ್ಕಾರಕ್ಕೆ

ಮೂಲಾಧಾರವೆನ್ನುವುದನ್ನು ಸ್ವಾನುಭವದಿಂದ ತಿಳಿದ ಅನೇಕ ಮಂದಿ ಮಹಾ ಋಷಿಗಳು ಭಾಗವತ ಶ್ರವಣಕ್ಕೆ ಇಂಥ ಪವಿತ್ರ ಸ್ಥಾನ, ಇಷ್ಟೊಂದು ಭಾವಸಾರದ ಮಹತ್ವಕೊಟ್ಟು ಅದನ್ನು ಬೋಧಿಸಿದ್ದಾರೆ.

ಸಾಮಾನ್ಯವಾಗಿ ಲೋಕದಲ್ಲಿ ಮಾನವರಿಗೆ ವಿಷಯ ಸುಖಗಳಲ್ಲೇ ರುಚಿ ಹೆಚ್ಚು. ಏಕೆಂದರೆ ವಿಷಯ ಭೋಗಕ್ಕೆ ಶಿಕ್ಷಣ ಪಡೆಯಬೇಕಾದ ಅಗತ್ಯವಿಲ್ಲ. ಅದು ಜನ್ಮಾಂತರ ಸಂಸ್ಕಾರವನ್ನನುಸರಿಸಿ ಪರಂಪರಾಗತವಾಗಿ ಬರುತ್ತಲೇ ಇರುತ್ತದೆ. ಹುಟ್ಟಿದ ತಕ್ಷಣವೇ ಮಗು ಹಾಲು ಕುಡಿಯುತ್ತದೆ. ಕರು ತಾಯಿಯ ಕೆಚ್ಚಲಿಗೆ ಬಾಯಿಹಾಕುತ್ತದೆ. ಈ ಅಭ್ಯಾಸ ಯಾವ ಶಿಕ್ಷಣದಿಂದ ಬಂತು? ಯಾರು ಕಲಿಸಿದ ವರು? ಆದರೆ ಮಗು ಓಡಾಡಲು, ಮಾತನಾಡಲು ಸ್ವಲ್ಪ ಶಿಕ್ಷಣ ಅಗತ್ಯ. ಕಾರಣ ವೇನು? ಎಲ್ಲವೂ ಜನ್ಮಾಂತರವನ್ನನುಸರಿಸಿಯೇ ಇರುವುದಿಲ್ಲ. ಕೆಲವು ಕರ್ಮಗಳು ಈ ಜನ್ಮದಲ್ಲಿ ಪಡೆಯುವ ಶಿಕ್ಷಣದಿಂದಲೇ ಅಭಿವೃದ್ಧಿಯಾಗುವುವು. ಆದರೆ ವಿಷಯ ಭೋಗಾಸಕ್ತಿ ಶಿಕ್ಷಣದ ಅವಶ್ಯಕತೆ ಇಲ್ಲದೆ ತಾನಾಗಿಯೆ ಬರುವುದು. ಕೋಪ, ತಾಪ, ಈರ್ಷ್ಯೆ, ಅಸೂಯೆ, ಡಂಭ ಇತ್ಯಾದಿ ದುರ್ಗುಣಗಳು ಬೆಳೆಯಲು ವಿಷಯ ಭೋಗಗಳೇ ಮೂಲಕಾರಣ.

ವಿಷಯ ಭೋಗಗಳ ಆಸಕ್ತಿ ಬಿಡದೆ, ಪವಿತ್ರ ಸಾಧನೆಗಳಾದ ಜಪ, ತಪ, ಧ್ಯಾನ, ಧರ್ಮ, ಉಪವಾಸ, ಸಂಧ್ಯಾವಂದನಾದಿಗಳ ಬಗೆಗೆ ಎಷ್ಟು ಹೇಳಿದರೂ, ಅವುಗಳ ಮೇಲೆ ರುಚಿ ಬರುವುದಿಲ್ಲ. ಏಕೆಂದರೆ ವಿಷಯಾಸಕ್ತಿ ಹೃದಯವನ್ನು ಸಂಪೂರ್ಣ ಆವರಿಸಿರುವುದರಿಂದ ಪವಿತ್ರ ಕರ್ಮಗಳ ಮೇಲಿನ ಪ್ರೇಮ ಅಲ್ಲಿ ಅಂಕುರಿಸುವು ದಿಲ್ಲ.

ಹಾಗಂದ ಮಾತ್ರಕ್ಕೆ ಪವಿತ್ರ ಕರ್ಮಗಳ ಅಭ್ಯಾಸ ಬಿಡಕೂಡದು. ರುಚಿ ಬರುವ ವರೆಗೂ ಅವುಗಳನ್ನು ಬಿಡಬಾರದು. ಪ್ರಾರಂಭದಲ್ಲಿ ಮಾನವನಿಗೆ ಯಾವುದ ರಲ್ಲಿಯೂ ಅಷ್ಟೊಂದು ರುಚಿ ಬರುವುದಿಲ್ಲ. ನಿರಂತರ ಅಭ್ಯಾಸದಿಂದ ಅದರ ಮೇಲೆ ತಾನಾಗಿ ರುಚಿ ಉತ್ಪನ್ನವಾಗುವುದು. ಮಗುವಿಗೆ ಮೊದಲು ಹಾಲಿನ ರುಚಿ ಗೊತ್ತಿರುವುದಿಲ್ಲ. ಆದರೆ ಅಭ್ಯಾಸಬಲದಿಂದ ಕ್ರಮೇಣ ಅದಕ್ಕೆ ಹಾಲಿನ ರುಚಿ ಗೊತ್ತಾಗುವುದು. ಹಾಲಿನ ರುಚಿ ಗೊತ್ತಾದಮೇಲೆ, ಹಾಲು ಬಿಡಿಸಿ ಅನ್ನ ಅಭ್ಯಾಸ ಮಾಡಿಸೋಣವೆಂದರೆ ಮಗು ಹಾಲು ಬಿಡಲೊಲ್ಲದೆ ಹಟಮಾಡುವುದು. ನಂತರ, ಅನ್ನವೇ ಅಭ್ಯಾಸವಾಗಿ, ಅನ್ನದ ರುಚಿ ಸಿಕ್ಕಮೇಲೆ ಅನ್ನ ಬಿಡಲೊಪ್ಪುವುದಿಲ್ಲ. ಅನ್ನ ಅಷ್ಟು ಸಹಜ ಆಹಾರವಾಗಿಬಿಡುವುದು; ಒಂದು ದಿನವೂ ಅನ್ನ ಬಿಟ್ಟಿರಲು ಸಾಧ್ಯವಾಗುವುದಿಲ್ಲ.

ಹಾಗೇ ಮೊದಮೊದಲು ವಿಷಯ ಭೋಗಗಳು ಸಹಜವಾಗಿದ್ದರೂ ಅಭ್ಯಾಸದ ಮೂಲಕ, ಶಿಕ್ಷಣದ ಮೂಲಕ ಜಿಜ್ಞಾಸುವು ಕಥಾಕೀರ್ತನೆಗಳ ಮೇಲಿನ ಅನುರಾಗ ವನ್ನು ಅಭ್ಯಸಿಸಿದರೆ, ಕ್ರಮೇಣ ಭಗವತ್ಕಥಾಶ್ರವಣ, ಕೀರ್ತನೆಗಳೇ ಅವನಿಗೆ ಸಹಜ ಆಹಾರವಾಗಿ ಒಂದು ಕ್ಷಣವೂ ಅವನ್ನು ಬಿಟ್ಟಿರಲಾರದವನಾಗುತ್ತಾನೆ. ಸದಾ ಅದರೊಳಗಿನ ರಸಾಸ್ವಾದನ ಮಾಡುತ್ತಾ ಆನಂದದಿಂದ ಕಾಲಕಳೆಯುತ್ತಾನೆ. ಅಂಥವರು ಸಾಮಾನ್ಯ ಜನರಿದ್ದ ಕಡೆ ಇರದೆ, ವಿಷಯ ಸಂಬಂಧವಾದ ಸಂಭಾಷ ಣೆಯಲ್ಲಿ ಸೇರದೆ, ಭಗವತ್ ಕಥೆ, ಕೀರ್ತನೆಗಳು ನಡೆಯುವ ಸ್ಥಳಗಳಿಗೆ ಹೋಗಿ ಆನಂದದಿಂದ ಕಾಲಕಳೆಯುತ್ತಾರೆ.

ಸಜ್ಜನರೆನ್ನುವುದಕ್ಕೆ ಇಂಥ ನಡವಳಿಕೆಯೇ ಗುರುತು. ಹಾಗಲ್ಲದೆ, ನಾವು ಸಾಧಕ ರೆಂದು ಹೇಳಿಕೊಳ್ಳುತ್ತಾ, ಭಗವತ್ ಭಕ್ತರಂತೆ ಬಾಹ್ಯ ಆಡಂಬರಗಳನ್ನು ಮಾಡುತ್ತಾ, ಮಾಡುವುದು, ಆಡುವುದೆಲ್ಲಾ ವಿಷಯ ಸಂಬಂಧವಾದ ಕೆಲಸ, ಮಾತುಗಳೇ ಆದರೆ, ಅದು ಸಾಧಕತ್ವದ ಲಕ್ಷಣವಲ್ಲ. ಭಗವತ್ ಸಂಬಂಧವಾದ ವಿಷಯಗಳು ಜರುಗುವ ಸ್ಥಳದಲ್ಲೇ ಕಾಲ ಕಳೆಯಬೇಕು. ಅದಕ್ಕೆ ವಿರುದ್ಧ ಜಾಗಗಳಲ್ಲಿ ಎಷ್ಟೇ ವಿಚಿತ್ರ ಸಂಗತಿ ನಡೆಯುತ್ತಿದ್ದರೂ ಅಲ್ಲಿ ಸೇರಬಾರದು. ಅವನ್ನು ನೋಡಬಾರದು, ಕೇಳಬಾರದು, ಇವೇ ಭಾಗವತನ ಲಕ್ಷಣಗಳು.

ಒಂದು ಪವಿತ್ರ ಸ್ಥಳದಲ್ಲಿ—ದೇವಾಲಯದಲ್ಲೋ ಮಂದಿರದಲ್ಲೋ ಪೂಜಾ ಗೃಹ ದಲ್ಲೋ ಮಹಾಪುರುಷರ ಆಶ್ರಮದಲ್ಲೋ ಸಾಧುಸಜ್ಜನರ ಸಹವಾಸದಲ್ಲೋ, ಇದು ಯಾವುದೂ ಇಲ್ಲದಿದ್ದರೆ, ವಿಶಾಲವಾದ ಬಯಲು ಪ್ರದೇಶದಲ್ಲೋ ಏಕಾಂ ತವಾದ ಸ್ಥಳದಲ್ಲೋ—ಕೃಷ್ಣಕಥಾ ಲೋಲನಾಗಿ ಕೀರ್ತನೆ ಮಾಡಿದರೆ, ಮನುಷ್ಯ ಆನಂದದಲ್ಲಿ ಮುಳುಗಿ ಎಲ್ಲವನ್ನೂ ಮರೆಯುವನು. ಅದೂ ಇಲ್ಲದಿದ್ದರೆ, ಭಗವತ್ ಕಥಾಲೋಲರಾದ ಮಹಾಪುರುಷರ ಸಮೀಪದಲ್ಲಿದ್ದು, ಅವರನ್ನು ಶ್ರದ್ಧಾ ಭಕ್ತಿ ಪೂರ್ವಕವಾದ ಸೇವೆ ಸತ್ಕಾರಗಳಿಂದ ಪ್ರಸನ್ನರಾಗುವಂತೆ ಮಾಡಿ, ಅವರೊಂದಿಗೆ ಸೇರಿ ಭಗವತ್ ಕಥಾಶ್ರವಣ ಮಾಡಬೇಕು.

ಇಂಥ ಅಭಿರುಚಿ ಜನ್ಮಾಂತರದ ಪುಣ್ಯ ಫಲದಿಂದ ಬರಬೇಕು. ಅದಿಲ್ಲದವರಿಗೆ ಪವಿತ್ರ ಪರಮಾತ್ಮ ಕಥೆಯ ಶ್ರವಣ ಪ್ರಾಪ್ತಿ ಲಭಿಸದು. ಪ್ರಾರಂಭದಲ್ಲಿ ಜಿಜ್ಞಾಸುವಿಗೆ ಪವಿತ್ರ ಕಥೆಯಲ್ಲಿ ಮನಸ್ಸು ಐಕ್ಯವಾಗದಿದ್ದರೂ ಸಾಧುಸಜ್ಜನರ ಸಮೂಹದಲ್ಲಿ ಕುಳಿತು ಶ್ರವಣ ಮಾಡಿದರೂ ಸಾಕು. ಕ್ರಮೇಣ ಕಥೆಯಲ್ಲಿ ರುಚಿ ಹುಟ್ಟಿ ವಿಷಯ ತಿಳಿದುಕೊಳ್ಳಲು ಆಸಕ್ತನಾಗುವನು. ವಿಷಯ ವಿಚಾರಣೆಯ ಕಡೆಗೆ ಮನಸ್ಸು ಹೋಗುವುದು.

ಪಠನಕ್ಕಿಂತ ಶ್ರವಣವೇ ಹೆಚ್ಚು ರುಚಿಕರವಾಗಬಹುದು. ಅಥವಾ ಪಠನ ಶ್ರವಣ ಗಳೆರಡೂ ಕೆಲವರಿಗೆ ರುಚಿಕರವಾಗಬಹುದು. ಶ್ರವಣವೇ ಹೆಚ್ಚು ರುಚಿಕರವಾದರೆ, ಅಂಥವರು ಒಬ್ಬರೇ ಕುಳಿತು ಕೇಳುವುದಕ್ಕಿಂತ, ಕೆಲವು ಮಂದಿ ಜಿಜ್ಞಾಸುಗಳೊಡನೆ ಸೇರಿ ಕೇಳುವುದು ಒಳ್ಳೆಯದು. ಸಾಮಾನ್ಯ ಜಿಜ್ಞಾಸುಗಳೊಡನೆ ಸೇರಿ ಕೇಳುವುದ ಕ್ಕಿಂತ ಮಹನೀಯರ ಜತೆ ಸೇರಿ ಕೇಳುವುದು ಇನ್ನೂ ಒಳ್ಳೆಯದು. ಮಹನೀಯರ ಸಹವಾಸದಲ್ಲಿದ್ದು ಕೇಳುವುದಕ್ಕಿಂತ ಮಹನೀಯರ ಬಾಯಿಂದಲೇ ಕೇಳುವುದು ಮತ್ತೂ ಒಳ್ಳೆಯದು. ಏಕೆಂದರೆ, ಮಹನೀಯರು ಅನುಭವಸ್ವರೂಪರಾಗಿ, ಆನಂದ ಬಾಷ್ಪಗಳಿಂದ ಅರಳಿದ ಮುಖದಿಂದ ವಿವರಿಸುತ್ತಿದ್ದರೆ, ಶ್ರೋತೃಗಳು ಕೂಡ ರಸಪೂರ್ಣತೆಯ ಪರವಶತೆ ಪಡೆಯಬಲ್ಲರು. ಹೇಗೆಂದರೆ ದುಃಖದಿಂದ ಕೆಲವರು ಬಿಕ್ಕಿ ಬಿಕ್ಕಿ ಅಳುತ್ತಿದ್ದರೆ, ಅವರನ್ನು ನೋಡುವವರ ಕಣ್ಣುಗಳಲ್ಲೂ ನೀರೂರುವುದು. ನಗುವ ಹಸುಳೆಯನ್ನು ನೋಡಿದರೆ, ನೋಡುವವನೂ ತಾನಾಗಿ ನಗುವನು. ಹಾಗೇ ರಸಭರಿತ ಹೃದಯವುಳ್ಳ ಮಹನೀಯರ ಮಾತುಗಳು ಕೇಳುವವರ ಹೃದಯಗ ಳನ್ನೂ ರಸಭರಿತ ಮಾಡುತ್ತವೆ. ಮಹನೀಯರ ಸಹವಾಸದಲ್ಲಿದ್ದು ಅವರು ಸ್ವತಃ ಹೇಳುವ ಭಗವತ್ ಕಥೆಯನ್ನು ಶ್ರವಣ ಮಾಡುವುದರಿಂದಾಗುವ ಲಾಭ ಅಷ್ಟಿ ಷ್ಟೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅಂಥ ಪವಿತ್ರ ಶ್ರವಣದಿಂದ ಕಲ್ಮಷ ತುಂಬಿದ ಹೃದಯ ಕಾಂತಿರೂಪ ಹೊಂದಿ ಸ್ವಚ್ಛ ಪ್ರಕಾಶ ಪಡೆಯುವುದು. ವಿಶ್ವೇಶ್ವರ ಕಥಾ ಶ್ರವಣವು ವಿಷಯ ವಾಸನೆಗಳೆನ್ನುವ ದುರ್ವಾಸನೆ ಹೋಗಲಾಡಿಸುವ ದಿವ್ಯ ಸುವಾಸನೆ. ಕಥಾಶ್ರವಣ ಕಿವಿಗಳ ಮೂಲಕ ಮನಸ್ಸನ್ನು ಸೇರಿ ಹೃದಯವನ್ನು ಶುದ್ಧಿಗೊಳಿಸುವುದು.

ಅಂಥ ಶುದ್ಧ ಹೃದಯವೇ ಭಗವಂತ ನೆಲೆಸಲು ಯೋಗ್ಯವಾದ ಸ್ಥಳ, ಪೀಠ. ಭಗವಂತ ಹಾಗೆ ಹೃದಯವನ್ನು ತನ್ನ ನಿವಾಸಸ್ಥಾನ ಮಾಡಿಕೊಂಡು ಯಾವಾಗ ಅಲ್ಲಿ ವಾಸಿಸಲಾರಂಭಿಸುವನೋ, ಆಗ, ಅದಕ್ಕೆ ಮುಂಚೆ ಅದೇ ಹೃದಯವನ್ನು ತಮ್ಮ ನಿವಾಸ ಸ್ಥಾನ ಮಾಡಿಕೊಂಡಿದ್ದ ಅರಿಷಡ್ವರ್ಗಗಳೆನ್ನುವ ಕಾಮ ಕ್ರೋಧ ಮೋಹಾದಿಗಳು ಮುಖ ಮುಚ್ಚಿಕೊಂಡು, ಕಾಲಿಗೆ ಬುದ್ಧಿ ಹೇಳಿ, ಅಲ್ಲಿಂದ ಪರಾರಿ ಆಗುವುವು.

ದುರ್ಗುಣಗಳು ಯಾವಾಗ ಹೃದಯದಿಂದ ಓಡಿಹೋಗುವುವೋ, ಆಗ ಅವುಗ ಳನ್ನು ಅನುಸರಿಸಿದ್ದ ದುರ್ವಾಸನೆಗಳು ಗಂಟು ಮೂಟೆ ಕಟ್ಟಿಕೊಂಡು ಪತ್ತೆ ಇಲ್ಲದಂತೆ ಹೋಗುವುವು. ನಂತರ ಮನುಷ್ಯ ತನ್ನ ನಿಜ ಸ್ವರೂಪ ಸ್ವಭಾವಗಳಾದ, ಸತ್ಯ ಪ್ರೇಮಗಳಿಂದ ಸಾಕ್ಷಾತ್ಕಾರ ಪ್ರಾಪ್ತಿಗೆ ಸಾಧನೆ ನಡೆಸಿ, ಸಾಯುಜ್ಯವನ್ನು

ಪಡೆಯುವನು. ಮಾಯೆಯನ್ನು ತೊರೆಯುವನು, ಮನಸ್ಸನ್ನು ಹಿಡಿತದಲ್ಲಿಟ್ಟು ಕೊಳ್ಳುವನು. ದಿವ್ಯ ರಹಸ್ಯ ಅರಿಯುವನು. ಮಾಧವತ್ವ ದೊರಕಿಸಿಕೊಳ್ಳುವನು.

ಪ್ರೇಮವೇ ಮಾನವ ಸ್ವಭಾವ. ಮನುಷ್ಯ ಪ್ರೇಮವಿಲ್ಲದೆ ಒಂದು ನಿಮಿಷ ಕೂಡ ಬಾಳಲಾರ. ಇದುವರೆಗೂ ಪ್ರೇಮಿಸುತ್ತಿದ್ದ ಕಾಮ, ಕ್ರೋಧ, ಮೋಹಾದಿಗಳೆನ್ನುವ ದುರ್ಗುಣಗಳು ಮಾನವನ ಹೃದಯದಿಂದ ತೊಲಗಿ ಹೋದಮೇಲೆ, ಪ್ರೇಮ ಒಂಟಿಯಾಗಿರಲೊಲ್ಲದೆ, ಇರಲಾಗದೆ, ಹೃದಯ ಪೀಠದಲ್ಲಿ ವಿರಾಜಮಾನನಾದ ನಿರ್ಮಲ, ನಿಶ್ಚಲ, ನಿಸ್ವಾರ್ಥ ಸ್ವರೂಪನಾದ, ನೀಲ, ನೀರದ ವಿಗ್ರಹನಾದ ಮದನ ಮೋಹನನನ್ನು ಪ್ರೇಮಿಸಲು ತವಕಪಡುವುದು. ಬೇರೆ ಯಾರಿಗೂ ಹೃದಯದಲ್ಲಿ ಇನ್ನು ಸ್ಥಾನ ಇಲ್ಲದಿರುವುದರಿಂದ, ಬೇರೆ ಯಾರೂ ಅಲ್ಲಿ ಹೋಗಿ ಸೇರಲು ಅವಕಾಶವಿಲ್ಲದ್ದರಿಂದ ವಿಧಿಯಿಲ್ಲದೆ ಪರಮಾತ್ಮಪ್ರೇಮವೇ ಕ್ರಮೇಣ ಗಾಢವಾಗಿ ಬೆಳೆದು ನಿರ್ಮಲ ನಿಸ್ವಾರ್ಥವಾದ ಸರ್ವಸಂಘ ಪರಿತ್ಯಾಗ ಸ್ಥಿತಿಯನ್ನು ಹೊಂದಿ ಸಾಯುಜ್ಯವನ್ನು ಸಾಧಿಸುವನು. ಎಂತಲೇ ಮಾನವನ ಹೃದಯದಲ್ಲಿ ವಾಸುದೇವ ವಾಸಿಸಿದರೆ, ವಸುದೇವನಿಗೆ ಅಲ್ಲಿ ಅವಕಾಶವಿರುವುದಿಲ್ಲ! ಹಾಗಲ್ಲದೆ, ವಸುದೇವನಿಗೇ ಹೃದಯವನ್ನು ಅರ್ಪಿಸಿದರೆ, ವಾಸುದೇವ ಅಲ್ಲಿ ಎಷ್ಟು ಮಾತ್ರಕ್ಕೂ ವಾಸಮಾಡುವುದಿಲ್ಲ.

ಹೋಗಲಿ, ಇಬ್ಬರಿಗೂ ಅಲ್ಲಿ ಸ್ಥಾನ ಕೊಡೋಣವೆಂದರೆ, ಅದು ಸಾಧ್ಯ ಇಲ್ಲ. ಕತ್ತಲೆ, ಬೆಳಕು, ಎರಡೂ ಒಂದೇ ಕಾಲದಲ್ಲಿ ಒಂದೇ ಜಾಗದಲ್ಲಿ ಸೇರುವುದಿಲ್ಲ. ಸೇರಲು ಸಾಧ್ಯವಿಲ್ಲ. ಧನ ಸ್ಥಾನದಲ್ಲಿ ದೈವವನ್ನೂ, ದೈವದ ಸ್ಥಾನದಲ್ಲಿ ಧನವನ್ನೂ ಸೇರಿಸಿದರೆ, ಕಡೆಗೆ ಅದು, ದೈವವೂ ಆಗದೆ, ಧನವೂ ಆಗದೆ, ದೆವ್ವವಾಗುವುದು.

ಮನುಷ್ಯ ಮನುಷ್ಯನಾಗಿ ಪರಿವರ್ತಿತನಾದರೂ ಒಳ್ಳೆಯದೆ. ಇಲ್ಲವೆ ಮಾಧವನಾಗಿ ಪರಿವರ್ತನೆಗೊಂಡರೂ ಒಳ್ಳೆಯದೆ. ಆದರೆ ದಾನವನಾಗಿಯೋ ಮೃಗವಾಗಿಯೋ ಪರಿವರ್ತನೆ ಆಗಬಾರದು. ಏಕೆಂದರೆ, ಖನಿಜವಾಗಿ ಹುಟ್ಟಿ ಖನಿಜವಾಗಿ ಸತ್ತು ವೃಕ್ಷವಾಗಿ ಹುಟ್ಟಿತೆಂದೂ ವೃಕ್ಷವಾಗಿ ಸತ್ತು ಜಂತುವಾಗಿ ಹುಟ್ಟಿತೆಂದೂ ಜಂತುವಾಗಿ ಸತ್ತು ಮಾನವನಾಗಿ ಹುಟ್ಟಿದನೆಂದೂ ವಿಜ್ಞಾನಶಾಸ್ತ್ರ ಆಧ್ಯಾತ್ಮಿಕ ಶಾಸ್ತ್ರಗಳು ಒಪ್ಪಿಕೊಂಡಿವೆ. ಮಾನವನಾಗಿ ಸತ್ತು ಮೃಗವಾಗಿ ಹುಟ್ಟಿದ ರಂತೂ, ಅದರಿಂದ ಕೀರ್ತಿಯಿಲ್ಲ. ದೈವವಾಗಿ ಹುಟ್ಟಿದರೇನೇ ಸಾರ್ಥಕ. ಆದ್ದ ರಿಂದ, ಹೃದಯದಲ್ಲಿ ದುರ್ಗುಣಗಳು ಸೇರದಂತೆ ನೋಡಿಕೊಂಡು, ಸದ್ಗುಣಗಳ ಸಂಪಾದನೆ ಮಾಡಿ, ಸರ್ವೇಶ್ವರನಿಗೆ ತನ್ನ ಹೃದಯವನ್ನು ಪೀಠವಾಗಿ ಅರ್ಪಿಸಿ, ಎಲ್ಲ ವಾಸನೆಗಳನ್ನೂ ನಿಗ್ರಹಿಸಿದರೆ, ಮಾನಸ ಸರೋವರವು ಕ್ಷೀರ ಸಾಗರವಾಗಿ

 

ಮಾರ್ಪಡುವುದು. ಜೀವರೂಪಿಯಾದ ಹಂಸ ಅದರಲ್ಲಿ ವಿಹರಿಸುವುದು. ಆನಂದ ಅನುಭವಿಸುವುದು.

ಅನಂತವಾದ ಸಮುದ್ರದ ಅಲೆಗಳಿಗೆ ಆದಿಯಾಗಲಿ, ಅಂತ್ಯವಾಗಲಿ ಯಾರು ನಿಯಮಿಸಬಲ್ಲರು? ಅದು ಸಾಧ್ಯವಿಲ್ಲ. ಅವುಗಳ ಆದಿ ಅಂತ್ಯ ತಿಳಿಯಹೊರಟರೆ, ಯಾವ ಅಲೆಯಿಂದ ಎಣಿಕೆ ಪ್ರಾರಂಭಿಸುವಿರೋ ಅದೇ ಆದಿ. ಯಾವ ಅಲೆಗೆ ಎಣಿಕೆ ನಿಲ್ಲಿಸುವರೋ ಅದೇ ಅಂತ್ಯ, ಅಷ್ಟೆ. ಅಂದರೆ ನಿಮ್ಮ ಎಣಿಕೆಗೆ ಆದಿ ಅಂತ್ಯಗಳುಂಟೇ ಹೊರತು ಅಲೆಗಳಿಗೆ ಆದಿ ಅಂತ್ಯಗಳಿಲ್ಲ. ಅದನ್ನು ಕಂಡುಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ. ಹಾಗೆ ಭಗವತ್ ಚರಿತ್ರೆಗೆ ಕೂಡ ಆದ್ಯಂತಗಳಿಲ್ಲ. ತಿಳಿಯಬೇಕಾದದ್ದು ಅಪಾರ ಸಮುದ್ರದ ಹಾಗೆ. ಇದರಲ್ಲಿ ಯಾರು ಎಲ್ಲಿಂದ ಪ್ರಾರಂಭಿಸುವರೋ ಅದು ಆದಿ ಎಂದೂ ಎಲ್ಲಿಗೆ ಮುಗಿಸುವರೋ ಅದು ಅಂತ್ಯವೆಂದೂ ಹೇಳುವರು. ಅಷ್ಟೇ ವಿನಾ, ಅಪಾರವಾದ ಪರಮಾತ್ಮ ಲೀಲೆಗೆ ಆದಿ ಎಲ್ಲಿ? ಅಂತ್ಯವೆಲ್ಲಿ? ಭಗವತ್ ಕಥೆಗೆ, ಲೀಲೆಗೆ, ಆದ್ಯಂತ್ಯಗಳಿಲ್ಲ. ಅವುಗಳನ್ನು ತಿಳಿಸುವವರ ಭಾವ ತರಂಗಗಳಿಗೆ ಆದ್ಯಂತ್ಯಗಳೇ ವಿನಾ, ಭಗವತ್ ಲೀಲಾ ನಾಟಕಕ್ಕಲ್ಲ. ಅದಕ್ಕೆ ಇತಿಮಿತಿಯೇ ಇಲ್ಲ. ಅಲ್ಲದೆ, ಭಗವತ್ ಚರಿತ್ರೆ ಎಲ್ಲ ಕಡೆಯೂ ಸುಧಾ ಪರಿಪೂರ್ಣವೇ ಹೊರತು, ಅದರಲ್ಲಿ ವ್ಯತ್ಯಾಸವಿಲ್ಲ. ಸುಧಾರಸ ಸಾಗರವನ್ನು ಅವರವರಿಗೆ ಇಷ್ಟ ಬಂದ ಕಡೆ ಬಂದು ಸೇರಬಹುದು. ಎಲ್ಲೇ ಬಂದು ಸೇರಲಿ, ಎಲ್ಲೇ ಅದನ್ನು ಕುಡಿಯಲಿ, ಅದು ಮಧುರವೇ ವಿನಾ, ಮಲಿನತೆಯೇ ಅದಕ್ಕಿಲ್ಲ. ಯಾವ ವಿಧದಿಂದ ಅನುಭವಿಸಿದರೂ ಭಗವತ್ ಪ್ರೇಮ ಪರಿಶುದ್ಧವಾಗಿ ಪ್ರಭಾವಪೂರ್ಣವಾಗಿ ಪ್ರಕಾಶಿಸುವುದು. ಬೆಲ್ಲವನ್ನು ಹಗಲು ತಿನ್ನಲೀ, ರಾತ್ರಿ ತಿನ್ನಲೀ, ಸಿಹಿಯೇ. ಅದಕ್ಕೆ ಬೇರೆ ರುಚಿ ಇಲ್ಲ. ತಿನ್ನುವವನಿಗೆ ಕತ್ತಲು ಬೆಳಕು ವಿನಾ ಬೆಲ್ಲಕ್ಕಲ್ಲ.

# ೨ ಭಾಗವತದ ಜನನ

ವೀರಸ್ವರ್ಗ ಹೊಂದಿದ ಅಭಿಮನ್ಯುವಿಗೆ ಆತ್ಮ ಸ್ವರೂಪನಾದ ಪರೀಕ್ಷಿತ್ ಮಹಾರಾಜ ಉತ್ತರೆಯ ಗರ್ಭದಲ್ಲಿ ಬೆಳೆಯುತ್ತಿದ್ದಾಗ ಅಶ್ವತ್ಥಾಮ ಬಿಟ್ಟ ದಿವ್ಯಾಸ್ತ್ರ ಬೆಂಕಿ ಕಾರುತ್ತಾ

ಅತಿ ವೇಗದಿಂದ ತನ್ನ ಕಡೆಗೆ ಬರುತ್ತಿದ್ದುದನ್ನು ನೋಡಿದ. ಆ ಸಮಯಕ್ಕೆ ಸರಿಯಾಗಿ ಯಾರೋ ಒಬ್ಬ ದಿವ್ಯ ಸುಂದರ ಬಾಲಕ ಕೈಯಲ್ಲಿ ಚಕ್ರ ಹಿಡಿದು, ವೇಗದಿಂದ ಬರುತ್ತಿದ್ದ ಅಶ್ವತ್ಥಾಮನ ಆ ಭಯಂಕರ ಅಸ್ತ್ರವನ್ನು ನುಚ್ಚುನೂರು ಮಾಡಿದುದನ್ನು ನೋಡಿ, ಗರ್ಭದಲ್ಲಿದ್ದ ಶಿಶು, ಪರೀಕ್ಷಿತ್ ಮಹಾರಾಜ, ಆಶ್ಚರ್ಯ ಪರವಶನಾಗಿ ಯೋಚಿಸಿದ, "ನನ್ನ ಜೊತೆ ಈ ಗರ್ಭದಲ್ಲಿ ವಾಸ ಮಾಡುತ್ತಾ ನನ್ನನ್ನು ರಕ್ಷಿಸಿದ ಈ ಬಾಲಕ ಯಾರಿರಬಹುದು? ನಾನಿರುವ ಗರ್ಭದಲ್ಲೇ ಅವನೂ ಇರುವನಾದ್ದರಿಂದ ಅವನು ನನ್ನ ಸೋದರನೆಂದುಕೊಳ್ಳಲೆ? ಹಾಗಾದರೆ, ಅವನಿಗೆ ಚಕ್ರ ಎಲ್ಲಿಂದ ಬಂತು? ಅವನಲ್ಲಿ ಚಕ್ರವಿದ್ದ ಬಳಿಕ ನನ್ನಲ್ಲೂ ಅಂಥ ಚಕ್ರವಿರಬೇಕಲ್ಲ? ಏನೇ ಇರಲಿ, ಅವನು ಸಾಮಾನ್ಯ ಮನುಷ್ಯನೇನೂ ಅಲ್ಲ," ಎಂದು ಅನೇಕ ಬಗೆಯಾಗಿ ಊಹಿಸಿಕೊಳ್ಳುತ್ತಾ ಇರುವಾಗಲೇ, ಗರ್ಭದಲ್ಲಿ ಅವನನ್ನು ರಕ್ಷಿಸಿದ ಬಾಲಕನೇ ಶ್ಯಾಮಸುಂದರನಾಗಿ ಕೋಟಿ ಸೂರ್ಯರ ಕಾಂತಿಯಿಂದ ಪ್ರಕಾಶಿಸುತ್ತಾ, ಅವನನ್ನು ಸಮೀಪಿಸಿ ಅಂತರ್ಧಾನನಾದನು.

ಈ ದೃಶ್ಯವನ್ನು ಕಣ್ಣಾರೆ ನೋಡುತ್ತಿದ್ದ ಶಿಶು, ಪರೀಕ್ಷಿತ್ ಮಹಾರಾಜ, ನಿರಂತರವೂ ಆ ದಿವ್ಯ ಸುಂದರ ಮೂರ್ತಿಯನ್ನೇ ಸ್ಮರಿಸುತ್ತಾ ಗರ್ಭದಲ್ಲಿ ಬೆಳೆಯುತ್ತಿತ್ತು. ಗರ್ಭವಾಸ ಕಳೆದಮೇಲೆ ಉತ್ತರೆಯ ಗರ್ಭದಿಂದ ತೇಜೋವಂತ ಶಿಶು ಜನಿಸಿತು. ಹುಟ್ಟಿದೊಡನೆಯೇ ಬಾಲಕನ ತೇಜಸ್ಸು ಆ ಇಡೀ ಕೋಣೆಯನ್ನು ಜಾಜ್ವಲ್ಯಮಾನವಾಗಿ ಬೆಳಗಿಸಿತು. ಅಲ್ಲಿದ್ದ ಸ್ತ್ರೀಯರ ಕಣ್ಣುಗಳು ಕೋರೈಸಿದವು. ಆ ಬಾಲಕನ ತೇಜಸ್ಸನ್ನು ಅವರು ನೋಡಲೂ ಆಗಲಿಲ್ಲ. ಕೆಲವು ನಿಮಿಷ ಅವರಿಗೆ ಏನೂ ತೋಚದಂತಾಯಿತು.

ಕೊನೆಗೆ ಸ್ವಲ್ಪ ಸುಧಾರಿಸಿಕೊಂಡ ಬಳಿಕ, ಸುಭದ್ರೆ ಈ ಶುಭ ವಾರ್ತೆಯನ್ನು ಒಬ್ಬ ದಾಸಿಯ ಮುಖಾಂತರ ಯುಧಿಷ್ಠಿರನಿಗೆ ತಿಳಿಸಿದಳು. ಕಾತುರತೆಯಿಂದ ಕಾಯುತ್ತಿದ್ದ ಪಾಂಡುನಂದನರು ಈ ಶುಭವಾರ್ತೆ ಬಂದೊಡನೆಯೇ ಸಕಲ ಮಂಗಳ ವಾದ್ಯಗಳು ಮೊಳಗಲೆಂದು ಆಜ್ಞಾಪಿಸಿದರು. ಫಿರಂಗಿ ಗುಂಡುಗಳು ಹಾರಿದವು. ತಮ್ಮ ವಂಶ ಉದ್ಧಾರವಾಯಿತೆಂದು ಪಾಂಡುನಂದನರು ಸಂತೋಷಿಸಿದರು. ಯುಧಿಷ್ಠಿರ ತಮ್ಮ ಮನೆಯ ಪುರೋಹಿತರಿಗೆ ಹೇಳಿಕಳಿಸಿದ. ಮಂಗಳ ವಾದ್ಯವನ್ನು ಕೇಳಿದ ಪುರಪ್ರಜೆಗಳು ಕಾರಣವು ಏನೆಂದು ತಿಳಿಯಲು ಗುಂಪು ಗುಂಪಾಗಿ ಇಂದ್ರಪ್ರಸ್ಥದ ಕಡೆಗೆ ಧಾವಿಸಿದರು. ಕೇವಲ ಇಂದ್ರಪ್ರಸ್ಥ ಒಂದೇ ಅಲ್ಲ, ಇಡೀ ಸಾಮ್ರಾಜ್ಯವೇ ಆ ದಿನ ಆನಂದಿಸಿತು. ಬಂದ ಬಂದವರಿಗೆಲ್ಲಾ ಯುಧಿಷ್ಠಿರ ಅನೇಕ ವಿಧದ ತಿಂಡಿ ತಿನಿಸುಗಳನ್ನು ಹಂಚಿದ. ಯುಧಿಷ್ಠಿರ ಬ್ರಾಹ್ಮಣರಿಗೆ ಗೋದಾನವಿತ್ತ. ಹೆಂಗಸರಿಗೆ ಬಂಗಾರದ ಬಟ್ಟಲಿನಲ್ಲಿ ಅರಿಸಿನ ಕುಂಕುಮ ಕೊಡು

ವಂತೆ ಅಂತಃಪುರಕ್ಕೆ ಹೇಳಿ ಕಳಿಸಿದ. ಪಟ್ಟೆಪೀತಾಂಬರ ನವರತ್ನವೇ ಮೊದಲಾದ ಬೆಲೆಬಾಳುವ ವಸ್ತುಗಳನ್ನು ಬ್ರಾಹ್ಮಣರಿಗೆ ಕೊಟ್ಟು ಸತ್ಕರಿಸಿದ. ನಿಮಿಷಾರ್ಧದಲ್ಲಿ ಆ ಮಹಾನಗರ ಒಂದು ದಿವ್ಯ ಸುಂದರ ಮಂದಿರವಾಗಿ ಕಂಗೊಳಿಸಿತು. ಪ್ರಜೆಗಳೆಲ್ಲರೂ ಪಾಂಡುವಂಶೋದ್ಧಾರಕನ ಜನನವಾಯಿತೆಂದು ಆನಂದಪರವಶರಾಗಿ ಜಯ ಜಯ ಧ್ವನಿಗೈಯುತ್ತಿದ್ದರು. ಹೀಗೆ ಪರೀಕ್ಷಿತ್ ಮಹಾರಾಜನ ಜನ್ಮದಿನದಂದು ನಗರದಲ್ಲಿ ಹಗಲು–ರಾತ್ರಿ ಎನ್ನದೆ, ಬಗೆಬಗೆಯ ವಿನೋದಗಳಿಂದ ಜನರು ಆನಂದಿಸಿದರು.

ಮಾರನೇ ದಿನ ಯುಧಿಷ್ಠಿರ ಕುಲಪುರೋಹಿತರಾದ ಕೃಪಾಚಾರ್ಯರನ್ನು ಕರೆಸಿ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿಸಿದ. ಬಂದ ಬ್ರಾಹ್ಮಣರಿಗೆ ಬೇಕಾದಷ್ಟು ಆಭರಣಗಳನ್ನಿತ್ತು ಸಂತುಷ್ಟಿಗೊಳಿಸಿ ಕಳುಹಿಸಿದ. ಬಂದ ಪಂಡಿತರು ಬಾಲಕನನ್ನು ಬಹುವಿಧವಾಗಿ ಆಶೀರ್ವದಿಸಿ ಅವರವರ ಮನೆಗಳಿಗೆ ತೆರಳಿದರು.

ಮೂರನೆಯ ದಿನ ಯುಧಿಷ್ಠಿರ ಭರತ ವಂಶದ ಧವಳಕೀರ್ತಿಗೆ ಕಳಂಕ ಬರಬಾರ ದೆನ್ನುವ ಆಕಾಂಕ್ಷೆಯಿಂದ, ತನ್ನ ರಾಜ್ಯದಲ್ಲಿದ್ದ ಪ್ರಸಿದ್ಧ ಜ್ಯೋತಿಷ್ಯರನ್ನೂ ಸಾಮುದ್ರಿ ಕರನ್ನೂ ಕರೆಸಿ, ಅವರೆಲ್ಲರನ್ನೂ ಉನ್ನತಾಸನಗಳಲ್ಲಿ ಕುಳ್ಳಿರಿಸಿ, ಸುಗಂಧ ದ್ರವ್ಯಗ ಳಿಂದ ಸ್ವಾಗತಿಸಿ, ಧನಕನಕ ವಸ್ತುಗಳನ್ನಿತ್ತು ಸತ್ಕರಿಸಿದ. ಕೈಜೋಡಿಸಿ ಅವರೆಲ್ಲರಿಗೂ ನಮಸ್ಕರಿಸಿ, ಹೀಗೆ ಪ್ರಾರ್ಥಿಸಿದ: "ಭೂತ ಭವಿಷ್ಯತ್ ವರ್ತಮಾನ ಕಾಲಗಳನ್ನು ತಿಳಿದ ತ್ರಿಕಾಲಜ್ಞಾನಿಗಳೇ! ನಮಗೆ ಜನಿಸಿರುವ ಈ ಮಗುವಿನ ಜನ್ಮಲಗ್ನ ಗ್ರಹಸ್ಥಿತಿ ಗಳನ್ನು ನೋಡಿ. ಅದರ ಫಲ ಹೇಳಬೇಕೆಂದು ನನ್ನ ಪ್ರಾರ್ಥನೆ," ಎಂದು ಹೇಳಿ, ಶಿಶುವಿನ ಜನನಕಾಲವನ್ನು ಬರೆದು ಬಂಗಾರದ ತಟ್ಟೆಯಲ್ಲಿಟ್ಟು ಅವರಿಗೆ ಕೊಟ್ಟ.

ದೈವಜ್ಞರುಗಳಾದ ಆ ಬ್ರಾಹ್ಮಣರು ಜನನಕಾಲ ಬರೆದಿದ್ದ ಆ ಪತ್ರವನ್ನು ನೋಡಿ ಶಿಶುವಿನ ಲಗ್ನ ಚಕ್ರವನ್ನು ಹಾಕಿ ಗ್ರಹಸ್ಥಾನಗಳನ್ನು ಗೊತ್ತುಪಡಿಸಿದರು. "ಅಬ್ಬಾ! ಎಂಥ ಜಾತಕ. ಯಾರಿರಬಹುದು ಈ ಶಿಶು?" ಎಂದು ಆಶ್ಚರ್ಯ ಸೂಚಿಸುತ್ತಾ, ಪ್ರಸನ್ನಚಿತ್ತರಾಗಿ ಒಬ್ಬರಿಗಿಂತ ಒಬ್ಬರು ಅದನ್ನು ಅತಿಶಯವಾಗಿ ವರ್ಣಿಸುತ್ತಾ, ಆನಂದಾಶ್ಚರ್ಯಗಳಲ್ಲಿ ಮುಳುಗಿಹೋದರು. ಅವರಲ್ಲಿ ಅಗ್ರಸ್ಥಾನ ಪಡೆದಿದ್ದ ಪಂಡಿ ತೋತ್ತಮನು ಎದ್ದು ನಿಂತು, "ಈವರೆಗೆ ಎಷ್ಟೋ ಜಾತಕಗಳನ್ನು ನೋಡಿದ್ದೇನೆ. ಎಷ್ಟೋ ಕುಂಡಲಿಗಳನ್ನು ಹಾಕಿದ್ದೇನೆ. ಆದರೆ ಇಂಥ ಪವಿತ್ರವಾದ ಲಗ್ನಚಕ್ರವನ್ನು ನಾನು ಕಣ್ಣಿನಲ್ಲಿ ನೋಡಿಲ್ಲ. ಕಿವಿಯಲ್ಲಿ ಕೇಳಿಲ್ಲ. ಎಲ್ಲ ಸುಖಗಳೂ ಒಂದು ಸ್ಥಾನದಲ್ಲಿ ಒಟ್ಟಾಗಿ ಸೇರಿವೆ. ಸಾಕ್ಷಾತ್ ವಿಷ್ಣುಸ್ಥಾನದಲ್ಲಿವೆ. ಎಲ್ಲ ಸದ್ಗುಣಗಳೂ

ಒಂದೇ ಕಡೆ ಸಮ್ಮಿಳಿತವಾಗಿವೆ. ಹೆಚ್ಚೇಕೆ, ತಿರುಗಿ ನಿಮ್ಮ ವಂಶದಲ್ಲಿ ಸಾಕ್ಷಾತ್ ಮನುವೇ ಜನಿಸಿದ್ದಾನೆನ್ನುವುದರಲ್ಲಿ ಸಂದೇಹವಿಲ್ಲ," ಎಂದು ಹೇಳಿ ಕುಳಿತ.

ಯುಧಿಷ್ಠಿರ ತನ್ನ ಅದೃಷ್ಟವನ್ನು ಕೊಂಡಾಡುತ್ತಾ, ಆನಂದದಿಂದ ಕೈಜೋಡಿಸಿ ಹೀಗೆ ಉತ್ತರವಿತ್ತ: "ಹಿರಿಯರ ಅನುಗ್ರಹದಿಂದಲೂ ಭಗವತ್ ಕೃಪಾಕಟಾಕ್ಷದಿಂದಲೂ ನಿಮ್ಮಂಥ ಪಂಡಿತೋತ್ತಮರ ಆಶೀರ್ವಾದದಿಂದಲೂ ನಮ್ಮ ವಂಶದಲ್ಲಿ ಮತ್ತೆ ಇಂಥ ಪುತ್ರರತ್ನವನ್ನು ಪಡೆದಿದ್ದೇವೆ. ಲಗ್ನ ಚಕ್ರದಲ್ಲಿ ಎಷ್ಟೋ ಶುಭಲಕ್ಷಣಗಳು ಇದ್ದಾಗ್ಯೂ, ನಮ್ಮ ಸಂಪ್ರದಾಯವನ್ನನುಸರಿಸಿ, ಪಂಡಿತರನ್ನೂ, ಬ್ರಾಹ್ಮಣರನ್ನೂ, ಸಾಧುಗಳನ್ನೂ ಸೇವಿಸುವಂಥ ಸದ್ಗುಣಗಳಿಲ್ಲದಿದ್ದರೆ ಸಾರ್ಥಕವೇನು? ಆದ್ದರಿಂದ, ಅಂಥ ಸದ್ಗುಣಗಳು ಈ ಬಾಲಕನಲ್ಲಿವೆಯೇ? ಲಗ್ನಚಕ್ರ ನೋಡಿ ತಿಳಿಸಿದರೆ ನಾನು ಧನ್ಯ," ಎಂದು ಪ್ರಾರ್ಥಿಸಿದ.

ಆಗ ದೈವಜ್ಞನಾದ ಆ ಬ್ರಾಹ್ಮಣ, "ಮಹಾರಾಜಾ, ಆ ವಿಷಯದಲ್ಲಿ ನೀವು ಎಷ್ಟುಮಾತ್ರಕ್ಕೂ ಅನುಮಾನ ಪಡಬೇಕಾಗಿಲ್ಲ. ಇವನು ದೇವ, ಬ್ರಾಹ್ಮಣ ಭಕ್ತನಾಗುವನು. ಯಜ್ಞಯಾಗಾದಿ ಕರ್ಮಗಳನ್ನು ಮಾಡುವನು. ನಿಮ್ಮ ಪೂರ್ವಿಕರಾದ ಭರತ ಎಂಥ ಸತ್ಕೀರ್ತಿ ಸಂಪಾದಿಸಿದನೋ ಇವನೂ ಅಷ್ಟೇ ಸತ್ಕೀರ್ತಿವಂತನಾಗುವನು. ಅಶ್ವಮೇಧಾದಿ ಯಾಗಗಳನ್ನು ಕೂಡ ಮಾಡುವನು. ಭೂಮಿಯಲ್ಲಿ ತನ್ನ ವಂಶಗೌರವವನ್ನು ವಿಸ್ತರಿಸುವನು. ದೈವ, ದಾನವ, ಮಾನವರ ಮನ್ನಣೆ ಪಡೆಯುವನು. ಅಷ್ಟೇಕೆ ಹಿಂದೆಂದೂ ನಿಮ್ಮ ವಂಶದಲ್ಲಿ ಇಂಥ ಮಹಾಪುರುಷ ಹುಟ್ಟಿಯೇ ಇರಲಿಲ್ಲ ಎನ್ನಬಹುದು," ಎಂದು ಬಾಲಕನ ಅನೇಕ ಸದ್ಗುಣ, ಸದಾಚಾರ, ಸಂಪನ್ನತೆಗಳನ್ನು ನಿರೂಪಿಸಿದ.

ಇನ್ನೂ ಎಷ್ಟೋ ಶುಭ ಫಲಗಳೂ ಸದ್ಗುಣಗಳೂ ಇದ್ದಾಗ್ಯೂ ದೈವಜ್ಞರಿಗೆ ಹೇಳಲು ಧೈರ್ಯಸಾಲದೆ, ಹೆಚ್ಚು ಹೇಳಿದರೆ ಅತಿಶಯೋಕ್ತಿ ಎಂದುಕೊಳ್ಳುವರೇನೊ ಎನ್ನುವ ಭಯದಿಂದ, ಮುಖ್ಯ ವಿಷಯಗಳನ್ನು ಮಾತ್ರ ತಿಳಿಸಿ ಸುಮ್ಮನಾದರು. ಆದರೂ ಬಾಲಕನ ಸದ್ಗುಣ ಸದಾಚಾರಗಳನ್ನು ಕೇಳುತ್ತಿದ್ದ ಧರ್ಮಜನಿಗೆ ಎಷ್ಟು ಕೇಳಿದರೂ ತೃಪ್ತಿ ಇಲ್ಲ. ಇನ್ನೂ ಏನೇನೊ ವಿಷಯಗಳನ್ನು ಕೇಳಿ ತಿಳಿದುಕೋಳ್ಳುವ ಕುತೂಹಲ ಅವನಿಗೆ.

ಅವನ ಉತ್ಸಾಹವನ್ನು ನೋಡಿದ ಜ್ಯೋತಿಷ್ಯರು, "ರಾಜಾ! ನೀವು ಇನ್ನೂ ಏನೋ ತಿಳಿದುಕೊಳ್ಳಬಯಸುತ್ತಿದ್ದೀರಿ. ಅನುಮಾನವೇಕೆ? ಏನು ಬೇಕಾದರೂ ಕೇಳಿ, ಆನಂದದಿಂದ ತಿಳಿಸುತ್ತೇವೆ," ಎಂದು ತಮ್ಮ ಉತ್ಸಾಹವನ್ನು ತಿಳಿಸಿದರು. ಈ

ಸದವಕಾಶವನ್ನು ಉಪಯೋಗಿಸಿಕೊಳ್ಳಲು ಸಿದ್ಧನಾಗಿ, ಯುಧಿಷ್ಠಿರ ಉತ್ಸಾಹದಿಂದ ಮುಂದೆ ಬಂದು, "ವಿಪ್ರರೇ! ಈ ಬಾಲಕನ ರಾಜ್ಯ ಪರಿಪಾಲನಾ ಕಾಲದಲ್ಲಿ ಯುದ್ಧಗಳೇನಾದರೂ ಸಂಭವಿಸುವುದೇ? ಹಾಗೇನಾದರು ಯುದ್ಧಗಳೇನಾದರು ಸಂಭವಿಸಿದರೆ ಇವನಿಗೆ ಜಯ ಲಭಿಸುವುದೇ?" ಎಂದು ಪ್ರಶ್ನಿಸಿದ.

ಬ್ರಾಹ್ಮಣರು, "ಮಹಾರಾಜಾ! ಈತನ ರಾಜ್ಯಪರಿಪಾಲನಾ ಕಾಲದಲ್ಲಿ ಇವನಿಗೆ ವಿರೋಧಿಗಳೆನ್ನುವವರೇ ಇರುವುದಿಲ್ಲ. ಇನ್ನು ಯುದ್ಧದ ಭಯವೆಲ್ಲಿ? ಇವನ ಜೀವನದಲ್ಲಿ ಅಪಜಯವೆನ್ನುವುದೇ ಇಲ್ಲ. ಇದು ಸತ್ಯ, ಸತ್ಯ," ಎಂದು ಎಲ್ಲರೂ ಏಕಕಂಠದಿಂದ ಘೋಷಿಸಿದರು. ಈ ಸಂಭಾಷಣೆಯನ್ನೆಲ್ಲಾ ಕೇಳುತ್ತಿದ್ದ ಭೀಮಾರ್ಜುನ, ನಕುಲ ಸಹದೇವರು ಒಬ್ಬರ ಮುಖವನ್ನೊಬ್ಬರು ನೋಡಿ ಆನಂದ ಹೊರಸೂಸುತ್ತಿದ್ದರು.

ಇಷ್ಟರಲ್ಲಿ ಧರ್ಮಜ, "ಹಾಗಾದರೆ..." ಎಂದು ಏನೋ ಕೇಳಹೊರಟು, ಸುಮ್ಮನಾದ. ಅವನು ಯಾವುದೋ ಗಾಢವಾದ ಯೋಚನೆಯಲ್ಲಿ ಮಗ್ನನಾಗಿ ಇದ್ದುದನ್ನು ಕಂಡ ಬ್ರಾಹ್ಮಣರು, "ಮಹಾರಾಜ! ನೀವು ಇನ್ನೂ ಏನೋ ಕೇಳ ಬೇಕಾದುದು ಇರುವಂತೆ ಕಾಣುತ್ತದೆ, ನಿಸ್ಸಂಕೋಚವಾಗಿ ಕೇಳಿ. ನಾವು ಮುಚ್ಚು ಮರೆಯಿಲ್ಲದೆ ಹೇಳಲು ಸಿದ್ಧರಿದ್ದೇವೆ," ಎಂದರು. ಆಗ ಧರ್ಮಜ, "ಆ...! ಏನೂ ಇಲ್ಲ. ಬಾಲಕನ ಗುಣಗಳು ಬಹು ಉದಾತ್ತವೆಂದೂ ಅವನಿಗೆ ವಿರೋಧಿಗಳೆನ್ನುವ ವರೇ ಇಲ್ಲವೆಂದೂ ಯಜ್ಞಯಾಗಾದಿ ಕರ್ಮಗಳನ್ನು ಮಾಡುವನೆಂದೂ ವಂಶೋ ದ್ಧಾರಕನಾಗುವನೆಂದೂ ಅವನ ಜೀವಿತದಲ್ಲಿ ಯುದ್ಧಗಳೇ ಇರುವುದಿಲ್ಲವೆಂದೂ ಅಪಜಯವೆನ್ನುವ ಮಾತೇ ಇಲ್ಲವೆಂದೂ ನೀವುಗಳು ತಿಳಿಸಿದಿರಿ. ತುಂಬಾ ಆನಂದವಾಯಿತು. ಅದರೆ ಅವನ ಅಂತಿಮಗತಿ ಹೇಗೆ ಆಗುವುದೆಂದು ಒಮ್ಮೆ ಕೇಳಬಯಸುತ್ತೇನೆ," ಎಂದು ತಡವರಿಸುತ್ತಾ ಕೇಳಿದ. ಇದನ್ನು ಕೇಳಿದ ಅವನ ಸಹೋದರರು, "ಈಗೇಕೆ ಅದರ ಚಿಂತೆ? ಅದನ್ನು ಆಗ ನೋಡಿಕೊಂಡರಾಯಿತು. ಒಂದಲ್ಲ ಒಂದು ದಿನ ಅಂತ್ಯ ಬಂದೇ ಬರುವುದು. ಆದನ್ನು ಯಾರೂ ತಡೆಯಲು ಅಸಾಧ್ಯ. ಇದಕ್ಕೆ ಏನೋ ಒಂದು ಕಾರಣ, ಒಂದು ನೆಪ ಸಂಭವಿಸಿಯೇ ಸಂಭವಿಸುವುದು. ಹುಟ್ಟಿದಮೇಲೆ ಒಂದು ದಿನ ಸಾಯಲೇ ಬೇಕು. ಅಣ್ಣನಿಗೆ ಈಗ ಆಗಿರುವ ಆನಂದ ಏಕೋ ಅಡ್ಡದಾರಿ ಹಿಡಿಯುತ್ತಿದೆ. ಇಷ್ಟೇ ಸಾಕು. ಮುಂದೆ ದೈವೇಚ್ಛೆ ಹೇಗಿದೆಯೊ ಹಾಗಾಗಲಿ," ಎಂದರು.

ಆದರೆ, ಧರ್ಮಜ ಅಷ್ಟಕ್ಕೆ ಸುಮ್ಮನಾಗದೆ, ಬಾಲಕನ ಅಂತಿಮಗತಿ ತಿಳಿದುಕೊಳ್ಳಲೇ ಬೇಕೆಂಬ ಕುತೂಹಲ ತೀವ್ರವಾದುದರಿಂದ, ಗುಣಶಾಲಿಯ ಅಂತ್ಯ ಕೂಡ ಬಹಳ

ಅದ್ಭುತವಾಗಿಯೇ ಇರಬೇಕೆನಿಸಿದ್ದರಿಂದ, ಬಿಡದೆ ಮತ್ತೆ ಅದನ್ನೇ ಕೇಳಿದ. ಬ್ರಾಹ್ಮಣರು ಮತ್ತೆ ಕೆಲವು ಕುಂಡಲಿಗಳನ್ನು ಹಾಕಿ, ಯಾವುದೋ ಆಲೋಚನೆಯಲ್ಲಿ ಮುಳುಗಿಹೋದರು. ಇದನ್ನು ನೋಡಿ ಧರ್ಮಜ ಆತಂಕಗೊಂಡು ವಿಚಾರಿಸಲು ಆರಂಭಿಸಿದ. ಆಗ ಆ ದೈವಜ್ಞರು, "ಮಹಾರಾಜಾ! ಇವನು ಒಬ್ಬ ಮುನಿಯ ಶಾಪದಿಂದ ರಾಜ್ಯವನ್ನು ತ್ಯಜಿಸುತ್ತಾನೆ," ಎಂದರು. ಆ ಮಾತನ್ನು ಕೇಳಿದ ಧರ್ಮಜ ಭಯಪಟ್ಟು, "ಏನು? ಮುನಿ ಶಾಪವೇ? ವಿರೋಧಿಗಳೇ ಅವನಿಗೆ ಇಲ್ಲವೆಂದಿರಿ, ಎಲ್ಲರ ಮನ್ನಣೆಯನ್ನು ಸಂಪಾದಿಸುವನೆಂದಿರಿ. ದೈವ, ದಾನವ, ಮಾನವಾದಿಗಳೆಲ್ಲಾ ಅವನ ಬಗೆಗೆ ಒಳ್ಳೆಯ ಭಾವನೆ ಹೊಂದಿರುವನೆಂದಿರಿ. ದೈವ, ಬ್ರಾಹ್ಮಣ ಭಕ್ತರನ್ನು ಸೇವಿಸುವನೆಂದಿರಿ. ಅಂಥ ಸದಾಚಾರ ಸಂಪನ್ನನು ಮುನಿಯ ಶಾಪಕ್ಕೆ ಗುರಿಯಾಗುವುದಾದರೂ ಹೇಗೆ? ಅವನು ಅಂಥ ಅಪರಾಧವನ್ನಾದರೂ ಏನು ಮಾಡಿಯಾನು? ಆಶ್ಚರ್ಯವಾಗಿದೆಯಲ್ಲಾ!" ಎಂದು ಚಿಂತಿಸಲಾರಂಭಿಸಿದ. ಆ ಬ್ರಾಹ್ಮಣರು ಮತ್ತೆ ಲೆಕ್ಕ ಹಾಕಿ, ಅವನಿಗೆ ಹಾವು ಕಡಿಯುವುದೆಂದರು. ಆ ಮಾತು ಕೇಳುತ್ತಲೇ ಧರ್ಮಜ ಕುಸಿದುಹೋದ. ಅಲ್ಲಿಯವರೆಗೆ ಅನುಭವಿಸಿದ್ದ ಆನಂದ ಕ್ಷಣದಲ್ಲಿ ಕರಗಿ, ದುಃಖದಲ್ಲಿ ಮುಳುಗಿಹೋದ.

## ೩. ಶಿಶು ಪರೀಕ್ಷಿತ್ ಮತ್ತು ಭವಿಷ್ಯವಾಣಿ

"ಅಯ್ಯೋ! ಕಟ್ಟಕಡೆಗೆ ಇಂಥ ದುಃಸ್ಥಿತಿ ಸಂಭವಿಸುವುದೇ? ಎಲ್ಲ ಶುಭಗಳ ಫಲ ಇದೆಯೇನು? ಎಲ್ಲ ಸದಾಚಾರ ಕೊನೆಗೆ ಹೀಗೆ ರೂಪುಗೊಳ್ಳುವುದೇನು? ನೀರಿನಲ್ಲಿ ಮುಳುಗಿ ಸಾಯುವವನಿಗೆ, ಹಾವು ಕಡಿದು ಸಾಯುವವನಿಗೆ ಸದ್ಗತಿ ಇಲ್ಲವೆಂದೂ ಅದು ಅಪಮೃತ್ಯುವೆಂದು ಶಾಸ್ತ್ರ ಹೇಳುವುದಲ್ಲವೇ? ಅಂಥವರು ಭೂತ, ಪ್ರೇತಗಳಾಗಿ ಹುಟ್ಟುವರೆಂದು ತಿಳಿಸುತ್ತದೆಯಲ್ಲವೇ? ಅಂದಮೇಲೆ ಕಡೆಯಲ್ಲಿ ಇಂಥ ದುರ್ಗತಿ ಬರಲು ಕಾರಣವೇನು? ಇದು ತೀರ ಅನ್ಯಾಯ," ಎಂದು ಧರ್ಮಜ ತಲೆಯಮೇಲೆ ಕೈಯಿಟ್ಟು ಚಿಂತಾಕ್ರಾಂತನಾದುದನ್ನು ಕಂಡು ಬ್ರಾಹ್ಮಣರು, "ಮಹಾರಾಜ! ಇಷ್ಟೊಂದು ದುಃಖಪಡಬೇಕಾಗಿಲ್ಲ. ಇಂಥ ಮಹಾಪುರುಷನಿಗೆ ಅಂಥ ದುರ್ಗತಿ ಎಷ್ಟುಮಾತ್ರಕ್ಕೂ ಬರುವುದಿಲ್ಲ. ಅವನಿಗೆ ದುರ್ಗತಿಯೇ ಇಲ್ಲ. ಈತನ ಜನ್ಮ ಕುಂಡಲಿಯಲ್ಲಿ ವಜ್ರಯೋಗ, ಭಕ್ತಿಯೋಗ

ಎರಡೂ ಬಹಳ ಚೆನ್ನಾಗಿದೆ. ಆದ್ದರಿಂದ, ಶಾಪ ವೃತ್ತಾಂತವನ್ನು ಕೇಳಿದೊಡನೆಯೇ ರಾಜ್ಯವನ್ನೂ ಹೆಂಡತಿ ಮಕ್ಕಳನ್ನೂ ಬಿಟ್ಟು ಭಾಗೀರಥೀ ತೀರದಲ್ಲಿ ಕುಳಿತು ಹರಿಯನ್ನು ಶರಣು ಹೋಗುವನು. ಆ ಸಮಯದಲ್ಲಿ ವ್ಯಾಸನಂದನನನಾದ ಶುಕಮಹರ್ಷಿ ಅಲ್ಲಿ ದಯಮಾಡಿಸಿ ಆತ್ಮಜ್ಞಾನ ಬೋಧಿಸುವನು. ಕೃಷ್ಣ ಕಥಾಶ್ರವಣ ಮಾಡುತ್ತಾ, ಕೃಷ್ಣನಾಮ ಸಂಕೀರ್ತನೆ ಮಾಡುತ್ತಾ ಪವಿತ್ರ ಗಂಗಾತೀರದಲ್ಲಿ ತನ್ನ ಪ್ರಾಣ ಬಿಡುವನು. ಅಂಥವನಿಗೆ ದುರ್ಗತಿ ಹೇಗೆ ಬರುವುದು? ಇವನಿಗೆ ಪುನರ್ಜನ್ಮ ಬರಲು ಸಾಧ್ಯವೇ ಇಲ್ಲ. ಭಕ್ತಿಯೋಗದ ಮೂಲಕವಾಗಿ ಪುರುಷೋತ್ತಮನಲ್ಲಿ ಸೇರಿಹೋಗುವನು," ಎಂದು ಹೇಳುತ್ತಲೇ ಧರ್ಮಜ ಚಿಂತೆ ಬಿಟ್ಟು ಸಂತಸದಿಂದ, "ಧನ್ಯ ಧನ್ಯ," ಎನ್ನುತ್ತಾ, "ಹಾಗಾದರೆ ಇದು ಶಾಪವಲ್ಲ, ವರದಾನ," ಎಂದು ಉದ್ಗರಿಸಿದ. ಆನಂದದಿಂದ ಎಲ್ಲರೂ ಎದ್ದು, ಬಂದಿದ್ದ ಬ್ರಾಹ್ಮಣರಿಗೆ ತಕ್ಕ ಮರ್ಯಾದೆಗಳನ್ನು ಮಾಡಿ, ವಜ್ರ ವೈಢೂರ್ಯ, ಕನಕ ಪೀತಾಂಬರಗಳನ್ನಿತ್ತು ಸತ್ಕರಿಸಿ ಅವರನ್ನು ಕಳಿಸಿಕೊಟ್ಟರು. ಬ್ರಾಹ್ಮಣರು ಸಂತೋಷದಿಂದ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಯುಧಿಷ್ಠಿರ ಮತ್ತು ಅವನ ತಮ್ಮಂದಿರು ಅವರವರ ವಸತಿಗಳಿಗೆ ಹೋಗಿ, ಬ್ರಾಹ್ಮಣರಿಂದ ಕೇಳಿದ ವಿಷಯಗಳನ್ನು ಮತ್ತೆ ಮತ್ತೆ ಆನಂದದಿಂದ ನೆನಪು ಮಾಡಿಕೊಳ್ಳುತ್ತಾ ಕಾಲಕಳೆದರು.

ಇತ್ತ, ಮಗು ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ಪ್ರವರ್ಧಮಾನವಾಗಿ ಬೆಳೆಯುತ್ತಾ, ಒಳಗೂ ಹೊರಗೂ ಎಲ್ಲರಿಗೂ ಅಕ್ಕರೆಯ ಮಗುವಾಗಿ ಕಂಗೊಳಿಸುತ್ತಿತ್ತು. ಅನೇಕ ಕಂಟಕಗಳ ನಂತರ, ರಾಜ್ಯದ ಉತ್ತರಾಧಿಕಾರಿಯೇ ಇಲ್ಲವಲ್ಲಾ ಎಂದು ಎಷ್ಟೋ ಕಾಲ ಪರಿತಪಿಸಿದ ನಂತರ ಹುಟ್ಟಿದ ಶಿಶುವಾದ್ದರಿಂದ ಎಲ್ಲರೂ ಮಗುವನ್ನು ಪ್ರಾಣಸಮಾನವಾಗಿ, ಕಣ್ಣುರೆಪ್ಪೆಯಂತೆ ಕಾಪಾಡುತ್ತಿದ್ದರು.

ಉಪಪಾಂಡವರನ್ನು ಕಳೆದುಕೊಂಡ ದುಃಖಭಾರದಿಂದ ಸೊರಗಿ ಹೋಗಿದ್ದ ದ್ರೌಪದಿಯೂ ಮಹಾವೀರ ಪುತ್ರರತ್ನ ಅಭಿಮನ್ಯುವನ್ನು ಕಳೆದುಕೊಂಡು ನಿರಂತರ ದುಃಖದಿಂದ ಕೃಶವಾಗಿದ್ದ ಸುಭದ್ರೆಯೂ ಅಶ್ವತ್ಥಾಮ ಬಿಟ್ಟ ಅಸ್ತ್ರದ ಪ್ರಭಾವದಿಂದ ಉತ್ತರೆಯ ಗರ್ಭದಲ್ಲಿರುವ ಮಗು ಏನಾಗುವುದೋ, ಇಡೀ ಪಾಂಡವ ವಂಶವೇ ಇಲ್ಲಿಗೆ ಅಂತ್ಯವಾಗುವುದೇನೋ ಎನ್ನುವ ಚಿಂತೆಯಲ್ಲಿ ಮುಳುಗಿದ್ದ ಯುಧಿಷ್ಠಿರ ಭೀಮಾರ್ಜುನಾದಿಗಳೂ ಈ ಮಗುವನ್ನು ನೋಡಿ ಎಲ್ಲ ದುಃಖವನ್ನೂ ಮರೆತು, ಸಂತೋಷ ಸಾಗರದಲ್ಲಿ ಮುಳುಗಿ, ಮಗುವಿನೊಡನೆ ಮುದ್ದಿನಿಂದ ಆಟವಾಡುತ್ತಾ ಬಹು ಸಂತೋಷದಿಂದ ಕಾಲಕಳೆಯುತ್ತಿದ್ದರು.

ಆಗಾಗ ಅಂತಃಪುರದಿಂದ ಮಗುವನ್ನು ಬರಮಾಡಿಕೊಂಡು ಮನದಣಿಯು ವಂತೆ ನೋಡಿ ತಮ್ಮ ಬಯಕೆ ತೀರಿಸಿಕೊಳ್ಳುತ್ತಿದ್ದರು. ಆನಂದದಿಂದ ತಮ್ಮನ್ನು ತಾವೇ ಮರೆಯುತ್ತಿದ್ದರು. ಬಾಲಕನೂ ಸಹ ಬಹು ಚುರುಕಾಗಿ ನೋಡುವರನ್ನೆಲ್ಲಾ ಏನೋ ಪರೀಕ್ಷಿಸುವವನಂತೆ ರೆಪ್ಪೆ ಹೊಡೆಯದೆ ನೋಡುವನು! ಆ ಬಾಲಕನ ನೋಟವೇ ಎಲ್ಲರಿಗೂ ಆಶ್ಚರ್ಯಉಂಟುಮಾಡುತ್ತಿತ್ತು. ಹೊಸಬರು ಯಾರೇ ಬಂದರು ಅವರನ್ನು ನೆಟ್ಟದೃಷ್ಟಿಯಿಂದ, ಅವರಲ್ಲಿ ಏನನ್ನೋ ಹುಡುಕುವನಂತೆ ನೋಡುವನು, ಎಲ್ಲರನ್ನೂ ಪರೀಕ್ಷಿಸುವನು.

ಕೆಲವರು, ತನ್ನ ತಂದೆ ಅಭಿಮನ್ಯುವನ್ನು ಹುಡುಕುತ್ತಿರುವನೆನ್ನುವರು. ಕೆಲವರು, ಯಾವುದೋ ದಿವ್ಯ ಕಾಂತಿಯನ್ನು ಹುಡುಕುತ್ತಿರುವನೆನ್ನುವರು. ಹೀಗೆ ಆ ಬಾಲಕನ ನೋಟ ಬಂದವರನ್ನೆಲ್ಲಾ ಪರೀಕ್ಷಿಸುತ್ತಿರುವಂತೆ ಕಾಣುತ್ತಿತ್ತು. ಈ ಸುದ್ದಿ ನಗರ ದಲ್ಲೆಲ್ಲಾ ಹರಡಿ, ಅವನ ಬಳಿಗೆ ಹೋದ ಪ್ರತಿಯೊಬ್ಬರನ್ನೂ ಪರೀಕ್ಷಿಸುವನೆನ್ನುವ ಮಾತು ಎಲ್ಲರ ಬಾಯಿಂದಲೂ ಕೇಳಬರುತ್ತಿತ್ತು. ಮಗುವಿಗೆ ಹೆಸರಿಡುವ ಮೊದಲೇ ಮನೆಯವರೂ ಹೊರಗಿನವರೂ, "ಪರೀಕ್ಷಿತ್, ಪರೀಕ್ಷಿತ್," ಎಂದು ಕರೆಯಲು ಆರಂಭಿಸಿದರು. ಕೊನೆಗೂ ಆ ಹೆಸರೇ ಸ್ಥಿರವಾಯಿತು.

ಪಂಡಿತನಿಂದ ಪಾಮರನವರೆಗೂ ರಾಜನಿಂದ ರೈತನವರೆಗೂ ಪರಿಚಾರಕನಿಂದ ಪ್ರಭುವಿನವರೆಗೂ ಎಲ್ಲರೂ, "ಪರೀಕ್ಷಿತ್, ಪರೀಕ್ಷಿತ್," ಎಂದೇ ಕರೆಯುತ್ತಿದ್ದರು. ಈ ರೀತಿ ಬಾಲಕನ ಪ್ರತಾಪ ದಿನದಿನಕ್ಕೂ ಬೆಳೆಯುತ್ತಿದ್ದಾಗ, ಯಧಿಷ್ಟಿರ ಒಂದು ಶುಭದಿನವನ್ನು ಗೊತ್ತುಪಡಿಸಿ, ಪುರೋಹಿತರನ್ನು ಕರೆಸಿ, ಬಾಲಕನ ನಾಮಕರಣಕ್ಕೆ ಸರಿಯಾದ ಶುಭದಿನವನ್ನು ಗೊತ್ತುಪಡಿಸಬೇಕೆಂದು ಆಜ್ಞಾಪಿಸಿದ. ಎಲ್ಲ ಜ್ಯೋತಿ ಷ್ಯರೂ ಸೇರಿ ಒಂದು ಶುಭದಿನವನ್ನು ನಿರ್ಣಯಿಸಿ ಮುಹೂರ್ತವನ್ನು ಗೊತ್ತುಪಡಿ ಸಿದರು. ಯುಧಿಷ್ಟಿರನು ಆಮಂತ್ರಣ ಶುಭಪತ್ರಗಳನ್ನು ಬರೆಸಿ ಎಲ್ಲ ರಾಜರುಗಳಿಗೂ ಕಳಿಸಿದ. ಖುದ್ದಾಗಿ ಪರಿವಾರದವರನ್ನು ಕಳಿಸಿ, ಋಷಿಗಳನ್ನೂ ಮಹಾಪುರುಷ ರನ್ನೂ ಆಹ್ವಾನಿಸಿದ. ಅರ್ಜುನ ತಾನೇ ಹೋಗಿ ಶ್ರೀಕೃಷ್ಣ ಪರಮಾತ್ಮನಿಗೆ ಈ ಶುಭಕಾರ್ಯದ ಸುದ್ದಿ ತಿಳಿಸಿದ. ಮಗುವಿಗೆ ನಿನ್ನ ಆಶೀರ್ವಾದವೇ ಬಹು ಮುಖ್ಯ ಎಂದು ಹೇಳಿ ಅವನನ್ನು ಜೊತೆಯಲ್ಲೇ ಕರೆದುಕೊಂಡು ಬಂದ.

ಕೃಷ್ಣ ಪರಮಾತ್ಮ ಬರುವ ಹೊತ್ತಿಗೆ, ಬ್ರಾಹ್ಮಣರು, ರಾಜರು, ಸಾಮಂತರಾಜರು, ಪುರಪ್ರಜೆಗಳು ಸರ್ವಾಲಂಕಾರ ಭೂಷಿತರಾಗಿ ಪಾಂಡವರ ಅರಮನೆಯ ದ್ವಾರ ದಲ್ಲಿ ಸ್ವಾಗತವೀಯಲು ಸಿದ್ಧರಾಗಿದ್ದರು. ಅರ್ಜುನನ ರಥ ಮುಂದೆ, ಕೃಷ್ಣನ ರಥ ಹಿಂದೆ ಬರುತ್ತಿರುವುದನ್ನು ನೋಡಿ ಮಂಗಳವಾದ್ಯ ಮೊಳಗಿತು. ಜಯಜಯ ಧ್ವನಿ

ಮುಗಿಲು ಮುಟ್ಟಿತು. ಯುಧಿಷ್ಠಿರನು ರಥದ ಬಳಿಗೆ ಧಾವಿಸಿ ಕೃಷ್ಣನನ್ನು ಆಲಿಂಗನ ಮಾಡಿಕೊಂಡು, ಕೈಹಿಡಿದು, ಒಳಗೆ ಕರೆತಂದು, ಬೆಳ್ಳಿಯ ಉನ್ನತಾಸನವನ್ನು ಅಲಂಕರಿಸಬೇಕೆಂದು ಪ್ರಾರ್ಥಿಸಿದ. ಬಂದ ರಾಜರುಗಳೂ ಸಾಮಂತರಾಜರೂ ಋಷಿಗಳೂ ಬ್ರಾಹ್ಮಣರೂ ಹಿರಿಯರೂ ಅವರವರ ಸ್ಥಾನಗಳನ್ನು ಅಲಂಕರಿಸಿದರು.

ಸಹದೇವನು ಅಂತಃಪುರಕ್ಕೆ ಹೋಗಿ, ಸರ್ವಾಲಂಕಾರ ಭೂಷಿತನಾಗಿ ಸೂರ್ಯನಂತೆ ಪ್ರಕಾಶಿಸುತ್ತಿದ್ದ ಬಾಲಕನನ್ನು ಹರಿವಾಣದಲ್ಲಿಟ್ಟುಕೊಂಡು, ಪಂಡಿತರು ಸ್ವಸ್ತಿವಾಚನ ಆಶೀರ್ವಚನಗಳನ್ನು ಹೇಳುತ್ತಿರಲು ಸಭಾ ಮಧ್ಯಕ್ಕೆ ಕರೆತಂದನು.

ದಾಸ ದಾಸಿಯರು ಪೂಜಾ ಸಾಮಗ್ರಿಗಳು, ಸುಗಂಧ ದ್ರವ್ಯಗಳು ತುಂಬಿದ ಬಂಗಾರದ ತಟ್ಟೆಗಳನ್ನು ಹಿಡಿದು ಬಾಲಕನ ಹಿಂದೆ ಸಾಲುಸಾಲಾಗಿ ಬರುತ್ತಿದ್ದರು. ಸ್ತ್ರೀಯರಿಗೆ ಪ್ರತ್ಯೇಕವಾಗಿ ಏರ್ಪಡಿಸಿದ್ದ ಘೋಷಾ ಸ್ಥಳದಲ್ಲಿ ದ್ರೌಪದಿ, ಸುಭದ್ರೆ, ರುಕ್ಮಿಣಿ, ಉತ್ತರೆ ಮತ್ತಿತರ ರಾಣಿಯರು ಕುಳಿತು ಆನಂದದಿಂದ ಬಾಲಕನ ವೈಭವವನ್ನು ನೋಡುತ್ತಿದ್ದರು. ಸಹದೇವನು ಬಾಲಕನನ್ನು ತಂದು ಕಲ್ಯಾಣ ಮಂಟಪದಲ್ಲಿ ಹೂವಿನ ಹಾಸಿಗೆಯ ಮೇಲೆ ಮಲಗಿಸಿದೊಡನೆಯೇ, ಮಗು ಎದ್ದು ಅಂಬೆಗಾಲಿಕ್ಕುತ್ತಾ ದಾಸಿಯರು ಎಷ್ಟು ತಡೆದರೂ ಬೇಡವೆಂದರೂ ನಿಲ್ಲದೆ, ಎಲ್ಲಿಗೋ ಹೊರಟಿತು. ಸಹದೇವನು ಸಹ ಎಷ್ಟು ಪ್ರಯತ್ನಿಸಿದರೂ ಮಗುವನ್ನು ತಡೆಯಲಾಗಲಿಲ್ಲ.

ಇದನ್ನು ನೋಡುತ್ತಿದ್ದ ಯುಧಿಷ್ಠಿರ ಅಮಿತಾನಂದದಿಂದ, "ಸಹದೇವಾ! ಅಡ್ಡಿ ಮಾಡಬೇಡ, ಬಿಡು. ಮಗು ಏನು ಮಾಡುವುದೋ ನೋಡೋಣ," ಎಂದು ನಗುತ್ತಾ ಹೇಳಿದ. ಸಹದೇವ ಕೈಬಿಟ್ಟು, ಮಗುವಿಗೆ ಏನೂ ತೊಂದರೆಯಾಗದಂತೆ ಜಾಗ್ರತೆಯಿಂದ ನೋಡಿಕೊಳ್ಳುತ್ತಾ ಅದು ಹೋದಹೋದಂತೆ ಅದರ ಹಿಂದೆ ತಾನೂ ಹೋಗುತ್ತಿದ್ದ.

ಅಂಬೆಗಾಲಿಕ್ಕುತ್ತಾ ಹೊರಟ ಮಗು ಹಿಂದು ಮುಂದು ನೋಡದೆ ಎಷ್ಟೋ ದಿನಗಳ ಪರಿಚಯವಿದ್ದಂತೆ, ನೇರವಾಗಿ ಕೃಷ್ಣ ಕುಳಿತ ಸಿಂಹಾಸನದ ಬಳಿ ಹೋಗಿ, ಕೃಷ್ಣನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, ಎತ್ತಿಕೊಳ್ಳುವಂತೆ ಸನ್ನೆ ಮಾಡಿತು. ಕೃಷ್ಣ ಪರಮಾತ್ಮ ಗೊಳ್ಳನೆ ನಕ್ಕು ಪರಮಾನಂದದಿಂದ ಮಗುವನ್ನು ಎತ್ತಿಕೊಂಡು ತೊಡೆಯ ಮೇಲೆ ಕುಳ್ಳಿರಿಸಿಕೊಂಡ.

ಕೃಷ್ಣನ ತೊಡೆಯ ಮೇಲೆ ಕುಳಿತ ಮಗು ಸಾಮಾನ್ಯ ಮಕ್ಕಳಂತೆ ಅತ್ತಿತ್ತ ತಿರುಗದೆ, ಕಣ್ಣರೆಪ್ಪೆ ಆಡಿಸದೆ, ನೆಟ್ಟ ದೃಷ್ಟಿಯಿಂದ, ನೋಡುತ್ತಿತ್ತು. ಇದನ್ನು ನೋಡಿ ಅಲ್ಲಿದ್ದವ

ರೆಲ್ಲರಿಗೂ ಆಶ್ಚರ್ಯ, ಕೃಷ್ಣಪರಮಾತ್ಮನಿಗೂ ಆಶ್ಚರ್ಯ. ಆಗ ಕೃಷ್ಣ ಯುಧಿಷ್ಠಿರನನ್ನು ಕುರಿತು, "ಭಾವಾ! ಈ ಬಾಲಕ ಬಂದವರನ್ನೆಲ್ಲಾ ಪರೀಕ್ಷಿಸುವನು ಎನ್ನುವ ಸುದ್ದಿಯನ್ನು ನಾನು ನಂಬಲಿಲ್ಲ. ಮಗುವಿನ ಚೇಷ್ಟೆಗೆ ಬ್ರಾಹ್ಮಣರು ಎಲ್ಲೋ ಹೀಗೆ ಕಥೆ ಕಟ್ಟಿ ಹೇಳಿದ್ದಾರೆಂದೇ ಭಾವಿಸಿದ್ದೆ. ಆದರೆ ಈಗ ನಾನೇ ನೋಡಿದೆ. ಪರಮಾಶ್ಚರ್ಯ! ನನ್ನನ್ನು ಕೂಡ ಪರೀಕ್ಷಕ ದೃಷ್ಟಿಯಿಂದಲೇ ನೋಡುತ್ತಿದೆ. ಇರಲಿ, ನಾನೂ ಸ್ವಲ್ಪ ಪರೀಕ್ಷೆ ಮಾಡಿ ನೋಡುತ್ತೇನೆ," ಎಂದು, ಆ ಮಗುವಿನ ಗಮನ ಸೆಳೆಯುವುದಕ್ಕೆ ತರತರದ ಬೊಂಬೆಗಳನ್ನು ತರಿಸಿ ಮಗುವಿನ ಮುಂದಿಟ್ಟ. ತಾನು ಅದಕ್ಕೆ ಕಾಣದಂತೆ ಮರೆಯಾಗಿ ನಿಲ್ಲಲು ಯತ್ನಿಸಿದ. ಆದರೂ ಆ ಬಾಲಕನ ದೃಷ್ಟಿ ಮಾತ್ರ ಆಟದ ಸಾಮಾನಿನ ಕಡೆಗೆ ತಿರುಗದೆ, ತಾನು ಹೋದ ಕಡೆಗೇ ಅದರ ದೃಷ್ಟಿಯೂ ಹೋಗುತ್ತಾ ಮಗುವಿನ ದೃಷ್ಟಿಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ಹೀಗೆ ಅನೇಕ ರೀತಿಯಲ್ಲಿ ಕೃಷ್ಣಪರಮಾತ್ಮ ಮಗುವನ್ನು ಪರೀಕ್ಷಿಸಿ ಕೊನೆಗೆ ತನ್ನ ಪ್ರಯತ್ನದಲ್ಲಿ ವಿಫಲನಾಗಿ, "ಈ ಬಾಲಕ ಸಾಮಾನ್ಯನಲ್ಲ. ನನ್ನ ಪರೀಕ್ಷೆಗೂ ಮೀರಿದವನು. ಆದ್ದರಿಂದ ಪರೀಕ್ಷಿತನೆನ್ನುವ ಹೆಸರು ಈ ಬಾಲಕನಿಗೆ ಸಾರ್ಥಕವಾಗುವುದು," ಎಂದು ನುಡಿದೊಡನೆ ಪಂಡಿತರು ಆಶೀರ್ವಾದ ಮಾಡಿದರು. ಬ್ರಾಹ್ಮಣರು ಮಂತ್ರಘೋಷ ಮಾಡಿದರು. ಮಂಗಳವಾದ್ಯಗಳು ಮೊಳಗಿದವು. ದಾಸಿಯರು ಗೌರೀಕಲ್ಯಾಣ ಹಾಡಿದರು. ಆಚಾರ್ಯರು ಬಂಗಾರದ ಬಟ್ಟಲಿನಲ್ಲಿದ್ದ ಜೇನುತುಪ್ಪದಲ್ಲಿ ನವರತ್ನಖಚಿತ ಆಭರಣವೊಂದನ್ನು ಅದ್ದಿ ಮಗುವಿನ ನಾಲಗೆಯ ಮೇಲೆ ಹೆಸರನ್ನು ಬರೆದರು. ಸುವರ್ಣದ ತಟ್ಟೆಯಲ್ಲಿದ್ದ ಅಕ್ಕಿಯಲ್ಲಿ ಸುವರ್ಣ ಪುಷ್ಪದಿಂದ 'ಪರೀಕ್ಷಿತ್' ಎನ್ನುವ ಹೆಸರನ್ನು ದೇವನಾಗರಿಲಿಪಿಯಲ್ಲಿ ಬರೆದರು. ಎಲ್ಲರೂ ಮಗುವಿನ ತಲೆಯಮೇಲೆ ಆಶೀರ್ವಾದ ಪೂರ್ವಕವಾದ ಅಕ್ಷತೆಯ ಕಾಳನ್ನು ಎರಚಿದರು.

ಹೀಗೆ ಪರೀಕ್ಷಿತನ ನಾಮಕರಣ ಅತ್ಯಂತ ವೈಭವಯುತವಾಗಿ ನಡೆಯಿತು. ಬಂದ ಸ್ತ್ರೀ ಪುರುಷರೆಲ್ಲರಿಗೂ ಯೋಗ್ಯರೀತಿಯಲ್ಲಿ ಸನ್ಮಾನಮಾಡಿ ಕಳಿಸಿಕೊಟ್ಟರು. ನಾಮಕರಣಕ್ಕಾಗಿ ಏರ್ಪಡಿಸಿದ್ದ ಕಲ್ಯಾಣ ಮಂಟಪದಲ್ಲಿ ಬಾಲಕ ತೋರಿಸಿದ ವಿಚಿತ್ರ ನಡೆವಳಿಕೆಯನ್ನು ಅರಮನೆಯಲ್ಲೂ ಹೊರಗೂ ಒಬ್ಬರಿಗೊಬ್ಬರು ಹೇಳುತ್ತಿದ್ದರು. ಕೆಲವರಂತೂ ತುಂಬಾ ಆಶ್ಚರ್ಯದಿಂದ ಬಾಲಕನ ಪರೀಕ್ಷಕ ದೃಷ್ಟಿಯನ್ನು ಶ್ಲಾಘಿಸುತ್ತಿದ್ದರು.

ಇವೆಲ್ಲವನ್ನೂ ನೋಡಿದ ಯುಧಿಷ್ಠಿರ ಪರಮಾಶ್ಚರ್ಯದಿಂದ ಭಗವಾನ್ ವ್ಯಾಸರ ನಿವಾಸಕ್ಕೆ ಹೋಗಿ ಬಾಲಕನ ವಿಚಿತ್ರ ಚೇಷ್ಟೆಗೆ ಕಾರಣವೇನೆಂದು ಕೇಳಿದ. ಇದರಿಂದ

ಉಂಟಾಗಬಹುದಾದ ಶುಭಾಶುಭಗಳೇನೆಂದು ತಾನು ತಿಳಿಯಬಯಸುವುದಾಗಿ ವ್ಯಾಸರನ್ನು ಪ್ರಾರ್ಥಿಸಿದ. ಆಗ ವ್ಯಾಸರು, "ಧರ್ಮಜಾ! ಬಾಲಕ ಉತ್ತರೆಯ ಗರ್ಭದಲ್ಲಿದ್ದಾಗ ಅಶ್ವತ್ಥಾಮ ಬಿಟ್ಟ ಅಸ್ತ್ರ ಬಾಲಕನನ್ನು ಸಮೀಪಿಸುತ್ತಿರುವಾಗ, ಕೃಷ್ಣಪರಮಾತ್ಮ ಪಿಂಡವಿದ್ದ ಆ ಗರ್ಭವನ್ನು ಪ್ರವೇಶಿಸಿ ಬಾಲಕನನ್ನು ರಕ್ಷಿಸಿದ. ಅಂದು ಗರ್ಭದಲ್ಲಿ ತನ್ನೊಡನಿದ್ದು ತನ್ನನ್ನು ಹತಮಾಡಲು ಬಂದ ಅಸ್ತ್ರವನ್ನು ಧ್ವಂಸಮಾಡಿದ ಆ ಪುರುಷ ಯಾರು? ಆ ದಿವ್ಯ ಕಾಂತಿಯ ರೂಪ ಉಳ್ಳವನು ಲೋಕದಲ್ಲಿ ಎಲ್ಲಿದ್ದಾನೆ ಎಂದು ಅಂದಿನಿಂದಲೂ ನೋಡುತ್ತಿದ್ದನು. ಅಂಥ ದಿವ್ಯಸ್ವರೂಪವನ್ನು ಪ್ರತ್ಯಕ್ಷವಾಗಿ ಕಂಡೊಡನೆ ಗುರುತಿಸಿ, ಅವನ ಬಳಿ ಹೋದ. ಇದೇ ಬಾಲಕನ ಚೇಷ್ಟೆಯ ಮರ್ಮ," ಎಂದು ಹೇಳಿದೊಡನೆ, ಯುಧಿಷ್ಠಿರ ಆನಂದಬಾಷ್ಪಗಳನ್ನು ಸುರಿಸುತ್ತಾ ಮಹದಾನಂದದಿಂದ, ಪರಮಾತ್ಮ ಕರುಣಾನಿಧಿ ಎಂದು ಕೈಮುಗಿದ.

# ೪ ಪ್ರಾಯಶ್ಚಿತ್ತಾರ್ಥ ಯಜ್ಞ

ಪರೀಕ್ಷಿತ್ ಮಹಾರಾಜನ ನಾಮಕರಣವು, ಪುರಜನರಿಗೂ ಅಂತಃಪುರದವರಿಗೂ ಅಮಿತಾನಂದವಿತ್ತಿತ್ತು. ಯುಧಿಷ್ಠಿರನಿಗೆ ಇಷ್ಟರಿಂದಲೇ ಸಮಾಧಾನವಾಗಲಿಲ್ಲ. ಆ ದಿನ ಸಂಜೆ ಆನಂದ ಸಮಾರಂಭದ ಅಂಗವಾಗಿ ಒಂದು ಸಭೆಯನ್ನೇರ್ಪಡಿಸಿ, ರಾಜರು, ಹಿರಿಯರು, ಪಂಡಿತರು, ಶಾಸ್ತ್ರಜ್ಞರುಗಳನ್ನು ಆ ಸಭೆಗೆ ಆಹ್ವಾನಿಸಿದ. ಕೃಷ್ಣಪರಮಾತ್ಮನನ್ನು ಆಧ್ಯಕ್ಷಸ್ಥಾನ ಅಲಂಕರಿಸುವಂತೆ ಪ್ರಾರ್ಥಿಸಿದ. ವ್ಯಾಸ, ಕೃಪಾಚಾರ್ಯರುಗಳೇ ಮೊದಲಾದ ಮುನಿಗಳೂ ಆ ಸಭೆಗೆ ಆಹ್ವಾನಿತರಾಗಿ ಬಂದಿದ್ದರು.

ಆಗ, ಧರ್ಮರಾಜ ಸಭಾಮಧ್ಯದಲ್ಲಿ ನಿಂತು, ವಾಸುದೇವನಿಗೂ ವ್ಯಾಸರಿಗೂ ನಮಸ್ಕರಿಸಿ, ರಾಜರನ್ನೂ ಪ್ರಜೆಗಳನ್ನೂ ಪಂಡಿತ ಸಮೂಹವನ್ನೂ ಉದ್ದೇಶಿಸಿ, "ನಿಮ್ಮೆಲ್ಲರ ಆಶೀರ್ವಾದದಿಂದಲೂ ದೈವಜ್ಞರ ಕೃಪೆಯಿಂದಲೂ ವಾಸುದೇವನ ಅನುಗ್ರಹದಿಂದಲೂ ಶತ್ರುಗಳನ್ನು ನಾಶಮಾಡಿದೆವು; ಹೋದ ರಾಜ್ಯವನ್ನು ಮರಳಿ ಪಡೆದೆವು. ನಮ್ಮ ವಂಶ ಇಲ್ಲಿಗೇ ಅಂತ್ಯವಾಯಿತೇನೋ ಎನ್ನುವ ನಿರಾಶೆ,

ನಿರುತ್ಸಾಹಗಳಿಂದ ಪರಿತಪಿಸುತ್ತಿದ್ದ ನಮ್ಮ ಹೃದಯದಲ್ಲಿ ಆಶಾಜ್ಯೋತಿ ಬೆಳಗಿತು. ಪಾಂಡು ವಂಶೋದ್ಧಾರವಾಯಿತು.

ಒಂದು ಕಡೆ ಇವೆಲ್ಲವೂ ನನ್ನನ್ನು ಆನಂದಪಡಿಸುತ್ತಿದ್ದರೂ ಮತ್ತೊಂದು ಕಡೆ ಕುಲ ಸಂಹಾರ ಮಾಡಿದ ದ್ರೋಹ, ಬಂಧು ಮಿತ್ರಾದಿಗಳನ್ನು ಕೊಂದ ಪಾಪ ನನ್ನನ್ನು ಬಹುವಾಗಿ ಬಾಧಿಸುತ್ತಿದೆ. ಇದಕ್ಕೆ ಏನಾದರೊಂದು ಪ್ರಾಯಶ್ಚಿತ್ತವಾಗುವವರೆಗೂ ನನಗಾಗಲೀ, ನನ್ನ ರಾಜ್ಯಕ್ಕಾಗಲೀ, ನನ್ನ ವಂಶಕ್ಕಾಗಲೀ ಶಾಂತಿ ಇಲ್ಲ. ಆದ್ದರಿಂದ, ಇಲ್ಲಿ ನೆರೆದಿರುವ ಹಿರಿಯರು, ಅನುಭವಿಗಳು, ವಾಸುದೇವ, ವ್ಯಾಸದೇವರು ಈ ಜಾತಿ ದ್ರೋಹಕ್ಕೆ ಏನು ಪ್ರಾಯಶ್ಚಿತ್ತವೆನ್ನುವುದನ್ನು ತಿಳಿಸಿದಲ್ಲಿ, ಅದನ್ನು ಶಿರಸಾವಹಿಸಿ, ಮಹಾಪ್ರಸಾದವೆಂದು ತಿಳಿದು ನೆರವೇರಿಸುತ್ತೇನೆ. ಅನುಗ್ರಹಿಸಬೇಕು," ಎಂದು ವಿನಯ ವಿಧೇಯತೆಗಳಿಂದ ಪ್ರಾರ್ಥಿಸಿದ.

ವಾಸುದೇವ ಮುಗುಳ್ನಗುತ್ತಾ, "ಧರ್ಮರಾಜ! ಎಲ್ಲ ಧರ್ಮಗಳನ್ನೂ ನೀತಿಗಳನ್ನೂ ತಿಳಿದ ನೀನೇ ಹೀಗೆ ವಿಚಾರ ಮಾಡುತ್ತಿರುವುದು ವಿಚಿತ್ರವಾಗಿದೆ. ಯುದ್ಧಸಂಸಿದ್ಧರಾಗಿ ಬಂದ ಶತ್ರುಗಳನ್ನು ಕೊಲ್ಲುವುದರಿಂದ ಕ್ಷತ್ರಿಯರಿಗೆ ಯಾವ ಪಾಪವೂ ಅಂಟುವುದಿಲ್ಲವೆನ್ನುವುದು ನಿನಗೆ ತಿಳಿಯದೇ? ಶಸ್ತ್ರಗಳನ್ನು ಹಿಡಿದು ಎದುರು ಪಕ್ಷದಲ್ಲಿ ನಿಂತವರೊಡನೆ ಹೋರಾಡುವಾಗ ಏನು ಸಂಭವಿಸಿದರೂ ಅದರಿಂದ ಪಾಪವಿಲ್ಲ. ಸ್ವಾರ್ಥರಹಿತವಾದ ದೇಶಕ್ಷೇಮಕ್ಕಾಗಿ ಕಂಕಣ ಕಟ್ಟಿ, ಕತ್ತಿ ಹಿಡಿದು ಹೋರಾಡುವುದು ಕ್ಷತ್ರಿಯನ ಸಹಜ ಧರ್ಮ. ನೀನು ನಿನ್ನ ಧರ್ಮವನ್ನೇ ಆಚರಿಸಿದ್ದೀಯೆ. ಧರ್ಮಕರ್ಮದಿಂದ ಪಾಪ ಹೇಗೆ ಬರುವುದು? ನೀನು ಹೀಗೆ ವಿಚಾರ ಮಾಡುವುದರಲ್ಲಿ ಏನೂ ನ್ಯಾಯವಿಲ್ಲ. ನಿನಗೆ ಎಂಥ ಪಾಪವೂ ಬರದು, ಬಾಧಿಸದು. ಹುಟ್ಟಿದ ಮೊಮ್ಮಗನಿಗೆ ನಾಮಕರಣ ಮಾಡಿ, ಆನಂದವಾಗಿ ಕಾಲಕಳೆಯಬೇಕಾದ ನೀನು ಇಂದು ಇಂಥ ವಿಚಾರಕ್ಕೆ ಎಡೆಕೊಟ್ಟಿರುವುದು ಸರ್ವಥಾ ನ್ಯಾಯವಲ್ಲ. ಇದರಲ್ಲಿ ಹುರುಳಿಲ್ಲ," ಎಂದ.

ನಂತರ ವ್ಯಾಸರು ಎದ್ದುನಿಂತು, "ಧರ್ಮಜಾ! ಯುದ್ಧರಂಗದಲ್ಲಿ ಅನೇಕ ಪಾತಕಗಳು, ಉಪಪಾತಕಗಳೂ ನಡೆಯುವುದು ಸಹಜ. ಅವುಗಳನ್ನೆಲ್ಲಾ ಪ್ರಧಾನವಾಗಿ ಭಾವಿಸಬಾರದು. ಧರ್ಮ ರಕ್ಷಣೆಯೇ ಕ್ಷತ್ರಿಯನ ಗುರಿ. ಕೀವು ರಕ್ತಗಳಿಂದ ಕೂಡಿದ ಹುಣ್ಣನ್ನು ಶಸ್ತ್ರವೈದ್ಯ ಕತ್ತಿಯಿಂದ ಕೊಯ್ಯುವುದು ಪಾಪವೋ? ಅಥವಾ ಕೊಯ್ಯದೆ, ಬಾಧೆ ನಿವಾರಿಸದೆ, ತಿಳಿದೂ ವೈದ್ಯ ಸುಮ್ಮನಿರುವುದು ಪಾಪವೋ? ಹಾಗೇ, ಅನೇಕ ಅನ್ಯಾಯ ಅನಾಚಾರಗಳೆನ್ನುವ ಕೀವು ರಕ್ತಗಳಿಂದ ಕೂಡಿದ ಕುರುವನ್ನು ಕ್ಷತ್ರಿಯನೆನ್ನುವ ವೈದ್ಯ ಶಸ್ತ್ರ ಹಿಡಿದು ಕೊಯ್ದು, ಕೀವು ಕೆಟ್ಟರಕ್ತಗಳನ್ನು ತೆಗೆಯುವುದು

ಪಾಪ ಹೇಗಾಗುವುದು? ನಿನಗೆ ಭ್ರಮೆ, ಧರ್ಮಜಾ! ಇಂಥ ಸಂದೇಹ ಬೇರೆ ಯಾರಿಗಾದರೂ ಬರಬಹುದು. ನಿನಗೆ ಬರಬಾರದು.

ಒಂದು ವೇಳೆ ನಮ್ಮ ಮಾತಿನಲ್ಲಿ ನಿನಗೆ ತೃಪ್ತಿಯಾಗದಿದ್ದರೆ ಇದಕ್ಕೆ ಬೇರೊಂದು ಮಾರ್ಗ ಸಹ ಇದೆ. ಅದರಲ್ಲಿ ಯಾವ ದೋಷವೂ ಇರದು. ಅದೇನೆಂದರೆ, ಯುದ್ಧ ಮುಗಿದ ನಂತರ ಕೆಲವು ಮಂದಿ ರಾಜರು ಪಾಪ ಪರಿಹಾರಾರ್ಥವಾಗಿ ಅಶ್ವಮೇಧಯಾಗ ಮಾಡುವುದುಂಟು. ನೀನು ಅಪೇಕ್ಷಿಸುವುದಾದರೆ, ನೀನೂ ಕೂಡ ಅದನ್ನು ಶಾಂತಿಯಜ್ಞವೆಂದು ಭಾವಿಸಿ ಮಾಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಧರ್ಮಜಾ! ನೀನು ಇಂಥ ಯಜ್ಞ ಮಾಡದಿದ್ದರೂ ನಿರ್ದೋಷಿಯೇ. ಆದರೆ, ನಿನಗೆ ಆ ವಿಶ್ವಾಸ ದೃಢವಾಗಿಲ್ಲವಾದ್ದರಿಂದ ನಿನ್ನ ತೃಪ್ತಿಗಾಗಿ ಈ ಮಾರ್ಗವನ್ನು ಹೇಳುತ್ತಿದ್ದೇನೆ. ಇನ್ನು ನಿನ್ನ ಇಷ್ಟ," ಎಂದು ಹೇಳಿ ಕುಳಿತರು. ಆಗ, ಸಭಾಮಧ್ಯದಿಂದ ಋಷಿಗಳೂ ಪಂಡಿತರುಗಳೂ ಶಾಸ್ತ್ರಜ್ಞರೂ ಅನುಭವಿಗಳೂ ಎದ್ದು, "ವ್ಯಾಸ ಭಗವಾನರು ಅಮೂಲ್ಯ ಸಲಹೆಯನ್ನೇ ಇತ್ತಿದ್ದಾರೆ," ಎಂದು ಕರತಾಡನ ಮಾಡಿದರು. "ಶುಭವಾಗಲಿ! ಶುಭ ವಾಗಲಿ!" ಎಂದು ಜೈ ಜೈಕಾರ ಮಾಡಿದರು. ಸಭೆಯಲ್ಲಿದ್ದವರೆಲ್ಲರೂ ಇದಕ್ಕೆ ಸಮ್ಮತಿಸಿ ಆನಂದಸೂಚಕವಾಗಿ, "ಧರ್ಮಜನಿಗೆ ಮಂಗಳವಾಗಲಿ," ಎಂದು ಕೂಗಿದರು.

ಧರ್ಮಜ ವಿಧೇಯತೆಯಿಂದ, ಆನಂದ ಸೂಚಿಸದೆ, ಕೈಗಳನ್ನು ಹಿಂದಕ್ಕೆ ಕಟ್ಟಿಕೊಂಡು, ವಿಚಾರಮಗ್ನನಾಗಿ, "ಮಹಾಶಯರೇ! ನೀವು ಏನೇ ಹೇಳಿದರೂ ನನಗಿನ್ನೂ ತೃಪ್ತಿಯಾಗಿಲ್ಲ. ಮನಸ್ಸಿಗೆ ಒಪ್ಪಿಗೆಯಾಗಿಲ್ಲ. ಯುದ್ಧಮಾಡಿದ ಸಾಮಾನ್ಯರಾಜರುಗಳು ಅಂಥ ಯಜ್ಞಮಾಡಿದರೆ ಅದು ಅವರ ಪಾಪ ಪರಿಹಾರಕ್ಕೆ ಸಾಕೆಂದು ಭಾವಿಸಬಹುದು. ಆದರೆ ನನ್ನ ಪಾಪ ಅಂಥದ್ದಲ್ಲ. ಯಾವ ರಾಜನೂ ಮಾಡದ ಪಾಪವನ್ನು ನಾನು ಮಾಡಿದ್ದೇನೆನ್ನುವುದು ನನಗೆ ಮಾತ್ರ ಗೊತ್ತು. ಇದರಲ್ಲಿ ಏನೂ ಸಂದೇಹವಿಲ್ಲ. ಬೇರೆ ರಾಜರುಗಳು ಮಾಡಿದ ಪಾಪಕ್ಕಿಂತ ನನ್ನ ಪಾಪ ಮೂರುಪಾಲು ಅಧಿಕವಾಗಿದೆ. ಹೇಗೆಂದರೆ, ಮೊದಲನೆಯದಾಗಿ, ನನ್ನ ಕುಲಗೋತ್ರದವರನ್ನು ಕೊಂದಿದ್ದೇನೆ. ಎರಡನೆಯದಾಗಿ ಭೀಷ್ಮದ್ರೋಣಾದಿ ಮಹಾ ಪೂಜ್ಯರನ್ನು ಬಲಿಕೊಟ್ಟಿದ್ದೇನೆ. ಮೂರನೆಯದಾಗಿ, ಅನೇಕ ಸಾವಿರ ಧರ್ಮಾತ್ಮರಾದ ರಾಜರುಗಳನ್ನು ವಧಿಸಿದ್ದೇನೆ. ಬಂಧುವಧೆ! ಗುರುವಧೆ! ರಾಜವಧೆ! ಅಬ್ಬಾ! ಎಂಥ ಪಾಪಿ ನಾನು! ಈ ಮೂರು ಪಾಪಗಳು ನನ್ನ ಮೂಲಕವಾಗಿಯಲ್ಲವೇ ನಡೆದದ್ದು? ಇಂಥ ಪಾಪವನ್ನು ಯಾವ ರಾಜನೂ ಮಾಡಿಲ್ಲವೆಂದು ತಿಳಿದಿದ್ದೇನೆ. ಇದಕ್ಕೆ ಮೂರು ಅಶ್ವಮೇಧ ಯಾಗಗಳನ್ನಾದರೂ ಮಾಡದಿದ್ದರೆ ನನಗೆ ಶಾಂತಿ ಇಲ್ಲ. ನನ್ನ ವಂಶಕ್ಕೆ ಕ್ಷೇಮವಿಲ್ಲ. ರಾಜ್ಯಪಾಲನೆ ಸಕ್ರಮವಾಗಿ

ನಡೆಯುವುದಿಲ್ಲ. ಆದ್ದರಿಂದ ವಾಸುದೇವನೂ ವ್ಯಾಸ ಭಗವಾನರೂ ಪಂಡಿತರೂ ಹಿರಿಯರೂ ಎಲ್ಲರೂ ಇದಕ್ಕೆ ಒಪ್ಪಬೇಕು," ಎಂದು ಕೈಜೋಡಿಸಿ, ಕಣ್ಮುಚ್ಚಿ ದುಃಖದಿಂದ ಧಾರಾಕಾರವಾಗಿ ಕಣ್ಣೀರು ಸುರಿಸುತ್ತಾ, ತುಟಿಗಳನ್ನಲುಗಿಸುತ್ತಾ ಧರ್ಮಜನು ನಿಂತಿದ್ದ ದೃಶ್ಯ ಪ್ರಜೆಗಳ ಹೃದಯವನ್ನೂ ಋಷಿಗಳ ಹೃದಯವನ್ನೂ ಕಲಕಿತು.

ವಾಸುದೇವ, ವ್ಯಾಸದೇವರ ಮನಸ್ಸು ಕರಗಿತು. ಎಷ್ಟೋ ಜನ ಪಂಡಿತರು ತಮಗೆ ಅರಿವಿಲ್ಲದಂತೆಯೇ ಕಣ್ಣೀರು ಸುರಿಸಿದರು. ಸಭೆ ಸ್ತಂಭೀಭೂತವಾಯಿತು. ಧರ್ಮಜನ ಹೃದಯ ಎಷ್ಟು ಮೃದು ಎನ್ನುವುದು ಎಲ್ಲರಿಗೂ ಅರ್ಥವಾಯಿತು. ಸೋದರರಾದ ಭೀಮಾರ್ಜುನ ನಕುಲ ಸಹದೇವಾದಿಗಳು ಅಣ್ಣನಂತೆ ತಾವೂ ಕೈಜೋಡಿಸಿ, ದೈನ್ಯಭಾವದಿಂದ ಸಭಾಧ್ಯಕ್ಷನ ಕಡೆಗೆ ತಿರುಗಿ ಅವನ ಅನುಮತಿಯನ್ನು ಕೋರಿದರು.

ಸಭೆಯ ಎಲ್ಲ ಸಭ್ಯರೂ ಪಂಡಿತರೂ ಒಂದೇ ಸಾರಿ ತಮ್ಮ ತಮ್ಮ ಸ್ಥಾನಗಳಿಂದ ಎದ್ದು, "ಧರ್ಮಾವತಾರ! ನಿನ್ನ ಅಭೀಷ್ಟವನ್ನು ನಾವು ಅಲ್ಲವೆನ್ನುವುದಿಲ್ಲ. ಶಿರಸಾ ವಹಿಸಿ ಅತ್ಯುತ್ತಮವಾಗಿ ಯಜ್ಞವನ್ನು ಸಂಪೂರ್ಣ ಮಾಡುತ್ತೇವೆ. ನಿಮ್ಮ ಶಾಂತಿಯೇ ನಮ್ಮ ಸೌಖ್ಯ. ನಿಮ್ಮ ಆನಂದಕ್ಕೆ ನಾವು ಏನುಮಾಡಲೂ ಸಿದ್ಧರಾಗಿದ್ದೇವೆ," ಎಂದು ತಮ್ಮೆಲ್ಲರ ಒಪ್ಪಿಗೆಯನ್ನು ಏಕಕಂಠದಿಂದ ತಿಳಿಸಿದರು. ಇದನ್ನು ಕೇಳಿದ ಧರ್ಮಜ, "ನಾನು ಧನ್ಯ, ಧನ್ಯ," ಎಂದು ತನ್ನ ಕೃತಜ್ಞತೆಯನ್ನು ತಿಳಿಸಿ, ಕೃಷ್ಣನೂ ವ್ಯಾಸರೂ ಕುಳಿತಿದ್ದ ಕಡೆಗೆ ನಿಧಾನವಾಗಿ ನಡೆದು, ಕೃಷ್ಣನ ಪಾದಗಳನ್ನು ಹಿಡಿದು, "ಮಧುಸೂದನಾ! ಕೇಳಿದೆಯಲ್ಲವೇ ನನ್ನ ಮೊರೆ? ಕಂಡೆಯಲ್ಲವೇ ನನ್ನ ಬಾಧೆ? ನಡೆಯಲಿರುವ ಯಜ್ಞಕ್ಕೆ ನೀನೇ ಅಧಿಪತಿಯಾಗಿ ನಿಂತು ನನ್ನ ಆಸೆಯನ್ನು ತೀರಿಸಿ, ಪಾಪ ಪರಿಹಾರ ಮಾಡು. ನನ್ನನ್ನು ಧನ್ಯನನ್ನಾಗಿಸು," ಎಂದು ಪಾದಗಳ ಮೇಲೆ ಶಿರಸ್ಸನ್ನಿಟ್ಟು ನಮಸ್ಕರಿಸಿದ.

ಗೋಪಾಲ ಮಂದಸ್ಮಿತ ವದನಾರವಿಂದನಾಗಿ, ಧರ್ಮಜನ ಭುಜವನ್ನು ಹಿಡಿದು ಮೇಲೆತ್ತಿ, "ಭಾವಾ! ನಿನ್ನ ಅಭೀಷ್ಟ ತಪ್ಪದೇ ನೆರವೇರುವುದು. ಆದರೆ, ನೀನು ಹಿಂದು ಮುಂದು ಯೋಚಿಸದೆ, ಪರ್ವತದಂಥ ಮಹತ್ತರ ಕಾರ್ಯವನ್ನು ಘೋಷಿಸಿಬಿಟ್ಟೆ. ಯಜ್ಞ ವೆಂದರೆ ಸಾಮಾನ್ಯವಲ್ಲ. ಅದರಲ್ಲೂ ಅಶ್ವಮೇಧಯಾಗವೆಂದರೆ ಇನ್ನೂ ಕಷ್ಟ. ಧರ್ಮರಾಜ! ಈ ಯಾಗ ಮಾಡಲು ಬೇಕಾಗುವ ಧನ ನಿನ್ನಲ್ಲಿಲ್ಲವೆನ್ನುವುದು ನನಗೆ ಚೆನ್ನಾಗಿ ತಿಳಿದಿದೆ. ಇನ್ನು, ರಾಜನಿಗೆ ಧನ ಒದಗಬೇಕಾದರೆ ಪ್ರಜೆಗಳಿಂದ ಮಾತ್ರವಲ್ಲದೆ ಬೇರೆ ಮಾರ್ಗ ಇಲ್ಲ. ಪ್ರಜೆಗಳನ್ನು ಹಿಂಸಿಸಿ ಪಡೆದ ಧನದಿಂದ

ಯಜ್ಞಮಾಡುವುದು ಒಳ್ಳೆಯದಲ್ಲ. ಯಜ್ಞಕ್ಕೆ ಅಂಥ ಧನವನ್ನು ಬಳಸಬಾರದು. ಬಳಸಿದರೆ ಲೋಕಕ್ಕೆ ಕೇಡೇ ಹೊರತು, ಉತ್ತಮ ಗತಿ ಲಭಿಸದು. ಹೋಗಲಿ, ಇತರ ರಾಜರುಗಳಿಂದೇನಾದರೂ ಒದಗುವುದೇ ಎಂದು ನೋಡಿದರೆ ಅವರೆಲ್ಲರೂ ಕಳೆದ ಯುದ್ಧದಲ್ಲಿ ತೀವ್ರ ನಷ್ಟಕ್ಕೆ ಗುರಿಯಾಗಿದ್ದಾರೆ. ಯಾರ ಹತ್ತಿರವೂ ಧನವಿಲ್ಲ. ಅದು ಸ್ಪಷ್ಟವಾಗಿ ತಿಳಿದಿರುವ ವಿಷಯ. ಇನ್ನು ಕೌರವರೇನಾದರೂ ಇಟ್ಟು ಹೋಗಿದ್ದಾರೆಯೆ ಎಂದು ನೋಡಿದರೆ, ಅವರು ಯುದ್ಧದಿಂದ ಸರ್ವನಾಶ ಮಾಡಿ, ತಾವೂ ನಾಶವಾಗಿ ಹೋದರು. ಇದೆಲ್ಲಾ ನಿನಗೆ ತಿಳಿದಿದ್ದರೂ ತಿಳಿಯದವನಂತೆ ಇಂಥ ಅಸಹಾಯಕತೆಯಲ್ಲಿ ಸಿಕ್ಕಿಬಿದ್ದು, ಇಷ್ಟು ದೊಡ್ಡಯಾಗ ಮಾಡಲು ಸಿದ್ಧನಾಗಿಬಿಟ್ಟೆ. ಯಾವ ಆಧಾರ ನೋಡಿ ಇಷ್ಟು ಧೈರ್ಯವಾಗಿ ನೀನು ಘೋಷಿಸಿದೆಯೋ ನನಗೆ ತಿಳಿಯದು. ಅದೂ ಅಲ್ಲದೆ ಈ ಸಭೆಯಲ್ಲಿ, ಇಷ್ಟು ಜನ ಹಿರಿಯರು, ಪಂಡಿತರುಗಳ ಮಧ್ಯೆ ಘೋಷಿಸಿಬಿಟ್ಟೆ. ನಿನ್ನ ಅಭೀಷ್ಟವನ್ನು ಏಕಾಂತದಲ್ಲಿ ಮೊದಲೇ ನನ್ನೊಡನೆ ತಿಳಿಸಿದ್ದರೆ ಎಷ್ಟು ಚೆನ್ನಾಗಿತ್ತು. ಈಗಲೂ ಕಾಲ ಮೀರಿಲ್ಲ. ಯೋಚಿಸಿ ಹೇಳು. ಸ್ವಲ್ಪ ಕಾಲಾವಕಾಶವನ್ನಾದರೂ ತೆಗೆದುಕೊಂಡು, ಅದಕ್ಕೆ ಬೇಕಾದ ಪ್ರಯತ್ನವನ್ನಾದರೂ ಮಾಡಬಹುದು," ಎಂದ.

ಕೃಷ್ಣ ಆತಂಕ ವ್ಯಕ್ತಪಡಿಸಿದ್ದನ್ನು ನೋಡಿ, ಧರ್ಮಜ ನಕ್ಕು, "ಕೃಷ್ಣಾ! ಆಧಾರ ಏನೆಂದು ನೋಡದೆ, ವಿಚಾರಮಾಡದೆ ನಾನು ಯಾವ ಕೆಲಸವನ್ನೂ ಮಾಡುವುದಿಲ್ಲವೆನ್ನುವುದನ್ನು ನೀನು ತಿಳಿದೂ ತಿಳಿದೂ ನನ್ನನ್ನು ಹೀಗೆ ಹಿಂಸಿಸುವುದು, ನಿನ್ನ ಒಂದು ನಾಟಕ. ಧನದ ಚಿಂತೆ ನನಗೆ ಏನೂ ಇಲ್ಲ, ಬರುವುದೂ ಇಲ್ಲ! ಕೊಡುವ ದೇವರು ನೀನಿರುವಾಗ, ಈ ಅಲ್ಪ ವಿಷಯಕ್ಕೆ ನಾನು ಹಿಮ್ಮೆಟ್ಟುವವನಲ್ಲ. ಕಲ್ಪವೃಕ್ಷವನ್ನು ಹಿತ್ತಲಲ್ಲಿ ಇಟ್ಟುಕೊಂಡು ಕಂದಮೂಲಗಳಿಗಾಗಿ ಕಠಿಣ ಬಾಧೆ ಪಡುವ ಅವಿವೇಕಿ ನಾನಲ್ಲ. ಸರ್ವ ಶಕ್ತಿ ಸ್ವರೂಪನಾಗಿ ಇಷ್ಟುಕಾಲವೂ ನಮ್ಮನ್ನು ಕಣ್ಣ ರೆಪ್ಪೆಯಂತೆ ಕಾಪಾಡಿ, ಇಂದು ನಮ್ಮನ್ನು ಈ ಸ್ಥಿತಿಯಲ್ಲಿಟ್ಟಿರುವ ನಿನಗೆ ಅಸಾಧ್ಯವೆನ್ನುವುದೊಂದಿದೆಯೇ?

ಪರ್ವತಗಳ ಪುಡಿಮಾಡಿದವನಿಗೆ ಸಣ್ಣ ಕಲ್ಲೊಂದನ್ನು ಪುಡಿಮಾಡುವುದು ಕಠಿಣವೇ? ನಾನು ದಡ್ಡನಲ್ಲ, ಕೃಷ್ಣಾ! ನಮ್ಮ ಸರ್ವಸ್ವವೂ ನೀನೇ, ನಮ್ಮ ಪಂಚ ಪ್ರಾಣಗಳೂ ನೀನೇ. ಏನು ಹೇಳಿದರೂ ನಾನು ಅಧೈರ್ಯ ಪಡುವುದಿಲ್ಲ. ನನ್ನ ಹೊಣೆಗಾರಿಕೆಗಳೆಲ್ಲವನ್ನು—ರಾಜ್ಯಭಾರದ ಹೊಣೆಗಾರಿಕೆ, ಯಜ್ಞದ ಹೊಣೆಗಾರಿಕೆ, ಎಲ್ಲವನ್ನೂ ನಿನ್ನ ಪಾದಗಳ ಮೇಲೆ ಇರಿಸಿದ್ದೇನೆ. ನೀನು ಏನಾದರೂ ಮಾಡು. ನನ್ನ ಮಾತನ್ನು ನಡೆಸಿ ಕೊಡುವುದೂ ಬಿಡುವುದೂ ನಿನ್ನನ್ನು ಅವಲಂಬಿಸಿದೆ. ನೀನು

ಹೇಗೆ ಮಾಡಿದರೂ ಆನಂದವೇ. ಎಲ್ಲ ನಿನ್ನ ಪ್ರಸಾದವೇ," ಎಂದು ಸಾಷ್ಟಾಂಗ ನಮಸ್ಕಾರಮಾಡಿದ.

ಹೃದಯವಾಸಿ ಪ್ರಭುವಿಗೆ ಬೇರೆ ಪ್ರಾರ್ಥನೆಯ ಅವಶ್ಯಕತೆಯೇ ಇಲ್ಲ ಅಲ್ಲವೇ? ಪರಮಾತ್ಮನ ಹೃದಯ ಕರಗಿತು. ಧರ್ಮಜನನ್ನು ಮೇಲೆತ್ತಿ, "ನಿನ್ನ ಹೃದಯ ಪರೀಕ್ಷಿಸುವ ಸಲುವಾಗಿ ಇಷ್ಟು ವಿಧವಾಗಿ ಪ್ರಶ್ನಿಸಿದೆನೇ ಹೊರತು, ಬೇರೆಯಲ್ಲ. ನನ್ನ ಮೇಲೆ ನಿನ್ನ ವಿಶ್ವಾಸ ಎಷ್ಟು ಗಾಢವಾಗಿದೆ. ಎನ್ನುವುದನ್ನು ನಿನ್ನ ಪ್ರಜೆಗಳಿಗೆ ತೋರಿಸಿಕೊಡುವುದಕ್ಕೆ ಈ ನಾಟಕ ಆಡಬೇಕಾಯಿತು. ನೀನು ಯಾವುದರ ಬಗೆಗೂ ಯೋಚಿಸಬೇಕಾಗಿಲ್ಲ. ನಿನ್ನ ಮನೋರಥ ಪೂರ್ತಿಮಾಡುತ್ತೇನೆ. ಆದರೆ ನಾನು ಹೇಳಿದಂತೆ ಮಾಡಬೇಕು. ಹಾಗೆ ಮಾಡಿದರೆ ನಿನ್ನ ಯಜ್ಞಕ್ಕೆ ಬೇಕಾದ ಧನ ನಿನಗೆ ಸುನಾಯಾಸವಾಗಿ ಬರುವುದು. ಪ್ರಜೆಗಳನ್ನು ಪೀಡಿಸದೆ, ರಾಜರನ್ನು ಹಿಂಸಿಸದೆ, ಧನ ಬಂದು ಸೇರುವುದು," ಎಂದು ಪರಮಾತ್ಮ ತಿಳಿಸುತ್ತಲೇ ಧರ್ಮಜ ತಲೆ ಬಾಗಿಸಿ, "ಪ್ರಭು! ತಮ್ಮ ಆಜ್ಞೆ ಶಿರಸಾವಹಿಸುತ್ತೇನೆ," ಎಂದು ತನ್ನ ಸಮ್ಮತಿ ಸೂಚಿಸಿದ.

ಕೃಷ್ಣ ಹೇಳಿದನು, "ನೋಡು, ಯಾರ ಸ್ವಾಧಿನದಲ್ಲೂ ಇರದೆ, ಭೂಮಿಯ ಒಳಗಿರುವ ಧನ ಆ ದೇಶದ ರಾಜನಿಗೆ ಸೇರುವುದರಲ್ಲಿ ಯಾವ ದೋಷವೂ ಇಲ್ಲ. ಅದಕ್ಕೆ ಬೇರೆಯವರ ಅಪ್ಪಣೆಯೂ ಬೇಕಾಗಿಲ್ಲ. ನಿನ್ನ ರಾಜ್ಯದ ಭೂಮಿಯಲ್ಲಿರುವ ಧನ ನಿನಗೆ ಸೇರಬೇಕಾದುದು ನ್ಯಾಯ. ಅಂಥ ಧನವನ್ನು ಕೂಡಲೇ ತೆಗೆಸಿ, ಯಜ್ಞಕಾರ್ಯ ಆರಂಭಿಸು.

ಧರ್ಮಜಾ! ಕೇಳು. ಪೂರ್ವದಲ್ಲಿ ಮರುತ್ತುನೆನ್ನುವ ಮಹಾರಾಜ ಮಹತ್ತರ ವಾದ ಯಜ್ಞವೊಂದನ್ನು ಮಾಡಿದ. ಅಂಥ ಯಜ್ಞವನ್ನು ಇದುವರೆಗೂ ಬೇರೆ ಯಾರೂ ಮಾಡಿಲ್ಲವೆಂದೇ ಹೇಳಬಹುದು. ಆ ಯಜ್ಞಭವನ, ಯಜ್ಞ ಸಾಮಗ್ರಿ ಗಳೆಲ್ಲಾ ಸುವರ್ಣದಿಂದಲೇ ಮಾಡಲ್ಪಟ್ಟಿದ್ದವು. ಅವನು ಬಂಗಾರದ ಇಟ್ಟಿಗೆಗಳನ್ನೇ ದಕ್ಷಿಣೆಯಾಗಿ ಕೊಟ್ಟ. ಬಂಗಾರದ ಭೂಮಿ, ಬಂಗಾರದ ಗೋವುಗಳನ್ನೇ ದಾನ ಮಾಡಿದ. ಆಗ ಋತ್ವಿಕರು ದಕ್ಷಿಣೆ ರೂಪವಾಗಿ ಬಂದ ಬಂಗಾರವನ್ನೆಲ್ಲಾ ತೆಗೆದು ಕೊಂಡು ಹೋಗಲಾರದೆ, ಸಾಧ್ಯವಾದಷ್ಟು ಮಾತ್ರ ಅನೇಕ ರೀತಿಯಾಗಿ ತಮ್ಮ ತಮ್ಮ ಮನೆಗಳಿಗೆ ಸಾಗಿಸಿ, ಮಿಕ್ಕದ್ದನ್ನು ಅಲ್ಲಲ್ಲೇ ಬಿಟ್ಟುಹೋದರು. ಹಾಗೆ ಬುದ್ಧಿಪೂರ್ವಕ ವಾಗಿ ಬಿಟ್ಟುಹೋದ ಧನ, ಸುವರ್ಣ, ಅಲ್ಲೇ ಇನ್ನೂ ಬಿದ್ದಿದೆ. ನೀನು ಅದನ್ನು ಹೊರತೆಗೆಯುವ ಸಾಮರ್ಥ್ಯವುಳ್ಳವರನ್ನು ಕಳಿಸಿದಲ್ಲಿ ಅದು ನಮಗೆ ಲಭಿಸುವುದು. ಅದರಿಂದ ನೀನು ಸಂಕಲ್ಪಿಸಿದ ಯಜ್ಞವನ್ನು ಆನಂದದಿಂದ ಪೂರ್ತಿಮಾಡಬ

ಹುದು," ಎಂದು ಸಲಹೆ ಮಾಡಿದೊಡನೆ ಧರ್ಮಜ, "ಸ್ವಾಮೀ, ಅದು ಪರರ ಧನವಲ್ಲವೇ? ಅದರ ಮೇಲೆ ನಮಗೆ ಅಧಿಕಾರವೇನಿದೆ? ಆ ಬ್ರಾಹ್ಮಣರ ಅನುಮತಿ ಅಗತ್ಯವಲ್ಲವೇ?" ಎಂದು ಪ್ರಶ್ನಿಸಿದ. ಅದಕ್ಕೆ ಕೃಷ್ಣ, "ಆ ಬ್ರಾಹ್ಮಣರು ತಮ್ಮೊಡನೆ ಸಾಧ್ಯವಾದಷ್ಟನ್ನು ತೆಗೆದುಕೊಂಡು, ಉಳಿದಿದ್ದನ್ನು ಬುದ್ಧಿ ಪೂರ್ವಕವಾಗಿ ಅಲ್ಲಿ ಬಿಟ್ಟು ಹೋದರು. ಅವರು ಈಗಿಲ್ಲ. ಅವರ ಸಂತತಿಯವರಿಗೆ ಈ ವಿಷಯ ತಿಳಿಯದು. ಅದು ಭೂಮಿಯ ಸ್ವಾಧೀನದಲ್ಲೇ ಇದೆ," ಎಂದ.

# ೫ ಯಜ್ಞ ಮತ್ತು ಹಿರಿಯರ ತಪಸ್ಸು

ವಾಸುದೇವನ ಆಜ್ಞೆಯಂತೆ, ವ್ಯಾಸದೇವನ ಸಲಹೆಯಂತೆ ಧರ್ಮಜ ತನ್ನ ಸೋದರರನ್ನು ಸೈನ್ಯ ಸಮೇತವಾಗಿ ಬ್ರಾಹ್ಮಣರು ಬಿಟ್ಟುಹೋಗಿದ್ದ ಬಂಗಾರವನ್ನು ತರಲು ಕಳುಹಿಸಿದ. ಅವರೆಲ್ಲರೂ ಭಗವದಾಜ್ಞೆಯ ಪ್ರಕಾರ ಈಶ್ವರ ಪೂಜೆ ಮಾಡಿ ಪ್ರಸಾದ ಸ್ವೀಕರಿಸಿ, ಪ್ರಯಾಣ ಬೆಳೆಸಿದರು. ಚಕ್ರವರ್ತಿ ಮರುತ್ತನು ಬ್ರಾಹ್ಮಣರಿಗೆ ಕೊಟ್ಟ ದಕ್ಷಿಣೆ ರೂಪದ ಬಂಗಾರವನ್ನು ಅವರು ತೆಗೆದುಕೊಂಡು ಹೋಗಲಾರದೆ ಒಬ್ಬೊಬ್ಬರು ಒಂದೊಂದು ದಾರಿಯಲ್ಲಿ ಬಿಟ್ಟು ಹೋಗಿದ್ದುದನ್ನು ಪತ್ತೆಹಚ್ಚಿದರು. ಆ ಧನರಾಶಿಯನ್ನು ಶೇಖರಿಸಿ ಒಂಟೆ, ಆನೆಗಳ ಮೇಲೆ, ರಥ, ಬಂಡಿಗಳಲ್ಲಿ ತುಂಬಿಕೊಂಡು ಆತ್ಮಾನಂದದಿಂದ ಪಾಂಡುನಂದನರು ಹಸ್ತಿನಾಪುರಕ್ಕೆ ಹಿಂದಿರುಗಿದರು.

ಪ್ರಜೆಗಳು ಈ ವಿಜಯಯಾತ್ರೆಯನ್ನು ಕಂಡು ಅತ್ಯಾಶ್ಚರ್ಯಪಟ್ಟರು. ಪಾಂಡುನಂದನರ ಪ್ರತಾಪವನ್ನು ಕೊಂಡಾಡಿದರು. ಧನರಾಶಿ ಸಹಿತವಾಗಿ ಪ್ರವೇಶಿಸಿದ ರಾಜನಂದನರಿಗೆ ಸುಸ್ವಾಗತ ಬಯಸಿ ಗಂಟಲು ಬಿರಿಯುವಂತೆ ಆನಂದದಿಂದ ಜಯ ಜಯಕಾರ ಮಾಡಿದರು. ಜರುಗಲಿರುವ ಯಜ್ಞದ ವೈಭವವನ್ನು ತಮತಮಗೆ ತಿಳಿದಂತೆ ಊಹಿಸಿಕೊಂಡು ಆನಂದದಿಂದ ನರ್ತಿಸಿ ನಲಿದಾಡಿದರು.

ಅಂದಿನಿಂದ ಪ್ರಜೆಗಳೆಲ್ಲರೂ ಸೇರಿ ಗಂಗಾತೀರದಲ್ಲಿ ಯಜ್ಞಕ್ಕಾಗಿ ಹಲವು ಮೈಲಿಗಳಷ್ಟು ವಿಸ್ತೀರ್ಣದ ಜಾಗವನ್ನು ಶುಭ್ರಮಾಡಿದರು. ಉಬ್ಬು ತಗ್ಗುಗಳನ್ನು ತೆಗೆದು ನೆಲವನ್ನು ಮಟ್ಟಮಾಡಿದರು. ಯಾಗಶಾಲೆ ಕಟ್ಟಿದರು. ಸುಂದರವಾದ ಕಟ್ಟಡಗಳನ್ನು

ನಿರ್ಮಿಸಿದರು. ಮಂಟಪಗಳನ್ನು, ಚಪ್ಪರಗಳನ್ನು ನಿರ್ಮಿಸಿದರು. ತಳಿರು ತೋರಣ ಪತಾಕೆಗಳಿಂದ ಆ ಪ್ರದೇಶವನ್ನು ಸಿಂಗರಿಸಿದರು.

ಯಜ್ಞದ ದಿನ ಸಮೀಪಿಸುತ್ತದ್ದಂತೆ ಪ್ರಜೆಗಳೂ ಬ್ರಾಹ್ಮಣರೂ ಋಷಿಗಳೂ ನಾನು ಮುಂದು, ತಾನು ಮುಂದು ಎಂದು ಅಲ್ಲಿ ಬಂದು ಸೇರಿದರು. ಪ್ರತ್ಯೇಕವಾಗಿ ಅವರವರಿಗೆ ಗೊತ್ತುಪಡಿಸಿದ್ದ ಸ್ಥಾನಗಳಲ್ಲಿ ತಮ್ಮ ತಮ್ಮ ನಿವಾಸಗಳನ್ನು ಏರ್ಪಡಿಸಿ ಕೊಂಡು, ಪ್ರಾರಂಭವಾಗಲಿರುವ ಮಹಾಯಜ್ಞವನ್ನು ಯಾವಾಗ ನೋಡಿ ಆನಂ ದಿಸುತ್ತೇವೋ ಎಷ್ಟೆಷ್ಟು ಬಾರಿ ನೋಡಿ ಅನುಭವಿಸುತ್ತೇವೋ ಎನ್ನುವ ನಿರೀಕ್ಷಣೆ ಯಲ್ಲಿ ಪ್ರತಿಕ್ಷಣವನ್ನೂ ಎಣಿಸುತ್ತಾ ಕಾಲಕಳೆಯುತ್ತಿದ್ದರು. ನಿರ್ಣಯಿಸಿದ ಸು ಮುಹೂರ್ತ ಸಮೀಪಿಸುತ್ತಿದ್ದಂತೆಯೇ ಬ್ರಾಹ್ನಣರು, ಹಿರಿಯರು, ಋಷಿಗಳು ದೀಕ್ಷೆ ಸ್ವೀಕರಿಸಲು ಸಿದ್ಧರಾಗಿ, ಸಭಾಮಂಟಪದಲ್ಲಿ ಎದ್ದು ನಿಂತು, ಧರ್ಮರಾಜನನ್ನೂ ವಾಸುದೇವನನ್ನೂ ನೋಡುತ್ತಾ, ಧರ್ಮರಾಜನನ್ನು ಉದ್ದೇಶಿಸಿ, "ರಾಜಾ, ನೀವು ಮೂರು ಅಶ್ವಮೇಧ ಯಾಗ ಮಾಡುವ ಸಂಕಲ್ಪ ಮಾಡಿದ್ದೀರೆಂದು ಕೇಳಿದ್ದೇವೆ. ಅದು ನಿಜವೇ? ಹಾಗಾದರೆ, ಬೇರೆ ಬೇರೆಯಾಗಿ ಮಾಡಲು ಸಂಕಲ್ಪಿಸಿರುವಿರೊ, ಅಥವಾ ಎಲ್ಲ ವಿಧಿಗಳನ್ನೂ ಮೂರು ಬಾರಿ ಮಾಡಿ ಒಮ್ಮೆಲೆ ಮೂರು ಯಾಗ ಗಳನ್ನು ಮಾಡುವ ಸಂಕಲ್ಪ ಮಾಡಿದ್ದೀರೊ ತಿಳಿಸಿದರೆ, ಅದಕ್ಕೆ ತಕ್ಕಂತೆ ನಾವು ಋತ್ವಿಕರನ್ನು ಗೊತ್ತು ಮಾಡುತ್ತೇವೆ," ಎಂದು ಕೋರಿದರು.

ಅದಕ್ಕೆ ಧರ್ಮಜ, "ವಿಪ್ರರೇ! ಋಷಿಗಳೇ! ಹೇಗೆ ಮಾಡಿದರೆ ಉತ್ತಮ ಯಜ್ಞವಾಗು ವುದೋ ನೀವೇ ನಿರ್ಣಯಿಸಿ ಹೇಳಿದರೆ ನನಗೆ ಅದೇ ತೃಪ್ತಿ. ಇದರಲ್ಲಿ ವಾಸುದೇವನ ಅಭಿಪ್ರಾಯ ನಮಗೆಲ್ಲರಿಗೂ ಪ್ರಧಾನವಾದುದು," ಎಂದು ಕೃಷ್ಣನ ಕಡೆ ನೋಡಿದ. ವಾಸುದೇವ ಅದನ್ನು ನಿರ್ಣಯಿಸುವ ಜವಾಬ್ದಾರಿಯನ್ನು ಬ್ರಾಹ್ಮಣರಿಗೇ ವಹಿಸಿದ. ಬ್ರಾಹ್ಮಣರು ತಮ್ಮ ತಮ್ಮಲ್ಲೇ ವಿಚಾರ ಮಾಡಿ, ಕೊನೆಗೆ ಒಂದು ನಿರ್ಣಯಕ್ಕೆ ಬಂದರು. ಯಜ್ಞದ ಎಲ್ಲ ವಿಧಿಗಳನ್ನೂ ತ್ರಿಗುಣಾವೃತ ಮಾಡಿ, ಪ್ರತಿ ಮಂತ್ರವನ್ನೂ ಮೂರುಬಾರಿ ಹೇಳಿ, ಋತ್ವಿಕರುಗಳಿಗೆ ಮೂರು ಪಾಲು ಹೆಚ್ಚು ದಕ್ಷಿಣೆ ಕೊಟ್ಟರೆ, ಮೂರು ಅಶ್ವಮೇಧ ಯಾಗ ಮಾಡಿದ ಫಲ ಲಭಿಸುವುದೆಂದು, ಅದಕ್ಕೆ ತಮ್ಮೆಲ್ಲರ ಒಪ್ಪಿಗೆ ಇದೆಯೆಂದು ತಿಳಿಸಿದರು. ಇದು ಉತ್ತಮವಾದ ಸಲಹೆ ಎಂದು ವಾಸುದೇವ ತಲೆಯಾಡಿಸಿದ. ಧರ್ಮಜನೂ ಇದಕ್ಕೆ ತನ್ನ ತೃಪ್ತಿ ಸೂಚಿಸಿದ. ಯಜ್ಞ ಪ್ರಾರಂಭ ಮಾಡಲು ಒಪ್ಪಿಗೆ ಕೇಳಿದ. ಯಜ್ಞ ಪ್ರಾರಂಭವಾಯಿತು. ಬ್ರಾಹ್ಮಣರ ವೇದ ಮಂತ್ರಗಳಿಂದ ಭೂಮಿ ಆಕಾಶ ಅದರುವಂತೆ ಕಂಡಿತು. ಮಾಡಬೇಕಾದ ವಿಧಿಗಳ ನ್ನೆಲ್ಲಾ ಪೂರೈಸಿ ಯಜ್ಞಾಶ್ವವನ್ನು ಬಿಟ್ಟರು. ಅದು ಸರ್ವಾಲಂಕಾರ ಭೂಷಿತವಾಗಿ, ಘೋಷಣೆ, ಪ್ರತಿಭಟನೆಯ ಷರತ್ತುಗಳ ಪತ್ರವನ್ನು ಧರಿಸಿ ಭೂಮಂಡಲವನ್ನೆಲ್ಲಾ

ಸುತ್ತಿ ಬಂದಿತು. ಯಜ್ಞಸ್ವರೂಪನೇ ಯಜ್ಞಾಧಿಪತ್ಯವನ್ನು ವಹಿಸಿದಮೇಲೆ ಆ ಯಜ್ಞ ಎಷ್ಟು ಶೋಭಿಸಿತೆನ್ನುವುದನ್ನು ಬೇರೆ ಹೇಳಬೇಕಾಗಿಲ್ಲ. ಯಜ್ಞವನ್ನು ಪೂರ್ಣಾಹುತಿಯೊಂದಿಗೆ ಮುಕ್ತಾಯ ಮಾಡಿದರು.

ಭಾಗವಹಿಸಿದ್ದ ಋತ್ವಿಕರುಗಳಿಗೆ, ಋಷಿ, ಬ್ರಾಹ್ಮಣರಿಗೆ ದಕ್ಷಿಣೆ ಸನ್ಮಾನಗಳನ್ನು ಯಥೇಚ್ಛವಾಗಿತ್ತು ಕಳುಹಿಸಿದರು. ಲೆಕ್ಕವಿಲ್ಲದಷ್ಟು ದಾನ ಧರ್ಮಗಳನ್ನು ಮಾಡಿದರು. ಗೋದಾನ, ಭೂದಾನ, ಸುವರ್ಣದಾನಗಳಿಂದ ಇಡೀ ರಾಜ್ಯ ಸಂಪೂರ್ಣ ಆನಂದದಲ್ಲಿ ಮುಳುಗಿಹೋಯಿತು. ಪ್ರತಿಯೊಬ್ಬರ ಬಾಯಲ್ಲೂ ಯಜ್ಞ ವೈಭವ ವರ್ಣನಾತೀತವೆನ್ನುವ ಮಾತೇ. ಅನ್ನ ಸಂತರ್ಪಣೆ ವಿರಾಮವಿಲ್ಲದೆ, ಬಂದವರ್‍ಯಾರಿಗೂ ಇಲ್ಲವೆನ್ನದೆ, ಹೊತ್ತು ವೇಳೆಯ ಮಿತಿ ಇಲ್ಲದೆ ನಡೆಯಿತು. ಬಂದವರನ್ನು ಎಲ್ಲ ರೀತಿಯಲ್ಲೂ ಸಂತೃಪ್ತಿಪಡಿಸಿದರು. ಇದನ್ನು ನೋಡಿದ ಮಹಾಋಷಿಗಳು, ಅನುಭವಿಗಳಾದ ಬ್ರಾಹ್ಮಣೋತ್ತಮರು ಈ ಯಜ್ಞ ಅಂದು ಮರುತ್ತು ಮಾಡಿದ ಯಜ್ಞಕ್ಕೂ ಮಿಗಿಲಾದುದೆಂದು ವರ್ಣಿಸಿದರು.

ಎಲ್ಲಾ ಯಜ್ಞಗಳಿಗಿಂತಲೂ ಅತಿಶಯವೂ ಅತಿ ಮಹತ್ವವೂ ವಿಚಿತ್ರವೂ ಪವಿತ್ರವೂ ಆದ ಯಜ್ಞವಾಯಿತೆಂದು ಆನಂದಿಸಿದರು. ಏಕೆಂದರೆ, ಮರುತ್ತುವಿನ ಯಜ್ಞಕ್ಕೆ ಇಂದ್ರನು ಯಜಮಾನನಾಗಿ ನಿಂತು ನಡೆಸಿದ್ದೇ ಬಹಳ ಅದ್ಭುತ ಆಶ್ಚರ್ಯದ ಸಂಗತಿ ಎಂದುಕೊಂಡರೆ, ಇಂದು ಧರ್ಮಜನ ಯಜ್ಞಕ್ಕೆ ಸಾಕ್ಷಾತ್ ಯಜ್ಞಸ್ವರೂಪನೇ ಅಧಿಕಾರಸ್ಥಾನ ವಹಿಸಿ ಯಜ್ಞ ನಡೆಸಿದ. ಇದಕ್ಕಿಂತಲೂ ಪವಿತ್ರವಾದುದು ಮತ್ತೇನಿದೆ? ಎಂತಲೇ ಈ ಯಜ್ಞ ಮರುತ್ತು ಮಾಡಿದ ಯಜ್ಞಕ್ಕೂ ಮಿಗಿಲಾದುದೆಂದೇ ಹೇಳಬೇಕು ಎಂದು ಅಭಿಪ್ರಾಯಪಟ್ಟರು. ಯಜ್ಞಮುಗಿದು, ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹಿಂತಿರುಗಿದರು.

ಬಂದಿದ್ದ ರಾಜರುಗಳು ಧರ್ಮಜನಿಂದ ಅಪ್ಪಣೆ ಪಡೆದು ತಮ್ಮ ತಮ್ಮ ರಾಜ್ಯಗಳನ್ನು ಸೇರಿದರು. ಬಂಧು-ಮಿತ್ರರು ಇನ್ನೂ ಕೆಲವು ದಿನಗಳು ಅಲ್ಲೇ ಇದ್ದು, ತಮ್ಮ ತಮ್ಮ ಅನುಕೂಲತೆಗಳಿಗನುಸರಿಸಿ ಹೊರಡುತ್ತಿದ್ದರು. ಆದರೆ, ಶ್ಯಾಮಸುಂದರ ಮಾತ್ರ ಇನ್ನೂ ಕೆಲವು ದಿನ ಹಸ್ತಿನಾವತಿಯಲ್ಲೇ ಇರಬಯಸಿದ. ಇದನ್ನು ತಿಳಿದು ಪಾಂಡುನಂದನರು ಆನಂದದಿಂದ ಅದಕ್ಕೆ ಬೇಕಾದ ಎಲ್ಲ ಏರ್ಪಾಟುಗಳನ್ನೂ ಮಾಡಿ, ನಿತ್ಯವೂ ಗೋಪಾಲನ ಸೇವೆ ಮಾಡುತ್ತಾ, ಅವನ ಸುವಾಕ್ಯ ಶ್ರವಣ ಮಾಡುತ್ತಾ ಕಾಲವನ್ನು ಪವಿತ್ರವಾಗಿ ಕಳೆಯುತ್ತಿದ್ದರು. ಹೀಗೆ ಕೃಷ್ಣ ಕೆಲವುಕಾಲ ಅಲ್ಲಿದ್ದು ನಂತರ ಅರ್ಜುನನ್ನೂ ಜೊತೆಯಲ್ಲಿ ಕರೆದುಕೊಂಡು ದ್ವಾರಕೆಗೆ ಹೊರಟ. ಪರಮಾತ್ಮ ದ್ವಾರಕೆಯನ್ನು ಸೇರುತ್ತಲೇ ದ್ವಾರಕಾಪುರವಾಸಿಗಳು ತಮ್ಮ ಸ್ವಾಮಿ

ಹಿಂತಿರುಗಿದನೆನ್ನುವ ಸಂತೋಷದಿಂದ ಹರ್ಷೋತ್ಸಾಹದ ಸ್ವಾಗತವಿತ್ತರು. ಕಣ್ಣ ತುಂಬ ಅವನ ದರ್ಶನ ಮಾಡಿದರು. ಮನತುಂಬ ಆನಂದಿಸಿದರು.

ದಿನಗಳುರುಳಿದವು. ಹಸ್ತಿನಾಪುರ ಸಮೀಪದ ಪ್ರಾಂತದಲ್ಲಿ ವಿದುರ, ತಾಪಸೀ ವೇಷದಿಂದ ತಿರುಗುತ್ತಿದ್ದಾನೆನ್ನುವ ಸುದ್ದಿ ಒಬ್ಬರಿಂದೊಬ್ಬರಿಗೆ ಹರಡಿ ಕೊನೆಗೆ ಧರ್ಮಜನ ಕಿವಿಗೆ ಬಿತ್ತು. ಧರ್ಮಜನಿಗೆ ಇದನ್ನು ಕೇಳಿ ಆಶ್ಚರ್ಯವೂ ಆನಂದವೂ ಆಯಿತು. ಈ ಸುದ್ದಿ ನಿಜವೋ ಸುಳ್ಳೋ ತಿಳಿದುಕೊಳ್ಳಲು ಕೆಲವು ಗೂಢಚಾರರನ್ನು ಕಳಿಸಿದ. ವಿದುರ ಹಸ್ತಿನಾಪುರಕ್ಕೇ ಬರುತ್ತಿದ್ದಾನೆನ್ನುವ ವಾರ್ತೆ ಗೂಢಚಾರರಿಂದ ತಿಳಿಯಿತು. ಧರ್ಮಜನ ಆನಂದಕ್ಕೆ ಪಾರವಿಲ್ಲ. "ಆಹಾ! ನಾನೆಷ್ಟು ಧನ್ಯ. ಮತ್ತೆ ವಿದುರನ್ನು ನೋಡುತ್ತೇವೋ ಇಲ್ಲವೋ ಎನ್ನುವ ಸಂಶಯದಿಂದ ಒಣಗಿದ್ದ ಈ ಹೃದಯ ಮತ್ತೆ ಚಿಗುರುವಂತೆ ಮಾಡಿತು ಈ ಪವಿತ್ರ ಘಳಿಗೆ. ನಮ್ಮನ್ನು ಸರ್ವವಿಧದಲ್ಲೂ ಪೋಷಿಸಿ, ರಕ್ಷಿಸಿದ ನಮ್ಮ ಪೋಷಕ ತಂದೆಯ ಸೇವೆಗೆ ಅವಕಾಶ ಸಿಕ್ಕಿತು," ಎಂದು ಹಿಗ್ಗಿದ. ಆ ಆನಂದ ವಾರ್ತೆಯನ್ನು ಅಂತಃಪುರಕ್ಕೂ, ಸೋದರ ರಿಗೂ ತಿಳಿಸಿದ. ಆನಂದದ ಪ್ರವಾಹ ಮೇರೆ ಮೀರಿ ಹರಿಯಿತು. ತನ್ನ ಪೋಷಕ ಪಿತೃವಿಗೆ ಅದ್ಭುತ ಸ್ವಾಗತ ನೀಡಲು ಎಲ್ಲ ಸಿದ್ಧತೆಗಳನ್ನೂ ಮಾಡುವಂತೆ ಸೈನ್ಯಕ್ಕೂ, ಪುರಪ್ರಜೆಗಳಿಗೂ ಆಜ್ಞಾಪಿಸಿದ.

ಈ ವಾರ್ತೆ ಕೇಳಿದ ಪುರಪ್ರಜೆಗಳು ಆನಂದೋದ್ರೇಕದಿಂದ ಊರಮುಂದೆ ಬಂದು ಸೇರಿದರು. ಧರ್ಮರಾಜ ಸರ್ವಾಲಂಕಾರ ಭೂಷಿತನಾಗಿ, ಸೋದರರ ಸಮೇತ ರಥವೇರಿ ಹೊರಟು ಊರ ಮುಂದೆ ಸೇರಿದ. ಇಡೀ ಹಸ್ತಿನಾಪುರವೇ ಸಿಂಗರಿಸ ಲ್ಪಟ್ಟು, ಹಚ್ಚಹಸಿರು ತಳಿರು ತೋರಣಗಳಿದ ಶೋಭಿಸುತ್ತಿತ್ತು. ಸ್ತ್ರೀಯರು, ಮಕ್ಕಳು, ಮುದುಕರುಗಳಿಗೆ ನಿಲ್ಲಲು ಯೊಗ್ಯ ಸ್ಥಳಗಳನ್ನು ಗೊತ್ತುಪಡಿಸಿದರು. ಪ್ರಜೆಗಳನ್ನು ಪ್ರಾಣ ಸಮಾನವಾಗಿ ನೋಡಿಕೊಳ್ಳುತ್ತಾ ಪಾಂಡವರನ್ನು ಕಣ್ಣಲ್ಲಿ ಇರಿಸಿಕೊಂಡು ಕಾಪಾಡುತ್ತಾ ಧರ್ಮವೇ ಪ್ರಾಣವೆಂದು ಬಗೆದು ನ್ಯಾಯ ವಿಚಾರಣೆ ಮಾಡುತ್ತಾ ಸಾಕ್ಷಾತ್ ಧರ್ಮಸ್ವರೂಪನೆನ್ನುವ ಹೆಸರು ಪಡೆದು, ಹಸ್ತಿನಾಪುರವನ್ನು ಬಿಟ್ಟು ಎಷ್ಟೋ ಕಾಲವಾಗಿದ್ದು, ಈ ದಿನ ಮತ್ತೆ ಸ್ವಸ್ಥಾನಕ್ಕೆ ವಿದುರ ಬರುತ್ತಿದ್ದಾನೆನ್ನುವ ವಾರ್ತೆಯನ್ನು ಜನ ನಂಬಲಾರದಾದರು. ಕನಸಿನಲ್ಲಿ ಕೇಳಿದ ಮಾತೋ ಎನ್ನುವ ಸಂಶಯದಿಂದ ತಾವು ನೋಡುವವರೆಗೂ ನಂಬಿಕೆ ಇಲ್ಲದೆ, ವೃದ್ಧಾಪ್ಯದಿಂದ ನಡೆಯಲಾಗದಿದ್ದರೂ ಅಲ್ಲಲ್ಲಿ ತಕ್ಕ ಸ್ಥಳಗಳನ್ನು ಹುಡುಕಿಕೊಂಡು ಕಣ್ಣ ರೆಪ್ಪೆ ಆಡಿಸದೆ, ನೆಟ್ಟ ದೃಷ್ಟಿಯಿಂದ ದಾರಿ ನೋಡುತ್ತಾ ವೃದ್ಧ ಸಮೂಹ ನಿಂತಿದ್ದ ದೃಶ್ಯ ಆನಂದ ಉಂಟುಮಾಡುತ್ತಿತ್ತು.

ದಾರಿಯುದ್ದಕ್ಕೂ ಇಕ್ಕೆಲಗಳಲ್ಲೂ ಮನೆಗಳ ಮೇಲೆ, ಮರಗಳ ಮೇಲೆ, ಎಲ್ಲಿ ನೋಡಿದರೂ ಕಿಕ್ಕಿರಿದು ಸೇರಿದ್ದ ಜನ ಸಮೂಹದ ಆನಂದ ಕೋಲಾಹಲವೇ ಕೋಲಾಹಲ. ಅಷ್ಟರಲ್ಲಿ, ಜಟೆಯನ್ನು ಬಿಟ್ಟು ತಾಪಸೀ ವೇಷಧಾರಿಯಾಗಿ ಸ್ವಲ್ಪ ದೂರ ಕಾಲುನಡಿಗೆಯಲ್ಲೇ ಬಂದು ಹಸ್ತಿನಾಪುರ ತಲುಪಿದ ವಿದುರನನ್ನು ನೋಡಿ, ಅವನೇ ವಿದುರನೆಂದು ತಿಳಿದು ಮುಗಿಲು ಮುಟ್ಟುವಂತೆ ಜಯಘೋಷ ಮಾಡಿದರು. ಪಾಂಡುನಂದನರು ತಮ್ಮ ವಾಹನಗಳಿಂದಿಳಿದು ತಮ್ಮ ಪೋಷಕ ತಂದೆಯನ್ನು ಸ್ವಾಗತಿಸಲು ಕಾಲುನಡಿಗೆಯಲ್ಲಿ ಮುಂದೆ ಸಾಗಿದರು. ಪ್ರಜೆಗಳು ಎಷ್ಟು ತಡೆದರೂ ಕೇಳದೆ ಓಡಿಹೋಗಿ ಅವನ ಪಾದಗಳ ಮೇಲೆ ಬಿದ್ದರು. ಪಾಂಡುನಂದನರು ತಮ್ಮ ಪೋಷಕ ಪಿತೃವನ್ನು ಆನಂದಬಾಷ್ಪದಿಂದ ಸ್ವಾಗತಿಸಿದರು. ಬಾಯಲ್ಲಿ ಮಾತು ಹೊರಡದಾಯಿತು. ಒಬ್ಬರನ್ನೊಬ್ಬರು ಆಲಂಗಿಸಿಕೊಂಡು ಕ್ಷೇಮ ಸಮಾಚಾರದ ಕುಶಲ ಪ್ರಶ್ನೆ ಮಾಡಿದರು. ಪ್ರಜೆಗಳೆಲ್ಲರೂ ನೋಡಲು ಅನುಕೂಲವಾಗುವಂತೆ ಧರ್ಮಜ ವಿದುರನನ್ನು ತನ್ನ ರಥದಲ್ಲಿ ಕೂರಿಸಿಕೊಂಡು ಮಂಗಳವಾದ್ಯದಿಂದ, ಮಧುರ ಆನಂದದಿಂದ, ಹಸ್ತಿನಾಪುರದ ರಾಜಬೀದಿಗಳ ಮೂಲಕ ರಾಜಭವನಕ್ಕೆ ಕರೆತಂದ.

ಕೆಲವರಂತೂ ವಿದುರನನ್ನು ನೋಡುನೋಡುತ್ತಾ ಶಿಲೆಯಂತೆ ನಿಂತು ಬಿಟ್ಟರು. ಅವನ ರೂಪ ಸಂಪೂರ್ಣ ಬದಲಾಗಿತ್ತು. ಅವನಲ್ಲಿ ಪ್ರಕಟವಾಗಿದ್ದ ದಿವ್ಯ ತೇಜಸ್ಸಿನಿಂದ ಸಾಕ್ಷಾತ್ ಇಂದ್ರನಂತೆ ಕಂಗೊಳಿಸುತ್ತಿದ್ದ ಅವನನ್ನು ನೋಡಿ ಅವರವರಿಗೆ ತೋಚಿದಂತೆ ಅವನ ವರ್ಣನೆ ಮಾಡುತ್ತಿದ್ದರು. ಕೆಲವರು ಪ್ರೇಮಾಶ್ರುಗಳನ್ನು ಸುರಿಸಿದರು. ರಾಣೀವಾಸದ ರಾಣಿಯರು ಘೋಷಾ ಪರದೆಯ ಹಿಂದಿನಿಂದ ಅವನ ದರ್ಶನಮಾಡಿ ಆನಂದಿಸಿದರು. ವಿದುರ ರಾಜಭವನ ಸೇರಿ ಸಂದರ್ಭಾನುಸಾರ ಯಾರನ್ನು ಹೇಗೆ ಕುಶಲ ಪ್ರಶ್ನೆ ಮಾಡಬೇಕೋ ಹಾಗೆ ಮಾಡುತ್ತಾ ಎಲ್ಲರೊಡನೆ ಹೊರಟ.

# ೬ ವಿದುರನ ತ್ಯಾಗ

ಕುಂತೀದೇವಿ ವಿದುರನ ಬಳಿಗೆ ಬಂದು ಅವನನ್ನು ಕುರಿತು: "ನಮ್ಮನ್ನೂ ನಮ್ಮ ಮಕ್ಕಳನ್ನೂ ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿದ ಆ ನಿನ್ನ ಪ್ರೇಮ ಇಷ್ಟುಕಾಲ ನಮ್ಮನ್ನೆಲ್ಲಾ ಮರೆತು ಹೇಗಿತ್ತು? ನನ್ನ ಮಕ್ಕಳು ಇಂದು ಈ ರಾಜ್ಯವನ್ನು ಪಾಲಿಸುತ್ತಿದ್ದಾರೆಂದರೆ, ಅದು ನಿನ್ನ ಪ್ರಸಾದವೇ! ಅಂದು ನೀನೊಬ್ಬನಿಲ್ಲದಿದ್ದರೆ ನನ್ನ ಕುಮಾರರ ಗತಿ ಏನಾಗುತ್ತಿತ್ತೋ! ನಾವು ಅನೇಕ ಗಂಡಾಂತರಗಳಿಗೆ ಗುರಿಯಾದೆವು. ಆದರೆ, ಅವೆಲ್ಲಕ್ಕಿಂತಲೂ ಹೆಚ್ಚಾಗಿ ನೀನು ನಮ್ಮೊಂದಿಗೆ ಇಲ್ಲವೆನ್ನುವ ಸಂಕಟವೇ ನಮ್ಮನ್ನು ಅತಿಯಾಗಿ ಬಾಧಿಸಿತು. ಕೊನೆಕೊನೆಗೆ, ನಿನ್ನನ್ನು ನಾವು ಮತ್ತೆ ನೋಡುತ್ತೇವೆ ಎನ್ನುವ ಆಸೆಯೇ ನಮ್ಮಲ್ಲಿ ಬತ್ತಿಹೋಯಿತು. ಅಬ್ಬಾ! ಒಣಗಿದ್ದ ನಮ್ಮ ಹೃದಯ ಈಗ ಮತ್ತೆ ಚಿಗುರಿತು. ದಿಕ್ಕಾಪಾಲಾಗಿದ್ದ ನಮ್ಮ ಆಸೆಗಳು ಮತ್ತೆ ಸೇರಿಕೊಂಡವು. ಇಂದು ನಮ್ಮೆಲ್ಲರ ಆನಂದ ಪೂರ್ಣವಾಯಿತು. ಈ ದಿನ ಎಂಥ ಸುದಿನ! ನಮ್ಮ ಅದೃಷ್ಟವನ್ನು, ಆನಂದವನ್ನು ವರ್ಣಿಸುವುದಕ್ಕೇ ಸಾಧ್ಯವಿಲ್ಲ!" ಎಂದು ಕಣ್ಣೀರು ಸುರಿಸಿದ ಕುಂತಿದೇವಿಯ ಕೈಹಿಡಿದುಕೊಂಡು, ವಿದುರ ತಾನೂ ಕಣ್ಣೀರು ಸುರಿಸುತ್ತಾ, ಹಿಂದಿನ ದಿನಗಳ ನೆನಪು ಮಾಡಿಕೊಳ್ಳುತ್ತಾ, "ಅಮ್ಮಾ! ಕುಂತೀದೇವೀ! ವಿಧಿಯನ್ನು ದಾಟಲು ಯಾರಿಗೆ ತಾನೆ ಸಾಧ್ಯ? ಏನೇನು ಆಗಬೇಕೋ ಅದೆಲ್ಲಾ ಆಗಿಯೇ ತೀರಬೇಕು. ಅವರವರ ಪಾಪಪುಣ್ಯಗಳು ಅವರವರ ಕಷ್ಟ ಸುಖಕ್ಕೆ ಕಾರಣವೇ ಹೊರತು, ಅನ್ಯರು ಕಾರಣರಲ್ಲ. ಪ್ರಾರಬ್ಧ ಸೂತ್ರದಿಂದ ಕಟ್ಟಲ್ಪಟ್ಟಿರುವ ಮನುಷ್ಯ ಸ್ವತಂತ್ರನಾಗಿರಲಾರ ಅಲ್ಲವೇ? ಆ ಸೂತ್ರ ಹೇಗೆ ಆಡಿಸಿದರೆ ಹಾಗೆ ಆಡುವುದು ಅವನಿಗೆ ತಪ್ಪಿದ್ದಲ್ಲ. ಎಲ್ಲಿಗೆ ಕರೆದೊಯ್ಯುವುದೋ ಅಲ್ಲಿಗೆ ಹೋಗುವುದು ತಪ್ಪದು. ನಮ್ಮ ಇಷ್ಟ ಅಯಿಷ್ಟಗಳು ಏನನ್ನೂ ಮಾಡಲಾರವು. ಎಲ್ಲವೂ ಅವನ ಇಚ್ಛೆಯಲ್ಲವೇ?" ಎಂದು ಹಲವು ರೀತಿಯಾಗಿ ವೇದಾಂತ ವಿಷಯಗಳನ್ನು ಹೇಳಿದ. ಧರ್ಮಜ, ಭೀಮ, ನಕುಲ, ಸಹದೇವರು ಅಲ್ಲಿಯೇ ತಲೆತಗ್ಗಿಸಿ ನಿಂತು ಎಲ್ಲವನ್ನೂ ಶ್ರದ್ಧೆಯಿಂದ ಕೇಳುತ್ತಿದ್ದರು.

ಕುಂತಿ ಮತ್ತೆ ವಿದುರನನ್ನುದ್ದೇಶಿಸಿ ಹೇಳಿದಳು, "ನಿನ್ನ ಆಶೀರ್ವಾದದಿಂದ ನನ್ನ ಮಕ್ಕಳು ಯುದ್ಧದಲ್ಲಿ ಗೆದ್ದರು. ಆದರೆ, ದ್ರೌಪದೀ ಪುತ್ರರನ್ನೂ ಸುಭದ್ರೆಯ ಪುತ್ರನನ್ನೂ ಕಾಪಾಡಿಕೊಳ್ಳದ ದುರದೃಷ್ಟರು ನಾವಾದೆವು. ಅವರು ನಿನ್ನ ದೃಷ್ಟಿಗೆ ದೂರವಾಗಿ ಬಿಟ್ಟರು. ಆ ಜ್ವಾಲೆಯಲ್ಲೇ ಸದಾ ನಮ್ಮ ಹೃದಯ ಬೇಯುತ್ತಿದೆ. ನೀನು ಹೇಳಿದ ಹಾಗೆ, ವಿಧಿಯನ್ನು ದಾಟಬಲ್ಲವರಾರು? ಏನೋ ಆದದ್ದು ಆಗಿಹೋಯಿತು. ಚಿಂತಿಸಿ, ಫಲವಿಲ್ಲದುದಕ್ಕೆ ಸುಮ್ಮನೆ ವ್ಯಥೆಪಡುವುದು ವ್ಯರ್ಥ. ಈ

ದುಃಖದ ಬೇಗೆಯಲ್ಲಿ ನಿನ್ನನ್ನು ನೋಡಿದ್ದು ನಮ್ಮ ದಾಹ ನಿವಾರಣೆ ಆದಂತಾಗಿದೆ," ಎಂದಳು. "ಅದು ಸರಿ! ಇಷ್ಟು ಕಾಲ ನೀನೆಲ್ಲಿದ್ದೆಯಪ್ಪಾ?" ಎಂದು ಕೇಳಿದಳು. ವಿದುರ, "ಒಂದೇ ಕಡೆ ಇರದೆ ತೀರ್ಥಯಾತ್ರೆ ಮಾಡುತ್ತಾ ತಿರುಗುತ್ತಿದ್ದೆ," ಎಂದ.

ಪಾಂಡವರು ಒಬ್ಬೊಬ್ಬರು ಒಂದೊಂದು ರೀತಿಯಾಗಿ ವಿದುರನ ಪವಿತ್ರ ಯಾತ್ರೆ ಕುರಿತು ಪ್ರಶ್ನಿಸುತ್ತಾ ಆಯಾಯಾ ಯಾತ್ರಾ ಸ್ಥಳದಲ್ಲಿ ಅವನು ಪಡೆದ ಅನುಭವ ವನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಧರ್ಮಜ ಮಧ್ಯೆ ಮಧ್ಯೆ, "ನಮಗೆ ಅಂಥ ಭಾಗ್ಯ ಯಾವಾಗ ಬರುವುದೋ," ಎನ್ನುತ್ತಾ ಒಂದೊಂದು ಕ್ಷೇತ್ರದ ಹೆಸರು ಹೇಳಿದಾಗಲೂ ಕಣ್ಣುಮುಚ್ಚಿಕೊಂಡು, ಕೈಜೋಡಿಸಿ ನಮಸ್ಕಾರ ಮಾಡುತ್ತಿದ್ದ.

ಭೀಮ, "ನೀವು ದ್ವಾರಕೆಯನ್ನು ಸಂದರ್ಶಿಸಿ ಬಂದಿರೇನು? ಅಲ್ಲಿಯ ಸಮಾ ಚಾರವೇನು ಹೇಳಬೇಕು," ಎಂದು ಪ್ರಾರ್ಥಿಸಿದ. ಧರ್ಮಜ, "ಅಲ್ಲಿ ನಂದ ನಂದನನನ್ನು ನೋಡಿ ಬಂದಿರೇನು? ಏನು ವಿಶೇಷ ಸಮಾಚಾರ?" ಎಂದು ಆತುರಾತುರವಾಗಿ ಕೇಳಿದ. ಕುಂತೀದೇವಿ, "ವಿದುರಾ, ನಮ್ಮ ಹುಡುಗ ಅರ್ಜುನ ಕೂಡ ಅಲ್ಲೇ ಇದ್ದಾನೆ. ನೀನು ಅಲ್ಲಿಗೆ ಹೋಗಿದ್ದರೆ ಬಹುಶಃ ಅವನನ್ನೂ ನೋಡಿರಬೇಕು. ದೇವಕಿ ವಸುದೇವರು ಹೇಗಿದ್ದಾರೆ?" ಎಂದು ದ್ವಾರಕೆಯ ಸಮಾಚಾರ ತಿಳಿಯಲು ಪ್ರಶ್ನೆಯ ಮಳೆಗರೆದರು. ವಿದುರ ಯಾವುದಕ್ಕೂ ತೃಪ್ತಿ ಕರವಾದ ಉತ್ತರ ಹೇಳದೆ ಆ ಪ್ರಶ್ನೆಗಳನ್ನು ಮರೆಸಿ ಅಲ್ಲಿಂದ ಹೊರಟ.

ಏಕೆಂದರೆ ಯದುವಂಶ ನಾಶವಾದ ವಿಷಯವನ್ನು ವಿದುರ ಮಾರ್ಗಮಧ್ಯದಲ್ಲಿ ಉದ್ಧವನಿಂದ ಕೇಳಿ ತಿಳಿದಿದ್ದ. ಆದ್ದರಿಂದ ಇಷ್ಟುಕಾಲದ ಮೇಲೆ ಅಪರೂಪವಾಗಿ ಬಂದ ತನ್ನನ್ನು ನೋಡಿ ಆನಂದದಲ್ಲಿ ಮುಳುಗಿದ್ದ ಪಾಂಡವರಿಗೆ ಒಡನೆಯೇ ದುಃಖವುಂಟುಮಾಡುವ ಇಚ್ಛೆಯಾಗಲಿಲ್ಲ. ತನ್ನ ಆಗಮನದಿಂದುಂಟಾದ ಆನಂ ದವನ್ನು ತಾನೇ ದುಃಖವಾಗಿ ಮಾರ್ಪಡಿಸಲೊಲ್ಲದೆ, ಇನ್ನೇನು, ನಾಳೆಯೋ ನಾಡದ್ದೋ ಹೇಗೂ ಅರ್ಜುನ ಬಂದು ತಿಳಿಸಿಯೇ ತಿಳಿಸುವನಲ್ಲವೆ? ನನ್ನ ಮೂಲಕ ಈ ವಾರ್ತೆ ತಿಳಿಯಬಾರದು ಎಂದುಕೊಂಡು, ಆ ಮಾತನ್ನು ತೇಲಿಸಿ, ಕೇವಲ ಕೃಷ್ಣನ ಗುಣಾತಿಶಯಗಳ ವರ್ಣನೆ ಮಾಡುತ್ತಾ, ಅವನ ಲೀಲೆಗಳನ್ನು ಹೇಳುತ್ತಾ, ಅದನ್ನು ಮರೆಸಿ, "ಅಮ್ಮಾ! ಕುಂತೀ! ನಾನು ಈ ತಾಪಸೀ ವೇಷದಲ್ಲಿ ಬಂಧುಗಳ ಬಳಿಗೆ ಹೋಗಲು ಇಚ್ಛೆಪಡಲಿಲ್ಲ. ಆದ್ದರಿಂದ, ನಂದಯಶೋದೆ ಯರನ್ನಾಗಲೀ, ಯಾದವ ಶ್ರೇಷ್ಠರನ್ನಾಗಲೀ ನೋಡಲಿಲ್ಲ," ಎಂದು ದ್ವಾರಕೆಯ ವಿಷಯವನ್ನು ಒಂದೇ ಮಾತಿನಲ್ಲಿ ಮುಗಿಸಿದ. "ಏನೋ ಸಣ್ಣವರಿದ್ದಾಗಿನಿಂದ ಲಾಲಿಸಿ ಪಾಲಿಸಿದ ಹುಡುಗರು ಪಾಂಡವರು. ಯುದ್ಧದಲ್ಲಿ ಜಯಗಳಿಸಿ ರಾಜ್ಯ

ಪರಿಪಾಲನೆ ಮಾಡುತ್ತಿದ್ದಾರೆನ್ನುವ ವಾರ್ತೆ ಕೇಳಿ, ನೋಡಬೇಕೆಂಬ ಆಸೆಯಿಂದ ಇಲ್ಲಿಗೆ ಮಾತ್ರ ಬಂದನೇ ಹೊರತು, ಮಿಕ್ಕ ಯಾರಲ್ಲಿಗೂ ಹೋಗಲು ಇಷ್ಟಪಡಲಿಲ್ಲ. ಹಳೆಯ ಅಭಿಮಾನ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿತು," ಎಂದ. ಅನೇಕ ವೇದಾಂತ ವಿಷಯಗಳನ್ನು ಅವರಿಗೆ ಹೇಳಿದ. ಸಂಭಾಷಣೆಯೆಲ್ಲಾ ಮುಗಿದ ಮೇಲೆ, ಧರ್ಮಜ ವಿದುರನನ್ನು ಪ್ರತ್ಯೇಕವಾದ ಸಕಲ ಸೌಕರ್ಯಗಳಿಂದ ಒಡಗೂಡಿದ ವಸತಿ ಗೃಹಕ್ಕೆ ಕರೆದೊಯ್ದ.

ಅಲ್ಲಿ ಚಿಕ್ಕಪ್ಪನ ಸೇವೆ ಮಾಡಲು ಪರಿಚಾರಕರನ್ನು ಗೊತ್ತುಮಾಡಿ, "ಇಲ್ಲಿ ತಾವು ಸ್ವಲ್ಪ ವಿಶ್ರಮಿಸಿಕೊಳ್ಳಬೇಕು," ಎಂದು ವಿದುರನನ್ನು ಪ್ರಾರ್ಥಿಸಿದ. ಸಕಲ ಸೌಕರ್ಯಗ ಳಿಂದೊಡಗೂಡಿದ ಆ ಭವನದಲ್ಲಿ ವಾಸಿಸಲು ವಿದುರನಿಗೆ ಇಷ್ಟವಿಲ್ಲದಿದ್ದರೂ ಧರ್ಮಜನನ್ನು ಸಂತೃಪ್ತಿಪಡಿಸುವುದಕ್ಕಾಗಿ ಬೇಡವೆನ್ನದೆ ಆ ಭವನವನ್ನು ಪ್ರವೇಶಿ ಸಿದ.

ವಿದುರ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ಹಾಸಿಗೆಯ ಮೇಲೆ ಮಲಗಿದ್ದಂತೆಯೆ ಹಿಂದಿನ ದಿನಗಳನ್ನು ಸ್ಮರಿಸುತ್ತಾ ಹೋದ. ಅಣ್ಣ ಧೃತರಾಷ್ಟ್ರ, ತಾನು ಮಾಡಿದ ತಪ್ಪಿನಿಂದ ತನ್ನ ವಂಶವನ್ನೇ ನಾಶ ಮಾಡಿಕೊಂಡ. ಅಷ್ಟುವಿಧವಾಗಿ ಪಾಂಡವರಿಗೆ ತೊಂದರೆ ಕೊಟ್ಟರೂ ಇಂದಿಗೂ ಧರ್ಮಜ ಧೃತರಾಷ್ಟ್ರನನ್ನು ಬಹು ಭಕ್ತಿ ಶ್ರದ್ಧೆಗ ಳಿಂದ ಗೌರವಿಸುತ್ತಾ ಎಲ್ಲ ವಿಧದಲ್ಲೂ ಅವನನ್ನು ಸುಖಪಡಿಸುತ್ತಾ ಇರುವನು ಎನ್ನುವುದನ್ನು ತಿಳಿದು ಪಾಂಡವರ ಔದಾರ್ಯಕ್ಕೆ ವಿದುರ ಆನಂದಿಸಿದ. ಆದರೆ ಧೃತರಾಷ್ಟ್ರನ ಬುದ್ಧಿಗೆ 'ಛೀ!' ಎಂದು ಬೇಸರಪಟ್ಟುಕೊಂಡು ಈ ವೃದ್ಧನಿಗೆ ಇನ್ನೂ ವೈರಾಗ್ಯ ಬಂದಿಲ್ಲವಲ್ಲಾ ಎಂದು ವ್ಯಸನಪಟ್ಟ. ರಾಜಭವನದಲ್ಲೇ ಇರುತ್ತಾ, ಎಲ್ಲ ಸುಖಗಳನ್ನೂ ಅನುಭವಿಸುತ್ತಾ ಪುಣ್ಯವನ್ನೂ ಪುರುಷಾರ್ಥವನ್ನೂ ಯೋಚಿಸದೆ, ಜೀವಿತವನ್ನು ವ್ಯರ್ಥ ಮಾಡಿಕೊಳ್ಳುತ್ತಿರುವನಲ್ಲಾ ಎಂದು ವ್ಯಥೆಪಟ್ಟ. ಯೋಗ ದೃಷ್ಟಿಯಿಂದ ಪಾಂಡವರ ಅವಸಾನ ಕಾಲವನ್ನೂ ತಿಳಿದ. ಹಿಂದಿನಿಂದಲೂ ಅವರನ್ನು ಕಾಪಾಡಿದ ಭಗವಂತನೇ ಮುಂದೂ ನೋಡಿಕೊಳ್ಳುವನೆಂದು ಧೈರ್ಯ ತೆಗೆದುಕೊಂಡು ಪಾಂಡವರು ಹೋದ ನಂತರ ಈ ಅಂಧರಾಜ ಮತ್ತಷ್ಟು ಕಷ್ಟಕ್ಕೆ ಗುರಿಯಾಗುವನಲ್ಲಾ ಎಂದುಕೊಂಡು, ಇನ್ನಾದರು ಅವನನ್ನು ಅರಮನೆಯಿಂದ ಹೊರಕ್ಕೆ ಹೊರಡಿಸಿ, ತೀರ್ಥಯಾತ್ರೆ ಮಾಡಿಸಿ, ಅವನ ಕಾಲವನ್ನು ಸಾರ್ಥಕಪಡಿಸ ಬೇಕೆಂದು ಯೋಚಿಸಿದ. ತಡ ಮಾಡದೆ, ಈಗಲೇ ಹೋಗಿ ಅವನಿಗೆ ಹಿತವಚನ ಹೇಳಬೇಕೆಂದು ಕತ್ತಲೆಯಲ್ಲೇ ಯಾರಿಗೂ ತಿಳಿಯದಂತೆ ಧೃತರಾಷ್ಟ್ರನ ವಸತಿಗೃಹಕ್ಕೆ ನಡೆದುಹೋದ.

# ೭ ವಿದುರನ ಮಂತ್ರಾಲೋಚನೆ

ಆಗತಾನೆ ವಿಶ್ರಮಿಸಲು ಸಿದ್ಧನಾಗಿದ್ದ ಧೃತರಾಷ್ಟ್ರ ಗಾಂಧಾರಿಯರಿಗೆ ವಿದುರ ಬಂದುದು ತಿಳಿದು, ಅವನನ್ನು ಧೃತರಾಷ್ಟ್ರ ಆಲಂಗಿಸಿಕೊಂಡು ಕಣ್ಣೀರು ಸುರಿಸಿದ. ತನ್ನ ಪಾಪದ ಫಲವನ್ನು ಹೇಳಿಕೊಳ್ಳುತ್ತಾ ಬಹು ಬಗೆಯಾಗಿ ದುಃಖಿಸುತ್ತಿದ್ದ ಅವನನ್ನು ವಿದುರ ಸಮಾಧಾನ ಪಡಿಸಿದ. ಮಧ್ಯೆ ಮಧ್ಯೆ ವೇದಾಂತ ಸಾರವನ್ನು ಅವರಿಗೆ ಉಪದೇಶಿಸಿದ.

ಧೃತರಾಷ್ಟ್ರನ ಕಲ್ಲೆದೆ ಮೃದು ಮಾತಿನಿಂದ ಕರಗುವುದಿಲ್ಲವೆಂದು ತಿಳಿದ ವಿದುರ, ಕಠಿಣೋಕ್ತಿಗಳಿಂದಲೇ ಅದನ್ನು ಗುದ್ದಿ ಹದಮಾಡಲು ಉದ್ಯುಕ್ತನಾದ. ಸಮಯ ನೋಡಿ ಕಂಠಸ್ವರ ಬದಲಾಯಿಸಿ, ಕಠಿಣ ಮಾತುಗಳನ್ನಾಡಲಾರಂಭಿಸಿದ. ಇದನ್ನು ತಿಳಿದ ಧೃತರಾಷ್ಟ್ರ, "ತಮ್ಮಾ! ನೂರು ಜನ ಮಕ್ಕಳನ್ನು ಕಳೆದುಕೊಂಡು ಚಿಂತಾಗ್ನಿಯಲ್ಲಿ ಬೇಯುತ್ತಿರುವೆನಲ್ಲಾ, ಇದು ನಿನಗೆ ಸರಿಯೇ? ಎಷ್ಟೋ ಕಾಲದ ನಂತರ ನಿನ್ನನ್ನು ನೋಡುವ ಅವಕಾಶ ಸಿಕ್ಕಿತಲ್ಲಾ ಎನ್ನುವ ಆನಂದ ಅನುಭವಿಸುವುದನ್ನು ಬಿಟ್ಟು, ನಮ್ಮನ್ನು ಮತ್ತಷ್ಟು ಅಶಾಂತಿಗೀಡು ಮಾಡುತ್ತಿದ್ದೀಯಲ್ಲಾ, ಇದು ನಿನಗೆ ಧರ್ಮವೇ? ಅಯ್ಯೋ! ನಮ್ಮ ಹಣೇಬರಹವೇ ಹೀಗಿದ್ದರೆ, ಯಾರನ್ನು ಅಂದು ಏನು ಪ್ರಯೋಜನ," ಎಂದು ತಲೆಯ ಮೇಲೆ ಕೈಯಿಟ್ಟು ಚಿಂತಾಕ್ರಾಂತನಾದ. ವೈರಾಗ್ಯ ಬೋಧಿಸಲು ಇದೇ ತಕ್ಕ ಸಮಯವೆಂದು ತಿಳಿದ ವಿದುರ, ಹೇಗಾದರೂ ಮಾಡಿ ಇವರನ್ನು ಕ್ಷೇತ್ರಯಾತ್ರೆಗೆ ಹೊರಡಿಸಬೇಕೆನ್ನುವ ಸದುದ್ದೇಶದಿಂದ, ಅವರ ಹೃದಯದಲ್ಲಾದ ಪರಿವರ್ತನೆಯನ್ನು ತಿಳಿದು ಮತ್ತಷ್ಟು ಕಠಿಣ ಮಾತುಗಳನ್ನೇ ಆಡಲಾರಂಭಿಸಿದ. ವಿದುರನಿಗೆ ಧೃತರಾಷ್ಟ್ರ ಗಾಂಧಾರಿಯರ ದುಃಖ ಕಂಡು ಒಂದು ಕಡೆ 'ಅಯ್ಯೋ' ಎನ್ನುವ ಮರುಕ, ಮತ್ತೊಂದು ಕಡೆ ಮುಂದೆ ಅವರಿಗೆ ಬರುವ ಕಠಿಣಕಾಲವನ್ನು ನೆನೆದು, ಇವರನ್ನು ಹೇಗಾದರೂ ಮಾಡಿ ಧನ್ಯರನ್ನಾಗಿ ಮಾಡುವ ಉತ್ಕಟೇಚ್ಛೆ. ಆದ್ದರಿಂದ ಕಠಿಣವಾಗಿಯೇ ಹೇಳಿದ, "ರಾಜಾ! ಇನ್ನೂ ಭೋಗವಾಂಛೆ ತೀರಲಿಲ್ಲವೇ? ಸಾಯುವವರೆಗೆ ಸಂಸಾರ ಕೂಪದಲ್ಲಿ ಮುಳುಗಿ ತೇಲಿದರೆ ಬರುವ ಲಾಭವೇನು? ಕಾಲವೆನ್ನುವ ಸರ್ಪ ನಿನ್ನನ್ನು ಕಬಳಿಸಲು ಹವಣಿಸುತ್ತಿರುವಾಗ, ನೀನು ಕಣ್ಣುಮುಚ್ಚಿಕೊಂಡಿದ್ದೀಯೆ. ಕಾಲವನ್ನು ನುಂಗಿದವರು ಈ ಲೋಕದಲ್ಲಿ ಯಾರೂ ಇಲ್ಲ. ಕಾಲವೇ ಎಲ್ಲರನ್ನೂ ನುಂಗುವುದು.

ಅದನ್ನು ತಿಳಿಯದೆ ಅಜ್ಞಾನದಲ್ಲಿ ಮುಳುಗಿ ಅರ್ಥಕಾಮದಲ್ಲಿ ನಿರತನಾಗಿದ್ದೀಯೆ, ಪಶುಜೀವನ ಸಾಗಿಸುತ್ತಿದ್ದೀಯೆ. ಮಾನವ ಜೀವಿತವನ್ನು ವ್ಯರ್ಥಮಾಡುತ್ತಿದ್ದೀಯೆ. ಮಾನವತ್ವಕ್ಕೆ ಮಸಿ ಬಳಿಯುತ್ತಿದ್ದೀಯೆ. ಈಗಲೂ ಕಾಲ ಮಿಂಚಿಲ್ಲ, ಕಾಲವನ್ನು ಸಾರ್ಥಕಮಾಡಿಕೊಳ್ಳಲು ಪ್ರಯತ್ನಿಸು. ಇನ್ನಾದರು ಮನೆಬಿಟ್ಟು ಹೊರಟು, ಇಹ ವನ್ನು ಮರೆತು ಪರದ ಚಿಂತನೆಮಾಡು. ಪರರ ಆಶ್ರಯದಲ್ಲಿದ್ದು ಪ್ರಾಣಬಿಡುವುದ ಕ್ಕಿಂತ ಪರಮಾತ್ಮ ಚಿಂತನೆಯಲ್ಲಿ ಕಾಲಕಳೆಯುವುದು, ಪ್ರಾಣಬಿಡುವುದು ಪರಮ ಪವಿತ್ರವಾದುದು. ಆದ್ದರಿಂದ ತಪಸ್ಸಿಗೆ ಹೊರಡು. ಇಷ್ಟು ವಯಸ್ಸಾಗಿದ್ದರೂ ಹಿಂದು ಮುಂದಿನ ಆಲೋಚನೆ ಇಲ್ಲದೆ ನೀನು ಜೀವನ ಸಾಗಿಸುತ್ತಿರುವುದು ನನಗೇ ಅವಮಾನಕರವಾಗಿದೆ. ಛೀ! ಛೀ! ನಿನ್ನ ಜೀವನಕ್ಕಿಂತ ಕಾಗೆಯ ಜೀವನ ಮೇಲು," ಎಂದು ಮಾತಿನಿಂದ ತಿವಿದ.

ಇದನ್ನು ಕೇಳಿ ಧೃತರಾಷ್ಟ್ರ, "ಅಬ್ಬಾ! ಸಾಕು! ಸಾಕು! ನಿನ್ನ ಮಾತುಗಳು ನಮ್ಮ ಪ್ರಾಣಗಳನ್ನೇ ಇರಿಯುತ್ತಿವೆ! ಇವು ತಮ್ಮನಾಡುವ ಮಾತುಗಳಲ್ಲ. ನಿಜವಾಗಿಯೂ, ನೀನು ವಿದುರ ಹೌದೋ ಅಲ್ಲವೋ ಎನ್ನುವ ಸಂಶಯ ನನ್ನಲ್ಲಿ ಬಲವಾಗುತ್ತಿದೆ. ಧರ್ಮಜ ಬೇರೆಯವನೇನು? ನಾನು ಅನ್ಯರ ಆಶ್ರಯದಲ್ಲಿ ಇರವವನೇನು? ಇದೇನು ವಿಚಿತ್ರದ ಮಾತುಗಳು. ಹೊತ್ತು ಹೆತ್ತ ಮಕ್ಕಳಿಗಿಂತ ಹೆಚ್ಚಿನ ಪ್ರೇಮದಿಂದ ನೋಡಿಕೊಳ್ಳುತ್ತಿರುವ ಧರ್ಮಜನನ್ನು ಬೇರೆಯವನೆಂದು ಭಾವಿಸುವುದಕ್ಕಿಂತ ಬೇರೆ ಪಾಪವಿದೆಯೇ? ಇದು ನನ್ನ ಹಣೇಬರಹ!" ಎಂದು ಹಣೆ ಮುಟ್ಟಿಕೊಳ್ಳುತ್ತಾ ಚಿಂತಾಕ್ರಾಂತನಾದ.

ವಿದುರ ಮೂದಲಿಕೆಯ ನಗೆ ನಗುತ್ತಾ, "ರಾಜಾ, ಈ ಮಾತುಗಳನ್ನಾಡುವುದಕ್ಕೆ ನಿನಗೆ ಸ್ವಲ್ಪವಾದರೂ ನಾಚಿಕೆಯಾಗುವುದಿಲ್ಲವೇ? ಧರ್ಮಜ ನಿಮ್ಮನ್ನು ತನ್ನ ತಂದೆಗಿಂತ ಹೆಚ್ಚಿನ ಪ್ರೀತಿಯಿಂದ ನೋಡಿಕೊಳ್ಳಬಹುದು? ನಿಮಗೆ ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ಸೇವೆ ಮಾಡಬಹುದು. ಅವು ಆತನಲ್ಲಿರುವ ಸದ್ಗುಣಗಳ ಪ್ರತಿಬಿಂಬ. ಅವನ ಸಾರ್ಥಕವಾದ ಹೆಸರಿಗೆ ಶೋಭೆ ತರುವಂಥವು. ಆದರೆ ನಿನ್ನ ವಿಷಯ ನೀನು ಯೋಚಿಸಿಕೊಳ್ಳಬೇಡವೇ? ಸಮಾಧಿಯೊಳಗೆ ಕಾಲಿರಿಸಿದ್ದರೂ ಇನ್ನೂ ಕಾಯವೇ ಪ್ರಧಾನವೆಂದು ತಿಳಿದು ಕಣ್ಣುಮುಚ್ಚಿಕೊಂಡು ಹೊಟ್ಟೆ ಬೆಳೆಸಿಕೊಳ್ಳುತ್ತಾ ಇದ್ದೀಯಲ್ಲ? ಇದಕ್ಕೆ ಮೊದಲು ನೀನು ದುರ್ಮಾರ್ಗಿಗಳಾದ ಆ ನಿನ್ನ ಮಕ್ಕಳ ಮಾತು ಕೇಳಿ ಪಾಂಡವರನ್ನು ಹೇಗೆ ನೋಡಿಕೊಂಡೆ ಎನ್ನುವುದನ್ನು ಒಮ್ಮೆಯಾದರೂ ಯೋಚಿಸಿರುವೆಯಾ? ಅವರನ್ನು ಅರಗಿನ ಮನೆಯಲ್ಲಿರಿಸಿ ಸುಟ್ಟು ನಾಶ ಮಾಡಲು ಹವಣಿಸಿದಿರಿ. ವಿಷಹಾಕಿ ಕೊಲ್ಲಲು ಪ್ರಯತ್ನಿಸಿದಿರಿ, ತುಂಬಿದ ಸಭೆಯಲ್ಲಿ ದ್ರೌಪದಿಯ ಅವಮಾನ ಮಾಡಿದಿರಿ. ಧರ್ಮಮೂರ್ತಿ

ಗಳಾದ ಪಾಂಡವರನ್ನು ನೀನೂ ನಿನ್ನ ಮಕ್ಕಳೂ ಧೂರ್ತತನದಿಂದ ನಾನಾ ಕಷ್ಟಗಳಿಗೆ ಗುರಿ ಮಾಡಿದಿರಿ.

ಆಗ ನೀನು ಮುದಿ ಆನೆಯಂತೆ ಸಿಂಹಾಸನದಲ್ಲಿ ಕುಳಿತು, 'ಈಗ ಏನು ನಡೆಯುತ್ತಿದೆ? ಈಗ ಏನು ನಡೆಯುತ್ತಿದೆ?' ಎಂದು ಅಕ್ಕ ಪಕ್ಕದವರನ್ನು ಕೇಳುತ್ತಿದ್ದುದನ್ನು ನೀನು ನೆನಪು ಮಾಡಿಕೊಂಡರೆ, ನೀನು ಅವರ ಮನೆಯಲ್ಲಿ ಒಂದು ನಿಮಿಷವಾದರೂ ಇರುವುದಕ್ಕೆ ಸಾಧ್ಯವೆ? ಆಗ ಈ ಪಾಂಡವರು ನಿನ್ನವರಾಗಿರಲಿಲ್ಲವೇನು? ಆಗ ನಿನಗಿಲ್ಲದ ಬಂಧುತ್ವ ಈಗ ನಿನಗೆ ಹೊಸದಾಗಿ ಬಂದಿತೇನೋ? ನಾಚಿಕೆ ಇಲ್ಲದೆ ಹೇಳುತ್ತಿದ್ದೀಯೆ. ಆ ದಿನ ಜೂಜು ನಿನ್ನ ಒಪ್ಪಿಗೆಯಿಂದಲ್ಲವೇ ನಡೆದದ್ದು? ಅದನ್ನು ಅಲ್ಲವೆನ್ನುತ್ತೀಯೆನು? ಆದರೆ ಅದಕ್ಕೆ ನಾನೇ ಪ್ರತ್ಯಕ್ಷ ಸಾಕ್ಷಿ! ನಾನೆಷ್ಟು ಹೇಳಿದೆ? ಸ್ವಲ್ಪವಾದರೂ ನೀನು ಆಗ ತಲೆಗೆ ಹಾಕಿಕೊಂಡೆಯಾ? ಆ ದಿನ ಈ ನೀತಿ, ಈ ಪ್ರೇಮ ಎಲ್ಲಾ ಎಲ್ಲಿ ಹೋಗಿತ್ತು? ಇಂದು ಪಾಂಡವರು ಹಾಕಿದ ಅನ್ನವನ್ನು ನಾಯಿಯಂತೆ ತಿನ್ನುತ್ತಾ, ನೀಚ ಬಾಳು ಬಾಳುತ್ತಾ, 'ಪಾಂಡವರು ಬೇರೆಯವರೇ?' ಎನ್ನುತ್ತಿರುವೆಯಲ್ಲ," ಎಂದು ಅತಿ ಹರಿತವಾದ ನುಡಿಗಳಿಂದ, ಕತ್ತಿ ಏಟಿನಂತೆ, ಸುತ್ತಿಗೆ ಹೊಡೆತದಂತೆ ಹೊಡೆದು ಅವರಲ್ಲಿ ವಿರಕ್ತಿ ಹುಟ್ಟಿಸಲು ಪ್ರಯತ್ನಿಸಿದ.

ಈ ಮಾತುಗಳಿಂದ ಧೃತರಾಷ್ಟ್ರನಲ್ಲಿ ನಿಜಕ್ಕೂ ಪರಿವರ್ತನೆಯಾಯಿತು. ಅವನಿಗೆ ವಿದುರ ಸತ್ಯವನ್ನೇ ಹೇಳುತ್ತಿದ್ದಾನೆಂದೆನಿಸಿತು. "ತಮ್ಮಾ, ನೀನು ಹೇಳುವುದೆಲ್ಲಾ ನಿಜವೇ ಸರಿ. ಹಾಗಾದರೆ ನಾನೀಗ ಏನುಮಾಡಬೇಕೆನ್ನುತ್ತೀಯೆ? ಹೋಗಲಿ, ಯಾರಿಗೂ ಹೇಳದೆ ಕೇಳದೆ ಕಾಡಿಗೆ ಹೋಗಿಬಿಡೋಣವೆಂದರೆ ನನಗೆ ಕಣ್ಣುಗಳಿಲ್ಲ. ಯಾರಾದರೂ ಜೊತೆಗೆ ಬೇಕು. ಇರುವವರೆಗೆ ಈ ದೇಹವನ್ನಾದರೂ ಸ್ವಲ್ಪ ನೋಡಿಕೊಳ್ಳಬೇಕಲ್ಲವೇ? ಆಹಾರ ಪಾನೀಯಗಳಿಲ್ಲದೆ ನಾನು ತೊಂದರೆ ಪಡುವೆನೇನೋ ಎನ್ನುವ ಭಯದಿಂದ ಗಾಂಧಾರಿ ಅರೆಘಳಿಗೆಯಾದರೂ ನನ್ನನ್ನು ಬಿಟ್ಟಿರುವುದಿಲ್ಲವೆನ್ನುವುದು ನಿನಗೆ ತಿಳಿದೇ ಇದೆ. ಅಂದಮೇಲೆ ನಾನೇನು ಮಾಡಬೇಕೋ ನೀನೇ ಹೇಳು," ಎಂದ. ಧೃತರಾಷ್ಟ್ರ ಶಾಂತವಚನಗಳನ್ನಾಡಿದ್ದನ್ನೂ ಗಮನಿಸಿದ ವಿದುರ, "ಧೃತರಾಷ್ಟ್ರ! ಈ ದೇಹವೆನ್ನುವ ಮನೆಯ ಮೇಲೆ ನಿನಗಿರುವ ಅಭಿಮಾನವೇ ನಿನ್ನನ್ನು ಇಷ್ಟು ಕುರುಡುಮಾಡಿದೆ. ಎಷ್ಟೇ ಕಾಲವಿದ್ದರೂ, ಕೊನೆಗೆ ಈ ದೇಹ ಬಿಡುವುದು ತಪ್ಪಿದ್ದಲ್ಲ. ಇದು ಸ್ಥಿರವಲ್ಲ. ಮಲಮೂತ್ರ, ದುರ್ಗಂಧ, ಮಾಂಸರಕ್ತಾದಿಗಳಿಂದ ನಿಮಿಷ ನಿಮಿಷಕ್ಕೂ ಕೊಳೆತು ನಾರುವ ಈ ದೇಹ ನೀನಲ್ಲ. ದೇಹವೇ ನಾನೆನ್ನುವ ಭ್ರಾಂತಿ ಪರಮ ಮೂರ್ಖತನದ ಲಕ್ಷಣ. ಅಂಥವನು ಜಡನು. ಇದರಲ್ಲಿ ರೋಗಗಳೆನ್ನುವ ಅಸಂಖ್ಯಾತ ಸೈನಿಕರೊಡನೆ ಮೃತ್ಯುವೆನ್ನುವ ಶತ್ರು ದೇಹದ ಮೇಲೆ ದಂಡೆತ್ತಿ ಬಂದು ಊರನ್ನು ಕೊಳ್ಳೆ ಹೊಡೆಯುವ

ಶತ್ರು ಸೈನಿಕರಂತೆ ದೇಹದ ಮೇಲೆ ತಮ್ಮ ಸೇಡು ತೀರಿಸಿಕೊಳ್ಳುವುವು. ದೇಹ ಎಂದಿಗೂ ನಿತ್ಯವಲ್ಲ. ಇದನ್ನು ಎಂದಾದರೊಂದು ದಿನ ಬಿಡಲೇಬೇಕು. ಆದ್ದರಿಂದ ಯಾವುದಾದರೊಂದು ಕ್ಷೇತ್ರದಲ್ಲಿದ್ದುಕೊಂಡು, ಪರಚಿಂತನೆಯಲ್ಲಿದ್ದು, ಪರಮಾತ್ಮ ಸ್ಮರಣೆ ಮಾಡುತ್ತಾ ಪರಲೋಕ ಪ್ರಾಪ್ತಿಗಾಗಿ ಪ್ರಯತ್ನ ಮಾಡು. ಕ್ಷೇತ್ರದಲ್ಲೇ ನೀನು ದೇಹಬಿಟ್ಟರೆ ಧನ್ಯನಾಗುವೆ. ಇಲ್ಲದಿದ್ದರೆ, ನಾಯಿ ನರಿಗಳಂತೆ ದಿಕ್ಕಿಲ್ಲದವನಂತೆ ಸಾವು ಅನುಭವಿಸಬೇಕಾಗುವುದು. ಏಳು! ವೈರಾಗ್ಯ ತಾಳು, ಮನೆಬಿಟ್ಟು ಹೊರಡು. ಭ್ರಾಂತಿಯನ್ನು ಬಿಡು," ಎಂದು ಹೇಳಿ ಥಟ್ಟನೆ ಧೃತರಾಷ್ಟ್ರನ ಹೃದಯದಲ್ಲಿ ವೈರಾಗ್ಯ ಹುಟ್ಟಿಸಿದ.

ಧೃತರಾಷ್ಟ್ರ ಬಹಳ ಹೊತ್ತು ಮೌನವಾಗಿ ಆಲೋಚನಾಮಗ್ನನಾಗಿದ್ದು, ಧಾರಾ ಕಾರವಾಗಿ ನೀರು ಸುರಿಸುತ್ತಾ, ಅದರುವ ತುಟಿ ಕೈಗಳಿಂದ ಹೊಯ್ದಾಡುತ್ತ, "ವಿದುರಾ! ಇಂಥಾ ಪವಿತ್ರವಾದ ಹಿತೋಪದೇಶ ಮಾಡಿದ ನಿನ್ನನ್ನು ಏನೆಂದು ಕರೆಯಲಿ. ಈ ಶರೀರಕ್ಕೆ ನೀನು ಚಿಕ್ಕವನಾದರೂ ಜ್ಞಾನದಲ್ಲಿ ನೀನು ನಮ್ಮೆಲ್ಲರಿಗೂ ಹಿರಿಯನು, ಗುರು ಸಮಾನನಾದವನು. ನಿನಗೆ ಯಾವುದು ಇಷ್ಟವೋ ಹಾಗೆ ಮಾಡು. ನನ್ನನ್ನು ಬೇರೆಯವನೆಂದು ಭಾವಿಸದೆ, ನನ್ನ ಮಾತನ್ನು ಸ್ವಲ್ಪ ಸಮಾಧಾನ ಚಿತ್ತದಿಂದ ಕೇಳು. ಆಮೇಲೆ ನಿನ್ನ ಇಷ್ಟದಂತೆ ನಾವು ನಡೆಯುತ್ತೇವೆ," ಎಂದು ತನ್ನ ಪರಿಸ್ಥಿತಿಯನ್ನು ವಿದುರನಲ್ಲಿ ಹೀಗೆ ತೋಡಿಕೊಂಡ, "ವಿದುರಾ! ಹೆತ್ತ ಮಕ್ಕಳಿಗಿಂತ ಅಧಿಕ ಪ್ರೇಮದಿಂದ ನಮ್ಮನ್ನು ಕಾಪಾಡಿದ ಧರ್ಮಜನಿಗೆ ಹೇಳದೇ ಹೋಗುವುದು ಅಷ್ಟು ಸರಿಯಲ್ಲ. ಹಾಗೆ ಅವನಿಗೆ ತಿಳಿಸಿದರೆ ನಮ್ಮನ್ನು ಅವನು ಅಡವಿಗೆ ಹೋಗಗೊಡುವುದಿಲ್ಲ. ಹಾಗೇನಾದರೂ ನಾವು ಹಟ ಮಾಡಿದೆವೋ ನಮ್ಮೊಡನೆ ತಾನೂ ಅಡವಿಗೆ ಹೊರಡುವ ಸ್ವಭಾವ ಅವನದು. ಇಂಥ ಧರ್ಮಸಂಕಟದಲ್ಲಿ ಸಿಕ್ಕಿರುವ ನನ್ನನ್ನು ನೀನೇ ತಪ್ಪಿಸಿ ನನ್ನನ್ನು ತಪಸ್ಸಿಗೆ ಯೋಗ್ಯವಾದ ಸ್ಥಳಕ್ಕೆ ಕಳಿಸು," ಎಂದು ಅತಿ ದೀನನಾಗಿ ಪ್ರಾರ್ಥಿಸಿದ. ವಿದುರ ಮುಗುಳ್ನಕ್ಕು, "ರಾಜಾ! ನಿನ್ನ ಮಾತು ಬಹಳ ವಿಚಿತ್ರವಾಗಿದೆ. ನೀನೇನು ವಿನೋದ ವಿಹಾರಕ್ಕೆ ಅಡವಿಗೆ ಹೊರಟಿಲ್ಲ ಅಲ್ಲವೆ? ಸರ್ವಸಂಗ ಪರಿತ್ಯಾಗಿಯಾಗಿ, ತಪಸ್ಸನ್ನಾಚರಿಸುವುದಕ್ಕಾಗಿ ಹೊರಟಿರುವೆ. ಅಂದಮೇಲೆ ಮಮಕಾರ ಅಭಿಮಾನಗಳಿಗೆ, ಅವಕಾಶ ಮಾಡಿ ಕೊಟ್ಟು, ಅಪ್ಪಣೆ ಪಡೆದು ಹೊರಡಬೇಕೆಂದು ಯೋಚಿಸುತ್ತಿರುವುದು ವಿಚಿತ್ರವಲ್ಲದೆ ಮತ್ತೇನು? ದೇಹವನ್ನೇ ತ್ಯಾಗಮಾಡಬೇಕಾಗಿರುವ ನಿನ್ನ ತಲೆಯಲ್ಲಿ ಇಂಥ ವಿಚಾರಗಳೇ ಹುಟ್ಟಬಾರದು. ಇವು ಬಂಧನ ಕಾರಣವಾದುವುಗಳೇ ಹೊರತು, ಮೋಕ್ಷಕಾರಣವಾದವುಗಳಲ್ಲ. ಈ ಭ್ರಾಂತಿಗಳನ್ನೆಲ್ಲಾ ಮೂಟೆ ಕಟ್ಟಿ ನೀರಿನಲ್ಲಿ ಒಗೆದುಬಿಡು. ಉಟ್ಟ ಬಟ್ಟೆಯಲ್ಲಿ ಇಲ್ಲಿಂದ ಹೊರಡು. ಕಾಲಹರಣ ಮಾಡಬೇಡ,"

ಎಂದು ದಯೆ ದಾಕ್ಷಿಣ್ಯಗಳಿಲ್ಲದೆ, ಮಾತಿನ ಕಾಠಿಣ್ಯ ಬದಲಾಯಿಸದೆ, ಮಹಾತ್ಯಾಗಕ್ಕೆ ಅವನನ್ನು ಸಿದ್ಧಗೊಳಿಸುವ ಮಾತುಗಳನ್ನಾಡಿದ.

ಹಾಸಿಗೆಯ ಮೇಲೆ ಕೇಳುತ್ತಾ ಕುಳಿತಿದ್ದ ಧೃತರಾಷ್ಟ್ರ ತವಕದಿಂದ, "ವಿದುರಾ! ನಿನ್ನ ಮಾತೇನೊ ತುಂಬಾ ಸತ್ಯವೇ, ಆದರೆ, ನನ್ನ ಸ್ಥಿತಿಯನ್ನು ನಿನಗೆ ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಶರೀರ ನೋಡಿದರೆ ಹಣ್ಣು. ಕಣ್ಣುಗಳಾದರೊ ಕುರುಡು. ನನಗೆ ದಾರಿ ತೋರಿಸುವುದಕ್ಕೆ ಆದರೂ ಯಾರಾದರೊಬ್ಬರ ಸಹಾಯ ಬೇಕಲ್ಲವೇ? ನಿನ್ನತ್ತಿಗೆ ಗಾಂಧಾರಿ ಕುರುಡನಾದ ನನ್ನ ಕಷ್ಟಗಳನ್ನೇ ತಾನೂ ಅನುಭವಿಸುವುದಕ್ಕಾಗಿ ಕಣ್ಣಿದ್ದರೂ ಕಣ್ಣು ಕಟ್ಟಿಕೊಂಡು ಕುರುಡಿಯಾಗಿದ್ದಾಳೆ. ಈ ನಮ್ಮಂಥ ಕುರುಡರು ಇತರರ ಸಹಾಯವಿಲ್ಲದೆ ಅರಣ್ಯವನ್ನು ಸೇರುವುದಾದರೂ ಹೇಗೆ? ನಮ್ಮ ಬದುಕು ಪರಾಧೀನವಾಗಿಹೋಗಿದೆ. ವಿಧಿಯನ್ನು ದಾಟಲು ಯಾರಿಗೆತಾನೆ ಸಾಧ್ಯ," ಎಂದು ಹೇಳಿದನು. ಕಣ್ಣೀರು ಒರೆಸಿಕೊಳ್ಳುತ್ತಿದ್ದ ಧೃತರಾಷ್ಟ್ರನನ್ನು ನೋಡಿ ವಿದುರನ ಮನಸ್ಸು ಕರಗಿತು. ಆದರೂ ತೋರಿಸಿಕೊಳ್ಳದೆ, ಉತ್ಸಾಹದಿಂದ, "ರಾಜಾ! ನೀನು ಕೇಳುವುದೇ ತಡ ಇಗೋ, ನಾನೇ ಅದಕ್ಕೆ ಸಿದ್ಧವಾಗಿದ್ದೇನೆ. ನಿನ್ನನ್ನು ತಪಸ್ಸಿಗೆ ಕರೆದುಕೊಂಡು ಹೋಗುವುದಕ್ಕಿಂತ ಬೇರೆ ಯಾವ ಪ್ರಿಯವಾದ ಕೆಲಸ ನನಗಿದೆ. ನೋಡು, ನಾನೇ ನಿನ್ನನ್ನು ತಪಸ್ಸಿಗೆ ಕರೆದುಕೊಂಡು ಹೋಗುತ್ತೇನೆ," ಎಂದು ಎದ್ದು ನಿಂತ. ಇದನ್ನು ಕೇಳಿದೊಡನೆ ಧೃತರಾಷ್ಟ್ರ ಕೂಡ ಮಂಚದಿಂದಿಳಿದು ಹೊರಡಲು ಸಿದ್ಧನಾಗಿ ನಿಂತ.

ಇಷ್ಟರಲ್ಲಿ, ಗಾಂಧಾರಿಯು ಧೃತರಾಷ್ಟ್ರನ ಭುಜವನ್ನು ಹಿಡಿದೆಳೆದು, "ನಾಥಾ! ಇಗೋ ನಾನೂ ಸಿದ್ಧವಾಗಿದ್ದೇನೆ; ನಿಮ್ಮೊಡನೆ ನಾನೂ ಬರುತ್ತೇನೆ," ಎಂದುದನ್ನು ಕೇಳಿ ಧೃತರಾಷ್ಟ್ರ ಬೇಡವೆಂದ. "ಹೆಂಗಸರನ್ನು ಅರಣ್ಯದಲ್ಲಿ ಕಾಪಾಡುವುದು ಬಹಳ ಕಷ್ಟ. ಅಲ್ಲಿ ಸದಾ ಕ್ರೂರ ಮೃಗಗಳ ಭಯಂಕರ ಕೂಗು ಕೇಳುತ್ತಿರಬೇಕಾಗುವುದು. ಇತರ ಅನೇಕ ಕಷ್ಟಗಳಿಗೂ ಗುರಿಯಾಗಬೇಕಾಗುವುದು," ಎಂದು ಎಷ್ಟೆಷ್ಟೋ ಹೇಳಿದ. ಆದರೂ, ಎಲ್ಲವನ್ನು ಕೇಳಿಯೂ ಕೇಳದವಳಂತೆ, ಗಾಂಧಾರಿ ತನ್ನ ಪತಿಯನ್ನಗಲಿ ಇರಲಾರೆನೆನ್ನುವ ನಿಲುವನ್ನು ಬಿಡಲಿಲ್ಲ. "ಪತಿಗೆ ಬರದ ಕಷ್ಟ ನನಗೆ ಬರುವುದೇನು? ಇಷ್ಟು ಕಾಲವೂ ನಾನು ಪತಿಯನ್ನು ಹೇಗೆ ಅನುಸರಿಸಿದೆನೋ, ಹಾಗೇ ಈ ವಿಷಯದಲ್ಲೂ ಅನುಸರಿಸುವುದು ನನ್ನ ಕರ್ತವ್ಯ. ಅದೇ ಭಾರತ ನಾರೀಮಣಿಯ ಸಹಜ ಧರ್ಮ. ನೀವು ಏನು ಹೇಳಿದರೂ ನಿಮ್ಮನ್ನು ಬಿಟ್ಟು ನಾನಿರುವುದಿಲ್ಲ. ನೀವಾದರೂ ಹೀಗೆ ಹೇಳುವುದು ಧರ್ಮವಲ್ಲ. ನೀವಿಲ್ಲದ ಅಂತಃಪುರದ ಸುಖಕ್ಕಿಂತ, ನಿಮ್ಮೊಡನಿದ್ದು ಅನುಭವಿಸುವ ಅರಣ್ಯದ ಕಷ್ಟಗಳೇ ನನಗೆ ಸರ್ವಸುಖ. ನನ್ನ ಮೇಲೆ ದಯೆತೋರಿ, ನಿಮ್ಮೊಡನೆ ಬರಲು ಅಪ್ಪಣೆಕೊಡಿ,"

ಎಂದು ಅಂಗಲಾಚುತ್ತಾ ಅವನ ಪಾದಗಳ ಮೇಲೆ ಬಿದ್ದಳು. ಧೃತರಾಷ್ಟ್ರನಿಗೆ ಮಾತನಾಡಲು ಅವಕಾಶ ಕೊಡದೆ, ವಿದುರ ತಾನೇ ಹೇಳಿದ, "ರಾಜಾ! ಇದು ವಾದ ಮಾಡುವ ಕಾಲವಲ್ಲ, ಧರ್ಮಾಧರ್ಮಗಳನ್ನು ನಿಶ್ಚಯಿಸುವ ಸಮಯವಲ್ಲ. ಇಷ್ಟುಕಾಲ ಒಂದು ನಿಮಿಷವೂ ನಿಮ್ಮನ್ನು ಬಿಟ್ಟಿರಲಾರದೆ ಜೊತೆಯಲ್ಲೇ ಇದ್ದ ಸಾಧ್ವೀಮಣಿ ಈಗ ಮಾತ್ರ ನಿಮ್ಮನ್ನು ಬಿಟ್ಟಿರುವಳೇನು? ಇದು ನ್ಯಾಯವಲ್ಲ. ಅವಳನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವುದೇ ಸೂಕ್ತ," ಎಂದ.

"ತಪಸ್ಸಿಗೆ ಹೊರಟವನಿಗೆ ಭಯ ಭ್ರಾಂತಿಗಳಾಗಲೀ, ಕಷ್ಟ ನಷ್ಟ, ಹಸಿವು ನೀರಡಿಕೆಗಳಾಗಲೀ ಅಡ್ಡಿ ಬರುವುದಿಲ್ಲ; ಅಡ್ಡಿ ಬರಬಾರದು. ಇವುಗಳಿಗೆ ಕಟ್ಟುಬಿದ್ದರೆ ತಪಸ್ಸು ಕೈಗೂಡುವುದಿಲ್ಲ. ದೇಹವನ್ನೇ ತ್ಯಾಗಮಾಡಲು ಸಿದ್ಧವಿರಬೇಕಾದಾಗ ಯಾರಾದರೂ ಕಷ್ಟ ನಷ್ಟಗಳ ವಿಚಾರ ಮಾಡುವರೇ? ಹೊರಡಿ, ಇನ್ನು ತಡ ಮಾಡುವುದು ತರವಲ್ಲ," ಎಂದು ಧೃತರಾಷ್ಟ್ರನ ಕೈ ಹಿಡಿದುಕೊಂಡು ಹೊರಟ. ಧೃತರಾಷ್ಟ್ರ ವಿದುರನನ್ನು ಹಿಂಬಾಲಿಸಿದ. ಧೃತರಾಷ್ಟ್ರನ ಭುಜವನ್ನು ಹಿಡಿದು ಗಾಂಧಾರಿ ಹೊರಟಳು. ಪರಮ ಭಕ್ತನೂ ಜ್ಞಾನಿಯೂ ಆದ ವಿದುರ ಅವರನ್ನು ಬಹಳ ಜಾಗರೂಕತೆಯಿಂದ, ಕಾವಲಿನವರ ಕಣ್ಣಿಗೂ ಪುರಜನರ ಕಣ್ಣಿಗೂ ಬೀಳದಂತೆ, ಹೆದ್ದಾರಿಗಳನ್ನು ಬಿಟ್ಟು, ಸಂದಿಗೊಂದಿಗಳಲ್ಲಿ ಕರೆದೊಯ್ದು ನಗರವನ್ನು ದಾಟಿಸಿದ. ಬೆಳಗಾಗುವುದರೊಳಗಾಗಿ ಅರಣ್ಯ ಸೇರಬೇಕೆಂದು ವಿದುರ ಆತುರಪಟ್ಟ. ಆದರೂ ನಡುವೆ ಗಂಗಾನದಿಯನ್ನು ದಾಟಬೇಕಾಗಿದ್ದುದರಿಂದ, ಆ ವೇಳೆಯಲ್ಲಿ ದೋಣಿ ನಡೆಸುವವರು ಇಲ್ಲದಿದ್ದುದರಿಂದ, ಬೆಳಗಾಗುವವರೆಗೂ ಅವರು ಗಂಗಾನದಿ ತೀರದಲ್ಲಿ ಇರಬೇಕಾಯಿತು. ಧೃತರಾಷ್ಟ್ರ ಗಾಂಧಾರಿಯನ್ನು ಮರಗಳ ಕೆಳಗೆ ವಿಶ್ರಮಿಸುವುದಕ್ಕೆ ಬಿಟ್ಟು, ವಿದುರ ದೋಣಿಯ ಏರ್ಪಾಟು ಮಾಡಲು ಹೊರಟ. ಬೆಳಕು ಹರಿಯುವುದರೊಳಗಾಗಿ ಅವರೆಲ್ಲರೂ ಗಂಗಾ ನದಿಯನ್ನು ದಾಟಿದರು.

# ೮ ಧೃತರಾಷ್ಟ್ರನ ಮನಃ ಪರಿವರ್ತನೆ

ವಿದುರನೂ ಧೃತರಾಷ್ಟ್ರ ಗಾಂಧಾರಿಯರೂ ಅರಣ್ಯವನ್ನು ಸೇರಿದರು. ವಿದುರ ತಪಸ್ಸಿಗೆ ಯೋಗ್ಯವಾದ ಸ್ಥಳ ಹುಡುಕಿ, ಧೃತರಾಷ್ಟ್ರ ಗಾಂಧಾರಿಗೆ ಸಾಧನಾಮಾರ್ಗ ಬೋಧಿಸುತ್ತಾ, ಪವಿತ್ರ ವಿಷಯಗಳ ಚಿಂತನೆಯಲ್ಲಿ ಕಾಲಕಳೆಯುತ್ತಿದ್ದ.

ಇತ್ತ ಹಸ್ತಿನಾಪುರದಲ್ಲಿ, ಧರ್ಮರಾಜ ಬೆಳಗಾಗುತ್ತಲೇ ಎದ್ದು, ಸ್ನಾನ ಸಂಧ್ಯಾದಿ ಕರ್ಮಗಳನ್ನಾಚರಿಸಿ, ಅಗ್ನಿಹೋತ್ರ ಮಾಡಿ, ನಿತ್ಯದಂತೆ ದಾನ ಧರ್ಮಾದಿಗಳನ್ನು ನೆರವೇರಿಸಿ, ವಾಡಿಕೆಯಂತೆ ತನ್ನ ದೊಡ್ಡಪ್ಪ ಧೃತರಾಷ್ಟ್ರನ ದರ್ಶನಕ್ಕಾಗಿ ಕಾಲ್ನಡಿಗೆಯಲ್ಲಿ ಹೊರಟು, ಧೃತರಾಷ್ಟ್ರ ಗಾಂಧಾರಿಯರು ವಾಸಿಸುತ್ತಿದ್ದ ಭವನವನ್ನು ತಲುಪಿದ.

ಹಾಸಿಗೆಯಲ್ಲಿ ದೊಡ್ಡಪ್ಪ ಧೃತರಾಷ್ಟ್ರನಾಗಲೀ ದೊಡ್ಡಮ್ಮ ಗಾಂಧಾರಿಯಾಗಲೀ ಇಲ್ಲದ್ದನ್ನು ಕಂಡು ಬಹುಶಃ ಕಾಲಕೃತ್ಯಗಳನ್ನು ತೀರಿಸಿಕೊಳ್ಳಲು ಹೋಗಿರಬಹುದು ಎಂದು ತಿಳಿದು, ಅವರನ್ನು ನಿರೀಕ್ಷಿಸುತ್ತಾ ಕುಳಿತ. ಸಾಮಾನುಗಳು ಅಲ್ಲಲ್ಲೇ ಇರುವುದನ್ನೂ, ಹಾಸಿಗೆ ಹಾಸಿದಂತೆಯೇ ದಿಂಬು ಇಟ್ಟಲ್ಲೇ ಇರುವುದನ್ನು ನೋಡಿ, ಅವರು ಎದ್ದಮೇಲೆ ಸೇವಕರು ಹಾಸಿಗೆ ಸರಿಪಡಿಸಿ ಹೋಗಿರಬಹುದೇನೊ ಎಂದುಕೊಂಡು, ಸ್ವಲ್ಪಹೊತ್ತು ಅತ್ತಿಂದಿತ್ತ ತಿರುಗುತ್ತಿದ್ದ. ಆದರೂ, ಏನೋ ಅನುಮಾನ ಅವನಿಗೆ. ಹಾಗೇ ವಿದುರ ಉಳಿದುಕೊಂಡಿದ್ದ ಭವನಕ್ಕೆ ಹೋಗಿ ಬರೋಣವೆಂದುಕೊಂಡು ಅಲ್ಲಿಗೆ ಹೋದ. ಅಲ್ಲಿ ವಿದುರನೂ ಇರಲಿಲ್ಲ. ಹಾಸಿದ್ದ ಹಾಸಿಗೆ ಹಾಗೇ ಇತ್ತು. ಮಲಗಿದ ಗುರುತೇ ಇರಲಿಲ್ಲ. ಅಲ್ಲಿಯ ಪರಿಚಾರಕರನ್ನು ಕೇಳಿದಾಗ, ರಾತ್ರಿ ಧೃತರಾಷ್ಟ್ರ ಮಹಾರಾಜರ ವಸತಿಗೆ ಹೋದ ಮಹರ್ಷಿ ಮತ್ತೆ ಬರಲೇ ಇಲ್ಲ ಎಂದರು. ಇದನ್ನು ಕೇಳಿದೊಡನೆ ಧರ್ಮಜನ ಎದೆ ಝುಲ್ಲೆಂದಿತು. ಮತ್ತೆ ಬೇಗ ಬೇಗ ಧೃತರಾಷ್ಟ್ರನ ಭವನಕ್ಕೆ ಹೋಗಿ, ಎಲ್ಲಾ ಕಡೆಯೂ ಚೆನ್ನಾಗಿ ಹುಡುಕಿ ನೋಡಿದಮೇಲೆ ಅಲ್ಲಿ ಯಾರೂ ಇಲ್ಲವೆನ್ನುವುದು ಖಚಿತವಾಯಿತು. ನಿಶ್ಚೇಷ್ಟಿತನಾಗಿ ಕುಳಿತು ಬಿಟ್ಟ, ಹುಚ್ಚನಂತೆ ಕೂಗತೊಡಗಿದ. ವಿದುರನನ್ನು ಕೂಗಿದ. ಆ ಕೂಗು ಕೇಳಿ ಅಲ್ಲಿದ್ದ ಸೇವಕರು, ಅಧಿಕಾರಿಗಳು ಗಾಬರಿಯಾದರು. ಏನು ಪ್ರಮಾದವಾಯಿತೋ ಎಂದು, ಎಲ್ಲರೂ, "ಏನು, ಮಹಾಪ್ರಭು?" ಎಂದು ಅವನ ಮುಂದೆ ಕೈಕಟ್ಟಿ ನಿಂತು ಅವನ ಆಜ್ಞೆಗಾಗಿ ಕಾಯುತ್ತಾ ನಿಂತರು.

ಇಷ್ಟರಲ್ಲಿ, ಸಂಜಯ ಆತುರಾತುರವಾಗಿ ಅಲ್ಲಿಗೆ ಬಂದ. ಧರ್ಮಜ ಅವನ ಕೈಗಳೆರಡನ್ನೂ ಹಿಡಿದುಕೊಂಡು, "ಸಂಜಯ, ನನ್ನ ತಾಯಿ ತಂದೆ ಎಲ್ಲಿ ಹೋದರು? ಅವರ ಶಯ್ಯಾಗೃಹ ಶೂನ್ಯವಾಗಿರುವುದನ್ನು ನೋಡಬೇಕಾಯಿತಲ್ಲಾ! ಇದಕ್ಕೇನು ಕಾರಣ ಸಂಜಯಾ? ನಿನ್ನ ಹತ್ತಿರ ಅವರು ಏನಾದರು ಹೇಳಿದ್ದರೇ? ಅವರು ಹೋದ ದಾರಿ ತಿಳಿದರೆ, ಹೋಗಿ ಅವರ ಪಾದಗಳನ್ನು ಹಿಡಿದು ಪ್ರಾರ್ಥಿಸಿ ಮತ್ತೆ ಕರೆತರುತ್ತೇನೆ. ನನ್ನ ಅಪರಾಧಗಳೇನಾದರೂ ಇದ್ದರೆ ಕ್ಷಮಿಸಿ ಎಂದು ಕೇಳಿಕೊಳ್ಳುತ್ತೇನೆ. ಹೇಳು ಸಂಜಯಾ ಬೇಗ ಹೇಳು," ಎಂದು ದೈನ್ಯನಾಗಿ, ಆವೇಶದಿಂದ ಕಣ್ಣೀರು ಸುರಿಸುತ್ತಾ ರೋದಿಸುತ್ತಿದ್ದ ಧರ್ಮಜನನ್ನು ನೋಡಿ, ಸಂಜಯ ದಿಗ್ಭ್ರಾಂತನಾಗಿ ಚಿಂತೆಯಲ್ಲಿ ಮುಳುಗಿದ. ಅವನಿಗೂ ಇದು ಬಗೆ ಹರಿಯದಾಯಿತು. ಆದರೆ, ಇದು ವಿದುರನ ಕಲಸವೇ ಎಂದು ಊಹಿಸಿದ. ತಾನೂ ಕಣ್ಣೀರು ಸುರಿಸುತ್ತಾ, ಗದ್ಗದ ಸ್ವರದಿಂದ ಧರ್ಮಜನ ಕೈಗಳನ್ನು ಹಿಡಿದು, "ಪ್ರಭೂ! ನೀವು ನನ್ನ ಮಾತು ನಂಬಬೇಕೆಂದು ಪ್ರಾರ್ಥಿಸುತ್ತೇನೆ. ನಿಜ ಹೇಳುತ್ತಿದ್ದೇನೆ. ಎಂಥ ಸಣ್ಣ ವಿಷಯವಾದರೂ, 'ಸಂಜಯ! ಏನು ಮಾಡೋಣವೆನ್ನುತ್ತೀ?' ಎಂದು ನನ್ನ ಸಲಹೆ ಪಡೆಯುತ್ತಿದ್ದ ಮಹಾರಾಜ. ಈ ವಿಷಯದಲ್ಲಿ ನನ್ನ ಹತ್ತಿರ ಕಿಂಚಿತ್ತೂ ಆಲೋಚನೆ ಮಾಡದೆ, ನನಗೆ ಏನೂ ವಿಷಯ ತಿಳಿಸದೆ, ಹೀಗೆ ಮಾಡಿರುವುದು ನನಗೇ ಪರಮಾಶ್ಚರ್ಯವಾಗುತ್ತಿದೆ. ನಾನೇನು ಹೇಳಲಿ? ಅವರ ಬಳಿಯೇ ಸದಾ ಇದ್ದರೂ ನನಗೆ ಏನೂ ತಿಳಿಸದೆ, ಅವರು ಹೀಗೆ ಮಾಡಲು ನಾನು ಮಾಡಿದ ಪಾಪವಾದರೂ ಏನು? ಮಹಾರಾಜ ನನಗೆ ಇಂಥ ಮೋಸಮಾಡುವನೆಂದು ಕನಸಿನಲ್ಲೂ ಎಣಿಸಿರಲಿಲ್ಲ. ಜೀವನ ಪರ್ಯಂತ ನನ್ನ ಮೇಲೆ ವಿಶ್ವಾಸ ಪ್ರೇಮಗಳನ್ನು ತೋರಿಸಿ ಕಡೆಗೆ ನನ್ನನ್ನು ಹೀಗೆ ವಂಚಿಸಿರುವುದು ನನ್ನ ಪಾಪದ ಫಲ," ಎಂದು ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತ. ಅವನ ದುಃಖವನ್ನು ನೋಡಿ, ಧರ್ಮರಾಜ, "ಸಂಜಯಾ! ಇದು ನಿಜವಾಗಿಯೂ ನನ್ನ ಪಾಪದ ಫಲವಲ್ಲದೆ ಮತ್ತೇನೂ ಅಲ್ಲ. ನಾವೆಷ್ಟು ದುರ್ಭಾಗ್ಯರೆನ್ನುವುದು ಇದರಿಂದಲೇ ತಿಳಿಯುವುದು. ಬಾಲಕರಾದ ನಮ್ಮನ್ನು ಬೆಳೆಸಿ ದೊಡ್ಡವರನ್ನಾಗಿ ಮಾಡಿದವರು ನಮ್ಮ ದೊಡ್ಡಪ್ಪ. ತಂದೆಯೂ ಅವರೇ ದೊಡ್ಡಪ್ಪನೂ ಅವರೇ ಎಂದು ಹೃದಯ ಪೂರ್ವಕವಾಗಿ ನಂಬಿ ಅವರ ಸೇವೆ ಮಾಡುತ್ತಿದ್ದೆವು. ಅವರ ಸೇವೆಯಲ್ಲಿ ನನ್ನಿಂದೇನು ಅಪರಾಧವಾಯಿತೋ ಏನೋ? ತಿಳಿದೂ, ತಿಳಿದೂ, ಬುದ್ಧಿಪೂರ್ವಕವಾಗಿ ನಾನು ಅವರಿಗೆ ಯಾವ ಅಪರಾಧವನ್ನೂ ಮಾಡಿಲ್ಲ. ನೂರು ಜನ ಮಕ್ಕಳನ್ನು ಕಳೆದುಕೊಂಡು ಶೋಕಾಗ್ನಿಯಲ್ಲಿ ಬೇಯುತ್ತಿರುವ ನನ್ನ ದೊಡ್ಡಪ್ಪ, ದೊಡ್ಡಮ್ಮನಿಗೆ ಸ್ವಲ್ಪವಾದರೂ ಶಾಂತಿ ದೊರೆಯಲೆಂದು, ಪುತ್ರಶೋಕ ಮರೆಸಲು ಎಂದು, ನಾನೂ ನನ್ನ ತಮ್ಮಂದಿರು ಒಂದೇ ಭಾವನೆಯಿಂದ, ಅವರಿಗೆ ಯಾವ ಕೊರತೆಯೂ

ಇಲ್ಲದಂತೆ, ನೋಡಿಕೊಳ್ಳುತ್ತಿದ್ದೇವೆ ವಿನಾ ಅವರನ್ನು ನಾವು ಯಾವ ವಿಧದಲ್ಲೂ ಅಲಕ್ಷ್ಯ ಮಾಡಿಲ್ಲ. ಆದ್ದರಿಂದ, ನಮ್ಮ ಮೇಲೆ ಹೀಗೆ ಸಿಟ್ಟಾಗಿ, ಏನೂ ತಿಳಿಸದೆ ಮನೆಬಿಟ್ಟು ಹೋಗಿರುವುದು ನಮ್ಮ ಪಾಪದ ಫಲ.

ನಮ್ಮ ದೊಡ್ಡಪ್ಪ, ದೊಡ್ಡಮ್ಮ ಇಬ್ಬರೂ ವೃದ್ಧರು. ಸಾಲದುದಕ್ಕೆ ಅವರು ಕುರುಡರು. ಅವರು ಮನೆಬಿಟ್ಟು ಹೋದದ್ದಾದರು ಹೇಗೋ ತಿಳಿಯದು. ಎಷ್ಟು ಬಾಧೆ ಪಡುತ್ತಿದ್ದಾರೋ ಏನೋ? ಒಬ್ಬ ಸೇವಕನೂ ಸಹ ಅವರ ಜೊತೆಗಿಲ್ಲ. ಎಷ್ಟು ಜನ ಸೇವಕರಿದ್ದರೇನು ಪ್ರಯೋಜನ? ದಾರಿಗಾಣದೆ ಗಂಗೆಯಲ್ಲೇನಾದರೂ ಬಿದ್ದರೋ? ಅಯ್ಯೋ! ನಾನೆಂಥ ದುರದೃಷ್ಟಶಾಲಿ! ಇಷ್ಟು ದಿನಗಳು ಕಣ್ಣು ರೆಪ್ಪೆಯಂತೆ ಅವರನ್ನು ಕಾಪಾಡಿ, ಕಡೆಗೆ ವೃದ್ಧಾಪ್ಯದಲ್ಲಿ ಇಂಥ ದುಸ್ಥಿತಿಗೆ ಗುರಿಮಾಡಿದೆನಲ್ಲಾ," ಎಂದು ತಲೆ ಬಡಿದುಕೊಂಡು ರೋದಿಸಿದ. ಅವನ ರೋದನ ತಮ್ಮಂದಿರಿಗೆ ಕೇಳಿಸಿತು. ಏನು ಪ್ರಮಾದವಾಯಿತೋ ಎಂದು ಎಲ್ಲೆಲ್ಲಿ ಇದ್ದವರು ಅಲ್ಲಲ್ಲಿಂದಲೇ ಹಕ್ಕಿಗಳಂತೆ ಅಣ್ಣನ ಬಳಿಗೆ ಧಾವಿಸಿ ಬಂದರು. ಕುಂತಿದೇವಿ ಕೂಡ ಕಾರಣ ತಿಳಿಯದೆ ಕಂಗಾಲಾಗಿ, "ಮಗೂ, ಏನಾಯಿತು?" ಎಂದು ಮಗನನ್ನು ತಬ್ಬಿಕೊಂಡು ಸಂತೈಸಿದಳು. ಆಚೆ ಈಚೆ ನೋಡಿ, ಎಲ್ಲೂ ಮೈದುನ ಧೃತರಾಷ್ಟ್ರನೂ ವಾರಗಿತ್ತಿ ಗಾಂಧಾರಿಯೂ ಇಲ್ಲದಿರುವುದನ್ನು ನೋಡಿ, ಅವರೆಲ್ಲೆಂದು ಸಂಜಯನನ್ನು ಪ್ರಶ್ನಿಸಿದಳು. ಅವನು ಉತ್ತರಿಸದೆ, ಗಟ್ಟಿಯಾಗಿ ಅಳಲಾರಂಭಿಸಿದ. ಅದೇ ಕಾರಣ ಇರಬೇಕೆಂದು ಊಹಿಸಿ, "ಅಯ್ಯೋ! ಈ ವಯಸ್ಸಿನಲ್ಲಿ ಅವರೆಲ್ಲಿಗೆ ಹೋದರು? ಹೋಗಲು ಕಾರಣವಾದರೂ ಏನು?" ಎಂದು ಆತಂಕದಿಂದ ಪರಿಚಾರಕರನ್ನೂ, ಇತರರನ್ನೂ ವಿಚಾರಿಸತೊಡಗಿದರು. ಯಾರನ್ನೂ ಕೇಳಿದರೂ ಅವರು ತಮಗೇನೂ ತಿಳಿಯದೆಂದು ಹೇಳುತ್ತಿದ್ದರು. ಇಷ್ಟರಲ್ಲಿ ಧರ್ಮಜ ತಮ್ಮಂದಿರನ್ನು ಹತ್ತಿರಕ್ಕೆ ಕರೆದು, ಬಾಯಲ್ಲಿ ಮಾತು ಹೊರಡದೆ, ಏನೇನೋ ಸಂಜ್ಞೆಮಾಡಿದ. ತಮ್ಮಂದಿರಿಗೆ ಅದೇನೂ ಅರ್ಥವಾಗಲೇ ಇಲ್ಲ. ಅಷ್ಟರಲ್ಲಿ, ತಾನೇ ಸ್ವಲ್ಪ ಧೈರ್ಯ ತಂದುಕೊಂಡು, ಕಣ್ಣೀರು ಸುರಿಸುತ್ತಾ, ನಡೆದ ಸಮಾಚಾರವನ್ನೆಲ್ಲಾ ತಿಳಿಸಿದ. ಅವರು ಕುರುಡರಾದ್ದರಿಂದ ಬಹಳ ದೂರ ಹೋಗಿರಲಾರರು. ದಾರಿ ತಪ್ಪಿ ಅಲ್ಲಿ ಇಲ್ಲಿ ಸುತ್ತುತ್ತಿರಬಹುದು. ಶೀಘ್ರವಾಗಿ ನಮ್ಮ ಪರಿವಾರದವರನ್ನು ಕಳಿಸಿ, ನಾಲ್ಕು ಮೂಲೆಗಳಲ್ಲೂ ಹುಡುಕಿರೆಂದು ಭೀಮನಿಗೆ ಆಜ್ಞಾಪಿಸಿದ.

ಅಣ್ಣನ ಆಜ್ಞೆಯಂತೆ ಭೀಮ, ನಕುಲ ಸಹದೇವರು ನಾಲ್ಕು ದಿಕ್ಕುಗಳಿಗೂ ಸೈನ್ಯ ಕಳಿಸಿದರು. ಬಾವಿ, ಕೆರೆ, ಕೊಳ, ಸಂದಿ ಗೊಂದಿ ಒಂದನ್ನೂ ಬಿಡದೆ ಅಡಿ ಅಡಿಯಲ್ಲೂ ಹುಡುಕಿದರು. ಎಲ್ಲೂ ಅವರ ಸುಳಿವೇ ಸಿಕ್ಕಲಿಲ್ಲ. ಗಂಗಾನದಿಯೇ ಅವರ ಶಾಶ್ವತ ನಿವಾಸವಾಯಿತೇನೋ ಎಂದು ನದಿಯ ದಡದಲ್ಲೆಲ್ಲಾ ಸುತ್ತಿ

ಸುತ್ತಿ, ನೀರಿನಲ್ಲಿ ಮುಳುಗಿ ಪತ್ತೆಹಚ್ಚುವವರನ್ನು ಸಹ ಕರೆಸಿ ಹುಡುಕಿಸಿದರು. ಅದೂ ಪ್ರಯೋಜನವಾಗಲಿಲ್ಲ. ಧೃತರಾಷ್ಟ್ರ ಗಾಂಧಾರಿಯರ ಸುಳಿವೇ ಎಲ್ಲೂ ಸಿಕ್ಕಲಿಲ್ಲ. ಪಾಂಡವರು ನಿರಾಶರಾಗಿ, ಅವರನ್ನು ಕಾಪಾಡಿಕೊಳ್ಳದಾದೆವಲ್ಲಾ ಎಂದು ಪರಿತಪಿಸುತ್ತಾ ಕಾಲ ಕಳೆಯುತ್ತಿದ್ದರು.

ಹೀಗಿರುವಲ್ಲಿ, ಅತ್ತ ಧೃತರಾಷ್ಟ್ರ ಗಾಂಧಾರಿಯರು ತಪೋವನದಲ್ಲಿ ಸುಖಾಸೀನರಾಗಿ ತಪಸ್ಸನ್ನಾಚರಿಸುತ್ತ, ನಿರಂತರವೂ ಪರಮಾತ್ಮ ಚಿಂತನೆಯಲ್ಲಿ ಹೃದಯವನ್ನು ಆನಂದಗೊಳಿಸಿ, ತನ್ಮಯರಾಗಿರುವಾಗ, ಒಂದು ದಿನ ಕಾಳ್ಗಿಚ್ಚು ವ್ಯಾಪಿಸುತ್ತಾ ಬಂದು ಅವರನ್ನು ಸುತ್ತುವರಿದು ಅವರ ಕಾಯಗಳನ್ನು ಸುಟ್ಟು ಭಸ್ಮಮಾಡಿತು. ವಿದುರನಿಗೆ ಪ್ರಭಾಸ ಕ್ಷೇತ್ರದಲ್ಲಿ ದೇಹತ್ಯಾಗ ಮಾಡಬೇಕೆಂಬ ಇಚ್ಛೆ ಇದ್ದುದರಿಂದ ಅವನು ದಾವಾಗ್ನಿಗೆ ಗುರಿಯಾಗದೆ, ಧೃತರಾಷ್ಟ್ರ ಗಾಂಧಾರಿಯರ ಸದ್ಗತಿಗೆ ಸಂತೋಷಪಟ್ಟು ಅಲ್ಲಿಂದ ತೀರ್ಥಯಾತ್ರೆ ಹೊರಟು, ಪ್ರಭಾಸ ಕ್ಷೇತ್ರವನ್ನು ಸೇರಿ, ಅಲ್ಲಿ ನಶ್ವರವಾದ ತನ್ನ ಭೌತಿಕ ದೇಹವನ್ನು ತ್ಯಜಿಸಿದ.

# ೯ ಕೃಷ್ಣನ ನಿಷ್ಕ್ರಮಣ

ದೊಡ್ಡಪ್ಪ ಧೃತರಾಷ್ಟ್ರ, ದೊಡ್ಡಮ್ಮ ಗಾಂಧಾರಿಯರ ವಿಯೋಗ ದುಃಖದಿಂದ ಪರಿತಪಿಸುತ್ತಿದ್ದ ಧರ್ಮಜನಿಗೆ, ಉಗುರು ಸಂದಿಯೊಳಗೆ ಸೂಜಿ ಚುಚ್ಚಿದಂತೆ, ರಾಜ್ಯಾದ್ಯಂತ ಅಶುಭವಾರ್ತೆಗಳೇ ಕೇಳಿಬರುತ್ತಿದ್ದುವು. ಎಲ್ಲಿ ನೋಡಿದರೂ ಅಪಶಕುನಗಳೇ, ಅವನ ಸುತ್ತುಮುತ್ತ ಧರ್ಮ ವಿರುದ್ಧ ನಡವಳಿಕೆಗಳೇ ಕಾಣುತ್ತಿದ್ದವು.

ಹೀಗಾಗಲು ಕಾರಣವೇನು ಎನ್ನುವ ಹೊಸ ಬಾಧೆಯೊಂದು ಧರ್ಮಜನ ಹೃದಯವನ್ನು ಕೊರೆಯತೊಡಗಿತು. ಅವನ ಮುಖ ದಿನದಿನಕ್ಕೆ ಕಳೆಗುಂದಿ, ಯಾವುದೋ ಚಿಂತೆ ಮುಖದ ಮೇಲೆ ತಾಂಡವಾಡುತ್ತಿದ್ದುದನ್ನು ಗಮನಿಸಿದ ಭೀಮ, ನಕುಲ ಸಹದೇವರು, ಧರ್ಮಜನ ಚಿಂತೆಗೆ ಕಾರಣ ತಿಳಿಯಲು ನಿಶ್ಚಯಿಸಿ, ಧರ್ಮಜನ ಬಳಿಗೆ ಬಂದು, ಕೈಜೋಡಿಸಿ ನಿಂತು, “ರಾಜಾ! ದಿನದಿನಕ್ಕೆ ನಿಮ್ಮ ತೇಜಸ್ಸು ಕಳೆಗುಂದುತ್ತಿದೆ. ಸದಾಕಾಲವೂ ನೀವು ಯಾವುದೋ ಚಿಂತೆಯಲ್ಲಿ ಮುಳುಗಿ ಕೃಶವಾಗುತ್ತಿರುವಿರಿ. ನಮ್ಮಿಂದೇನಾದರೂ ಅಚಾತುರ್ಯ ನಡೆದಿದೆಯೇ ತಿಳಿಸ

ಬೇಕು. ನಾವು ಮಾಡಿದ ತಪ್ಪನ್ನು ತಿಳಿಸಿದರೆ ತಿದ್ದಿಕೊಳ್ಳುತ್ತೇವೆ. ಮತ್ತೆ ಅಂಥ ತಪ್ಪು ನಮ್ಮಿಂದಾಗದಂತೆ ನೋಡಿಕೊಳ್ಳುತ್ತೇವೆ. ಅಥವಾ, ನಿಮ್ಮ ಚಿಂತೆಗೆ ಬೇರೆ ಏನೇ ಕಾರಣವಿದ್ದರೂ ಸರಿಯೆ, ಅದನ್ನು ನಿವಾರಿಸುತ್ತೇವೆ. ಅದಕ್ಕಾಗಿ ಪ್ರಾಣಾರ್ಪಣ ಮಾಡಲೂ ಸಿದ್ಧರಿದ್ದೇವೆ. ನಿಮ್ಮ ಆಜ್ಞೆಯನ್ನು ಶಿರಸಾ ವಹಿಸಿ ನಡೆಸಲು ಸಿದ್ಧರಾಗಿರುವ ವೀರಾಧಿವೀರ ಸೋದರರು ನಿಮಗಿರುವಾಗ, ನೀವು ಹೀಗೆ ಯೋಚಿಸುವುದು ತರವಲ್ಲ. ಚಿಂತೆಯ ಕಾರಣ ತಿಳಿಸಿ, ನಮ್ಮ ಕರ್ತವ್ಯ ಏನೆಂದು ಆಜ್ಞೆ ಮಾಡಿ," ಎಂದು ಪ್ರಾರ್ಥಿಸಿದರು.

ಅದಕ್ಕೆ ಧರ್ಮಜ, "ಸೋದರರೇ! ನಾನೇನು ಹೇಳಲಿ. ನನಗೆ ಎಲ್ಲಿ ನೋಡಿದರೂ ಅಶುಭಗಳೇ ಕಾಣುತ್ತಿದೆ. ಮನೆಯಿಂದ ಹಿಡಿದು, ಮಹನೀಯರುಗಳ, ಋಷಿಗಳ ಆಶ್ರಮದವರೆಗೆ, ಪ್ರತಿ ಸ್ಥಳವೂ ಶ್ರೀ ಹೀನವಾಗಿ, ಆನಂದರಹಿತವಾಗಿ ಕಾಣುತ್ತಿದೆ. ಇದು ನನ್ನ ಮನೋವಿಕಾರ ಇರಬಹುದೆಂದು ಎಷ್ಟೋ ಸಮಾಧಾನ ತಂದುಕೊಂಡರೂ ಮರೆಯಲು ಎಷ್ಟೇ ಪ್ರಯತ್ನಿಸಿದರೂ ಅವು ಬಿಡದೆ, ನನ್ನ ಪ್ರಯತ್ನಕ್ಕೆ ಜಗ್ಗದೆ, ನನ್ನನ್ನು ಮತ್ತಷ್ಟು ಬಿಗಿಯಾಗಿ ಬಂಧಿಸುತ್ತಿದೆ.

ಅದಕ್ಕೆ ತಕ್ಕಹಾಗೆ, ಕೆಲವು ಧರ್ಮವಿರುದ್ಧವಾದ ನಡವಳಿಕೆಗಳು ನನ್ನ ಕಣ್ಣಿಗೆ ಬಿದ್ದವು. ಕೇವಲ ನಾನು ನೋಡಿದ್ದಷ್ಟೇ ಅಲ್ಲ. ಎಷ್ಟೋ ನೋಡಬಾರದ, ಕೇಳಬಾರದ ಅನ್ಯಾಯ, ಅಕ್ರಮ, ಅನಾಚಾರಗಳು ನಮ್ಮ ನ್ಯಾಯಾಸ್ಥಾನಕ್ಕೆ ವಿಚಾರಣೆಗೆ ಬಂದಿದೆಯೆಂದೂ ಕೇಳಿದೆ. ನಾನು ಕೆಲವು ತೀರಾ ವಿಚಿತ್ರ ದೃಶ್ಯಗಳನ್ನೂ ನೋಡಿದೆ. ನಿನ್ನೆ ಸಂಜೆ ವಿಹಾರಾರ್ಥವಾಗಿ ಹೋಗಿ ಹಿಂದಿರುಗುತ್ತಿದ್ದಾಗ, ಒಂದು ಹಸು ಕರುಹಾಕಿದ ದೃಶ್ಯ ನೋಡಿದೆ. ಕರು ಹಾಕಿದ ಸ್ವಲ್ಪ ಹೊತ್ತಿನಮೇಲೆ ಎಳೆಗರು ಹಸುವಿನ ಕೆಚ್ಚಲಿನಿಂದ ಹಾಲು ಕುಡಿಯುವುದು ಸಹಜ. ಆದರೆ ಹಸುವೇ ಕರುವಿನ ಕೆಚ್ಚಲಿಗೆ ಬಾಯಿ ಹಾಕಿದ್ದನ್ನು ನೋಡಿದೆ. ಅಲ್ಲಿಂದ ಹಾಗೇ ರಾಜಬೀದಿಯಲ್ಲಿ ಬರುತ್ತಿದ್ದಾಗ, ಕೆಲವು ಸ್ತ್ರೀಯರು ಲಜ್ಜಾಹೀನರಾಗಿ ಪೇಟೆಯಲ್ಲಿ ಓಡಾಡುತ್ತಿದ್ದುದನ್ನು ಕಂಡೆ. ನನ್ನನ್ನು ನೋಡಿದ ಮೇಲಾದರೂ ಒಳಗೆ ಹೋಗುವರೇನೋ ಎಂದುಕೊಂಡೆ. ಇಲ್ಲ, ನನ್ನನ್ನು ನೋಡಿದರೂ ಒಳಗೆ ಹೋಗಲಿಲ್ಲ. ನನ್ನ ಭಯವೂ ಇಲ್ಲದೆ, ಗಂಡಸರೊಂದಿಗೆ ಸ್ವೇಚ್ಛೆಯಾಗಿ ಮಾತನಾಡಿಕೊಂಡು ಹೋಗುತ್ತಿದ್ದುದನ್ನು ಕಣ್ಣಾರೆ ನೋಡಿದೆ. ಹಾಗೇ ಇನ್ನೂ ಸ್ವಲ್ಪ ದೂರ ಹೋದೆ.

ನಮ್ಮ ರಾಜಭವನದ ಅತೀ ಸಮೀಪದಲ್ಲಿ ಒಬ್ಬ ಬ್ರಾಹ್ಮಣ ಹಾಲು, ಮೊಸರು ಮಾರುತ್ತಿದ್ದುದನ್ನು ನೋಡಿದೆ. ಕೆಲವು ಮನೆಗಳ ಬಾಗಿಲನ್ನು ಮುಚ್ಚಿದ್ದು, ಬಾಗಿಲಿಗೆ ವಿಚಿತ್ರವಾದೊಂದು ಕಬ್ಬಿಣದ ಉಪಕರಣ (ಚಿಲಕ) ಹಾಕಿದ್ದುದನ್ನು ನೋಡಿದೆ.

ಇವೆಲ್ಲವೂ ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮ ಮಾಡಿದವು. ನನ್ನನ್ನು ಚಿಂತೆಗೆ ಗುರಿಮಾಡಿದವು. ಈ ಚಿಂತೆ ದೂರ ಮಾಡಬೇಕೆಂದು ಪ್ರಯತ್ನಿಸಿದೆ. ಸಂಜೆ ಸಂಧ್ಯಾವಂದನೆಯ ಸಮಯದಲ್ಲಿ ಅಗ್ನಿಕಾರ್ಯದ ನಿಮಿತ್ತವಾಗಿ ಸಮಿತ್ತುಗಳನ್ನು ಹಾಕಿ ಎಷ್ಟು ಗಾಳಿ ಬೀಸಿದರೂ ಅಗ್ನಿ ಉತ್ಪನ್ನವಾಗಲೇ ಇಲ್ಲ.

ಇಂಥ ವೈಪರೀತ್ಯಗಳು ಯಾವುದೋ ವಿನಾಶಕ್ಕೇ ಎನ್ನುವ ಸಂಶಯ ನನ್ನಲ್ಲಿ ನಿಮಿಷ ನಿಮಿಷಕ್ಕೂ ಬಲಪಡುತ್ತಾ ನನ್ನ ಚಿಂತೆಯೂ ಹೆಚ್ಚತೊಡಗಿದೆ. ಎಷ್ಟು ಪ್ರಯತ್ನಿಸಿದರೂ ತಡೆಯಲು ಸಾಧ್ಯವಾಗುತ್ತಿಲ್ಲ. ಕಲಿ ಪ್ರವೇಶವಾಗಿದೆಯೋ ಅಥವಾ ಆಗುವುದರ ಸೂಚನೆಯೋ ಎನ್ನುವಂತಿದೆ ಇವೆಲ್ಲಾ. ಹಾಗಲ್ಲದಿದ್ದರೆ, ಧರ್ಮರಾಜ್ಯದಲ್ಲಿ, ಗಂಡನೊಂದಿಗೆ ಹೆಂಡತಿ ಜಗಳವಾಡಿ, ಅವನನ್ನು ಬಿಟ್ಟು ತಾನು ತೌರುಮನೆಗೆ ಹೋಗುತ್ತೇನೆಂದು ನ್ಯಾಯಾಸ್ಥಾನದಲ್ಲಿ ಒಬ್ಬ ಸ್ತ್ರೀ ವಾದಿಸುವುದು ಎಷ್ಟು ವಿಚಿತ್ರ! ನಿನ್ನೆಯ ದಿನ ಇಂಥ ಒಂದು ತಕರಾರು ನ್ಯಾಯಾಸ್ಥಾನಕ್ಕೆ ಬಂದಿತೆಂದು ಕೇಳಿದೆ.

ಕೇಳಬಾರದ ಇಂಥ ಸುದ್ದಿಯನ್ನು ಕೇಳಿಯೂ, ಕಾಣಬಾರದ ಇಂಥ ದೃಶ್ಯವನ್ನು ಕಂಡೂ ಚಿಂತಿಸದೆ ಇರುವುದು ಸಾಧ್ಯವಾಗದ ಕೆಲಸ. ಅಷ್ಟೇಕೆ ನಿನ್ನೆ ದಿನ ಅಶ್ವಶಾಲೆಯಲ್ಲಿ ಕುದುರೆಗಳೆಲ್ಲಾ ಕಣ್ಣೀರು ಹಾಕುತ್ತಿದ್ದುವಂತೆ. ಆ ದೃಶ್ಯವನ್ನು ಕಂಡ ಸೇವಕರು ಅತ್ಯಂತ ಆಶ್ಚರ್ಯದಿಂದ ಸಹದೇವನ ಬಳಿ ಬಂದು ಬಿನ್ನವಿಸಿಕೊಂಡ ರಂತೆ. ಸಹದೇವನು ಹೋಗಿ ಎಷ್ಟು ವಿಧವಾಗಿ ವಿಚಾರಿಸಿದರೂ ಅವುಗಳ ದುಃಖಕ್ಕೆ ಕಾರಣ ತಿಳಿಯದೆ ಹೋಗಲು, ಅವನೂ ಆಶ್ವರ್ಯ ಪಟ್ಟನಂತೆ. ಇವೆಲ್ಲವೂ ವಿನಾಶಕಾಲದ ಚಿಹ್ನೆಗಳೇ ಹೊರತು ಮನೋವಿಕಾರವಲ್ಲವೆಂದು ಧೃಡವಾಗುತ್ತಿವೆ," ಎಂದು ಧರ್ಮಜ ಆಲೋಚನಾಪರನಾಗಿ ಗಲ್ಲದ ಮೇಲೆ ಕೈಯಿಟ್ಟು ಕುಳಿತುದನ್ನು ನೋಡಿ ಭೀಮ ಗಹಗಹಿಸಿ ನಕ್ಕು, "ರಾಜಾ! ನೀವು ಹೇಳುವ ಅಶುಭಗಳು, ಅನ್ಯಾಯ ಅಕ್ರಮಗಳು, ಅನಾಚಾರ ಅಧರ್ಮಗಳು ನಿಜವೇ ಇರಬಹುದು. ಆದರೆ ನಮಗೇನು ಇದರಿಂದ ಹಾನಿ? ರಾಜ್ಯಾಡಳಿತ ಬಿಗಿ ಪಡಿಸಿ ಕೆಲವು ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿಮಾಡಿದರಾಯಿತು, ಇವುಗಳನ್ನು ತಡೆಯಬಹುದು. ಇದಕ್ಕೇ ನೀವು ಇಷ್ಟು ಚಿಂತಾಕ್ರಾಂತರಾಗುವುದು ತುಂಬಾ ಆಶ್ಚರ್ಯವಾಗಿದೆ. ಹೋಗಲಿ, ಮತ್ತೇನಾದರು ಮಹಾ ಯುದ್ಧ ನಡೆದು ತಿರುಗಿ ರಾಜ್ಯ ಕಳೆದುಕೊಳ್ಳುವೆವೇನೋ ಎಂದರೆ ಅದಕ್ಕೆ ಎಳ್ಳಷ್ಟು ಅವಕಾಶವಿಲ್ಲ. ಏಕೆಂದರೆ ನಮಗಿದ್ದ ಶತ್ರುಗಳೆಲ್ಲಾ ನಿರ್ನಾಮವಾಗಿದ್ದಾರೆ. ಈಗ ಶತ್ರುಗಳೂ ಮಿತ್ರರೂ ಸೋದ ರರೂ ಎಲ್ಲಾ ನಾವೇ ಈ ಐದು ಜನ. ಇನ್ನು ನಮ್ಮ ಐವರಲ್ಲಿ ಏನಾದರೂ ಕಲಹ ಸಂಭವಿಸುವುದೇನೊ ಎಂದರೆ, ಅದು ಕನಸಿನಲ್ಲೂ ಅಸಾಧ್ಯ, ಆಗದು. ಅಂದಮೇಲೆ

ನೀವು ಚಿಂತಿಸಲು ಏನು ಕಾರಣ ಎನ್ನುವುದೇ ನನಗೆ ತಿಳಿಯುತ್ತಿಲ್ಲ. ಇಂಥ ಅಲ್ಪ ವಿಚಾರಗಳಿಗೆ ನೀವು ಇಷ್ಟೊಂದು ಯೋಚಿಸುವುದು ಹಾಸ್ಯಾಸ್ಪದ," ಎಂದು ಗದೆಯನ್ನು ಆ ಕೈಯಿಂದ ಈ ಕೈಗೆ ಬದಲಾಯಿಸಿಕೊಂಡು ಸುಮ್ಮನಾದ.

ಆಗ, ಧರ್ಮಜ, "ತಮ್ಮಾ! ನಿನಗಿರುವ ವಿವೇಕ, ವಿಚಾರ ಶಕ್ತಿ ನನಗೆ ಇಲ್ಲದೆ ಹೋಗಿಲ್ಲ. ನೀನು ಹೇಳಿದ ಹಾಗೆ, ಶತ್ರು ಭಯ ಎಷ್ಟು ಮಾತ್ರಕ್ಕೂ ನನಗಿಲ್ಲ. ಒಂದೇ ಒಂದು ಅಸ್ತ್ರದಿಂದ ಮೂರುಲೋಕಗಳನ್ನೂ ಭಸ್ಮ ಮಾಡುವ ಶಕ್ತಿ ಸಾಮರ್ಥ್ಯ ಹೊಂದಿದ ಭೀಷ್ಮ ದ್ರೋಣಾದಿಗಳನ್ನೇ ಜಯಿಸಿದ ನಮಗೆ, ಬೇರೆ ಶತ್ರುಗಳು ಏನುತಾನೆ ಮಾಡಬಲ್ಲರು? ಶತ್ರು ಭಯಕ್ಕೆ ಅವಕಾಶವೇ ಇಲ್ಲ. ಇನ್ನು, ಸಹಿಸಲಸಾಧ್ಯವಾದ ಸೋಲಿನ ಸಮಯದಲ್ಲೇ ನಮ್ಮ ಐವರಲ್ಲಿ ಭಿನ್ನಾಭಿಪ್ರಾಯ, ದ್ವೇಷ ಬಾರದಿದ್ದುದು ಈಗ ಹೇಗೆ ಬಂದೀತು? ಅಥವಾ, ನನಗೇನಾದರೂ ಅನಿಷ್ಟ ಸಂಭವಿಸುವುದೆಂದು ಯೋಚಿಸುತ್ತಿರುವೆನೆಂದು ತಿಳಿದೆಯೇನು? ಛೆ! ಅಂಥ ತುಚ್ಛಭ್ರಾಂತಿ ನನಗೆಂದಿಗೂ ಇಲ್ಲ. ಪಾಂಚಭೌತಿಕವಾದ ಈ ನೀರ್ಗುಳ್ಳೆಯಂಥ ದೇಹ ಎಂದಾದರೊಂದು ದಿನ ನಶಿಸುವುದು, ಮಣ್ಣು ಪಾಲಾಗುವುದೇ. ಇದರ ಚಿಂತೆ ನಾನೆಂದೂ ಮಾಡೆ. ನನಗೆ ಇರುವ ಚಿಂತೆಯೆಲ್ಲಾ ಒಂದೇ ಒಂದು. ಅದನ್ನು ಮರೆಮಾಚದೆ ಹೇಳುತ್ತೇನೆ ಕೇಳು. ಅರ್ಜುನ ದ್ವಾರಕೆಗೆ ಹೋಗಿ ಇಂದಿಗೆ ಸುಮಾರು ಏಳು ತಿಂಗಳಾಯಿತು. ದ್ವಾರಕೆಯಿಂದ ವಾಸುದೇವನ ಯೋಗಕ್ಷೇಮ ಇದುವರೆಗೂ ಏನೂ ತಿಳಿಯಲೇ ಇಲ್ಲ. ಅರ್ಜುನನಾದರೂ ದ್ವಾರಕೆಗೆ ತಲುಪಿದ್ದಕ್ಕೆ ದೂತರಿಂದ ವಾರ್ತೆ ಕಳಿಸಲಿಲ್ಲ. ಇದಾದರೂ ನನ್ನನ್ನು ಅಷ್ಟೊಂದು ನನ್ನನ್ನು ಬಾಧಿಸುತ್ತಿಲ್ಲ. ಏಕೆಂದರೆ ಅರ್ಜುನನನ್ನು ಎದುರಿಸುವವರು ಯಾರೂ ಇಲ್ಲವೆನ್ನುವುದು ನನಗೆ ಗೊತ್ತು. ಹಾಗೂ ಅರ್ಜುನನಿಗೇನಾದರೂ ಅಶುಭ, ತೊಂದರೆ ಸಂಭವಿಸಿದ್ದರೆ ವಾಸುದೇವ ತಿಳಿಸುತ್ತಿದ್ದ. ಆದ್ದರಿಂದ, ಅರ್ಜುನನಿಗೇನೂ ಅಪಾಯ ಸಂಭವಿಸಿಲ್ಲ ಎನ್ನುವುದು ನನಗೆ ಗೊತ್ತು. ಆದರೆ, ವಾಸುದೇವನ ಯೋಗಕ್ಷೇಮದಲ್ಲಿ ಮಾತ್ರ ನನಗೆ ದಿನದಿನಕ್ಕೂ ಅನುಮಾನ ಹೆಚ್ಚುತ್ತಿದೆ. ಏಕೋ ಏನೋ ಹೃದಯ ಸಹಿಸಲು ಆಗದ ಆತಂಕದಿಂದ ಪರಿತಪಿಸುತ್ತಿದೆ. ನಿಜ ಹೇಳಬೇಕೆಂದರೆ, ವಾಸುದೇವ ಈ ಲೋಕವನ್ನೇ ತ್ಯಜಿಸಿದನೋ ಎನ್ನುವ ಅನುಮಾನ ಬಲವಾಗಿ ನನ್ನನ್ನಾವರಿಸಿದೆ. ಇದಕ್ಕಿಂತ ಹೆಚ್ಚಿನ ಬೇರೆ ಚಿಂತೆ ಯಾವುದಿದೆ? ಹಾಗೇನಾದರೂ ಆಗಿದ್ದರೆ, ತ್ರಿಲೋಕನಾಥನನ್ನು ಕಳೆದುಕೊಂಡ ಈ ವಿಧವೆ ದೇಶದಲ್ಲಿ ನಾನೊಂದು ನಿಮಿಷವೂ ಇರುವುದಿಲ್ಲ. ಈ ಪಾಂಡವರಿಗೆ ಪಂಚಪ್ರಾಣ ಆ ವಾಸುದೇವ. ಅವನಿಲ್ಲದೆ ದೇಹ ಶವ ಸಮಾನ. ವಾಸುದೇವ ಈ ಲೋಕ ಬಿಡದೆ ಹೋಗಿದ್ದರೆ, ಆ ಅಶುಭಗಳೆಲ್ಲಾ ಇಷ್ಟು ಸ್ವೇಚ್ಛೆಯಾಗಿ ಹೊರಬರುತ್ತಿರಲಿಲ್ಲ. ಈ ಅನ್ಯಾಯ, ಅಕ್ರಮ,

ಅನಾಚಾರ, ಅಧರ್ಮಗಳಿಗೆ ಇಷ್ಟೊಂದು ಸ್ವಾತಂತ್ರ್ಯ ಲೋಕದಲ್ಲಿ ಲಭಿಸಬೇಕೆಂದೇ ಅವನು ಈ ಲೋಕ ಬಿಟ್ಟು ಹೋಗಿರಬೇಕು! ಇದು ನಿಸ್ಸಂಶಯ. ಇದಕ್ಕೆ ನನ್ನ ಹೃದಯವೇ ಸಾಕ್ಷಿ," ಎಂದು ಧರ್ಮಜ ತನ್ನ ಸ್ಪಷ್ಟ ಅಭಿಪ್ರಾಯ ತಿಳಿಸಿದೊಡನೆಯೇ ತಮ್ಮಂದಿರ ಮುಖಗಳು ಬಾಡಿದವು. ಧೈರ್ಯ ಕುಗ್ಗಿತು.

ಈ ಮಾತುಗಳನ್ನು ಕೇಳಿದ ಭೀಮನಿಗೆ ಚಿಂತೆ ಬಾಧಿಸಲಾರಂಭಿಸಿದ್ದರೂ ಧೈರ್ಯ ತಂದುಕೊಂಡು, "ಅಣ್ಣಾ! ಅರ್ಜುನ ಬಾರದಿದ್ದ ಮಾತ್ರಕ್ಕೆ, ಯೋಗಕ್ಷೇಮ ತಿಳಿಸ ದಿದ್ದ ಮಾತ್ರಕ್ಕೆ, ನೀವು ಇಂಥ ಊಹಾಪೋಹಗಳಿಗೆ ಅವಕಾಶವಿತ್ತು, ಚಿಂತಿಸುವುದು ತರವಲ್ಲ. ಯಾವುದೋ ಕಾರಣದಿಂದ ನಮಗೆ ವಾರ್ತೆ ಬರದಿರಬಹುದು. ಸತ್ಯಸಂಗತಿ ಹಾಗಿದ್ದರೆ ಮಾತ್ರ ಚಿಂತಿಸಬೇಕೇ ಹೊರತು, ನಿಮ್ಮಲ್ಲಿ ನೀವೇ ಊಹಿಸಿ ಕೊಂಡು, ಅದೇ ನಿಜವೆಂದು ಭ್ರಮಿಸುವುದು ಅಷ್ಟು ಸಮಂಜಸವಲ್ಲ," ಎಂದ. ಅದಕ್ಕೆ ಧರ್ಮಜ, "ಭೀಮಾ! ನೀನೇನು ಹೇಳಿದರೂ ಏನು ಮಾಡಿದರೂ ನನ್ನ ಅಭಿಪ್ರಾಯವೇ ಸತ್ಯ. ಇಲ್ಲದಿದ್ದರೆ ನನ್ನ ಸ್ಥಿತಿ ಹೀಗಾಗುವುದಿಲ್ಲ. ನನ್ನ ಎಡ ಪಾರ್ಶ್ವ ಅದುರುತ್ತಿದೆ. ಪುರುಷರಿಗೆ ಎಡ ಭಾಗವೂ ಸ್ತ್ರೀಯರಿಗೆ ಬಲ ಭಾಗವೂ ಅದುರುವುದು ಅಶುಭ ಲಕ್ಷಣ. ನನ್ನ ದೇಹವೊಂದೇ ಅಲ್ಲ, ಬುದ್ಧಿ, ಮನಸ್ಸು, ಸರ್ವೇಂದ್ರಿಯಗಳೂ ಕೂಡ ಅದುರುತ್ತಿವೆ. ಕಣ್ಣು ಮಂಜಾಗುತ್ತಿವೆ. ಲೋಕವು ನಾಥನನ್ನು ಕಳೆದುಕೊಂಡಂತೆ ಕಾಣುತ್ತಿದೆ. ಕಿವಿಗಳು ಕೇಳಿಸುತ್ತಿಲ್ಲ. ಕಾಲುಗಳು ಅದುರುತ್ತಿವೆ. ಅಷ್ಟೇಕೆ, ಯಾವ ಅಂಗಗಳು ಏನೇನು ಕೆಲಸ ಮಾಡಬೇಕೋ ಆಯಾ ಕೆಲಸಗಳನ್ನು ಅವು ಮಾಡದಾಗಿದೆ; ನಿರ್ಜೀವವಾಗಿವೆ. ಇದಕ್ಕಿಂತ ಬೇರೆ ನಿದರ್ಶನವೇನು ಬೇಕು?

ನೀವು ನನ್ನ ಮಾತು ನಂಬಿದರೂ ಸರಿ, ಬಿಟ್ಟರೂ ಸರಿ, ಸತ್ಯ ವ್ಯತ್ಯಾಸವಾಗುವು ದಿಲ್ಲ. ನಿಂತ ನೆಲ ಅಲುಗುತ್ತಿದೆ. ಭೂಮಿಯೊಳಗಿಂದ ಯಾವುದೋ ವಿಚಿತ್ರವಾದ ಭಯಂಕರ ಶಬ್ದ ಕೇಳಿಬರುತ್ತಿದೆ. ನಕ್ಷತ್ರಗಳು ರೋದಿಸುತ್ತಿವೆ. ಸರೋವರದ ನೀರು ಸಮುದ್ರದ ಅಲೆಗಳಂತೆ ಎದ್ದು ಅಲ್ಲೋಲಕಲ್ಲೋಲವಾಗುತ್ತಿದೆ. ಪ್ರಕೃತಿಯಲ್ಲಿ ಪಂಚಭೂತಗಳೂ ತಮ್ಮ ಒಡೆಯನನ್ನು ಕಳೆದುಕೊಂಡ ದುಃಖದಲ್ಲಿ ಮುಳುಗಿ ಹೋದಂತೆ ಕಾಣುತ್ತಿದೆ. ಇನ್ನೆಷ್ಟು ನಿದರ್ಶನಗಳು ಬೇಕು? ಇದಕ್ಕೆ ಮೊದಲು, ದೇಶದ ಕೆಲವು ಪ್ರದೇಶಗಳಲ್ಲಿ ರಕ್ತದ ಮಳೆ ಹನಿಗಳು ಬಿದ್ದವೆಂದು ದೂತರಿಂದ ವಾರ್ತೆ ಬಂದಿತಂತೆ," ಎಂದು ಸ್ವಲ್ಪವೂ ಅನುಮಾನವಿಲ್ಲದೆ ಹೇಳುತ್ತಿದ್ದುದನ್ನು ಕೇಳಿ, ನಕುಲ, ಸಹದೇವ, ಭೀಮರ ಕಣ್ಣುಗಳಲ್ಲಿ ಅವರಿಗರಿವಿಲ್ಲದಂತೆಯೇ ತಾನೇ ತಾನಾಗಿ ಕಣ್ಣೀರು ಸುರಿಯತೊಡಗಿತು. ಅವರ ಎದೆ ಝುಗ್ಗೆಂದಿತು. ಕಾಲುಗಳು ಅದುರಿದವು.

ಭೀಮ ಹೇಗೋ ಧೈರ್ಯ ತಂದುಕೊಂಡು, "ಅಣ್ಣಾ! ನಿಮ್ಮ ಅಪ್ಪಣೆಯಾದರೆ, ಈ ಕ್ಷಣವೇ ಹೊರಟು, ದ್ವಾರಕೆಗೆ ಹೋಗಿ ಎಲ್ಲ ಸಮಾಚಾರವನ್ನು ತಿಳಿದುಕೊಂಡು, ಬೇಗನೆ ಹಿಂತಿರುಗುತ್ತೇನೆ," ಎಂದು ಹೊರಡಲು ಅಪ್ಪಣೆ ಕೋರುತ್ತಿರುವಂತೆ ಸೂರ್ಯನೂ ಅಸ್ತಮಿಸಿದ. ಭವನದಲ್ಲಿ ಅಲ್ಲಲ್ಲೇ ದೀಪಗಳು ಬೆಳಗತೊಡಗಿದವು.

# ೧೦ ಕೃಷ್ಣ ಮಾಯೆ

ಅಷ್ಟರಲ್ಲಿ, ದ್ವಾರಪಾಲಕರು ಓಡಿ ಬಂದು ಅರ್ಜುನ ಪ್ರಭುಗಳು ದಯಮಾಡಿಸುತ್ತ ಇರುವರೆಂದು ಬಿನ್ನವಿಸಿದರು. ಹೋದ ಪ್ರಾಣ ಬಂದಂತಾಗಿ, ಎಲ್ಲರೂ ಆತುರ ಆತುರವಾಗಿ ಎದ್ದು, ದ್ವಾರಕೆಯ ಸಮಾಚಾರ ಕೇಳುವ ಕುತೂಹಲದಿಂದ ಧಾವಿಸಿದರು. ಅರ್ಜುನ ಅರಮನೆ ಪ್ರವೇಶಿಸಿ, ಕಳೆಗುಂದಿದ ಮುಖದಿಂದ, ಆನಂದ ರಹಿತನಾಗಿ, ಮುಖ ತೋರಿಸದೆ ಬಂದು ಧರ್ಮಜನ ಪಾದಗಳಲ್ಲಿ ಬಿದ್ದನು. ಧರ್ಮಜ ತನ್ನ ಅನುಮಾನ ಬಲಪಡುವ ಚಿಹ್ನೆಗಳೇ ಅರ್ಜುನನಲ್ಲಿ ಕಾಣುತ್ತಿದ್ದುದನ್ನು ಗಮನಿಸಿ, ಆಲೋಚನಾಪರನಾಗಿ, ಆತಂಕದಿಂದ, ದ್ವಾರಕೆಯ ತನ್ನ ಬಂಧು ಮಿತ್ರರ ಕ್ಷೇಮ ಸಮಾಚಾರ ವಿಚಾರಿಸಿದ. ಅಣ್ಣನ ಪಾದಗಳ ಮೇಲೆ ಬಿದ್ದ ಅರ್ಜುನ ಏಳಲೇ ಇಲ್ಲ. ಅವನ ಕಣ್ಣೀರ ಪ್ರವಾಹ ಅಣ್ಣನ ಪಾದಗಳ ಮೇಲೆ ಧಾರಾಕಾರವಾಗಿ ಹರಿಯುತ್ತಿದ್ದುದನ್ನು ನೋಡಿ ಮಿಕ್ಕ ತಮ್ಮಂದಿರ ಅನುಮಾನ ಬಲಗೊಂಡಿತು. ಕಲ್ಲಿನಂತೆ ಕದಲದೆ ನಿಂತುಬಿಟ್ಟರು. ಧರ್ಮಜನ ಮನಸ್ಸು ಕರಗಿತು. ಅರ್ಜುನನ ಭುಜವನ್ನು ಹಿಡಿದು, "ತಮ್ಮಾ! ಸಮಾಚಾರವೇನು? ನಮ್ಮ ಹೃದಯ ಧಗಧಗಿಸುತ್ತಿದೆ. ಯಾದವರ ಕ್ಷೇಮ ಸಮಾಚಾರವನ್ನು ತಿಳಿಸಿ, ಈ ತಾಪ ಶಮನ ಮಾಡು," ಎಂದು ಕೇಳುತ್ತಿದ್ದರೂ ಅರ್ಜುನ ಮೇಲೇಳಲಿಲ್ಲ. ಅವನ ಬಾಯಿಂದ ಮಾತೇ ಹೊರಡಲಿಲ್ಲ.

ಧರ್ಮಜ ಪ್ರಶ್ನೆಗಳ ಮಳೆಯನ್ನೇ ಸುರಿಸುತ್ತಿದ್ದ. ಏನೇನೋ ಪ್ರಶ್ನೆ ಕೇಳುತ್ತಿದ್ದ. ಯಾರ ಯಾರ ಹೆಸರನ್ನೋ ಹೇಳಿ, ಅವರ ಯೋಗಕ್ಷೇಮ ವಿಚಾರಿಸುತ್ತಿದ್ದ. ಯಾವುದಕ್ಕೂ ಅರ್ಜುನನ ಉತ್ತರವೇ ಇಲ್ಲ. ತಲೆಯೆತ್ತಿ ನೋಡಲೂ ಇಲ್ಲ. "ಹೋಗಲಿ, ವಾಸುದೇವ ಏನು ಹೇಳಿ ಕಳಿಸಿದ್ದಾನೆ? ಅವನು ಹೇಗಿದ್ದಾನೆ?"

ಎಂದು ಧರ್ಮಜ ಆತಂಕದಿಂದ ಕೇಳಿದ. ಅದನ್ನು ಕೇಳಿ ಅರ್ಜುನನ ದುಃಖದ ಕೋಡಿ ಒಡೆದು ಪ್ರವಾಹದಂತೆ ಉಕ್ಕಿ ಹರಿಯಿತು. "ಅಣ್ಣಾ! ಇನ್ನೆಲ್ಲಿಯ ವಾಸು ದೇವ? ನಾವು ನಿರ್ಭಾಗ್ಯರು! ಅವನನ್ನು ಉಳಿಸಿಕೊಳ್ಳದ ಅಭಾಗ್ಯರಾದೆವು," ಎಂದು ಗೋಳಿಡಲಾರಂಭಿಸಿದ.

ಸಹದೇವ ವಿಷಯ ಅರ್ಥಮಾಡಿಕೊಂಡು ಆ ಭವನದ ದ್ವಾರಗಳನ್ನೆಲ್ಲಾ ಮುಚ್ಚಿ ಸಿದ. ದುಃಖದಿಂದ ಕುಸಿದುಹೋದ ಅಣ್ಣನ ಬಳಿಗೆ ಬಂದು ಸಮಾಧಾನ ಮಾಡ ತೊಡಗಿದ. ವಾಸುದೇವ ಲೋಕವನ್ನು ತ್ಯಜಿಸಿದ ವಿಷಯ ಎಲ್ಲರಿಗೂ ತಿಳಿಯಿತು. "ಹಾ! ವಿಧಿಯೇ! ಪಾಂಡವರನ್ನು ಅದೆಷ್ಟು ಮೋಸ ಮಾಡಿದೆ! ಲೋಕವನ್ನದೆಷ್ಟು ಕಡೆಗಣಿಸಿದೆ! ಎಷ್ಟು ಜನ್ಮಗಳ ಪಾಪ ಫಲವೋ ಏನೋ ಪಾಂಡವರು ಇಂಥ ವಾರ್ತೆ ಕೇಳಬೇಕಾಯಿತು," ಎಂದು ಗೋಳಿಟ್ಟರು.

ಸ್ವಲ್ಪ ಹೊತ್ತು ಆ ಭವನ ನಿಶ್ಶಬ್ದದಲ್ಲಿ ಮುಳುಗಿಹೋಯಿತು. ನಂತರ, ಧರ್ಮಜ ಕಣ್ಣೀರು ಸುರಿಸುತ್ತಾ, ಅರ್ಜುನನ್ನು ಎಬ್ಬಿಸಿ, "ತಮ್ಮಾ! ವಸುದೇವನೂ ನಂದ ಯಶೋದೆಯರೂ ಉಳಿದ ಯಾದವರೆಲ್ಲರೂ ಈಗ ಹೇಗಿದ್ದಾರೆ? ಅವರೆಲ್ಲಾ ದುಃಖ ಸಾಗರದಲ್ಲಿ ಮುಳುಗಿರಬೇಕು. ಅವರು ಮಾತ್ರವಲ್ಲ, ಇಡೀ ದ್ವಾರಕೆಯೇ ದುಃಖ ಸಾಗರದಲ್ಲಿ ಮುಳುಗಿರಬೇಕು. ನಮ್ಮ ಸ್ಥಿತಿಯೇ ಹೀಗಿರುವಾಗ ಇನ್ನು ಅವರ ಸ್ಥಿತಿ ಕೇಳಬೇಕೆ? ಕೃಷ್ಣನಿಲ್ಲದೆ ಅವರು ಹೇಗೆ ತಾನೆ ಇದ್ದಾರು? ಪಾಪ!" ಎಂದು ಉಕ್ಕಿಬರುತ್ತಿದ್ದ ದುಃಖವನ್ನು ಅದುಮಿಕೊಳ್ಳುತ್ತಾ, ಕಣ್ಣೀರು ಸುರಿಸುತ್ತಾ, ನಿಟ್ಟುಸಿರು ಹುಯ್ಯುತ್ತಿದ್ದ ಧರ್ಮಜನನ್ನು ನೋಡಿ ಅರ್ಜುನ, "ಅಣ್ಣಾ! ದ್ವಾರಕಾವಾಸಿಗಳು ಎಷ್ಟು ಅದೃಷ್ಟಶಾಲಿಗಳು! ಎಲ್ಲರಿಗಿಂತ ದುರದೃಷ್ಟರೆಂದರೆ ನಾವೇ. ವಾಸುದೇವ ಲೋಕವನ್ನು ತ್ಯಜಿಸಿದ ವಾರ್ತೆ ಕೇಳಲು ಬದುಕಿರುವ ಮೊಂಡು ಜೀವಿಗಳು ಈ ಪಾಂಡವರು ಮಾತ್ರ. ಮಿಕ್ಕವರೆಲ್ಲ ಆ ಅಶುಭ ವಾರ್ತೆ ಕೇಳುವ ಮೊದಲೇ ಲೋಕವನ್ನು ತ್ಯಜಿಸಿದರು," ಎಂದ. ಅರ್ಜುನ ಹೇಳಿದ್ದನ್ನು ಕೇಳುತ್ತಲೇ, ಧರ್ಮಜ, "ಹರಿ ಹರಿ! ಎಂದು ಈ ಘೋರ ದುರಂತ? ಕಥೆಯಿರಬಹುದೇ? ಏನೂ ಅರ್ಥವಾಗುತ್ತಿಲ್ಲ. ಸಮುದ್ರವೇನಾದರೂ ನುಗ್ಗಿಬಂದು ದ್ವಾರಕೆಯನ್ನು ಮುಳುಗಿ ಸಿತೇ? ಅಥವಾ, ದುರ್ಮಾರ್ಗಿಗಳಾದ ಯಾರಾದರೂ ರಾಜರು ದ್ವಾರಕೆಯನ್ನು ಮುತ್ತಿ ಎಲ್ಲರನ್ನೂ ಕೊಲೆಗೈದರೆ? ಅರ್ಜುನಾ! ಏನಾಯಿತೆನ್ನುವುದನ್ನು ವಿಶದವಾಗಿ ಹೇಳಿ ನಮ್ಮ ದುಃಖ ಉಪಶಾಂತಿ ಮಾಡಪ್ಪಾ," ಎಂದು ಅವನ ಕೈಗಳನ್ನು ಹಿಡಿದು ದೈನ್ಯದಿಂದ ಕೇಳಿದ.

ಆಗ, ಅರ್ಜುನ, "ಅಣ್ಣಾ! ಯಾವ ಸಮುದ್ರವೂ ಉಕ್ಕಿಬಂದು ದ್ವಾರಕೆಯನ್ನು ಕಬಳಿಸಲಿಲ್ಲ. ಯಾವ ರಾಜರೂ ದ್ವಾರಕೆಯನ್ನು ಬಂದು ಮುತ್ತಲಿಲ್ಲ. ಯಾದವರು ತಾವು ತಾವೇ ಕಾದಾಡಿದರು. ಅವರಲ್ಲೇ ದುಷ್ಟ ಬುದ್ಧಿ ತಲೆಯೆತ್ತಿತು. ವಿನಾಶಕಾಲವೆ ವಿಪರೀತ ಬುದ್ಧಿ ಹುಟ್ಟಿಸಿತು. ಅಭಿಮಾನ ಮಮಕಾರಗಳು ಕೂಡ ಅವರಲ್ಲಿ ಶೂನ್ಯವಾಗಿ ಒಬ್ಬರನ್ನೊಬ್ಬರು ತಾವೇ ಕೊಂದರು! ಯಾದವರೆಲ್ಲ ಹತರಾಗಿ ಹೋದರು," ಎಂದ. ಧರ್ಮಜ, "ಹಾಗಾದರೆ ಅಬಾಲ ವೃದ್ಧರನ್ನು ಕೂಡ ಬಲಿ ತೆಗೆದುಕೊಳ್ಳುವ ಬುದ್ಧಿ ಅವರಲ್ಲಿ ಹುಟ್ಟಬೇಕಾದರೆ, ಯಾವುದೋ ಪ್ರಬಲವಾದ ಶಕ್ತಿ ಇವೆಲ್ಲಕ್ಕೂ ಕಾರಣವಾಗಿರಬೇಕು, ಅರ್ಜುನ," ಎಂದ. ಧರ್ಮಜ ದುಃಖವನ್ನು ನುಂಗಿಕೊಂಡು, ನಡೆದ ಸಂಗತಿಯನ್ನೆಲ್ಲಾ ವಿಶದವಾಗಿ ತಿಳಿಸೆಂದು ಅರ್ಜುನನನ್ನು ಕೋರಿದ.

ಅರ್ಜುನನೂ ದುಃಖವನ್ನು ಅದುಮಿಕೊಂಡು ಸಮಾಧಾನ ತಂದುಕೊಂಡು, ನಡೆದ ಸಂಗತಿಯನ್ನೆಲ್ಲಾ ಹೇಳಿದ. ಮಿಕ್ಕ ಮೂರು ಜನ ಸೋದರರೂ ಚಿಂತಾ ಕ್ರಾಂತರಾಗಿ ಶ್ರದ್ಧೆಯಿಂದ ಕೇಳುತ್ತಿದ್ದರು. "ಅಣ್ಣಾ! ವಾಸುದೇವನ ಸಂಕಲ್ಪವಿಲ್ಲದೆ ಈ ವಸುಧೆಯಲ್ಲಿ ಯಾವ ಸಣ್ಣ ಕಾರ್ಯಕೂಡ ಜರುಗದೆನ್ನುವ ವಿಷಯ ನನಗೆ ಚೆನ್ನಾಗಿ ಗೊತ್ತಾಯಿತು. ಅವನು ಸೂತ್ರಧಾರನಾಗಿ, ಪ್ರೇಕ್ಷಕನಂತೆ ಕುಳಿತು, ತನ ಗೇನೂ ತಿಳಿಯದಂತೆ ಇರುತ್ತಾನೆ. ಆದರೆ ಯಾವ ಪಾತ್ರ ಹೇಗೆ ನಟಿಸಬೇಕೆಂದು ಆತನು ನಿರ್ದೇಶಿಸುವನೋ ಅದರಂತೆಯೇ ನಟಿಸುವುದು ಯಾವ ಪಾತ್ರಕ್ಕೂ ತಪ್ಪಿದ್ದಲ್ಲ.

ಈ ನಾಟಕದಲ್ಲಿ ಚಿತ್ರವಿಚಿತ್ರ ಅನುಭವಗಳೆಲ್ಲಾ ಪ್ರೇಕ್ಷಕರಿಗೇ ಹೊರತು, ಸೂತ್ರ ಧಾರನಿಗೆ ಅದೇನೂ ಇಲ್ಲ. ಯಾವಾಗ, ಯಾರಿಂದ, ಏನು ಮಾಡಿಸಬೇಕೋ ಆಗ ಅವನಲ್ಲಿ ಆ ಬುದ್ಧಿ ಹುಟ್ಟಿಸುತ್ತಾನೆ. ಅದಕ್ಕೆ ಅವರ ಜನ್ಮಾಂತರ ಕರ್ಮ ಕೂಡ ಸೇರಿರುತ್ತೆ. ನಮ್ಮ ಯಾದವರೆಲ್ಲರೂ ಸ್ವಾಭಾವಿಕವಾಗಿಯೇ ದೈವ ಬ್ರಾಹ್ಮಣ ಭಕ್ತ ರೆನ್ನುವುದು ನಮಗೆಲ್ಲಾ ತಿಳಿದ ವಿಷಯವೇ. ಆದರೆ, ಎಂದು ಯಾವ ಮಹನೀಯ ಶಾಪವಿತ್ತಿದ್ದನೋ ಯಾದವರು ಎಂದು ಯಾವ ಕರ್ಮ ಮಾಡಿದ್ದರ ಪಾಪ ಫಲವೋ ಹೀಗಾಯಿತು. ಪ್ರಭಾಸಕ್ಷೇತ್ರದಲ್ಲಿ ಯಜ್ಞಮಾಡಿದ ಸಂದರ್ಭದಲ್ಲಿ ಯಜ್ಞ ಆನಂದವಾಗಿ ಏಳು ದಿನಗಳೂ ನಿರಾತಂಕವಾಗಿ ವೈಭವದಿಂದ ನಡೆಯಿತು. ಕಡೆಯ ದಿನ ಕೃಷ್ಣನ ಸಮಕ್ಷಮದಲ್ಲಿ ಪೂರ್ಣಾಹುತಿಯಾಗಿ ಯಜ್ಞ ಸಮಾಪ್ತಿ ಆಗುವ ಸಂದರ್ಭ. ಮಂಗಳ ಸ್ನಾನ ಮಾಡಿ, ಬ್ರಾಹ್ಮಣರೆಲ್ಲರೂ ಯಜ್ಞ ಪ್ರಸಾದ ಸ್ವೀಕರಿಸಿ, ಯಾದವರೆಲ್ಲರಿಗೂ ಕೊಟ್ಟರು. ಎಲ್ಲವೂ ಸಕ್ರಮವಾಗಿ, ಶಾಂತವಾಗಿ, ಆನಂದವಾಗಿ ನಡೆಯಿತು. ಮಧ್ಯಾಹ್ನ ಬ್ರಾಹ್ಮಣರ ಸಮಾರಾಧನೆಯಾದಮೇಲೆ,

ಯಾದವರೆಲ್ಲರನ್ನೂ ಸಾಲಾಗಿ ಕೂರಿಸಿ ಬ್ರಾಹ್ಮಣರು ಬಡಿಸುತ್ತಿದ್ದಾಗ, ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವಂತಾಯಿತು. ಆ ಸಮಯದಲ್ಲಿ ಕೆಲವರು ವಾರುಣಿ ಮದ್ಯ ಕುಡಿದು ಬಂದು, ಮದೋನ್ಮತ್ತರಾಗಿ, ತಮ್ಮವರು ಪರರು ಎನ್ನುವ ವಿಚಾರ ಮಾಡುವ ಶಕ್ತಿ ಇಲ್ಲದೆ, ಪರಸ್ಪರ ಆಕ್ಷೇಪಣೆ ಮಾಡಲಾರಂಭಿಸಿದರು. ಮಾತಿಗೆ ಮಾತು ಬೆಳೆದು, ಬೈದಾಟ ಹೊಡೆದಾಟದವರೆಗೂ ಹೋಯಿತು. ಒಬ್ಬರನ್ನೊಬ್ಬರು ಹೊಡೆಯಲು ಆರಂಭಿಸಿದರು. ಅಣ್ಣಾ! ನಿಜವಾಗಿಯೂ ಇದು ಭಗವತ್ಸಂಕಲ್ಪವಲ್ಲದೆ ಬೇರೆಯಲ್ಲ. ಇಲ್ಲದಿದ್ದರೆ, ಎಂಥ ಅಜ್ಞಾನಿಗಳಾದರೂ ದುರ್ಮಾರ್ಗಿಗಳಾದರೂ ತಮ್ಮ ಮಕ್ಕಳು ತಂದೆತಾಯಿಯರನ್ನು ತಾವೇ ತಮ್ಮ ಕೈಯಿಂದಲೇ ಕೊಲ್ಲುವರೇನು? ಏನು ವಿಚಿತ್ರವೋ ಏನೋ! ತಂದೆಯನ್ನು ಮಗ, ಮಗನನ್ನು ತಂದೆ, ಅಣ್ಣನನ್ನು ತಮ್ಮ, ತಮ್ಮನನ್ನು ಅಣ್ಣ, ಅಳಿಯನನ್ನು ಮಾವ, ಭಾವನನ್ನು ಭಾವಮೈದ, ಹೀಗೆ ಪರಸ್ಪರ ಕೊಂದು ಎಲ್ಲರೂ ಸತ್ತರು. ಅಬ್ಬಾ! ಆ ಘೋರ ದುರಂತ ಹೇಳಲಸಾಧ್ಯ," ಎಂದು ಅರ್ಜುನ ಎರಡೂ ಕೈಗಳಿಂದಲೂ ತಲೆಯನ್ನು ಬಿಗಿಯಾಗಿ ಹಿಡಿದು ಕೊಂಡು ಗೋಡೆಗೊರಗಿ ಕುಳಿತ.

ಎಲ್ಲವನ್ನೂ ಕೇಳುತ್ತಿದ್ದ ಧರ್ಮಜ, ಆಶ್ಚರ್ಯ ಹಾಗೂ ದುಃಖದಿಂದ, ವಿಷಯ ವನ್ನು ಪೂರ್ತಿಯಾಗಿ ತಿಳಿಯುವ ತವಕದಿಂದ ಅರ್ಜುನನ ಭುಜದ ಮೇಲೆ ಕೈಯಿಟ್ಟು, "ತಮ್ಮಾ! ಇದೇನು ಹೇಳುತ್ತಿದ್ದೀ? ನಂಬುವುದಕ್ಕೇ ಸಾಧ್ಯವಿಲ್ಲದಂಥ ವಿಷಯ ಹೇಳುತ್ತಿದ್ದೀಯಲ್ಲ? ಇದನ್ನು ನಂಬುವುದಾದರೂ ಹೇಗೆ? ಅರ್ಜುನಾ! ನಿನ್ನ ಬಾಯಲ್ಲಿ ಸುಳ್ಳು ಬರುವುದಿಲ್ಲ. ಆದ್ದರಿಂದ ನಂಬಲೇಬೇಕು. ಇಲ್ಲವಾದರೆ ಇದೆಲ್ಲಾ ಏನು? ಯಾದವರಲ್ಲಿ ಇದ್ದ ಪರಸ್ಪರ ಸ್ನೇಹವನ್ನು ನಾನು ಮತ್ತೆಲ್ಲಿಯೂ ನೋಡಿರಲಿಲ್ಲ, ಕೇಳಿರಲಿಲ್ಲ. ಅಲ್ಲದೆ ಅವರು ಕೃಷ್ಣನ ಆಜ್ಞೆಯ ಗೆರೆ ದಾಟುವವರಲ್ಲ. ಎಂಥ ಉದ್ರಿಕ್ತ ಸಮಯದಲ್ಲೂ ಕೃಷ್ಣ ಹೇಳಿದ್ದಕ್ಕೆ ಮರುಮಾತಾಡುವವರಲ್ಲ. ಅಂಥವರು ಕೃಷ್ಣನ ಸಮಕ್ಷಮದಲ್ಲೇ ತಾರತಮ್ಯವಿಲ್ಲದೆ ಹೊಡೆದಾಡಿ ಸತ್ತರೆಂದರೆ, ನೀನು ಹೇಳಿದ ಹಾಗೆ, ಇಂಥ ಬುದ್ಧಿ ಅವರ ವಿನಾಶಕ್ಕೇ ಹುಟ್ಟಿದೆ. ಹೋಗಲಿ, ವಾಸುದೇವನಾದರೂ ಅವರಿಗೆ ತಕ್ಕ ಬುದ್ಧಿವಾದ ಹೇಳಿ ಹೊಡೆದಾಡುವುದನ್ನು ಏಕೆ ತಪ್ಪಿಸದೆ ಹೋದ? ರಾಜಿ ಮಾಡಿಸದೆ ಹೋದ? ಅನುಗ್ರಹ, ನಿಗ್ರಹಗಳಲ್ಲಿ ಅವನು ಮಹಾ ಸಮರ್ಥನಲ್ಲವೇ? ಇದು ಮತ್ತಷ್ಟು ಆಶ್ಚರ್ಯವಾಗುತ್ತಿದೆ," ಎಂದು ಗಲ್ಲದ ಮೇಲೆ ಕೈಯಿಟ್ಟು, ಮೊಣಕೈ ಊರಿ, ಚಿಂತಾಕ್ರಾಂತನಾಗಿ ಕಣ್ಣಿನಲ್ಲಿ ನೀರು ಸುರಿಸುತ್ತಾ ಕುಳಿತ.

ಇದನ್ನು ನೋಡಿ ಅರ್ಜುನ, "ಮಹಾರಾಜಾ! ನಿಮಗೆ ಎಲ್ಲವೂ ತಿಳಿದಿದ್ದೂ ನೀವು ಹೀಗೆ ಪ್ರಶ್ನೆ ಮಾಡಿದರೆ ನಾನೇನು ಹೇಳಲಿ? ನಮ್ಮ ವಿಷಯ ಹೇಗೋ ಯಾದವರ

ವಿಷಯವೂ ಹಾಗೇ. ನಾವೂ ಕೌರವರೂ ಅಣ್ಣತಮ್ಮಂದಿರೇ ಅಲ್ಲವೇ? ನಮಗೆ ಎರಡು ಕಡೆಯಿಂದಲೂ ಎಲ್ಲರೂ ಬಂಧುಗಳೇ ಆಗಿದ್ದರೂ ಶ್ಯಾಮಸುಂದರ ನಮ್ಮೊಡನೆ ಇದ್ದರೂ ಮಹಾಭಾರತ ಯುದ್ಧ ಆಗಲಿಲ್ಲವೇ? ಇದನ್ನೇ ನಾವು ಸ್ವಲ್ಪ ವಿಚಾರ ಮಾಡಿ ನೋಡಿದರೆ, ಅವನಿಗೆ ಇಷ್ಟವೇ ಇಲ್ಲದಿದ್ದ ಪಕ್ಷದಲ್ಲಿ ಯುದ್ಧ ನಡೆಯುತ್ತಿತ್ತೆ? ನಾವಾದರೂ ಅವರೆಲ್ಲರನ್ನೂ ಕೊಂದು ಈ ರಾಜ್ಯ ಪಡೆಯಬೇಕೆಂದು ಅಪೇಕ್ಷಿಸಿದೆವೆ? ಅವನ ಆಜ್ಞೆ ಇಲ್ಲದೆ ಏನೊಂದೂ ಜರುಗದು. ಅವನ ಆಜ್ಞೆ ಉಲ್ಲಂಘಿಸುವುದು ಅಸಾಧ್ಯ. ಅವನು ಗೊತ್ತುಪಡಿಸಿದ ಪಾತ್ರವನ್ನು, ನಿಯಮಿಸಿದ ಕಾಲವನ್ನು ಅನುಸರಿಸಿ, ಈ ಪ್ರಕೃತಿರಂಗದ ಮೇಲೆ ನಾಟಕ ನಡೆಯಲೇಬೇಕು. ಉಳಿದದ್ದೆಲ್ಲಾ ನಮ್ಮ ಊಹೆ ಅಷ್ಟೆ. ಎಲ್ಲದಕ್ಕೂ ಅವನ ಸಂಕಲ್ಪವೇ ಮೂಲ ಕಾರಣವಾಗಿದ್ದು ಕಾರ್ಯ ನಡೆಯುವುದು," ಎಂದು ಹೇಳುತ್ತಿದ್ದಂತೆಯೇ ಧರ್ಮಜ, "ಅರ್ಜುನಾ! ಭಾರತ ಯುದ್ಧಕ್ಕೂ ಕಾರಣಗಳು ಅನೇಕ ಇದ್ದವು. ರಾಜ್ಯಕ್ಕಾಗಿಯೂ ನಮ್ಮ ನಮ್ಮ ಹಕ್ಕಿಗಾಗಿಯೂ ನ್ಯಾಯಬದ್ಧವಾದ ಮಾರ್ಗಗಳನ್ನು ಅನುಸರಿಸಿದೆವು. ರಾಯಭಾರ ನಡೆಸಿದೆವು. ಆದರೆ ಇವೆಲ್ಲದರಲ್ಲೂ ಪರಾಭವ ಹೊಂದಿದೆವು. ಅಡವಿ ಪಾಲಾದೆವು. ಹತಭಾಗ್ಯರಾದರೂ ಅನುಗ್ರಹ ಪಾತ್ರರಾಗಿ ರಕ್ಷಿಸಲ್ಪಟ್ಟೆವು. ದ್ರೌಪದಿಯನ್ನು ಅವಮಾನಪಡಿಸಿದರು, ಅರಗಿನ ಮನೆಗೆ ಬೆಂಕಿ ಇಟ್ಟರು, ವಿಷದ ಆಹಾರ ತಿನ್ನಿಸಿದರು. ಇಷ್ಟು ವಿಧವಾಗಿ ಹಿಂಸಿಸಿ ನಮ್ಮ ಹೃದಯ ವನ್ನು ನೋಯಿಸಿ, ನಮ್ಮನ್ನು ಉದ್ರೇಕಗೊಳಿಸಿದರು.

ಹೊಡೆದಾಟಕ್ಕೆ ಮುಖ್ಯವಾಗಿ ಮೂರೇ ಕಾರಣಗಳು–ಧನ, ಧರಣಿ ಮತ್ತು ಧರ್ಮ ಪತ್ನಿ. ಈ ಯಾವ ಕಾರಣವೂ ಇಲ್ಲದೆಯೇ ಯಾದವರು ಪರಸ್ಪರ ಹೊಡೆದಾಡಿ ಪ್ರಾಣತ್ಯಾಗ ಮಾಡಿದರೆಂದರೆ ಅದು ವಿಧಿ ಸಂಕಲ್ಪ ಎಂದಷ್ಟೆ ಹೇಳಬಹುದು. ಯಾದವರು ಸಮೃದ್ಧಿವಂತರು. ಧನ ಧಾನ್ಯಗಳಿಗೆ ಅವರಿಗೆ ಯಾವ ಕೊರತೆಯೂ ಇಲ್ಲ. ಇನ್ನು, ಅವರ ಧರ್ಮಪತ್ನಿಯರು ಮಹಾ ಸಾಧ್ವೀಮಣಿಗಳು. ಪತಿ ಆಜ್ಞೆ ಮೀರುವವರೇ ಅಲ್ಲ. ಭೇದ ಭಾವಕ್ಕೆ ಎಡೆಕೊಡುವವರೂ ಅಲ್ಲ. ಇಷ್ಟಿದ್ದೂ ಅವರಲ್ಲಿ ಪರಸ್ಪರ ಕೊಲ್ಲುವಂಥ ಕಲಹ ಹೇಗೆ ಬಂತೋ?" ಎಂದು, ಧರ್ಮಜ ಅನುಮಾನಿಸುತ್ತಿದ್ದುದನ್ನು ಕೇಳಿದ ಅರ್ಜುನ, "ಅಣ್ಣಾ! ಬಾಹ್ಯ ಕಾರಣಗಳನ್ನು ಮುಖ್ಯವಾಗಿಟ್ಟುಕೊಂಡು, ಭಾವ ರಾಗಗಳನ್ನು ಕೈಬಿಡುವುದೂ ಒಂದು ಅಜ್ಞಾನವೇ. ಬಾಹ್ಯ ಕಾರಣಗಳೆಲ್ಲಾ ನಿಮಿತ್ತ ಮಾತ್ರ. ಕಾಲ ಸನ್ನಿಹಿತವಾಗುತ್ತಲೂ ಇವುಗಳನ್ನು ನಿಮಿತ್ತ ಮಾಡಿಕೊಂಡು ಜನರು ಹೊಡೆದಾಡುವರು. ಕಾಲಸ್ವರೂಪನಾದ ಭಗ ವಂತ, ಕಾಲನ ರೂಪದಲ್ಲಿ ತಾನೇ ಬಂದು, ಏನೋ ಒಂದು ನೆಪಮಾಡಿ, ನಾಟಕ ಸಮಾಪ್ತಿ ಮಾಡುತ್ತಾನೆ. ಹುಟ್ಟಿಸುವುದಕ್ಕೆ ಯಾವ ಕಾರಣವೋ ಸಾಯುವುದಕ್ಕೂ

ಅದೇ ಕಾರಣವನ್ನು ಅವನು ಆಧಾರ ಮಾಡಿಕೊಳ್ಳುವನು. ಹುಟ್ಟುವುದಕ್ಕೆ ನಾವು ಕಾರಣ ಹುಡುಕುವುದಿಲ್ಲ ಅಲ್ಲವೇ? ಹಾಗೇ ಸಾಯುವುದಕ್ಕೂ ಕಾರಣ ಹುಡುಕುವುದು ಅನವಶ್ಯಕ. ಜೀವಿಗಳ ಮೂಲಕ ಜೀವಿಗಳನ್ನು ಹುಟ್ಟಿಸುತ್ತಾನೆ. ಜೀವಿಗಳ ಮೂಲಕವೇ ಜೀವಿಗಳನ್ನು ಸಾಯಿಸುತ್ತಾನೆ. ಹುಟ್ಟುವುದು, ಸಾಯುವುದು ಶರೀರ ಮಾತ್ರ ಎಂದು ವಾಸುದೇವ ಎಷ್ಟೋ ಬಾರಿ ನಮಗೆ ಬೋಧಿಸಿಲ್ಲವೇ? ನಿಮಗೆ ತಿಳಿದಿದ್ದೂ ಇಂಥ ಸಂದೇಹಗಳಿಗೆ ಎಡೆಯಿತ್ತಿರುವುದು ತುಂಬಾ ಆಶ್ಚರ್ಯವೇ ಸರಿ. ಹುಟ್ಟಿಸಿದವನೇ ಸಾಯಿಸುವುದು ಧರ್ಮವಲ್ಲವೆಂದು ಕೂಡ ನೀವು ಅನ್ನಬಹುದು. ಹುಟ್ಟು ಸಾವಿನ ಮಧ್ಯೆ ಪಡೆದ ಪುಣ್ಯ ಪಾಪಗಳ ಫಲ ಅನುಭವಿಸಬೇಕಾದ ಬಾಧ್ಯತೆಯೂ ಇದರಲ್ಲಿ ಸೇರಿರುತ್ತೆ. ಈ ಕಾರಣದಿಂದಲೇ ಭಗವಂತ ಜನನ ಮರಣಗಳ ಆಟವಾಡುತ್ತಾನೆ. ಜನನ ಮರಣಗಳೆನ್ನುವ ಎರಡು ಪರ್ವಗಳ ಮಧ್ಯೆ ಜೀವಿತವೆನ್ನುವ ಪ್ರವಾಹ ಇದೆ. ಅದನ್ನು ದಾಟುವುದಕ್ಕೆ ಆತ್ಮ ಶಕ್ತಿ ಎನ್ನುವ ಒಂದು ತೆಪ್ಪ ಕಟ್ಟಿಕೊಳ್ಳಬೇಕು. ಅದರ ಆಧಾರದಿಂದ ಪ್ರಯಾಣ ಸಾಗಿಸುವವನಿಗೆ ಈ ಜೀವನ ಪ್ರವಾಹದಿಂದ ಯಾವ ತೊಂದರೆಯೂ ಇರುವುದಿಲ್ಲ. ಆತ್ಮಶಕ್ತಿಯನ್ನು ಆಧಾರ ಮಾಡಿಕೊಳ್ಳದವರು, ಪ್ರವಾಹದಲ್ಲಿ ಬಿದ್ದು, ತೇಲುತ್ತಾ ಮುಳುಗುತ್ತಾ ಕೂಗುತ್ತಾ ಕಷ್ಟಪಡುವರು.

ರಾಜಾ! ಇದು ಆ ಲೀಲಾ ನಾಟಕ ಸೂತ್ರಧಾರಿಯ ಬೊಂಬೆಯಾಟ. ಇದರಲ್ಲಿ ಯಾದವರ ತಪ್ಪಿಲ್ಲ. ಅಂದು ಕೌರವರ ತಪ್ಪೂ ಇರಲಿಲ್ಲ. ಈ ಭೌತಿಕ ಪಿಂಡ ಆ ಪ್ರಭುವಿನ ಪ್ರೇರಣೆ ಇಲ್ಲದೆ ಏನೂ ಮಾಡದು. ಒಬ್ಬರಿಂದೊಬ್ಬರನ್ನು ಹುಟ್ಟಿಸಿ, ಮತ್ತೊಬ್ಬರಿಂದ ಅವರನ್ನು ಗಿಟ್ಟಿಸಿಕೊಳ್ಳುವುದು ಅವನ ವಿನೋದದ ಆಟವಲ್ಲದೆ ಬೇರೆಯಲ್ಲ. ಹಾವು ಮೊಟ್ಟೆಯಿಟ್ಟು ಮರಿ ಮಾಡಿ ಮತ್ತೆ ಮರಿಗಳನ್ನು ತಾನೇ ತಿನ್ನುವುದನ್ನು ನಾವು ನೋಡಿಲ್ಲವೇ? ಆದರೂ ಅದು ಆಯುಷ್ಕಾಲ ಮುಗಿದವುಗಳನ್ನೇ ತಿನ್ನುತ್ತದಲ್ಲದೆ ಎಲ್ಲವನ್ನೂ ಹಾಗೆ ತಿನ್ನುವುದಿಲ್ಲ. ಅಷ್ಟೇಕೆ, ನೀರಿನಲ್ಲಿರುವ ಮೀನುಗಳು ತಮ್ಮ ಅವಧಿ ಮುಗಿದೊಡನೆ ಬಲೆಯಲ್ಲಿ ಸಿಕ್ಕಿಕೊಂಡು ಸಾಯುವುದಿಲ್ಲವೇ? ಸಣ್ಣ ಮೀನುಗಳನ್ನು ದೊಡ್ಡ ಮೀನು ತಿನ್ನುವುದಿಲ್ಲವೇ? ದೊಡ್ಡ ಮೀನನ್ನು ಅದಕ್ಕಿಂತ ದೊಡ್ಡ ಮೀನು ತಿನ್ನವುದಿಲ್ಲವೇ? ಕಪ್ಪೆಯನ್ನು ಹಾವು ನುಂಗುವುದೂ ಹಾವನ್ನು ನವಿಲು ತಿನ್ನುವುದೂ ಸಾಮಾನ್ಯವಲ್ಲವೇ? ಲೋಕದಲ್ಲಿ ಇಂಥ ದೃಷ್ಟಾಂತಗಳೆಷ್ಟೋ. ಇವೆಲ್ಲಕ್ಕೂ ಕಾರಣ ಹೇಳುವುದು ಯಾರಿಗೆ ಸಾಧ್ಯ? ನಿಜ ಹೇಳಬೇಕೆಂದರೆ, ಎಲ್ಲವೂ ಭಗವಂತನಾದ ಆ ಬಾಲಗೋಪಾಲನ ಸಂಕಲ್ಪವೇ. ಅವನ ಲೀಲೆಗಳನ್ನು ನಾವು ತಿಳಿಯಲಾರದೆ ಹೋದೆವು. ಈಗ ಚಿಂತಿಸಿ ಪ್ರಯೋಜನವೇನು. ಅವನು ಮಾಯಾಮಾನುಷ ವಿಗ್ರಹವಾಗಿ ನಮ್ಮೊಡನೆ ಕರೆಯುತ್ತಾ, ಓಡಾಡುತ್ತಾ,

ತಿನ್ನುತ್ತಾ ಸಾಮಾನ್ಯ ಬಂಧುವಿನಂತೆ ಇದ್ದು, ನಮ್ಮನ್ನು ಅನೇಕ ಅಪಾಯಗಳಿಂದ ಪಾರುಮಾಡಿ, ಕರುಣೆ ತೋರಿ, ಕಠಿಣ ಸಮಸ್ಯೆಗಳು ಬಂದಾಗ ಸುಲಲಿತವಾಗಿ ಬಿಡಿಸುತ್ತಿದ್ದ ಕಾಲದಲ್ಲಿ, ಅಂಥ ಬೆಂಬಲಿಗನನ್ನು ಪಡೆದಿರುವೆವೆಂದು ಮೆರೆದೆವೇ ಹೊರತು, ಅವನ ಅನುಗ್ರಹ ಪ್ರವಾಹದಲ್ಲಿ ಮುಳುಗಿ ತೇಲಲಿಲ್ಲ. ಅಷ್ಟೊಂದು ಪ್ರೇಮದಿಂದ ಅವನು ನಮ್ಮನ್ನು ಆದರಿಸಿದರೂ ನಾವು ಅವನನ್ನು ಅರ್ಥಮಾಡಿ ಕೊಳ್ಳಲಾಗದೆ ಅವಕಾಶ ವ್ಯರ್ಥಮಾಡಿಕೊಂಡೆವು. ಕೇವಲ ಬಾಹ್ಯಾನುಕೂಲಗಳನ್ನೇ ಭೌತಿಕ ಅಪೇಕ್ಷೆಗಳನ್ನೇ ನೆರವೇರಿಸೆಂದು ಅವನನ್ನು ಕೋರಿದೆವಲ್ಲದೆ, ಅವನ ನಿಜ ಸ್ವರೂಪ ವಿಚಾರ ಮಾಡದೆ ಹೋದೆವು. ಪಾಂಡವರನ್ನು ಪಂಚಪ್ರಾಣವೆಂದು ಕಾಣುತ್ತಾ, ಪಾಂಡವರ ಪ್ರತಿಯೊಂದು ಸಣ್ಣ ಕೆಲಸಕ್ಕೂ ತಾನೇ ಮುಂದೆ ನಿಂತು ದೀಕ್ಷೆ ನಡೆಸಿಕೊಟ್ಟವನವನು.

ಅಣ್ಣಾ! ಏನು ಹೇಳಲಿ? ಎಷ್ಟೆಷ್ಟು ಜನ್ಮಗಳೆತ್ತಿದರೂ ನಮಗೆ ಅಂಥ ಆಪ್ತ ಬಂಧು ಸಿಗುವುದಿಲ್ಲ. ಹೆತ್ತ ತಾಯಿಗಿಂತ ಹೆಚ್ಚಿನ ಮಮತೆಯನ್ನು ಆತನಿಂದ ನಾನು ಅದೆಷ್ಟು ಬಾರಿ ಅನುಭವಿಸಿದ್ದೇನೆ. ಪಾಂಡವರ ಚಿಂತೆಯನ್ನು ತನ್ನ ಚಿಂತೆಯೆಂದೇ ಬಗೆದು ಅದರ ನಿವಾರಣೆಗೆ ನಿಮಿಷಾರ್ಧದಲ್ಲಿ ಉಪಾಯ ಕಂಡುಹಿಡಿಯುತ್ತಿದ್ದ. ಇಂದಿನವರೆಗೂ ಪಾಂಡವರು ಈ ಲೋಕದಲ್ಲಿ ಇದ್ದಾರೆಂದರೆ, ಅದಕ್ಕೆ ಅವನ ಕರುಣಾ ಭಿಕ್ಷೆಯೇ ಕಾರಣ. ಹೆಚ್ಚೇಕೆ ಈ ಶರೀರದಲ್ಲಿರುವ ಪ್ರತಿ ರಕ್ತಬಿಂದುವೂ ಆತನ ಅನುಗ್ರಹಬಿಂದುವೇ. ಪ್ರತಿಯೊಂದು ಮಾಂಸ ಖಂಡವೂ ಅವನ ಪ್ರೇಮದ ಮುದ್ದೆಯೇ. ಪ್ರತಿಯೊಂದು ಎಲುಬೂ ಅವನ ಅನುರಾಗದ ತುಂಡೇ. ಈ ಮರ್ಮ ತಿಳಿಯದೆ ಅಭಿಮಾನ, ಮಮಕಾರ, ಅಹಂಕಾರ ಸ್ವರೂಪದವರಾಗಿ 'ನಾನು ಮಾಡಿದೆ,' 'ನಾನು ಸಾಧಿಸಿದೆ,' ಎನ್ನುವ ಗರ್ವದಿಂದ ಮೆರೆದೆವು. ಅವನಿಲ್ಲದೆ ನಾವು ಕೇವಲ ಚರ್ಮದ ಚೀಲ ಎನ್ನುವುದು ಈಗ ತಿಳಿಯುತ್ತಿದೆ. ಲೋಕದಲ್ಲಿ ಎಲ್ಲ ಮಾನವರ ಗತಿಯೂ ಹೀಗೇ ಆಗುವುದು. ಸರ್ವ ರಕ್ಷಕನಾದ ಸರ್ವೇಶ್ವರನೇ ನಮ್ಮನ್ನು ಸರ್ವವಿಧವಾಗಿ ಆಡಿಸುತ್ತಿದ್ದಾನೆನ್ನುವ ಸತ್ಯ ಮರೆತು, ತಾನೇ ಎಲ್ಲದರ ಕರ್ತನೂ, ಭೋಕ್ತನೂ ಎಂದು ತಿಳಿಯುವ ನನ್ನಂಥ ಅಜ್ಞಾನಿಗಳು ಈ ಲೋಕದಲ್ಲಿ ಅದೆಷ್ಟು ಜನರೋ! ಶೂರರು, ವೀರರು, ಧೀರರು ಎಂದುಕೊಳ್ಳುವ ನಮ್ಮ ಪಾಡೇ ಹೀಗಾದರೆ ಇನ್ನು ಸಾಮಾನ್ಯರ ಸ್ಥಿತಿ ಹೇಳಬೇಕಾದ್ದೇ ಇಲ್ಲ. ಇದಕ್ಕೆ ದಾರಿಯಲ್ಲಿ ನನಗಾದ ಅನುಭವವೇ ಪ್ರತ್ಯಕ್ಷ ಸಾಕ್ಷಿ," ಎನ್ನುತ್ತಾ ಕೃಷ್ಣನ ವಿರಹವನ್ನು ತಾಳಲಾರದೆ, ಹೊಯ್ದಾಡುತ್ತಾ ಸ್ಮೃತಿ ತಪ್ಪಿದವನಂತೆ ಪಕ್ಕದಲ್ಲಿದ್ದ ಆಸನವನ್ನು ಒರಗಿ ಕುಳಿತ.

# ೧೧ ಪಾಂಡವರ ಶೋಕ

ದೀರ್ಘಾಲೋಚನೆಯಲ್ಲಿ ಮುಳುಗಿ, ಕೃಷ್ಣ ತಮಗಾಗಿ ಹೂಡಿದ ಕಾರ್ಯಗಳು, ಸಹಾಯ, ತೋರಿಸಿದ ದಯೆ, ಪ್ರೇಮ, ಇವುಗಳನ್ನು ನೆನೆಯುತ್ತಾ, ಚಿಂತಾಕ್ರಾಂತ ನಾಗಿದ್ದ ಧರ್ಮಜ ಥಟ್ಟನೆ ತಲೆಯೆತ್ತಿ, "ಅರ್ಜುನಾ! ಏನೆಂದೆ? ದಾರಿಯಲ್ಲಿ ನಿನಗಾದ ಪ್ರಮಾದವೇನು? ತಮ್ಮಾ, ವಿಶದವಾಗಿ ಹೇಳು," ಎಂದು ಅರ್ಜುನನ ಗಲ್ಲವನ್ನು ಹಿಡಿದು ಆತಂಕದಿಂದ ಪ್ರಶ್ನಿಸುತ್ತಿದ್ದ ಧರ್ಮಜನನ್ನು ಕುರಿತು ಅರ್ಜುನ, "ಅಣ್ಣಾ! ನನ್ನ ಪೌರುಷವೂ ಕೃಷ್ಣನ ಜೊತೆಯಲ್ಲೇ ಹೊರಟು ಹೋಯಿತು. ನಾನೀಗ ಬಲಹೀನ, ಪೌರುಷಹೀನ, ಅಬಲನಿಗಿಂತ ಅಬಲ, ನಿರ್ಜೀವಿ," ಎಂದ.

"ಈ ನಿರ್ಭಾಗ್ಯ ಅರ್ಜುನ ದ್ವಾರಕೆಯಲ್ಲಿದ್ದೂ ವಾಸುದೇವ ಸ್ವಧಾಮಕ್ಕೆ ಹೋಗುವ ಸಮಯದಲ್ಲಿ ಆ ಭಗವಂತನ ಸಮೀಪದಲ್ಲಿರುವ ಭಾಗ್ಯ ಪಡೆಯಲಿಲ್ಲ. ಆ ತಂದೆಯನ್ನು ನೋಡುವ ಭಾಗ್ಯವೂ ಸಿಕ್ಕಲಿಲ್ಲ. ಕೊನೆಗೆ, ಕೃಷ್ಣಸಾರಥಿಯಾದ ದಾರುಕ ಆ ಭಗವಂತನ ಸಂದೇಶ ತಲುಪಿಸಿದ. ಅದರಲ್ಲಿ ಭಗವಂತ ತಾನೇ ಸ್ವತಃ ಹೀಗೆ ಬರೆದಿದ್ದ," ಎಂದು ಅರ್ಜುನ ತನ್ನ ಪ್ರಾಣಕ್ಕಿಂತಲೂ ಭದ್ರವಾಗಿ ಕಾಪಾಡಿ ಕೊಂಡು ತಂದಿದ್ದ ಕೃಷ್ಣ ಹಸ್ತಾಕ್ಷರದ ಪತ್ರವನ್ನು ಒಳಗಿನಿಂದ ತೆಗೆದು ಧರ್ಮಜನ ಕೈಗೆ ಕೊಟ್ಟ. ಧರ್ಮಜ ಅದನ್ನು ಕಣ್ಣಿಗೊತ್ತಿಕೊಂಡು, ಕಣ್ಣೀರು ಸುರಿಸುತ್ತಾ ನೀರು ತುಂಬಿದ ಕಣ್ಣುಗಳಿಂದ ಆ ಪತ್ರವನ್ನು ಓದಲು ಪ್ರಯತ್ನಿಸಿದ. ಸ್ವಲ್ಪ ಹೊತ್ತಿನವರೆಗೆ ಅದನ್ನು ಓದಲು ಆಗಲೇ ಇಲ್ಲ.

ಕೃಷ್ಣ ಆ ಪತ್ರದ ಪ್ರಾರಂಭದಲ್ಲೇ, "ಭಾವಾ! ಅರ್ಜುನಾ! ಇದು ನನ್ನಾಜ್ಞೆ, ಮರು ಮಾತಾಡದೆ ಶಿರಸಾವಹಿಸಿ ನಡೆಸಬೇಕು. ಧೈರ್ಯದಿಂದ ಈ ಕಾರ್ಯವನ್ನು ಸಾಧಿಸಬೇಕು," ಎಂದು ಗಡಸು ಮಾತುಗಳನ್ನು ಬರೆದು, ನಂತರ ಹೀಗೆ ಬರೆದಿದ್ದ, "ನಾನು ಬಂದ ಕಾರ್ಯವನ್ನು ನೆರವೇರಿಸಿದ್ದೇನೆ. ಇನ್ನು ಈ ಲೋಕದಲ್ಲಿ ನಾನು ಈ ಶರೀರದಲ್ಲಿರುವುದಿಲ್ಲ. ಸ್ವಧಾಮಕ್ಕೆ ಹೋಗುತ್ತಿದ್ದೇನೆ. ಇಂದಿಗೆ ಇನ್ನು ಏಳು ದಿನಗಳಲ್ಲಿ ದ್ವಾರಕಾ ಪಟ್ಟಣ ಪೂರ್ತಿ ಮುಳುಗಿ ಹೋಗುತ್ತದೆ. ನಾನು ವಾಸಿಸುತ್ತಿದ್ದ ಭವನವೊಂದನ್ನು ಬಿಟ್ಟು ಪಟ್ಟಣದ ಮಿಕ್ಕ ಎಲ್ಲ ಭಾಗವನ್ನು ಸಮುದ್ರನು ತನ್ನಲ್ಲಿ ಸೇರಿಸಿಕೊಂಡು ಬಿಡುವನು. ಆದ್ದರಿಂದ, ನೀನು ರಾಣಿಯರನ್ನೂ ದ್ವಾರಕೆಯ

ಎಲ್ಲ ಸ್ತ್ರೀಯರನ್ನೂ ಮಕ್ಕಳನ್ನೂ ವೃದ್ಧರೇ ಮೊದಲಾದವರನ್ನೂ ಕರೆದುಕೊಂಡು ಇಂದ್ರಪ್ರಸ್ಥಕ್ಕೆ ಹೋಗಬೇಕು. ಸಮಸ್ತ ಯದುವಂಶದ ಸ್ತ್ರೀಯರ ಮಕ್ಕಳ ರಕ್ಷಣೆಯ ಭಾರವನ್ನು ನಾನು ನಿನ್ನ ಮೇಲೆ ಹಾಕಿ ಹೋಗುತ್ತಿದ್ದೇನೆ. ಇವರುಗಳನ್ನು ಪ್ರಾಣ ಸಮಾನವಾಗಿ ಕಾಪಾಡಿ ಇಂದ್ರಪ್ರಸ್ಥದ ವೀರರಿಗೆ ಉಚಿತವಾದ ರೀತಿಯಲ್ಲಿ ಅವರು ಗಳಿಗೆ ವಸತಿ ಕಲ್ಪಿಸಿ ಕಾಪಾಡುವುದು. ಇಂತು, ಸ್ವಧಾಮಕ್ಕೆ ಹೊರಟಿರುವ, ಗೋಪಾಲ," ಎಂದು ಧರ್ಮಜ ಪತ್ರವನ್ನು ಓದಿ ಮುಗಿಸಿದ.

ಧರ್ಮಜ ಓದಿದ ವಿಷಯವನ್ನೆಲ್ಲಾ ಕೇಳುತ್ತಿದ್ದ ಭೀಮಾರ್ಜುನ ನಕುಲ ಸಹದೇವಾದಿಗಳು ಕಣ್ಣಿರು ಸುರಿಸುತ್ತಾ ದೇಹದ ಮೇಲಿನ ಪ್ರಜ್ಞೆ ಇಲ್ಲದೆ ಕಲ್ಲುಬಂಡೆಗಳಂತೆ ಕುಳಿತುಬಿಟ್ಟರು. "ಅಣ್ಣಾ! ಭಗವಂತನಿಲ್ಲದೆ ಒಂದು ನಿಮಿಷವೂ ಈ ಲೋಕದಲ್ಲಿರಲು ನನಗಿಷ್ಟವಿಲ್ಲದೆ, ಸಮುದ್ರದಲ್ಲಿ ಹಾರಿ ಪ್ರಾಣ ಕಳೆದುಕೊಳ್ಳೋಣ ಎಂದು ಯೋಚಿಸಿದೆ. ಈ ಗಾಂಢೀವದಿಂದಲೇ ತಲೆ ಒಡೆದುಕೊಳ್ಳೋಣವೆಂದು ನೋಡಿದೆ. ಆದರೆ ಅವನ ಆಜ್ಞೆ ಪ್ರಾಣ ಕಳೆದುಕೊಳ್ಳದಂತೆ ನನ್ನನ್ನು ತಡೆಯಿತು. ಆ ನಂದನಂದನನ ಆಜ್ಞೆಯನ್ನು ಮೀರಬಾರದೆನ್ನುವ ನನ್ನ ಸಂಕಲ್ಪ ನನ್ನನ್ನು ಈ ಲೋಕದಲ್ಲಿ ಇನ್ನೂ ಉಳಿಸಿತು. ಬೇರೆ ಯಾವ ಆಲೋಚನೆ ಮಾಡುವುದಕ್ಕೂ ಕಾಲಾವಕಾಶವೇ ಇರಲಿಲ್ಲ. ಸತ್ತವರೆಲ್ಲರಿಗೂ ಶಾಸ್ತ್ರೋಕ್ತವಾಗಿ ಶ್ರಾದ್ಧ, ತರ್ಪಣಾದಿಗಳನ್ನು ಮಾಡಿ, ಶೀಘ್ರವಾಗಿ ದ್ವಾರಕೆಯ ಸ್ತ್ರೀಯರನ್ನೂ ಮಕ್ಕಳನ್ನೂ ಸೇವಕರನ್ನೂ ಅಲ್ಲಿಂದ ಹೊರಡಿಸಿ, ದ್ವಾರಕೆಯನ್ನು ಬಿಡಲಾರದ ಮನಸ್ಸಿನಿಂದ ಬಿಟ್ಟು ಹೊರಟು ಬಂದೆವು. ಅವರೆಲ್ಲರ ರಕ್ಷಣೆಯ ಭಾರವನ್ನು ಹೆಗಲ ಮೇಲೆ ಹೊತ್ತು, ಕೃಷ್ಣನ ವಿಯೋಗದ ದುಃಖ ತುಂಬಿಕೊಂಡು ಅವನ ಆಜ್ಞೆಯನ್ನು ತಲೆಯಮೇಲೆ ಹೊತ್ತು ಅಂತೂ ಇಂತೂ ಪಂಚನದಿ (ಪಂಜಾಬ್) ಸಮೀಪಕ್ಕೆ ಬಂದೆವು. ಅಷ್ಟು ಹೊತ್ತಿಗೆ ಸೂರ್ಯ ಅಸ್ತಮಿಸುತ್ತಿದ್ದ. ಪಕ್ಕದಲ್ಲೇ ಒಂದು ನದಿ ಹರಿಯುತ್ತಿದ್ದುದನ್ನು ನೋಡಿ, ಆ ರಾತ್ರಿ ನದೀತೀರದಲ್ಲೇ ತಂಗುವುದೆಂದು ನಿಶ್ಚಯಿಸಿದೆವು. ಆ ಜನರು ತಂದಿದ್ದ ನಗನಾಣ್ಯಗಳನ್ನು ಒಂದು ಕಡೆ ಭದ್ರ ಪಡಿಸಿಟ್ಟು, ರಾಣಿಯರನ್ನೆಲ್ಲಾ ಪಲ್ಲಕ್ಕಿಗಳಿಂದ ಕೆಳಗಿಳಿಸಿ ಅವರವರ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅತ್ತಿತ್ತ ಹೊರಟರು. ನಾನು ಸಂಧ್ಯಾವಂದನೆಗಾಗಿ ನದಿಗೆ ಹೊರಟೆ. ಇಷ್ಟರಲ್ಲಿ ಎಲ್ಲೆಲ್ಲೂ ಕತ್ತಲು ಆವರಿಸಿತು. ಎಲ್ಲಿಂದಲೋ ಭಯಂಕರ ಕೇಕೆ ಕೇಳಿಬಂತು. ತಲೆಯೆತ್ತಿ ನೋಡಿದೆ. ಅಡವಿಗೊಲ್ಲ ಜಾತಿಯ ದರೋಡೆಕೋರರ ದೊಡ್ಡ ಗುಂಪು ಭರ್ಜಿ ಬಾಕುಗಳನ್ನು ಹಿಡಿದು ನಮ್ಮ ಗುಂಪಿನ ಮೇಲೆ ಬಿದ್ದಿತು. ಅವರು ಧನವನ್ನು ದೋಚಿದರು. ಸ್ತ್ರೀಯರನ್ನು ಹಿಂಸಿಸಲು ಶುರು ಮಾಡಿದರು. ಇಷ್ಟರಲ್ಲಿ ನಾನು, "ಎಲವೋ ದುಷ್ಟರೇ! ಪತಂಗವು ತಿಳಿದೂ ತಿಳಿದೂ ಬೆಂಕಿಯಲ್ಲಿ ಬಿದ್ದು ಪ್ರಾಣ

ನೀಗುವಂತೆ, ಮೀನು ತಿಂಡಿಯನ್ನು ಆಶಿಸಿ ಗಾಳಕ್ಕೆ ಸಿಕ್ಕಿಕೊಳ್ಳುವಂತೆ, ಧನ ಲೋಭದಿಂದ ನಿಮ್ಮ ಪ್ರಾಣಗಳನ್ನೇ ಕಳೆದುಕೊಳ್ಳುತ್ತಿದ್ದೀರಿ. ನನ್ನ ಹೆಸರು ನಿಮಗೆ ಗೊತ್ತಿರಲೇ ಬೇಕು. ಮಹಾಭಾರತ ಯುದ್ಧದಲ್ಲಿ ದ್ರೋಣ, ಭೀಷ್ಮ, ಕರ್ಣಾದಿ ತ್ರಿಲೋಕ ವಿಜೇತರನ್ನು ಜಯಿಸಿದ ಪಾಂಡುನಂದನನಾದ ಅರ್ಜುನ ನಾನೇ. ಈ ಗಾಂಢೀವದಿಂದ ನಿಮ್ಮನ್ನು ನಿಮಿಷ ಮಾತ್ರದಲ್ಲಿ ಯಮಲೋಕಕ್ಕೆ ಅಟ್ಟುವೆನು. ಇನ್ನಾದರು ಇಲ್ಲಿಂದ ಹಿಂತಿರುಗಿ, ಇಲ್ಲದಿದ್ದರೆ ನಿಮಗೆ ಅಂತ್ಯಕಾಲ ಸಮೀಪಿಸದಂತೆಯೇ," ಎಂದು ಹೇಳಿದೆ.

ಇಷ್ಟು ಹೇಳಿದರೂ ಅವರಲ್ಲಿ ಸ್ವಲ್ಪವೂ ಭಯ ಆತಂಕಗಳು ಕಂಡು ಬರಲಿಲ್ಲ. ನಮ್ಮವರನ್ನು ಇನ್ನಷ್ಟು ಹಿಂಸಿಸಲು ಮೊದಲು ಮಾಡಿದರು. ಕೊನೆಗೆ ನನ್ನ ಮೇಲೂ ಬೀಳಲು ಸಿದ್ಧರಾದರು. ಆಗ ನಾನು ದಿವ್ಯಾಸ್ತ್ರ ಹಿಡಿದು ಅವರನ್ನು ಕೊಲ್ಲಲು ಸಿದ್ಧನಾದೆ. ಏನು ವಿಚಿತ್ರವೋ ಏನೋ, ಎಷ್ಟು ಪ್ರಯತ್ನಿಸಿದರೂ ಒಂದು ಮಂತ್ರವೂ ನನಗೆ ಜ್ಞಾಪಕಕ್ಕೆ ಬರಲೇ ಇಲ್ಲ. ಸಂಹಾರ, ಉಪಸಂಹಾರಗಳ ವಿಧಿಯೇ ಮರೆತುಹೋಯಿತು. ಆ ಕಳ್ಳರು ನಾನು ನೋಡುತ್ತಿರುವಂತೆಯೇ ಕೃಷ್ಣ ಪತ್ನಿಯರನ್ನೂ ದಾಸಿಯರನ್ನೂ ಹಿಡಿದೆಳೆಯಲಾರಂಭಿಸಿದರು. ಬಾಧೆ ಪಡುತ್ತಿದ್ದ ಸ್ತ್ರೀಯರು ನನ್ನನ್ನು ಕೂಗುತ್ತಾ, "ನಮ್ಮನ್ನು ಕಾಪಾಡು, ನಮ್ಮನ್ನು ಬಿಡಿಸಿಕೋ ಅರ್ಜುನಾ! ಅರ್ಜುನಾ! ಕಡೆಗೆ ನಮ್ಮನ್ನು ಹೀಗೆ ದುಷ್ಟರ ಪಾಲು ಮಾಡುವೆಯಾ? ನೀನು ಹೀಗೆ ಮಾಡುವೆಯೆಂದು ತಿಳಿದಿದ್ದರೆ ದ್ವಾರಕೆಯಲ್ಲೇ ಇದ್ದು ಸಂತೋಷ ದಿಂದ ಸಮುದ್ರದ ಪಾಲಾದರೂ ಆಗುತ್ತಿದ್ದೆವಲ್ಲಾ," ಎಂದು ಅರಚುತ್ತಿದ್ದರು. ಅವ ರಿಂದ ತಪ್ಪಿಸಿಕೊಳ್ಳಲು ಹೆಣಗಾಡುತ್ತಿದ್ದ ಸ್ತ್ರೀಯರನ್ನೂ ಮಕ್ಕಳನ್ನೂ ಹಾಹಾಕಾರ ಪಡುತ್ತಿದ್ದ ಇತರರನ್ನೂ ನೋಡುತ್ತಾ ಅವರ ಆರ್ತನಾದ ಕೇಳುತ್ತಾ ನಾನು ಹಲ್ಲುಕಿತ್ತ ಸಿಂಹದಂತೆ ಬುಸುಗುಟ್ಟುತ್ತಿದ್ದೆನೇ ಹೊರತು, ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಾರದ ನಿಶ್ಶಕ್ತನಾಗಿದ್ದೆ. ಧನುಸ್ಸಿಗೆ ಹೆದೆಯನ್ನೂ ಕಟ್ಟಲಾರದವನಾಗಿ, ಬಾಣಗಳನ್ನು ಕೈಯಿಂದೆಸೆಯುತ್ತಾ ಅವರೊಡನೆ ಹೋರಾಡಿದೆ. ಬಾಣಗಳೆಲ್ಲಾ ಮುಗಿದುಹೋದವು. ನನ್ನ ಹೃದಯ ತಲ್ಲಣಿಸಹತ್ತಿತ್ತು.

ನನ್ನ ಮೇಲೆ ನನಗೇ ಅಸಹ್ಯ ಹುಟ್ಟಿತು. ನಿರ್ಜೀವಿಯಾದೆ. ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾಗಿ ಹೋದವು. ನನ್ನ ಶಕ್ತಿ ಸಾಮರ್ಥ್ಯಗಳೆಲ್ಲಾ ವಾಸುದೇವನ ಹಿಂದೆಯೇ ಹೋಗಿದ್ದವೆಂದು ನನಗೆ ಅರಿವಾಯಿತು. ಇಲ್ಲದಿದ್ದರೆ, ಅಡವಿಗೊಲ್ಲರು ಅಂತಃ ಪುರದ ಸ್ತ್ರೀಯರನ್ನು ಎಳೆದುಕೊಂಡು ಹೋಗುವುದನ್ನು ತಪ್ಪಿಸಲಾರದ ದೌರ್ಭಾಗ್ಯ ನಾಗುತ್ತಿದ್ದೆನೆ? ನನ್ನ ಎಲ್ಲ ಬಲವೂ ಕೃಷ್ಣ ಭಗವಾನನ ಹಿಂದೆ ಹೋಗಿತ್ತೆನ್ನುವುದಕ್ಕೆ ಬೇರೆ ನಿದರ್ಶನ ಬೇಕೆ? ಕೃಷ್ಣವಿಯೋಗ ದುಃಖ ಒಂದುಕಡೆ ಬಾಧಿಸುತ್ತಿದ್ದರೆ,

ಮತ್ತೊಂದು ಕಡೆ ಅವನ ಆಜ್ಞೆಯಂತೆ ಸ್ತ್ರೀಯರು ಮಕ್ಕಳನ್ನು ಇಂದ್ರಪ್ರಸ್ಥಕ್ಕೆ ಸೇರಿಸಲಿಲ್ಲವೆನ್ನುವ ಬಾಧೆ ಬೆಂಕಿಗೆ ಗಾಳಿ ಬೀಸಿದಂತಾಗಿ ದುಃಖವನ್ನು ಮತ್ತಷ್ಟು ತೀವ್ರಗೊಳಿಸಿತು. ಇಷ್ಟೇ ಸಾಲದೋ ಎನ್ನುವಂತೆ, ದ್ವಾರಕಾಪುರಿಯ ಸುವರ್ಣ ಸೌಧಗಳಲ್ಲಿ ವಾಸಿಸುತ್ತಾ ವಿವಿಧ ದಿವ್ಯ ಭೋಗಗಳನ್ನು ಅನುಭವಿಸುತ್ತಿದ್ದ ವಾಸು ದೇವನ ರಾಣಿಯರು, ಸುಕುಮಾರರು, ಆ ಆಡವಿಗೊಲ್ಲರ ಬಳಿ ಎಷ್ಟು ನೋವು ಅನುಭವಿಸುತ್ತಿರುವರೋ ಎನ್ನುವ ಯೋಚನೆ ನನ್ನ ಹೃದಯವನ್ನು ಸುಟ್ಟು ಭಸ್ಮ ಮಾಡಿತು.

ಅಯ್ಯೋ ಕೃಷ್ಣಾ! ಈ ರೀತಿಯಾಗಿ ನಮ್ಮನ್ನು ಬಲಿ ಕೊಡುವುದಕ್ಕಿಂತ ನಿನ್ನ ಜೊತೆಯಲ್ಲೇ ನಮ್ಮನ್ನು ಕೂಡ ಸ್ವಧಾಮಕ್ಕೆ ಕರೆದೊಯ್ಯಬಾರದಾಗಿತ್ತೇ? ಎಲ್ಲ ಭಯಂಕರ ಬಾಧೆಗಳಿಂದಲೂ ನಮ್ಮನ್ನು ರಕ್ಷಿಸಿ, ಕಟ್ಟಕಡೆಗೆ ಈ ಕಠಿಣ ಶಿಕ್ಷೆ ವಿಧಿಸಿದೆಯಾ?" ಎಂದು ತಲೆತಲೆ ಚಚ್ಚಿಕೊಳ್ಳುತ್ತಿದ್ದ ಅರ್ಜುನನ ರೋದನದಿಂದ ಇಡೀ ಭವನ ಅಲ್ಲಾಡಿತು. ಭೀಮನ ಕಲ್ಲು ಗುಂಡಿನಂಥ ಹೃದಯ ಕೂಡ ಕರಗಿ ಕಣ್ಣೀರು ಉಕ್ಕುಕ್ಕಿ ಬಂದು ಧಾರಾಕಾರವಾಗಿ ಹರಿಯಿತು. ಧರ್ಮಜ, ಮುಂದೇನಾಗುವುದೋ ಎನ್ನುವ ಭಯದಿಂದ ಭೀಮನ ಹತ್ತಿರಕ್ಕೆ ಹೋಗಿ ಉಪ ದೇಶ ರೂಪದ ಮಾತುಗಳಿಂದ ಸಮಾಧಾನಗೊಳಿಸಲೆತ್ನಿಸಿದ. ಸ್ವಲ್ಪ ಹೊತ್ತಿನ ಮೇಲೆ ಭೀಮನಿಗೆ ಪ್ರಜ್ಞೆ ಬಂದಂತಾಗಿ, ಅಣ್ಣನಿಗೆ ನಮಸ್ಕಾರ ಮಾಡಿ, "ಅಣ್ಣಾ! ಇನ್ನು ನನಗೆ ಈ ಬಾಳು ಬೇಕಿಲ್ಲ. ಅಪ್ಪಣೆ ಕೊಟ್ಟರೆ, ಅಡವಿಗೆ ಹೋಗಿ ಪ್ರಾಯಶ್ಚಿತ್ತ ರೂಪವಾಗಿ ಕೃಷ್ಣನಾಮ ಸ್ಮರಿಸುತ್ತಾ ಈ ಕಾಯವನ್ನು ಭಸ್ಮಮಾಡಿ ಸ್ವಧಾಮದಲ್ಲಿರುವ ಕೃಷ್ಣನನ್ನು ಸೇರಿಕೊಳ್ಳುತ್ತೇನೆ. ಕೃಷ್ಣನಿಲ್ಲದ ಈ ಲೋಕ ನನಗೆ ನರಕ ಸಮಾನವಾಗಿ ಕಾಣುತ್ತಿದೆ," ಎನ್ನುತ್ತಾ ಸುರಿಯುತ್ತಿದ್ದ ಕಣ್ಣೀರನ್ನು ಒರೆಸಿ ಕೊಂಡ.

# ೧೨ ಕಲಿಯುಗದ ಉದಯ

ಇಷ್ಟು ಕಾಲವೂ ಮೌನದಿಂದಿದ್ದ ಸಹದೇವ ಭೀಮನ ಬಳಿಗೆ ಬಂದು, "ಅಣ್ಣಾ ! ದುಃಖ ಪಡಬೇಡ. ಸಮಾಧಾನ ತಂದುಕೊ. ವಾಸುದೇವ ಧೃತರಾಷ್ಟ್ರ ಮಹೀ

ಪತಿಯ ಬಳಿಗೆ ಸಂಧಿಗಾಗಿ ಹೋಗಿದ್ದಾಗ, ಧೃತರಾಷ್ಟ್ರ ಪುತ್ರರು ಸಭೆಯಲ್ಲಿ ಕೇಳಿದ ಪ್ರಶ್ನೆಗೆ ವಾಸುದೇವ ಏನೆಂದು ಸಮಾಧಾನ ಕೊಟ್ಟನೆನ್ನುವುದನ್ನು ನೀನು ಮರೆತಿಲ್ಲ ತಾನೆ?

'ನಮ್ಮನಮ್ಮೊಳಗಿನ ಈ ಕುಟುಂಬ ಕಲಹದಲ್ಲಿ ನೀನೇಕೆ ಪ್ರವೇಶಿಸಿದೆ ಕೃಷ್ಣಾ? ಪಾಂಡವರು ನಿನಗೆ ಹೇಗೆ ಬಂಧುಗಳೋ ಕೌರವರು ಹಾಗೇ ನಿನಗೆ ಬಂಧುಗಳು ಅಲ್ಲವೆ? ಈಗ ನೀನು ಪಾಂಡವ ಪಕ್ಷವಹಿಸಿ, ಈ ರಾಯಭಾರಿ ಪಟ್ಟ ಕಟ್ಟಿಕೊಂಡು ತಿರುಗುವುದಕ್ಕೆ ಪ್ರತ್ಯೇಕ ಕಾರಣವಾದರೂ ಏನು?' ಎಂದು ಧೃತರಾಷ್ಟ್ರನ ಸಭೆಯಲ್ಲಿ ದುರ್ಯೋಧನ ದುಶ್ಶಾಸನಾದಿಗಳು ಕೃಷ್ಣನನ್ನು ಪ್ರಶ್ನಿಸಿದಾಗ, ಕೃಷ್ಣ ಏನು ಹೇಳಿದನು ಎನ್ನುವುದನ್ನು ಒಂದು ಸಾರಿ ಜ್ಞಾಪಿಸಿಕೊ.

ಕೃಷ್ಣ ಸಿಂಹದ ಮರಿಯಂತೆ ಅತ್ತಿಂದಿತ್ತ ತಿರುಗುತ್ತಾ, 'ದುರ್ಯೋಧನಾ, ಏನೆಂದೆ? ನನಗೆ ಪಾಂಡವರಂತೆಯೇ ಕೌರವರು ಎಂದೆಯೇನು? ಎಂದಿಗೂ ಇಲ್ಲ! ಅವರಿಗೂ ನನಗೂ ಇರುವ ಸಂಬಂಧ ಹೇಳುತ್ತೇನೆ ಕೇಳು. ಈ ದೇಹಕ್ಕೆ ಪ್ರಧಾನವಾದ ಶಿರಸ್ಸಿನಂತಿರುವವನು ಧರ್ಮರಾಜ. ಭುಜದಂತಿರುವವನು ಅರ್ಜುನ, ಉದರದಂತಿರುವವನು ಭೀಮ. ಎರಡು ಪಾದಗಳಂತಿರುವವರು ನಕುಲ ಸಹದೇವರು. ಇಂಥ ದೇಹವುಳ್ಳವನೇ ಈ ಕೃಷ್ಣ, ತಿಳಿಯಿತೇ? ಹೃದಯವಿದ್ದರೇನೇ ಈ ಅಂಗಗಳು ಅವುಗಳ ಕೆಲಸ ಮಾಡುವುವಲ್ಲದೆ, ಹೃದಯ ಇಲ್ಲದಿದ್ದರೆ ಅಂಗಗಳು ನಿರ್ಜೀವವಾಗುವುವು,' ಎಂದು ಕೃಷ್ಣ ಆ ಸಭೆಯಲ್ಲಿ ಘರ್ಜಿಸಿದನು. ಅದನ್ನು ನೆನಪು ಮಾಡಿಕೊಂಡರೆ, ಹೃದಯ ಹೋಗಿದೆ. ಇನ್ನು ಸ್ವಲ್ಪ ಕಾಲದಲ್ಲೇ ಈ ಅಂಗಾಂಗಗಳಾದ ಪಾಂಡವರೂ ಕೂಡ ನಿರ್ಜೀವಿಗಳಾಗಿ ಹೋಗುವರು. ಆದ್ದರಿಂದ, ನಮ್ಮೆಲ್ಲರಿಗೂ ಅಂತ್ಯಕಾಲ ಸಮೀಪಿಸುತ್ತಿದೆ. ಕಾಲಸ್ವರೂಪನಾದ ಭಗವಂತ ನಮ್ಮನ್ನು ಕೂಡ ತನ್ನಲ್ಲಿ ಲೀನ ಮಾಡಿಕೊಳ್ಳಲು ಉತ್ಸಾಹ ಪಡುತ್ತಿದ್ದಾನೆ. ನಾವು ಸರ್ವಸಿದ್ಧರಾಗಿ ಅವನ ಕರೆಗೆ ಕಾಯುತ್ತಾ ಇರಬೇಕಾದ್ದು ತಪ್ಪಿದ್ದಲ್ಲ.

ಕಲಿ ಪ್ರವೇಶವಾಗಿದೆಯೆನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಾಗಿಲ್ಲ. ಕೃಷ್ಣ ಎಂದು ಈ ಲೋಕವನ್ನು ಬಿಟ್ಟನೋ ಅಂದೇ ದ್ವಾಪರದ ಬಾಗಿಲು ಮುಚ್ಚಿತು. ಕಲಿಯ ದ್ವಾರ ತೆರೆಯಿತು. ಇಲ್ಲದಿದ್ದರೆ, ಈ ದುಷ್ಟ ಬುದ್ಧಿಗಳು ಸ್ವೇಚ್ಛೆಯಾಗಿ ಸಂಚರಿಸಲು ಸಾಧ್ಯವೇ? ಅತಿ ತೀವ್ರವಾಗಿ ಹೋರಾಟ ನಡೆಯುವ ಸಮಯದಲ್ಲಿ ಸಹಜವಾಗಿ ಎಂದೂ ಮಂತ್ರವನ್ನು ಮರೆಯದ ಅರ್ಜುನ, ಆಪತ್ಕಾಲದಲ್ಲಿ, ಅತಿ ಮುಖ್ಯವಾದ ಮಂತ್ರಗಳನ್ನೇ ಮರೆಯುವಂತಾದರೆ, ಇದು ಮಹಾಮಾಯೆ ಕಲಿಯ ಪ್ರಭಾವವೇ ಸರಿ," ಎಂದ.

ನಕುಲನೂ ಅವರೊಡನೆ ಸೇರಿ, "ಅಣ್ಣಂದಿರೇ! ಬೆಳಗಿನ ಜಾವವಾಗುತ್ತಿದೆ. ಬೇಗ ಈ ವಾರ್ತೆಯನ್ನು ಅಂತಃಪುರದ ರಾಣಿಯರಿಗೂ ಪೂಜ್ಯ ಮಾತೆಯವರಿಗೂ ತಿಳಿಸಿ ಮುಂದೆ ನಾವು ಮಾಡಬೇಕಾದ ಪ್ರಯತ್ನಕ್ಕೆ ಸರಿಯಾದ ಮಾರ್ಗ ನಿರ್ಣಯಿಸೋಣ. ಪ್ರಾಣ ಹೋದೊಡನೆಯೇ ದೇಹ ಶಿಥಿಲವಾಗದು. ಹಾಗೇ, ನಮ್ಮ ಪ್ರಾಣ ಸಮಾನನಾದ ಕೃಷ್ಣ ಸ್ವಧಾಮಕ್ಕೆ ಹೋದ ತಕ್ಷಣವೇ ಪಾಂಡುನಂದನರೆನ್ನುವ ದೇಹಾಂಗಗಳು ನಿರ್ಜೀವವಾದವು. ಅವು ಶಿಥಿಲವಾಗಲು ಇನ್ನೂ ಸ್ವಲ್ಪ ಕಾಲಬೇಕು. ನಾವೂ ಕೂಡ ಆ ವಾಸುದೇವನ ಸನ್ನಿಧಿಗೆ ಇಂದೋ ನಾಳೆಯೋ ಹೋಗುವವರೇ. ಆದ್ದರಿಂದ, ಸುಮ್ಮನೆ ಚಿಂತಿಸುತ್ತಾ ಕೂಡದೆ, ನಮ್ಮ ಮುಂದಿನ ಕ್ರಮವನ್ನು ಕುರಿತು ವಿಚಾರ ಮಾಡೋಣ, ಏಳಿ," ಎಂದು ತೀವ್ರ ವೈರಾಗ್ಯದಿಂದ ನಕುಲ ಮಾಡಿದ ಸಲಹೆಗೆ ಎಲ್ಲರೂ ಒಪ್ಪಿ ಹೊರಟರು.

ಈ ವಾರ್ತೆ ಅಂತಃಪುರಕ್ಕೆ ತಿಳಿದರೆ, ದ್ರೌಪದಿ, ಸುಭದ್ರೆ, ವೃದ್ಧ ಮಾತೃದೇವಿ ಏನಾಗುವರೋ ಎಂದು ಸ್ವಲ್ಪ ಹೊತ್ತು ಯೋಚಿಸಿದರು. ಏನಾದರೂ ಸರಿಯೆ, ಕೃಷ್ಣ ಹೋದಮೇಲೆ ಇವರು ಮಾತ್ರ ಇದ್ದು ಪ್ರಯೋಜನವೇನು ಎಂದು ಎಲ್ಲರೂ ಧೈರ್ಯ ತಂದುಕೊಂಡು, ತಾಯಿಯ ಬಳಿಗೆ ಹಿರಿಯ ಮಗ ಧರ್ಮರಾಜನೇ ಹೋಗಿ ಹೇಳುವುದು ಒಳ್ಳೆಯದೆಂದು ನಿರ್ಣಯಿಸಿಕೊಂಡರು. ಸುಖಕರ ಸಮಯ ನಿಮಿಷದಲ್ಲಿ ಹೋಗಿಬಿಡುತ್ತೆ. ಆದರೆ, ದುಃಖಕರ ಸಮಯ ಬೇಗ ಹೋಗುವುದೇ ಇಲ್ಲ. ಅದು ಪರ್ವತದಂತೆ ಅಗಮ್ಯವೂ ಪ್ರಳಯಕಾರಕವೂ ಆಗಿ ಬೆಳೆಯುತ್ತೆ.

ಧರ್ಮಜನ ರಾಜಧಾನಿ ಇಂದ್ರಪ್ರಸ್ಥವೇ ಆದರೂ ಮಹಾಭಾರತ ಯುದ್ಧದಲ್ಲಿ ಹಿರಿಯರೆಲ್ಲರೂ ಹೋಗಿದ್ದುದರಿಂದ, ಸಿಂಹಾಸನವನ್ನು ಹಸ್ತಿನಾಪುರದಲ್ಲೇ ಇರಿಸಿಕೊಂಡಿದ್ದರು. ಕೆಲವು ದಿನ ಇಂದ್ರಪ್ರಸ್ಥದಲ್ಲೂ ಕೆಲವು ದಿನ ಹಸ್ತಿನಾಪುರದಲ್ಲೂ ಹೀಗೆ ಧರ್ಮಜ ಎರಡೂ ಕಡೆಯೂ ಇರುತ್ತಿದ್ದ. ಈ ವಿಷಯ ತಿಳಿಯದ ಅರ್ಜುನ ತನ್ನೊಡನೆ ಕರೆತಂದಿದ್ದ ಕೆಲವು ದ್ವಾರಕೆಯ ಸ್ತ್ರೀಯರನ್ನು ಇಂದ್ರಪ್ರಸ್ಥಕ್ಕೆ ಕರೆದುಕೊಂಡು ಬಂದು, ಅಲ್ಲಿ ಧರ್ಮಜ ಇಲ್ಲವೆಂದು ತಿಳಿದು, ಯದುವಂಶದ ಸ್ತ್ರೀಯರನ್ನೂ ಕೆಲವು ಪರಿಚಾರಕರನ್ನೂ ಇಂದ್ರಪ್ರಸ್ಥದಲ್ಲೇ ಬಿಟ್ಟು ತಾನೊಬ್ಬನೇ ಹಸ್ತಿನಾಪುರಕ್ಕೆ ಬಂದಿದ್ದ.

ಆದರೆ, ಯಾದವರ ಪೈಕಿ ಉಳಿದಿದ್ದ ಒಬ್ಬನೇ ಪುರುಷನಾದ ವಜ್ರನು ತಾನು ಅಡವಿ ಗೊಲ್ಲರನ್ನು ಹಿಡಿಯಲಾರದೆ, ಅಬಲರನ್ನು ರಕ್ಷಿಸಿಕೊಳ್ಳಲಾರದೆ ಹೋದೆನಲ್ಲಾ ಎನ್ನುವ ಚಿಂತೆಯಿಂದ, ನಡೆದ ದುರ್ಘಟನೆಗಳ ಬಾಧೆಯಿಂದ ಮಾನಸಿಕ ಆಘಾ

ತಕ್ಕೆ ಒಳಗಾಗಿ ಯಾರಿಗೂ ಮುಖ ತೋರಿಸಲು ಇಷ್ಟವಿಲ್ಲದೆ, ಕತ್ತಲೆ ಕೋಣೆಯಲ್ಲೇ ಕಾಲ ಕಳೆಯುತ್ತಿದ್ದ.

ಕುಂತೀ ದೇವಿ ಅರ್ಜುನ ದ್ವಾರಕೆಯಿಂದ ಹಸ್ತಿನಾಪುರಕ್ಕೆ ಬಂದಿರುವನೆಂದು ರಾತ್ರಿಯೇ ಒಬ್ಬ ದಾಸಿಯಿಂದ ತಿಳಿದು, ಯಾವ ನಿಮಿಷ ತನ್ನ ಕುಮಾರ, ಅರ್ಜುನ, ತನ್ನ ಬಳಿಗೆ ಬರುವನೋ ದ್ವಾರಕೆಯ ವಿಷಯ ತಿಳಿಸಿ ಸಂತೋಷಪಡಿಸುವನೋ ಎನ್ನುವ ನಿರೀಕ್ಷೆಯಿಂದ, ದೀಪಗಳನ್ನೂ ಆರಿಸದೆ, ನಿದ್ರೆ ಹೋಗದೆ, ಏನೊಂದು ಸಣ್ಣ ಶಬ್ದವಾದರೂ ಅರ್ಜುನ ಬಂದನೇನೋ ಎನ್ನುವ ಭ್ರಾಂತಿಯಿಂದ, "ಮಗೂ! ಅರ್ಜುನ," ಎಂದು ಕೂಗುತ್ತಿದ್ದಳು. ಆಲೈಸಿ, ಉತ್ತರ ಬರದಿದ್ದುದನ್ನು ಕಂಡು, ತನ್ನ ದಾಸಿಯನ್ನು ಕೂಗಿ, "ಏನೇ! ಅರ್ಜುನ ದ್ವಾರಕೆಯಿಂದ ಬಂದನೆಂದು ಹೇಳಿದೆಯಲ್ಲಾ, ಇಷ್ಟು ಹೊತ್ತಾದರೂ ನನ್ನನ್ನು ನೋಡಲು ಬರಲೇ ಇಲ್ಲವಲ್ಲಾ? ಬಹುಶಃ ನೀನು ಬೇರೆ ಯಾರನ್ನೋ ನೋಡಿ ಅರ್ಜುನನೆಂದು ತಿಳಿದಿರಬೇಕು. ಅರ್ಜುನನೇ ಬಂದಿದ್ದರೆ, ಇಷ್ಟು ಹೊತ್ತಾದರೂ ನನ್ನ ಬಳಿ ಬರದೆ ಇರುತ್ತಿದ್ದನೇ?" ಎನ್ನುತ್ತಿದ್ದಳು. ಹೀಗೆ, ಕುಂತೀದೇವಿ ಆ ರಾತ್ರಿಯೆಲ್ಲಾ ಅವನ ನಿರೀಕ್ಷಣೆಯಲ್ಲಿ ಜಾಗರಣೆ ಮಾಡಿದಳು.

ಬೆಳಗಾಯಿತು. ಎಲ್ಲರೂ ಅವರವರ ಕೆಲಸ ಕಾರ್ಯಗಳಲ್ಲಿ ನಿರತರಾಗುತ್ತಿದ್ದರು. ಕುಂತೀದೇವಿಯ ಮನಸ್ಸು ಬೇರೊಂದು ರೀತಿಯಲ್ಲಿ ಯೋಚಿಸಲಾರಂಭಿಸಿತು. ರಾತ್ರಿ ಅರ್ಜುನ ಬಂದದ್ದು ನಿಜವೇ ಆಗಿದ್ದರೆ, ನನ್ನ ಬಳಿಗೆ ಬಾರದಿರಲು ಕಾರಣವೇನಿರಬಹುದು? ಬಹುಶಃ ರಾಜಕಾರ್ಯದ ತುರ್ತು ವಿಷಯಗಳನ್ನು ಅಣ್ಣ ತಮ್ಮಂದಿರೆಲ್ಲಾ ಸೇರಿ ತುಂಬಾ ಹೊತ್ತು ಮಾತನಾಡುತ್ತಿದ್ದರೇನೋ? ಪ್ರಯಾಣದ ಬಳಲಿಕೆಯಿಂದಾಗಿ, ವಿಶ್ರಾಂತಿ ಪಡೆದು, ಬೆಳಿಗ್ಗೆ ತಾಯಿಯನ್ನು ನೋಡೋಣ ಎಂದು ಕೊಂಡನೋ ಏನೋ? ಅಥವಾ, ದ್ವಾರಕೆಯಲ್ಲೇನಾದರೂ ಪ್ರಮಾದ ಜರುಗಿ, ಆ ಬಗ್ಗೆ ವಾಸುದೇವ ಕೂಡಲೇ ಅಣ್ಣನ ಹತ್ತಿರ ಮಾತಾಡಿ ಬಾ ಎಂದು ಹೇಳಿ ಕಳಿಸಿದನೇನೋ? ಅದರಿಂದೇನಾದರೂ ಹಾಗೇ ಮರೆತು ಹೊರಟು ಹೋದನೋ ಏನೋ ಎಂದೆಲ್ಲಾ ಯೋಚಿಸುತ್ತಿದ್ದಳು. ಒಂದೊಮ್ಮೆ ಬೆಳಗಾಗುತ್ತಲೇ ಬಂದರೂ ಬರಬಹುದು ಎಂದುಕೊಂಡು, ಬೆಳಕು ಹರಿಯತ್ತಲೇ ಎದ್ದು ಸ್ನಾನಾದಿ ಕರ್ಮಗಳನ್ನು ಮುಗಿಸಿ, ಅರ್ಜುನನ ನಿರೀಕ್ಷಣೆ ಮಾಡುತ್ತಾ ಕುಳಿತಳು.

ಇಷ್ಟರಲ್ಲಿ ಮತ್ತೊಂದು ಹೊಸ ಸಂದೇಹ ಅವಳನ್ನು ಕಾಡಿಸಿತು. ಪ್ರತಿದಿನ ರಾತ್ರಿ ತನ್ನ ಕುಮಾರರು ಒಬ್ಬೊಬ್ಬರಾಗಿ ಬಂದು ತಾಯಿ ಪಾದಗಳಿಗೆ ನಮಸ್ಕಾರ ಮಾಡಿ ಅಪ್ಪಣೆ ಪಡೆದು ಹೋಗುವುದು ಪದ್ಧತಿ. ಆದರೆ, ಕಳೆದ ರಾತ್ರಿ ಐದು ಜನರಲ್ಲಿ

ಒಬ್ಬರೂ ಬರಲಿಲ್ಲವಲ್ಲಾ! ಏಕಿರಬಹುದು ಎಂದು ಮತ್ತಷ್ಟು ಆತಂಕಪಟ್ಟಳು. ಸೊಸೆಯರಾದ ದ್ರೌಪದಿ, ಸುಭದ್ರೆಯರನ್ನು ವಿಚಾರಿಸುವಂತೆ ದಾಸಿಯರ ಮೂಲಕ ಹೇಳಿ ಕಳುಹಿಸಿದಳು. ಅಣ್ಣತಮ್ಮಂದಿರಲ್ಲಿ ಯಾರೊಬ್ಬರೂ ಆ ರಾತ್ರಿ ಊಟಕ್ಕೆ ಸಹ ಬಂದಿಲ್ಲವೆಂದು ಅವರಿಂದ ವರ್ತಮಾನ ಬಂದಿತು. ಕುಂತೀದೇವಿಯ ಹೃದಯ ಮತ್ತಷ್ಟು ಬಡಿದುಕೊಳ್ಳಲಾರಂಭಿಸಿತು. ಹೀಗೆ ಆತಂಕಗೊಂಡಿರುವಾಗ, ಅರ್ಜುನ ಸಮೇತನಾಗಿ ಧರ್ಮಜ ದಯಮಾಡಿಸುತ್ತಿರುವನೆಂದು ಒಬ್ಬ ವೃದ್ಧ ದಾಸಿ ಬಂದು ಕುಂತೀದೇವಿಗೆ ಹೇಳಿದಳು. ಕುಂತೀದೇವಿಗೆ ಎಂಥ ವಾರ್ತೆ ತಂದಿರುವರೋ ಎನ್ನುವ ಭಯ ಒಂದು ಕಡೆ. ಇಷ್ಟು ದಿನಗಳಾದ ಮೇಲೆ ತನ್ನ ಕುಮಾರ ಅರ್ಜುನನನ್ನು ನೋಡುತ್ತಿದ್ದೇನಲ್ಲಾ ಎನ್ನುವ ಸಂತೋಷ, ಮತ್ತೊಂದು ಕಡೆ, ಯಾದವರ ಕ್ಷೇಮ ಸಮಾಚಾರಗಳನ್ನು ಕೇಳುವೆನಲ್ಲಾ ಎನ್ನುವ ಉತ್ಸಾಹ ಇನ್ನೊಂದು ಕಡೆ. ಈ ಎಲ್ಲ ಭಾವನೆಗಳೂ ಸೇರಿ, ಭಯದಿಂದ ಕಂಪಿಸುತ್ತಿದ್ದಂತೆ ಕಾಣುತ್ತಿದ್ದಳು.

ಇಷ್ಟರಲ್ಲಿ, ಧರ್ಮಜ ಬಂದು ತಾಯಿಗೆ ನಮಸ್ಕರಿಸಿ ನಿಂತುಕೊಂಡನು. ಅರ್ಜುನ ತಾಯಿಯ ಪಾದಗಳಿಗೆರಗಿ, ಮೇಲೇಳದೇ ಇದ್ದುದನ್ನು ನೋಡಿ ಕುಂತೀದೇವಿ, "ಇಷ್ಟು ಕಾಲ ನನ್ನನ್ನು ಬಿಟ್ಟು ಹೇಗಿದ್ದೆ, ಮಗೂ?" ಎಂದು ಅವನ ಶಿರಸ್ಸನ್ನು ಮುದ್ದಾಡಿ, "ಮಗೂ! ನೀನು ನಿನ್ನೆ ರಾತ್ರಿಯೇ ಬಂದೆಯೆಂದು ಕೇಳಿದೆ, ನಿಜವೇ? ಹಾಗಾದರೆ ರಾತ್ರಿಯೇ ಬರಲಿಲ್ಲವೇಕೆ? ಎಷ್ಟೋ ದಿನಗಳ ಮೇಲೆ ಬಂದ ಮಗನನ್ನು ತಾಯಿಯಾದವಳು ನೋಡದೆ ಹೇಗೆ ತಾನೆ ಇರಲಾದೀತು? ಹೋಗಲಿ, ಈಗ ಲಾದರೂ ಬಂದೆಯಲ್ಲ. ತುಂಬಾ ಸಂತೋಷ. ದ್ವಾರಕೆಯಲ್ಲಿ ನಿಮ್ಮ ಅತ್ತೆ, ಮಾವ, ತಾತ ಎಲ್ಲರೂ ಕ್ಷೇಮ ತಾನೆ? ನಮ್ಮ ಅಣ್ಣ ವಸುದೇವ ಬಹಳ ಮುದುಕನಾಗಿರ ಬಹುದು. ಓಡಾಡುತ್ತಾನೆಯೇ? ಅಥವಾ ನನ್ನ ಹಾಗೆ ಮಂಚದ ಮೇಲಿದ್ದುಕೊಂಡು ಎಲ್ಲ ಸೇವೆ ಮಾಡಿಸಿಕೊಳ್ಳುತ್ತಾನೋ?" ಎಂದು ಅರ್ಜುನನ ಕೈಹಿಡಿದು, ಕಣ್ಣರಳಿಸಿ, ಅವನನ್ನೇ ದೃಷ್ಟಿಸಿ ನೋಡುತ್ತಾ, "ಇದೇನು ಮಗೂ? ಇಷ್ಟೇಕೆ ಬಡವಾಗಿದ್ದೀ? ಕಣ್ಣೇಕೆ ಊದಿವೆ? ದ್ವಾರಕೆ ಏನು ಹತ್ತಿರವೇ? ದೂರದ ದಾರಿ. ಅಡವಿಯ ದಾರಿ. ಪ್ರಯಾಣದ ಬಳಲಿಕೆಯಿಂದ ಸೊರಗಿರಬೇಕು.

ಅದಿರಲಿ, ನಮ್ಮ ಶ್ಯಾಮಸುಂದರ ನನಗೇನು ಹೇಳಿ ಕಳಿಸಿದ್ದಾನೆ? ಇಲ್ಲಿಗೆ ಯಾವಾಗ ಬರುತ್ತಾನಂತೆ? ನನ್ನನ್ನು ನೋಡಬೇಕೆನ್ನುವ ಆಸೆ ಇಲ್ಲವಂತೇನು? ಅವನಿಗೇನು? ಅವನು ವಾಸುದೇವ! ಅಲ್ಲಿಂದಲೇ ಎಲ್ಲರನ್ನೂ ನೋಡಬಲ್ಲ! ನೋಡಬೇಕೆನ್ನುವ ಆಶಾಪಾಶ ನಮ್ಮಂಥವರಿಗೆ ತಾನೆ? ನಾನು ಯಾವಾಗ ಅವನನ್ನು ನೋಡು ತ್ತೇನೋ? ಅವನು ಬರುವವರೆಗೂ ಈ ಕಳಿತ ಶರೀರ ಇರುವುದೋ ಹೋಗಿಬಿಡು

ವುದೋ?" ಎಂದು ಪ್ರಶ್ನೆ ಹಾಕಿಕೊಳ್ಳುತ್ತ, ತಾನೇ ಉತ್ತರ ಹೇಳಿಕೊಳ್ಳುತ್ತ ಅರ್ಜುನನಾಗಲಿ, ಧರ್ಮಜನಾಗಲಿ ಮಾತನಾಡುವುದಕ್ಕೆ ಅವಕಾಶ ಕೊಡದಂತೆ ತಾನೇ ಮಾತನಾಡುತ್ತಿದ್ದಳು. ಅರ್ಜುನನ ಕಣ್ಣುಗಳಿಂದ ತಾನೇತಾನಾಗಿ ತಡೆಯಿಲ್ಲದೆ ಕಣ್ಣೀರ ಪ್ರವಾಹ ಹರಿಯುತ್ತಿತ್ತು.

ಈ ವಿಚಿತ್ರವನ್ನು ನೋಡಿದ ಕುಂತೀದೇವಿ, ಅವನನ್ನು ಇನ್ನಷ್ಟು ಹತ್ತಿರಕ್ಕೆ ಎಳೆದು ಕೊಂಡು, ತನ್ನ ಭುಜದ ಮೇಲೆ ಅವನ ತಲೆಯಿಟ್ಟುಕೊಂಡು, "ಮಗೂ! ಏನಾಯಿತಪ್ಪಾ? ನೀನು ಕಣ್ಣೀರು ಹಾಕುವಂಥ ಘೋರವಾದ ಘಟನೆ ಏನು ಜರುಗಿತು? ಹೇಳು. ಇಲ್ಲಿರಬೇಡ ಹೋಗೆಂದು ಗೋಪಾಲ ಬೈದು ಕಳಿಸಿದನೇನು? ಅಥವಾ, ಇನ್ನೇನಾದರೂ ದುರ್ಘಟನೆ ಸಂಭವಿಸಿತೇ?" ಎಂದು ಪರಿಪರಿಯಾಗಿ ವಿಚಾರ ಮಾಡುತ್ತಿರುವಾಗ, ಧರ್ಮಜ ತನ್ನೆರಡು ಕೈಗಳಿಂದಲೂ ಮುಖವನ್ನು ಮುಚ್ಚಿ ಕೊಂಡು, "ಅಮ್ಮಾ! ಇನ್ನೂ ನಮ್ಮ ವಾಸುದೇವನೇ? ಅವನು ನಮ್ಮನ್ನಗಲಿ ಇಂದಿಗೆ ಹತ್ತು ದಿನಗಳಾಗುತ್ತಾ ಬಂತು. ಸ್ವಧಾಮಕ್ಕೆ ಹೋದನಂತೆ! ಯಾದವರು ಎಲ್ಲರೂ ಮೃತರಾದರಂತೆ!" ಎನ್ನುತ್ತಲೇ, ಕುಂತೀದೇವಿ ಅಚ್ಚರಿಯಿಂದ ಕಣ್ಣರಳಿಸಿ, "ಏನು? ನನ್ನ ಗೋಪಾಲ ... ನನ್ನ ನಂದನಂದನ ... ನನ್ನ ಹೃದಯಧನ ಈ ಲೋಕವನ್ನು ವಿಧವೆ ಮಾಡಿ ಹೋದನೆ? ಹಾ! ಕೃಷ್ಣಾ! ಹಾ! ಕೃಷ್ಣಾ!" ಎಂದು ಅವನನ್ನು ಹುಡುಕಿ ಕರೆದುಕೊಂಡು ಬರುತ್ತೇನೆ ಎನ್ನುವಳಂತೆ ಆ ಕ್ಷಣ ಅಸುನೀಗಿದಳು. ಅವಳೂ ಶ್ಯಾಮಸುಂದರ ಹೋದ ದಾರಿಯಲ್ಲೇ ಹೊರಟು ಹೋದಳು. ಇನ್ನು ಅಲ್ಲಿದ್ದುದು ಕುಂತೀದೇವಿಯ ನಿರ್ಜೀವ ಶರೀರ ಮಾತ್ರ! ತಾಯಿಯ ಪ್ರಾಣ ಹೋದೊಡನೆ, ಬಳಿಯಲ್ಲಿದ್ದ ಅರ್ಜುನ, "ಅಣ್ಣಾ! ಏನಿದು ಈ ವಿಚಿತ್ರ? ಮಾತೃದೇವಿಯನ್ನೂ ಸಹ ಕಳೆದುಕೊಂಡೆವಲ್ಲಾ," ಎಂದು ಗಟ್ಟಿಯಾಗಿ ಅಳಲು ಆರಂಭಿಸಿದ. ಜತೆಯಲ್ಲಿದ್ದ ಧರ್ಮಜ, "ಏನು, ಏನಾಯಿತು," ಎನ್ನುತ್ತಾ ಹತ್ತಿರ ಬಂದು ತಾಯಿಯ ಮುಖ ನೋಡಿ ಸ್ತಂಭೀಭೂತನಾದ.

# ೧೩ ಪರೀಕ್ಷಿತನ ಪಟ್ಟಾಭಿಷೇಕ

ಹೊರಗೆ ಬಾಗಿಲ ಬಳಿ ಇದ್ದ ದಾಸಿಯರು ಅರ್ಜುನನ ರೋದನವನ್ನು ಕೇಳಿ ಒಳಗೆ ಇಣಿಕಿ ನೋಡಿದರು. ಕುಂತೀದೇವಿಯ ದೇಹ ನೆಲದ ಮೇಲಿದೆ. ಅರ್ಜುನ ತಾಯಿಯ ತಲೆಯನ್ನು ತೊಡೆಯಮೇಲಿಟ್ಟುಕೊಂಡು ಮುಖ ಮುಚ್ಚಿಕೊಂಡು ದುಃಖಿಸುತ್ತಿದ್ದಾನೆ. ಆ ದೃಶ್ಯವನ್ನು ನೋಡಿ ದಾಸಿಯರು ಒಬ್ಬರಿಗಿಂತೊಬ್ಬರು ಆತುರಾತುರವಾಗಿ ಒಳಗೆ ಓಡಿಬಂದು, ತಮ್ಮ ಮಹಾರಾಣಿ ತಮ್ಮನ್ನು ಬಿಟ್ಟು ಶಾಶ್ವತವಾಗಿ ಅಗಲಿದಳೆನ್ನುವುದನ್ನು ತಿಳಿದು ಗೋಳಿಟ್ಟರು.

ಇಷ್ಟರಲ್ಲಿ, ಒಬ್ಬರಿಂದೊಬ್ಬರಿಗೆ ಸುದ್ದಿ ಹೋಗಿ ಅಂತಃಪುರದ ರಾಣಿಯರಿಗೆ ಸುದ್ದಿ ತಿಳಿಯಿತು. ಒಂದು ನಿಮಿಷದಲ್ಲಿ ಕುಂತೀದೇವಿಯ ಮರಣ ವಾರ್ತೆ ಇಡೀ ಹಸ್ತಿನಾಪುರಕ್ಕೆಲ್ಲಾ ಹರಡಿತು. ಅಂತಃಪುರದ ರಾಣಿಯರು ಎದೆ ಎದೆ ಬಡಿದು ಕೊಳ್ಳುತ್ತಾ ನಾನಾರೀತಿಯಾಗಿ ದುಃಖಿಸುತ್ತಾ ಅಲ್ಲಿಗೆ ಬಂದರು. ಇರುವೆಯ ಸಾಲಿನಂತೆ, ಒಂದು ಕಡೆಯಿಂದ ರಾಣಿಯರೂ ಇನ್ನೊಂದು ಕಡೆಯಿಂದ ದಾಸಿಯರೂ ಸಾಲುಸಾಲಾಗಿ ಬಂದರು. ಭೀಮ, ನಕುಲ, ಸಹದೇವಾದಿಗಳೂ ಮಂತ್ರಿಗಳೂ ಇತರರೂ ನಿಮಿಷಾರ್ಧದಲ್ಲಿ ಅಲ್ಲಿಗೆ ಬಂದು ಸೇರಿದರು.

ಆ ದೃಶ್ಯ ವರ್ಣನಾತೀತ! ಒಂದು ನಿಮಿಷದ ಕೆಳಗೆ, ಬಹಳ ಆನಂದದಿಂದ ಅರ್ಜುನನ ಆಗಮನಕ್ಕಾಗಿ, ದ್ವಾರಕೆಯ ವಾರ್ತೆ ಕೇಳುವುದಕ್ಕಾಗಿ ಬಹು ಉತ್ಸಾಹದಿಂದ ಕಾದಿದ್ದ ಕುಂತಿಯ ನಿರ್ಜೀವ ದೇಹವನ್ನು ನೋಡಿಯೂ ಅವಳ ಮರಣವನ್ನು ನಂಬದಾದರು. ಬಂದು ನೋಡಿದವರೆಲ್ಲಾ ಬೊಂಬೆಯಂತೆ ಕದಲದೆ ನಿಂತುಬಿಟ್ಟರು. ದಾಸಿಯರ ಮತ್ತು ರಾಣಿಯರ ರೋದನ ಕಲ್ಲೆದೆಯನ್ನೂ ಕರಗಿಸುವಂತಿತ್ತು.

ಇಂಥ ಸನ್ನಿವೇಶದಲ್ಲಿ, ಧರ್ಮಜ ಎಲ್ಲರನ್ನೂ ಸಂತೈಸುತ್ತಾ ಸೋದರರಿಗೆ ದುಃಖಿಸಬೇಡಿರೆಂದು ಸಮಾಧಾನ ಹೇಳುತ್ತಾ ಕಣ್ಣೀರು ಹಾಕದೆ, ಅಲ್ಲಿಂದಿಲ್ಲಿಗೆ ತಿರುಗುತ್ತಿದ್ದುದು ನೋಡಿದವರಿಗೆಲ್ಲಾ ಆಶ್ಚರ್ಯ ಉಂಟುಮಾಡುತ್ತಿತ್ತು. ಇಷ್ಟರಲ್ಲಿ, ಮಂತ್ರಿಗಳು ಬಂದು, "ರಾಜಾ! ನಿಮ್ಮ ಧೈರ್ಯವನ್ನು ನೋಡಿ ನಮಗೆ ಆಶ್ಚರ್ಯ ಆಗುತ್ತಿದೆ. ಮಾತೃದೇವಿಯನ್ನು ಪ್ರಾಣ ಸಮಾನವಾಗಿ ಭಾವಿಸಿ ಅವರ ಸೇವೆ ಮಾಡುತ್ತಿದ್ದ ನಿಮ್ಮ ಹೃದಯ ಈ ಹೊತ್ತು ಇಷ್ಟು ಕಠಿಣವಾಗಲು ಕಾರಣವೇನು?" ಎಂದು ದುಃಖದಿಂದ ಪ್ರಶ್ನಿಸಲು, ಧರ್ಮಜ ಮುಗುಳ್ನಗುತ್ತಾ, "ಮಂತ್ರಿಗಳೇ!

ಮಾತೃದೇವಿಯ ಮರಣ ನನ್ನಲ್ಲಿ ಅಸೂಯೆ ಹೆಚ್ಚಿಸುತ್ತಿದೆಯೇ ಹೊರತು ದುಃಖ ಉಂಟುಮಾಡುತ್ತಿಲ್ಲ. ಅವಳೇ ಮಹಾ ಅದೃಷ್ಟವಂತೆ! ಭಗವಂತ ಸ್ವಧಾಮಕ್ಕೆ ಹೋದ ವಾರ್ತೆ ಕೇಳಿದೊಡನೆಯೇ ಈ ಲೋಕ ಅವಳಿಗೆ ದೂರವಾಯಿತು. ವಿಯೋಗ ದುಃಖ ಅನಭವಿಸಲು ಇಷ್ಟವಿಲ್ಲದೆ ತಾನೂ ಶ್ಯಾಮಸುಂದರನ ಬಳಿಗೆ ಹೊರಟುಹೋದಳು.

ಎಲ್ಲ ರೀತಿಯಲ್ಲೂ ದುರಾದೃಷ್ಟರು ಈ ಕಲ್ಲು ಹೃದಯಿಗಳಾದ ಪಾಂಡವರು! ಭಗವಂತನ ಸಮೀಪವರ್ತಿಗಳಾಗಿದ್ದು, ಅವನಿಂದ ಎಲ್ಲ ರೀತಿಯ ಆನಂದವನ್ನು ಪಡೆದೂ ಅವನ ವಿಯೋಗವನ್ನು ಕೇಳಿ ಕರಗದ ನಮ್ಮ ಹೃದಯ ಕಲ್ಲುಬಂಡೆಗೆ ಸಮಾನ. ನಿಜವಾಗಿಯೂ ನಮ್ಮಲ್ಲಿ ಅಂಥ ಭಕ್ತಿ ಇದ್ದರೆ, ತಾಯಿಯ ಹಾಗೆ ನಾವೇಕೆ ದೇಹ ಬಿಡಲಿಲ್ಲ? ಛೀ! ನಮ್ಮ ಬದುಕು ಭೂಮಿಗೆ ಭಾರವಲ್ಲದೆ ಮತ್ತೇನಲ್ಲ," ಎಂದನು.

ಕೃಷ್ಣ ವಿಯೋಗವನ್ನು ಸಹಿಸಲಾರದೆ ಕುಂತೀದೇವಿ, ಪ್ರಾಣ ಬಿಟ್ಟಳೆನ್ನುವ ವಿಷಯ ಎಲ್ಲರಿಗೂ ತಿಳಿದೊಡನೆ, ಕುಂತಿಗಾಗಿ ದುಃಖಿಸುವುದನ್ನು ಬಿಟ್ಟು, ಶ್ಯಾಮಸುಂದರನ ಅಗಲಿಕೆಗೆ ಮತ್ತಷ್ಟು ತೀವ್ರವಾಗಿ ದುಃಖಿಸತೊಡಗಿದರು. ಕೆಲವರಂತೂ ಕೃಷ್ಣ ಸ್ವಧಾಮಕ್ಕೆ ಹೋದನೆನ್ನುವುದನ್ನು ಕೇಳಿ, ಸ್ಮೃತಿತಪ್ಪಿ ಬಿದ್ದುಬಿಟ್ಟರು. ಕೆಲವರು ಹುಚ್ಚರಂತೆ ಕೇಕೆ ಹಾಕಿದರು. ಕೆಲವರು ಗೋಡೆಗೆ ತಲೆ ಕುಟ್ಟಿಕೊಂಡರು.

ಹೀಗೆ, ಉರಿಯುವ ಕೊಳ್ಳಿಗೆ ಎಣ್ಣೆ ಹೊಯ್ದ ಹಾಗೆ, ಎರಡು ದುಃಖಗಳೂ ಬೆರೆತು, ಒಬ್ಬರ ಮಾತು ಒಬ್ಬರಿಗೆ ಕೇಳಿಸದೆ, ಗೊಂದಲವಾಯಿತು. ಧರ್ಮಜ ಅವರ ನಡುವೆ ಹೋಗಿ, ರಾಣಿಯರಿಗೆ ಧೈರ್ಯಹೇಳಿ, ತಾಯಿಯ ಮರಣ ಕ್ಕಾಗಲೀ ಶ್ಯಾಮಸುಂದರನ ವಿಯೋಗಕ್ಕಾಗಲೀ ದುಃಖಿಸುವ ಅಗತ್ಯವಿಲ್ಲವೆಂದು ಹೇಳುತ್ತಿದ್ದ. "ಅವರವರ ಸಂಕಲ್ಪಾನುಸಾರವಾಗಿ ಅವರು ನಡೆದಿದ್ದಾರೆ. ಇನ್ನು ನಮ್ಮ ಸಂಕಲ್ಪ ಪೂರ್ತಿ ಮಾಡಿಕೊಳ್ಳುವುದಕ್ಕೆ ಏನು ಮಾಡಬೇಕೋ ಅದನ್ನು ನಾವು ಮಾಡಬೇಕು," ಎಂದು ಹೇಳಿದ. ತಮ್ಮನ ಬಳಿಗೆ ಬಂದು, "ಅರ್ಜುನಾ! ಏಳು! ಇನ್ನು ನಿಧಾನ ಮಾಡಬಾರದು. ಅಮ್ಮನಿಗೆ ಈಗಲೇ ದಹನ ಸಂಸ್ಕಾರ ಮಾಡಬೇಕು. ನಾಳೆಯೇ ಪರೀಕ್ಷಿತನಿಗೆ ರಾಜ್ಯಾಭಿಷೇಕ ಮಾಡಬೇಕು. ನಾಳೆ ರಾತ್ರಿಯೇ ನಾವು ಹಸ್ತಿನಾಪುರ ಬಿಡಬೇಕು. ಒಂದೊಂದು ಕ್ಷಣವೂ ಈಗ ಭಾರವಾಗಿ ತೋರುತ್ತಿದೆ," ಎಂದು ತೀವ್ರ ವೈರಾಗ್ಯದ ಮಾತನಾಡಿದ. ಅವನಿಗಿಂತ ವೈರಾಗ್ಯಶಾಲಿಯಾದ ಅರ್ಜುನ, ತೊಡೆಯ ಮೇಲಿದ್ದ ತಾಯಿಯ ತಲೆಯನ್ನು ಕೆಳಗಿಳಿಸಿ, ಪರೀಕ್ಷಿತನ ಪಟ್ಟಾಭಿಷೇಕಕ್ಕೆ ಮಾಡಬೇಕಾದ ಎಲ್ಲ ಏರ್ಪಾಟುಗಳನ್ನೂ ಮಾಡುವಂತೆ ನಕುಲ

ಸಹದೇವರಿಗೆ ಆಜ್ಞಾಪಿಸಿದನು. ಯಾರು ಯಾರು ಏನೇನು ಮಾಡಬೇಕೊ ಅದನ್ನು ಅವರವರಿಗೆ ಹೇಳುತ್ತಾ ಓಡಾಡುತ್ತಿದ್ದ. ಭೀಮ ತಾಯಿಯ ದಹನಕ್ರಿಯೆಯ ಏರ್ಪಾಟಿನಲ್ಲಿದ್ದ.

ಇದನ್ನೆಲ್ಲಾ ನೋಡುತ್ತಿದ್ದ, ಕೇಳುತ್ತಿದ್ದ, ಮಂತ್ರಿಗಳೂ ಪೌರರೂ ಪುರೋಹಿತರೂ ಗುರುಗಳೂ ಬೆರಗಾಗಿ, ಒಳಗೊಳಗೇ ದುಃಖದಲ್ಲಿ ಬೇಯುತ್ತಿದ್ದರು. ತಮ್ಮ ಮೇಲೆ ಅವರಿಗೆ ತೀವ್ರ ಜಿಗುಪ್ಸೆ ಆಗುತ್ತಿತ್ತು. ರಾಜಭವನದಲ್ಲಿ ಸಂಭವಿಸುತ್ತಿದ್ದ ವಿಪರೀತದ ಘಟನೆಗಳನ್ನು ನೋಡಿದ ಯಾರಿಗಾದರೂ ಆಶ್ಚರ್ಯವಾಗದೆ ಇರುತ್ತಿರಲಿಲ್ಲ. "ಆಹಾ! ದೊಡ್ಡಪ್ಪ ದೊಡ್ಡಮ್ಮನ ವಿಯೋಗ ದುಃಖದಲ್ಲಿ ಮುಳುಗಿದ್ದ ಧರ್ಮಜನಿಗೆ, ಕೃಷ್ಣ ಸ್ವಧಾಮಕ್ಕೆ ಹಿಂದಿರುಗಿದ ಸಿಡಿಲಿನಂಥ ವಾರ್ತೆ ಎದೆಗೆ ಬಡಿಯಿತು. ನಂತರ, ಮಾತೃವಿಯೋಗ! ಅವಳ ಶರೀರ ಇನ್ನೂ ಇಲ್ಲೇ ಇದೆ. ಆದರೂ ಇಂಥ ಸನ್ನಿವೇಶ ದಲ್ಲಿ, ಪರೀಕ್ಷಿತನ ರಾಜ್ಯಾಭಿಷೇಕದ ಏರ್ಪಾಟು! ಚಕ್ರವರ್ತಿ ತನ್ನ ಸರ್ವಸ್ವವನ್ನೂ ತ್ಯಜಿಸಿ ತಮ್ಮಂದಿರೊಡನೆ ಅರಣ್ಯವಾಸಕ್ಕೆ ಹೊರಡುವ ಪ್ರಯತ್ನ! ಇಂಥ ಧೈರ್ಯ ಸಾಹಸ ಪಾಂಡವರಿಗಲ್ಲದೆ ಬೇರೆಯವರಿಗೆ ಸಾಧ್ಯವಿಲ್ಲ," ಎನಿಸುತ್ತಿತ್ತು. ಒಂದು ಘಂಟೆಯೊಳಗೆ ತಾಯಿಯ ಮೃತ ದೇಹಕ್ಕೆ ಶಾಸ್ತ್ರೋಕ್ತ ದಹನ ಸಂಸ್ಕಾರಗಳನ್ನು ಮಾಡಿ, ಬ್ರಾಹ್ಮಣರನ್ನು ಕರೆಯಿಸಿ, ಪರೀಕ್ಷಿತ್ ಮಹಾರಾಜನಿಗೆ ರಾಜ್ಯಾಭಿಷೇಕ ಮಾಡುವ ಪ್ರಯತ್ನ ನಡೆದಿದೆ. ಸಾಧಾರಣ ವಿಧಿಗಳಿಂದಲೇ ಸರಳವಾಗಿ ಪಟ್ಟಾಭಿ ಷೇಕ ಮಾಡಲುದ್ಯುಕ್ತರಾಗಿದ್ದಾರೆ. ಸಾಮಂತ ರಾಜರಿಗಾಗಲೀ ಇಂದ್ರಪ್ರಸ್ಥದಲ್ಲಿದ್ದ ಬಂಧು ಮಿತ್ರರಿಗಾಗಲೀ ಈ ವಿಷಯವೇ ತಿಳಿಯದು.

ಭರತ ವಂಶದ ಸಿಂಹಾಸನಾಧೀಶನಾದ ಚಕ್ರವರ್ತಿಯ ರಾಜ್ಯಾಭಿಷೇಕ ಎಷ್ಟು ವೈಭವಯುತವಾಗಿ ಹೇಗೆ ನಡೆಯಬೇಕೆನ್ನುವುದನ್ನು ಕೆಲವು ತಿಂಗಳ ಮೊದಲೇ ನಿಶ್ಚಯಿಸಿ, ಬ್ರಹ್ಮಾಂಡ ಏರ್ಪಾಟು ಮಾಡಿ, ರಾಜ್ಯಾಭಿಷೇಕ ನಡೆಸುವುದು ಪದ್ಧತಿ. ಆದರೆ, ಇಂದು ಒಂದೇ ನಿಮಿಷದಲ್ಲಿ, ಇದ್ದಲ್ಲೇ ಎಲ್ಲ ಏರ್ಪಾಟನ್ನೂ ಮಾಡಿ ಮುಗಿಸಲು ಆಲೋಚಿಸಿದ್ದಾರೆ. ಒಂದೇ ನಿಮಿಷದಲ್ಲಿ, ಅಭ್ಯಂಗ ಸ್ನಾನಾದಿಗಳನ್ನು ಮಾಡಿಸಿ, ಬ್ರಾಹ್ಮಣರನ್ನು ಕರೆಸಿ, ಮಂತ್ರಿಗಳನ್ನು ಜೊತೆಯಲ್ಲಿಟ್ಟುಕೊಂಡು, ಬಾಲ ಕನನ್ನು ಸರ್ವಾಭರಣಗಳಿಂದ ಅಲಂಕರಿಸಿ, ಸಿಂಹಾಸನದ ಮೇಲೆ ಕೂರಿಸಿ, ಧರ್ಮಜ ತನ್ನ ಕೈಗಳಿಂದಲೇ ಸುವರ್ಣ ರತ್ನಖಚಿತವಾದ ತನ್ನ ದಿವ್ಯ ಕಿರೀಟವನ್ನು ಬಾಲಕನ ತಲೆಯ ಮೇಲಿಡುತ್ತಿದ್ದಾಗ ಅಲ್ಲಿ ನೆರೆದವರಲ್ಲಿ ಕಣ್ಣೀರು ಹಾಕದವರೇ ಇರಲಿಲ್ಲ. ಎಲ್ಲರ ಆನಂದ ಬಾಷ್ಪಗಳಿಂದ, ಆಶೀರ್ವಾದ ಅಕ್ಷತೆಗಳಿಂದ ವಹಿಸಿ ಕೊಳ್ಳಬೇಕಾಗಿದ್ದ ರಾಜ್ಯಭಾರವನ್ನು, ಅವರ ಶೋಕ ಬಾಷ್ಪಗಳಿಂದ ಪರೀಕ್ಷಿತ್ ವಹಿಸಿಕೊಳ್ಳಬೇಕಾಗಿ ಬಂತು.

ಪರೀಕ್ಷಿತ್ ಮಹಾರಾಜ, ಅಷ್ಟೇ ಅಲ್ಲ, ಧರ್ಮರಾಜ ಕೂಡ, ಎಷ್ಟು ತಡೆದರೂ ಸಾಧ್ಯವಾಗದೆ, ಗಟ್ಟಿಯಾಗಿ ಅಳಲಾರಂಭಿಸಿದನು. ಅದನ್ನು ನೋಡಿದವರೆಲ್ಲರ ಎದೆ ಕರಗಿ ನೀರಾಯಿತು. ವಿಧಿಯ ಪ್ರಾಬಲ್ಯವನ್ನು ಯಾರು ತಾನೆ ತಗ್ಗಿಸಬಲ್ಲರು? ಯಾವಯಾವ ಸಮಯದಲ್ಲಿ ಏನೇನು, ಹೇಗೇಗೆ ಮಾಡಬೇಕೋ ಹಾಗೆ ಪ್ರಾರಬ್ಧವೇ ಮಾಡಿಸುವುದು. ಎಲ್ಲವನ್ನೂ ವಿಧಿಯೇ ನಡೆಸುವುದು. ಮಾನವ ನಿಮಿತ್ತ ಮಾತ್ರ.

ಮಹಾ ಗುಣವಂತನಾದ ಪರೀಕ್ಷಿತ ಮಹಾರಾಜ ಬಾಲಕನಾದರೂ ದೊಡ್ಡವರ ಮಾತು ಮೀರಲಾರದೆ, ರಾಜ್ಯಭಾರ ವಹಿಸಿಕೊಂಡು, ಸಿಂಹಾಸನದಿಂದಿಳಿದು, ಧರ್ಮಜನ ಪಾದಗಳ ಮೇಲೆ ಬಿದ್ದು, ಗಟ್ಟಿಯಾಗಿ ಅಳುತ್ತಾ, "ಪ್ರಭೂ! ನೀವು ಏನು ಮಾಡಿದರೂ ಸರಿಯೆ, ನಿಮ್ಮ ಆಜ್ಞೆಯನ್ನು ಶಿರಸಾ ವಹಿಸುತ್ತೇನೆ. ಆದರೆ, ನೀವು ಮಾತ್ರ ನನ್ನನ್ನು ಬಿಟ್ಟು ಹೋಗಕೂಡದು," ಎಂದು ಪಾದಗಳನ್ನು ಹಿಡಿದು ಪ್ರಾರ್ಥಿಸುತ್ತಾ ದುಃಖಿಸುತ್ತಿದ್ದ ಬಾಲಕನನ್ನು ನೋಡಿದರೆ, ವಜ್ರದಂಥ ಕಠಿಣ ಹೃದಯಿಯಾದರೂ ಕಣ್ಣೀರು ಹಾಕದಿರುತ್ತಿರಲಿಲ್ಲ. ಆ ದೃಶ್ಯವಷ್ಟು ಘೋರವಾಗಿತ್ತು.

ಆ ಬಾಲಕ ತಾತನಾದ ಅರ್ಜುನನ ಪಾದಗಳನ್ನು ಹಿಡಿದುಕೊಂಡು, "ತಾತಾ! ಇಷ್ಟು ದೊಡ್ಡ ರಾಜ್ಯವನ್ನು ನನ್ನ ತಲೆಯ ಮೇಲೆ ಹೊರಿಸಿ, ನನ್ನನ್ನು ಏಕಾಂಗಿಯಾಗಿ ಮಾಡಿ ಹೋಗಲು, ನಿಮಗೆ ಕಾಲು ಬರುವುದಾದರೂ ಹೇಗೆ? ನಾನು ಏನೂ ತಿಳಿಯದ ಹಸುಗೂಸು, ಅಜ್ಞಾನಿ, ಅಸಹಾಯಕ, ಅಸಮರ್ಥ. ಮಹಾ ಮಹಾ ಮೇಧಾವಿಗಳೂ ಶಕ್ತಿ ಸಂಪನ್ನರೂ ಬಲಾಢ್ಯರೂ ಧೀರರೂ ವೀರರೂ ಶೂರರೂ ಆಳಿದ ಈ ಪವಿತ್ರ ರಾಜ್ಯವನ್ನು ಈ ಅಸಮರ್ಥನ ತಲೆಗೆ ಕಟ್ಟಿ ಅಡವಿಗೆ ಹೋಗುವುದು ನಿಮಗೆ ನ್ಯಾಯವಲ್ಲ. ನನ್ನ ಬದಲು ಇನ್ನಾರಿಗಾದರೂ ಈ ಭಾರವನ್ನು ಹೊರಸಿ, ನನ್ನನ್ನು ಅರಣ್ಯಕ್ಕೆ ಕಳಿಸಿ," ಎಂದು ಗೋಳಿಟ್ಟ.

ದೊಡ್ಡತಾತ ಚಿಕ್ಕತಾತಂದಿರ ಪಾದಗಳನ್ನು ಹಿಡಿದು, "ಆನಂದವಾಗಿ ಕಂದಮೂಲಾದಿಗಳನ್ನು ತಿನ್ನುತ್ತಾ ನನ್ನ ಜನ್ಮವನ್ನು ಪವಿತ್ರ ಕರ್ಮಗಳಿಂದ ಧನ್ಯ ಮಾಡಿಕೊಳ್ಳುತ್ತೇನೆ. ಯಾರಾದರೂ ಗುಣಶೀಲ ಮಂತ್ರಿಗಳಿಗೆ ರಾಜ್ಯವನ್ನು ವಹಿಸಿ, ನನ್ನನ್ನೂ ನಿಮ್ಮ ಜೊತೆಯಲ್ಲಿ ಕಾಡಿಗೆ ಕರೆದುಕೊಂಡು ಹೋಗಿ. ಕಾಡಿನಲ್ಲಿ ನಿಮ್ಮ ಸೇವೆ ಮಾಡಿ ಧನ್ಯನಾಗುತ್ತೇನೆ," ಎಂದು ದೈನ್ಯದಿಂದ ಪ್ರಾರ್ಥಿಸುತ್ತಿರುವುದನ್ನು ಅಲ್ಲಿ ನೆರೆದಿದ್ದ ಜನ ನೋಡಲಾರದೆ, ಕೇಳಲಾರದೆ, ಕಲ್ಲನ್ನಾದರೂ ಕರಗಿಸುವಂಥ ಅವನ ದುಃಖವನ್ನು ಅನುಭವಿಸಲಾರದೆ ಹೋದರು.

# ೧೪ ಪಾಂಡವರ ಮಹಾಪ್ರಸ್ಥಾನ

ಧರ್ಮಜ, ಹೇಗೋ ಧೈರ್ಯ ತಂದುಕೊಂಡು, ಉಕ್ಕಿಬರುತ್ತಿದ್ದ ದುಃಖವನ್ನು ನುಂಗಿ, ಪರೀಕ್ಷಿತನನ್ನೆತ್ತಿ ತೊಡೆಯ ಮೇಲೆ ಕೂರಿಸಿಕೊಂಡು, "ಮಗೂ! ಇಷ್ಟು ಬಲಹೀನನಾಗಬಾರದು. ನೀನು ಭರತ ವಂಶದಲ್ಲಿ ಹುಟ್ಟಿದ ಭಾಗ್ಯಶಾಲಿ. ಸಿಂಹದ ಹೊಟ್ಟೆಯಲ್ಲಿ ಆಡು ಹುಟ್ಟುವುದಿಲ್ಲ, ಅಲ್ಲವೇ? ನಿನ್ನ ತಂದೆ, ತಾಯಿ, ತಾತಂದಿರೆಲ್ಲಾ ಮಹಾವೀರರು, ಸತ್ಯಶೀಲರು, ಪ್ರಖ್ಯಾತರು. ಆದ್ದರಿಂದ, ನೀನು ಹೀಗೆ ಗೋಳಾಡುವುದು ಸರಿಯಲ್ಲ. ಇನ್ನು ಮುಂದೆ ನಿನಗೆ ತಂದೆ, ತಾಯಿ, ತಾತಂದಿರು ಎಲ್ಲಾ ಈ ಬ್ರಾಹ್ಮಣರೇ. ಅವರ ಸಲಹೆಯಂತೆ ರಾಜ್ಯಪಾಲನೆ ಮಾಡು, ಕೀರ್ತಿ ಸಂಪಾದಿಸು. ನಮಗಾಗಿ ವ್ಯಥೆಪಡಬೇಡ," ಎಂದು ಸಮಾಧಾನ ಪಡಿಸಿದ.

ಆದರೂ, ಪರೀಕ್ಷಿತ್ ತನ್ನ ಹಠ ಬಿಡದೆ, "ತಾತಾ, ನಿಮಗೆ ಹೇಳುವ ಯೋಗ್ಯತೆ ನನಗಿಲ್ಲ. ನಾನು ಹುಟ್ಟುವುದಕ್ಕೆ ಮುಂಚೆಯೇ ತಂದೆಯನ್ನು ದೂರ ಮಾಡಿಕೊಂಡೆ. ತಂದೆಯ ಪ್ರೇಮದ ಕೊರತೆ ಇಲ್ಲದಂತೆ ನೀವು ನನ್ನನ್ನು ಎಲ್ಲ ವಿಧದಿಂದಲೂ ಸಲುಹಿದಿರಿ. ಈಗ ಆಡಿಕೊಂಡಿರುವ ಹುಡುಗನಿಗೆ, ಇಷ್ಟು ದೊಡ್ಡ ರಾಜ್ಯಭಾರವನ್ನು ತಲೆಗೆ ಕಟ್ಟಿ ಹೋಗುವುದು ನಿಮಗೆ ನ್ಯಾಯವೇ? ಇಷ್ಟು ದುಃಖದಲ್ಲಿ ನನ್ನನ್ನು ಮುಳುಗಿಸಿ ಹೋಗುವುದಕ್ಕಿಂತ, ಕತ್ತಿಯಿಂದ ಕತ್ತು ಕೊಯ್ದು ನೀವೇಕೆ ಹೋಗಬಾರದು? ಅಯ್ಯೋ! ವಿಧಿಯೆ, ನಾನೇನು ನಿನಗೆ ಅಪಕಾರ ಮಾಡಿದ್ದೆ? ಹಾಗೇನಾದರೂ ಅಪಕಾರ ಮಾಡಿದ್ದರೆ, ತಂದೆ ಹೋದ ತಕ್ಷಣ ಗರ್ಭದಲ್ಲೇ ನನ್ನನ್ನು ನಿರ್ಜೀವ ಮಾಡಿ, ಆಗಲೇ, ಈ ಕಾಯವನ್ನು ಕೊಲ್ಲಬಹುದಾಗಿತ್ತಲ್ಲಾ. ತಿರುಗಿ ನನಗೆ ಪ್ರಾಣವಿತ್ತು, ಪೋಷಿಸಿದ್ದು ಈ ಘೋರ ಬಾಧೆ ಅನುಭವಿಸುವುದಕ್ಕಾಗಿಯೇ ಏನು?" ಎಂದು ತನ್ನನ್ನೇ ತಾನು ಏನೇನೋ ದೂಷಿಸಿಕೊಳ್ಳುತ್ತಿದ್ದುದನ್ನು ಕಂಡು ಅರ್ಜುನ ಬಂದು ಕೈಯಿಂದ ಬಾಯಿ ಮುಚ್ಚಿ, ತಲೆಯನ್ನು ಮುದ್ದಾಡಿ, "ಮಗೂ! ನೀನು ಹೀಗೆ ಹುಚ್ಚನಂತೆ ಮಾತನಾಡುವುದು ನಮ್ಮ ಕ್ಷತ್ರಿಯ ಕುಲಕ್ಕೇ ಕಳಂಕ. ನಾವು ನಿನಗಿಂತ ಚಿಕ್ಕವರಿದ್ದಾಗಲೇ ತಂದೆಯನ್ನು ದೂರ ಮಾಡಿಕೊಂಡೆವು. ಋಷಿಗಳ ರಕ್ಷಣೆಯಲ್ಲಿ ಬೆಳೆದು ದೊಡ್ಡವರಾದೆವು. ದೊಡ್ಡಪ್ಪನ ಪ್ರೇಮಕ್ಕೆ ಪಾತ್ರರಾಗಿ, ಅನೇಕ ಕಷ್ಟಪರಂಪರೆಗಳಲ್ಲಿ ಸಿಕ್ಕಿ, ಕೊನೆಗೆ ಈ ರಾಜ್ಯ ಪಡೆದೆವು. ನಮ್ಮನ್ನು ಆ ವಯಸ್ಸಿನಲ್ಲಿ ಯಾವ ರಕ್ಷಕ ಸಲುಹಿದನೋ ಸಾಕಿದನೋ ಇಷ್ಟುಕಾಲ ನಮ್ಮ

ಜೀವನ ನಡೆಸಿದನೋ ಆ ರಕ್ಷಕನೇ ನಿನ್ನನ್ನೂ ಕಾಪಾಡಿ ಕರುಣಿಸುವನು. ನೀನು ಅಧೈರ್ಯಪಡದೆ, ಸ್ವಲ್ಪಕಾಲ ಈ ಮಂತ್ರಿಗಳ ಸಲಹೆಯನ್ನೂ ಬ್ರಾಹ್ಮಣರ ಸಲಹೆಯನ್ನೂ ಅನುಸರಿಸು, ನಂತರ ನಿನಗೇ ಗೊತ್ತಾಗುವುದು," ಎಂದು ಸಮಾಧಾನ ಪಡಿಸುತ್ತಿದ್ದ ಅರ್ಜುನನನ್ನು ನೋಡಿ, ಪರೀಕ್ಷಿತ್, "ತಾತಾ, ನನ್ನನ್ನು ಅನಾಥನನ್ನಾಗಿ ಮಾಡಿ, ರಾಜ್ಯ ಸಿಂಹಾಸನಕ್ಕೆ ಮೇಕೆಯಂತೆ ಬಲಿಕೊಟ್ಟು ಹೋಗುವಿರಾ? ಕೊನೆಗೆ, ಸ್ವಲ್ಪ ಕಾಲವಾದರೂ ನೀವಿದ್ದು, ನನಗೆ ಕೆಲವು ವಿಧಿ ವಿಧಾನಗಳನ್ನಾದರೂ ಕಲಿಸಿ ಹೋಗಿ. ತಂದೆ ಹೋದರೂ ತಾತಂದಿರು ಇರುವರಲ್ಲಾ ಎಂದು ನಿಶ್ಚಿಂತೆಯಿಂದಿದ್ದೆ. ತಾತಂದಿರೂ ಬಿಟ್ಟು ಅಗಲಿದರೆ ನನ್ನ ಗತಿಯೇನು? ಎಲ್ಲ ಆಸೆಗಳನ್ನೂ ನಿಮ್ಮ ಮೇಲಿಟ್ಟಿದ್ದ ನನ್ನನ್ನು ಹೀಗೆ ಇಷ್ಟು ಬೇಗ ನಿರಾಶೆಯಲ್ಲಿ ಮುಳುಗಿಸಿ ಹೋಗುವುದು ಸರಿಯೇ?" ಎಂದು ಗೋಳಾಡುತ್ತಾ ತಾತನ ಪಾದಗಳ ಮೇಲೆ ಬಿದ್ದು ಹೊರಳಾಡಿದ.

ಅರ್ಜುನ ಎರಡು ಕೈಗಳಿಂದಲೂ ಅವನನ್ನೆತ್ತಿ, ಅವನ ಎರಡು ಕಮಲ ನೇತ್ರಗಳಿಂದಲೂ ಮುತ್ತುಗಳಂತೆ ಉದುರುತ್ತಿದ್ದ ಕಣ್ಣೀರು ಹನಿಗಳನ್ನು ಒರೆಸುತ್ತಾ ತಾನೂ ಕಣ್ಣೀರು ಸುರಿಸುತ್ತಾ ಎದುರಿಗೆ ನಿಂತಿದ್ದ ಬ್ರಾಹ್ಮಣರನ್ನು ಕುರಿತು, "ನೀವೇಕೆ ಹೀಗೆ ದುಃಖಿಸುತ್ತಾ ನಿಂತಿರುವಿರಿ? ನೀವಾದರೂ ಈ ಬಾಲಕನಿಗೆ ಬುದ್ಧಿ ಹೇಳದೆ ಏಕೆ ಸುಮ್ಮನಿದ್ದೀರಿ?" ಎಂದುದನ್ನು ಕೇಳಿ, ಬ್ರಾಹ್ಮಣರು, ಮಂತ್ರಿಗಳು, ದುಃಖ ಭಾರದಿಂದ, "ರಾಜಾ! ಆ ಹಸುಗೂಸು ಆಡುತ್ತಿರುವ ಒಂದೊಂದು ಮಾತೂ ನಮ್ಮ ಹೃದಯವನ್ನು ಸೂಜಿಯಂತೆ ಚುಚ್ಚುತ್ತಿದೆ. ಅವನ ದುಃಖ ನಮ್ಮನ್ನು ಕಲ್ಲುಮಾಡಿದೆ. ನಾವು ಹೇಳುವುದಾದರೂ ಏನು? ಮಾಡುವುದಾದರೂ ಏನು?" ಎಂದು ದುಃಖಿಸಿದರು.

ಕುಲಗುರುಗಳಾದ ಕೃಪಾಚಾರ್ಯರು ಮುಂದೆ ಬಂದು, ದುಃಖವನ್ನು ಅದುಮಿಕೊಂಡು, ಅಂಗವಸ್ತ್ರದಿಂದ ಕಣ್ಣೀರನ್ನು ಒರೆಸಿಕೊಳ್ಳುತ್ತಾ, "ಏನು ಹೇಳಬೇಕೆನ್ನುವೆ, ಮಹಾರಾಜಾ? ನನಗೇನೂ ತೋಚುತ್ತಿಲ್ಲ, ಯಾವ ರಾಜ್ಯಕ್ಕಾಗಿ ಇಷ್ಟೆಲ್ಲಾ ಹೋರಾಟ ನಡೆಯಿತೋ, ಲಕ್ಷೋಪಲಕ್ಷ ಜನ ಪ್ರಾಣ ಬಲಿಕೊಟ್ಟರೋ, ಇಷ್ಟು ರಕ್ತಪಾತ ನಡೆಯಿತೋ, ಅಂಥ ರಾಜ್ಯವನ್ನೇ ಇಂದು ನೀವು ತೃಣ ಸಮಾನ ಮಾಡಿ ಹೋಗುತ್ತಿದ್ದೀರಿ. ಸಾವಿರ ವರ್ಷವಲ್ಲ, ನೂರಿನ್ನೂರು ವರ್ಷಗಳೂ ಅಲ್ಲ, ಕಡೆಗೆ ಒಂದು ಎಪ್ಪತ್ತು ಸಂವತ್ಸರ ಕೂಡ ನೀವು ಈ ರಾಜ್ಯ ಆಳಲಿಲ್ಲ. ಇದನ್ನೆಲ್ಲಾ ನೋಡಿ ನಮ್ಮ ಬುದ್ಧಿಯೂ ಜಡವಾಗಿ ಹೋಗಿದೆ. ಕಾಲ ಗರ್ಭದಲ್ಲಿ ಏನಿದೆಯೋ ಹೇಳುವವರಾರು? ಮಹಾಪುರುಷರ ಕೆಲಸಗಳಿಗೆ ಅಂತರಾರ್ಥ ಇಲ್ಲದಿರುವುದಿಲ್ಲ.

ಈಗ ನಾವು ಏನೂ ಹೇಳುವಂತಿಲ್ಲ. ಪ್ರಭುಗಳು ಕ್ಷಮಿಸಬೇಕು," ಎಂದು, ದುಃಖ ಉಕ್ಕಿಬಂದು ಸುಮ್ಮನಾದರು.

ಆಗ ಧರ್ಮಜ, "ಆಚಾರ್ಯ, ನಾನು ಮಾಡಿದ ಎಲ್ಲ ಕರ್ಮಗಳನ್ನೂ ಕೃಷ್ಣನ ಆಜ್ಞೆ ಅನುಸರಿಸಿ, ಅವನ ಪ್ರೀತ್ಯರ್ಥವಾಗಿ ಮಾಡಿದ್ದೇನೆ. ಅವನು ಆಡಿಸಿದ ಹಾಗೆ ಆಡಿದ್ದೇನೆ. ನನಗಾಗಲೀ ನನ್ನ ಸೋದರರಿಗಾಗಲೀ ಪ್ರತ್ಯೇಕ ವ್ಯಕ್ತಿತ್ವವೇ ಇಲ್ಲ. ಧರ್ಮವೆಲ್ಲಾ ಭಗವಾನನ ಜೊತೆಯಲ್ಲೇ ಹೋಯಿತು. ಇನ್ನು ಧರ್ಮಜ ಮಾತ್ರ ಇದ್ದು ಏನು ಪ್ರಯೋಜನ? ಕಲಿ ಪ್ರವೇಶವಾಗಿರುವ ಈ ರಾಜ್ಯದಲ್ಲಿ, ಈ ಲೋಕದಲ್ಲಿ, ಒಂದು ನಿಮಿಷವಾದರೂ ನಾನಿರಲಾರೆ. ನೀವೆಲ್ಲರೂ ಈ ಬಾಲಕನನ್ನು ರಕ್ಷಿಸಿ, ರಾಜಭ್ರಷ್ಟನಾಗದಂತೆ ಯೋಗ್ಯ ಶಿಕ್ಷಣವಿತ್ತು, ದೀಕ್ಷೆಯಿತ್ತು ಕಾಪಾಡಬೇಕು. ಧರ್ಮದ ಆಚರಣೆಯನ್ನಾಗಲೀ ವಂಶಪಾರಂಪರ್ಯವಾದ ಮರ್ಯಾದೆಯನ್ನಾಗಲೀ ಬಿಟ್ಟು ನಿಲ್ಲುವ ಕುಲಕಳಂಕನಾಗದಂತೆ ನೋಡಿಕೊಳ್ಳಿ. ಇಂದಿನಿಂದ ಅವನು ನಿಮ್ಮ ಮಗ," ಎಂದು, ಬಾಲಕನನ್ನು ಕೃಪಾಚಾರ್ಯರ ಬಳಿಗೆ ಕರೆದೊಯ್ಯುವ ಸಮಯದಲ್ಲಿ ತಾತಂದಿರೂ ಅಲ್ಲಿ ನೆರೆದಿದ್ದವರೆಲ್ಲರೂ ಧರ್ಮಜನೊಂದಿಗೆ ಗಟ್ಟಿಯಾಗಿ ಅತ್ತರು. ಅದು ಪ್ರಳಯ ಶಬ್ದದ ಹಾಗೆ, ಮುಗಿಲು ಮುಟ್ಟಿತು.

ಸ್ವಲ್ಪ ಹೊತ್ತಿನ ನಂತರ, ವಜ್ರನನ್ನು ಅಲ್ಲಿಗೆ ಕರೆತಂದು, "ಮಗೂ! ಇಂದಿನಿಂದ ಈ ಭರತ ರಾಜ್ಯಕ್ಕೆ ಪರೀಕ್ಷಿತನು ಚಕ್ರವರ್ತಿ," ಎಂದು ಅವನಿಗೆ ತಿಳಿಸಿದರು. ವಜ್ರ, ಚಕ್ರವರ್ತಿಗೆ ವಂದಿಸುವ ರೀತಿಯಲ್ಲಿ ಪರೀಕ್ಷಿತನಿಗೆ ವಂದಿಸಿ ನಿಂತ. ತರುವಾಯ, ಅಲ್ಲಿದ್ದ ಮಂತ್ರಿಗಳು, ಬ್ರಾಹ್ಮಣರು ಚಕ್ರವರ್ತಿಗೆ ಯೋಗ್ಯವಾದ ಗೌರವ, ವಂದನೆಗಳನ್ನು ಪರೀಕ್ಷಿತನಿಗೆ ಸಲ್ಲಿಸಿದರು. ಧರ್ಮಜ ಪರೀಕ್ಷಿತನ ಕೈಯನ್ನು ವಜ್ರನ ಕೈಮೇಲಿಟ್ಟು, "ಇವನು ಯದುವಂಶದ ಆಧಾರನಾದ ವಜ್ರ. ಇವನನ್ನು ಮಥುರಾ ಮತ್ತು ಶೂರಸೇನ ದೇಶಗಳಿಗೆ ರಾಜನನ್ನಾಗಿ ಮಾಡಿದ್ದೇನೆ," ಎಂದು ಹೇಳಿ, ಅವನ ತಲೆಯ ಮೇಲೆ ಸುವರ್ಣ ವಜ್ರ ಖಚಿತವಾದ ಕಿರೀಟ ಇಟ್ಟ.

ಇಬ್ಬರ ಕೈಗೂಡಿಸಿ, ಇಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಾ ಪರಸ್ಪರ ಸದ್ಭಾವ ನೆಯಿಂದ, ಸೋದರರಂತೆ ಬಾಳಬೇಕೆಂದು ಹೇಳಿದ. ವಜ್ರನನ್ನು ಪಕ್ಕಕ್ಕೆ ಕರೆದು, "ಮಗೂ! ಪರಿಕ್ಷಿತನನ್ನು ನಿನ್ನ ಸ್ವಂತ ದೊಡ್ಡಪ್ಪನಂತೆ ನೋಡಿಕೋ," ಎಂದು ಹೇಳಿದ. ಹಾಗೇ ಪರೀಕ್ಷಿತನನ್ನೂ ಪಕ್ಕಕ್ಕೆ ಕರೆದು, "ಮಗೂ, ವಜ್ರನನ್ನು ನೀನು ಅನಿರುದ್ಧನಂತೆ ನೋಡಿಕೊಳ್ಳಬೇಕು," ಎಂದು ಹೇಳಿದ. ಇಬ್ಬರನ್ನೂ ಕುರಿತು, ಧರ್ಮವನ್ನು ಬಿಡದೆ ಪ್ರಜಾಕ್ಷೇಮವೇ ಪ್ರಾಣವೆಂದು ಭಾವಿಸಿ ನೀವಿಬ್ಬರೂ ರಾಜ್ಯ

ಪರಿಪಾಲನೆ ಮಾಡಬೇಕು ಎಂದು ಹೇಳಿದ. ಎಲ್ಲರೂ ಅವರಿಬ್ಬರ ಮೇಲೆ ಅಕ್ಷತೆಯನ್ನು ಹಾಕಿದರು.

ಬ್ರಾಹ್ಮಣರು ಮಂತ್ರಘೋಷ ಮಾಡಿದರು. ಮಂಗಳ ವಾದ್ಯಗಳು ಮೊಳಗಿದವು. ಪರೀಕ್ಷಿತ್, ವಜ್ರ ಇಬ್ಬರೂ ಕಣ್ಣೀರು ಸುರಿಸುತ್ತಾ ಧರ್ಮಜನಿಗೂ ಮಿಕ್ಕ ಪಾಂಡವರೆಲ್ಲರಿಗೂ ಗುರುಗಳಿಗೂ ನಮಸ್ಕಾರ ಮಾಡಿದರು. ಅವರು ತಾತಂದಿರಿಗೂ ಆ ಮುದ್ದುಮಕ್ಕಳ ದುಃಖ ನೋಡಲಾಗಲಿಲ್ಲ. ದುಃಖ ಉಕ್ಕಿಬರುತ್ತಿತ್ತು. ಕೊನೆಗೆ, ಆ ಬಾಲಕರ ತಲೆಗಳನ್ನು ಮುದ್ದಾಡಿ, ಅವರನ್ನು ತಬ್ಬಿಕೊಂಡು, ಧೈರ್ಯದ ಮಾತು ಹೇಳಿ, ಉಟ್ಟ ಬಟ್ಟೆಯಲ್ಲಿ ಕಾಡಿಗೆ ಹೊರಟರು.

ಇದನ್ನು ನೋಡಿ ಪುರಜನರು, ಬಂಧು ಬಾಂಧವರು, ಅಂತಃಪುರದ ರಾಣಿಯರು, ದಾಸ ದಾಸಿಯರು ಜೋರಾಗಿ ಅಳಲಾರಂಭಿಸಿದರು. ಪ್ರಜೆಗಳು ಮಹಾರಾಜನಿಗೆ ಅಡ್ಡ ಬಂದು, ಪಾದಗಳ ಮೇಲೆ ಬಿದ್ದು, ತಾವೂ ಅವರೊಡನೆ ಬರುವುದಾಗಿ ದೈನ್ಯದಿಂದ ಮೊರೆಯಿಟ್ಟರು. ಕೆಲವರು ಎಷ್ಟು ಹೇಳಿದರೂ ಕೇಳದೆ ಅವರನ್ನು ಹಿಂಬಾಲಿಸಿದರು.

ಪಾಂಡವರು ಯಾರನ್ನೂ ನೋಡಲಿಲ್ಲ. ಯಾರ ಮಾತನ್ನೂ ಕೇಳಲಿಲ್ಲ. ತಮ್ಮ ಲಕ್ಷ್ಯವನ್ನೆಲ್ಲಾ ಕೃಷ್ಣನ ಮೇಲಿಟ್ಟು, ದಾರಿಯನ್ನೂ ಗಮನಿಸದೆ, ಹಿಂದಕ್ಕೆ ತಿರುಗದೆ, ಪ್ರತ್ಯುತ್ತರ ಕೊಡದೆ, ಕಿವುಡರಂತೆ, ಉನ್ಮತ್ತರಂತೆ ಮುಂದೆ ಸಾಗುತ್ತಿದ್ದರು. ಹಿಂದೆ ದಾಸಿಯರೊಂದಿಗೆ ದ್ರೌಪದಿ, ಗಂಡಂದಿರ ಹೆಸರು ಹಿಡಿದು ಕೂಗುತ್ತಾ ಓಡಿಬರುತ್ತಿದ್ದಳು. ಪರೀಕ್ಷಿತ್ ಮಹಾರಾಜ ಯಾರು ಹಿಡಿದರೂ ನಿಲ್ಲದೆ, ರೋದಿಸುತ್ತಾ ತಾತಂದಿರ ಹೆಸರು ಹಿಡಿದು ಕೂಗುತ್ತಾ ಬೀದಿಯ ಕಡೆಗೆ ಓಡುತ್ತಿದ್ದುದನ್ನು ನೋಡಿ, ಮಂತ್ರಿಗಳು ತಡೆದು, ಅವನೊಂದಿಗೆ ತಾವೂ ಅಳುತ್ತಾ ಅವನನ್ನು ಎತ್ತಿಕೊಂಡು ಹೋದರು.

ಹೀಗೆ, ಪಾಂಡವರು ಜೊತೆಯಲ್ಲಿದ್ದವರನ್ನು ಬೇಡವೆಂದಾಗಲೀ ಹಿಂದೆ ಬರುತ್ತಿದ್ದವರನ್ನು ನಿಲ್ಲಿರೆಂದಾಗಲೀ ಹೇಳದೆ ಹೋಗುತ್ತಿದ್ದರು. ನೂರಾರು ಜನ ಸ್ತ್ರೀ ಪುರುಷರು, ಅವರ ಹಿಂದೆ ಹೋಗಿ, ಬಹಳ ಆಯಾಸಪಟ್ಟು ಮುಂದೆ ಹೋಗಲು ಆಗದೆ ಹಿಂದಿರುಗುತ್ತಿದ್ದರು. ಮತ್ತೆ ಕೆಲವರು ಅವರನ್ನು ಅನುಸರಿಸಿ ಹೋಗುತ್ತಲೇ ಇದ್ದರು. ಅಂತಃಪುರದ ಸುಕುಮಾರಿಯರು ಬಿಸಿಲು ಗಾಳಿಯನ್ನು ತಾಳಲಾರದೆ, ದಾರಿಯಲ್ಲಿ ಪ್ರಜ್ಞೆತಪ್ಪಿ ಬಿದ್ದುಬಿಟ್ಟರು. ದಾಸಿಯರು ಅವರಿಗೆ ನೀರು ಕುಡಿಸಿ, ತಮ್ಮ ದೌರ್ಭಾಗ್ಯಕ್ಕೆ ಕಣ್ಣೀರು ಸುರಿಸುತ್ತಾ ಅವರನ್ನು ಹಿಂದಕ್ಕೆ ಕರೆದುಕೊಂಡು

ಬರುತ್ತಿದ್ದರು. ಆ ದಾರಿಯೆಲ್ಲಾ ಧೂಳುಮಯವಾಗಿ, ಮೋಡದಂತೆ ಧೂಳು ಮೇಲೇಳುತ್ತಿತ್ತು. ಅದು ಧರ್ಮಜನ ಪಾದ ಧೂಳಿ ಎಂದು ಕೆಲವರು ಅದನ್ನು ತಲೆಗೆ ಹಚ್ಚಿಕೊಂಡು ಅಲ್ಲಲ್ಲೇ ನಿಲ್ಲುತ್ತಿದ್ದರು. ಹೀಗೆ, ಬೆಟ್ಟ ಗುಡ್ಡಗಳನ್ನು ದಾಟಿ ಅವರು ಕಣ್ಣಿಗೆ ಮರೆಯಾದಮೇಲೆ, ಹಿಂದೆ ಹೋದವರು ಅಲ್ಲಲ್ಲೇ ನಿಂತು, ನಿಟ್ಟುಸಿರು ಬಿಡುತ್ತಾ ತೀವ್ರ ದುಃಖದಿಂದ ನೊಂದು ಹಸ್ತಿನಾಪುರಕ್ಕೆ ಹಿಂತಿರುಗಿದರು.

ಪಾಂಡವರ ಮಹಾಪ್ರಸ್ಥಾನ ಮುಂದುವರಿಯಿತು. ಅಂದರೆ ಏನನ್ನೂ ತಿನ್ನದೆ, ಕುಡಿಯದೆ, ವಿಶ್ರಾಂತಿ ಇಲ್ಲದೆ, ಉತ್ತರ ದಿಕ್ಕಿನಲ್ಲಿ ಹೋಗುತ್ತಾ ಇದ್ದರು. ಇದನ್ನೇ ಮಹಾಪ್ರಸ್ಥಾನ ಎನ್ನುವರು.

ಶರೀರ ಬಿದ್ದು ಹೋಗುವವರೆಗೂ ಅತ್ತಿತ್ತ ನೋಡದೆ ಪಾಂಡವರು ಮುಂದೆ ಸಾಗಿದ್ದರು. ತಮ್ಮ ಹೃದಯಗಳಲ್ಲಿ ಕೃಷ್ಣನ ರೂಪ, ಅವನ ಲೀಲೆ, ಅವನ ಮಾತುಗಳಲ್ಲದೆ ಬೇರೆ ಯಾವುದಕ್ಕೂ ಸ್ಥಳಕೊಡದೆ ಹೋಗುತ್ತಿದ್ದರು. ಸ್ವಲ್ಪ ದೂರದ ವರೆಗೆ ದ್ರೌಪದಿ ಅವರನ್ನು ಅನುಸರಿಸಿದ ಮೇಲೆ, ಆಯಾಸದಿಂದ ಬಳಲಿದಳು. ಅವಳನ್ನು ಗಂಡಂದಿರು ಕಣ್ಣೆತ್ತಿಕೂಡ ನೋಡಲಿಲ್ಲ. ಅವಳು ಪ್ರಾರ್ಥಿಸಿದರೂ ತಿರುಗಿ ನೋಡಲಿಲ್ಲ. ಮಹಾ ಸಾಧ್ವೀಮಣಿಯಾದ ದ್ರೌಪದಿ ಪತಿಗಳ ವ್ರತವನ್ನು ತಿಳಿದು, ಇನ್ನು ಅವರಿಗೂ ತನಗೂ ಈ ದೇಹದ ಸಂಬಂಧ ಮುಗಿಯಿತೆಂದು ನಿಶ್ಚಯಿಸಿಕೊಂಡು ದಾರಿಯಲ್ಲೇ ಕುಸಿದು ಬಿದ್ದಳು. ಶ್ಯಾಮಸುಂದರನನ್ನು ಸ್ಮರಿಸುತ್ತಾ ಅವನಲ್ಲಿ ಸೇರಿಹೋದಳು.

ಈ ವಿಧವಾಗಿ ಪಾಂಡವರೂ ಕೂಡ ನಿಯಮಬದ್ಧರಾಗಿ ಅರಣ್ಯದಲ್ಲಿ ಹೋಗುತ್ತಾ ಹೋಗುತ್ತಾ, ಯಾರು ಯಾರಿಗೆ ಎಲ್ಲೆಲ್ಲಿ ಮರಣ ಪ್ರಾಪ್ತವಾಯಿತೋ ಅಲ್ಲಲ್ಲೇ ಕುಸಿದು, ಪರಮಾತ್ಮನಾದ ಕೃಷ್ಣಮೂರ್ತಿಯಲ್ಲಿ ಸೇರಿಹೋದರು. ಅಲ್ಲಲ್ಲೇ ದೇಹ ಗಳನ್ನು ಮಣ್ಣುಪಾಲು ಮಾಡಿದರು. ಕಡೆಗೆ, ಪಾಂಡವರೆಲ್ಲರೂ ಕೃಷ್ಣ ನಾಮಾಮೃತ ಚಿಂತನೆಯಲ್ಲೇ ಅಮೃತತ್ವವಾದ ಆತ್ಮದಲ್ಲಿ ಸೇರಿಹೋದರು.

# ೧೫ ಪರೀಕ್ಷಿತ್ ಚಕ್ರವರ್ತಿಯ ಆಳ್ವಿಕೆ

ಭರತವಂಶ ಸಿಂಹಾಸನದಿಂದ, ಪರೀಕ್ಷಿತ್ ಮಹಾರಾಜ ನ್ಯಾಯಪರಾಯಣನಾಗಿ, ಧರ್ಮಾತ್ಮನಾಗಿ, ಪ್ರಜಾವತ್ಸಲನಾಗಿ, ಪ್ರಜೆಗಳಿಗೆ ಪ್ರಾಣಸಮಾನನಾಗಿ ರಾಜ್ಯವನ್ನು ಪರಿಪಾಲನೆ ಮಾಡುತ್ತಿದ್ದ. ಪರೀಕ್ಷಿತ್ ಯಾವ ಕೆಲಸ ಪ್ರಾರಂಭಿಸಬೇಕಾದರೂ ಮೊದಲು ಕೃಷ್ಣನನ್ನೂ ತನ್ನ ತಾತಂದಿರನ್ನೂ ಸ್ಮರಿಸಿ, ಅವರಿಗೆ ಮನಸ್ಸಿನಲ್ಲೇ ನಮಸ್ಕರಿಸುತ್ತಿದ್ದ. ತನ್ನ ಎಲ್ಲ ಕಾರ್ಯಗಳನ್ನೂ ಸಕ್ರಮವಾಗಿ ನಡೆಸಿರೆಂದು ದಿನವೂ ಬೆಳಿಗ್ಗೆ ಮತ್ತು ಸಂಜೆ ಅವರನ್ನು ಪ್ರಾರ್ಥಿಸುತ್ತಿದ್ದ. ಪ್ರಜೆಗಳಿಗೆ ತಾನು ಹೃದಯ ವೆಂದು, ಪ್ರಜೆಗಳು ತನಗೆ ದೇಹದ ಅಂಗಗಳೆಂದು ಭಾವಿಸಿ ರಾಜ್ಯವನ್ನು ಆಳುತ್ತಿದ್ದ.

ಆತನ ರಾಜ್ಯದಲ್ಲಿ ಗಾಳಿ ಸಹಿತ ತನ್ನ ಮೇಲೆ ಎಲ್ಲಿ ಕಳ್ಳತನದ ಅಪಾದನೆ ಬರುವುದೋ ಎಂದು, ಯಾವ ಪದಾರ್ಥವನ್ನೂ ಪಕ್ಕಕ್ಕೆ ಸರಿಸುತ್ತಿರಲಿಲ್ಲ. ಅವನ ರಾಜ್ಯದಲ್ಲಿ ಕಳ್ಳಕಾಕರ ಭಯವಾಗಲಿ, ಅಕ್ರಮ, ಅನ್ಯಾಯ, ಅನಾಚಾರಗಳಾಗಲಿ ನಡೆಯುವುದಿಲ್ಲ ಎನ್ನುವ ಪ್ರಖ್ಯಾತಿ ಗಳಿಸಿತು. ಎಲ್ಲಿಯಾದರೂ ಅಂಥದ್ದು ಸ್ವಲ್ಪ ನಡೆಯಿತೆಂದು ತಿಳಿದರೆ, ಅಪರಾಧಿಗಳಿಗೆ ಅತ್ಯುಗ್ರ ಶಿಕ್ಷೆ ವಿಧಿಸಿ ಮತ್ತೆ ನಡೆಯದಂತೆ ಕ್ರಮ ಕೈಗೊಳ್ಳುತ್ತಿದ್ದ.

ಈ ವಿಧವಾದ ಧರ್ಮ ಪರಿಪಾಲನೆಯಿಂದ, ಸಕಾಲದಲ್ಲಿ ಮಳೆ ಬರುತ್ತಿತ್ತು. ಬೆಳೆ ಸಮೃದ್ಧಿಯಾಗಿ ಆಗುತ್ತಿತ್ತು. ಪ್ರಜೆಗಳು ಸುಖ ಶಾಂತಿಯಿಂದ ನಿರ್ಭೀತರಾಗಿ, ಹಾಯಾಗಿ ಕಾಲ ಕಳೆಯುತ್ತಿದ್ದರು.

ಹೀಗೆ, ಪರೀಕ್ಷಿತ್ ರಾಜ್ಯ ಪರಿಪಾಲನೆ ಮಾಡುತ್ತಿರುವಾಗ, ಯುಕ್ತ ವಯಸ್ಸಿಗೆ ಬಂದ ಮೇಲೆ ಮಂತ್ರಿಗಳೂ ಕುಲಗುರುಗಳೂ ಹಿರಿಯರೂ ಪರೀಕ್ಷಿತನನ್ನು ಒಬ್ಬ ಗೃಹಸ್ಥನನ್ನಾಗಿ ಮಾಡಬೇಕೆನ್ನುವ ಸ್ಥಿರ ಸಂಕಲ್ಪದಿಂದ, ಸಮಯ ನೋಡಿ, ಅವನಲ್ಲಿ ಬಿನ್ನವಿಸಿದರು. ಅವನ ಒಪ್ಪಿಗೆ ಪಡೆದು, ಅವನ ಸೋದರಮಾವನಾದ ಉತ್ತರನ ಬಳಿಗೆ ಬ್ರಾಹ್ಮಣರನ್ನು ಕಳಿಸಿದರು. ಉತ್ತರನು ಕೂಡ ಅಮಿತಾನಂದದಿಂದ ತನ್ನ ಒಪ್ಪಿಗೆಯಿತ್ತ. ಇಬ್ಬರ ಒಪ್ಪಿಗೆಯನ್ನು ಪಡೆದು ಮುಹೂರ್ತವನ್ನು ನಿರ್ಣಯಿಸಿದರು. ಪವಿತ್ರ ಮುಹೂರ್ತದಲ್ಲಿ ಪರೀಕ್ಷಿತನಿಗೂ ಉತ್ತರನ ಮಗಳಾದ ಇರಾವತಿಗೂ ಮದುವೆ ಅತಿ ವೈಭವದಿಂದ ಜರುಗಿತು.

ಮಹಾರಾಣಿ ಇರಾವತಿ ದೊಡ್ಡ ಸಾಧ್ವೀಮಣಿ, ಸರ್ವಲಕ್ಷಣ ಸಂಪನ್ನೆ, ಪತಿ ಪರಾಯಣೆ, ಪ್ರಜೆಗಳ ಬಾಧೆ ತನ್ನ ಬಾಧೆಯೆಂದೇ ತಿಳಿದು ದುಃಖಿಸುವಂಥವಳು.

ಪುರಸ್ತ್ರೀಯರೊಡನೆ ಒಡನಾಡಿ ಅವರ ಯೋಗಕ್ಷೇಮಗಳನ್ನು ಸ್ವತಃ ತಾನೇ ತಿಳಿದು, ಪತಿಗೆ ತಿಳಿಸುವಳು. ಅವರಿಗೆ ಅಗತ್ಯವಾದ ಸಹಾಯ ಸದುಪಾಯಗಳನ್ನು ಮಾಡಿ ಕೊಡುವಳು. ಸ್ತ್ರೀಯರಿಗೆ ಶೀಲದ ಬೋಧನೆ ಮಾಡುವುದು ಮಾತ್ರವಲ್ಲದೆ, ಅವರ ಭದ್ರತೆಗೆ ತಕ್ಕ ಶಾಸನ, ಸುರಕ್ಷಿತ ಏರ್ಪಾಟು ಕೂಡ ಮಾಡುವಳು. ಯಾರೇ ಬಂದರೂ ಆದರಿಸಿ ಸತ್ಕರಿಸುವಂಥ ನಿಗರ್ವಿ, ಸಹನಶೀಲೆ, ಸಾಕ್ಷಾತ್ ಅನ್ನಪೂರ್ಣೆ ಎನ್ನುವ ಖ್ಯಾತಿ ಗಳಿಸಿದ ಗೃಹಲಕ್ಷ್ಮಿಯಾದಳು.

ಈ ಪೂತಾತ್ಮರಾದ ದಂಪತಿಗಳ ಪಾಲನೆಯಲ್ಲಿ, ಸ್ತ್ರೀ ಪುರುಷರು ಯಾವ ಕೊರತೆಯೂ ಇಲ್ಲದೆ, ಸುಖ ಶಾಂತಿಯ ಜೀವನ ನಡೆಸುತ್ತಿದ್ದರು. ಪರೀಕ್ಷಿತ್ ಯಜ್ಞ ಕರ್ಮಗಳನ್ನು ಮಾಡುತ್ತಾ ಸರ್ವದೇವತಾ ಪೂಜೆ ಮಾಡುತ್ತಾ ಪ್ರಜೆಗಳಲ್ಲಿ ಭಗವತ್ ವಿಶ್ವಾಸ ಗಾಢವಾಗಿ ಬೆಳೆಯುವಂತೆ ಮಾಡುತ್ತಿದ್ದ. ಅರಣ್ಯದಲ್ಲಿ ತಪೋನಿಧಿಗಳಿಗೆ, ಋಷಿಪುಂಗವರಿಗೆ ಅವರವರ ಸಾಧನೆಗೆ ಯಾವ ಅಡ್ಡಿ ಆತಂಕವೂ ಇರದಂತೆ ಬೇಕಾದ ರಕ್ಷಣೆಯನ್ನು ತಾನೇ ವ್ಯವಸ್ಥೆ ಮಾಡುತ್ತಿದ್ದ.

ಹೀಗೆ, ಪಾರ್ವತೀ ಪರಮೇಶ್ವರರ ಹಾಗೆ ಅವರು ಭರತ ರಾಜ್ಯವನ್ನು ಪಾಲಿಸುತ್ತ ಇರುವಾಗ, ಇರಾವತಿ ಗರ್ಭವತಿಯಾದಳೆನ್ನುವ ವಾರ್ತೆ ಸ್ತ್ರೀಯರ ಮೂಲಕ ರಾಜ್ಯದ ನಾಲ್ಕು ದಿಕ್ಕುಗಳನ್ನೂ ಮುಟ್ಟಿತು. ಈ ಸಂತೊಷ ವಾರ್ತೆಯನ್ನು ಕೇಳಿದ ಪ್ರಜೆಗಳು ಆನಂದೋದ್ರೇಕಿತರಾಗಿ ತಮ್ಮ ಚಕ್ರವರ್ತಿಗೆ ಸರ್ವಸದ್ಗುಣ ಸಂಪನ್ನನೂ ಧರ್ಮನಿಷ್ಠಾಪರನೂ ಪೂರ್ಣ ಆಯುಷ್ಮಂತನೂ ಆದ ಒಬ್ಬ ಪುತ್ರನ ಜನನವಾಗಲೆಂದು ತಮ್ಮ ತಮ್ಮ ಮನೆಗಳಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಆ ಕಾಲದಲ್ಲಿ ರಾಜನ ಮೇಲೆ ಪ್ರಜೆಗಳ ಪ್ರೇಮ ಅಷ್ಟು ತೀವ್ರವಾಗಿರುತ್ತಿತ್ತು. ತಮ್ಮತಮ್ಮ ಕ್ಷೇಮವನ್ನು ಕೋರದೆ, ರಾಜನ ಕ್ಷೇಮವೇ ತಮ್ಮ ಕ್ಷೇಮವೆಂದು ತಿಳಿಯುತ್ತಿದ್ದರು. ರಾಜನನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಪಾಡುತ್ತಿದ್ದರು.

ಪ್ರಜೆಗಳಿಗೆ ತನ್ನ ಮೇಲಿರುವ ಪ್ರೇಮ ವಿಶ್ವಾಸಗಳನ್ನು ಕಂಡು, ಕೇಳಿ, ಪರೀಕ್ಷಿತ್ ಆನಂದಬಾಷ್ಪ ಸುರಿಸುತ್ತಿದ್ದ. ಇದೆಲ್ಲವೂ ರಾಜ್ಯ ಪರಿಪಾಲನಾ ಪ್ರಭಾವವಲ್ಲ, ನನ್ನ ತಾತಂದಿರ ಪ್ರೇಮ ಪ್ರಸಾದ, ಕೃಷ್ಣ ಭಗವಾನನ ಅನುಗ್ರಹ ರಸ, ಎಂದು ತನ್ನಲ್ಲಿ ತಾನು ಆನಂದಿಸುತ್ತಾ ತಾನೂ ಕೂಡ ಪ್ರಜೆಗಳ ಯೋಗಕ್ಷೇಮ ವಿಷಯದಲ್ಲಿ ಎಷ್ಟುಮಾತ್ರವೂ ಅಲಕ್ಷ್ಯ ಮಾಡದೆ, ಅಹಂಕಾರ ತೋರಿಸದೆ, ಪ್ರಜೆಗಳನ್ನು ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದ.

ರಾಜ ಮತ್ತು ಪ್ರಜೆಗಳ ಸಂಬಂಧ ಹೀಗೆ ಪವಿತ್ರವಾಗಿ ದಿನದಿನಕ್ಕೆ ಅಭಿವೃದ್ಧಿ ಹೊಂದಿ, ಪರೀಕ್ಷಿತನ ರಾಜ್ಯ ವೈಕುಂಠವನ್ನು ಸಹ ಮೀರಿದೆ ಎನ್ನುವ ರೀತಿಯಲ್ಲಿ ಖ್ಯಾತಿ ಹೊಂದುತ್ತಿರುವಾಗ, ಒಂದು ಸುಮುಹೂರ್ತದಲ್ಲಿ ಮಹಾರಾಣಿ ಇರಾವತಿ ಒಬ್ಬ ಸುಪುತ್ರನಿಗೆ ಜನ್ಮವಿತ್ತಳೆನ್ನುವ ಶುಭವಾರ್ತೆ ರಾಜ್ಯಾದ್ಯಂತ ಹರಡಿತು. ತಪಸ್ವಿಗಳೂ ಮಹರ್ಷಿಗಳೂ ಪಂಡಿತೋತ್ತಮರೂ ರಾಜರೂ ಈ ವಾರ್ತೆಯನ್ನು ಕೇಳಿ, ಆಶೀರ್ವದಿಸಿ, ರಾಜನಿಗೆ ಶುಭ ಸಂದೇಶಗಳನ್ನು ಕಳಿಸಿದರು. ಮಗುವಿನ ಜನ್ಮನಕ್ಷತ್ರ ನೋಡಿ, ರಾಜ್ಯದಲ್ಲಿ ಒಂದು ಹೊಸ ಬೆಳಕು ಉದಯಿಸಿತು ಎಂದೂ ಮಗ ತಂದೆಗೆ ಸತ್ಕೀರ್ತಿ ತರುವನೆಂದೂ ಪ್ರಜೆಗಳ ಮನ್ನಣೆ ಪಡೆಯುವನು ಎಂದೂ ಬಾಯ್ತುಂಬಾ ಕೊಂಡಾಡಿದರು.

ಬ್ರಾಹ್ಮಣರನ್ನು ಆಹ್ವಾನಿಸಿ, ನಾಮಕರಣ ಸುಮುಹೂರ್ತ ಏರ್ಪಡಿಸಿ ಹಿರಿಯರ ಸಮಕ್ಷಮದಲ್ಲಿ ಅತ್ಯಂತ ವೈಭವದಿಂದ ಜನಮೇಜಯನೆನ್ನುವ ನಾಮಕರಣ ಮಾಡಿದರು. ಬಂದ ಬ್ರಾಹ್ಮಣ ಮುತ್ತೈದೆಯರಿಗೆ ಕೃಪನ ಆಜ್ಞಾನುಸಾರ ದಾನಧರ್ಮಗಳನ್ನು ಮಾಡಿದರು. ಸಂತರ್ಪಣೆ ನಡೆಸಿದರು. ಗೋವುಗಳನ್ನು ಸುವರ್ಣ ಆಭರಣ ಸಹಿತವಾಗಿ ದಾನಮಾಡಿದರು.

ಚಕ್ರವರ್ತಿಯಾದ ಧರ್ಮರಾಜ ಮಹಾಪ್ರಸ್ಥಾನಕ್ಕೆ ಹೋಗುವಾಗ ಎಳೆಯ ಬಾಲಕ ಪರೀಕ್ಷಿತನನ್ನು ತಮ್ಮ ಕುಲಗುರು ಕೃಪಾಚಾರ್ಯರ ವಶಕ್ಕೆ ಒಪ್ಪಿಸಿ ಹೋಗಿದ್ದುದರಿಂದ, ಎಲ್ಲ ಕಾರ್ಯಗಳಿಗೂ ಆಚಾರ್ಯರ ಅನುಮತಿ ಪಡೆದೇ ಪರೀಕ್ಷಿತ್ ಮಹಾರಾಜ ರಾಜ್ಯಭಾರ ನಡೆಸುತ್ತಿದ್ದ. ವೇದಜ್ಞರಾದ ಬ್ರಾಹ್ಮಣರ ಸಮ್ಮತಿ ಇಲ್ಲದೆ, ಆಚಾರ್ಯರ ಸಮ್ಮತಿ ಇಲ್ಲದೆ, ಮಹಾರಾಜ ಯಾವ ಸಣ್ಣ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಆದ್ದರಿಂದಲೇ ರಾಜ್ಯದಲ್ಲಿ ಮುನಿಗಳೂ ಮಹರ್ಷಿಗಳೂ ಹೃದಯದಲ್ಲಿ ರಾಜನ ಕ್ಷೇಮವನ್ನು ಸದಾ ಕೋರುತ್ತಾ, ಮಧ್ಯೆ ಮಧ್ಯೆ ಮಹಾರಾಜನಿಗೆ ಶುಭ ಸಂದೇಶಗಳನ್ನು ಕಳಿಸುತ್ತಾ ರಾಜ್ಯದ ಪ್ರಜೆಗಳ ಸುಖಶಾಂತಿಯನ್ನೂ ರಾಜನ ಮಾತೃ ವಾತ್ಸಲ್ಯವನ್ನೂ ಕೊಂಡಾಡುತ್ತಿದ್ದರು.

ಅಂಥ ಹಿರಿಯರ ಅನುಗ್ರಹ ಬಲದಿಂದಲೂ ಗುರುಗಳ ಆದೇಶಾನುಸಾರವಾಗಿಯೂ ಭಗವತ್ ಕರುಣಾಕಟಾಕ್ಷದಿಂದಲೂ ಪರೀಕ್ಷಿತ್ ಭೂಮಿಯಲ್ಲಿನ ಸಮಸ್ತ ರಾಜರನ್ನೂ ಜಯಿಸಿದ. ಅಶ್ವಮೇಧಯಾಗಗಳನ್ನು ಮಾಡಿದ. ಇದರಿಂದ ಪರೀಕ್ಷಿತ್ ಮಹಾರಾಜನ ಕೀರ್ತಿ ಕೇವಲ ಭರತ ರಾಜ್ಯದಲ್ಲಿ ಮಾತ್ರವಲ್ಲದೆ, ಸಮಸ್ತ ಭೂಮಂಡಲವನ್ನು ವ್ಯಾಪಿಸಿತು. ಅವನು ಭರತವಂಶ ತಿಲಕನೆಂದು ಎಲ್ಲರೂ ಕೊಂಡಾಡಿದರು. ಅವನ ರಾಜ್ಯಭಾರದಲ್ಲಿ, ಅವನಿಗೆ ಅಧೀನನಲ್ಲದ ರಾಜ ಒಬ್ಬನೂ

ಇರಲಿಲ್ಲ. ಸಮಸ್ತ ಭೂಮಂಡಲದ ರಾಜರೆಲ್ಲರು ಅವನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತಿದ್ದರು. ಈ ಕಾರಣದಿಂದ ಪರೀಕ್ಷಿತ್ ಮಹಾರಾಜ ಯಾರೊಡನೆಯೂ ಯುದ್ಧ ಮಾಡಬೇಕಾದ ಅವಶ್ಯಕತೆಯಾಗಲಿ, ಯಾರನ್ನೂ ಜಯಿಸಬೇಕಾದ್ದಾಗಲಿ ಇರಲಿಲ್ಲ. ಆದ್ದರಿಂದ, ಸಮಸ್ತ ಭೂಮಂಡಲದಲ್ಲಿ ನಿರಾತಂಕವಾಗಿ ಸಂಚರಿಸುತ್ತಿದ್ದ. ಆದರೆ, ಆಗಾಗ ಕಲಿಯ ಪ್ರತಾಪವನ್ನು ನೋಡಿ, ಅದರೊಡನೆ ಹೋರಾಡಿ ಜಯಿಸುತ್ತಾ ಅನೇಕ ರೀತಿಯಲ್ಲಿ ಕಲಿಯನ್ನು ಮೆಟ್ಟಿಹಾಕಲು ಯತ್ನಿಸುತ್ತಿದ್ದ.

ಪರೀಕ್ಷಿತ್ ಮಹಾರಾಜ ಎಲ್ಲಿ ಹೋದರೂ ತನ್ನ ಪೂರ್ವಜರ ಕೀರ್ತಿಯನ್ನು ಕೇಳಿ ತಿಳಿದುಕೊಳ್ಳುತ್ತಿದ್ದ. ಎಲ್ಲೆಲ್ಲಿ ಯಾವ ಯಾವ ಸಂದರ್ಭಗಳಲ್ಲಿ ತನ್ನ ತಾತಂದಿರನ್ನೂ ಅಜ್ಜಿಯನ್ನೂ ಕೃಷ್ಣ ಹೇಗೆ ಕಾಪಾಡಿದನೆನ್ನುವ ವಿಷಯವನ್ನು ಕೇಳುತ್ತಾ ಆನಂದ ಬಾಷ್ಪ ಸುರಿಸುತ್ತಾ ತನಗೆ ಪರಮಾತ್ಮನ ಅಂಥ ಸಾಮೀಪ್ಯ ಅನುಭವಿಸಲು ಸಾಧ್ಯವಾಗದೆ ಹೋಯಿತಲ್ಲಾ ಎಂದು ಚಿಂತಿಸುತ್ತಿದ್ದ.

ಕಲಿ ತನ್ನ ರಾಜ್ಯವನ್ನು ಪ್ರವೇಶಿಸಿ ಕೆಲವು ಧರ್ಮವಿರುದ್ಧವಾದ ಕೆಲಸಗಳನ್ನು ಮಾಡಿಸುತ್ತಿದ್ದಾನೆನ್ನುವ ವಾರ್ತೆ ಕೇಳಿ, ಅದನ್ನು ತಡೆಗಟ್ಟುವ ಬಗೆ ಹೇಗೆ ಎನ್ನುವ ಯೋಚನೆಯಲ್ಲಿ ಮುಳುಗಿದ. ಕಡೆಗೆ ಕಲಿ ಪ್ರವೇಶಿಸುವ ಜಾಗಗಳು ಯಾವುದೆನ್ನುವುದನ್ನು ಪತ್ತೆ ಹಚ್ಚಿ, ಅಂಥ ಜಾಗಗಳೇ ಇಲ್ಲದಂತೆ ಮಾಡಿದ. ಕಲಿ ಪ್ರವೇಶಿಸಲು ಅವಕಾಶವಿಲ್ಲದಂತೆ ಕೆಲವು ಕಟ್ಟುಪಾಡುಗಳನ್ನು ಗೊತ್ತುಪಡಿಸಿದ. ಈ ವಿಷಯವಾಗಿ ಮಂತ್ರಿಗಳೊಡನೆ ಕುಲಗುರುಗಳೊಡನೆ ಸಮಾಲೋಚನೆ ನಡೆಸುತ್ತಿದ್ದ.

ಪ್ರಜೆಗಳಲ್ಲಿ ಧರ್ಮ ವಿರುದ್ಧವಾದ ಭಾವನೆಗಳು ಹೃದಯದಲ್ಲಿ ತಲೆಯೆತ್ತಿದರೆ ಅಲ್ಲವೇ ಕಲಿ ಅಲ್ಲಿ ಪ್ರವೇಶಿಸುವುದು ಎಂದು ಮಂತ್ರಿಗಳು ಹೇಳಿದ್ದು ಪರೀಕ್ಷಿತನಿಗೆ ಸಮ್ಮತವಾಗಲಿಲ್ಲ. "ನನ್ನ ರಾಜ್ಯವನ್ನು ಕಲಿ ಪ್ರವೇಶಿಸಿದರೆ ಪ್ರಜೆಗಳ ಹೃದಯದಲ್ಲಿ ಧರ್ಮ ವಿರುದ್ಧ ಭಾವನೆಗಳು ತಾವೇ ತಲೆಯೆತ್ತುವುವು. ಪ್ರಜೆಗಳ ತಪ್ಪು ಇದರಲ್ಲಿ ಏನೂ ಇಲ್ಲ. 'ಯಥಾರಾಜಾ ತಥಾಪ್ರಜಾ' ರಾಜನ ಅಸಮರ್ಥತೆ, ಆತ್ಮವಿಶ್ವಾಸ ಲೋಪ, ದೈವಾನುಗ್ರಹ ಬಲ ಇಲ್ಲದಿರುವುದು, ಈ ಮೂರೂ ಸೇರಿ ಕಲಿ ಪ್ರವೇಶಕ್ಕೆ ದಾರಿಯಾಗುವುದು. ಈ ಮೂರು ಲೋಪಗಳೂ ಇಲ್ಲದಿದ್ದರೆ, ಕಲಿ ಪ್ರವೇಶಿಸಿದರೂ ಅವನು ಯಾರನ್ನೂ ವಶಪಡಿಸಿಕೊಳ್ಳಲಾರ. ಆದ್ದರಿಂದ ರಾಜ್ಯದಲ್ಲಿ ಆತ್ಮವಿಶ್ವಾಸ ಬೆಳೆಯಲು, ಸಕ್ರಮ ಪರಿಪಾಲನೆ ಇರುವಂತೆ ಮಾಡಲು, ಭಗವದನುಗ್ರಹ ಪ್ರಸಾದವನ್ನು ಪಡೆಯಲು, ಅಗತ್ಯವಾದ ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕು," ಎಂದು ಸ್ವತಃ ಮಂತ್ರಿಗಳೊಂದಿಗೆ ಹಗಲೂ ರಾತ್ರಿ ರಾಜ್ಯವೆಲ್ಲಾ ತಿರುಗಿ ಕಲಿಯನ್ನು ನಾಶ ಮಾಡುವ ಕಾರ್ಯದಲ್ಲಿ ನಿರತನಾಗಿದ್ದ. ಅನ್ಯಾಯ, ಅಕ್ರಮ, ಅನಾಚಾರ, ಅಸತ್ಯ,

ಹಿಂಸೆಗಳು ಇಲ್ಲದಂತೆ ಮಾಡಲು ಅಗತ್ಯವಾದ ರೀತಿ ನೀತಿಗಳನ್ನು ಗೊತ್ತುಮಾಡಿದ. ಕೊನೆಯದಾಗಿ ಭದ್ರಾಶ್ವ, ಕೇತುಮಾಲ, ಭಾರತ, ಉತ್ತರಕುರು, ಕಿಂಪುರುಷಾದಿ ದೇಶಗಳ ದಿಗ್ವಿಜಯ ಯಾತ್ರೆ ನಡೆಸಿದ.

## ೧೬ ಕೃಷ್ಣ ಭಕ್ತಿ

ಪರೀಕ್ಷಿತ್ ಮಹಾರಾಜ ಯಾವ ದೇಶಕ್ಕೆ ಹೋದರೂ ಆಯಾ ದೇಶದ ರಾಜ ಮಹಾರಾಜರು ಅವನನ್ನು ಹೃದಯಪೂರ್ವಕರಾಗಿ, ತಮ್ಮ ತಮ್ಮ ಯೋಗ್ಯತೆಗೆ ಅನುಗುಣವಾಗಿ ಸೈನಿಕ ವಂದನೆ ಸಲ್ಲಿಸಿ, ಸ್ವಾಗತಿಸುತ್ತಿದ್ದರು. ತಮ್ಮ ತಮ್ಮ ಸಹಾಯ ಸಲ್ಲಿಸಲು ತಾವು ಸದಾ ಸಿದ್ಧರೆಂದು ಬಿನ್ನವಿಸುತ್ತಿದ್ದರು. ಪರೀಕ್ಷಿತ್ ರಾಜ, ಅವರ ಸಹಾಯ ತನಗೆ ಅಗತ್ಯವಿಲ್ಲವೆಂದೂ ತಮ್ಮ ತಮ್ಮ ರಾಜ್ಯಗಳಲ್ಲಿ ಪ್ರಜೆಗಳಿಗೆ ಸುಖ ಶಾಂತಿ ಇತ್ತು, ವೇದ, ಗೋ ಬ್ರಾಹ್ಮಣ, ಸ್ತ್ರೀಯರ ರಕ್ಷಣೆ ಮಾಡುತ್ತಾ ದೈವಾರಾಧನೆ ಮಾಡುತ್ತಿರಬೇಕೆಂದೂ ಅವರಿಗೆ ಆದೇಶ ನೀಡುತ್ತಿದ್ದ. ಅದೇ ತನಗೆ ಅವರು ಮಾಡಬಹುದಾದ ಸಹಾಯವೆಂದು ಹೇಳುತ್ತಿದ್ದ.

ಕೆಲವು ಮುಖ್ಯವಾದ ರಾಜ್ಯಗಳಲ್ಲಿ ಪರೀಕ್ಷಿತನ ಭೇಟಿಯ ಕಾಲದಲ್ಲಿ, ಅವನ ಪೂರ್ವಜರ ಕೀರ್ತಿಯನ್ನು ಹಾಡಿ ಹೊಗಳುತ್ತಿದ್ದರು. ಪಾಂಡವರಿಗೆ ಸಂಬಂಧಿಸಿದ ಕಥೆಗಳನ್ನು ಹೇಳುತ್ತಿದ್ದರು. ಕೃಷ್ಣ ಪಾಂಡವರನ್ನು ಹೇಗೆ ಕೃಪಾ ದೃಷ್ಟಿಯಿಂದ ನೋಡುತ್ತಿದ್ದ, ಪಾಂಡವರು ಕೃಷ್ಣನನ್ನು ಎಷ್ಟು ಭಕ್ತಿ ವಿಶ್ವಾಸಗಳಿಂದ ಕಾಣುತ್ತಿದ್ದರು ಎನ್ನುವುದನ್ನು ಭಾವಪೂರ್ವಕವಾಗಿ ಹೇಳುತ್ತಿದ್ದರು. ಕೃಷ್ಣಾರ್ಜುನರ ವೇಷ ಹಾಕಿ ಕೊಂಡು, ಕೃಷ್ಣಪರಮಾತ್ಮನ ಕಲಾಪಗಳನ್ನು ಪ್ರದರ್ಶಿಸುತ್ತಿದ್ದರು.

ಇವೆಲ್ಲವನ್ನೂ ನೋಡಿ ಕೇಳಿ, ಪರಿಕ್ಷಿತ್ ತನಗರಿವಿಲ್ಲದಂತೆಯೇ ಕಣ್ಣೀರು ಸುರಿಸು ತ್ತಿದ್ದ. ಸೂತ ವಂದಿ ಮಾಗಧ ಜನರೂ ಕಥಕರೂ ರಾಜನಿಗೆ ಕೃಷ್ಣ ಪಾಂಡವರ ಕಥೆ ಕೇಳುವುದು ಬಹಳ ಇಷ್ಟ ಎನ್ನುವುದನ್ನು ತಿಳಿದು, ಬೇರೆ ಎಲ್ಲ ಕಥೆಗಳಿಗೂ ಸ್ವಸ್ತಿ ಹಾಡಿ, ಎಲ್ಲಿ ಹೋದರು ಇದೇ ಕಾಲಕ್ಷೇಪ ನಡೆಸಲಾರಂಭಿಸಿದರು. ಮಹಾರಾಜ ಅವುಗಳನ್ನು ಕೇಳಿ ಅಷ್ಟರಿಂದಲೇ ಆನಂದಿಸುತ್ತಿರಲಿಲ್ಲ. ಅವು ಸಂಪೂರ್ಣ ಸತ್ಯ ಸಂಗತಿಗಳು ಎನ್ನುವುದನ್ನು ಮಂತ್ರಿಗಳಿಂದಲೂ ಗುರುಗಳಿಂದಲೂ ಕೇಳಿ, ತಿಳಿದು,

ಇನ್ನೂ ಅತ್ಯಂತ ವಿಶ್ವಾಸದಿಂದ ಕೇಳುತ್ತಿದ್ದುದಲ್ಲದೆ, ಗಾನ ಮಾಡುತ್ತಿದ್ದ ಕಲಾವಿದರನ್ನು ಬಹು ಸ್ನೇಹಭಾವದಿಂದ ಕಂಡು, ಅವರಿಗೆ ತಕ್ಕ ಬಹುಮಾನಗಳನ್ನು ಕೊಡುತ್ತಿದ್ದ.

ಹೀಗೆ ಪರೀಕ್ಷಿತ್ ಮಹಾರಾಜನಿಗೆ ಕೃಷ್ಣಗಾನಾಮೃತವೆಂದರೆ ಪ್ರಾಣ ಎನ್ನುವ ಸುದ್ದಿ ದೇಶಾದ್ಯಂತ ವ್ಯಾಪಿಸಿತು. ಕೃಷ್ಣಪರಮಾತ್ಮನನ್ನು ಸ್ವತಃ ನೋಡಿ, ಅವನೊಂದಿಗೆ ಒಡನಾಡಿದ ಎಷ್ಟೋ ಜನ ಪರೀಕ್ಷಿತನನ್ನು ನೋಡಲು ಊರೂರು ಮಧ್ಯದ ದಾರಿಗಳಲ್ಲಿ ಕಾದಿರುತ್ತಿದ್ದರು. ಒಂದು ದಿನ ಅವನು ಮಥುರೆಗೆ ಹಿಂದಿರುಗಿ ಬರುತ್ತಿದ್ದಾಗ, ದಾರಿಯಲ್ಲಿ ಮಹಾರಾಜನ ಸಂದರ್ಶನಕ್ಕಾಗಿ ಒಬ್ಬ ವೃದ್ಧ ಬ್ರಾಹ್ಮಣ ಕಾದುಕೊಂಡಿದ್ದ. ಮಹಾರಾಜ ಆ ಬ್ರಾಹ್ಮಣನನ್ನು ನೋಡಿ ಯೋಗಕ್ಷೇಮ ವಿಚಾರಿಸುತ್ತಿರುವಾಗ, ಆ ವೃದ್ಧ ಬ್ರಾಹ್ಮಣ, "ಮಹಾರಾಜ! ಕ್ಷಮಿಸು. ನಿಮ್ಮ ತಾತ ಧರ್ಮಜ, ಕೃಷ್ಣಪರಮಾತ್ಮನ ಸಮಕ್ಷಮದಲ್ಲಿ ಮಾಡಿದ ಅಶ್ವಮೇಧ ಯಾಗಕ್ಕೆ ನಾವು ಋತ್ವಿಕರಾಗಿ ಹೋದ ಸಮಯದಲ್ಲಿ ಆ ಮಹಾನುಭಾವ ಕೃಷ್ಣಪರಮಾತ್ಮ ಇದೇ ರೀತಿಯಾಗಿ ಯೋಗಕ್ಷೇಮ ವಿಚಾರಿಸಿದ್ದ. ಇಂದಿನ ನಿಮ್ಮ ಸಂಭಾಷಣೆ ಅಂದಿನ ಕೃಷ್ಣಪರಮಾತ್ಮನ ಸಂಭಾಷಣೆಯನ್ನು ನೆನಪಿಗೆ ತಂದಿತು," ಎಂದು ಕಣ್ಣೀರು ಹಾಕಿದ. ಅದನ್ನು ಕೇಳಿ, ಪರೀಕ್ಷಿತ್, "ಆಹಾ! ನೀವೆಷ್ಟು ಧನ್ಯಾತ್ಮರು ಸ್ವಾಮೀ! ಯಜ್ಞಶಾಲೆಯಲ್ಲಿ ಪರಮಾತ್ಮ ಕೃಷ್ಣನೊಂದಿಗೆ ಸಂಭಾಷಣೆ ನಡೆಸಿದ ಭಾಗ್ಯವಂತರು," ಎಂದು ತನ್ನ ಭುಜದ ಮೇಲಿನ ಅಂಗವಸ್ತ್ರ ತೆಗೆದು ಕೆಳಗೆ ಹಾಸಿ, ಅವರನ್ನು ಕೂರಿಸಿ, ಸ್ವಂತ ಅನುಭವದಿಂದ ನೀವು ತಿಳಿದ ಪರಮಾತ್ಮನ ಸಮಾಚಾರಗಳೆಲ್ಲವನ್ನೂ ಹೇಳಬೇಕೆಂದು ಪ್ರಾರ್ಥಿಸಿದ. ಆಗ ಆ ವೃದ್ಧ ಬ್ರಾಹ್ಮಣ, "ಮಹಾರಾಜಾ! ನಾನು ಅಂದು ತಿಳಿಯದೆ ಮಾಡಿದ ಅಪರಾಧ, ಏನು ಮಾಡಿದರೂ ಮರೆಯಲಾಗದೆ, ನನ್ನ ಎದೆಯನ್ನು ಹಿಂಡುತ್ತಿದೆ," ಎಂದು ಕಣ್ಣೀರು ಹಾಕಿದ. ಅದನ್ನು ಕಂಡು ಮಹಾರಾಜ, "ಸ್ವಾಮೀ! ಏನು ಅಂಥ ಅಪರಾಧ? ನಾನು ಕೇಳಬಹುದಾದದ್ದಾದರೆ ದಯಮಾಡಿ ತಿಳಿಸಬೇಕು," ಎಂದು ಎರಡು ಕೈಗಳನ್ನೂ ಹಿಡಿದು ದೈನ್ಯತೆಯಿಂದ ಕೇಳಿದ.

ಅದಕ್ಕೆ ಆ ಬ್ರಾಹ್ಮಣ, "ಮಹಾರಾಜಾ ಆ ದಿನ ಯಜ್ಞದೀಕ್ಷೆಯ ಋತ್ವಿಕರುಗಳಾದ ನಾವೆಲ್ಲರೂ ದೀಕ್ಷಾವಸ್ತ್ರ ಧರಿಸಿ ಯಜ್ಞಶಾಲೆ ಪ್ರವೇಶಿಸುತ್ತಿರುವಾಗ, ಯಜ್ಞಶಾಲೆಯ ಮಹಾದ್ವಾರದಲ್ಲಿ ಕೃಷ್ಣಪರಮಾತ್ಮ ಬಂಗಾರದ ಪೀಠದ ಮೇಲೆ ತಟ್ಟೆ ಇಟ್ಟು, ಕೈಯಲ್ಲಿ ಬಂಗಾರದ ಬಿಂದಿಗೆಯಲ್ಲಿ ನೀರಿಟ್ಟುಕೊಂಡು... ಅಬ್ಬಾ! ಹೇಳಲಾರೆ. ಬಾಯಲ್ಲಿ ಮಾತು ಹೊರಡುತ್ತಿಲ್ಲ," ಎಂದು ಉಕ್ಕಿಬರುತ್ತಿದ್ದ ದುಃಖವನ್ನು ಅದುಮಿಕೊಳ್ಳುತ್ತಾ ಮಾತು ನಿಲ್ಲಿಸಿದ.

ಬ್ರಾಹ್ಮಣ ಒಳ್ಳೆಯ ಸಮಯದಲ್ಲಿ ಮಾತು ನಿಲ್ಲಿಸಿದ್ದನ್ನು ನೋಡಿ, ಪರೀಕ್ಷಿತ್ ಮಹಾರಾಜ ಮತ್ತಷ್ಟು ಕುತೂಹಲದಿಂದ, "ಮುಂದೇನಾಯಿತು ಸ್ವಾಮೀ! ಹೇಳಿ, ದಯಮಾಡಿ ಹೇಳಿ," ಎಂದು ಪ್ರಾರ್ಥಿಸಿದ್ದನ್ನು ನೋಡಿ ಬ್ರಾಹ್ಮಣ, "ರಾಜಾ! ಏನು ಹೇಳಲಿ? ಋತ್ವಿಕರಾದ ನಮ್ಮ ಪಾದಗಳನ್ನು ಆ ಬಂಗಾರದ ತಟ್ಟೆಯಲ್ಲಿ ಇಡಿಸಿ, ಪ್ರತಿಯೊಬ್ಬರ ಪಾದಗಳನ್ನೂ ತೊಳೆದು, ತನ್ನ ಭುಜದ ಮೇಲಿದ್ದ ಅಂಗವಸ್ತ್ರದಿಂದ ಒರೆಸಿ, ನಮ್ಮ ಪಾದ ತೀರ್ಥವನ್ನು ಶಿರಸ್ಸಿಗೆ ಪ್ರೋಕ್ಷಣೆ ಮಾಡಿಕೊಂಡ. ನಾನು ಪ್ರಧಾನ ಋತ್ವಿಕನಾದ್ದರಿಂದ ಎಲ್ಲ ವಿವರಗಳನ್ನೂ ನನ್ನನ್ನೇ ಕೇಳಿ ತಿಳಿದುಕೊಳ್ಳುತ್ತಿದ್ದ. ಕೊನೆಗೆ, ಪೂರ್ಣಾಹುತಿ ದಿನ, ಶಂಖ, ಚಕ್ರ, ಗದಾಧಾರಿಯಾಗಿ ನಮ್ಮೆಲ್ಲರಿಗೂ ಕಾಣಿಸಿಕೊಂಡು ಅನುಗ್ರಹಿಸಿದ. ನಮ್ಮನ್ನು ಉದ್ಧಾರ ಮಾಡಿದ ಆ ಪರಮಾತ್ಮನನ್ನ ಗಲಿ, ಈ ಮುದಿ ದೇಹದಿಂದ ಇನ್ನೂ ಇರುವುದಕ್ಕೆ ಕೊರಗಿ, ಕೊರಗಿ ನೊಂದಿದ್ದ ನನ್ನ ಹೃದಯಕ್ಕೆ ನಿಮ್ಮ ದರ್ಶನ ಮರಳು ಗಾಡಿನಲ್ಲಿ ಜಲ ಸಿಕ್ಕಹಾಗೆ ನನ್ನ ತಾಪವನ್ನು ತಣಿಸಿದೆ," ಎಂದು ಪರೀಕ್ಷಿತ್ ಮಹಾರಾಜನ ಎರಡೂ ಕೈಗಳನ್ನು ಹಿಡಿದುಕೊಂಡು, ಅಂಗವಸ್ತ್ರದಲ್ಲಿ ಕಟ್ಟಿಕೊಂಡು ಬಂದಿದ್ದ ಅಕ್ಷತೆಯನ್ನು ಶಿರಸ್ಸಿನ ಮೇಲೆ ಹಾಕಿದ.

ಆಗ ಪರೀಕ್ಷಿತ್ ಮಹಾರಾಜ, "ಸ್ವಾಮೀ! ನಾನು ಧನ್ಯ. ಕೃಷ್ಣಪರಮಾತ್ಮನನ್ನು ನೋಡದಿದ್ದರೂ ಅವನಿಂದ ಪೂಜಿಸಲ್ಪಟ್ಟ ಪಾದಗಳು ನನಗೆ ಪ್ರಾಪ್ತವಾಯಿತು," ಎಂದು ಆ ಬ್ರಾಹ್ಮಣನ ಪಾದಗಳ ಮೇಲೆ ಬಿದ್ದು ಸಾಷ್ಟಾಂಗ ನಮಸ್ಕಾರ ಮಾಡಿ, ಮಂತ್ರಿಗಳನ್ನು ಕರೆದು, ಆ ಬ್ರಾಹ್ಮಣನನ್ನು ಪಲ್ಲಕ್ಕಿಯಲ್ಲಿ ಕೂರಿಸಿ, ಯಥೇಚ್ಛವಾಗಿ ಧನವಿತ್ತು ಅವನ ಸ್ವಗ್ರಾಮದಲ್ಲಿ ಅವನ ಮನೆಯ ಮುಂದೆ ಇಳಿಸುವಂತೆ ಆಜ್ಞಾಪಿಸಿ, ಕಳಿಸಿಕೊಟ್ಟ.

# ೧೭ ಗತಕಾಲ ಸ್ಮರಣೆ

ಹೀಗೆ, ಪರೀಕ್ಷಿತ್ ಮಹಾರಾಜ ಸಮಗ್ರ ಭಾರತ ದೇಶದ ಪರ್ಯಟನೆ ಮಾಡುತ್ತಾ ಅವನ ತಾತಂದಿರಾದ ಪಾಂಡವರ ರಾಜ್ಯಪರಿಪಾಲನೆ ಕುರಿತು, ಅವರು ಶ್ರೀ ಕೃಷ್ಣ ಪರಮಾತ್ಮನೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದರೆನ್ನುವುದನ್ನು ಕುರಿತು, ಅನೇಕ ಜನ ಅನುಭವಿಗಳಾದ ಪಂಡಿತರುಗಳಿಂದ ಕೇಳಿ ತಿಳಿದುಕೊಂಡು ಆನಂದಿಸುತ್ತಿದ್ದನು.

ಒಂದೊಂದು ಸಾರಿ, "ನನಗೆ ಅಂಥ ಪ್ರಾಪ್ತಿ ಇಲ್ಲದೆ ಹೋಯಿತೇ? ನಮ್ಮ ತಾತಂದಿರು ಎಷ್ಟು ಅದೃಷ್ಟವಂತರು," ಎಂದು ವಿಚಾರ ಮಗ್ನನಾಗಿ ಅವರ ಭಾಗ್ಯಕ್ಕೆ ಆನಂದಿಸುತ್ತಿದ್ದ. ಒಮ್ಮೊಮ್ಮೆ ತನ್ನ ದುರಾದೃಷ್ಟ ಸ್ಮರಿಸಿ ಕುಗ್ಗಿ ಹೋಗುತ್ತಿದ್ದ. ಹೀಗೆ, ತನ್ನ ಪೂರ್ವಿಕರ ಚರಿತ್ರೆಯನ್ನೂ, ಪುರುಷೋತ್ತಮನ ಉತ್ತಮೋತ್ತಮ ಕಾರ್ಯಗಳನ್ನೂ ಸ್ಮರಿಸುತ್ತಾ ಆನಂದದಲ್ಲಿ ಮುಳುಗಿರುವಾಗ, ಒಮ್ಮೆ ವ್ಯಾಸರು ಅಲ್ಲಿಗೆ ಬಂದರು. ಪರೀಕ್ಷಿತ್ ತಕ್ಕ ರೀತಿಯಲ್ಲಿ ಅವರನ್ನು ಸತ್ಕರಿಸಿ, ಉನ್ನತಾಸನದಲ್ಲಿ ಕುಳ್ಳಿರಿಸಿದ. ಅವರು ತನ್ನ ರಾಜ್ಯ ಪರಿಪಾಲನಾ ರೀತಿಯನ್ನು ಪ್ರಶಂಸಿಸುತ್ತಾ ಮಧ್ಯೆ ಮಧ್ಯೆ ಪಾಂಡವರ ರಾಜ್ಯ ಪರಿಪಾಲನೆಯನ್ನು ಜ್ಞಾಪಕ ಮಾಡಿಕೊಳ್ಳುತ್ತಾ ಇರುವುದನ್ನು, ಶ್ರದ್ಧಾ ಭಕ್ತಿಗಳಿಂದ ಕೇಳುತ್ತಿದ್ದ.

ನಂತರ ವ್ಯಾಸರು, "ಮಗೂ! ನಾನಿನ್ನು ಹೋಗಿ ಬರುತ್ತೇನೆ," ಎನ್ನಲು, ಹಸಿದವನ ಮುಂದೆ ಪಂಚಭಕ್ಷ್ಯ ಪಾಯಸಾದಿಗಳಿಂದ ಕೂಡಿದ ತಟ್ಟೆಯನ್ನಿಟ್ಟು, ಅವನು ಕೈಹಾಕಿ ತಿನ್ನುವಷ್ಟರಲ್ಲಿ ಆ ತಟ್ಟೆಯನ್ನು ಹಿಂದಕ್ಕೆಳೆದುಕೊಂಡರೆ ಅವನಿಗೆಷ್ಟು ನಿರಾಸೆಯಾಗುವುದೋ ಹಾಗಾಯಿತು ಪರೀಕ್ಷಿತನಿಗೆ. ತಾತಂದಿರ ವಿಷಯವನ್ನೂ ವಾಸುದೇವನ ಲೀಲೆಯನ್ನೂ ಕೇಳುತ್ತಿದ್ದ ಅವನು, ವ್ಯಾಸರು ಹೊರಡುತ್ತೇನೆಂದು ಹೇಳಿದೊಡನೆ, ದೊಡ್ಡ ನಿಧಿ ಕಳೆದುಕೊಂಡವನಂತೆ ಪರಿತಪಿಸುತ್ತಾ, "ಸ್ವಾಮೀ! ತಾವು ಬಂದ ಕೆಲಸವೇನು? ಇನ್ನೂ ಸ್ವಲ್ಪ ಕಾಲ ಇಲ್ಲಿದ್ದು, ನನ್ನ ಹಸಿವು ನೀಗಬೇಕೆಂದು ಪ್ರಾರ್ಥಿಸುತ್ತೇನೆ. ಮಹಾ ಅದೃಷ್ಟಶಾಲಿಗಳಾದ ನನ್ನ ತಾತಂದಿರು ಆ ವಾಸುದೇವನೊಡನೆ ಎಷ್ಟು ಹಾಯಾಗಿ ಕಾಲ ಕಳೆದರೆನ್ನುವುದನ್ನು, ನನಗೆ ಆ ಪವಿತ್ರ ಸನ್ನಿಧಿಯ ಪ್ರಾಪ್ತಿ ಇಲ್ಲದಿದ್ದರೂ ಕೇಳಿಯಾದರೂ ಧನ್ಯನಾಗುತ್ತೇನೆ. ನನ್ನ ಕೋರಿಕೆಯನ್ನು ಸಫಲಗೊಳಿಸಬೇಕೆಂದು ತಮ್ಮ ಪಾದಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ," ಎಂದು ವಿನಯ ವಿಧೇಯತೆಗಳಿಂದ ಬಿನ್ನವಿಸಿದ. ಅದಕ್ಕೆ ವ್ಯಾಸರು, "ಮಗೂ! ನೀನೇನು ಸಾಮಾನ್ಯನೆಂದು ತಿಳಿದಿಯೇನು? ನಿನ್ನ ಅದೃಷ್ಟ ಬೇರೆ ಯಾರಿಗೂ ಇಲ್ಲ! ಹುಟ್ಟಿದಾಕ್ಷಣವೇ ಪರಮಾತ್ಮನ ಅನುಗ್ರಹ ಪಡೆದವನು ನೀನು! ನಿನಗೆ ಪ್ರಾಣ ಪ್ರಸಾದಿಸಿ, ಶಿಶುವಾದ ನಿನ್ನನ್ನು ತನ್ನ ಹಸ್ತದಲ್ಲಿರಿಸಿಕೊಂಡು, ವಾಸುದೇವ ಮುದ್ದಾಡಿದ! ನೀನೂ ಕೂಡ ಅವನನ್ನು ಬಿಟ್ಟು ಬರಲು ಒಪ್ಪಲಿಲ್ಲ. ಕಡೆಗೆ, ನಿನ್ನ ಚಿಕ್ಕತಾತ ಸಹದೇವ, ಬಲವಂತವಾಗಿ ನಿನ್ನನ್ನು ಕೃಷ್ಣನ ಕೈಯಿಂದ ಎತ್ತಿಕೊಂಡು, ಅಂತಃಪುರಕ್ಕೆ ತೆಗೆದುಕೊಂಡು ಹೋದ. ನಿನಗೆ ನಾಮಕರಣ ಮಾಡಿದವನೂ ವಾಸುದೇವನೇ!

ಆ ದಿನ ನೀನು ನಮಗೆಲ್ಲರಿಗೂ ವಿಚಿತ್ರವೆನಿಸುವಂತೆ ವರ್ತಿಸಿದೆ. ಕೃಷ್ಣ ಹೇಗೆ ಹೋದರೆ, ನೀನೂ ಹಾಗೆ ಅವನ ಹಿಂದೆ ಹೋಗುತ್ತಿದ್ದೆ. ಅದನ್ನು ಕಂಡು

ನಿನ್ನನ್ನು ಪರೀಕ್ಷಿಸಲೋಸುಗ ಕೃಷ್ಣ ಮರೆಯಾಗಲು ಯತ್ನಿಸುತ್ತಿದ್ದ. ಆದರೂ ನೀನು ಅವನ ಮೇಲಿನ ದೃಷ್ಟಿ ಬದಲಾಯಿಸದೆ, ಅವನ ಜಾಣ್ಮೆಗಿಂತ ಹೆಚ್ಚಿನ ಜಾಣ್ಮೆಯಿಂದ ವರ್ತಿಸುತ್ತಿದ್ದೆ. ಆ ದೃಶ್ಯ ಅಲ್ಲಿ ನೆರೆದಿದ್ದ ಸಭಿಕರೆಲ್ಲರಿಗೂ ಆಶ್ಚರ್ಯ ಉಂಟುಮಾಡಿತು. ಬಂದ ಪ್ರತಿಯೊಬ್ಬರನ್ನೂ ನೀನು ಅವರಲ್ಲಿ ಏನನ್ನೋ ಪರೀಕ್ಷಿಸುತ್ತಿದ್ದಂತೆ ಕಾಣುತ್ತಿತ್ತು. ಪಂಡಿತನಿಂದ ಪಾಮರನವರೆಗೂ ರೈತನಿಂದ ಮೊದಲ್ಗೊಂಡು ರಾಜನವರೆಗೂ ಎಲ್ಲರೂ ನಿನ್ನನ್ನು ಒಬ್ಬ ವಿಚಿತ್ರ ಬಾಲಕನೆಂದುಕೊಳ್ಳುತ್ತಿದ್ದರು. ಆದ್ದರಿಂದಲೇ ನಿಮ್ಮ ತಾತ ಧರ್ಮಜ ಕೃಷ್ಣನನ್ನು ನಿನಗೆ ನಾಮಕರಣ ಮಾಡಬೇಕೆಂದು ಕೇಳಿಕೊಂಡಾಗ, ಗೋಪಾಲನಿಗೆ ಯಾವ ಹೆಸರೂ ಸರಿ ಕಾಣದೆ, ನಿನ್ನ ಚೇಷ್ಟೆಯನ್ನು ಗಮನಿಸಿ, ನಿನಗೆ ಪರೀಕ್ಷಿತ್ ಎನ್ನುವ ಹೆಸರು ಸಾರ್ಥಕ ಆಗುವುದು ಎಂದು ನಿರ್ಣಯಿಸಿದ. ಸಭಾಮಂದಿರದಲ್ಲಿ ವಾಸುದೇವ ನಿನ್ನ ದೊಡ್ಡ ತಾತ ಧರ್ಮಜನಿಗೆ ಈ ಹೆಸರನ್ನು ಸೂಚಿಸಿದಾಗ, ನೆರೆದಿದ್ದ ಋಷಿಗಳೂ ಪಂಡಿತರೂ ಪುರೋಹಿತರೂ ರಾಜರೂ ಎಲ್ಲರೂ 'ಭೇಷ್, ಭೇಷ್, ಸರಿಯಾದ ಹೆಸರು,' ಎಂದು ಕರತಾಡನ ಮಾಡಿದರು.

ಅಂಥ ಅದೃಷ್ಟಶಾಲಿಯಾದ ನೀನು ದುರದೃಷ್ಟವಂತನೆಂದು ತಿಳಿಯುವುದರಲ್ಲಿ ಅರ್ಥವಿಲ್ಲ. ನಿನ್ನನ್ನು ಪರಮಾತ್ಮ ಕೈಯಲ್ಲಿ ಎತ್ತಿ ಮುದ್ದಾಡಿ, ತೊಡೆಯ ಮೇಲೆ ಹಾಕಿಕೊಂಡು, ನಾಮಕರಣ ಮಾಡಿದ್ದಾನೆ. ಈ ನಿನ್ನ ಭಾಗ್ಯ ಯಾರಿಗುಂಟು? ಇವನ್ನು ನೀನು ಬಹುಶಃ ಸಾಮಾನ್ಯವೆಂದು ತಿಳಿದೆಯೇನೋ?" ಎಂದರು.

ಅವರ ಮಾತನ್ನು ಕೇಳುತ್ತಾ, ಆನಂದಬಾಷ್ಪ ಸುರಿಸುತ್ತಿದ್ದ ಪರೀಕ್ಷಿತ್, ಏನೋ ಪ್ರಶ್ನೆ ಮಾಡಲು ಪ್ರಯತ್ನಿಸುತ್ತಿದ್ದು, ಬಾಯಲ್ಲಿ ಮಾತು ಹೊರಡದಿದ್ದುದನ್ನು ಕಂಡ ವ್ಯಾಸರು, "ಮಗೂ! ಪರೀಕ್ಷಿತ್! ಏನನ್ನೋ ಕೇಳಲು ಇಚ್ಛಿಸುತ್ತಿದ್ದೀಯೆ. ಆಧೈರ್ಯ ಪಡದೆ ಕೇಳು, ಭಯಪಡಬೇಡ," ಎಂದು ಬೆನ್ನು ಸವರಿದರು.

ಆಗ, ಪರೀಕ್ಷಿತ್ ಧೈರ್ಯ ತಂದುಕೊಂಡು, "ಸ್ವಾಮೀ! ಆನಂದವಾಗಲೀ ದುಃಖವಾಗಲೀ ಅನುಭವಕ್ಕೆ ಬರದ ಹೊರತು ಅವುಗಳ ಬೆಲೆ ಮಾನವನಿಗೆ ತಿಳಿಯುವುದಿಲ್ಲ, ಅಲ್ಲವೆ? ನನಗೆ ತಿಳಿವಳಿಕೆ ಇಲ್ಲದ ಕಾಲದಲ್ಲಿ ಎಂಥ ಪ್ರಾಪ್ತಿ ಕೈಗೂಡಿದ್ದರೂ ನನಗೆ ಅದು ನಿಷ್ಪ್ರಯೋಜಕವೇ ಅಲ್ಲವೇ? ಪದಾರ್ಥದ ಬೆಲೆ ತಿಳಿದ ಮೇಲೆ ಆ ಪದಾರ್ಥ ದೊರೆತರೆ ಆಗಲೇ ನಿಜವಾದ ಆನಂದ. ಹಾಗಲ್ಲದೆ, ಬೆಲೆ ತಿಳಿಯದ ಮಗುವಿನ ಕೈಗೆ ಕೋಟಿ ರೂಪಾಯಿ ಬೆಲೆ ಬಾಳುವ ವಜ್ರ ಕೊಟ್ಟರೂ ಅದು, ಗಾಜಿನ ಚೂರಿನಂತೆ ಬಿಸಾಡುವುದು. ಹಾಗೇ, ಪರಮಾತ್ಮನ ವಿಷಯ ತಿಳಿಯದಿದ್ದ ಸಮಯದಲ್ಲಿ, ನಾನು ಅವನೊಡನೆ ಅಂಥ ಮಹತ್ತರ ಪ್ರಾಪ್ತಿ ಅನುಭವಿಸಿದೆನೆಂದರೆ,

ಅದು ನನಗೆ ತಿಳಿಯದ ಯಾವುದೋ ಒಂದು ಜನ್ಮದಲ್ಲಿ ಅನುಭವಿಸಿದಂತಾಗುವುದೆ ವಿನಾ ಅದರಲ್ಲಿ ನಿಜವಾದ ಆನಂದ ಇರುವುದಿಲ್ಲ, ಅಲ್ಲವೆ? ತಿಳಿದು ಅನುಭವಿಸುವ ಆನಂದವೇ ಪರಮಾನಂದ. ತಿಳಿಯದೆ ಅನುಭವಿಸುವ ಪರೋಕ್ಷಾನಂದ, ಅದು ಅನುಮಾನ ಪ್ರಮಾಣ. ಪ್ರತ್ಯಕ್ಷ ಪ್ರಮಾಣಕ್ಕೆ ಅವಕಾಶ ಪಡೆಯದಂಥ ನನ್ನಂಥವನಿಗೆ ಶಬ್ದ ಪ್ರಮಾಣವೇ ಪ್ರಧಾನ ಆಧಾರ. ಎಂತಲೇ ತಾವು ತ್ರಿಕಾಲವೇತ್ತರಾಗಿರುವುದ ರಿಂದ ವಾಸುದೇವನ ಲೀಲೆಗಳನ್ನು ಹೇಳಿ ನನ್ನ ಕಿವಿಗಳನ್ನು ಪವಿತ್ರಮಾಡಬೇಕು," ಎಂದು ಪ್ರಾರ್ಥಿಸಿದ.

ವ್ಯಾಸಮಹರ್ಷಿ ಪ್ರಸನ್ನ ಹೃದಯರಾಗಿ, "ಮಗೂ! ಪರೀಕ್ಷಿತ್! ವಾಸುದೇವನ ಲೀಲೆಗಳು ಒಂದೆರಡೆಂದು ತಿಳಿದೆಯೇನು? ಲೆಕ್ಕಕ್ಕೆ ಅತೀತವಾದ ಅವನ ಲೀಲೆ ಗಳನ್ನು ಎಷ್ಟೆಂದು ಹೇಳೋಣ? ಇಂತಿಂಥ ಸಂದರ್ಭಗಳಲ್ಲಿ, ಇಂತಿಂಥವರಿಗೆ ಸಂಬಂಧಿಸಿದಂತೆ, ಜರುಗಿದ ಲೀಲೆಗಳನ್ನು ಹೇಳಿ ಎಂದು ಕೇಳಿದರೆ, ಅದಕ್ಕೆ ಸಂಬಂಧಿಸಿದ ವಿಷಯವನ್ನು ನಾನು ಹೇಳುತ್ತೇನೆ," ಎಂದರು. ಪರೀಕ್ಷಿತ್ ಶ್ರದ್ಧೆ ಯಿಂದ ಕೈಜೋಡಿಸಿಕೊಂಡು, "ಸ್ವಾಮೀ! ಮೊದಲು, ನಮ್ಮ ತಾತಂದಿರಿಗೂ ಕೃಷ್ಣಪರಮಾತ್ಮನಿಗೂ ಹೇಗೆ ಸ್ನೇಹ ಕುದುರಿತೋ ಆ ವಿಷಯವನ್ನು ಕುರಿತು ಹೇಳಬೇಕು," ಎಂದು ಪ್ರಾರ್ಥಿಸಿದ.

ಅದನ್ನು ಕೇಳಿ ವ್ಯಾಸರು ನಕ್ಕು, "ಮಗೂ! ನಿನ್ನ ಶ್ರದ್ಧೆಯಿಂದ ನನಗೆ ತುಂಬಾ ಆಶ್ಚರ್ಯವಾಗಿದೆ. ಇಂಥ ಶ್ರದ್ಧೆಯುಳ್ಳವರಿಗೆ ಆನಂದವನ್ನೂ ತೃಪ್ತಿಯನ್ನೂ ಕೊಡುವುದೇ ನನಗೂ ಆನಂದ. ಆದ್ದರಿಂದ, ಹೇಳುತ್ತೇನೆ ಕೇಳು," ಎಂದು ಆಸನದ ಮೇಲೆ ಸುಖಾಸೀನರಾಗಿ ಕುಳಿತರು. ಪರೀಕ್ಷಿತ್ ಕೂಡ ತನ್ನ ಹೃದಯ, ಕಿವಿಗಳನ್ನು ವಿಶಾಲವಾಗಿ ತೆರೆದು ಕೇಳಲು ಸಿದ್ಧನಾದ. "ಮಗೂ! ದ್ರುಪದ ಮಹಾರಾಜ ತನ್ನ ಏಕೈಕ ಪುತ್ರಿಯಾದ ದ್ರೌಪದಿಯ ಮದುವೆ ಮಾಡಬೇಕೆಂದು ನಿಶ್ಚಯಿಸಿ, ಎಷ್ಟೋ ಸಂಬಂಧಗಳನ್ನು ವಿಚಾರಿಸಿದ. ಆದರೆ, ಸರಿಯಾದ ವರ ಯಾವುದೂ ಸಿಕ್ಕದ್ದರಿಂದ ಸ್ವಯಂವರವೊಂದನ್ನು ಏರ್ಪಡಿಸಿದ. ಅನೇಕ ಮಂದಿ ಬಲಿಷ್ಠ ರಾಜರುಗಳೂ ಸೌಂದರ್ಯವಂತ ವಿದ್ಯಾವಂತರೂ ಬಂದರು. ಆ ತ್ರಿಲೋಕಸುಂದ ರಿಯನ್ನು ಮದುವೆಯಾಗಲು ಬಯಸಿ, ತಮ್ಮ ತಮ್ಮ ಧನಬಲ, ದೇಹಬಲಗಳನ್ನು ಪ್ರದರ್ಶಿಸುತ್ತಾ ಸಭೆಯಲ್ಲಿ ಬಂದು ಸೇರುತ್ತಿದ್ದರು. ಆ ಸಭೆಯ ಮುಂಭಾಗದಲ್ಲಿ ಒಂದು ಯಂತ್ರವನ್ನು ನಿಲ್ಲಿಸಿದ್ದರು. ಯಾರು ಆ ಯಂತ್ರಕ್ಕೆ ಕಟ್ಟಿದ ಮತ್ಸ್ಯವನ್ನು ಭೇದಿಸುವರೋ ಅವರಿಗೆ ದ್ರೌಪದಿಯನ್ನು ಕೊಟ್ಟು ಮದುವೆ ಮಾಡಲಾಗುವು ದೆಂದು ದ್ರುಪದನು ಘೋಷಿಸಿದ್ದ. ಮಹಾರಾಜನ ಈ ನಿಬಂಧನೆಯಂತೆ ಮತ್ಸ್ಯ

ವನ್ನು ಭೇದಿಸಿ, ದ್ರೌಪದಿಯನ್ನು ವಿವಾಹವಾಗಲು ಬಂದ ರಾಜರು ನಗರದಲ್ಲೆಲ್ಲಾ ತುಂಬಿ ಹೋಗಿದ್ದರು.

ಈ ವಿಷಯ ಬ್ರಾಹ್ಮಣರ ವೇಷದಲ್ಲಿದ್ದ ನಿಮ್ಮ ತಾತಂದಿರಿಗೆ ತಿಳಿದಿದ್ದರೂ ಅವರಿಗೆ ಅದು ಯೋಗ್ಯ ಕಾಲವಲ್ಲದ್ದರಿಂದ, ಅದಕ್ಕೆ ಪ್ರಯತ್ನಿಸದೆ ಸುಮ್ಮನಿದ್ದರು. ಆದರೆ ಇಂಥ ವೀರ ಹೋರಾಟ ಜರುಗುವುದನ್ನು ನೋಡಿಯೂ ಸುಮ್ಮನಿರುವುದು ಕ್ಷತ್ರಿಯ ಲಕ್ಷಣವಲ್ಲದ್ದರಿಂದ, ನಿಮ್ಮ ತಾತ ಅರ್ಜುನ ತನ್ನ ಅಣ್ಣನನ್ನೊಪ್ಪಿಸಿದ. ಸ್ವಯಂವರಕ್ಕೆ ಹೊರಟು, ಬ್ರಾಹ್ಮಣ ವೇಷದಲ್ಲೇ ಸಭಾ ಮಧ್ಯದಲ್ಲಿ ಬಂದು ಐವರೂ ಸಿಂಹಗಳಂತೆ ಕುಳಿತಿದ್ದರು. ಅವರ ತೇಜಸ್ಸು ಪ್ರಕಾಶಿಸುತ್ತಿರಲು, ಸಭೆಯಲ್ಲಿದ್ದವರ ದೃಷ್ಟಿಯೆಲ್ಲಾ ಅವರ ಮೇಲೆ ಬಿದ್ದಿತು. ಕೆಲವರು ಅವರ ತೇಜಸ್ಸನ್ನು ನೋಡಿ, ಅವರು ಮಹಾ ವೀರರಿರಬೇಕೆಂದೂ, ಮತ್ತೆ ಕೆಲವರು ಅವರ ವೇಷವನ್ನು ನೋಡಿ, ಯಾರೋ ಅಡಿಗೆ ಬ್ರಾಹ್ಮಣರಿರಬೇಕೆಂದೂ, ಹಲವು ವಿಧವಾಗಿ ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು. ಆ ಸಮಾವೇಶಕ್ಕೆ ಕೃಷ್ಣ ಬಲರಾಮರೂ ಬಂದಿದ್ದರು. ಆದರೆ, ಸಭೆಯಲ್ಲಿದ್ದಷ್ಟು ಕಾಲವೂ ಕೃಷ್ಣನ ದೃಷ್ಟಿ ಅರ್ಜುನನ ಮೇಲೇ ಇದ್ದುದನ್ನು ಬಲರಾಮ ನೋಡಿದ. ಬಲರಾಮ ಕೃಷ್ಣರಿಬ್ಬರೂ ತಮ್ಮ ತಮ್ಮಲ್ಲೇ ಕಿವಿಯಲ್ಲಿ ಏನೋ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು.

ಸ್ವಯಂವರ ಪ್ರಾರಂಭವಾಯಿತು. ಒಬ್ಬೊಬ್ಬರೂ ಮತ್ಸ್ಯ ಯಂತ್ರದ ಬಳಿಗೆ ಹೋಗಿ, ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಿ, ವಿಫಲರಾಗಿ, ಅವಮಾನಪಟ್ಟು, ನಿರಾಶೆಯಿಂದ ಹಿಂತಿರುಗಿ ಬಂದು, ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುತ್ತಿದ್ದರು. ಕೃಷ್ಣ ಸ್ವಯಂವರ ನೋಡಲು ಬಂದಿದ್ದನೇ ಹೊರತು, ಮತ್ಸ್ಯಯಂತ್ರ ಹೊಡೆಯಲು ಬಂದವನಲ್ಲ. ಅವನೇ ಸಂಕಲ್ಪಿಸಿದ್ದರೆ, ಲೀಲಾಜಾಲವಾಗಿ ಅದನ್ನು ಭೇದಿಸುತ್ತಿದ್ದ. ಆದರೆ, ಅವನ ಸಂಕಲ್ಪವೇನೋ ಯಾರು ಬಲ್ಲರು? ಅಷ್ಟರಲ್ಲಿ ನಿನ್ನ ತಾತ ಅರ್ಜುನ ಎದ್ದು, ಯಂತ್ರದ ಸಮೀಪಕ್ಕೆ ಬರುತ್ತಿದ್ದಾಗ, ಇಡೀ ಸಭೆಯಲ್ಲೇ ಮಿಂಚು ಹೊಳೆದ ಹಾಗೆ ತೇಜಸ್ಸು ಪ್ರಕಾಶಿಸಿತು. ದ್ರೌಪದಿ ತಲೆಯೆತ್ತಿ ನೋಡಿದಳು. ಅವಳ ಮನಸ್ಸು ಆ ಪ್ರಕಾಶದಲ್ಲಿ ಲೀನವಾಯಿತು. ಕ್ಷಣದಲ್ಲಿ ಅರ್ಜುನನ ಬಾಣವು ಮತ್ಸ್ಯವನ್ನು ಭೇದಿಸಿತು. ಕ್ಷಣಕಾಲದಲ್ಲೇ ದ್ರೌಪದಿ ಹೂಮಾಲೆ ಹಿಡಿದುಕೊಂಡು ಬಂದು ನಿಮ್ಮ ತಾತನ ಕೊರಳಿಗೆ ಹಾಕಿ ಕೈ ಹಿಡಿದಳು.

ಅಷ್ಟೊಂದು ಜನ ರಾಜರ ಮಧ್ಯೆ, ಬ್ರಾಹ್ಮಣ ವೇಷದಲ್ಲಿದ್ದ ಅರ್ಜುನ ದ್ರೌಪದಿಯ ಕೈ ಹಿಡಿದು ಸಭಾಮಂಟಪಕ್ಕೆ ಬಂದ ತಕ್ಷಣವೇ ಪರಾಜಿತರಾದ ರಾಜರುಗಳು, ಇದು ನ್ಯಾಯವಾದ ಸ್ವಯಂವರವಲ್ಲ. ಈ ಬಡ ಬ್ರಾಹ್ಮಣ ಈ ಸ್ವಯಂವರಕ್ಕೆ

ಬರುವ ಅಧಿಕಾರವಿಲ್ಲ, ಎಂದು ಏನೇನೋ ಇಲ್ಲಸಲ್ಲದ ಕಾರಣಗಳನ್ನೆಲ್ಲಾ ಹೇಳಿ, ಒಟ್ಟಾಗಿ ಅರ್ಜುನನ ಮೇಲೆ ಬಿದ್ದರು. ಇಷ್ಟರಲ್ಲಿ, ಭೀಮ ಒಂದು ದೊಡ್ಡ ವೃಕ್ಷವನ್ನು ಕಿತ್ತುತಂದು, ಒಟ್ಟುಗೂಡಿದ್ದ ಆ ರಾಜರುಗಳನ್ನೆಲ್ಲಾ ಸದೆ ಬಡಿಯಲಾರಂಭಿಸಿದ.

ನಿನ್ನ ತಾತ, ಅರ್ಜುನ, ದ್ರೌಪದಿಯನ್ನು ಕರೆದುಕೊಂಡು, ತಾವು ಉಳಿದುಕೊಂಡಿದ್ದ ಕುಂಬಾರನ ಮನೆಗೆ ಬಂದ, ಅಣ್ಣ ತಮ್ಮಂದಿರು ತಮ್ಮ ವಿಜಯಕ್ಕೆ ಸಂತೋಷಿಸುತ್ತಾ, ಒಬ್ಬರಿಗೊಬ್ಬರು ಹೇಳಿಕೊಂಡು ಆನಂದಿಸುತ್ತಾ ಇರುವಾಗ ಪೀತಾಂಬರಧಾರಿ ಬಲರಾಮ ಕೃಷ್ಣರು ಆ ಕುಂಬಾರನ ಮನೆಗೆ ಬಂದು, ವೃದ್ಧೆಯಾದ ನಿಮ್ಮ ತಾತನ ತಾಯಿ, ಕುಂತಿಗೆ ನಮಸ್ಕರಿಸಿ, 'ಅತ್ತೆ, ನಾವು ನಿನ್ನ ಅಳಿಯಂದಿರು; ಕೃಷ್ಣಬಲರಾಮರು, ನಂದಯಶೋದೆ ಪುತ್ರರು,' ಎಂದು ತಾವೇ ತಮ್ಮ ಪರಿಚಯ ಹೇಳಿಕೊಂಡರು. ನಂತರ ಧರ್ಮಜನಿಗೆ ನಮಸ್ಕರಿಸಿ, ಕೃಷ್ಣ ಏನೂ ಅರಿಯದ ಸಣ್ಣ ಹುಡುಗನಂತೆ ಅರ್ಜುನನ ಹತ್ತಿರ ಬಂದು, 'ಭಾವಾ! ನಾನು ನಿನ್ನನ್ನು ಬಲ್ಲೆ, ಆದರೆ, ನನ್ನ ಪರಿಚಯ ನಿನಗಿಲ್ಲ. ಇದೇ ಮೊದಲು ನಾನು ನಿನ್ನನ್ನು ನೋಡುತ್ತಿರುವುದು. ನಾನು ವಸುದೇವನ ಕುಮಾರ. ನನ್ನ ಹೆಸರು ಶ್ರೀಕೃಷ್ಣ. ನಿನಗಿಂತ ನಾನು ಚಿಕ್ಕವನು. ಆದರೂ ಈ ದಿವಸ ನೀವು ಈ ದಿಗ್ವಿಜಯ ಸಾಧಿಸಿದ್ದನ್ನು ನೋಡಿ, ನೀವು ನಿಜಕ್ಕೂ ಪಾಂಡವರೇ ಎಂದೂ ನೀವು ಅರಗಿನ ಮನೆಯಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿರುವಿರೆಂದೂ ತಿಳಿದೆ. ನಿನ್ನನ್ನು ಆ ಸಭೆಯಲ್ಲಿ ನೋಡಿದಾಗಿನಿಂದ ನೀನು ಅರ್ಜುನನೆಂದೇ ನಿಶ್ಚಯಿಸಿ, ಆನಂದಿಸಿದೆ. ಅಣ್ಣ ಬಲರಾಮನಿಗೆ ಅದನ್ನೇ ಹೇಳುತ್ತಿದ್ದೆ.

ಅಂತು ನಿಮ್ಮನ್ನು ಕಾಣುವ ಅವಕಾಶ ಸಿಕ್ಕಿತು. ತುಂಬಾ ಆನಂದವಾಯಿತು. ಹುಡುಗಿ ಒಳ್ಳೆಯ ಗುಣವಂತೆ, ಬಹಳ ಬುದ್ಧಿಶಾಲಿ,' ಎಂದು ಹೇಳಿ, ಕೃಷ್ಣ ಅರ್ಜುನನನ್ನು ಮಾತ್ರ ಒಂದು ಪಕ್ಕಕ್ಕೆ ಕರೆದುಕೊಂಡು ಹೋಗಿ, ಮೆಲ್ಲಗೆ ಕಿವಿಯಲ್ಲಿ, 'ಭಾವಾ! ನೀವೀಗಲೇ ಪ್ರಕಟವಾಗುವುದು ಒಳ್ಳೆಯದಲ್ಲ. ಇನ್ನೂ ಸ್ವಲ್ಪ ಕಾಲ ಅಲ್ಲಲ್ಲಿ ಕಾಣದಂತೆ ಇರಿ,' ಎಂದು ಪ್ರೇಮದಿಂದ ತಿಳಿಸಿ, ಇಬ್ಬರೂ ಅಲ್ಲಿಂದ ಹೊರಟರು.

ಅಂದಿನಿಂದ ಕೃಷ್ಣಾರ್ಜುನರ ಪ್ರೇಮ ದಿನದಿನಕ್ಕೆ ಬೆಳೆದು ಹೆಮ್ಮರವಾಯಿತು. ಅದು ಕಾಯಿಬಿಟ್ಟು ಹಣ್ಣಾಗಿ, ಇಬ್ಬರೂ ಆ ಮಧುರ ರಸ ಕುಡಿದು ಆನಂದಿಸಿ, ಅದರಲ್ಲೇ ಲೀನವಾದರು. ಕೇಳಿದೆಯಾ? ಮೊದಲು ಕೃಷ್ಣ ನಿಮ್ಮ ತಾತನನ್ನು ನೋಡಿದ್ದು ದ್ರೌಪದಿ ಸ್ವಯಂವರದಲ್ಲಿ. ಅವರಿಬ್ಬರೂ ಸಂಧಿಸಿದ್ದು ಕಲ್ಯಾಣ ಮಂಟಪದಲ್ಲಿ. ಆದ್ದರಿಂದಲೇ ಅರ್ಜುನ ಜೀವಿತವೆಲ್ಲಾ ನಿತ್ಯ ಭಗವತ್ ಸನ್ನಿಧಿ ಎನ್ನುವ ಕಲ್ಯಾಣಕರವಾದ ಪರಮಾರ್ಥ ಪ್ರಾಪ್ತಿಯನ್ನು ಅನುಭವಿಸಿದ. ಅಷ್ಟೇ

ಅಲ್ಲದೆ, ಅವನನ್ನು ನಿಮಿತ್ತ ಮಾತ್ರವಾಗಿಟ್ಟುಕೊಂಡು, ಕೃಷ್ಣ ಲೋಕಕ್ಕೇ ಜ್ಞಾನವನ್ನು ಬೋಧಿಸಿದ. ಕೇಳಿದೆಯಾ? ಆ ಚತುರ ಕೃಷ್ಣ ನಿಮ್ಮ ತಾತನ ಹತ್ತಿರ ಅದೆಷ್ಟು ಪ್ರಿಯನಾಗಿರುತ್ತಿದ್ದ ಎನ್ನುವುದನ್ನು," ಎಂದು ಹೇಳುತ್ತಾ ಹೊರಡಲು ಅಣಿಮಾಡಿ ಕೊಳ್ಳುತ್ತಿದ್ದ ವ್ಯಾಸರನ್ನು ನೋಡಿ, ಪರೀಕ್ಷಿತ್ ಕಣ್ಣುಗಳಲ್ಲಿ ಸುರಿಯುತ್ತಿದ್ದ ನೀರನ್ನು ಅಂಗವಸ್ತ್ರದಲ್ಲಿ ಒರೆಸಿಕೊಳ್ಳುತ್ತಾ, "ಸ್ವಾಮೀ! ನೀವು ಕೃಷ್ಣಪರಮಾತ್ಮನ ಚರಿತ್ರೆಯನ್ನು ಹೇಳಿ ಭಾವಜಗತ್ತಿನಲ್ಲಿ ನನಗೆ ಅವನ ಸಾಕ್ಷಾತ್ಕಾರ ಮಾಡಿಕೊಡುತ್ತಿದ್ದೀರಿ. ನೀವು ಸುಮ್ಮನಾದರೆ ನನಗೆ ಬಾಧೆಯಾಗುತ್ತದೆ. ಆ ಲೀಲಾಮಾನುಷ ವಿಗ್ರಹನಾದ ಶ್ರೀಕೃಷ್ಣ ನಮ್ಮ ತಾತನ ಹತ್ತಿರ ಇನ್ನೂ ಯಾವ ಯಾವ ಸಂದರ್ಭದಲ್ಲಿ ಹೇಗೆ ಹೇಗೆ ವರ್ತಿಸಿ ಅವರನ್ನು ಕಾಪಾಡುತ್ತಿದ್ದನೋ ತಿಳಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡಿ. ನಿದ್ರೆ ನನ್ನ ಕಣ್ಣುಗಳನ್ನು ಬಿಟ್ಟು ಭಗವಂತನ ಬಳಿಗೆ ಹೋದಂತಿದೆ. ಈ ರಾತ್ರಿ ಪೂರ್ತಿಯಾಗಿ ತಾವು ಅವನ ಸ್ಮರಣೆಮಾಡಿಕೊಟ್ಟು, ನನ್ನ ಮೇಲೆ ಅನುಗ್ರಹ ಮಾಡಬೇಕು," ಎಂದು ಪ್ರಾರ್ಥಿಸಿದ.

ಪರೀಕ್ಷಿತನ ಶ್ರದ್ಧಾಭಕ್ತಿಯನ್ನು ಕಂಡು, ವ್ಯಾಸರು ತಮ್ಮ ಮನಸ್ಸು ಬದಲಾಯಿಸಿ, "ಮಗೂ! ಕೃಷ್ಣನ ಅಮಾನುಷ ಲೀಲೆಗಳು ಒಂದೆರಡಾದರೆ ಹೇಳಬಹುದು. ಒಂದೊಂದು ಕೂದಲು ಕೂದಲಿಗೂ ಕೋಟಿ ಕೋಟಿ ನಾಲಗೆ ಇದ್ದು, ಕಲ್ಪದ ಅಂತ್ಯದವರೆಗೆ ವರ್ಣಿಸಿದರೂ ಅವನ ಲೀಲೆಗಳು ಮುಗಿಯುವುದಿಲ್ಲ. ಎಲ್ಲ ದೇವತೆಗಳೂ ಅವನ ಬಳಿ ಕೈಜೋಡಿಸಿ ನಿಲ್ಲುತ್ತಿದ್ದರು. ಅವನು ಒಂದು ಸಾರಿ ತನ್ನ ಭಕ್ತರನ್ನು ಆಕಾಶದೆತ್ತರಕ್ಕೆ ಎತ್ತುತ್ತಿದ್ದ. ಹಾಗೆಯೇ, ಕೆಳಕ್ಕೆ ತರುತ್ತಿದ್ದ. ಲೋಕವನ್ನೇ ಒಂದು ಬೊಂಬೆಯಾಟದಂತೆ ಆಡಿಸುತ್ತಿದ್ದ. ಅವನು ಸದಾ ಮುಗುಳುನಗೆ ನಗುತ್ತಿದ್ದನೇ ವಿನಾ ಚಿಂತೆಯಾಗಲೀ ದುಃಖವಾಗಲೀ ಅವನ ಬಳಿ ಸುಳಿಯುತ್ತಾ ಇರಲಿಲ್ಲ. ಸಾಮಾನ್ಯ ಮನುಷ್ಯನಂತೆ, ಏನೂ ಅರಿಯದವನಂತೆ, ಬಂಧುವಿನಂತೆ, ಮಿತ್ರನಂತೆ, ರಾಜನಂತೆ, ಗೊಲ್ಲಬಾಲಕನಂತೆ, ಒಮ್ಮೊಮ್ಮೆ ಒಂದೊಂದು ವಿಧವಾಗಿ, ಅನೇಕ ರೀತಿಯಲ್ಲಿ ವರ್ತಿಸುವ ಶಕ್ತಿ ಯುಕ್ತಿಗಳನ್ನು ಹೊಂದಿ ಅವನು ಪಾಮರನಂತೆ ವ್ಯವಹರಿಸುತ್ತಿದ್ದ.

ನಿಮ್ಮ ತಾತ ಅರ್ಜುನನೆಂದರೆ ಅವನಿಗೆ ಮಹಾ ಪ್ರೇಮ ಮಗೂ! ಎಲ್ಲಿಗಾಗಲೀ, ಅರ್ಜುನನನ್ನು ಜೊತೆಯಲ್ಲಿ ಕರೆದುಕೊಳ್ಳದೆ ಹೋಗುತ್ತಿರಲಿಲ್ಲ. ಕೊನೆಗೆ, ಅಂತಃಪುರದಲ್ಲಿ ಕೂಡ ಸ್ವೇಚ್ಛೆಯಾಗಿ ಓಡಾಡುವ ಸ್ವಾತಂತ್ರ್ಯ ಕೊಟ್ಟಿದ್ದ ಅರ್ಜುನನಿಗೆ. ನಿಮ್ಮ ತಾತನ ಜೊತೆ ಯಮುನಾನದಿಗೆ ಹೋಗಿ ಜಲಕ್ರೀಡೆಯಾಡುತ್ತಿದ್ದ. ನದಿಯಲ್ಲಿ ಒಂದು ಕಡೆ ಮುಳುಗಿ, ಮತ್ತೆಲ್ಲೋ ಎದ್ದು ಗುರುತಿಸಲು ಸಾಧ್ಯವಿಲ್ಲದಂತೆ, ಮುಳುಗಿ ಎದ್ದು ಆಟವಾಡುತ್ತಿದ್ದ. ಇದ್ದಕ್ಕಿದ್ದಂತೆ ನಿಮ್ಮ ತಾತನನ್ನು ಯಾರಿಗೂ ತಿಳಿಯದಂತೆ

ಎಲ್ಲಿಗೋ ಏಕಾಂತಕ್ಕೆ ಕರೆದೊಯ್ದು ಇಬ್ಬರೂ ಏನೇನೋ ಮಾತನಾಡಿ ಕೊಳ್ಳುತ್ತಿದ್ದರು. ಸುಪ್ಪತ್ತಿಗೆ ಇದ್ದರೂ ಬಿಟ್ಟು, ಮರಳಿನ ಮೇಲೆ ಮಲಗಿ, ಅರ್ಜುನನ ತೊಡೆಯ ಮೇಲೆ ತಲೆಯಿಟ್ಟು ಹಾಯಾಗಿ ನಿದ್ರಿಸುತ್ತಿದ್ದ.

ನಿಮ್ಮ ತಾತನೂ ಕೂಡ ಕೃಷ್ಣನನ್ನು ಹಾಗೆಯೇ ಪ್ರೀತಿಸುತ್ತಿದ್ದ. ಇಬ್ಬರೂ ಒಂದೊಂದು ಸಾರಿ ಸ್ವಲ್ಪ ಕೋಪದಿಂದ ಮಾತಾಡಿಕೊಂಡರೂ, ಮರುಕ್ಷಣದಲ್ಲೇ ಸಂತೋಷ ದಿಂದ ಹೊಂದಿಕೊಳ್ಳುತ್ತಿದ್ದರು. ಅವರಿಬ್ಬರೂ ನರನಾರಾಯಣರು, ಮಗೂ! ದೇಹ ವಿಲ್ಲದ ಪ್ರಾಣ, ಪ್ರಾಣವಿಲ್ಲದ ದೇಹ ಹೇಗೆ ನಿಷ್ಪ್ರಯೋಜಕವೋ, ಹಾಗೇ ಅರ್ಜುನನಿ ಲ್ಲದ ಕೃಷ್ಣ, ಕೃಷ್ಣನಿಲ್ಲದ ಅರ್ಜುನನನ್ನು ನಾವು ಎಂದೂ ನೋಡಲೇ ಇಲ್ಲ. ಎಂಥ ಗುಟ್ಟಿನ ವಿಷಯವಾದರೂ ಕೃಷ್ಣ ನಿಮ್ಮ ತಾತನಿಗೆ, ನಿಮ್ಮ ತಾತ ಕೃಷ್ಣನಿಗೆ ಹೇಳದೆ ಇರುತ್ತಿರಲಿಲ್ಲ. ಹೀಗೆ ಅವರಿಬ್ಬರೂ ಇಷ್ಟು ಅನ್ಯೋನ್ಯತೆಯಿಂದ ಇದ್ದವರು. ಅವ ರಿಬ್ಬರ ವಿಷಯ ಏನೆಂದು ಹೇಳೋಣ? ನೀನು ತಿಳಿದುಕೊಳ್ಳಬೇಕೆಂದಿರುವ ವಿಷಯ ಯಾವುದೆಂದು ತಿಳಿಸಿದರೆ ಅದನ್ನು ಹೇಳಲು ಸಿದ್ಧನಾಗಿದ್ದೇನೆ," ಎಂದು ಹೇಳಿ ವ್ಯಾಸರು ಸುಮ್ಮನಾದರು.

# ೧೮ ಪಾರಾದ ತಕ್ಷಕ

ಏಕಾಗ್ರಚಿತ್ತದಿಂದ ಕೇಳುತ್ತಿದ್ದ ಪರೀಕ್ಷಿತ್ ಗದ್ಗದ ಕಂಠದಿಂದ, "ಸ್ವಾಮೀ, ಖಾಂಡವ ವನವನ್ನು ದಹಿಸಲು ಕಾರಣವೇನೋ ನನಗೆ ತಿಳಿಯದು, ಆ ಸಂದರ್ಭದಲ್ಲಿ ನಮ್ಮ ತಾತನಿಗೆ ಶ್ರೀಕೃಷ್ಣ ಹೇಗೆ ಸಹಾಯಕನಾದ ಎನ್ನುವುದನ್ನು ತಿಳಿಸಿ ನನ್ನನ್ನು ಆನಂದಪಡಿಸಬೇಕು," ಎಂದು ಕೈ ಮುಗಿದು ಕೇಳಿದ. ವ್ಯಾಸರು, "ಸರಿಯಾದ ವಿಷಯವನ್ನೇ ಕೇಳಿದೆ. ಹೇಳುತ್ತೇನೆ ಕೇಳು. ಒಂದಾನೊಂದು ಸಮಯದಲ್ಲಿ ಕೃಷ್ಣಾರ್ಜುನರಿಬ್ಬರೇ ಯಮುನಾ ನದಿ ತೀರದಲ್ಲಿ ವಿಹರಿಸುತ್ತಾ ಆನಂದದಿಂದ ಲೋಕವನ್ನೇ ಮರೆತು ಸಂಚರಿಸುತ್ತಿರುವಾಗ, ಒಬ್ಬ ವೃದ್ಧ ಬ್ರಾಹ್ಮಣ ಅಲ್ಲಿಗೆ ಬಂದು, 'ಮಗೂ! ನನಗೆ ತುಂಬಾ ಹಸಿವಾಗಿದೆ. ನನ್ನ ಹಸಿವು ತೀರಿಸಲು ಏನಾದರೂ ಇಷ್ಟು ಆಹಾರ ಕೊಟ್ಟು ನನ್ನ ಪ್ರಾಣವನ್ನು ಕಾಪಾಡು,' ಎಂದು ಕೇಳಿದ. ಆ ಮಾತನ್ನು ಕೇಳುತ್ತಲೇ ಅರ್ಜುನ ಚಕಿತನಾಗಿ, ಎಚ್ಚರಗೊಂಡು ಆ ವೃದ್ಧ ಬ್ರಾಹ್ಮಣನನ್ನು

ನೋಡಿ, ಅವನು ಸಾಮಾನ್ಯ ವ್ಯಕ್ತಿಯಾಗಿರದೆ, ಅವನಲ್ಲಿ ಒಂದು ದಿವ್ಯಕಳೆ ಪ್ರಕಾಶಿಸುತ್ತಿದ್ದುದನ್ನು ನೋಡಿದ.

ಇಷ್ಟರಲ್ಲಿ, ಕೃಷ್ಣ ಮುಂದೆ ಬಂದು, 'ವಿಪ್ರೋತ್ತಮಾ! ನೀವು ನೋಡಲು ಸಾಮಾನ್ಯ ಬ್ರಾಹ್ಮಣನಂತೆ ಕಾಣುತ್ತಿಲ್ಲ. ಆದ್ದರಿಂದ ನಿಮಗೆ ಸಾಮಾನ್ಯ ಭೋಜನ ತೃಪ್ತಿ ಕೊಡುವುದಿಲ್ಲ. ಅದಕ್ಕಾಗಿ, ನಿಮಗೆ ಎಂಥ ಭೋಜನ ಬೇಕೋ ತಿಳಿಸಿ. ತಪ್ಪದೆ ನಿಮ್ಮ ಹಸಿವನ್ನು ತೀರಿಸಿ, ನಿಮಗೆ ಆನಂದ ಕೊಡುತ್ತೇನೆ,' ಎಂದ. ಈ ಮಾತು ಕೇಳುತ್ತಿದ್ದ ಅರ್ಜುನ ಆಶ್ಚರ್ಯದಿಂದ ನೋಡುತ್ತಾ ನಿಂತಿದ್ದ. ಕಾರಣವೇನೆಂದರೆ, ಸಮಸ್ತ ಲೋಕಕ್ಕೂ ಆಹಾರ ಕೊಟ್ಟು ಹಸಿವು ತೀರಿಸಿ ಆನಂದ ಕೊಡುವ ಕೃಷ್ಣನಿಗೆ ಈ ಒಬ್ಬ ಬ್ರಾಹ್ಮಣನ ಹಸಿವು ತೀರಿಸುವುದಕ್ಕೆ ಸಂದೇಹ ಬಂದು, ಎಂಥ ಆಹಾರ ಬೇಕೋ ಕೇಳು ಎಂದು ಅವನಿಗೆ ಹೇಳುತ್ತಾ ವಿನಯದಿಂದ ಮಾತನಾಡುತ್ತಿದ್ದಾನಲ್ಲಾ ಎಂದು ನಿಮ್ಮ ತಾತನಿಗೆ ಆಶ್ಚರ್ಯ, ಸಂದೇಹ.

ಕೃಷ್ಣನ ಮಾತು ಕೇಳಿ, ಬಂದಿದ್ದ ಆ ಬ್ರಾಹ್ಮಣ ಗಹಗಹಿಸಿ ನಕ್ಕು, 'ದೇವಾ! ನಾನು ಯಾರೋ ನಿನಗೆ ತಿಳಿಯದೇ? ಈ ಲೋಕವೇ ಅಲ್ಲದೆ ಹದಿನಾಲ್ಕು ಲೋಕಗಳಲ್ಲೂ ನಿನಗೆ ತಿಳಿಯದ ವಿಷಯ ಒಂದೂ ಇಲ್ಲ. ನಾನು ನಿನ್ನ ಸೃಷ್ಟಿಯಲ್ಲಿ ಒಂದು ಪ್ರಾಣ. ನನ್ನ ಹೆಸರು ಅಗ್ನಿಹೋತ್ರ. ನನಗೆ ಅಜೀರ್ಣ ರೋಗ ಪೀಡಿಸುತ್ತಿದೆ. ಅದಕ್ಕೆ ತಕ್ಕ ಔಷಧಿಯೆಂದರೆ, ಖಾಂಡವದಹನದ ವೃಕ್ಷಸಾರವೊಂದೇ. ಆದ್ದರಿಂದ ಆ ಅಡವಿಯನ್ನು ಸುಟ್ಟ ಹೊರತು ನನ್ನ ರೋಗ ನಿವಾರಣೆಯಾಗದು. ತಾವು ಆಜ್ಞೆ ಇತ್ತರೆ ಆ ವನದಲ್ಲಿರುವ ಯಕ್ಷ, ರಾಕ್ಷಸ, ಅಸುರ, ಸರ್ಪಾದಿಗಳ ಮಾಂಸವನ್ನು ತಿಂದು ನನ್ನ ಹಸಿವು ತೀರಿಸಿಕೊಂಡು, ಆನಂದ, ಆರೋಗ್ಯ ಪಡೆದುಕೊಳ್ಳುವೆ,' ಎಂದು ಪ್ರಾರ್ಥಿಸಿದ.

ಅದಕ್ಕೆ ಕೃಷ್ಣ, 'ಸರಿ, ನಿನ್ನ ಇಷ್ಟ, ಬೇಕಾದರೆ ದಹಿಸು. ಆದರೆ, ಇದಕ್ಕೆ ನಮ್ಮ ಆಜ್ಞೆ ಏಕೆ ಬೇಕು? ಇದು ನಮಗೆ ವಿಚಿತ್ರವಾಗಿದೆ. ಸಮಸ್ತ ಬ್ರಹ್ಮಾಂಡವನ್ನೂ ಭಸ್ಮ ಮಾಡುವ ಶಕ್ತಿಯುಳ್ಳ ನಿನಗೆ ಬೇರೊಬ್ಬರ ಸಹಾಯವೇಕೆ?' ಎಂದು ಕೃಷ್ಣಪರಮಾತ್ಮ ಏನೂ ತಿಳಿಯದ ಮನುಷ್ಯನಂತೆ ಕೇಳಿದ. ಅಗ್ನಿ ವಿನಯ ವಿಧೇಯತೆಗಳಿಂದ, 'ಸ್ವಾಮೀ, ತಮಗೆ ತಿಳಿಯದಿದ್ದೇನಲ್ಲ. ಈ ಖಾಂಡವವನದಲ್ಲಿ ತಕ್ಷಕ ತನ್ನ ಪರಿವಾರ ಸಹಿತವಾಗಿ ವಾಸ ಮಾಡುತ್ತಿರುವನಲ್ಲವೇ? ಅವನಿಗೆ ಇಂದ್ರ ಪ್ರಾಣ ಸ್ನೇಹಿತ. ಈ ಅಡವಿಯನ್ನು ರಕ್ಷಿಸುವ ಬಾಧ್ಯತೆಯನ್ನು ಇಂದ್ರ ತನ್ನ ತಲೆಯ ಮೇಲೆ ಹಾಕಿಕೊಂಡಿದ್ದಾನೆ. ಅಷ್ಟೇ ಅಲ್ಲ. ತಕ್ಷಕನನ್ನು ರಕ್ಷಿಸುತ್ತೇನೆನ್ನುವ ಮಾತನ್ನೂ ಇಂದ್ರ ಅವನಿಗೆ ಕೊಟ್ಟಿದ್ದಾನೆ. ಆದ್ದರಿಂದ ನಾನು ದಹಿಸಲು ಪ್ರಾರಂಭಿಸಿದರೆ

ಇಂದ್ರ ತಕ್ಷಣ ತನ್ನ ಪರಿವಾರವನ್ನು ಕಳಿಸಿ ಮಳೆಗರೆಯಬಹುದು. ನನ್ನನ್ನು ಆರಿಸಿ ಬಿಡಬಹುದು. ಈ ಸಂದೇಹ ನನ್ನನ್ನು ಪೀಡಿಸುತ್ತಿದೆ. ಹೀಗಾಗಿ, ನನ್ನ ವ್ಯಾಧಿ ನಿವಾರಣೆಯಾಗಲು ಮಾರ್ಗವಿಲ್ಲದೆ ಪರಿತಪಿಸುತ್ತಾ, ನಿಮ್ಮನ್ನು ಶರಣು ಹೋಗುತ್ತಿದ್ದೇನೆ,' ಎಂದು ಹೇಳಲು, ನಂದನಂದನ ನಕ್ಕು, 'ಹಾಗಾದರೆ, ನಾವು ನಿನಗೆ ಹೇಗೆ ಸಹಾಯ ಮಾಡಬಹುದೋ ಹೇಳು. ತಪ್ಪದೇ ಮಾಡುತ್ತೇವೆ,' ಎಂದ. ಅಗ್ನಿದೇವ, 'ನಾನು ಧನ್ಯ, ನೀವು ಮನಸ್ಸು ಮಾಡಿದರೆ ಇಂದ್ರನ ಸೈನ್ಯವನ್ನು ನಿಮ್ಮ ಅಸ್ತ್ರಗಳಿಂದ ನಾಶ ಮಾಡಬಹುದು. ಹಾಗೆ ಮಾಡಿದರೇನೇ ನನ್ನ ಮನೋರಥ ಈಡೇರುವುದು,' ಎಂದು ನಮಸ್ಕರಿಸಿದ. ಗೋಪಾಲ ಅಗ್ನಿಗೆ ಅಭಯವಿತ್ತ. ಆಗ, ನಿಮ್ಮ ತಾತ, 'ಅಗ್ನಿದೇವಾ! ನೀನು ನಿಶ್ಚಿಂತೆಯಿಂದ ಖಾಂಡವವನವನ್ನು ದಹಿಸು. ಒಬ್ಬ ಇಂದ್ರನಲ್ಲ, ಕೋಟಿ ಇಂದ್ರರು ಬಂದರೂ ನಾಶಮಾಡುವೆ. ಅಂಥ ಬಾಹುಬಲ ವಿದೆ. ಆದರೆ ನನ್ನ ಬಲಕ್ಕೆ ತಕ್ಕ ಅಸ್ತ್ರ ಶಸ್ತ್ರಗಳಾಗಲೀ ಅವುಗಳನ್ನು ಒಯ್ಯುವ ರಥವಾಗಲೀ ನನ್ನಲಿಲ್ಲ. ಆದ್ದರಿಂದ, ನನ್ನ ವೇಗ ಸಹಿಸಬಲ್ಲ ದಿವ್ಯ ರಥವನ್ನು ನೀನು ಒದಗಿಸಬಲ್ಲೆಯಾದರೆ, ನಾನು ಕೃಷ್ಣನ ಆಜ್ಞೆಯಂತೆ ತಪ್ಪದೆ ನಿನ್ನ ಮನೋಭೀಷ್ಟ ವನ್ನು ನೆರವೇರಿಸುವೆ,' ಎಂದು ಹೇಳಿದ. ಅಗ್ನಿದೇವ ಪ್ರಸನ್ನನಾಗಿ, ಅಕ್ಷಯ ಬತ್ತಳಿಕೆಯನ್ನೂ ಮಾರುತಿ ಧ್ವಜವುಳ್ಳ ರಥವನ್ನೂ ಕೊಟ್ಟನು. ಅಲ್ಲದೆ, ಆಗ್ನೇಯಾಸ್ತ್ರ ವನ್ನು ತೆಗೆದು ಕೃಷ್ಣನ ಕೈಯಲ್ಲಿಟ್ಟು ಹೊರಟ.

ಮಗೂ! ಪರೀಕ್ಷಿತ್! ಅಗ್ನಿದೇವನನ್ನು ಸಂತೋಷಪಡಿಸಲು ಕೃಷ್ಣ ಆಗ್ನೇಯಾಸ್ತ್ರ ತೆಗೆದುಕೊಂಡನೇ ವಿನಾ ಕೃಷ್ಣನ ಸಂಕಲ್ಪಕ್ಕಿಂತ ದೊಡ್ಡ ಅಸ್ತ್ರ ಯಾವುದು? ಅವನು ಸಂಕಲ್ಪಿಸಿದಾಕ್ಷಣ ಭೂಮಿ ಆಕಾಶ ಒಂದು ಮಾಡುತ್ತಿದ್ದ. ಲೋಕನಿಮಿತ್ತವಾಗಿ ಅವನಾಡುವ ಆಟಗಳ ಅಂತರಾರ್ಥವನ್ನು ಗ್ರಹಿಸದೆ ಜನರು ಊಹಾಪೋಹಗಳಿಗೆ ಅವಕಾಶ ಮಾಡಿಕೊಡುವರು. ಅದು ಮಾನವರನ್ನು ಆವರಿಸಿರುವ ಮಾಯೆಯ ಪ್ರತಾಪ.

ಹೀಗೆ ಕೃಷ್ಣನ ಅಪ್ಪಣೆ ಪಡೆದು ಹೊರಟ ಅಗ್ನಿದೇವ ಖಾಂಡವವನವನ್ನು ತಿನ್ನಲು ಆರಂಭಿಸಿದ. ಇಷ್ಟರಲ್ಲಿ, ನಿರೀಕ್ಷಿಸಿದ್ದಂತೆ ಇಂದ್ರ ತನ್ನ ಪರಿವಾರವನ್ನು ಕಳಿಸಿ ಖಾಂಡವವನವನ್ನು ರಕ್ಷಿಸುವಂತೆ ಆಜ್ಞಾಪಿಸಿದ. ಆದರೆ, ಇಂದ್ರನ ಪರಿವಾರ ಎಷ್ಟು ಪ್ರಯತ್ನಿಸಿದರೂ ರಕ್ಷಿಸಲು ಸಾಧ್ಯವಾಗದೆ ಹೋದುದರಿಂದ, ಇಂದ್ರನ ಬಳಿಗೆ ಹಿಂದಿರುಗಿ, ತಮ್ಮ ಸೋಲನ್ನು ಇಂದ್ರನಿಗೆ ತಿಳಿಸಿದರು. ಇಂದ್ರ ರೌದ್ರವಾಗಿ ತನ್ನ ಬಲಿಷ್ಠ ಸೈನ್ಯವನ್ನು ಜೊತೆಯಲ್ಲಿಟ್ಟುಕೊಂಡು ಖಾಂಡವವನವನ್ನು ರಕ್ಷಿಸಲು ಬಂದ.

ಬರುತ್ತಿದ್ದಂತೆಯೇ, ನಿಮ್ಮ ತಾತ ಅರ್ಜುನನನ್ನು ಎದುರಿಸಿದ. ಆಗ ಅರ್ಜುನ ಗಾಂಢೀವವನ್ನು ಹಿಡಿದು ದೇವೇಂದ್ರನ ಮೇಲೆ ಬಾಣದ ಮಳೆ ಸುರಿಸಿದ. ಹೀಗೆ, ಇಬ್ಬರೂ ತಮ್ಮ ಸಂಪೂರ್ಣ ಬಲ ಪ್ರಯೋಗಿಸಿದರು. ಕೆಲವೇ ನಿಮಿಷಗಳಲ್ಲಿ ಅರ್ಜುನನ ಅಂಬಿನ ಹೊಡೆತ ತಾಳಲಾರದೆ ಇಂದ್ರನ ಪರಿವಾರ ಪಲಾಯನ ಮಾಡಿತು. ಇಂದ್ರ ತಾನೊಬ್ಬನೇ ಏನೂ ಮಾಡಲಾರದೆ ಸೋತು ಹೋದನು. ಯುದ್ಧ ಮಾಡುತ್ತಿರುವವನು ತನ್ನ ಕುಮಾರ ಅರ್ಜುನನೆನ್ನುವುದನ್ನು ತಿಳಿದು, ಮತ್ತಷ್ಟು ನಾಚಿಕೆಯಿಂದ, ನನ್ನ ವರಪ್ರಸಾದವನ್ನೇ ನಾನು ಜಯಿಸಲಾರದೆ ಹೋದೆನಲ್ಲಾ ಎಂದು ಚಿಂತಿಸುತ್ತಾ ಹಿಂತಿರುಗಿದ.

ಅಗ್ನಿದೇವ ಖಾಂಡವವನವನ್ನು ನಿರ್ಭಯವಾಗಿ ನಾಲಿಗೆ ಚಾಚಿ ನುಂಗುತ್ತಾ ಭಸ್ಮಮಾಡುತ್ತಿರಲು, ಆ ಜ್ವಾಲೆಯ ತಾಪವನ್ನು ತಾಳಲಾರದೆ ಅನೇಕ ಮೃಗಗಳೂ ಪಕ್ಷಿಗಳೂ ಸರ್ಪಗಳೂ ಓಡಿ ಹೋಗಲು ಸಾಧ್ಯವಿಲ್ಲದೆ, ಅದರಲ್ಲೇ ಭಸ್ಮ ಆಗುತ್ತಿದ್ದವು. ಅದೇ ಸಮಯದಲ್ಲಿ ಆ ವನದೊಳಗಿದ್ದ ಮೃಗಗಳಾಗಲೀ ಸರ್ಪಗಳೇ ಆಗಲೀ ಹೊರಹೋಗದಂತೆ ಕೃಷ್ಣ ತನ್ನ ರಥದಲ್ಲಿ ವನದ ಸುತ್ತಲೂ ತಿರುಗುತ್ತಿದ್ದ. ಅಷ್ಟರಲ್ಲಿ, ಇಂದ್ರನ ಮಿತ್ರ ತಕ್ಷಕನೆಂಬ ಸರ್ಪ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿತ್ತು. ಕೃಷ್ಣ ಅರ್ಜುನರ ಕಣ್ಣು ತಪ್ಪಿಸಿಕೊಂಡು ಕುರುಕ್ಷೇತ್ರಕ್ಕೆ ಹೋಗುವ ಸಾಹಸದಲ್ಲಿತ್ತು. ಅಗ್ನಿ ವಾಯುವಿನ ಸಹಾಯದಿಂದ ತಕ್ಷಕನನ್ನು ಭಕ್ಷಿಸಲು ನೋಡಿದ. ಆದರೆ, ತಕ್ಷಕ ದೇವ ದಾನವರ ಸುಪ್ರಸಿದ್ಧ ಶಿಲ್ಪಿಯಾದ ಮಯನ ಆಶ್ರಯ ಪಡೆಯಿತು. ಮಯನೂ ಕೂಡ ಕುರುಕ್ಷೇತ್ರಕ್ಕೆ ಹೋಗುತ್ತಿರುವುದನ್ನು ನೋಡಿದ ಕೃಷ್ಣ, ಅವನನ್ನು ಹಿಂಬಾಲಿಸಲು, ಮಯ ಅರ್ಜುನನಿಗೆ ಶರಣುಹೋದ.

ನಿಮ್ಮ ತಾತ ಅರ್ಜುನ ಅವನಿಗೆ ಅಭಯವಿತ್ತು ರಕ್ಷಿಸಿದ. ಅಭಯ ಪಡೆದ ಮಯ ಪ್ರಸನ್ನನಾಗಿ ಅರ್ಜುನನಿಗೆ ನಮಸ್ಕಾರಮಾಡಿ, 'ಪಾಂಡುನಂದನಾ! ನಿನ್ನ ಉಪಕಾರ ಮರೆಯುವುದಿಲ್ಲ, ನಿನಗೇನಾಗಬೇಕೋ ಹೇಳು. ನನ್ನಿಂದ ಕೈಲಾದ ಕೆಲಸ ನಿನಗೆ ಮಾಡಿಕೊಡುತ್ತೇನೆ,' ಎಂದು ಪ್ರಾರ್ಥಿಸಲು, ನಿಮ್ಮ ತಾತ ಅರ್ಜುನ ಚೆನ್ನಾಗಿ ಯೋಚಿಸಿ, 'ಮಯಾ! ನೀನು ನನ್ನನ್ನು ಸಂತೃಪ್ತಿಪಡಿಸಲು ಯೋಚಿಸಿರುವೆ. ಸರಿ, ನನ್ನ ಅಣ್ಣ ಧರ್ಮಜನಿಗೆ ಈ ಪ್ರಪಂಚದಲ್ಲೇ ಸಾಟಿ ಇಲ್ಲದ ಒಂದು ಭವನವನ್ನು ನಿರ್ಮಿಸು. ಅದು ದೇವದಾನವ ಗಂಧರ್ವರು ಸಹಿತ ನಿರ್ಮಿಸಲು ಸಾಧ್ಯವಾಗದಿರುವಂಥ ಭವನವಾಗಿರಬೇಕು. ಇದಕ್ಕಿಂತ ಪ್ರಿಯವಾದುದು ನನಗೆ ಪ್ರಪಂಚದಲ್ಲಿ ಬೇರೆ ಯಾವುದೂ ಇಲ್ಲ,' ಎಂದು ಹೇಳಿದ. ಕೃಷ್ಣ ಸುಮ್ಮನಿರದೆ, 'ಸಭಾ ಭವನ ನಿರ್ಮಿಸಿದ ಮಾತ್ರಕ್ಕೆ ಏನು ಪ್ರಯೋಜನ? ಧರ್ಮಜ ಕುಳಿತುಕೊಳ್ಳುವುದಕ್ಕೆ,

ಅಂಥ ಮಹಾ ಸಭಾ ಭವನಕ್ಕೆ ತಕ್ಕ ಸಿಂಹಾಸನವೊಂದನ್ನು ತಯಾರಿಸಬೇಕು. ಆಗಲೇ ಆ ಭವನಕ್ಕೊಂದು ಶೋಭೆ,' ಎಂದ.

ನೋಡಿದೆಯಾ ಪರೀಕ್ಷಿತ್! ನಿಮ್ಮ ತಾತಂದಿರೆಂದರೆ ಕೃಷ್ಣನಿಗೆ ಅದೆಷ್ಟು ಪ್ರೇಮ! ಭಕ್ತವತ್ಸಲ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಏತಕ್ಕೆ? ಅಂಥ ಮಹಾ ಸಭಾ ಭವನ ನೋಡಿಯೇ ಅಲ್ಲವೇ ದುರ್ಮಾರ್ಗಿಯಾದ ದುರ್ಯೋಧನನಿಗೆ ಹೊಟ್ಟೆ ಉರಿ ಬಂದದ್ದು. ನೀರು ಇರುವಂತೆ ಕಾಣುವಲ್ಲಿ ನೀರಿಲ್ಲದಂತೆಯೂ ಬಾಗಿಲು ಇರುವಂತೆ ಕಾಣುವಲ್ಲಿ ಬಾಗಿಲು ಇಲ್ಲದಂತೆಯೂ ರಚಿಸಿದ್ದ ಆ ಭವನದಲ್ಲಿ ದುರ್ಯೋಧನ ದುಶ್ಯಾಸನಾದಿಗಳು ಎಷ್ಟು ಅಪಮಾನ ಹೊಂದಿದರೆನ್ನುವುದು ಹೇಳಲಸಾಧ್ಯ. ಅವನ ಮೈಯೆಲ್ಲಾ ಗಾಯ. ಈ ಅವಮಾನವನ್ನು ಸಹಿಸಲಾರದೆಯೇ ಪಾಂಡವರ ಮೇಲೆ ಅವರಿಗೆ ಅಷ್ಟೊಂದು ದ್ವೇಷ ಬೆಳೆದದ್ದು.

ಕೌರವರು ನಿರಂತರವೂ ಪಾಂಡವರ ಕೇಡನ್ನೇ ಕೋರುತ್ತಿದ್ದರೂ ಪಾಂಡವರು ಕೃಷ್ಣನ ಪ್ರೇಮಾನುರಾಗಗಳಿಂದ ಅವುಗಳೆಲ್ಲವನ್ನೂ ಲೀಲಾಜಾಲವಾಗಿ ತಪ್ಪಿಸಿ ಕೊಂಡು ದಿನದಿನಕ್ಕೆ ಅಭಿವೃದ್ಧಿ ಹೊಂದಿ, ಚಿತ್ರವಿಚಿತ್ರವಾದ ವೈಭವಗಳನ್ನು ಅನುಭವಿಸುತ್ತಿದ್ದರು. ಇದಕ್ಕೆಲ್ಲಾ ಆ ಯಾದವ ಬಾಲಕನೇ ಕಾರಣನೆಂದು ಕೃಷ್ಣನ ಮೇಲೆ ಕೂಡ ಕೌರವರಿಗೆ ದ್ವೇಷ. ಆದರೆ, ಆ ಪರಮಾತ್ಮನನ್ನು ಯಾರು ಏನು ತಾನೇ ಮಾಡಬಲ್ಲರು? ಹಾಗೆ ಮಾಡುತ್ತೇನೆನ್ನುವುದು ಅಜ್ಞಾನವೇ ಹೊರತು, ಮತ್ತೇನಲ್ಲ."

# ೧೯ ದ್ರೌಪದಿಗೆ ಕೃಷ್ಣಾನುಗ್ರಹ

ವ್ಯಾಸರು ತಕ್ಷಕನ ಕಥೆ ಹೇಳುತ್ತಿದ್ದುದನ್ನು ಬಹಳ ಶ್ರದ್ಧೆಯಿಂದ ಕೇಳುತ್ತಿದ್ದ ಪರೀಕ್ಷಿತ್ ಮಹಾರಾಜ, ಒಮ್ಮೆಲೇ ಆಶ್ಚರ್ಯದಿಂದ, "ಸ್ವಾಮೀ! ಆ ದುರ್ಮಾರ್ಗಿಗಳಾದ ಕೌರವರು ನಮ್ಮ ಅಜ್ಜಿ ದ್ರೌಪದಿಯನ್ನು ಅಷ್ಟು ಬಗೆಯಾಗಿ ಅವಮಾನಗೊಳಿಸಲು ಕಾರಣವೇನು? ನಿಜಕ್ಕೂ ನಮ್ಮ ತಾತಂದಿರು ಅಜ್ಜಿಯ ಅವಮಾನವನ್ನು ಹೇಗೆ ತಾನೆ ಸಹಿಸಿದರು? ಮಹಾ ಪರಾಕ್ರಮಶಾಲಿಗಳೆನ್ನುವ ಹೆಸರು ಪಡೆದು, ದ್ರೌಪದಿಗೆ ಸಭೆಯಲ್ಲಿ ಎಲ್ಲರೆದುರು ಅಂಥ ಘೋರಕೃತ್ಯ ಎಸಗುತ್ತಿದ್ದರೆ, ಅದೇ ಸಭೆಯಲ್ಲಿ ನಮ್ಮ ತಾತಂದಿರೈವರು ಇದ್ದರೂ ಏಕೆ ರಕ್ಷಿಸದೆ ಹೋದರು? ಈ ವಿಷಯ ನನಗೇನೂ

ಅರ್ಥವಾಗುತ್ತಿಲ್ಲ. ನಿಜವಾದ ವಿಷಯ ಏನೋ ತಿಳಿಸಿ, ನನ್ನ ಅನುಮಾನ ಪರಿಹರಿಸಬೇಕು," ಎಂದು ಬಹು ದೈನ್ಯನಾಗಿ, ಕಣ್ಣೀರು ಸುರಿಸುತ್ತಾ ಪ್ರಾರ್ಥಿಸಿದ.

ವ್ಯಾಸರು ಪರೀಕ್ಷಿತನ ಪ್ರಾರ್ಥನೆಯನ್ನು ಮನ್ನಿಸಿ, "ಮಗೂ! ಪಾಂಡವರು ಮಹಾ ಧರ್ಮಾತ್ಮರು. ಆಡಿದ ಮಾತಿಗೆ ತಪ್ಪುವವರಲ್ಲ. ತಾವು ಅಪಜಯ ಹೊಂದಿದ ಮೇಲೆ ಕೌರವರಿಗೆ ದಾಸರಾದಂತಾಯಿತೆಂದೂ ಆದ್ದರಿಂದ ಕೌರವರನ್ನು ಧಿಕ್ಕರಿಸುವ ಅಧಿಕಾರ ಪಾಂಡವರಿಗೆ ಇಲ್ಲವೆನ್ನುವ ಧರ್ಮಜನ ಧರ್ಮಸೂಕ್ತಿ ಅನುಸರಿಸಿ ಭೀಮಾರ್ಜುನರಾಗಲೀ ಚಿಕ್ಕತಾತಂದಿರಾಗಲೀ ಏನೂ ಮಾಡಲಾರದಾದರು. ಇಲ್ಲದಿದ್ದರೆ, ಕೌರವರ ರಕ್ತ ಕುಡಿದು ಅವರ ದೇಹವನ್ನು ಕಾಗೆ ಹದ್ದುಗಳಿಗೆ ಆಹಾರ ಮಾಡುತ್ತಿದ್ದರು.

ಆದರೂ ಕೂಡ, ಧರ್ಮಜ ಎಷ್ಟು ತಡೆದರೂ ಮಧ್ಯೆ ಮಧ್ಯೆ ನಿಮ್ಮ ತಾತ ಭೀಮ ಹಗ್ಗ ಹರಿದ ಸಿಂಹದಂತೆ ಕೌರವರ ಮೇಲೆ ಬೀಳುತ್ತಿದ್ದ. ಧರ್ಮಜನ ಧರ್ಮ ಸೂಕ್ತಿಗಳ ಪರಿಹಾಸ್ಯ ಮಾಡುತ್ತಿದ್ದ. ಮಾಡುವುದೇನು? ಅಣ್ಣ ಧರ್ಮಜನ ಆಜ್ಞೆಗೆ ಕಟ್ಟುಬಿದ್ದು ತಮ್ಮಂದಿರು ಹಾಗೆ ಸತ್ತವರಂತೆ ಇರಬೇಕಾಯಿತು," ಎಂದರು. "ಇಷ್ಟಕ್ಕೂ ನಮ್ಮ ತಾತಂದಿರು ಕೌರವರ ದಾಸರಾಗಲು ಕಾರಣವೇನು?" ಎಂದು ಪರೀಕ್ಷಿತ್ ಕೇಳಿದ. ಮಹರ್ಷಿ ವ್ಯಾಸರು ಮುಗುಳ್ನಕ್ಕು, "ಮಗೂ! ಹೇಳುತ್ತೇನೆ, ಕೇಳು. ಮಯ ನಿರ್ಮಿಸಿದ ಸಭಾ ಭವನದಲ್ಲಿ ರಾಜಸೂಯ ಯಾಗವನ್ನು ಅತಿ ವೈಭವದಿಂದ ನಿಮ್ಮ ದೊಡ್ಡ ತಾತ ನಡೆಸಿ, ಅದಕ್ಕೆ ಕೌರವರನ್ನು ಅಹ್ವಾನಿಸಿದ. ಕೌರವರಿಗೆ ಆ ವೈಭವ ನೋಡಿ ಅಸೂಯೆ ಉಂಟಾಗಿ ಅಂದಿನಿಂದ ಹಗೆತನ ಬೆಳೆಸಲಾರಂಭಿಸಿದರು. ಏನಾದರೂ ಮಾಡಿ ಪಾಂಡವರನ್ನು ಈ ವೈಭವದಿಂದ ಹೊರಹಾಕಿ ಅವರನ್ನು ಕಾಡುಪಾಲು ಮಾಡಬೇಕು ಎನ್ನುವ ದುರಾಲೋಚನೆ ಮಾಡಿದರು. ಅದಕ್ಕೆ ಯಾವ ಮಾರ್ಗ ಅನುಸರಿಸಬೇಕು ಎನ್ನುವುದಕ್ಕಾಗಿ ಕೆಲವು ದುಷ್ಟಬುದ್ಧಿಗಳನ್ನು ಕಲೆಹಾಕಿ ಸಮಾಲೋಚನೆ ನಡೆಸಿದರು. ಅದೇ ದ್ಯೂತ ಸಭೆಯಾಗಿ ಪರಿಣಮಿಸಿತು.

ಬೆಣ್ಣೆಯೊಳಗಿನ ಕತ್ತಿಯಂತೆ, ಒಳಗೊಳಗೇ ಕೌರವರ ವೈರ ಸಾಧಿಸುತ್ತಾ ಮೇಲೆ ಮೇಲೆ ಪಾಂಡವರೆಂದರೆ ತಮಗೆ ಅಪಾರ ಪ್ರೇಮ ಎನ್ನುವಂತೆ ಪ್ರೇಮ ಪ್ರದರ್ಶನ ಮಾಡುತ್ತಿದ್ದರು. ಧೃತರಾಷ್ಟ್ರನ ಮೂಲಕ ನಿಮ್ಮ ದೊಡ್ಡ ತಾತನಿಗೆ ಹೇಳಿ ಕಳಿಸಿದರು. 'ಮಗೂ! ನೀವು ನೀವು ಸೋದರರು ಕೆಲವು ಕಾಲ ಒಂದೆಡೆ ಸೇರಿ ಆನಂದವಾಗಿ ಜೂಜಾಡಿ ತಮಾಷೆಯಾಗಿ ಕಾಲ ಕಳೆಯಿರಿ,' ಎಂದು ಧೃತರಾಷ್ಟ್ರ ಹೇಳಿದ. ನಿಷ್ಕಪಟ ಬುದ್ಧಿಯ ನಿಮ್ಮ ತಾತ ಧರ್ಮಜ, ಅ ದುಷ್ಟರ ದುರುದ್ದೇಶ ತಿಳಿಯದೆ, ಸೋದರರಲ್ಲವೇ ಎನ್ನುವ ಭಾವನೆಯಿಂದ ಜೂಜಾಡಿ ಅವರ ಮೋಸದ ಸಂಚಿ

ಗೊಳಗಾಗಿ, ತನ್ನ ಸರ್ವಸ್ವವನ್ನೂ ಪಣವೊಡ್ಡಿ ಕಳೆದುಕೊಂಡ. ತನ್ನ ಸೋದರರನ್ನೂ ಒಬ್ಬೊಬ್ಬರನ್ನಾಗಿ ಪಣವೊಡ್ಡಿ ಅವರನ್ನೂ ಕಳೆದುಕೊಂಡು, ಕಡೆಗೆ ತನ್ನನ್ನು ತಾನೇ ಪಣವೊಡ್ಡಿ ಕಳೆದುಕೊಂಡ. ಕಟ್ಟಕಡೆಗೆ ದ್ರೌಪದಿಯನ್ನೂ ಪಣವೊಡ್ಡಿ ಅವಳನ್ನೂ ಸಹ ಕಳೆದುಕೊಂಡ.

ಇದು ಮೋಸದ ಜೂಜೆನ್ನುವುದನ್ನೂ ಶಕುನಿಯ ಮೋಸವನ್ನೂ ತಿಳಿಯದೆ, ತನ್ನ ದೊಡ್ಡಪ್ಪನ ಮಕ್ಕಳು ಹೀಗೆ ಮಾಡುವರೆಂದು ಯೋಚಿಸದೆ, ಧರ್ಮಜ ಸರ್ವಸ್ವವನ್ನೂ ಕಳೆದುಕೊಂಡ. ಜೂಜಿನಲ್ಲಿ ಗೆದ್ದವರಿಗೆ ದ್ರೌಪದಿ ದಾಸಿಯಾದಂತೆ ಆಯಿತು. ಎಂತಲೇ ಹೊಟ್ಟೆಯೊಳಗಿನ ದ್ವೇಷ ಕಕ್ಕಲು ಕೌರವರಿಗೆ ಬೇರೆ ಮಾರ್ಗವು ಇಲ್ಲದೆ, ದ್ರೌಪದಿಯ ಅವಮಾನ ಮಾಡಬೇಕೆನ್ನುವ ನೀಚ ಬುದ್ಧಿಯಿಂದ ಕಾರ್ಯ ಮಾಡಲು ಪ್ರಾರಂಭಿಸಿದರು," ಎಂದರು.

ಅದನ್ನು ಕೇಳುತ್ತಾ, ಪರೀಕ್ಷಿತ್ ಮಹರಾಜ ಕಣ್ಣೀರಕೋಡಿ ಹರಿಸುತ್ತಾ ಗದ್ಗದ ಸ್ವರದಲ್ಲಿ, "ಸ್ವಾಮೀ! ಚಕ್ರವರ್ತಿಯಾದ ಕುರುಡ ಧೃತರಾಷ್ಟ್ರ ಹೆಂಡತಿಯೊಂದಿಗೆ ಕುಳಿತು ಸೊಸೆಗೆ ಇಷ್ಟು ವಿಧವಾಗಿ ಅವಮಾನವಾಗುತ್ತಿದ್ದರೂ ಹೇಗೆ ಸುಮ್ಮನಿದ್ದ? ನೋಡಲು ಅವನಿಗೆ ಕಣ್ಣಿಲ್ಲದಿದ್ದರೂ ಕೇಳಲು ಕಿವಿಗಳಿದ್ದುವಲ್ಲವೇ? ನನ್ನ ಅಜ್ಜಿ, ದ್ರೌಪದಿ, ಅಷ್ಟು ಬಗೆಯಾಗಿ ಪ್ರಾರ್ಥಿಸುತ್ತಾ ರೋದಿಸುತ್ತಿದ್ದರೆ ಅವನೇನು ಕಿವಿಗಳಿಗೆ ಬಿರಡೆ ಹಾಕಿಕೊಂಡಿದ್ದನೇ? ಯಾವ ಸ್ತ್ರೀಯೇ ಆಗಲಿ ಆಪತ್ತಿನಲ್ಲಿ ಅವಳನ್ನು ರಕ್ಷಿಸಬೇಕೇ ಹೊರತು, ಅವಮಾನಗೊಳಿಸಬಾರದೆಂದು ಶಾಸ್ತ್ರ ಶಾಸನಮಾಡಿದೆ. ಹೀಗಿರುವಾಗ, ಚಕ್ರವರ್ತಿಯಾಗಿ, ಪ್ರಜೆಗಳ ಮಾರ್ಗದರ್ಶಕರಾಗಿ ಈ ದುರ್ಮಾರ್ಗಿಗಳು ತಾವೇ ಹೀಗೆ ಶಾಸ್ತ್ರ ವಿರುದ್ಧವಾಗಿ ಪ್ರವರ್ತಿಸಿದರೆ, ಇಂಥವರು ಚಕ್ರವರ್ತಿ ಹೇಗಾಗುವರು? ಇವರು ಪರಮ ನೀಚರಲ್ಲವೇ? ಪರಮ ಪಾಪಿಗಳೇ ಪರ ಸ್ತ್ರೀಯರನ್ನು ಅವಮಾನಗೊಳಿಸಲೆತ್ನಿಸುವುದು. ಇಂಥ ಕಿರಾತರಿಗೆ ಪಟ್ಟಕಟ್ಟಿದ್ದರಿಂದಲೇ, ರಾಜ್ಯವೆಲ್ಲಾ ಛಿದ್ರಛಿದ್ರವಾಗಿ, ಕಡೆಗೆ ಸರ್ವನಾಶವಾಯಿತು. ದೈವ ಕುರುಡಲ್ಲ," ಎಂದು ದುಃಖತಪ್ತನಾದ ಪರೀಕ್ಷಿತನನ್ನು ವ್ಯಾಸರು ಸಮಾಧಾನಗೊಳಿಸುತ್ತಿದ್ದರು.

"ದೈತ್ಯರು ದಾನವರು ಕೂಡ ತಮ್ಮ ಕುಲಸ್ತ್ರೀಯರನ್ನು ಗೌರವಿಸುತ್ತಾರೆ. ಅವರ ಕುಲದಲ್ಲಿ ಯಾರಿಗಾದರೂ ಇಂಥ ಅಗೌರವವಾದರೆ ಇಡೀ ತಮ್ಮ ಕುಲಕ್ಕೇ ಅಗೌರವವೆಂದು ಭಾವಿಸುತ್ತಾರೆ. ಅಂಥದ್ದರಲ್ಲಿ ಇಷ್ಟು ಜನ ಕುಲದ ಹಿರಿಯರೂ ಚಕ್ರವರ್ತಿಗಳೂ ಗುರುಗಳೂ ಮಹಾಮಹಾ ಮೇಧವಿಗಳೂ ಇದ್ದ ಸಭೆಯಲ್ಲಿ ಇಂಥ ಘೋರ ಕೃತ್ಯ ನಡೆಯುತ್ತಿದ್ದರೆ, ನೋಡುತ್ತಿದ್ದವರ ಬುದ್ಧಿಗೆ ಮಂಕು

ಬಡಿದಿತ್ತೇ? ಅಥವಾ ಅವರ ಕಣ್ಣುಗಳಲ್ಲಿ ಪೊರೆ ಕೂತಿತ್ತೇ? ಅವರ ವಿವೇಕ ಹಾಳಾಗಿಹೋಗಿತ್ತೇ? ಕುಲ ಘಾತಕ ಕೃತ್ಯ ನೋಡುತ್ತಿದ್ದರೂ ಸುಮ್ಮನಿರಬೇಕಾದರೆ ಅವರಿಗೆ ಕುಲ ಗೌರವವೇ ತಿಳಿಯದೆ ಹೋಯಿತೇ? ಈ ಹಿರಿಯರ ಬುದ್ಧಿಗೆ ಏನು ಹೇಳಬೇಕು? ಅವರ ಹಿರಿತನ ಹಾಳಾಯಿತು," ಎಂದು ಆಗ ನಿಶ್ಚೇಷ್ಟಿತರಾಗಿ ಕುಳಿತಿದ್ದ ಹಿರಿಯರನ್ನು ಪರೀಕ್ಷಿತ್ ಹಲವು ವಿಧವಾಗಿ ಖಂಡಿಸಿದ.

ವ್ಯಾಸರು ಅವನ ಮಾತಿಗೆ ಅಡ್ಡಬಂದು, "ಮಗೂ! ಪರೀಕ್ಷಿತ್, ಬಾಧೆ ಪಡಬೇಡ. ಅಲ್ಲಿ ಸೇರಿದ್ದ ಹಿರಿಯರು ಯಾರಿಗೂ ಈ ದುಷ್ಟ ದುರ್ಯೋಧನ, ದುಶ್ಯಾಸನಾದಿ ಗಳು ಮಾಡುತ್ತಿದ್ದ ಕೆಲಸ ಸರಿಬೀಳದಿದ್ದರೂ ಅದು ಸರಿಯಲ್ಲ ಎಂದು ಬುದ್ಧಿ ಹೇಳಿದರೂ ಕೇಳದೆ ಪಾಪಕೃತ್ಯದಲ್ಲಿ ತೊಡಗಿದ್ದ ಕೌರವರನ್ನು ಯಾರುತಾನೆ ಏನು ಮಾಡಬಲ್ಲರು? ದ್ರೌಪದಿಯ ಕೂದಲು ಹಿಡಿದು ದುಶ್ಯಾಸನ ಅವಳನ್ನು ತುಂಬಿದ ಸಭೆಯಲ್ಲಿ ಎಳೆದುತರುತ್ತಿದ್ದಾಗ, ವಿದುರ, ಭೀಷ್ಮ, ದ್ರೋಣಾಚಾರ್ಯರು ಎಷ್ಟು ಬಾಧೆಪಟ್ಟರೆನ್ನುವುದನ್ನು ಹೇಳಲಸಾಧ್ಯ. ಅವರ ಕಣ್ಣೀರು ಕಾಲುವೆಯಂತೆ ಹರಿಯುತ್ತಿತ್ತು. ಕಣ್ಣೆತ್ತಿ ನೋಡಲೂ ಅವರಿಗೆ ಆಗಲಿಲ್ಲ. ಅಷ್ಟೇ ಅಲ್ಲ, ಪರಮ ಪವಿತ್ರೆ ದ್ರೌಪದಿಯ ಕಣ್ಣುಗಳಿಂದ ಬೆಂಕಿಯ ಕಿಡಿಗಳು ಸಿಡಿಯುತ್ತಿದ್ದುವು. ನಿಜಕ್ಕೂ, ಬೆಂಕಿ ಕಾರುತ್ತಿದ್ದ ಅವಳ ದೃಷ್ಟಿ ಆ ಸಭೆಯಲ್ಲಿ ಯಾರ ಮೇಲಾದರೂ ಬಿದ್ದಿದ್ದರೆ ತಕ್ಷಣ ಭಸ್ಮವಾಗುತ್ತಿದ್ದರು. ಆದರೆ ಅವಳು ಗುಣಶೀಲನಾದ ನಿಮ್ಮ ತಾತ ಧರ್ಮಜನನ್ನು ಮಾತ್ರವೇ ನೋಡುತ್ತಾ ಅವನ ಶಾಂತ ಸ್ವಭಾವವನ್ನು ಸ್ಮರಿಸುತ್ತಿದ್ದುದರಿಂದ ಆ ಸಭೆಯಲ್ಲಿದ್ದವರು ಬದುಕಿದರು. ಇಲ್ಲದಿದ್ದರೆ ದುರ್ಯೋಧನ, ದುಶ್ಯಾಸನಾದಿಗಳು ನಿಮಿಷಮಾತ್ರದಲ್ಲಿ ಭಸ್ಮವಾಗುತ್ತಿದ್ದರು.

ನಿಮ್ಮ ತಾತಂದಿರಾದ ಅರ್ಜುನ, ಭೀಮ, ನಕುಲ, ಸಹದೇವಾದಿಗಳು ಸಹಿತ ದ್ರೌಪದಿಯ ಆರ್ತನಾದ ಬಾಣದಂತೆ ಕಿವಿಯೊಳಗೆ ಹೋಗುತ್ತಿದ್ದರೂ ಅವರ ದೃಷ್ಟಿ ಧರ್ಮಜನ ಮುಖ ಕಮಲದ ಮೇಲೇ ನೆಟ್ಟಿದ್ದುದರಿಂದ, ಅವರೂ ಕೂಡ ಶಾಂತ ಹೃದಯರಾಗಿ ಸುಮ್ಮನೆ ಕುಳಿತಿರುವಂತಾಯಿತು. ಅಂದರೆ, ಆ ದಿನ ಧರ್ಮಜನ ಶಾಂತಶೀಲವೇ ಎಲ್ಲರನ್ನೂ ಕಾಪಾಡಿತೆನ್ನಬೇಕು. ಇಲ್ಲದಿದ್ದರೆ ಭಾರತ ಯುದ್ಧ ನಡೆಯಬೇಕಾದ ಅವಶ್ಯಕತೆಯೇ ಇಲ್ಲದೆ, ಆ ಸಭೆಯಲ್ಲೇ ಎಲ್ಲರೂ ಭಸ್ಮವಾಗಿ ಹೋಗುತ್ತಿದ್ದರು! ಯಾವುದಕ್ಕೇ ಆದರೂ ದೈವೇಚ್ಛೆ ಆಧಾರವಾಗಿರುವುದಲ್ಲವೇ? ಕೃಷ್ಣ ಪರಮಾತ್ಮನ ಸಂಕಲ್ಪವನ್ನು ಯಾರು ತಾನೆ ತಿಳಿಯಲಾದೀತು?

ಇಷ್ಟರವರೆವಿಗೂ ಪತಿಗಳ ಪರಾಕ್ರಮ ವರ್ಣಿಸುತ್ತಾ ಅವರಲ್ಲಿ ಯಾರೊಬ್ಬರೂ ತನ್ನನ್ನು ಕಾಪಾಡುತ್ತಿಲ್ಲವಲ್ಲಾ ಎಂದು ಮೊರೆ ಇಡುತ್ತಿದ್ದ ದ್ರೌಪದಿಗೆ, ಒಮ್ಮಿಂದ

ಒಮ್ಮೆಲೇ ಮಿಂಚಿನಂತೆ ಕೃಷ್ಣನ ನೆನಪು ತಲೆಯಲ್ಲಿ ಸುಳಿದು, ಹೃದಯದಲ್ಲಿ ಅವನ ಸ್ಮರಣೆ ತುಂಬಿ, 'ಶ್ಯಾಮಸುಂದರಾ! ಈ ಪರಾಭವ ನನ್ನದಲ್ಲ, ಪಾಂಡವರದ್ದೂ ಅಲ್ಲ, ನಿನ್ನದೇ! ನಮ್ಮ ಸರ್ವಸ್ವವೂ ನೀನೇ ಆಗಿದ್ದೂ ಇಂಥ ಕಠಿಣ ಶಿಕ್ಷೆ ವಿಧಿಸುವುದನ್ನು ನೋಡುತ್ತಿರುವುದು ನಿನಗೆ ನ್ಯಾಯವಲ್ಲ. ಇಷ್ಟು ಕಾಲವೂ ನಮ್ಮ ಹೃದಯವನ್ನು ನಿನಗೆ ಅರ್ಪಿಸಿದ್ದೇವೆ. ಅಷ್ಟರಿಂದ ನಿನಗೆ ತೃಪ್ತಿಯಾಗಲಿಲ್ಲ. ಇಗೋ, ಇದೀಗ ದೇಹಗಳನ್ನು ಕೂಡ ನಿನಗೆ ಅರ್ಪಿಸುತ್ತಿದ್ದೇವೆ, ನಿನ್ನ ಇಷ್ಟ.' ಎಂದು ಸಂಪೂರ್ಣ ಶರಣಾಗತಳಾದಳು. ಅಗೋ ಭಕ್ತರಕ್ಷಕ, ಆರ್ತತ್ರಾಣ ಪರಾಯಣ, ಎಲ್ಲ ಹೊಣೆಗಾರಿಕೆಯನ್ನೂ ತಾನೇ ವಹಿಸಿ, ನಿರ್ಗುಣ, ನಿರಾಕಾರ ರೂಪನಾಗಿ ದ್ರೌಪದಿಯಲ್ಲಿ ಸೇರಿ, ಎಷ್ಟೆಷ್ಟು ವಸ್ತ್ರ ಸೆಳೆದರೂ ಮುಗಿಯದೆ, ಅಕ್ಷಯವಾಗುವಂತೆ ಮಾಡಿದ.

ಅಲ್ಲಿ, ನೆರೆದಿದ್ದವರೆಲ್ಲರಿಗೂ ದ್ರೌಪದಿಯ ಭಕ್ತಿ, ಕೃಷ್ಣನ ಶಕ್ತಿ ಆಶ್ಚರ್ಯ ಉಂಟು ಮಾಡಿತು. ಧರ್ಮಕ್ಕೆ ಜಯ ತಪ್ಪದು ಎನ್ನುವುದಕ್ಕೆ ಅವರೆಲ್ಲರ ಆನಂದ ಅಶ್ರುಗಳೇ ಸಾಕ್ಷಿ ಎನ್ನುವಂತಿತ್ತು. ಕೊನೆಗೆ ದುಶ್ಯಾಸನನೇ ನಿತ್ರಾಣನಾಗಿ ಹಿಂದೆ ಸರಿದನಲ್ಲದೆ, ದ್ರೌಪದಿಗೆ ಯಾವ ಅಪಜಯವೂ ಆಗಲಿಲ್ಲ. ಪರಾಭವವೆಲ್ಲಾ ಕೌರವರಿಗೇ ಹೊರತು ಪಾಂಡವರಿಗಲ್ಲ. ಧರ್ಮಮೂರ್ತಿಗಳಾದ ಪಾಂಡವರನ್ನು ಸೋಲಿಸಲೆತ್ನಿಸಿದರೆ ದೈವ ಸುಮ್ಮನಿರುವುದೇ? ಮತ್ತೊಬ್ಬರಿಗೆ ಮಾಡಲೆತ್ನಿಸುವ ಅವಮಾನ, ಅಪಜಯ ತಮ್ಮ ಮೇಲೇ ತಿರುಗಿ, ತಮ್ಮನ್ನೇ ಶಿಕ್ಷಿಸುವುದು.

ಇದೆಲ್ಲದಕ್ಕೂ ನಿಮ್ಮ ತಾತಂದಿರಿಗೂ ಅಜ್ಜಿಗೂ ಕೃಷ್ಣನ ಮೇಲಿದ್ದ ಭಕ್ತಿ ಶ್ರದ್ಧೆ. ಕೃಷ್ಣನಿಗೆ ನಿಮ್ಮ ತಾತಂದಿರ ಮೇಲಿದ್ದ ಅನುಗ್ರಹ ದಯೆಯೇ ಕಾರಣ. ಪಾಂಡವರ ಭಗವದ್ ವಿಶ್ವಾಸವು, ಪ್ರಕೃತಿಯೇ ಸರ್ವಸ್ವವೆಂದು ತಿಳಿದು ವರ್ತಿಸುವ ಮುಂದೆ ಬರುವ ಕಲಿಯುಗಕ್ಕೆ ಆದರ್ಶಪ್ರಾಯವಾಗಿರಲೆನ್ನುವ ಉದ್ದಿಶ್ಯದಿಂದ ಪರಮಾತ್ಮ ಆಡಿದ ಲೀಲಾ ನಾಟಕವೇ ಹೊರತು ಬೇರೆ ಅಲ್ಲ.

ಎಂಥ ನೋವು, ನಿಂದೆ, ನಿಷ್ಠುರಗಳು ಬಂದರೂ ದೈವಾರ್ಪಿತ ಬುದ್ಧಿಯಿಂದ ಅವುಗಳನ್ನು ಸ್ವಾಗತಿಸಿದರೆ, ಅವುಗಳ ಒಳಿತು ಕೆಡಕುಗಳನ್ನೆಲ್ಲಾ ಭಗವಂತನೇ ನೋಡಿಕೊಳ್ಳುವನು. ಭಕ್ತರಾದವರಿಗೆ ಎಂಥ ಇಕ್ಕಟ್ಟು ಬಂದರೂ ಧೈರ್ಯದಿಂದ ಎದುರಿಸಬೇಕು. ಭಗವದ್ಭಕ್ತರಿಗೇ ಕಷ್ಟಗಳು ಹೆಚ್ಚಾಗಿ ಬರುವುವು ಎನ್ನುವುದನ್ನೆಲ್ಲಾ ಜನರಿಗೆ ತಿಳಿಸುವ ಉದ್ದೇಶದಿಂದ, ಪಾಂಡವರನ್ನು ನಿಮಿತ್ತವಾಗಿಟ್ಟುಕೊಂಡು ಕೃಷ್ಣ ಆಡಿದ ಆಟ, ಮಾಡಿದ ಲೀಲೆಗಳು ಇವು.

ಅಕ್ಷಯಾಂಬರ ನೀಡುತ್ತಿದ್ದ ಆ ಕೃಷ್ಣನ ಕೃಪಾ ವಿಶೇಷವನ್ನು ಸ್ಮರಿಸುತ್ತಾ, ದ್ರೌಪದಿ ಸ್ತಂಭೀಭೂತಳಾಗಿ, ಕಣ್ಣೀರ ಕೋಡಿ ಹರಿಸುತ್ತಾ, 'ಕೃಷ್ಣಾ, ಕೃಷ್ಣಾ,' ಎಂದು ಉನ್ಮತ್ತ ಳಂತೆ ಕೂಗುತ್ತಿದ್ದಳು. ಸಭೆಯಲ್ಲಿದ್ದವರೆಲ್ಲರಿಗೂ ಭಯಾಂದೋಳನ ಉಂಟಾಗಿ, ಸಾಕ್ಷಾತ್ ಶಕ್ತಿಯೇ ಈ ರೂಪದಲ್ಲಿ ಅವತರಿಸಿದ್ದಾಳೋ ಎನ್ನುವಂತೆ ಭಾಸವಾ ಯಿತು. ಅವಳ ದಿವ್ಯ ತೇಜಸ್ಸನ್ನು ನೋಡಲಾರದೆ ಹೋದರು.

ಇಷ್ಟರಲ್ಲಿ ನಿಮ್ಮ ಅಜ್ಜಿ ದ್ರೌಪದಿಗೆ, ಕೃಷ್ಣಪರಮಾತ್ಮ ಪ್ರತ್ಯಕ್ಷನಾಗಿ, 'ತಂಗೀ! ನಾನಿರಲು ಭಯವೇಕೆ? ಈ ಮದಾಂಧರ ರೂಪ ನಾಶ ಮಾಡುವುದಕ್ಕೇ ನಾನು ಜನಿಸಿರು ವುದು. ಪಾಂಡವರ ಖ್ಯಾತಿ ಜ್ಯೋತಿಯನ್ನು ಬೆಳಗಿಸುತ್ತೇನೆ. ಸುಮ್ಮನಿರು,' ಎಂದು ಸಮಾಧಾನ ಹೇಳಿದನು. ದ್ರೌಪದಿ ಧಾರಾಕಾರವಾಗಿ ಸುರಿಯುತ್ತಿದ್ದ ಕಣ್ಣೀರಿನಿಂದ ಕೃಷ್ಣನ ಪಾದಪದ್ಮಗಳನ್ನು ತೊಳೆದು, ಪಾದಗಳ ಮೇಲೆ ಬಿದ್ದು, ತನ್ನ ಬಿಚ್ಚಿದ್ದ ಕೇಶ ರಾಶಿಯಿಂದ ಅವನ ಪಾದಗಳನ್ನೊರಸುತ್ತಾ ಮೈಮರೆತು ನೆಲದಮೇಲೆ ಬಿದ್ದಳು.

ಅವಳ ಆನಂದೋದ್ರೇಕ ಕಂಡು ಸಭೆಯಲ್ಲಿದ್ದವರಿಗೆಲ್ಲಾ ಮಹದಾಶ್ಚರ್ಯವಾ ಯಿತು. ಗೋಪಾಲ ಅವಳ ತಲೆಯನ್ನು ತನ್ನ ದಿವ್ಯ ಮಂಗಳ ಹಸ್ತದಿಂದ ಸವರುತ್ತಾ, 'ಏಳು, ಬಿಚ್ಚಿರುವ ಕೂದಲನ್ನು ಕಟ್ಟಿಕೋ. ಮುಂದೆ ಆಗಬೇಕಾಗಿರು ವುದನ್ನು ಯೋಚಿಸು. ನಿನ್ನ ಪತಿಯರನ್ನು ಹೋಗಿ ಸೇರಿಕೋ,' ಎಂದು ಹೇಳಿದ. ಕೃಷ್ಣಪರಮಾತ್ಮನ ಮಾತುಗಳನ್ನು ಕೇಳುತ್ತಿದ್ದ ದ್ರೌಪದಿ, ಹಾವಿನ ಹೆಡೆಯಂತೆ ಕೆದರಿದ್ದ ಕೇಶರಾಶಿ ಮುಖದ ಮೇಲೆ ಹರಡಿರಲು, ಅವಳ ಕಾಂತಿಯುತ ಕಣ್ಣುಗಳು ಮಿಂಚಿನಂತೆ ಹೊಳೆಯುತ್ತಿರಲು, ಸಭಾ ಮಧ್ಯದಲ್ಲಿ ನಿಂತು, 'ಕೃಷ್ಣಾ! ಹರಿದ ಬಟ್ಟೆಯನ್ನು ಹೊಲಿದು ಸೇರಿಸಬೇಕಲ್ಲದೆ, ಮೊದಲಿನಂತೆ ಒಂದುಗೂಡಿಸಲು ಸಾಧ್ಯವಿಲ್ಲ. ಕುಲೀನ ಕನ್ಯೆಗೆ ಒಂದೇ ಸಾರಿ ಕನ್ಯಾದಾನವಲ್ಲದೆ, ಹಲವು ಸಾರಿ ಆಗದು. ಒಡೆದ ಹಾಲು ಏನು ಮಾಡಿದರೂ ಒಳ್ಳೆಯ ಹಾಲು ಆಗುವುದಿಲ್ಲ. ಬಾಯಿಂದ ಹೊರಗೆ ಬಂದ ಆನೆಯ ದಂತ ಮತ್ತೆ ಬಾಯೊಳಗೆ ಹೋಗುವುದಿಲ್ಲ. ಹಾಗೇ, ಈ ದ್ರೌಪದಿಯ ಬಿಚ್ಚಿಹೋದ ಕೇಶರಾಶಿ ಮೊದಲಿನಂತೆ ಸೌಭಾಗ್ಯವತಿಯ ಮುಡಿ ಆಗಲಾರದು,' ಎನ್ನುತ್ತಲೇ, ಸಭಾಸದಸ್ಯರೆಲ್ಲರೂ ಅವಮಾನಿತರಾಗಿ, ನಾಚಿಕೆ ಯಿಂದ ತಲೆತಗ್ಗಿಸಿದರು. ಅಷ್ಟರಲ್ಲಿ, ಕೃಷ್ಣ ಸುಮ್ಮನಿರದೆ, 'ತಂಗೀ! ಹಾಗಾದರೆ ನಿನ್ನ ಕುರುಳನ್ನು ಮೊದಲಿನಂತೆ ನೀನು ಕಟ್ಟಿಕೊಳ್ಳುವುದಾದರೂ ಯಾವಾಗ? ಕೆದರಿರುವ ನಿನ್ನ ಕೂದಲು ಭಯಂಕರವಾಗಿರುವುದಲ್ಲ?' ಎಂದ.

ವೀರ ಸತಿ ದ್ರೌಪದಿ, ಸಿಂಹನಾದವನ್ನು ಮಾಡುತ್ತಾ 'ಶ್ಯಾಮಸುಂದರ, ಯಾವ ದುರ್ಮಾರ್ಗಿ ತನ್ನ ಪಾಪಿ ಕೈಗಳಿಂದ ನನ್ನ ಕೂದಲನ್ನು ಹಿಡಿದು ಎಳೆತಂದನೋ

ಅವನ ತಲೆ ಎಂದು ಹೋಳುಹೋಳಾಗಿ, ಅದನ್ನು ನಾಯಿಗಳು ತಿನ್ನುವುವೋ, ಎಂದು ಅವನ ಹೆಂಡತಿ ವಿಧವೆಯಾಗಿ ತಲೆ ಕೆದರಿಕೊಂಡು ರೋದಿಸುವಳೋ, ಅಂದೇ ನನ್ನ ಕೂದಲಿಗೂ ಮತ್ತೆ ಸಂಸ್ಕಾರವಾಗುವುದು. ಅಲ್ಲಿಯವರೆಗೂ ಈ ಕೂದಲು ಹೀಗೇ ಇರುವುದು,' ಎಂದು ಶಪಥಮಾಡಿದೊಡನೆಯೇ, ಸಭೆಯಲ್ಲಿದ್ದ ಹಿರಿಯರು, ಧರ್ಮದೂತರು ಕಿವಿ ಮುಚ್ಚಿಕೊಂಡು, 'ಶಾಂತಳಾಗು, ಶಾಂತಳಾಗು, ಮಹಾಸಾಧ್ವೀಮಣಿ ದ್ರೌಪದಿ, ನಮ್ಮನ್ನು ಕ್ಷಮಿಸು,' ಎಂದು ಕೂಗಿದರು.

ಧೃತರಾಷ್ಟ್ರನ ಎದೆ ಕುಸಿಯಿತು. ಕೌರವರು ಮೇಲೆ ಮೇಲೆ ಮಹಾವೀರರಂತೆ ಕಾಣುತ್ತಿದ್ದರೂ ಒಳಗೊಳಗೇ ಅವರಲ್ಲೂ ಭಯದ ಬಿರುಗಾಳಿ ಎದ್ದಿತು. ಈ ಮಾತು ನೆರವೇರದೆ ಹೋಗದೆಂದು ಎಲ್ಲರಲ್ಲೂ ಕಳವಳವು ಎದ್ದಿತು. ಅದಕ್ಕೆ ಸರಿಯಾಗಿ, ಗೋಪಾಲ ಅವಳನ್ನು ಸಮಾಧಾನಪಡಿಸುತ್ತಾ, 'ದ್ರುಪದ ಕುಮಾರೀ! ಹಾಗೇ ಆಗಲೀ, ನಿನ್ನ ಪತಿಗಳ ಹೃದಯವನ್ನು ಪರಿತಾಪಕ್ಕೀಡುಮಾಡಿದ ಈ ದುರ್ಮಾರ್ಗಿಗಳನ್ನು ಕೊನೆಗಾಣಿಸದಿರಲು ಸಾಧ್ಯವೇ? ಹುಟ್ಟಿದಂದಿನಿಂದ ಹಾಸ್ಯಕ್ಕೆ ಆದರೂ ಅಸತ್ಯವಾಡಿ ಗೊತ್ತಿಲ್ಲದ ನಿನ್ನ ನಾಲಗೆಯಲ್ಲಿ ಈಗ ನೀನಾಡಿದ ಮಾತು ಫಲಿಸದೆ ಹೋಗುವುದೇ? ನಿನ್ನದು ಸತ್ಯವಾಕ್ಕು. ಸತ್ಯಕ್ಕೆ ಜಯ ತಪ್ಪದು,' ಎಂದು ನಿನ್ನ ಅಜ್ಜಿ ದ್ರೌಪದಿಗೆ ಅಭಯವಿತ್ತ. ಅಂತೆಯೇ, ಕೊನೆಗೆ ಕೌರವರ ಸರ್ವನಾಶ ಮಾಡಿ ಪಾಂಡವರ ಧರ್ಮವನ್ನು ಲೋಕಕ್ಕೆ ತೋರಿಸಿದ. ಎಲ್ಲಿ ಧರ್ಮವೋ ಅಲ್ಲಿ ದೇವರು. ಎಲ್ಲಿ ದೇವರೋ ಅಲ್ಲಿ ಜಯ ಎನ್ನುವ ಪವಿತ್ರ ಸೂಕ್ತಿಯನ್ನು ಲೋಕಕ್ಕೆ ಬೋಧಿಸಿದ. ನೋಡಿದೆಯಾ? ನಿನ್ನ ತಾತಂದಿರು ಎಷ್ಟು ದೊಡ್ಡವರು. ಭಗವಂತನಾದ ಕೃಷ್ಣ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗುವುದಕ್ಕೆ ಅವರ ಧರ್ಮ ಪ್ರವರ್ತನೆ, ಸತ್ಯವಾಕ್ಕೇ ಮೂಲಕಾರಣ. ಎಂತಲೇ ಲೋಕದಲ್ಲಿ ಯಾವ ಯಜ್ಞ ಯಾಗಾದಿಗಳನ್ನು ಮಾಡದಿದ್ದರೂ ಸತ್ಯ ಧರ್ಮಗಳೇ ಜೀವಿಗಳಿಗೆ ಸಂಸಾರ ಸಾಗರಗಳನ್ನು ದಾಟಲು ತೆಪ್ಪವಾಗಬಹುದು. ಮುಕ್ತಿಯೆನ್ನುವ ಗುರಿ ಸೇರಿಸಬಲ್ಲವು. ಆದ್ದರಿಂದಲೇ ಅಲ್ಲವೇ ಮಹಾತಪಶ್ಶಕ್ತಿ ಸಂಪನ್ನನಾದ ದುರ್ವಾಸ ಮುನಿ ಕೌರವರ ಪ್ರೋತ್ಸಾಹದಿಂದ, ಅರಣ್ಯವಾಸ ಮಾಡುತ್ತಿದ್ದ ನಿಮ್ಮ ತಾತಂದಿರನ್ನು ಹೇಗಾದರೂ ಮಾಡಿ ನಾಶ ಮಾಡಬೇಕೆಂದು ಮಾಡಿದ ಸನ್ನಾಹ ಫಲಿಸದೆ, ತಪಶ್ಶಕ್ತಿಗಿಂತಲೂ ಭಗವತ್ ಸೇವಾಧನವೆನಿಸಿದ ಭಕ್ತಿಯ ಶಕ್ತಿಯೇ ದೊಡ್ಡದು ಎನ್ನುವುದನ್ನು ಮನ ಗಂಡು ಪಾಂಡವರನ್ನು ಕೊಂಡಾಡಿದ್ದು," ಎಂದು ವ್ಯಾಸರು ಪಾಂಡವರ ಭಕ್ತಿ ಯನ್ನು ವರ್ಣಿಸಿದರು. ಆಶ್ಚರ್ಯದಿಂದ ಪರೀಕ್ಷಿತ್ ಮಹಾರಾಜ ತಲೆಯೆತ್ತಿ, "ಏನು? ಏನು? ಮಹರ್ಷಿ ದುರ್ವಾಸರು ನಮ್ಮ ತಾತಂದಿರನ್ನು ನಾಶಮಾಡಲು ಹೋಗಿ ಪರಾಭವ ಹೊಂದಿದರೇ? ಆಹಾ! ಮಹಾಪುರುಷರಿಗಿಂತಲೂ ಮಹಾ

ಶಕ್ತಿಸಂಪನ್ನರೇ ನಮ್ಮ ತಾತಂದಿರು? ಅಂಥವರ ವಂಶದಲ್ಲಿ ಹುಟ್ಟಿದ ನಾನು ಅದೆಷ್ಟು ಅದೃಷ್ಟವಂತ, ಸ್ವಾಮೀ! ದುರ್ವಾಸರು ನನ್ನ ತಾತಂದಿರನ್ನು ನಾಶಮಾಡಲು ಹೇಗೆ ಯತ್ನಿಸಿದರೆನ್ನುವುದನ್ನು ತಿಳಿಸಬೇಕು," ಎಂದು ಪ್ರಾರ್ಥಿಸಿದ.

## ೨೦ ದುರ್ವಾಸ ಪ್ರಸಂಗ

ವ್ಯಾಸರು, "ಮಹಾರಾಜ! ಗೋಪಾಲನ ಕೃಪಾಪೋಷಣೆಯಲ್ಲಿ ನಿನ್ನ ತಾತಂದಿರಾದ ಪಾಂಡವರು ವನದಲ್ಲಿ ಸರ್ವಸಂತೋಷ ಸಮುಪಾಯಗಳಿಂದ ಒಳ್ಳೆಯ ಹೆಸರು ಪ್ರತಿಷ್ಠೆಗಳಿಸುತ್ತಿದ್ದರು. ಹಸ್ತಿನಾಪುರಕ್ಕಿಂತ ಅರಣ್ಯವೇ ಪಾಂಡವರಿಗೆ ಹಾಯಾಗಿತ್ತು.

ಒಳ್ಳೆಯ ಸುವಾಸನಾಯುಕ್ತ ಹೂವನ್ನು ಎಡಗೈಲಿ ಹಿಡಿದುಕೊಳ್ಳಲಿ, ಬಲಗೈಲಿ ಹಿಡಿದುಕೊಳ್ಳಲಿ, ಹೇಗೆ ಅದರ ಸುವಾಸನೆ ಬದಲಾವಣೆಯಾಗದೆ ಒಂದೇ ರೀತಿ ಯಾಗಿರುವುದೋ ಹಾಗೇ ಒಳ್ಳೆಯವರ ಹೃದಯ ಅಡವಿಯಲ್ಲಿರಲಿ, ಆಕಾಶದಲ್ಲಿ ರಲಿ, ಹಳ್ಳಿಯಲ್ಲಿರಲಿ, ಪಟ್ಟಣದಲ್ಲಿರಲಿ, ಗುಡ್ಡದ ಮೇಲಿರಲಿ, ಕಣಿವೆಯಲ್ಲಿರಲಿ, ಅದರ ಪವಿತ್ರತೆ ಕಟ್ಟಕಡೆಯವರೆಗೂ ಹೋಗುವುದಿಲ್ಲ. ಅದಕ್ಕೆ ನಿಮ್ಮ ತಾತಂದಿರೇ ಪ್ರತ್ಯಕ್ಷ ಸಾಕ್ಷಿ. ಸನ್ಮಾರ್ಗಿಗಳ ಸಂತೋಷ, ಶಾಂತಿ, ದುರ್ಮಾರ್ಗಿಗಳ ಅಸಹನೆಗೆ ದಾರಿ.

ಕೋಗಿಲೆಯ ಗಾನ ಕಾಗೆಗಳಿಗೆ ಕರ್ಣಕಠೋರವಾಗಿರುವಂತೆ, ಅರಣ್ಯದಲ್ಲಿದ್ದ ನಿಮ್ಮ ತಾತಂದಿರ ವೈಭವ ದುರ್ಮಾರ್ಗಿಗಳಾದ ದುರ್ಯೋಧನ ದುಶ್ಯಾಸನಾ ದಿಗಳಿಗೆ ವ್ಯಾಕುಲತೆ ಉಂಟುಮಾಡುತ್ತಿತ್ತು. ಆದರೆ ಮಾಡುವುದೇನು? ಮಾಡ ಬಹುದಾದ್ದನ್ನೆಲ್ಲಾ ಮಾಡಿ ಮುಗಿಸಿದ್ದರು. ಕೊಡಬಹುದಾದ ಹಿಂಸೆಯನ್ನೆಲ್ಲಾ ಕೊಟ್ಟಿದ್ದರು. ಬಯ್ಯಬಹುದಾದ್ದನ್ನೆಲ್ಲಾ ಬೈದಿದ್ದರು. ಕೊನೆಗೆ ರಾಜ್ಯದಿಂದಲೇ ಹೊರ ಹಾಕಿದ್ದರು. ಇದ್ದ ಸ್ಥಿತಿಯಲ್ಲೇ ಅರಣ್ಯಕ್ಕೆ ಅಟ್ಟಿದ್ದರು. ಅವರ ದೃಷ್ಟಿಯಲ್ಲಿ ಪಾಂಡವರ ದೇಹಗಳು ಖಾಲಿ ಚೀಲಗಳೆಂದು ತಿಳಿದಿದ್ದರೇನೋ. ಆದರೆ, ನಿಜಕ್ಕೂ ಅವು ಭರ್ತಿ ಚೀಲಗಳು. ಬ್ರಹ್ಮಾಂಡ ನಾಯಕನಾದ ಗೋಪಾಲನನ್ನು ತುಂಬಿಕೊಂಡಿದ್ದ ಕಾಯಗಳು ಅವು.

ಅಂಥ ಕಾಯಗಳೊಡನೆ ಹೋರಾಡುವುದಕ್ಕೆ ಎಂಥವರಿಗೂ ಸಾಧ್ಯವಿಲ್ಲ. ಆದ್ದರಿಂದಲೇ ಆ ಕಾಯಗಳ ತಂಟೆಗೆ ಹೋಗದೆ, ಕೇವಲ ಅವರ ಭೌತಿಕ ಪದಾರ್ಥಗಳನ್ನು ಮಾತ್ರ ಮೋಸದಿಂದ ವಶಮಾಡಿಕೊಂಡರು. ಜೂಜಾಟದ ನಂತರ ನಿಮ್ಮ ತಾತಂದಿರಿಗೆ ಯಾವ ಆಸ್ತಿಪಾಸ್ತಿಗಳೂ ಉಳಿದಿರಲಿಲ್ಲ. ಸಾಲದುದಕ್ಕೆ, ನಿಮ್ಮ ತಾತಂದಿರಲ್ಲಿ ಕಲಹ ಹುಟ್ಟಿಸಿ ಅವರನ್ನು ಬೇರ್ಪಡಿಸಲು ಪ್ರಯತ್ನಿಸಿದರು. ಅವರಲ್ಲಿ ಇಲ್ಲಸಲ್ಲದ ಭಾವನೆಗಳು ಹುಟ್ಟುವಂತೆ ಪ್ರಯತ್ನ ಮಾಡಿದರು. ಆದರೆ ಸತ್ಯವನ್ನು ತಿಳಿದ ಸೋದರರಾದ್ದರಿಂದ ನಿಮ್ಮ ತಾತಂದಿರಲ್ಲಿ ಅಂಥ ದುರ್ಬುದ್ಧಿಗೆ ಎಡೆಯಿಲ್ಲದೆ, ಕೌರವರ ಆ ಪ್ರಯತ್ನವೂ ವಿಫಲವಾಯಿತು.

ಏನು ಮಾಡಿದರೂ ಪಾಂಡವರಿಗೆ ನಾಶ ಬಾರದು ಎನ್ನುವ ಬಾಧೆ ಕೌರವರಲ್ಲಿ ಬೆಳೆಯುತ್ತಿತ್ತು. ಏನು ಮಾಡಬೇಕೆನ್ನುವುದೇ ತಿಳಿಯದೆ ಪರಿತಪಿಸುತ್ತಿದ್ದ ಸಮಯದಲ್ಲಿ, ಹತ್ತು ಸಾವಿರ ಜನ ಶಿಷ್ಯರಿಂದೊಡಗೂಡಿ, ಸಾಕ್ಷಾತ್ ಕೋಪವೇ ಆಕಾರ ಧರಿಸಿದಂಥ ದುರ್ವಾಸ ಮಹಾಮುನಿ, ಚಾತುರ್ಮಾಸ ದೀಕ್ಷೆ ಕೈಗೊಳ್ಳಲು ಹಸ್ತಿನಾಪುರವನ್ನು ಪ್ರವೇಶಿಸಿದರು. ದುರ್ವಾಸರ ಶಕ್ತಿ ಸಾಮರ್ಥ್ಯಗಳನ್ನು, ಅವರ ಸ್ವಭಾವವನ್ನು ಕೌರವರು ಚೆನ್ನಾಗಿ ಬಲ್ಲವರಾದ್ದರಿಂದ, ಅವರು ಪ್ರಸನ್ನರಾಗುವಂತೆ ಮಾಡಿಕೊಂಡರು. ನಿಮ್ಮ ತಾತಂದಿರಾದ ಪಾಂಡವರನ್ನು ನಾಶಮಾಡಬೇಕೆನ್ನುವ ದೃಢ ಸಂಕಲ್ಪವನ್ನು ಒಳಗೊಳಗೇ ಇಟ್ಟುಕೊಂಡರು. ಮಹಾಮುನಿ ಏನು ಕೇಳಿದರೂ ಇಲ್ಲವೆನ್ನದೆ, ಹೇಗೆ ಹೇಳಿದರೆ ಹಾಗೆ ನಡೆದುಕೊಳ್ಳುತ್ತಾ ದುರ್ವಾಸರಿಗಾಗಲಿ ಅವರ ಶಿಷ್ಯವೃಂದದವರಿಗಾಗಲೀ ಯಾವ ರೀತಿಯ ಲೋಪವೂ ಆಗದಂತೆ, ಕೋಪ ಬರದಂತೆ, ಬೇಕಾದಷ್ಟು ಧನ ವೆಚ್ಚಮಾಡಿ, ಮೃಷ್ಟಾನ್ನವಿತ್ತು, ನಾಲ್ಕು ತಿಂಗಳು ಸೇವೆ ಮಾಡಿದರು.

ಮಹರ್ಷಿ ಎಂಥ ಕಠಿಣೋಕ್ತಿಗಳನ್ನಾಡಿದರೂ ಕೈಕಟ್ಟಿಕೊಂಡು ಸಮಾಧಾನದಿಂದ ಪ್ರತಿಯೊಂದನ್ನೂ ಅಂಗೀಕರಿಸುತ್ತಾ, ಮಹಾಮುನಿಯನ್ನು ದುರ್ಯೋಧನನು ಸಂತುಷ್ಟಗೊಳಿಸಿದ. ಒಂದು ದಿನ ದುರ್ವಾಸರು, ಮೃಷ್ಟಾನ್ನ ಉಂಡು ಸಂತುಷ್ಟರಾಗಿ, ಆಸನದಲ್ಲಿ ಕುಳಿತು ಪ್ರಸನ್ನ ವದನರಾಗಿ, 'ರಾಜಾ! ನಿನ್ನ ಸೇವೆ ನನ್ನನ್ನು ಅತ್ಯಂತ ತೃಪ್ತಿಗೊಳಿಸಿದೆ. ನಿನಗೇನು ಬೇಕೋ ಕೇಳು. ಅದೆಂಥ ಕಠಿಣ ವರವಾದರೂ ಸರಿಯೆ, ಅನುಗ್ರಹಿಸುತ್ತೇನೆ,' ಎಂದು ಸವಾಲು ಹಾಕಿದರು.

ದುರ್ಯೋಧನ ತನ್ನ ಇಚ್ಛೆ ಫಲಿಸುವ ಸಮಯ ಸನ್ನಿಹಿತವಾಯಿತೆಂದು ಸಂತೋಷಿಸಿ, ಅತಿ ವಿನಯ ವಿಧೇಯತೆಗಳನ್ನು ಪ್ರದರ್ಶಿಸುತ್ತಾ, 'ಸ್ವಾಮೀ! ತಾವು ಪ್ರಸನ್ನರಾದದ್ದೇ ಕೋಟಿ ವರದಾನ ಮಾಡಿದುದಕ್ಕೆ ಸಮಾನ, ಅಷ್ಟೇ ಸಾಕು. ನನಗೆ

ಧನೈಶ್ವರ್ಯಗಳಿಗೆ ಕೊರತೆ ಇಲ್ಲ. ಈಗ ತ್ರೈಲೋಕ್ಯಾದಿಗಳ ಪಟ್ಟ ನನಗೆ ಕಟ್ಟಿದರೂ ಶಾಂತಿ, ಸಂತೋಷ ಆಗುವುದಿಲ್ಲ. ಇಂಥ ಮಹಾಪುರುಷರನ್ನು ಆಶ್ರಯಿಸಿ, ಅವರಿಗೆ ಆತಿಥ್ಯ ಮಾಡುವ ಈ ಸಮಯದಲ್ಲಿ, ನಮ್ಮ ಸೋದರರಾದ ಪಾಂಡವರು ಮನೆಯಲ್ಲಿ ಇಲ್ಲದೇ ಹೋದರಲ್ಲಾ ಎನ್ನುವ ಕೊರತೆಯೊಂದನ್ನು ಬಿಟ್ಟರೆ, ಬೇರೆ ಯಾವ ಆಶೆಯೂ ನನಗಿಲ್ಲ. ಅವರಿಗೂ ಇಂಥ ಮಹಾಭಾಗ್ಯವಿತ್ತು ನನ್ನ ಬಾಧೆ ಪರಿಹರಿಸಬೇಕು. ನನ್ನ ಆತಿಥ್ಯಕ್ಕಾಗಿ ಹೇಗೆ ಇಲ್ಲಿಗೆ ದಯಮಾಡಿಸಿದಿರೋ ಹಾಗೇ ನನ್ನ ಅಣ್ಣ ಧರ್ಮಜನ ಬಳಿಗೂ ನಿಮ್ಮ ಶಿಷ್ಯಕೋಟಿಯೊಂದಿಗೆ ಹೋಗಿ ಅವರಿಗೂ ಕೂಡ ಇಂಥ ಆತಿಥ್ಯದ ಸದವಕಾಶವಿತ್ತರೆ ಅದೇ ಸಾಕು. ನಮ್ಮ ವಂಶಕ್ಕೆ ಜೇಷ್ಠನಾದವನು ಧರ್ಮಜ. ಧರ್ಮಪಾಶಕ್ಕೆ ಬದ್ಧನಾಗಿ, ಬೇಡವೆಂದರೂ ಕೇಳದೆ ಅರಣ್ಯಕ್ಕೆ ಹೋದ. ಅಲ್ಲಿಯೂ ಸಹಿತ ನಿತ್ಯವೂ ಲಕ್ಷಾಂತರ ಜನ ಅತಿಥಿ ಅಭ್ಯಾಗತರುಗಳಿಗೆ ಆತಿಥ್ಯ ನೀಡುತ್ತಿರುವನೆಂದೂ ಸಂತರ್ಪಣೆಗಳನ್ನು ನಡೆಸುತ್ತಿ ದ್ದಾನೆಂದೂ ಕೇಳಿದೆ. ಇಲ್ಲಿಗಿಂತ ಸಾವಿರದಷ್ಟು ಅಧಿಕಪಾಲು ಆಹಾರ ಪದಾರ್ಥಗ ಳಿಂದ ನಿಮ್ಮ ಸೇವೆ ಮಾಡಬಲ್ಲ. ಆದ್ದರಿಂದ, ತಾವು ನನ್ನನ್ನು ಅನುಗ್ರಹಿಸಿ, ನನ್ನ ಈ ಒಂದು ಕೋರಿಕೆ ನೆರವೇರಿಸಿ ಧನ್ಯನನ್ನಾಗಿ ಮಾಡಬೇಕು,' ಎಂದು ಅವರ ಪಾದಗಳ ಮೇಲೆ ಬಿದ್ದ.

ದುರ್ವಾಸರು ಫಕ್ಕನೆ ನಕ್ಕು, 'ದುರ್ಯೋಧನಾ! ನಿನ್ನ ಅಭೀಷ್ಟದಂತೆ ನಾನು ಈಗಲೇ ಶಿಷ್ಯವೃಂದದೊಂದಿಗೆ ಹೊರಟು, ನಿಮ್ಮ ಸೋದರ ಧರ್ಮಜನ ಆತಿಥ್ಯ ಸ್ವೀಕರಿಸುತ್ತೇನೆ,' ಎಂದರು. ತಮ್ಮ ಶಿಷ್ಯವೃಂದಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಿ ಕೊಳ್ಳುವಂತೆ ಹೇಳಿ, ದುರ್ವಾಸಮುನಿ ಅರಣ್ಯಕ್ಕೆ ಹೊರಡಲು ಸಿದ್ಧರಾದರು. ದುರ್ಯೋಧನ ಅತಿ ವಿನಯ ವಿಧೇಯತೆಗಳನ್ನು ಪ್ರದರ್ಶಿಸುತ್ತಾ ಕೈಕಟ್ಟಿಕೊಂಡು ದುರ್ವಾಸರ ಪಾದಗಳ ಬಳಿ ಮಂಡಿಯೂರಿ ಕುಳಿತು, ತನ್ನ ಮತ್ತೊಂದು ಪ್ರಾರ್ಥನೆ ಯನ್ನು ಮನ್ನಿಸಬೇಕೆಂದು ಕೋರಿದ.

ಮಹರ್ಷಿ ದುರ್ವಾಸರು ಮಂದಹಾಸದಿಂದ, 'ಮಗೂ! ಅದೇನು ಕೇಳು,' ಎನ್ನಲು, ದುರ್ಯೋಧನ ದುರಾಲೋಚನೆ, ದುರ್ಬುದ್ಧಿಗಳನ್ನು ಒಳಗೊಳಗೇ ದೃಢಪಡಿಸಿ ಕೊಂಡು, ಪಾಂಡವರನ್ನು ನಾಶಪಡಿಸಬೇಕೆನ್ನುವ ಸಂಕಲ್ಪದಿಂದ, 'ಸ್ವಾಮೀ! ತಾವು ಧರ್ಮಜನ ಆತಿಥ್ಯವನ್ನು ಸ್ವೀಕರಿಸಲು ಹೋಗುತ್ತಿದ್ದೀರಿ. ನನ್ನ ಈ ಒಂದು ಕೋರಿಕೆ ನಡೆಸಬೇಕು. ದ್ರೌಪದಿ ಊಟ ಮಾಡಿದ ನಂತರ ನೀವು ಅಲ್ಲಿಗೆ ಹೋಗಿ ಸೇರಿದರೆ, ಅವರ ಮಹತ್ತರವಾದ ಶಕ್ತಿ, ಭಕ್ತಿಗಳನ್ನು ತಿಳಿಯಬಹುದು. ಆದ್ದ ರಿಂದ, ಸ್ವಲ್ಪ ತಡವಾಗಿ ಹೊರಟು, ಅವರೆಲ್ಲರೂ ಭೋಜನಾದಿಗಳನ್ನು ಮುಗಿಸಿ, ವಿಶ್ರಾಂತಿ ಪಡೆಯುತ್ತಿರುವ ಸಮಯದಲ್ಲಿ ಹೋಗಿ, ತಮಗೂ ತಮ್ಮ ಭಕ್ತವೃಂದಕ್ಕೂ

ಭೋಜನದ ವ್ಯವಸ್ಥೆ ಮಾಡುವಂತೆ ಧರ್ಮಜನನ್ನು ಕೋರಿದರೆ, ನೀವು ನನಗೆ ಮಹದಾನಂದವಿತ್ತ ಹಾಗೆ ಆಗುವುದು. ನನ್ನನ್ನು ಧನ್ಯನನ್ನು ಮಾಡಿದ ಹಾಗೆ ಆಗುವುದು,' ಎಂದು ನಮಸ್ಕರಿಸಿದ. ದುರ್ವಾಸರು, 'ಸರಿ! ಹಾಗೇ ಮಾಡುತ್ತೇನೆ,' ಎಂದು ಹೊರಟರು.

ದುರ್ಯೋಧನನ ಪ್ರಾರ್ಥನೆಯಲ್ಲಿ ಒಂದು ಅಂತರಾರ್ಥವಿತ್ತು. ಹಿಂದೊಂದು ದಿನ, ಪಾಂಡವರ ಪ್ರಾರ್ಥನೆಗೆ ಸೂರ್ಯದೇವ ಪ್ರಸನ್ನನಾಗಿ ಒಂದು ಅಕ್ಷಯ ಪಾತ್ರೆಯನ್ನು ಅನುಗ್ರಹಿಸಿದ್ದ. ಪಾಂಡವರು ಊಟ ಮಾಡಿದ ನಂತರವೇ ದ್ರೌಪದಿ ಊಟ ಮಾಡುವುದು ಆ ಮಹಾ ಸಾಧ್ವೀಮಣಿಯ ಪದ್ಧತಿ. ಅವಳು ಊಟ ಮಾಡುವವರೆಗೂ ಆ ಪಾತ್ರೆಯಿಂದ ಎಷ್ಟು ತೆಗೆದರೂ ಅದು ಬರಿದಾಗದೆನ್ನುವುದು ಸೂರ್ಯ ಕೊಟ್ಟ ವರ.

ಅಲ್ಲದೆ, ದಿನಕ್ಕೆ ಒಂದು ಸಾರಿ ವಿನಾ ಎರಡು ಮೂರು ಸಾರಿ ಅದರಿಂದ ಅಡಿಗೆ ಪದಾರ್ಥಗಳನ್ನು ಪಡೆಯುವಂತಿರಲಿಲ್ಲ. ಒಂದು ಸಾರಿ, ದ್ರೌಪದಿ ಊಟ ಮಾಡುವ ಮೊದಲು, ಎಷ್ಟು ಲಕ್ಷ ಜನರಿಗಾದರೂ ದಿನವೆಲ್ಲಾ ಬಡಿಸಿದರೂ ಅದು ಖಾಲಿ ಆಗುತ್ತಿರಲಿಲ್ಲ. ಅಂದರೆ ಆ ಪಾತ್ರೆಯಲ್ಲಿ ಅಡಿಗೆ ಎಷ್ಟು ಸ್ವಲ್ಪವಿದ್ದರೂ ಸಾಕು, ಅದರ ಮೂಲಕ ಅಗತ್ಯವಿದ್ದಷ್ಟು ಪದಾರ್ಥ ಹೆಚ್ಚುತ್ತಿತ್ತು. ಅದು ಆ ಪಾತ್ರೆಯ ಶಕ್ತಿ!

ಇದನ್ನು ತಿಳಿದೇ ದುರ್ಯೋಧನ ದುರ್ವಾಸರನ್ನು ಹಾಗೆ ಪ್ರಾರ್ಥಿಸಿದ್ದು. ದ್ರೌಪದಿ ಊಟ ಮಾಡಿದ ನಂತರ ಆ ಪಾತ್ರೆಯನ್ನು ಶುಭ್ರವಾಗಿ ತೊಳೆದಿಡುವಳು. ಅದರಲ್ಲಿ ಎಷ್ಟು ಮಾತ್ರಕ್ಕೂ ಏನೂ ಉಳಿದಿರುವುದಿಲ್ಲ. ಅಂಥ ಸಮಯದಲ್ಲಿ ಮಹರ್ಷಿ ಹೋಗಿ ಭೋಜನ ನೀಡಬೇಕೆಂದು ಕೇಳಿದರೆ, ಅವರನ್ನೂ ಅವರ ಪರಿವಾರವನ್ನೂ ಪಾಂಡವರು ಸಂತೃಪ್ತಿ ಪಡಿಸಲಾರರು. ಆಗ ಮಹರ್ಷಿ ಖಂಡಿತವಾಗಿ ಕೆರಳುತ್ತಾನೆ. ಪಾಂಡವರಿಗೆ ಶಾಪ ಕೊಡುತ್ತಾನೆ. ಪೀಡೆ ತೊಲಗುವುದು. ಆಮೇಲೆ ನಿರಾತಂಕ ವಾಗಿ ಜೀವಿಸಬಹುದು ಎನ್ನುವುದೇ ದುರ್ಯೋಧನನ ದುರಾಲೋಚನೆ.

ಆದರೆ, ಪಾಂಡವರು ಅನ್ಯರನ್ನು ಆಶ್ರಯಿಸಿದವರಲ್ಲ. ಪರಮಾತ್ಮನನ್ನು ಆಶ್ರಯಿಸಿದ ವರು, ಅಲ್ಲವೇ? ಅಂಥವರಿಗೆ ಎಂಥ ಮಹರ್ಷಿಯ ಶಾಪವೂ ಏನೂ ಮಾಡಲಾ ರದು. ಸರ್ವರಕ್ಷಕನಾದ ಸರ್ವೇಶ್ವರನೇ ಪಾಂಡವರ ಪಕ್ಷದಲ್ಲಿರುವಾಗ, ದುಷ್ಟ ಬುದ್ಧಿಗಳ ಸಮಸ್ತ ಶಕ್ತಿಯೂ ಅವರ ಕೈಯಲ್ಲಿ ಸೋತು ನಿರ್ನಾಮವಾಗದೆ ಇರುವುದೇ? ತಾನೊಂದು ಬಗೆದರೆ, ದೈವ ಇನ್ನೊಂದು ಬಗೆಯುವುದೆನ್ನುವುದನ್ನು ಆ ಧೂರ್ತರು ತಿಳಿಯಲಿಲ್ಲ.

ದುರ್ವಾಸರು, ದುರ್ಯೋಧನನ ಅಪೇಕ್ಷೆಯಂತೆ, ದ್ರೌಪದಿ ಊಟಮಾಡಿ, ಪಾತ್ರೆಯನ್ನು ಶುಭ್ರವಾಗಿ ತೊಳೆದು, ತಾಂಬೂಲ ಹಾಕಿ ಕೊಳ್ಳುತ್ತಾ ಪರ್ಣಶಾಲೆಯ ಮುಂದೆ ಪಾಂಡವರೊಡನೆ ಕುಳಿತಿರುವ ಸಮಯದಲ್ಲೇ ಹತ್ತು ಸಹಸ್ರ ಶಿಷ್ಯರೊಂದಿಗೆ ಅಲ್ಲಿಗೆ ಬಂದರು. ಮಹರ್ಷಿ ಬಂದುದನ್ನು ಗಮನಿಸಿ, ಧರ್ಮಜ ಥಟ್ಟನೆ ಹೋಗಿ, ಅವರ ಪಾದಗಳನ್ನು ತೊಳೆದು, ಪೂಜಿಸಿ, ನಮಸ್ಕರಿಸಿದ. 'ಧನ್ಯನಾದೆ, ಮಹರ್ಷಿಗಳ ದರ್ಶನವಾಯಿತು. ಈ ದಿನ ಮಹಾ ಸುದಿನ,' ಎಂದು, ಆನಂದ ಬಾಷ್ಪಗಳನ್ನು ಸುರಿಸುತ್ತಾ ಕೈಜೋಡಿಸಿ ನಿಂತ. ತಮ್ಮಂದಿರೂ ದ್ರೌಪದಿಯೂ ಅವರಿಗೆ ನಮಸ್ಕರಿಸಿ ವಿನಯ ವಿಧೇಯತೆಗಳಿಂದ ತಲೆಬಾಗಿ ನಿಂತರು. ದುರ್ವಾಸರು ಪ್ರಯಾಣದ ಆಯಾಸದಿಂದ ಬಳಲಿದಂತೆ ತೋರಿಸಿ ಕೊಳ್ಳುತ್ತಾ, 'ಧರ್ಮಜಾ! ನಾವು ಸ್ನಾನ ಸಂಧ್ಯಾದಿಗಳನ್ನು ಆಚರಿಸಿಕೊಂಡು ಬರುತ್ತೇವೆ. ನನ್ನ ಹತ್ತು ಸಾವಿರ ಶಿಷ್ಯರಿಗೂ ನನಗೂ ಭೋಜನ ಸಿದ್ಧ ಪಡಿಸು,' ಎಂದು ಹೇಳಿ, ನೆಟ್ಟಗೆ ನದೀ ಸ್ನಾನಕ್ಕೆ ಹೊರಟುಹೋದರು.

ಆ ಮಾತು ಕೇಳಿ ಧರ್ಮಜನ ಎದೆ ಝಲ್ಲೆಂದಿತು. ಒಳಗೆ ಹೋಗಿ ದ್ರೌಪದಿಯನ್ನು ವಿಚಾರಿಸಿದ. ಪಾತ್ರೆಯನ್ನು ಆಗಲೇ ಶುಭ್ರವಾಗಿ ತೊಳೆದಿಟ್ಟಿರುವುದಾಗಿ ದ್ರೌಪದಿ ಹೇಳಿದಳು. ಇನ್ನು ಗತಿಯೇನೆಂದು ಅವರೆಲ್ಲರೂ ಚಿಂತೆಯಲ್ಲಿ ಮುಳುಗಿ ಹೋದರು. ಹತ್ತು ಸಾವಿರ ಮಂದಿಗೆ ಊಟದ ವ್ಯವಸ್ಥೆಯಾಗಬೇಕು! 'ಅಯ್ಯೋ ದೈವವೇ! ಈ ದಿನ ಏನು ಸಂಭವಿಸುವುದೋ?' ಎಂದು ಎಲ್ಲಿದ್ದವರು ಅಲ್ಲೇ ಕುಸಿದು ಹೋದರು.

ದ್ರೌಪದಿ ಗೃಹಲಕ್ಷ್ಮಿ, ಎಂತಲೇ ಅತಿಥಿಗಳಿಗೆ ಅನ್ನ ನೀಡುವುದು ಆಕೆಗೆ ನಿಜಕ್ಕೂ ಆನಂದವೇ. ಆದರೆ ಇದು ಅಕಾಲ. ಅದರಲ್ಲೂ ಅಡವಿಯಲ್ಲಿ ಬೇಕೆಂದಾಗ ತಕ್ಷಣ ಆಹಾರ ಸಿಕ್ಕುವುದಿಲ್ಲ. ಆದ್ದರಿಂದ, ಅವಳು ಮತ್ತಷ್ಟು ಯೋಚನೆಯಲ್ಲಿ ಮುಳುಗಿದಳು. 'ಬಂದಿರುವವರೋ ಸಾಮಾನ್ಯರಲ್ಲ. ದುರ್ವಾಸ ಮಹರ್ಷಿ! ಅವರ ಶಕ್ತಿ ಸಾಮರ್ಥ್ಯಗಳು ಲೋಕಕ್ಕೇ ಗೊತ್ತು. ಅವರು ಬೇಕಾದರೆ ನಿಮಿಷದಲ್ಲಿ ಎಲ್ಲವನ್ನೂ ಭಸ್ಮ ಮಾಡಬಲ್ಲರು! ಈ ದಿನ ಪತಿಗಳಿಗೆ ಏನು ಕೇಡು ಸಂಭವಿಸುವುದೋ?' ಎಂದು ಆ ಗೃಹಿಣಿ ಒಳಗೊಳಗೇ ಕೊರಗಿ ಕುಗ್ಗಿ ಹೋದಳು.

ಅವಳಿಗೆ ಏನೂ ತೋಚಲಿಲ್ಲ. ಕಡೆಗೆ, ಆಪತ್ಕಾಲದಲ್ಲಿ ಭಗವಂತನಲ್ಲದೆ ರಕ್ಷಿಸುವವರು ಬೇರೆ ಯಾರಿದ್ದಾರೆ ಎಂದು ಯೋಚಿಸಿ, ಕೃಷ್ಣನನ್ನು ಸ್ಮರಿಸುತ್ತಾ, 'ಗೋಪಾಲ! ಈ ದಿನ ನನ್ನ ಪತಿಗಳನ್ನು ಕಾಪಾಡಿ, ಬಂದ ಈ ಆಪತ್ತನ್ನು ನಿವಾರಿಸು. ಋಷಿಯನ್ನು ಸಂತೃಪ್ತಿ ಪಡಿಸಲು ನೀನಲ್ಲದೆ ದಿಕ್ಕು ಬೇರೊಬ್ಬರಿಲ್ಲ,' ಎಂದು

ಕಣ್ಣೀರ ಕಾಲುವೆ ಹರಿಸುತ್ತಾ, ಹರಿಯನ್ನು ಕೂಗುತ್ತಾ ಶ್ಯಾಮಸುಂದರನನ್ನು ಬಹು ವಿಧವಾಗಿ ಪ್ರಾರ್ಥಿಸಲಾರಂಭಿಸಿದಳು. ಕಡೆಗೆ, 'ನನಗೆಂಥ ಆಪತ್ತು ಬಂದರೂ, ಅವಮಾನವಾದರೂ ಸಹಿಸುತ್ತೇನೆ. ಆದರೆ, ನನ್ನ ಪತಿಗಳನ್ನು ರಕ್ಷಿಸಿ ನನ್ನ ಮಾಂಗಲ್ಯ ಉಳಿಸು,' ಎಂದು ಗಟ್ಟಿಯಾಗಿ ಗೋಳಿಟ್ಟಳು.

ಹೊರಗಿದ್ದ ಪಾಂಡವರು ಅವಳ ಅಳುವನ್ನು ಕೇಳಿ, ಮತ್ತಷ್ಟು ಸಂಕಟಪಟ್ಟರು. ಅವರೂ ಕೃಷ್ಣನನ್ನು ನೆನೆಯುತ್ತಾ, 'ನಂದನಂದನಾ! ಇಷ್ಟೊಂದು ಆಪತ್ತುಗಳನ್ನು ತಪ್ಪಿಸಿದೆ. ಇಷ್ಟು ಕಾಲವೂ ಕಣ್ಣ ರೆಪ್ಪೆಯಂತೆ, ದಟ್ಟಡವಿಯಲ್ಲೂ ಕೈಬಿಡದೆ ಕರುಣೆ ಯಿಟ್ಟು ಕಾಪಾಡಿದೆ. ಈ ದಿನ ಮಾತ್ರ ನಮ್ಮನ್ನು ಇಂಥ ಇಕ್ಕಟ್ಟಿಗೆ ಗುರಿಮಾಡಿದೆಯಾ? ನಮ್ಮ ಪಾಪ ಏನೇ ಇದ್ದರೂ ನಮ್ಮನ್ನು ಕ್ಷಮಿಸಿ, ಮಹರ್ಷಿಗೂ ಅವರ ಶಿಷ್ಯ ವೃಂದಕ್ಕೂ ಸಂತುಷ್ಟಿಯಾಗುವಂತೆ ಮಾಡು,' ಎಂದು ಪ್ರಾರ್ಥಿಸಿದರು. ಪಾಂಡವರ ಪ್ರಾರ್ಥನೆ, ದ್ರೌಪದಿಯ ಆರ್ತನಾದ ಮಥುರೆಯಲ್ಲಿದ್ದ ಕೃಷ್ಣನ ಮನಸ್ಸನ್ನು ಕರಗಿ ಸಿತು, ಗೋಪಾಲನನ್ನು ಕದಲಿಸಿತು.

ಪಾಂಡವರಿಗೆ ಏನೋ ನಡಿಗೆ ಶಬ್ದ ಕೇಳಿಸಿತು. ಸ್ನಾನಾದಿಗಳನ್ನು ಮುಗಿಸಿಕೊಂಡು ದುರ್ವಾಸ ಶಿಷ್ಯವೃಂದ ಬಂದಿತೇನೋ ಎಂದು ತಲೆ ಎತ್ತಿ ನೋಡಿದರು. ಶ್ಯಾಮ ಸುಂದರ ಮುಗುಳುನಗೆ ನಗುತ್ತಾ ಪರ್ಣಶಾಲೆ ಪ್ರವೇಶಿಸುತ್ತಿರುವುದನ್ನು ನೋಡಿ, 'ಕೃಷ್ಣಾ, ಕೃಷ್ಣಾ,' ಎಂದು ಹರ್ಷೋದ್ಗಾರ ಮಾಡಿದರು.

ಆ ಕೂಗನ್ನು ಕೇಳಿ ದ್ರೌಪದಿ, ವಿಷಯ ಏನೆನ್ನುವುದನ್ನು ತಿಳಿಯದೆ ಗಾಬರಿ ಯಾಗಿ ಬಂದು ನೋಡಲು, ಗೋಪಾಲ ಕಾಣಿಸಿದ. ಆಶ್ಚರ್ಯ, ಆನಂದದಿಂದ ಮೈಮರೆತಳು. ಒಂದು ನಿಮಿಷ ಏನೂ ತೋಚಲಿಲ್ಲ. ಕಡೆಗೆ ಗೋಪಾಲ ಭಕ್ತರಕ್ಷಣೆಯ ಬಾಧ್ಯತೆ ನೆರವೇರಿಸಲು ಬಂದಿದ್ದಾನೆ ಎಂದು ತಿಳಿದು, ಹೊರಗೆ ಬಂದು ಕೃಷ್ಣನ ಪಾದಗಳ ಮೇಲೆ ಬಿದ್ದು, ಕಣ್ಣೀರ ಕಾಲುವೆಯಿಂದ ಪಾದಗಳನ್ನು ತೊಳೆದಳು. ಮಹರ್ಷಿಯನ್ನು ಸಂತೃಪ್ತಿಪಡಿಸಿ, ಮಾಂಗಲ್ಯ ಉಳಿಸು ಎಂದು ಪ್ರಾರ್ಥಿಸಿದಳು.

ಅವಳ ಮಾತು ಕೇಳಿಸದವನಂತೆ, ಹಸಿವಿನಿಂದ ಬಳಲಿದವನಂತೆ ನಟಿಸುತ್ತಾ, 'ತಂಗೀ! ಏನಿದು ನಿನ್ನ ಅಳು. ಮೊದಲು ನನ್ನ ಹಸಿವು ತೀರಿಸು. ಆಮೇಲೆ ನಿನ್ನ ಕೋರಿಕೆ ಏನೋ ತಿಳಿಸು, ಮೊದಲು ನನಗಿಷ್ಟು ಅನ್ನ ಹಾಕು,' ಎಂದು, ಎರಡು ಕೈಗಳನ್ನೂ ಚಾಚಿದ ಕೃಷ್ಣನನ್ನು ನೋಡಿ ದ್ರೌಪದಿ, 'ಕೃಷ್ಣಾ! ನಮ್ಮ

ಪರೀಕ್ಷೆಯ ಸಮಯ ಇದು. ತಡಮಾಡದೆ ರಕ್ಷಿಸು,' ಎಂದು ಸೆರಗಿನಿಂದ ಕಣ್ಣೀರು ಒರೆಸಿಕೊಳ್ಳುತ್ತಾ ಪತಿಭಿಕ್ಷೆ ಕೊಡು ಎಂದು ಸೆರಗೊಡ್ಡಿ ಬೇಡಿದಳು.

ಕೃಷ್ಣ ದ್ರೌಪದಿಯ ತಲೆ ಸವರುತ್ತಾ, 'ತಂಗೀ! ಪ್ರತಿಯೊಂದು ಸಣ್ಣ ವಿಷಯಕ್ಕೂ ಹೆಂಗಸರು ಕಣ್ಣೀರು ಹಾಕುವುದು ಅಭ್ಯಾಸ. ಕಣ್ಣೀರು ಎಂದರೆ ಹೆಂಗಸರಿಗೆ ಬಹಳ ಪ್ರೀತಿ. ಕಣ್ಣೀರಿನಿಂದ ಹೊಟ್ಟೆ ತುಂಬುವುದಿಲ್ಲ. ಕೆಲಸವಾಗುವುದಿಲ್ಲ. ಆದರೂ ಈ ದಿವಸದ ನಿನ್ನ ಕಣ್ಣೀರಿಗೆ ಕಾರಣವೇನು ಹೇಳು. ಕೇಳಿ ಆನಂದಿಸುತ್ತೇನೆ,' ಎಂದು ಪರಿಹಾಸ್ಯದ ಮಾತನಾಡಿದ ಕೃಷ್ಣನನ್ನು ನೋಡಿ ದ್ರೌಪದಿ, 'ಗೋಪಾಲಾ! ನೀನು ಈ ದಿವಸ ಭಿಕ್ಷೆಗೆ ಬಂದವರಲ್ಲಿ ಎರಡನೆಯವನು. ನಿನಗೆ ಊಟ ಹಾಕದಿದ್ದರೂ ನೀನು ಕೋಪಿಸಿಕೊಂಡು ಶಪಿಸುವುದಿಲ್ಲ. ಆದರೆ, ಮತ್ತೊಬ್ಬ ಭಿಕ್ಷುಕ, ಹತ್ತು ಸಾವಿರ ಮಂದಿ ಶಿಷ್ಯರೊಂದಿಗೆ ಬಂದು, ಹಸಿವು ಹಸಿವು ಎಂದು ನಮ್ಮನ್ನು ತಿನ್ನಲು ನೋಡುತ್ತಿದ್ದಾನೆ. ಅವನ ಕ್ರೋಧಾಗ್ನಿಗೆ ಬಿದ್ದು ನಾವು ಭಸ್ಮವಾಗದಂತೆ ಕಾಪಾಡು. ಈ ಅರಣ್ಯದಲ್ಲಿ ಒಂದು ಕಾಳು ಧಾನ್ಯ ಕೂಡ ಸಿಕ್ಕದು. ಇಂಥ ಅವೇಳೆಯಲ್ಲಿ ಇಷ್ಟು ಜನ ಅತಿಥಿಗಳ ಹಸಿವು ಹೇಗೆ ತೀರಿಸಬೇಕು?' ಎಂದು, ಎಲ್ಲ ವಿಷಯವನ್ನೂ ಹೇಳಿದಳು.

ಗೋಪಾಲ ನಕ್ಕು, 'ದ್ರೌಪದೀ, ಯಾರು ಈ ಹತ್ತು ಸಾವಿರ ಮಂದಿ ಅತಿಥಿಗಳು? ಒಬ್ಬರಾದರೂ ನನ್ನ ಕಣ್ಣಿಗೆ ಬೀಳುತ್ತಿಲ್ಲವಲ್ಲಾ. ನಿನ್ನ ಮಾತು ಕೇಳಿ ನಗು ಬರುತ್ತಿದೆ. ಯಾವುದೋ ದೂರದ ಮಗುವನ್ನು ಮುದ್ದಾಡಲು ತೊಡೆಯ ಮೇಲಿರುವ ಮಗುವನ್ನು ಬಿಸಾಡುತ್ತಿದ್ದೀಯಲ್ಲಾ! ಮೊದಲು ನನ್ನ ಹಸಿವು ತೀರಿಸು. ಆಮೇಲೆ ಎಲ್ಲೋ ಇರುವವರ ವಿಷಯ ನೋಡಿಕೊಂಡರಾಯಿತು,' ಎಂದು, ಹಟಹಿಡಿದು ನಿಜವಾಗಿಯೂ ಹಸಿದವನಂತೆ ನಟಿಸಿದ. ದ್ರೌಪದಿ ಇದನ್ನು ತಿಳಿದು, 'ಸ್ವಾಮೀ ಅಡಿಗೆಯನ್ನೆಲ್ಲಾ ಎಲ್ಲರಿಗೂ ಬಡಿಸಿ, ನಾನೂ ಊಟ ಮಾಡಿ, ಸೂರ್ಯದತ್ತವಾದ ಪಾತ್ರೆಯನ್ನು ಪರಿಶುದ್ಧವಾಗಿ ತೊಳೆದಿಟ್ಟಿದ್ದೇನೆ. ನಾನಿನ್ನು ನಿನ್ನ ಹಸಿವನ್ನು ಹೇಗೆ ತೀರಿಸಲಿ? ಯಾರನ್ನು ಆಶ್ರಯಿಸಲಿ? ನೀನಲ್ಲದೆ ಈ ಪಾಂಚಾಲಿಗಾಗಲೀ ಪಾಂಡವರಿಗಾಗಲೀ ಬೇರೆ ದಿಕ್ಕಿಲ್ಲವಲ್ಲವೇ? ಎಲ್ಲವನ್ನೂ ತಿಳಿದ ನೀನೇ ನಮ್ಮನ್ನು ಹೀಗೆ ಗೋಳಾಡಿಸಿದರೆ, ಬೇರೆಯವರ ವಿಷಯ ಏನು ಹೇಳಬೇಕು?' ಎಂದು ಮತ್ತೆ ಕಣ್ಣೀರು ಹಾಕಿದಳು.

ಗೋಪಾಲ ಪರಿಹಾಸ್ಯ ಪರಿಕ್ಷೆಗಳನ್ನು ನಿಲ್ಲಿಸಿ, 'ದ್ರೌಪದೀ! ಎಲ್ಲಿ, ನೀನು ಬೆಳಿಗ್ಗೆ ಬಡಿಸಿದ ಆ ಪಾತ್ರೆ ತೆಗೆದುಕೊಂಡು ಬಾ. ಅದರಲ್ಲಿ ಎಷ್ಟು ಸ್ವಲ್ಪ ಪದಾರ್ಥ ಸಿಕ್ಕರೂ ಸಾಕು ನನಗೆ ತೃಪ್ತಿಯಾಗುವುದು,' ಎಂದ. ದ್ರೌಪದಿ ಒಳಗೆ ಹೋಗಿ ಶುಭ್ರವಾಗಿ

ತೊಳೆದಿಟ್ಟಿದ್ದ ಪಾತ್ರೆಯನ್ನು ತಂದು ಗೋಪಾಲನ ಕೈಯಲ್ಲಿಟ್ಟಳು. ಗೋಪಾಲ ಆ ಪಾತ್ರೆಯನ್ನು ಚೆನ್ನಾಗಿ ಪರೀಕ್ಷಿಸಿ ನೋಡಿ, ಪಾತ್ರೆಯ ಕಂಠದಲ್ಲಿ ಒಂದು ಸಣ್ಣ ಸೊಪ್ಪಿನ ಚೂರು ಸಿಕ್ಕಿಕೊಂಡಿದ್ದನ್ನು ಕಂಡು, 'ದ್ರೌಪದೀ! ಇವೊತ್ತು ಸೊಪ್ಪಿನ ಪಲ್ಯ ಮಾಡಿದ್ದೀಯೇನು?' ಎಂದ.

ದ್ರೌಪದಿ, 'ಏನು! ನಾನು ತೊಳೆದಿಟ್ಟ ಪಾತ್ರೆಯಲ್ಲಿ ಸೊಪ್ಪಿನ ಚೂರೇ? ಇದು ನಿನ್ನ ಮಹಿಮೆಯಲ್ಲದೆ ಬೇರೆ ಅಲ್ಲ. ನಾನು ಏನೇ ಕೆಲಸ ಮಾಡಿದರೂ ಸರಿಯಾಗಿ ಮಾಡುತ್ತೇನೆ,' ಎಂದು ನಕ್ಕು, ಅದನ್ನು ನೋಡಲು ಕೃಷ್ಣನ ಹತ್ತಿರ ಬಂದಳು. 'ನೋಡು ಈ ಪಾತ್ರೆಯಲ್ಲಿ ಸೊಪ್ಪಿನ ಚೂರೊಂದು ಇದೆ! ಇದು ನನ್ನ ಹಸಿವನ್ನಷ್ಟೇ ಅಲ್ಲ, ಚರಾಚರ ಪ್ರಪಂಚದ ಹಸಿವನ್ನೂ ತೃಪ್ತಿಗೊಳಿಸಬಲ್ಲದು,' ಎಂದು ಹೇಳುತ್ತಾ ಕೃಷ್ಣ ಅದನ್ನು ಕೈಯಿಂದ ತೆಗೆದು ತನ್ನ ನಾಲಿಗೆ ಮೇಲೆ ಹಾಕಿಕೊಂಡು, 'ಅಬ್ಬಾ, ಹಸಿವು ಅಡಗಿತು,' ಎಂದು ತೇಗಿದ.

ಆ ಕ್ಷಣದಲ್ಲೇ ನದಿಯಲ್ಲಿ ಸ್ನಾನ ಮಾಡುತ್ತಿದ್ದ ದುರ್ವಾಸರಿಗೂ ಅವನ ಹತ್ತು ಸಾವಿರ ಶಿಷ್ಯರಿಗೂ ಹೊಟ್ಟೆ ತುಂಬಿತು. ಕದಲುವುದೇ ಕಷ್ಟ ಎನ್ನುವಂತಾಯಿತು. ಹಸಿವಿನಿಂದ ಬಳಲುತ್ತಿದ್ದ ಅವರ ಬಾಧೆ ಒಮ್ಮೆಲೇ ತೀರಿ, ತೃಪ್ತಿ ಆನಂದ ಉಂಟಾದುದನ್ನು ತಿಳಿದು ಅವರು ಒಬ್ಬರಿಗೊಬ್ಬರು ತಮ್ಮ ತಮ್ಮಲ್ಲೇ ಸಂಜ್ಞೆ ಮಾಡಿಕೊಳ್ಳುತ್ತಾ, 'ಅಬ್ಬಾ! ಹೊಟ್ಟೆ ತುಂಬಿ ಹೋಗಿದೆ. ಇನ್ನು ಒಂದು ತುತ್ತೂ ಒಳಗೆ ಹೋಗಲಾರದು. ಧರ್ಮಜ ಎಲ್ಲ ಬಗೆಯ ಭಕ್ಷ್ಯ ಮಾಡಿಸಿರುತ್ತಾನೆ. ನಾವು ತಿನ್ನದಿದ್ದರೆ ಅವನು ಬಿಡುವುದಿಲ್ಲ. ಅವನ ತೃಪ್ತಿಗಾದರೂ ತಿನ್ನೋಣವೆಂದರೆ ಹೊಟ್ಟೆಯಲ್ಲಿ ಏನೇನೂ ಸ್ಥಳವಿಲ್ಲ. ಏನು ಮಾಡುವುದು?' ಎಂದು ಯೋಚಿಸುತ್ತಾ, ಅಂಬರೀಷನ ಶಾಪ ಅವರ ಜ್ಞಾಪಕಕ್ಕೆ ಬಂದು, ದುರ್ವಾಸರನ್ನು ಎಚ್ಚರಿಸಿದರು. ದುರ್ವಾಸರು ಅವರ ಸಲಹೆಯಂತೆ ಧರ್ಮಜನನ್ನು ಅಲ್ಲಿಂದಲೇ ಆಶೀರ್ವದಿಸಿದರು. ಅರಣ್ಯದಲ್ಲಿ ಬೇರೊಂದು ಮಾರ್ಗ ಹಿಡಿದು ಹೊರಡುವುದರಲ್ಲಿದ್ದರು.

ಅಷ್ಟರಲ್ಲಿ, ಗೋಪಾಲ ಭೀಮನನ್ನು ಕರೆದು ಸ್ನಾನಕ್ಕೆ ಹೋಗಿದ್ದ ದುರ್ವಾಸರನ್ನೂ ಅವರ ಶಿಷ್ಯರನ್ನೂ ಊಟಕ್ಕೆ ಕರೆತರುವಂತೆ ಹೇಳಿದ. ಭೀಮ ಒಡನೆಯೇ ನದೀ ತೀರಕ್ಕೆ ಹೋಗಲು, ಅವನನ್ನು ನೋಡಿ ಶಿಷ್ಯರು ಓಡಿಹೋಗಲು ಪ್ರಯತ್ನಿಸಿದರು. ಭೀಮ ದುರ್ವಾಸರ ಬಳಿಗೆ ಹೋಗಿ, 'ಸ್ವಾಮೀ! ತಮಗಾಗಿ ಊಟ ಸಿದ್ಧವಾಗಿದೆ, ತಪ್ಪದೆ ಬರಬೇಕು, ಅಣ್ಣನವರ ಆಜ್ಞೆ,' ಎಂದು ಬಿನ್ನವಿಸಿದ.

ದುರ್ವಾಸರು, 'ಭೀಮಾ, ನಮ್ಮಿಂದ ಸಾಧ್ಯವಿಲ್ಲ. ನಾವು ಒಂದು ತುತ್ತು ಕೂಡ ತಿನ್ನುವ ಸ್ಥಿತಿಯಲ್ಲಿಲ್ಲ. ಒತ್ತಾಯ ಮಾಡಬೇಡ. ನಿಮಗೆ ಸರ್ವಶುಭ ಉಂಟಾಗುವುದು. ನೀವು ಸಮಸ್ತ ಭೂಮಂಡಲಕ್ಕೂ ಏಕಚಕ್ರಾಧಿಪತಿಗಳಾಗಿ ಆಳುವ ಸಮಯದಲ್ಲಿ ನಾನೊಮ್ಮೆ ಬಂದು ನಿಮ್ಮ ಅತಿಥ್ಯ ಸ್ವೀಕರಿಸುತ್ತೇನೆ. ನಿಮ್ಮ ನಾಶವನ್ನು ಬಯಸಿ ಯಾರು ಪಾಪಬುದ್ಧಿಯಿಂದ ನಿಮ್ಮ ಬಳಿಗೆ ನನ್ನನ್ನು ಕಳಿಸಿದರೋ ಅವರು ಸರ್ವನಾಶ ಹೊಂದುವರು,' ಎಂದು ಆಶೀರ್ವದಿಸಿ, ಪ್ರಸನ್ನವದನರಾಗಿ ಅಲ್ಲಿಂದ ಹೊರಟರು.

ನೋಡಿದೆಯಾ, ಪರೀಕ್ಷಿತ್! ನಿಮ್ಮ ತಾತಂದಿರ ಭಕ್ತಿ ಮತ್ತು ಕೃಷ್ಣನ ಅನುಗ್ರಹದ ರೀತಿ? ಅವರಿಗೆ ಅವರೇ ಸಾಟಿಯಲ್ಲದೇ ಬೇರೆ ಯಾರೂ ಸಾಟಿಯಲ್ಲ. ಅಂಥವರು ಲೋಕದಲ್ಲಿ ಯಾರೂ ಇಲ್ಲವೇ ಇಲ್ಲ," ಎಂದು ಪಾಂಡವರ ಶಕ್ತಿ ಸಾಮರ್ಥ್ಯಗಳನ್ನೂ, ಕೃಷ್ಣ ನೀಡಿದ ಅನುಗ್ರಹ ಪ್ರಸಾದವನ್ನೂ ವ್ಯಾಸರು ಅತ್ಯಂತ ಆನಂದದಿಂದ ಪರೀಕ್ಷಿತನಿಗೆ ತಿಳಿಸುತ್ತಿರಲು, ಪರೀಕ್ಷಿತ್ ಮೈಮರೆತು ಕೇಳುತ್ತಾ ಒಂದೊಂದು ಸಾರಿ ಆಶ್ಚರ್ಯ, ಆತಂಕಗಳಲ್ಲಿ ಮುಳುಗಿ ಹೋಗುತ್ತಿದ್ದ. ತನ್ನ ತಾತಂದಿರ ಬಾಧೆ ಸ್ಮರಿಸಿ ಕೊಂಡಾಗಲೆಲ್ಲಾ ಮನಕರಗಿ ವಿಚಾರಮಗ್ನನಾಗಿ ಕಣ್ಣೀರು ಸುರಿಸುತ್ತಿದ್ದ.

# ೨೧ ಕಿರಾತಾರ್ಜುನೀಯ

ವ್ಯಾಸರು ಮುಂದುವರಿದು, "ಪರೀಕ್ಷಿತ್ ಮಹಾರಾಜಾ! ನಿಮ್ಮ ತಾತಂದಿರು ತಮ್ಮ ಭಕ್ತಿಯ ಪರಿಣಾಮವಾಗಿ ಪರಮಾತ್ಮನಿಗಾಗಿ ಎಂಥ ತ್ಯಾಗಕ್ಕೂ ಹಿಂಜರಿಯುತ್ತಿರಲಿಲ್ಲ. ಹಾಗೇ, ಅಗತ್ಯ ಬಿದ್ದರೆ ಪರಮಾತ್ಮನೊಡನೆ ಯುದ್ಧಕ್ಕೂ ನಿಲ್ಲುತ್ತಿದ್ದರು. ಯುದ್ಧ ಅವರ ಕ್ಷತ್ರಿಯ ಧರ್ಮ. ಒಂದಾನೊಂದು ಸಂದರ್ಭದಲ್ಲಿ ಪಶುಪತಿಯೊಡನೆ ಯುದ್ಧ ಮಾಡಿ ನಿಮ್ಮ ತಾತ ಅಸ್ತ್ರ ಸಂಪಾದಿಸಿದ. ಈ ವಿಷಯ ನೀನು ಕೇಳಿರಬಹುದು," ಎಂದು ಮಾತು ಮುಗಿಸಿದರು.

ಶ್ರದ್ಧೆಯಿಂದ ಕೇಳುತ್ತಿದ್ದ ಪರೀಕ್ಷಿತ್, ಥಟ್ಟನೆ ತಲೆಯೆತ್ತಿ, "ಸ್ವಾಮೀ! ಏನಂದಿರಿ? ನಮ್ಮ ತಾತ ಪಶುಪತಿಯೊಡನೆ ಯುದ್ಧ ಮಾಡಿದರೇ? ಈ ವಿಷಯ ಹಿಂದೆಂದೂ ನಾನು ಕೇಳಿಲ್ಲವಲ್ಲಾ. ತಿಳಿಸಿದರೆ, ಕೇಳಿ ಆನಂದ ಪಡುತ್ತೇನೆ," ಎಂದು ಕೈಮುಗಿದ.

ವ್ಯಾಸರು ಕಂಠ ಸರಿಮಾಡಿಕೊಂಡು, "ಮಗೂ! ಅಂಥ ವಿಷಯ ಎಷ್ಟು ಹೇಳುವುದು? ಮಾಸಗಳು, ಸಂವತ್ಸರಗಳು ಹೇಳಿದರೂ ತೀರದಷ್ಟಿವೆ ಪಾಂಡವ ಗೋಪಾಲರ ವಿಚಿತ್ರ ವಿಷಯಗಳು. ಅದನ್ನು ಕೆಲವು ಗಂಟೆಗಳಲ್ಲಿ ಹೇಳಿ ಮುಗಿಸಲು ಸಾಧ್ಯವೇ? ಆದರೂ ನೀನು ಕೇಳುತ್ತಿರುವೆಯಾದ್ದರಿಂದ, ಕಾಲಾವಕಾಶ ಇರುವವರೆಗೂ ಹೇಳುತ್ತೇನೆ, ಕೇಳು.

ರಾಜಾ! ನಿಮ್ಮ ತಾತಂದಿರು ಅರಣ್ಯದಲ್ಲಿ ಕಾಲ ಕಳೆಯುತ್ತಿದ್ದ ಸಂದರ್ಭದಲ್ಲಿ ಒಂದು ದಿನ ನಿನ್ನ ಹಿರಿಯ ತಾತನಾದ ಧರ್ಮಜನಿಗೆ ಬಗೆ ಹರಿಯದ ಚಿಂತೆ ಒಂದು ತಲೆಯಲ್ಲಿ ಸುಳಿಯಿತು. ಏನೆಂದರೆ, ಎಷ್ಟು ವರ್ಷಕಾಲ ಅರಣ್ಯವಾಸ ಮಾಡಿ ತಿರುಗಿ ಹಸ್ತಿನಾಪುರ ಸೇರಿದರೂ ದುಷ್ಟ ದುರ್ಯೋಧನಾದಿಗಳು ತಮ್ಮ ರಾಜ್ಯವನ್ನು ತಮಗೆ ಕೊಡುವುದಿಲ್ಲವೆಂದೂ ಕಟ್ಟಕಡೆಗೆ ಯುದ್ಧ ನಡೆದೇ ತೀರುವುದೆಂದೂ ಅವನಲ್ಲಿ ಸಂಶಯ ಹುಟ್ಟಿತು. ತಾವು ಯುದ್ಧಕ್ಕೆ ಸಿದ್ಧರಾದರೂ ಧನುರ್ವಿದ್ಯಾ ಪಾರಂಗತರಾದ ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮಾದಿಗಳು ಕೌರವ ಪಕ್ಷವನ್ನೇ ಸೇರುವರು. ಆದ್ದರಿಂದ, ಅವರನ್ನು ಎದುರಿಸುವ ಶಕ್ತಿ ಪಾಂಡವರಲ್ಲಿ ಇಲ್ಲದೆ ಹೋಗಬಹುದೆಂದೂ ಕಡೆಗೆ ಯುದ್ಧ ಮಾಡಿದರೂ ಫಲವಿಲ್ಲದಂತೆ ಆಗುವುದು ಎಂದೂ ಈ ಕಾರಣದಿಂದ ಯಾವಜ್ಜೀವಿತವೂ ಅರಣ್ಯದಲ್ಲೇ ಇರುವಂತಾಗುವುದು ಎಂದೂ ಚಿಂತಿಸುತ್ತಿದ್ದ. ಇದನ್ನು ನಿನ್ನ ತಾತ ಅರ್ಜುನ ಹೇಗೋ ಅರಿತು, ಧರ್ಮಜನ ಬಳಿ ಹೋಗಿ ನಮಸ್ಕರಿಸಿ, ದಿವ್ಯಾಸ್ತ್ರಗಳನ್ನು ಸಂಪಾದಿಸಿಕೊಂಡು ಬರುವುದಕ್ಕೆ ಅಪ್ಪಣೆ ಕೊಡಿ ಎಂದು ಪ್ರಾರ್ಥಿಸಿದ. ಆಗ, ಧರ್ಮಜ ವಿಚಾರ ಮಗ್ನನಾಗಿ ಅರಣ್ಯಕ್ಕೆ ಹೋಗಿ ದೀಕ್ಷಾಬದ್ಧನಾಗಿದ್ದು, ಭಗವಂತನ ಅನುಗ್ರಹಾಸ್ತ್ರ ಸಂಪಾದಿಸಿಕೊಂಡು ಬಾ ಎಂದು ಆಜ್ಞಾಪಿಸಿದ. ಆರ್ಜುನ ಅಣ್ಣನಿಗೆ ನಮಸ್ಕರಿಸಿ, ಹೊರಟ. ಅಗಮ್ಯ ನಿರ್ಜನವಾದ, ಸಿದ್ಧರು ಕೂಡ ಹೋಗಲಾರದಂಥ, ದುರ್ಗಮ ಪ್ರದೇಶಕ್ಕೆ ಹೋಗಿ, ಯೋಗ್ಯವಾದ ಸ್ಥಳವೊಂದನ್ನು ಹುಡುಕಿಕೊಂಡು, ದೇವೇಂದ್ರನನ್ನು ಕುರಿತು ತಪಸ್ಸು ಪ್ರಾರಂಭಿಸಿದ.

ಅವನ ತಪಸ್ಸು ಇಡೀ ದೇವಲೋಕಕ್ಕೇ ಆಶ್ಚರ್ಯ ಉಂಟುಮಡಿತು. ದೇವೇಂದ್ರ ಪ್ರತ್ಯಕ್ಷನಾಗಿ, 'ಮಗೂ! ನಿನ್ನ ತಪಸ್ಸಿಗೆ ಮೆಚ್ಚಿದೆ. ಆದರೆ, ನಿನ್ನ ಸಂಕಲ್ಪ ನೆರವೇರಬೇಕಾದರೆ, ಶೂಲಪಾಣಿಯನ್ನು ಪ್ರಸನ್ನ ಮಾಡಿಕೊಳ್ಳಬೇಕು. ಆನಂತರ ನಾನು

ನಿನ್ನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಅಸ್ತ್ರಶಸ್ತ್ರಗಳನ್ನು ಉಪದೇಶಿಸುತ್ತೇನೆ,' ಎಂದು ಹೇಳಿ ಅಂತರ್ಧಾನನಾದ.

ದೇವೇಂದ್ರನ ಸಲಹೆಯಂತೆ ನಿಮ್ಮ ತಾತ ಅರ್ಜುನ ಶೂಲಪಾಣಿಯನ್ನು ಕುರಿತು ಧ್ಯಾನಿಸಿದ. ಇಷ್ಟರಲ್ಲಿ ಶಿವನ ಲೀಲಾ ನಾಟಕವೊಂದು ಪ್ರಾರಂಭವಾಯಿತು. ಒಂದು ವರಾಹವು ಘರ್ಜಿಸುತ್ತಾ ಅರ್ಜುನ ತಪಸ್ಸನ್ನಾಚರಿಸುತ್ತಿದ್ದ ದಿಕ್ಕಿನಲ್ಲಿ ಅತಿ ವೇಗ ವಾಗಿ, ಕ್ರೋಧೋನ್ಮತ್ತವಾಗಿ ಬರುತ್ತಿರುವುದನ್ನು ಅರ್ಜುನ ಗಮನಿಸಿದ. ತಪಸ್ಸನ್ನಾ ಚರಿಸುತ್ತಾ ದೀಕ್ಷಾಬದ್ಧನಾಗಿರುವ ಸಮಯದಲ್ಲಿ ಪ್ರಾಣಿ ಹಿಂಸೆ ಮಾಡಬಾರದೆನ್ನುವ ದೃಢನಿಶ್ಚಯದಿಂದಿದ್ದರೂ ಆ ವರಾಹ ಅತ್ಯಂತ ಉಗ್ರವಾಗಿ, ಮೇಲೆ ಬೀಳಲು ಮುನ್ನುಗ್ಗಿ ಬರುತ್ತಿತ್ತು.

ವಿಧಿಯಿಲ್ಲದೆ, ಪ್ರಾಣರಕ್ಷಣೆಗಾಗಿ ನಿಮ್ಮ ತಾತ ಬಿಲ್ಲನ್ನು ಧರಿಸಿ ನಿಲ್ಲಬೇಕಾಯಿತು. ಇಷ್ಟರಲ್ಲಿ, ಒಬ್ಬ ಭಿಲ್ಲವ ಧನುರ್ಬಾಣಗಳನ್ನು ಧರಿಸಿ, ಪತ್ನೀ ಸಮೇತನಾಗಿ ತನ್ನತ್ತ ಬರುತ್ತಿರುವುದನ್ನು ನೋಡಿದ. ಈ ನಿರ್ಜನ ಅರಣ್ಯದಲ್ಲಿ ಸ್ತ್ರೀಪುರುಷರು ಭಯಂಕರ ಆವೇಶದಿಂದ, ಕೆಟ್ಟದಾಗಿ ಕಿರಿಚುತ್ತಾ ಬರುತ್ತಿರುವುದನ್ನು ನೋಡಿ, ಮತ್ತಷ್ಟು ಕಂಗಾಲಾದ, ಆಶ್ಚರ್ಯಚಕಿತನಾದ. ಬಿಲ್ಲು ಹಿಡಿದು ಮುಂದೆ ಬರುತ್ತಿದ್ದ ಭಯಂಕರಾಕೃತಿಯ ಆ ಕೆಂಗಣ್ಣಿನ ವ್ಯಕ್ತಿ, ಹತ್ತಿರ ಬಂದು, ಅರ್ಜುನನ್ನು ನೋಡಿ, ಗಂಭೀರ ಸ್ವರದಿಂದ, 'ಎಲವೋ! ನೀನು ಯಾರು? ಇಲ್ಲಿಗೇಕೆ ಬಂದೆ? ಅಪ್ಪಿತಪ್ಪಿ ನೀನೇನಾದರು ಆ ವರಾಹದ ಮೇಲೆ ಬಾಣ ಬಿಟ್ಟರೆ, ನಿನ್ನ ಪ್ರಾಣ ಉಳಿಯುವುದಿಲ್ಲ, ಜಾಗ್ರತೆ, ನಾನು ಓಡಿಸಿಕೊಂಡು ಬಂದ ವರಾಹವನ್ನು ನೀನು ಹೊಡೆಯಲು ನೋಡುತ್ತಿರುವೆಯೇನು?' ಎಂದು ಘರ್ಜಿಸಿದ.

ಈ ಮಾತು ಅರ್ಜುನನ ಹೃದಯವನ್ನು ಬಾಣದಂತೆ ನಾಟಿತು. ಅಸಾಮಾನ್ಯನಾದ ನನ್ನ ಬಗ್ಗೆ ಇವನು ಇಂಥ ಕಠಿಣೋಕ್ತಿ ಆಡುವುದೇ? ನನ್ನ ಹೆಸರಾಗಲೀ ನನ್ನ ಪ್ರತಾಪವಾಗಲೀ ಇವನಿಗೆ ತಿಳಿಯದೇನೋ ಎಂದು ಅರ್ಜುನ ಉದ್ರೇಕಗೊಂಡು, ಬಿಲ್ಲನ್ನು ಎತ್ತಿ ಗುರಿಯಿಟ್ಟು ಆ ವರಾಹಕ್ಕೆ ಬಾಣ ಹೊಡೆದ. ಇಬ್ಬರ ಬಾಣಗಳೂ ಒಂದೇ ಸಾರಿ ಆ ವರಾಹದ ಮೇಲೆ ಬೀಳಲು, ಅದು ನೆಲಕ್ಕೆ ಉರುಳಿ ಪ್ರಾಣಬಿಟ್ಟಿತು.

ಕಿರಾತ ಕೋಪೋದ್ರಿಕ್ತನಾಗಿ, ಅರ್ಜುನನ ಮೇಲೆರಗಿ, 'ಎಲವೋ! ದುರಾತ್ಮಾ! ನಾನು ಓಡಿಸಿಕೊಂಡು ಬಂದ ಮೃಗದ ಮೇಲೆ ಕೈಮಾಡುವಂಥ ಅಸ್ತ್ರವಿದ್ಯಾ ನಿಯಮ ತಿಳಿಯದ ಮೂರ್ಖನಂತೆ ಕಾಣಿಸುತ್ತೀಯೆ,' ಎಂದು ಏನೇನೋ ಕಠಿಣೋಕ್ತಿಗಳನ್ನಾಡಿದ. ಆ ಕಿರಾತನನ್ನು ಕೆಂಡ ಕಾರುವ ಕಣ್ಣುಗಳಿಂದ ನೋಡುತ್ತಾ

ಅರ್ಜುನ, 'ಛೀ! ಮುಚ್ಚು ಬಾಯಿ! ನಿನ್ನನ್ನು ಯಮಪುರಿಗೆ ಕಳಿಸಿಯೇನು. ಹೆಚ್ಚು ಮಾತನಾಡದೆ, ನಿನ್ನ ಪ್ರಾಣ ರಕ್ಷಿಸಿಕೊಂಡು, ಬಂದ ದಾರಿ ಹಿಡಿದು ಹೋಗು,' ಎಂದು ತಾತ್ಸಾರದಿಂದ ಮಾತನಾಡಿದ.

ಭಿಲ್ಲ, ಆ ಮಾತಿಗೆ ಜಗ್ಗದೆ ದೃಢನಿರ್ಧಾರದಿಂದ, 'ಎಲವೋ! ನೀನು ಯಾರಾದರೇನು? ಮುಕ್ಕೋಟಿ ದೇವತೆಗಳು ನಿನಗೆ ಸಹಾಯ ಮಾಡಿದರೂ ನಾನೇನು ಹಿಂತೆಗೆಯುವವನಲ್ಲ! ಜಾಗ್ರತೆ! ನಮ್ಮ ಅರಣ್ಯಕ್ಕೆ ಯಾರ ಅಪ್ಪಣೆ ಪಡೆದು ಬಂದೆ? ನನ್ನನ್ನು ಹೋಗು ಎನ್ನುವುದಕ್ಕೆ ನೀನ್ಯಾರು? ಈ ಅರಣ್ಯ ನಮ್ಮದು. ಅಕ್ರಮ ಪ್ರವೇಶಮಾಡಿ ವಕ್ರವಾಗಿ ಮಾತನಾಡುತ್ತಿದ್ದೀಯೆ, ಮೂರ್ಖ!' ಎಂದು ಚುಚ್ಚು ಮಾತನಾಡಿದ.

ಅರ್ಜುನ ಸ್ವಲ್ಪ ಶಾಂತನಾಗಿ, ಇವನ್ಯಾರೋ ಸಾಮಾನ್ಯನಲ್ಲವೆಂದು ತಿಳಿದು, 'ಅಯ್ಯಾ! ಅರಣ್ಯ ಎಲ್ಲರ ಸ್ವತ್ತು. ನೀನು ಬೇಟೆಯಾಡಲು ಬಂದರೆ, ನಾನು ಶಿವನನ್ನು ಕುರಿತು ತಪಸ್ಸು ಮಾಡಲು ಬಂದೆ,' ಎಂದ. ಭಿಲ್ಲ, 'ನೀನು ಯಾರ ಆರಾಧನೆ ಮಾಡಿದರೆ, ನನಗೇನು? ನಾನು ಹೊಡೆಯಬೇಕಾದ ಮೃಗವನ್ನು ನೀನೇಕೆ ಹೊಡೆದೆ? ಅದಕ್ಕೆ ತಕ್ಕ ಉತ್ತರ ಹೇಳು, ಇಲ್ಲವೆ, ನಿನ್ನ ತಪ್ಪು ಒಪ್ಪಿಕೊ,' ಎಂದ. ಅರ್ಜುನನ ತಾಳ್ಮೆ ಪೂರ್ತಿ ಒಡೆಯಿತು. ವಿಕಟ ನಗೆ ನಕ್ಕು, ಇವನು ಒಳ್ಳೆಯ ಮಾತಿಗೆ ಬಗ್ಗುವವನಲ್ಲ ವರಾಹದಂತೆ ಇವನ ಆಯಸ್ಸು ಮುಗಿದಿದೆ ಎಂದುಕೊಂಡು, ಒಂದು ನಿಶಿತವಾದ ಬಾಣ ತೆಗೆದು, ಬಿಲ್ಲಿಗೆ ಏರಿಸಿ ಹೊಡೆದ. ಆ ಬಾಣ ಕಲ್ಲಿಗೆ ತಾಕಿದ ಮುಳ್ಳಿನಂತೆ, ಮುರಿದು ಕೆಳಗೆ ಬಿದ್ದಿತು! ನಿಮ್ಮ ತಾತ ಆಶ್ಚರ್ಯಪಟ್ಟು, ಅರ್ಧಚಂದ್ರಾಕಾರವಾದ ಬಾಣವೊಂದನ್ನು ಬಿಟ್ಟು ಅವನ ಶಿರಚ್ಛೇದನ ಮಾಡಲು ನೋಡಿದ. ಕಿರಾತ ನಗುತ್ತಾ ಅದನ್ನು ಎಡಗೈಯಲ್ಲಿ ಹಿಡಿದು ಹಿಂತಿರುಗಿಸಿ ಹೊಡೆದ.

ಅರ್ಜುನ ತನ್ನ ಅಕ್ಷಯ ಬತ್ತಳಿಕೆಯ ಬಾಣಗಳನ್ನೆಲ್ಲಾ ಭಿಲ್ಲನ ಮೇಲೆ ಉಪಯೋಗಿಸಿದರೂ ಏನೂ ಪ್ರಯೋಜನವಾಗಲಿಲ್ಲ. ರೆಕ್ಕೆ ಕತ್ತರಿಸಿದ ಹಕ್ಕಿಯಂತೆ, ಹಲ್ಲು ಕಿತ್ತ ಹುಲಿಯಂತೆ, ಚುಕ್ಕಾಣಿ ಹೋದ ದೋಣಿಯಂತೆ, ತನ್ನ ಸರ್ವಸ್ವವನ್ನೂ ಕಳೆದುಕೊಂಡವನಂತೆ, ಅರ್ಜುನ ಅಸಹಾಯಕನಾದ. ಇನ್ನೇನೂ ತೋಚದೆ, ಧನುಸ್ಸನ್ನೇ ಅವನ ಎದೆಗೆ ಗುರಿಯಿಟ್ಟು ಎಸೆದ. ಅದು ಪುಡಿಪುಡಿಯಾದುದನ್ನು ನೋಡಿ, ನಡುಕಟ್ಟಿ ಅವನೊಡನೆ ದ್ವಂದ್ವ ಯುದ್ಧ ಮಾಡಲು ಸಿದ್ಧನಾದ.

ಭಿಲ್ಲ ನಕ್ಕು, ತಾನೂ ಸಿದ್ಧನಾದ. ಸರಿ! ಎರಡು ಪರ್ವತಗಳು ಒಂದಕ್ಕೊಂದು ಢಿಕ್ಕಿ ಹೊಡೆದಂತೆ, ಅವರಿಬ್ಬರೂ ಒಬ್ಬರನ್ನೊಬ್ಬರು ಗುದ್ದಿಕೊಳ್ಳುತ್ತಿರಲು, ಅಡವಿಯಲ್ಲಿನ ಪಕ್ಷಿಗಳು ಇದೇನು ಪ್ರಳಯದ ಶಬ್ದವೋ ಎಂದು ಭಯಪಟ್ಟು ರೆಕ್ಕೆಗಳನ್ನು ಬಡಿಯುತ್ತಾ ಹಾರುತ್ತಿದ್ದವು. ಮೃಗಗಳು ಹೆದರಿ ದಿಕ್ಕುದಿಕ್ಕಿಗೆ ಓಡುತ್ತಿದ್ದವು. ಅರಣ್ಯವೆಲ್ಲಾ ಭೂಕಂಪವಾದಂತೆ ಅದುರುತ್ತಿತ್ತು. ಎಷ್ಟಾದರೂ ಆ ಭಿಲ್ಲ ಆಯಾಸವೇ ಇಲ್ಲದೆ, ಉಲ್ಲಾಸದಿಂದ ನಗುತ್ತಾ ಇದ್ದ. ಅರ್ಜುನ ಬೆವರು ಸುರಿಸುತ್ತಾ, ಬುಸುಗುಟ್ಟುತ್ತಾ, ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ಗುದ್ದು ಹೊಡೆದರೂ ಅವನ ಕೈಯಿಂದಲೇ ಹೆಚ್ಚಾಗಿ ರಕ್ತ ಸುರಿಯುತ್ತಿತ್ತೇ ವಿನಾ ಭಿಲ್ಲನ ದೇಹಕ್ಕೆ ಸ್ವಲ್ಪವೂ ಪೆಟ್ಟಾಗಲೀ ಗಾಯವಾಗಲೀ ಆಗುತ್ತಿರಲಿಲ್ಲ.

ಅಷ್ಟೇ ಅಲ್ಲ. ಆ ಭಿಲ್ಲ ತನ್ನ ಬಾಹುಗಳಿಂದ ಅರ್ಜುನನನ್ನು ಒಮ್ಮೆ ಬಿಗಿದಪ್ಪಿಕೊಳ್ಳಲು ಅರ್ಜುನ ಬಾಯಿಂದ ರಕ್ತ ಕಾರಿದ. ಭಿಲ್ಲ ನಗುತ್ತಾ ತನ್ನ ಸತಿಯ ಬಳಿ ಹೋಗಿ, 'ನೋಡಿದೆಯಾ?' ಎಂದು ತನ್ನ ಪ್ರತಾಪ ಹೇಳಿಕೊಳ್ಳುತ್ತಿರಲು, ಅರ್ಜುನ ಸ್ವಲ್ಪ ಚೇತರಿಸಿಕೊಂಡು, 'ಕೃಷ್ಣಾ! ಇಂದು ನನ್ನನ್ನೇಕೆ ಇಂಥ ಸೋಲಿಗೆ ಗುರಿಮಾಡಿದೆ? ಅದರಲ್ಲೂ ಈ ಭಿಲ್ಲನ ಕೈಯಲ್ಲಿ ಸೋಲಿಸಿದೆಯಾ? ಇದು ನಿನ್ನ ಲೀಲಾನಾಟಕ! ನಿಜವಾಗಿಯೂ ಈ ಭಿಲ್ಲ ಸಾಮಾನ್ಯನಲ್ಲ. ಬಹುಶಃ ನೀನೇ ಈ ರೂಪದಲ್ಲಿ ಬಂದು ನನ್ನನ್ನು ಪರೀಕ್ಷಿಸುತ್ತಿರುವಿಯೇನೋ?' ಎಂದು ಪ್ರಾರ್ಥಿಸಿದೊಡನೆಯೇ, ಎದುರಿಗೆ ನಿಂತಿದ್ದ ಭಿಲ್ಲ ಮತ್ತು ಅವನ ಪತ್ನಿ ಶಿವ–ಗೌರಿಯರ ರೂಪದಿಂದ ಮಂದಹಾಸ ಬೀರುತ್ತಾ ಅಭಯಹಸ್ತ ತೋರಿಸುತ್ತಾ ನಿಂತಿರುವುದನ್ನು ನೋಡಿದ. ಆ ಕೂಡಲೇ ಅರ್ಜುನ, 'ಶಂಕರಾ! ಗೌರಿ ಮಾತಾ!' ಎನ್ನುತ್ತಾ ಓಡಿಹೋಗಿ ಅವರ ಪಾದಗಳ ಮೇಲೆ ಬಿದ್ದು ಕ್ಷಮಿಸಿರೆಂದು ಪರಿಪರಿ ವಿಧವಾಗಿ ಪ್ರಾರ್ಥಿಸಿದ.

ಆ ಕೃಪಾಳುಗಳಾದ ಗೌರೀ ಶಂಕರರು ಅರ್ಜುನನ ತಲೆಯನ್ನು ಸವರುತ್ತಾ, 'ಮಗೂ! ಪುರುಷಾರ್ಥವನ್ನು ಸಾರ್ಥಕ ಮಾಡಿಕೊಂಡೆ. ನಿನ್ನ ಕರ್ತವ್ಯ ನೀನು ಮಾಡಿದೆ. ತಪ್ಪಿಲ್ಲ, ತೆಗೆದುಕೋ ನನ್ನ ಪ್ರಸಾದ,' ಎನ್ನುತ್ತಾ ಪಾಶುಪತಾಸ್ತ್ರವನ್ನು ಅನುಗ್ರಹಿಸಿದ.

ಮಹಾರಾಜಾ! ಶೂಲಪಾಣಿಯೊಂದಿಗೆ ಹೋರಾಡಿದ ನಿನ್ನ ತಾತನ ಪ್ರತಿಭಾ ವಿಶೇಷವನ್ನು ಏನೆಂದು ಕೊಂಡಾಡೋಣ. ಇದೆಲ್ಲಕ್ಕೂ ಆ ಗೋಪಾಲನ ಕೃಪಾ ಕಟಾಕ್ಷವೇ ಮೂಲಕಾರಣ. ಅವನ ಆಜ್ಞೆ ಇಲ್ಲದೆ ನಿಮ್ಮ ತಾತಂದಿರು ಎಂಥ ಸಣ್ಣ ಕೆಲಸವನ್ನೂ ಮಾಡುತ್ತಿರಲಿಲ್ಲ. ನಿಜಕ್ಕೂ ಆ ಮಹಾಭಾರತ ಯುದ್ಧದಲ್ಲಿ ಪಾಂಡವರಿಗೆ ಕೃಷ್ಣನ ಕೃಪೆ ಹೆಜ್ಜೆ ಹೆಜ್ಜೆಗೂ ಸಿಕ್ಕುತ್ತಿತ್ತು. ಅದನ್ನು ಅನುಭವಿಸಿದ ಪಾಂಡವರಿಗಲ್ಲದೆ ಬೇರೆಯವರಿಗೆ ಅದು ಅರ್ಥವಾಗದು," ಎಂದು ವ್ಯಾಸರು,

ತಮ್ಮ ಕಣ್ಣಿನಿಂದ ಸುರಿಯುತ್ತಿದ್ದ ಆನಂದ ಬಾಷ್ಪಗಳನ್ನು ಅಂಗವಸ್ತ್ರದಿಂದ ಒರೆಸಿ ಕೊಂಡರು. ಪರೀಕ್ಷಿತ್ ಮಹಾರಾಜ ಅತಿರೇಕವಾದ ಆನಂದದಿಂದ ತುಟಿಗಳು ನಡುಗುತ್ತಿರಲು, ಕಣ್ಣೀರು ಸುರಿಯುತ್ತಿರಲು, ಗದ್ಗದ ಸ್ವರದಿಂದ, "ಮಹಾನುಭಾವಾ! ನಾನೆಷ್ಟು ಅದೃಷ್ಟವಂತ! ಅಂಥ ಮಹಾವೀರರೂ ಸಾಹಸ ಪರಾಕ್ರಮಿಗಳೂ ಪರಮ ಭಕ್ತರೂ ಧರ್ಮಮೂರ್ತಿಗಳೂ ಆದ ಅವರ ವಂಶದಲ್ಲಿ ಹುಟ್ಟಿದ್ದೇನೆ. ಹುಟ್ಟಿದ್ದು ಮಾತ್ರವಲ್ಲ, ಸಾಕ್ಷಾತ್ ದೈವಾಂಶ ಸಂಭೂತರಾದ ನಿಮ್ಮ ವಾಕ್ ರಸದ ಮೂಲಕ ಆ ಪವಿತ್ರ ಜೀವಿಗಳ ಅನುಭವವನ್ನು ಕರ್ಣರಂಧ್ರಗಳ ಮೂಲಕ ಕುಡಿಯುತ್ತಿದ್ದೇನೆ. ಆಹಾ! ನನ್ನ ಜನ್ಮ ಧನ್ಯವಾಯಿತು. ಪ್ರಭೂ! ನಮ್ಮ ತಾತಂದಿರ ಮತ್ತು ಕೃಷ್ಣಪರ ಮಾತ್ಮನ ಚರ್ಯೆಗಳನ್ನು ಕೇಳುತ್ತಿದ್ದರೆ ಎಷ್ಟು ಕೇಳಿದರೂ ಆಸೆ ತೀರುತ್ತಿಲ್ಲ. ಕೃಷ್ಣ ಪರಮಾತ್ಮ ನಮ್ಮ ತಾತಂದಿರನ್ನು ಯುದ್ಧದಲ್ಲಿ ಹೇಗೆ ರಕ್ಷಿಸಿದನೆನ್ನುವುದನ್ನು ತಿಳಿಸಿ ನನ್ನ ಕುತೂಹಲ ನಿವಾರಿಸಿ," ಎಂದು ಪ್ರಾರ್ಥಿಸಿದ.

# ೨೨ ಸಮರ ರಕ್ಷಕ

ವ್ಯಾಸರು, "ರಾಜಾ! ಹನ್ನೆರಡು ವರ್ಷಗಳು ಅರಣ್ಯವಾಸವನ್ನೂ ಒಂದು ವರ್ಷ ಅಜ್ಞಾತವಾಸವನ್ನೂ ಮಾಡಿ ಪಾಂಡವರು ಗೋಧನ ಹರಣ ಸಮಯದಲ್ಲಿ ಹೊರಗೆ ಕಾಣಿಸಿಕೊಳ್ಳುತ್ತಲೇ ಪಾತಕ ಹೃದಯಿಯಾದ ದುರ್ಯೋಧನ ನೋಡಿ, ಅಜ್ಞಾತವಾಸ ಪೂರ್ತಿಯಾಗುವ ಮೊದಲೇ ಪಾಂಡವರು ಕಾಣಿಸಿಕೊಂಡರಾದ ಕಾರಣ ತಿರುಗಿ ಹನ್ನೆರಡು ವರ್ಷ ಅರಣ್ಯವಾಸವನ್ನೂ ಒಂದು ವರ್ಷ ಅಜ್ಞಾತ ವಾಸವನ್ನೂ ಮಾಡಬೇಕೆಂದು ಪಟ್ಟುಹಿಡಿದ.

ದ್ರೋಣ ಭೀಷ್ಮಾದಿಗಳು ಲೆಕ್ಕಹಾಕಿ ಪಾಂಡವರು ನಿಬಂಧನಾನುಸಾರವಾಗಿಯೇ ಹೊರಬಂದಿದ್ದಾರೆಂದೂ ಮುಂಚಿತವಾಗಿ ಹೊರಬಂದಿಲ್ಲವೆಂದೂ ಅರಣ್ಯವಾಸ, ಅಜ್ಞಾತವಾಸಗಳನ್ನು ಗೊತ್ತುಪಡಿಸಿದ ರೀತಿಯಲ್ಲೇ ಮಾಡಿಮುಗಿಸಿದ್ದಾರೆಂದೂ ಎಷ್ಟು ಹೇಳಿದರೂ ದುರ್ಯೋಧನ ಒಪ್ಪದೆ, ಹಿರಿಯರ ಮಾತನ್ನು ಧಿಕ್ಕರಿಸಿ ವಿನಾಶಕ್ಕೆ ರಾಜಮಾರ್ಗ ಮಾಡಿಕೊಳ್ಳವವನಂತೆ ಯಾರು ಏನೇ ಹೇಳಿದರೂ ಕೇಳದೆ, ಯುದ್ಧ ಮಾಡಿಯೇ ತೀರುವುದಾಗಿ ನಿಶ್ಚಯಿಸಿದ.

ಯಾರೇನು ಮಾಡಲಾದೀತು? ರಾಜಾಜ್ಞೆ! ಸರಿ, ಎರಡೂ ಪಕ್ಷದವರು ಯುದ್ಧ ಸಿದ್ಧತೆಯಲ್ಲಿದ್ದರು. ಅಧಿಕಾರಾರೂಢನಾಗಿದ್ದವನು ದುರ್ಯೋಧನ. ರಾಜ್ಯಭ್ರಷ್ಟ ರಾದವರು ಪಾಂಡವರು. ಆದರೆ, ಸತ್ಯಧರ್ಮಗಳು ಪಾಂಡವರನ್ನು ವರಿಸಿದ್ದುದಾದ ಕಾರಣ, ಧರ್ಮಾತ್ಮರಾದ ಕೆಲವರು ರಾಜರುಗಳು ಪಾಂಡವರ ಪಕ್ಷ ಸೇರಿದರು, ಮಿಕ್ಕ ಎಲ್ಲ ಬಲಿಷ್ಠರೂ ವೀರರೂ ಸಾರ್ವಭೌಮರೂ ಕೌರವರ ಪಕ್ಷಕ್ಕೆ ಹೋದರು. ಹೀಗೆ, ಕೌರವ ಪಕ್ಷದಲ್ಲಿ ಹನ್ನೊಂದು ಅಕ್ಷೋಹಿಣಿ ಸೈನ್ಯವೂ ನಿನ್ನ ತಾತಂದಿರಾದ ಪಾಂಡವರ ಪಕ್ಷದಲ್ಲಿ ಏಳು ಅಕ್ಷೋಹಿಣಿ ಸೈನ್ಯವೂ ಸಿದ್ಧವಾಯಿತು. ಅರ್ಜುನನ ರಥದ ಸಾರಥ್ಯವನ್ನು ಗೋಪೀವಲ್ಲಭನೇ ವಹಿಸಿದ! ಒಂದು ರಥದ ಸಾರಥ್ಯವೇನು? ಪಾಂಡವರ ಜೀವನದ ಹೊಣೆಯನ್ನೇ ಹೊತ್ತ.

ಇನ್ನು ಪಾಂಡವರಿಗೇನು ಕಡಿಮೆ? ನಾಟಕ ರಂಗದಲ್ಲಿ ಅರ್ಜುನನ ಪಾತ್ರವನ್ನು ಸೂತ್ರಧಾರಿ ಕೃಷ್ಣ ವಿಚಿತ್ರ ಮಾರ್ಗದಲ್ಲಿ ಕೊಂಡೊಯ್ಯುತ್ತಾ ಹೋದ. ರಣ ರಂಗದಲ್ಲಿ ಕೃಷ್ಣ ಎರಡು ಸೈನ್ಯಗಳ ಮಧ್ಯೆ ರಥವನ್ನು ನಿಲ್ಲಿಸಿ, ಮೊದಲು, ಕೌರವ ಪಕ್ಷದಲ್ಲಿ ಯಾರು ಯಾರು ನಾಯಕರಿದ್ದಾರೆ ನೋಡು ಎಂದು ಅರ್ಜುನನಿಗೆ ಆಜ್ಞಾಪಿಸುತ್ತಲೆ, ಅರ್ಜುನ ಒಮ್ಮೆ ಕೌರವ ವೀರರೆಲ್ಲರ ಮೇಲೆ ದೃಷ್ಟಿ ಹಾಯಿಸಿ, ಕಣ್ಣೀರು ಸುರಿಸುತ್ತಾ ನಿರುತ್ಸಾಹದಿಂದ ಕುಸಿದುಹೋದ.

ಆ ದೃಶ್ಯ, ನೋಡುವವರಿಗೇ ನಾಚಿಕೆಯಾಗುವಂತಿತ್ತು. ನಿಮ್ಮ ತಾತನಾದರೋ ಭಯದಿಂದಾಗಲೀ ಹುಚ್ಚುತನದಿಂದಾಗಲೀ ಹಾಗೆ ನಿರುತ್ಸಾಹಿಯಾಗಲಿಲ್ಲ. ಮಡಿ ಲಲ್ಲಿಟ್ಟುಕೊಂಡು ಮಕ್ಕಳಂತೆ ಸಾಕಿ, ಸಲಹಿದ ಪಿತಾಮಹ ಭೀಷ್ಮರೂ ಸರ್ವ ಶಸ್ತ್ರಾಸ್ತ್ರ ವಿದ್ಯೆ ಕಲಿಸಿದ ಗುರು ದ್ರೋಣಾಚಾರ್ಯರೂ ಕಣ್ಣಿಗೆ ಬೀಳುತ್ತಲೆ, ಅಯ್ಯೋ! ಇವರೊಂದಿಗೆ ಯುದ್ಧಮಾಡಬೇಕಾಗಿ ಬಂದಿತೆ? ಹೂವಿನಿಂದ ಪೂಜಿಸಬೇಕಾ ದವರ ಮೇಲೆ ಅಸ್ತ್ರಗಳನ್ನು ಬಿಡಬೇಕಾಯಿತೆ? ಪಾದಗಳಿಗೆ ನಮಸ್ಕರಿಸಬೇಕಾದವರ ಕುತ್ತಿಗೆಗೆ ಕ್ರೂರ ಬಾಣಗಳನ್ನು ಹೊಡೆಯಬೇಕಾಯಿತೆ ಎನ್ನುವ ಅವರ ಮೇಲಿನ ಪೂಜ್ಯ ಭಾವನೆಯೇ ಅವನನ್ನು ಅಷ್ಟು ನಿರ್ವೀರ್ಯನನ್ನಾಗಿ ಮಾಡಿತಲ್ಲದೆ ಬೇರೆ ಅಲ್ಲ.

ಹೀಗೆ ಅರ್ಜುನನ್ನು ಅಭಿಮಾನ ಮಮಕಾರಗಳು ದಟ್ಟವಾಗಿ ಮುಸುಕಿಕೊಳ್ಳಲು, ಅವನು ವಾಸುದೇವನ ಕಡೆಗೆ ತಿರುಗಿ, 'ಕೃಷ್ಣಾ, ರಥವನ್ನು ಹಸ್ತಿನಾಪುರಕ್ಕೆ ತಿರುಗಿಸು,' ಎಂದು ದೈನ್ಯದಿಂದ ಪ್ರಾರ್ಥಿಸಿದ. ಕೃಷ್ಣ ಹುಸಿನಗೆ ನಕ್ಕು, 'ಭಾವಾ! ಏನು ಭಯ ಪಟ್ಟಂತೆ ಕಾಣುವುದಲ್ಲಾ? ಪಾಪ! ಹಸ್ತಿನಾಪುರಕ್ಕೆ ನಿನ್ನನ್ನು ಕರೆದುಕೊಂಡು ಹೋಗಿ ಬಿಟ್ಟು, ದ್ರೌಪದಿಯನ್ನು ಯುದ್ಧಕ್ಕೆ ಕರೆದುಕೊಂಡು ಬರುತ್ತೇನೆ. ನಡೆ!

ಹೋಗೋಣ. ನೀನು ಇಷ್ಟು ಹುಚ್ಚು ಬುದ್ಧಿಯವನೆನ್ನುವುದು ತಿಳಿಯದೆ, ನಾನು ನಿನ್ನ ರಥದ ಸಾರಥ್ಯ ವಹಿಸಿದ್ದು ನನ್ನ ತಪ್ಪು!' ಎಂದು ಇನ್ನೂ ಏನೇನೋ ಕಠಿಣೋಕ್ತಿಗಳನ್ನು ಆಡುತ್ತಿರಲು, ಅರ್ಜುನ, 'ಕೃಷ್ಣಾ! ಶಿವನೊಡನೆ ಯುದ್ಧಮಾಡಿ ಪಾಶುಪತಾಸ್ತ್ರವನ್ನು ಪಡೆದು ಬಂದ ನಾನು, ಈ ಸಾಮಾನ್ಯ ಮಾನವರಿಗೆ ಹೆದರುವೆನೇ? ದಯೆಯಿಂದಾಗಿ ಬಂಧುಗಳನ್ನು ಕೊಲ್ಲಲಾರದವ ನಾಗಿದ್ದೇನೆ ವಿನಾ ಭಯದಿಂದಲ್ಲ,' ಎಂದು, ಎಷ್ಟು ಮೋಹದ ರಾಗ ಸೆಳೆದರೂ ಕೃಷ್ಣ ಕೇಳದೆ, ಅವನಿಗೆ ಸರ್ವ ಕರ್ಮ ಧರ್ಮಗಳ ಮರ್ಮಗಳನ್ನು ಬೋಧಿಸಿ, ಕಡೆಗೆ ಯುದ್ಧ ಮಾಡಿಸಿ, ಕ್ಷತ್ರಿಯ ಧರ್ಮವನ್ನು ಅವನಿಂದ ನೆರವೇರಿಸುತ್ತಾನೆ.

ಯುದ್ಧದ ಮಧ್ಯದಲ್ಲಿ, ಕೌರವ ಯೋಧರೆಲ್ಲರೂ ಒಟ್ಟಾಗಿ ಅರ್ಜುನನ ಮೇಲೆ ಬಾಣದ ಮಳೆಗರೆಯುತ್ತಿರಲು, ಹಿಂದೆ, ಇಂದ್ರ ಬಿರುಗಾಳಿ ಮಳೆ ಸುರಿಸಿದಾಗ ಗೋವರ್ಧನ ಪರ್ವತವನ್ನು ಎತ್ತಿ ಹಿಡಿದು, ಹಳ್ಳಿಯ ಜನರನ್ನೂ ಗೋವುಗಳನ್ನೂ ಕಾಪಾಡಿದ ಹಾಗೆ, ಕೃಷ್ಣ ಪರಮಾತ್ಮ ರಥದ ಮೂಕಿಯ ಮೇಲೆ ಕುಳಿತು, ಅರ್ಜುನನನ್ನು ಕಣ್ಣ ರೆಪ್ಪೆಯಂತೆ ಕಾಪಾಡಿದ. ಸರ್ವಾಸ್ತ್ರಗಳನ್ನು ತನ್ನ ಮೇಲೇ ಹಾಕಿಕೊಳ್ಳುತ್ತಾ ತನ್ನ ದೇಹದಿಂದ ರಕ್ತ ಧಾರಾಕಾರವಾಗಿ ಹರಿಯುತ್ತಿದ್ದುದನ್ನೂ ಲೆಕ್ಕಿಸದೆ, ಅರ್ಜುನನ ಪ್ರಾಣಕ್ಕೆ ಯಾವ ಅಪಾಯವೂ ಬರದಂತೆ ಕಾಪಾಡುತ್ತಾ ಎದುರಾಳಿಗಳ ಶಕ್ತಿ, ತೇಜಸ್ಸನ್ನು ಕುಂದಿಸಿದ. ಅರ್ಜುನನಿಗೆ ವಿಶೇಷವಾದ ಉತ್ಸಾಹ ತೇಜಸ್ಸುಗಳನ್ನು ಅನುಗ್ರಹಿಸಿ, ತಾನು ಯಾವ ಒಂದು ಆಯುಧವನ್ನೂ ಕೈಯಲ್ಲಿ ಹಿಡಿಯದೆಯೇ ಶತ್ರು ಸಂಹಾರ ಮಾಡಿ, ಪಾಂಡವರ ಧರ್ಮಪರಾಯಣತೆಯನ್ನು ಲೋಕಕ್ಕೆ ತೋರಿಸಿದ.

ಸಾರಥ್ಯ ಮಾಡುತ್ತಿದ್ದ ಗೋಪಾಲನನ್ನು ನೋಡಿ, ಒಂದೊಂದು ವೇಳೆ, ನಿಮ್ಮ ತಾತ ಅರ್ಜುನ, 'ಅಯ್ಯೋ! ಹೃದಯ ಕಮಲದಲ್ಲಿರಿಸಿ ಭದ್ರಮಾಡಿಕೊಳ್ಳಬೇಕಾದ ನಿನ್ನನ್ನು ಈ ರಥದ ಮೂಕಿಯ ಮೇಲೆ ಕೂರಿಸಿಕೊಂಡು, ಒಬ್ಬ ನೌಕರನಂತೆ ಉಪಯೋಗಿಸಿಕೊಳ್ಳುತ್ತಿರುವೆನಲ್ಲಾ, ಛೇ! ತುಚ್ಛವಾದ ಈ ರಾಜ್ಯಕ್ಕಾಗಿ ಪರಮಾತ್ಮನ ಅಂತಸ್ತಿಗೆ ತಕ್ಕದಲ್ಲದ ಮಾರ್ಗದಲ್ಲಿ ನೀನು ಹೋಗುವಂತೆ ಮಾಡಿದೆನಲ್ಲ!' ಎಂದು ಒಳಗೊಳಗೇ ದುಃಖಿಸುತ್ತಿದ್ದ.

ಇದಕ್ಕಿಂತಲೂ ದುಃಖದಾಯಕವಾದ ಇನ್ನೊಂದು ಅನಿವಾರ್ಯ ಪ್ರಸಂಗ ಬರುತ್ತಿತ್ತು. ಆಗಲಂತೂ ನಿಮ್ಮ ತಾತ, ಪಾಪ, ಅದೆಷ್ಟು ದುಃಖಪಡುತ್ತಿದ್ದನೋ ಹೇಳಲಾರೆ," ಎಂದರು ವ್ಯಾಸರು. ಪರೀಕ್ಷಿತ್, "ಸ್ವಾಮೀ! ಏನದು ಅಂಥ ಅನಿವಾರ್ಯವಾದುದು?" ಎಂದು ಕೇಳಿದ. ವ್ಯಾಸರು, "ರಾಜಾ! ಯುದ್ಧ ಕೋಲಾಹಲದಲ್ಲಿ

ರಥಿಕ ಸಾರಥಿಗೆ, 'ಹೀಗೆ ಹೋಗು,' 'ಹಾಗೆ, ನಿಲ್ಲಿಸು,' ಎಂದು ಹೇಳಲಾಗುವುದಿಲ್ಲ, ಅಷ್ಟು ಸಮಯವೂ ಇರುವುದಿಲ್ಲ. ಶತ್ರು ಸಂಹಾರದಲ್ಲೇ ರಥಿಕನ ಗಮನವೆಲ್ಲಾ ಇರುವುದರಿಂದ ಬೇರೆ ಯೋಚನೆಗಳು ಅವನಲ್ಲಿ ಇರುವುದಿಲ್ಲ. ಆದ್ದರಿಂದ, ಸಾರಥಿಯ ತಲೆಯ ಎರಡು ಪಕ್ಕಕ್ಕೆ ರಥಿಕನ ಕಾಲ ಹೆಬ್ಬೆರಳುಗಳು ತಗಲುವಂತೆ ಕಾಲುಗಳನ್ನು ಇಟ್ಟುಕೊಳ್ಳಬೇಕಾಗುತ್ತಿತ್ತು. ಯಾವ ದಿಕ್ಕಿಗೆ ಹೋಗಬೇಕೋ ಆ ಕಡೆ, ಕಾಲ ಹೆಬ್ಬೆರಳಿನಿಂದ ಸಾರಥಿಯ ತಲೆಯನ್ನು ತಿವಿಯಬೇಕಾಗುತ್ತಿತ್ತು. ವೇಗವಾಗಿ ಹೋಗಬೇಕಾದರೆ ತಲೆಯ ಎರಡೂ ಕಡೆಯನ್ನೂ ಕಾಲ ಬೆರಳುಗಳಿಂದ ಒಂದೇ ಸಮನೇ ತಿವಿಯಬೇಕಾಗುತ್ತಿತ್ತು. ಅಂಥ ಸಮಯದಲ್ಲಿ ಅರ್ಜುನ ಬಹುವಾಗಿ ಬಾಧೆಪಡುತ್ತಿದ್ದ.

ಯುದ್ಧಭೂಮಿಯಿಂದ ಹಿಂತಿರುಗಿ ಬಿಡಾರಕ್ಕೆ ಬಂದಮೇಲೆ, ತನ್ನ ಬಲವಾದ ಪಾದರಕ್ಷೆಗಳು ತಿವಿದು ತಿವಿದು ಕೃಷ್ಣನ ತಲೆಯ ಎರಡೂ ಕಡೆ ಗಾಯಗಳು ಆಗಿರುವುದನ್ನು ನೋಡಿ, ಅರ್ಜುನ ಇನ್ನು ತನಗೆ ಯುದ್ಧವೇ ಬೇಡವೆನ್ನುತ್ತಿದ್ದ. ಋಷಿಮುನಿಗಳೂ ಜ್ಞಾನಿಗಳೂ ಪೂಜಿಸುವ ಆ ಶಿರಸ್ಸನ್ನು ನಾನು ಪಾದಗಳಿಂದ ತಿವಿಯಬೇಕಾಗಿ ಬಂದಿತಲ್ಲಾ ಎಂದು ದುಃಖದಿಂದ ಕುಗ್ಗಿ ಹೋಗುತ್ತಿದ್ದ.

ಕಮಲದ ಎಸಳಿನಂಥ ಕೃಷ್ಣನ ಕೈಗಳು ಲಗಾಮು ಹಿಡಿದು ಕುದುರೆಗಳನ್ನು ಎಳೆದೆಳೆದು, ಬೊಬ್ಬೆ ಬಂದು ರಕ್ತ ಕಾರುತ್ತಿದ್ದವು. ಹೊತ್ತು ಹೊತ್ತಿಗೆ ಅವನಿಗೆ ನಿದ್ರೆಯಾಗಲಿ, ಆಹಾರವಾಗಲಿ ಇರುತ್ತಿರಲಿಲ್ಲ. ಗೋಪಾಲ, ಸಮಯ ಸಂದರ್ಭ ಗಳನ್ನು ಅನುಸರಿಸಿ, ಈ ಕೆಲಸ, ಆ ಕೆಲಸ ಎಂದು ವ್ಯತ್ಯಾಸ ಮಾಡದೆ, ಎಲ್ಲ ಕೆಲಸ ಗಳನ್ನೂ ಮಾಡುತ್ತಿದ್ದ. ಕುದುರೆಗಳನ್ನು ಕಟ್ಟುವುದರಿಂದ ಹಿಡಿದು, ಅವುಗಳನ್ನು ನದಿಗೆ ಒಯ್ದು ಗಾಯಗಳನ್ನು ತೊಳೆದು, ಔಷಧಿ ಹಾಕಿ, ಅಷ್ಟೇ ಏನು, ಎಲ್ಲಾ ಕೆಲಸ ಮಾಡುತ್ತಿದ್ದ. ಅವನು ನಿಮ್ಮ ತಾತನಿಗೆ ಒಬ್ಬ ಸೇವಕನಂತೆ ಇದ್ದನೇ ವಿನಾ ಪರಮಾತ್ಮನಂತೆ ಇರಲಿಲ್ಲ! ಅದೇ ಅವನ ಭಕ್ತವಾತ್ಸಲ್ಯ!" ಎಂದು ಹೇಳಿದರು.

# ೨೩ ಶಾಪಗ್ರಸ್ತ ಪರೀಕ್ಷಿತ್

ಪಾಂಡವರ ಭಕ್ತಿ ಶ್ರದ್ಧೆಗಳನ್ನೂ ಶ್ರೀ ಕೃಷ್ಣನ ಅನುಗ್ರಹ ಶಕ್ತಿಯನ್ನೂ ವ್ಯಾಸರ ಮೂಲಕ ಕೇಳಿ ತಿಳಿದುಕೊಳ್ಳುತ್ತಿದ್ದ ಪರೀಕ್ಷಿತನಿಗೆ ರಾತ್ರಿ ಹಗಲು ಎನ್ನುವ ಭೇದ ತಿಳಿಯದೆ ಆನಂದದಲ್ಲಿ ಮುಳುಗಿ ತೇಲುತ್ತಿದ್ದ. ಇಷ್ಟರಲ್ಲಿ, ಪಕ್ಷಿಗಳ ಕಿಲಕಿಲ ಶಬ್ದವೂ ಸುಪ್ರಭಾತವೂ ದೇವಸ್ಥಾನದ ಗಂಟೆ ಶಬ್ದವೂ ಕೇಳಿಸಿತು.

ಬೆಳಗಾಯಿತೆಂದು ತಿಳಿದು ವ್ಯಾಸರು, "ಮಗೂ! ನಾನಿನ್ನು ಹೋಗಿ ಬರುತ್ತೇನೆ," ಎಂದು ಪರೀಕ್ಷಿತನನ್ನು ಆಶೀರ್ವದಿಸಿ, ಕಮಂಡಲವನ್ನು ಕೈಯಲ್ಲಿ ಹಿಡಿದು ಹೊರಟರು. ಪರೀಕ್ಷಿತನಿಗೆ ಅರ್ಥವಾಗದಂಥ ವೇದನೆ ಆಗತೊಡಗಿತು. "ಅಯ್ಯೋ! ಆಗಲೇ ಬೆಳಕಾಗಿ ಹೋಯಿತೇ? ನನ್ನ ತಾತಂದಿರ ಮಹತ್ತರವಾದ ಭಕ್ತಿ ಶಕ್ತಿಗಳನ್ನು ಪೂರ್ತಿಯಾಗಿ ಕೇಳಲಾಗಲಿಲ್ಲವಲ್ಲಾ?" ಎಂದು ವ್ಯಥೆಪಟ್ಟ. ಕಾಲಕರ್ಮಗಳನ್ನು ತೀರಿಸಿ, ರಾಜ್ಯಪರಿಪಾಲನೆಯ ವಿಷಯದಲ್ಲಿ ಮನಸ್ಸು ಏನು ಮಾಡಿದರೂ ಹೋಗದಿರಲು, ಏಕಾಂತದಲ್ಲಿ ಇರಬಯಸಿ, ಬೇಟೆಗಾಗಿ ಅರಣ್ಯಕ್ಕೆ ಹೋಗಲು ನಿಶ್ಚಯಿಸಿ, ಪರಿವಾರದವರಿಗೆ ಹೇಳಿ ಕಳಿಸಿದ. ಸ್ವಲ್ಪ ಕಾಲದ ನಂತರ ದ್ವಾರಪಾಲಕರು ಬಂದು ಎಲ್ಲವೂ ಸಿದ್ಧವಾಗಿದೆಯೆಂದು ತಿಳಿಸಲು ಭಾರವಾದ ಮನಸ್ಸಿನಿಂದ ಉತ್ಸಾಹವಿಲ್ಲದವನಾಗಿ ಹೊರಟು ರಥದಲ್ಲಿ ಕುಳಿತ.

ಪರಿವಾರದವರು ಯಥಾ ರೀತಿಯಾಗಿ ಬೇಟೆಗೆ ಬೇಕಾದ ಆಯುಧಗಳನ್ನು ಧರಿಸಿ ಮುಂದೂ ಹಿಂದೂ ಹೊರಟರು. ಇಷ್ಟರಲ್ಲಿ, ರಾಜನಿಗೆ ಏನು ಅನಿಸಿತೋ ಏನೋ, ಇಷ್ಟು ಮಂದಿ ಪರಿವಾರದವರು ಬರುವ ಅಗತ್ಯವಿಲ್ಲವೆಂದು ಹೇಳಿ, ಕೆಲವರು ಹಿಂದಕ್ಕೆ ಹೋಗುವಂತೆ ಆಜ್ಞಾಪಿಸಿದ. ಕೆಲವರನ್ನು ಮಾತ್ರ ಹಿಂದಿಟ್ಟುಕೊಂಡು ಅರಣ್ಯವನ್ನು ಪ್ರವೇಶಿಸಿದ. ಅರಣ್ಯದಲ್ಲಿ ಹೋಗುತ್ತಿರುವಾಗ ಕೆಲವು ಅಡವಿ ಮೃಗಗಳು ಗುಂಪುಗುಂಪಾಗಿ ಎದುರಾದವು.

ಅವುಗಳನ್ನು ನೋಡುತ್ತಿದ್ದಂತೆಯೇ ರಾಜನಿಗೆ ಉತ್ಸಾಹ ಬಂದು ರಥದಿಂದ ಇಳಿದು, ಬಾಣ ಹೂಡಿ, ಕಾಲ್ನಡಿಗೆಯಲ್ಲೇ ಅವುಗಳ ಬೇಟೆಯಾಡಲಾರಂಭಿಸಿದ. ಆ ಅಡವಿ ಮೃಗಗಳು ಚೆಲ್ಲಾಪಿಲ್ಲಿಯಾದವು. ಜೊತೆಯಲ್ಲಿದ್ದ ಕೆಲವು ಮಂದಿ ಸಿಪಾಯಿಗಳೂ ಅವುಗಳನ್ನು ಬೆನ್ನಟ್ಟಿ ಹೋಗಿ, ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಹೋಗಿಬಿಟ್ಟರು. ಮಹಾರಾಜ ಕೆಲವು ಮೃಗಗಳನ್ನು ಬೇಟೆಯಾಡುತ್ತಾ ತಾನೊಂದು ದಿಕ್ಕಿನಲ್ಲಿ ಹೊರಟ. ಅಡವಿಯಲ್ಲಿ ಒಬ್ಬರಿಗೊಬ್ಬರು ದೂರವಾಗಿ, ಪರಸ್ಪರ ಸಂಬಂಧ

ವಿಲ್ಲದೆ, ರಾಜನಿಗೆ ಸಹಾಯ ಮಾಡುವವರಿಲ್ಲದಂತಾಯಿತು. ಆಯಾಸಗೊಂಡ ರಾಜ ಆಯಾಸ ಪರಿಹರಿಸಿಕೊಳ್ಳಲು ನೀರಿಗಾಗಿ ಹುಡುಕಲು ಆರಂಭಿಸಿದ.

ಕಡೆಗೊಂದು ಪರ್ಣಶಾಲೆ ಕಾಣಿಸಿತು. ಬೆಟ್ಟದಷ್ಟು ಆಸೆಯಿಂದ ಅಲ್ಲಿಗೆ ಹೋದ. ಅಲ್ಲಿ ಯಾರೊಬ್ಬರೂ ಕಾಣಿಸಲಿಲ್ಲ. ರಾಜ ಹೊರಗಿನಿಂದ ಎಷ್ಟು ಕರೆದರೂ ಯಾರೂ ಉತ್ತರವನ್ನೇ ಕೊಡಲಿಲ್ಲ. ನಿಧಾನವಾಗಿ ಒಳಗೆ ಹೋಗಿ, "ದಾಹ, ದಾಹ," ಎಂದು ಕೂಗಿದ. ಆದರೂ ಯಾರೂ ಉತ್ತರಿಸಲಿಲ್ಲ. ಒಂದು ಮೂಲೆ ಯಲ್ಲಿ ಒಬ್ಬ ಮುನಿ ತಪಸ್ಸು ಮಾಡುತ್ತಾ ಕುಳಿತಂತೆ ಕಾಣಿಸಿತು. ಅವನ ಹತ್ತಿರ ಹೋಗಿ, "ಸ್ವಾಮೀ, ಸ್ವಾಮೀ," ಎಂದು ಕರೆದರೂ ಧ್ಯಾನಮಗ್ನನಾಗಿದ್ದ ಮುನಿ ಸ್ವಲ್ಪವೂ ಕದಲಲಿಲ್ಲ.

ರಾಜನಿಗೆ ಕೋಪೋದ್ರೇಕ ಉಂಟಾಯಿತು. ಬಾಯಾರಿಕೆಯ ಬಾಧೆಯಿಂದ ಬಳಲಿ ಮುನಿಯಾಶ್ರಮಕ್ಕೆ ಬಂದರೂ ಬಾಯಾರಿಕೆ ನೀಗುವವರೇ ಯಾರೂ ಇಲ್ಲವಾಯಿ ತಲ್ಲಾ? ನಾನು ಚಕ್ರವರ್ತಿ ಎನ್ನುವುದನ್ನೂ ಮರೆತು ಈ ಋಷಿ ಬಾಯಾರಿಕೆಯನ್ನು ಪರಿಹರಿಸದೆ ಹೋದನಲ್ಲಾ ಎನ್ನುವ ಅಜ್ಞಾನವು ಆವರಿಸಿತು. ಕೋಪದಿಂದ ಹಿಂತಿರುಗುತ್ತಿರುವಾಗ, ಅವನ ಕಾಲಿಗೆ ಹಗ್ಗದಂಥದ್ದು ಏನೋ ಸೋಕಿದಂತಾ ಯಿತು. ನೋಡಲು, ಅದು ಮೃತಸರ್ಪ ಎನ್ನುವುದು ತಿಳಿಯಿತು. ಅವನಲ್ಲಿ ವಿಪರೀತ ಬುದ್ಧಿ ಹುಟ್ಟಿ, ಆ ಮೃತಸರ್ಪವನ್ನು ತಪೋಮಗ್ನನಾದ ಮುನಿಯ ಕಂಠಕ್ಕೆ ಮಾಲೆ ಹಾಕಿ, ಹೊರಟುಬಂದ. ಅವನು ಹೊರಗೆ ಬಂದುದನ್ನು ನೋಡಿದ ಕೆಲವು ಋಷಿಕುಮಾರರು, ಒಳಗೆ ಏನು ನಡೆಯಿತೋ ನೋಡೋಣ ಎಂದು ಒಳಹೊಕ್ಕು ನೋಡಿದಾಗ ಧ್ಯಾನ ನಿರತನಾಗಿದ್ದ ಶಮೀಕ ಮಹರ್ಷಿಯ ಕಂಠದಲ್ಲಿ ಸರ್ಪ ಕಾಣಿಸಿತು. ಇದೇನು ವಿಚಿತ್ರ ಎಂದು ನಿಧಾನವಾಗಿ ಪರೀಕ್ಷಿಸಿ ನೋಡಲು ಅದು ಮೃತಸರ್ಪವೆಂದು ತಿಳಿಯಿತು. ಇದು ಯಾರಿಂದಾಗಿರಬಹುದು ಎಂದು ಆಲೋಚಿಸಿ ನೋಡಲು, ಬಹುಶಃ ಈಗ ಹೋದ ವ್ಯಕ್ತಿಯ ಕೆಲಸವೇ ಇರಬೇಕೆಂದು ಊಹಿಸಿದರು. ತಕ್ಷಣ ಆ ಬಾಲಕರು ಶಮೀಕ ಮಹರ್ಷಿಯ ಮಗ, ಶೃಂಗಿ, ಆಟವಾಡುತ್ತಿದ್ದಲ್ಲಿಗೆ ಹೋಗಿ, ಅವನಿಗೆ ಈ ವಿಷಯ ತಿಳಿಸಿದರು.

ಪಾಪ! ಆ ಶೃಂಗಿಗೆ ಇದೆಲ್ಲಾ ಏನು ಗೊತ್ತು! ಇದು ಸುಳ್ಳೆಂದು, ತನ್ನ ತಂದೆಗೆ ಇಂಥ ಅವಮಾನ ಎಂದಿಗೂ ಆಗದೆಂದು, ಇದು ಹುಡುಗಾಟಕ್ಕೆ ಆಡುತ್ತಿರುವ ಮಾತೆಂದೂ ಭಾವಿಸಿ, ಅವರ ಮಾತಿಗೆ ಗಮನ ಕೊಡದೆ, ಆಟದಲ್ಲೇ ಮಗ್ನನಾಗಿದ್ದ. ಜೊತೆಗಾರರು ಅವನಿಗೆ ಮತ್ತೆ ಮತ್ತೆ ಅದನ್ನೇ ಹೇಳಿದರು. ಇದು ಸುಳ್ಳಲ್ಲ. ನಾವು ನಿಜವನ್ನೇ ಹೇಳುತ್ತಿದ್ದೇವೆ, ಬಂದು ನೋಡಿದರೆ ನಿನಗೇ ತಿಳಿಯುವುದು ಎಂದು ಆ

ಬಾಲಕರು ಬಹು ಆತಂಕದಿಂದ ಹೇಳುತ್ತಿದ್ದುದನ್ನು ಕೇಳಿ ಶೃಂಗಿಗೆ ಮನಸ್ಸು ಕರಗಿತು. ಓಡಿಹೋಗಿ, ಆಶ್ರಮದ ಒಳಹೊಕ್ಕು ನೋಡಲು, ಋಷಿಕುಮಾರರು ಹೇಳಿದ ಮಾತು ಸತ್ಯವೆನ್ನುವುದು ತಿಳಿಯಿತು. ತನ್ನ ತಂದೆಗೆ ಇಂಥ ಅಗೌರವ ಮಾಡಿದವರು ಯಾರೆಂದು ಬಹು ವಿಧವಾಗಿ ಆಲೋಚಿಸಿದ. ರಾಜವೇಷಧಾರಿಯೊಬ್ಬನು ಆಶ್ರಮ ದಿಂದ ಹೊರಗೆ ಹೋಗುತ್ತಿದ್ದನೆಂದೂ ಬಹುಶಃ ಅವನೇ ಈ ಕೆಲಸ ಮಾಡಿರ ಬೇಕೆಂದೂ ಋಷಿಕುಮಾರರು ಹೇಳಲು, ಶೃಂಗಿ ಓಡಿ ಹೋಗಿ ಸುತ್ತಲೂ ನೋಡಿದ. ಸ್ವಲ್ಪ ದೂರದಲ್ಲಿ ತೂರಾಡುತ್ತಾ ನಡೆದು ಹೋಗುತ್ತಿದ್ದ ಒಬ್ಬ ರಾಜರೂಪಧಾ ರಿಯಾದವನನ್ನು ನೋಡಿ, ಕ್ರೋಧಾವೇಶದಿಂದ, ತನ್ನ ತಂದೆಗೆ ಇಂಥ ಅವಮಾನ ಮಾಡಿದನಲ್ಲಾ ಎನ್ನುವ ದುಃಖದಿಂದ ನೀರು ತೆಗೆದುಕೊಂಡು ಅವನತ್ತ ಎರಚುತ್ತಾ, "ನನ್ನ ತಂದೆಯ ಕಂಠದಲ್ಲಿ ಮೃತ ಸರ್ಪವನ್ನು ಹಾಕಿದ ವ್ಯಕ್ತಿ ಇನ್ನು ಏಳು ದಿನಗಳಲ್ಲಿ ಸರ್ಪ ಕಡಿದು ಪ್ರಾಣ ಬಿಡಲಿ," ಎಂದು ಶಪಿಸಿದ.

ಸುತ್ತಲಿದ್ದ ಬಾಲಕರು ಎಷ್ಟು ಹೇಳಿದರೂ ಕೇಳದೆ, ಇಂಥ ಕಠಿಣ ಶಾಪವಿತ್ತು, ತನ್ನ ತಂದೆಗೆ ಆದ ಅವಮಾನವನ್ನು ನೆನೆಸಿಕೊಳ್ಳುತ್ತಾ, "ಮಗನಾದ ನಾನು ಜೀವದಿಂದ ಇರುವಾಗಲೇ ನನ್ನ ತಂದೆಗೆ ಇಂಥ ಅವಮಾನ ಆಗುವುದೆಂದರೆ, ಛೀ! ನನ್ನ ಜನ್ಮ ಇದ್ದೇನು ಪ್ರಯೋಜನ? ತಂದೆಯ ಗೌರವವನ್ನು ಕಾಪಾಡಲಾರದ ಮಗ ಇದ್ದರೂ ಇಲ್ಲದಂತೆಯೇ," ಎಂದು ತನ್ನನ್ನು ತಾನು ನಿಂದಿಸಿಕೊಳ್ಳುತ್ತಾ ದುಃಖಿಸಿದ.

ಋಷಿಕುಮಾರರು ಅವನನ್ನು ಸಮಾಧಾನಪಡಿಸುತ್ತಾ ಮುನಿಯ ಕೊರಳಿಗೆ ಹಾವನ್ನು ಹಾಕಿದವನನ್ನು ತಾವೂ ದೂಷಿಸುತ್ತಾ ಒಬ್ಬರಿಗೊಬ್ಬರು ಸಮಾಧಾನ ಹೇಳುತ್ತಿರುವಷ್ಟರಲ್ಲಿ, ಶಮೀಕ ಮಹರ್ಷಿ ತನ್ನ ದೀಕ್ಷೆಯಿಂದ ಜಾಗೃತ ಪ್ರಪಂಚಕ್ಕೆ ಬಂದು, ಕಣ್ಣು ತೆರೆದ. ಕೊರಳಿನಲ್ಲಿದ್ದ ಸತ್ತ ಹಾವನ್ನು ತೆಗೆದು ಪಕ್ಕದಲ್ಲಿ ಹಾಕಿದ. ಎದುರಿಗೆ ಒಂದು ಮೂಲೆಯಲ್ಲಿ ಕುಳಿತು ದುಃಖಿಸುತ್ತಿದ್ದ ಬಾಲಕರನ್ನು ನೋಡಿ, ಹತ್ತಿರ ಕರೆದು, ಏಕೆ ದುಃಖಿಸುತ್ತಿದ್ದೀರಿ ಎಂದು ಕೇಳಿದ. ಅವರು ನಡೆದುದನ್ನೆಲ್ಲಾ ಹೇಳಿದರು.

ಶಮೀಕ ಮಹರ್ಷಿ ಮುಗುಳ್ನಕ್ಕು, "ಪಾಪ! ಯಾರೋ ತಿಳಿಯದೆ ಮಾಡಿದ ಈ ಸಣ್ಣ ಕಾರ್ಯಕ್ಕೆ ನೀವಿಷ್ಟು ದುಃಖಿಸುವುದು ಅಜ್ಞಾನ. ನನಗೆ ಮಾನಾಪಮಾನಗಳ ಸಂಬಂಧವಿಲ್ಲ. ಇಂಥ ಮಾನಾಪಮಾನಗಳಿಗೆ ಮನಸೋಲದಿರುವುದೇ ನಿಜವಾದ ಆತ್ಮತತ್ವ. ಯಾರೋ ತಿಳಿಯದವರು ಈ ಕೆಲಸ ಮಾಡಿದ್ದಾರೆ. ನೀವು ಬಾಲಕರಾದ್ದ ರಿಂದ ಈ ಸಣ್ಣ ವಿಷಯವನ್ನು ದೊಡ್ಡದು ಮಾಡಿ ಬಾಧೆ ಪಡುತ್ತಿದ್ದೀರಿ. ಎದ್ದೇಳಿ, ಹೋಗಿ ಆಟವಾಡಿ," ಎನ್ನುತ್ತಾ ಮಗನಾದ ಶೃಂಗಿಯನ್ನು ಕರೆದು, ತೊಡೆಯಮೇಲೆ

ಕೂರಿಸಿಕೊಂಡು ತಲೆ ಸವರಿದ. ಶೃಂಗಿ ಅಳುತ್ತಾ, "ಅಪ್ಪಾ! ತಿಳಿವಳಿಕೆ ಇಲ್ಲದವರು ಮಾಡಿದ ಕೆಲಸವಲ್ಲ ಇದು, ರಾಜವೇಷಧಾರಿಯಾದ ಒಬ್ಬ ವ್ಯಕ್ತಿ, ಮದಾಂಧನಾಗಿ ಮಾಡಿದ ಪರಮ ಪಾಪಕೃತ್ಯ ಇದು," ಎಂದು ಕಠಿಣೋಕ್ತಿಗಳನ್ನಾಡುತ್ತಿರಲು, ಶಮೀಕ ಮುನಿ, "ಏನು! ರಾಜವೇಷಧಾರಿಯೇ? ನೀವು ನೋಡಿದಿರಾ? ರಾಜರು ಇಂಥ ಹೀನ ಕಾರ್ಯ ಮಾಡುವುದಿಲ್ಲವಲ್ಲಾ!" ಎಂದು ಆಶ್ಚರ್ಯಪಡುತ್ತಿರಲು, ಬಾಲಕರು, "ಗುರುವರ್ಯ! ನಾವು ನೋಡಿದೆವು! ಅವನು ರಾಜನಂತೆಯೇ ಇದ್ದ. ಆಮೇಲೆ ನಾವು ಓಡಿಹೋಗಿ ಶೃಂಗಿಯನ್ನು ಕರೆದುಕೊಂಡು ಬಂದೆವು. ಶೃಂಗಿ ನಿಮ್ಮ ಕಂಠದಲ್ಲಿದ್ದ ಮೃತ ಸರ್ಪವನ್ನು ನೋಡಿ, ದಿಗ್ಭ್ರಾಂತನಾಗಿ, ಎಷ್ಟು ಸಮಾಧಾನ ಹೇಳಿದರೂ ಕೇಳದೆ, ಗಂಗಾಜಲವನ್ನು ಮಂತ್ರಿಸಿ, ಆ ವ್ಯಕ್ತಿಯ ಮೇಲೆ ಎರಚುತ್ತಾ, 'ಇಂದಿಗೆ ಏಳನೇ ದಿನ, ಸರ್ಪವನ್ನು ಹಾಕಿದ ವ್ಯಕ್ತಿ, ಸರ್ಪ ಕಡಿದು ಸಾಯಲಿ,' ಎಂದು ಶಪಿಸಿದ," ಎಂದರು.

ಶಮೀಕ ಮಹರ್ಷಿ ಆಶ್ಚರ್ಯಚಕಿತನಾಗಿ, ತೊಡೆಯ ಮೇಲಿದ್ದ ಮಗನನ್ನು ಕೆಳಗಿಳಿಸಿ, "ಏನು, ಶಾಪ ಕೊಟ್ಟೆಯಾ? ಅಯ್ಯೋ! ಇಂಥ ಸಣ್ಣ ಅಪರಾಧಕ್ಕೆ ಇಂಥ ಬೆಟ್ಟದಂಥ ಶಾಪ ಕೊಡುವುದು ಋಷಿಕುಮಾರನಾದ ನಿನಗೆ ಅಕ್ಷಮ್ಯ ಅಪರಾಧ. ನೀನು ಇಷ್ಟು ಸಣ್ಣ ಅಪರಾಧವನ್ನು ಸಹಿಸಲಾರದ ಬಲಹೀನ ಋಷಿಕುಮಾರನಾದದ್ದು ಇಡೀ ಋಷಿಕುಮಾರ ಲೋಕಕ್ಕೇ ಅಪರಾಧವಲ್ಲವೇ? ಇಂಥ ನೀನು ನನ್ನ ಮಗನೆಂದು ಹೇಳಿಕೊಳ್ಳುವುದಕ್ಕೇ ನಾಚಿಕೆಯಾಗುವುದಲ್ಲಾ? ಅಯ್ಯೋ! ಬಾಲಕರ ಬುದ್ಧಿಗೇಡಿತನ ಮುನಿ ಜಾತಿಗೇ ಅಪಕೀರ್ತಿ ತಂದಿತಲ್ಲಾ. ಛೀ! ಛೀ! ನಿನ್ನ ಮುಖವನ್ನು ನೋಡಕೂಡದು. ಪ್ರಜೆಗಳನ್ನು ಶಿಕ್ಷಿಸುವ ಅಧಿಕಾರ ರಾಜನದ್ದೇ ವಿನಾ ಮುನಿಗಳದ್ದಲ್ಲ. ಪ್ರಜೆಗಳನ್ನು ಶಪಿಸುವ ಮುನಿ ಮುನಿಯಲ್ಲ.

ಸರ್ವಲೋಕ ರಕ್ಷಕನಾದ ಸರ್ವೇಶ್ವರನ ಸಾನ್ನಿಧ್ಯವನ್ನು ಸೇರಬಯಸಿ, ಸರ್ವಸಂಗ ಪರಿತ್ಯಾಗಿಗಳಾಗಿ, ಕಾನನದಲ್ಲಿದ್ದು, ಕಂದಮೂಲಾದಿಗಳನ್ನು ತಿನ್ನುತ್ತಾ ಕಾಯವನ್ನು ತ್ಯಜಿಸುವ ಮುನಿಗಳಿಗೆ ಇಂಥ ಕಠಿಣ ಭಾವನೆಗಳು ಬರುವುದು ಕಲಿಕಾಲ ಪ್ರವೇಶಿಸಿರುವುದರಿಂದಲೇ! ಅಯ್ಯೋ! ಎಂಥ ಪಾಪ ಕಟ್ಟಿಕೊಂಡೆ!" ಎಂದು ಚಿಂತಾಕ್ರಾಂತನಾಗಿ ಕುಮಾರನನ್ನು ನಿಂದಿಸಿದ.

# ೨೪ ಋಷಿಯ ಅನುತಾಪ

ನಿರ್ದಾಕ್ಷಿಣ್ಯವಾಗಿ ಮಾತನಾಡುತ್ತಿದ್ದ ತಂದೆಯ ಮಾತುಗಳು ಕುಮಾರನಾದ ಶೃಂಗಿಯ ಹೃದಯಕ್ಕೆ ಕತ್ತಿ ಇರಿತದಂತೆ, ಸುತ್ತಿಗೆ ಏಟಿನಂತೆ ಬಡಿಯುತ್ತಿರಲು, ಶೃಂಗಿ ದುಃಖ ತಡೆಯಲಾರದೆ, ತಂದೆಯ ಪಾದಗಳ ಮೇಲೆ ಬಿದ್ದು, "ತಂದೆಯೇ! ಕ್ಷಮಿಸು. ರಾಜನಾದವನು ಹೀಗೆ ಅಗೌರವವಾಗಿ ಅವಿನಯವಾಗಿ ವರ್ತಿಸಿದ್ದು ನನಗೆ ಸಹಿಸಲಾಗಲಿಲ್ಲ. ನಿಮಗೆ ಮಾಡಿದ ಅವಮಾನಕ್ಕೆ ಸಿಟ್ಟಾದೆ. ಋಷಿ ಆಶ್ರಮಕ್ಕೆ ಬಂದು ಇಂಥ ಅನುಚಿತ ರೀತಿಯಲ್ಲಿ ವರ್ತಿಸುವುದು ಪ್ರಭುವಿಗೆ ನ್ಯಾಯವಾದುದಲ್ಲ. ಅಲ್ಲವೇ?" ಎಂದು ರೋದಿಸಿದ.

ಶಮೀಕ ಮಹಾಮುನಿ ಪುತ್ರನನ್ನು ಹಿಡಿದು ಮೇಲೆತ್ತಿ, "ಮಗೂ! ಕಾಲ ಬಲವತ್ತರ ವಾದುದು. ಮಾನವನಿಗೆ ವಿವೇಕ ನಶಿಸುವ ಪರಿಸ್ಥಿತಿ ಆಗಾಗ ಬರುವುದು. ವಿನಾಶಕಾಲ ವಿಪರೀತ ರೂಪತಾಳಿ, ಕಾಲನಿಂದ ಹೀಗೆ ಮಾಡಿಸುವುದುಂಟು. ರಾಜ ಮಹಾ ಭಕ್ತ, ತೇಜಸ್ವಿ, ಧರ್ಮಾತ್ಮ, ಸಮಸ್ತ ಭೂಮಂಡಲಕ್ಕೂ ಚಕ್ರವರ್ತಿ. ಅವನ ಕೀರ್ತಿ ತ್ರಿಭುವನಕ್ಕೂ ವ್ಯಾಪಿಸಿದೆ. ಅವನು ಸಾವಿರಾರು ದಾಸದಾಸಿಯರಿಂದ ಸೇವಿಸಲ್ಪಡುವವನು. ಅವನು ಅರಮನೆ ಬಿಟ್ಟು ಹೊರ ಹೊರಟರೆ, ಅನೇಕ ರಕ್ಷಕ ಭಟರು ಅವನ ಸುತ್ತಲೂ ಇದ್ದು, ಕೈಕಟ್ಟಿಕೊಂಡು, ದೃಷ್ಟಿಯನ್ನು ಅವನ ಮೇಲಿಂದ ತೆಗೆಯದೆ, ಅವನ ಹಿಂದೆಯೇ ಪಾದಚಾರಿಗಳಾಗಿ ತಿರುಗುವರು. ಅವನು ಯಾವ ರಾಜ್ಯ ಪ್ರವೇಶಿಸಿದರೂ ಆಯಾ ದೇಶದ ರಾಜರು ಅವನಿಗೆ ಭವ್ಯ ಸ್ವಾಗತ ನೀಡಿ, ಅವನನ್ನು ಅನೇಕ ರೀತಿಯಲ್ಲಿ ಗೌರವಿಸಿ, ಭೃತ್ಯರಾಗಿ ಸೇವೆ ಮಾಡುವರು.

ಇಂಥ ಭೋಗಗಳಿಂದ ಸುಖಿಯಾಗಿರುವ ಮಹಾರಾಜನಿಗೆ ಇಲ್ಲಿ ಯಾರೂ ಸ್ವಾಗತಿಸದಿದ್ದುದು, ಗೌರವಿಸದಿದ್ದುದು ಮಾತ್ರವಲ್ಲ, ಬಾಯಾರಿಕೆ ಪರಿಹರಿಸಿಕೊಳ್ಳಲು ನೀರು ಸಹ ಸಿಕ್ಕದೆ ಹೋಯಿತು. ಬಾಯಾರಿಕೆಯ ಬಾಧೆ ಒಂದು ಕಡೆ. ಎಷ್ಟು ಕೂಗಿದರೂ ಯಾರೂ ಮಾತನಾಡದೆ ಅವನು ನಿರೀಕ್ಷಿಸಿದ ಗೌರವ ಸಿಕ್ಕದ ನಿರಾಶೆಯ ತಾಪ ಮತ್ತೊಂದು ಕಡೆ ಅವನನ್ನು ಆವರಿಸಿದುದರಿಂದ, ತಡೆಯಲಾರದೆ ಅವನು ಇಂಥ ಕಾರ್ಯ ಮಾಡಿದ್ದರಲ್ಲಿ ಸ್ವಲ್ಪ ಔಚಿತ್ಯವಿದೆ. ಇಷ್ಟರಿಂದಲೇ ನೀನು ಕುಪಿತನಾಗಿ ಋಷಿಕುಮಾರರಿಗೆ ಅನುಚಿತವಾದ ಇಂಥ ಕಾರ್ಯದಲ್ಲಿ ತೊಡಗಿ ತಾಪಸ ಲೋಕಕ್ಕೇ ತೀರದ ಪಾಪವನ್ನು ತಂದೊಡ್ಡಿದೆ. ಛೀ, ಛೀ, ಎಂಥ ದ್ರೋಹ ಮಾಡಿಬಿಟ್ಟೆ," ಎಂದು ಮೂದಲಿಸುತ್ತಾ, ಕಣ್ಣುಗಳನ್ನು ಮುಚ್ಚಿಕೊಂಡು ಈ ಅಪರಾಧವನ್ನು ತಪ್ಪಿಸುವ ಉಪಾಯ ಯಾವುದಾದರೂ ಇದೆಯೇ ಎಂದು ಆಲೋಚಿ

ಸಿದ. ಯಾವ ಉಪಾಯವೂ ಇಲ್ಲವೆಂದು ತಿಳಿದು, ಎಲ್ಲದಕ್ಕೂ ಆ ಪರಮೇಶ್ವರನೇ ಸರ್ವಸಮರ್ಥನು ಎಂದು ತೀರ್ಮಾನಿಸಿ, "ಸರ್ವಲೋಕ ಶರಣ್ಯಾ! ಅಪಕ್ವ ಬುದ್ಧಿಯ ಬಾಲಕ ಕರ್ತವ್ಯಾಕರ್ತವ್ಯ ಜ್ಞಾನ ಇಲ್ಲದೆ ಅಜ್ಞಾನದ ಆವೇಶದಲ್ಲಿ ರಾಜನ ಬಗೆಗೆ ಇಂಥ ಅಪರಾಧ ಮಾಡಿದ್ದಾನೆ. ಆದ್ದರಿಂದ ಬಾಲಕನನ್ನು ಕ್ಷಮಿಸಿಯಾಗಲೀ ಶಿಕ್ಷಿಸಿಯಾಗಲೀ ರಾಜನಿಗೆ ಕಲ್ಯಾಣವಾಗುವಂತೆ ಮಾಡು," ಎಂದು ಭಗವಂತನನ್ನು ಪ್ರಾರ್ಥಿಸಿದ. ಇಷ್ಟರಲ್ಲಿ, ಸಮಾಚಾರ ತಿಳಿದು ಅಲ್ಲಿಗೆ ಬಂದ ಋಷಿ ಸಮೂಹವನ್ನೂ ಋಷಿಕುಮಾರರನ್ನೂ ಕುರಿತು, "ನನ್ನ ಮಗ ಮಾಡಿರುವ ಅಪರಾಧವನ್ನು ನೋಡಿದಿರಾ? ಲೋಕಪಾಲಕನಾದ ರಾಜನನ್ನು ಈ ರೀತಿಯಾಗಿ ಅವಮಾನಿಸುವುದು ಋಷಿಗಳಿಗೆ ತಕ್ಕದ್ದಲ್ಲ ಅಲ್ಲವೇ? ಆದ್ದರಿಂದ ನೀವೆಲ್ಲರೂ ಭಗವಂತನ್ನು ಪ್ರಾರ್ಥಿಸಿ, ಆ ರಾಜನಿಗೆ ಯಾವ ಕೇಡೂ ಸಂಭವಿಸದೆ, ಶುಭವಾಗುವಂತೆ ಮಾಡಬೇಕು," ಎಂದು ಹೇಳಿದ.

ಆಗ, ಅವರಲ್ಲೊಬ್ಬ, ಶಾಂತಮೂರ್ತಿಯಾದ ವೃದ್ಧ ಋಷಿ, ಎದ್ದು ನಿಂತು, "ಮಹಾತ್ಮಾ! ನಿಮಗೆ ರಾಜನ ಮೇಲೆ ಇಷ್ಟೊಂದು ಅನುಗ್ರಹ ಇದ್ದರೆ, ಶಾಪ ಕೊಟ್ಟವನು ನಿಮ್ಮ ಮಗನೇ ಅಲ್ಲವೇ? ನಿಮ್ಮ ಶಕ್ತಿ ಪುತ್ರನ ಶಕ್ತಿಗಿಂತಲೂ ಅಧಿಕವಲ್ಲವೇ? ನೀವು ಸರ್ವಸಮರ್ಥರಲ್ಲವೇ? ಅಂದಮೇಲೆ, ನೀವು ಈ ಬಾಲಕ ಕೊಟ್ಟ ಶಾಪ ನೆರವೇರದಂತೆ ಮಾಡಬಹುದಲ್ಲವೇ? ನೀವು ಇಷ್ಟು ಯೋಚಿಸುವುದಾದರೂ ಏಕೆ?" ಎಂದು ಪ್ರಾರ್ಥಿಸಿದ. ಮಿಕ್ಕ ಋಷಿಗಳೂ ಋಷಿಕುಮಾರರೂ, "ಸತ್ಯ, ಸತ್ಯ, ನೀವು ನಮ್ಮ ಪ್ರಾರ್ಥನೆ ಮನ್ನಿಸಿ, ಕುಮಾರನನ್ನು ಕ್ಷಮಿಸಿ, ಚಕ್ರವರ್ತಿಗೆ ಕಲ್ಯಾಣವುಂಟುಮಾಡಬೇಕು," ಎಂದು ಏಕಕಂಠದಿಂದ ಪ್ರಾರ್ಥಿಸಿದರು.

ಶಮೀಕ ಮಹಾಮುನಿ ಮುಗುಳ್ನಕ್ಕು, ಕಣ್ಣು ಮುಚ್ಚಿಕೊಂಡು, ಮಹಾರಾಜನ ಭೂತ, ಭವಿಷ್ಯತ್ತುಗಳನ್ನು ಯೋಗದೃಷ್ಟಿಯಿಂದ ಪರೀಕ್ಷಿಸಿ, ಈಗ ನಡೆದ ಘಟನೆಗೆ ಏನಾದರೂ ಬೇರೆ ಕಾರಣವಿದೆಯೋ ಅಥವಾ ಇದು ಅನಿರೀಕ್ಷಿತವಾದುದೋ ಎಂದು ಆಲೋಚಿಸಿದ. ತಕ್ಷಕನ ವಿಷದಿಂದ ರಾಜ ಸಾಯಬೇಕು. ಇದು ತಪ್ಪಿದ್ದಲ್ಲ. ವಿಧಿಯ ಕಾರ್ಯವನ್ನು ತಪ್ಪಿಸಲು ಪ್ರಯತ್ನಿಸುವುದು ಭಗವದಾಜ್ಞೆಗೆ ವಿರುದ್ಧವಾಗಿ ನಡೆದಂತೆ. ಅಂಥ ಜನ್ಮಾಂತರ ಕರ್ಮವೇ ಈ ಹುಡುಗನಿಗೆ ಇಂಥ ಸಂಕಲ್ಪವನ್ನೂ ರಾಜನಿಗೆ ಇಂಥ ದುರ್ಬುದ್ಧಿಯನ್ನೂ ಕೊಟ್ಟಿತೆಂದೂ ಯೋಗ ದೃಷ್ಟಿಯಿಂದ ತಿಳಿದ. ಸರ್ವ ಸಂಕಲ್ಪ ಸಿದ್ಧನಾದ ಪರಮೇಶ್ವರನೇ ಇದನ್ನು ನಿವಾರಣೆ ಮಾಡಬೇಕಲ್ಲದೆ, ಇತರರಿಗೆ ಇದು ಅಸಾಧ್ಯ. ಹಾಗೆ ಪ್ರಯತ್ನಿಸುವುದು ಅಹಂಕಾರವಾಗುವುದು ಎಂದು ನಿಶ್ಚಯಿಸಿ ಅಹಂಕಾರ ಋಷಿಗಳಿಗೆ ಮಹಾ ಶತ್ರುವಾದ್ದರಿಂದ, ಅಂಥ ಪ್ರಯತ್ನವನ್ನು ಕೈಬಿಡಬೇಕೆಂದು ತೀರ್ಮಾನಿಸಿದ. ತನ್ನಲ್ಲಿ ಎಷ್ಟು ಶಕ್ತಿ ಇದ್ದರೂ

ಅದನ್ನು ದುರ್ವಿನಿಯೋಗ ಮಾಡಲೊಲ್ಲದೆ, ರಾಜನಿಗೆ ಅಲ್ಪ ಸ್ವಲ್ಪ ಸಹಾಯವನ್ನು ಮಾತ್ರ ಮಾಡಲು ನಿಶ್ಚಯಿಸಿದ. ಕಣ್ಣು ತೆರೆದು, ನಾಲ್ಕು ದಿಕ್ಕುಗಳಲ್ಲೂ ನೋಡಿ, ಸಮರ್ಥನಾದ ಒಬ್ಬ ಶಿಷ್ಯ ರತ್ನನನ್ನು ಆರಿಸಿ, "ನೀನೀಗಲೇ ಹಸ್ತಿನಾಪುರಕ್ಕೆ ಹೋಗಿ ಬರಬೇಕು. ಹೊರಡಲು ಸಿದ್ಧತೆ ಮಾಡಿಕೊ," ಎಂದು ಆಜ್ಞಾಪಿಸಿದ. ಅದಕ್ಕೆ ಅವನು, "ಋಷಿ ಶಿಷ್ಯರಿಗೆ ಸಿದ್ಧತೆ ಮಾಡಿಕೊಳ್ಳುವುದೇನಿದೆ? ನಿಮ್ಮ ಆಜ್ಞೆಯೇ ನಮ್ಮ ಸಕಲ ಸಿದ್ಧತೆ. ಈ ನಿಮಿಷವೇ ಇಲ್ಲಿಂದ ಹೊರಡುತ್ತೇನೆ. ನಿಮ್ಮ ಆಜ್ಞೆ ಏನೆಂದು ತಿಳಿಸಬೇಕು," ಎಂದು ನಮಸ್ಕರಿಸಿದ. ಶಮೀಕ ಮಹರ್ಷಿ ಆಸನದಿಂದೆದ್ದು, ಆ ಶಿಷ್ಯನನ್ನು ಒಳಗೆ ಕರೆದುಕೊಂಡು ಹೋಗಿ ರಾಜನಿಗೆ ತಿಳಿಸಬೇಕಾದುದೆಲ್ಲವನ್ನೂ ಸ್ಪಷ್ಟವಾಗಿ ಹೇಳಿದ. ಶಿಷ್ಯ ಶಮೀಕ ಮಹರ್ಷಿಗೆ ನಮಸ್ಕಾರಮಾಡಿ ಹೊರಟ.

ಇತ್ತ ಪರೀಕ್ಷಿತ್ ಮಹಾರಾಜ ಹಸ್ತಿನಾಪುರವನ್ನು ಸೇರಿ ಸ್ವಲ್ಪ ಹೊತ್ತು ವಿಶ್ರಮಿಸಿ ಕೊಂಡು ಎದ್ದ ತಕ್ಷಣವೇ, ತಾನು ಆಶ್ರಮದಲ್ಲಿ ಮಾಡಿದ ಮಹಾಪರಾಧ ನೆನಪಾಗಿ, "ಅಯ್ಯೋ ನನ್ನ ಬುದ್ಧಿ ಎಷ್ಟು ಭ್ರಷ್ಟವಾಯಿತು, ನಿಷ್ಠನಾದ ಮಹಾತಪಸ್ವಿಯನ್ನು ಚಕ್ರವರ್ತಿಯಾದ ನಾನು ಹೀಗೆ ಅವಮಾನಗೊಳಿಸುವುದು ಪರಮ ಪಾಪವಲ್ಲವೆ?" ಎಂದು ಚಿಂತಿಸುತ್ತಾ, ಅದಕ್ಕೆ ಪರಿಹಾರವೇನೆಂದು ಯೋಚಿಸಿದ. "ಮತ್ತೊಮ್ಮೆ ನಾನೇ ಆಶ್ರಮಕ್ಕೆ ಹೋಗಿ ಕ್ಷಮಾಪಣೆ ಕೋರುವುದೇ? ಇಲ್ಲದಿದ್ದರೆ ಅವರ ಶಿಕ್ಷೆಗೆ ತಲೆಬಾಗುವುದೇ? ನನ್ನ ಕರ್ತವ್ಯವೇನು?" ಎಂದು ಪರಿತಪಿಸುತ್ತಿರುವ ಸಮಯದಲ್ಲಿ ಒಬ್ಬ ಸೇವಕ ಬಂದು ಬಾಗಿಲಲ್ಲಿ ಕೈಕಟ್ಟಿ ನಿಂತ.

ಮಹಾರಾಜ ಅವನನ್ನು ನೋಡಿ ವಿಷಯವೇನೆಂದು ಪ್ರಶ್ನಿಸಲು, ಆ ಸೇವಕ, "ಯಾರೋ ಒಬ್ಬ ಋಷಿ ಕುಮಾರ ತಮ್ಮ ದರ್ಶನಕ್ಕಾಗಿ ಬಂದಿದ್ದಾನೆ. ಶಮೀಕ ಮಹರ್ಷಿ ಕಳಿಸಿದ್ದಾರಂತೆ. ಮಹರ್ಷಿ ಕಳಿಸಿರುವ ವಾರ್ತೆಯನ್ನು ಅವನು ಅತಿ ಶೀಘ್ರವಾಗಿ ತಮಗೆ ತಿಳಿಸಬೇಕಾಗಿದೆಯಂತೆ, ಬಹಳ ಆತುರ ಪಡುತ್ತಿದ್ದಾನೆ. ಪ್ರಭುಗಳ ಆಜ್ಞೆ ಏನೆನ್ನುವುದನ್ನು ತಿಳಿಸಬೇಕು," ಎಂದ. ಅದನ್ನು ಕೇಳುತ್ತಲೇ ರಾಜನಿಗೆ ತಾನು ಮಲಗಿದ್ದ ಹಾಸಿಗೆ ಹಾವಿನಂತೆ ಬುಸುಗುಟ್ಟಿದಂತಾಯಿತು. ಬೆಂಕಿಯಂತೆ ಸುಡುವ ಹಾಗಾಯಿತು. ತಕ್ಷಣವೇ ಎದ್ದು, ದ್ವಾರಪಾಲಕನನ್ನು ಹತ್ತಿರ ಕರೆದು, "ಋಷಿಕುಮಾರ ಏನು ಹೇಳಿದ? ಅವನ ಮುಖ ಚಿಂತಾಕ್ರಾಂತವಾಗಿ ಇದೆಯೆ? ಕ್ರೋಧಗೊಂಡಂತಿದೆಯೆ? ಇಲ್ಲವೇ ಆನಂದ, ಶಾಂತಿ ಹೊರಸೂಸುತ್ತಾ ಇದೆಯೆ?" ಎಂದು ಮೇಲಿಂದ ಮೇಲೆ ಪ್ರಶ್ನೆಗಳನ್ನು ಹಾಕತೊಡಗಿದ. ದ್ವಾರಪಾಲಕ ವಿನಯದಿಂದ ತಲೆಬಾಗಿ, "ಮಹಾರಾಜ! ಆ ಮುನಿಕುಮಾರ ಪರಮ ಶಾಂತನು, ಯಾವಾಗಲೂ, 'ಮಹಾರಾಜನಿಗೆ ಜಯವಾಗಲಿ, ಜಯವಾಗಲಿ,' ಎನ್ನುತ್ತಿದ್ದಾನೆ. ಅವನ ಮುಖದಲ್ಲಿ ಸ್ವಲ್ಪವೂ ಉದ್ರೇಕ ಕಾಣುತ್ತಿಲ್ಲ," ಎಂದು ಉತ್ತರಿಸಿದ. ಅದನ್ನು

ಕೇಳಿ ಮಹಾರಾಜನಿಗೆ ಸಮಾಧಾನವಾಯಿತು. "ಆ ಮಹರ್ಷಿ ಕುಮಾರನ ಪ್ರಶ್ನೆಗೆ ನೀನೇನು ಹೇಳಿ ಬಂದೆ?" ಎಂದು ದ್ವಾರಪಾಲಕನನ್ನು ಕೇಳಿದ. "ವಿಪ್ರೋತ್ತಮಾ! ಮಹಾರಾಜರು ಅರಣ್ಯದಿಂದ ಆಯಾಸಪಟ್ಟು ಬಂದಿದ್ದಾರೆ, ವಿಶ್ರಾಂತಿ ಪಡೆದು ಎದ್ದೊಡನೆ ನಿನ್ನ ವಾರ್ತೆಯನ್ನು ಅವರಿಗೆ ತಿಳಿಸುತ್ತೇನೆ," ಎಂದು ಹೇಳಿಬಂದಿದ್ದೇನೆ ಎಂದ ದ್ವಾರಪಾಲಕ.

"ಅದಕ್ಕೆ ಆ ಮುನಿಕುಮಾರ ಏನೆಂದ?" ಎಂದು ಮಹಾರಾಜ ಮತ್ತೆ ಪ್ರಶ್ನಿಸಿದ. ದ್ವಾರಪಾಲಕ, "ಪ್ರಭೂ! ಆ ಮುನಿಕುಮಾರ ತಮ್ಮನ್ನು ಬೇಗ ನೋಡಬೇಕಾಗಿ ಇದೆಯಂತೆ. ಅವನ ಗುರುಗಳು ಪ್ರತಿ ನಿಮಿಷವನ್ನೂ ಎಣಿಸುತ್ತಿದ್ದಾರಂತೆ. ಋಷಿ ಕುಮಾರ ನಿಮಿಷ ನಿಮಿಷಕ್ಕೂ, 'ರಾಜನಿಗೆ ಶುಭವಾಗಲಿ, ರಾಜನಿಗೆ ಶುಭವಾಗಲಿ,' ಎನ್ನುತ್ತಿದ್ದಾನೆ. ಕುಳಿತುಕೊಳ್ಳಲು ಹೇಳಿದರೂ ಕುಳಿತುಕೊಳ್ಳದೆ, ಅವನು ಬಾಗಿಲಲ್ಲಿ ನಿಂತು ನಿಮಿಷಗಳನ್ನು ಎಣಿಸುತ್ತಿದ್ದಾನೆ," ಎಂದ.

ರಾಜ ಆನಂದಬಾಷ್ಪಗಳನ್ನು ಸುರಿಸುತ್ತಾ ಕಿರೀಟವನ್ನೂ ಧರಿಸದೆ, ಪಾದರಕ್ಷೆಗಳನ್ನೂ ಹಾಕಿಕೊಳ್ಳದೆ, ಅಂಗವಸ್ತ್ರ ಹೊದ್ದುಕೊಳ್ಳದೆ, ವೇಗವಾಗಿ ನಡೆದು ಮಹಾದ್ವಾರದ ಬಳಿ ಬಂದ. ಮುನಿಕುಮಾರನನ್ನು ನೋಡಿ ಸಾಷ್ಟಾಂಗ ನಮಸ್ಕಾರ ಮಾಡಿ, ಅವನ ಎರಡು ಕೈಗಳನ್ನು ಹಿಡಿದುಕೊಂಡು ಒಳಗೆ ಕರೆದುಕೊಂಡು ಹೋದ. ಅವನನ್ನು ಉನ್ನತಾಸನದಲ್ಲಿ ಕುಳ್ಳಿರಿಸಿ, ತಾನು ಕೆಳಗೆ ಕುಳಿತು, ಅವನು ಬಂದ ಕಾರಣವೇನೆಂದು ಅತ್ಯಂತ ವಿನಯದಿಂದ ವಿಚಾರಿಸಿದ. ಮುನಿಕುಮಾರ, "ರಾಜಾ! ನಮ್ಮ ಗುರು ಶಮೀಕ ಮಹಾಮುನಿ ತಮಗೆ ಆಶೀರ್ವಾದಗಳನ್ನು ಕಳಿಸಿದ್ದಾರೆ. ಅಲ್ಲದೆ, ಕೆಲವು ಮುಖ್ಯವಾದ ವಿಷಯಗಳನ್ನು ತಮಗೆ ತಿಳಿಸುವಂತೆ ಹೇಳಿ ಕಳುಹಿಸಿದ್ದಾರೆ," ಎನ್ನುತ್ತಾ ಕಣ್ಣೀರು ಒರೆಸಿಕೊಳ್ಳುತ್ತಿದ್ದುದನ್ನು ನೋಡಿ, ಮಹಾ ರಾಜ ಆತಂಕದಿಂದ, "ಮುನಿಕುಮಾರಾ! ಅದೇನು ವಿಷಯ ಬೇಗ ಹೇಳು. ನನ್ನಿಂದಾಗಬೇಕಾದ ಕೆಲಸವು ಏನಿದ್ದರೂ ಪ್ರಾಣವನ್ನಾದರೂ ಒಡ್ಡಿ ನೆರವೇರಿಸಿ ಕೊಡಲು ಸಿದ್ಧನಾಗಿದ್ದೇನೆ. ಹಾಗಲ್ಲದೆ ನನ್ನ ರಾಜ್ಯಕ್ಕೇನಾದರೂ ಕೇಡು ಸಂಭವಿಸುವ ದಿನಗಳು ಬರಲಿವೆಯೇ? ಹಾಗಿದ್ದರೆ ಅದಕ್ಕೆ ತಕ್ಕ ಪರಿಹಾರ ಏನೆನ್ನುವುದನ್ನು ತಿಳಿಸಿದರೆ ತಪ್ಪದೆ ಶಿರಸಾವಹಿಸಿ ಮಾಡುತ್ತೇನೆ," ಎಂದು ಪ್ರಾರ್ಥಿಸಿದ.

# ೨೫ ಶಾಪವೊ, ವರವೊ

ಆ ಋಷಿಕುಮಾರನು, "ಮಹಾರಾಜ! ರಾಜ್ಯಕ್ಕಾಗಲೀ ಋಷಿಗಳಿಗಾಗಲೀ ಯಾವ ವಿಪತ್ತೂ ಬಂದಿಲ್ಲ. ಬರುವುದೂ ಇಲ್ಲ. ಆದರೆ, ತಮಗೇ ವಿಪತ್ತು ಸಂಭವಿಸುವ ಕಾಲ ಸಮೀಪಿಸುತ್ತಿದೆ," ಎಂದು ಸೂಚ್ಯವಾಗಿ ಹೇಳಲು ಮಹಾರಾಜ, "ನಾನು ಧನ್ಯ! ಋಷಿಗಳೂ ಪ್ರಜೆಗಳೂ ಶುಭದಿಂದಿದ್ದರೆ ಸಾಕು. ನನಗೆಂಥ ವಿಪತ್ತು ಸಂಭವಿಸಿದರೂ ಪರವಾಗಿಲ್ಲ. ಅವರ ಸುಖ ಶಾಂತಿಯೇ ನನ್ನ ಉಚ್ಛ್ವಾಸ ನಿಶ್ವಾಸಗಳು," ಎಂದುಕೊಂಡು ಸ್ವಲ್ಪ ಶಾಂತನಾದ. "ನಿಮ್ಮ ಗುರು ಏನು ಹೇಳಿಕಳಿಸಿದ್ದಾರೋ ಹೇಳಿ," ಎಂದು ಮುನಿಕುಮಾರನನ್ನು ಪ್ರಾರ್ಥಿಸಿದ. ಆಗ ಮುನಿ ಶಿಷ್ಯ, "ಮಹಾರಾಜಾ! ತಿಳಿಯದೆ ಅಜ್ಞಾನದಿಂದ ಆದ ಒಂದು ಮಹಾಪರಾಧಕ್ಕಾಗಿ ಮಹಾಮುನಿ ಬಹಳ ಚಿಂತಿಸುತ್ತಿದ್ದಾರೆ. ಆ ವಿಷಯವನ್ನು ನಿಮಗೆ ತಿಳಿಸುವುದಕ್ಕಾಗಿಯೇ ನನ್ನನ್ನು ಇಲ್ಲಿಗೆ ಕಳಿಸಿದ್ದಾರೆ," ಎಂದ. ಮಹಾರಾಜ ಗಾಬರಿಯಿಂದ, "ಏನದು ಅಪರಾಧ? ಮಾಡಿದವರು ಯಾರು? ದಯವಿಟ್ಟು ಎಲ್ಲವನ್ನೂ ವಿಶದವಾಗಿ ತಿಳಿಸಿ," ಎಂದು ಪ್ರಾರ್ಥಿಸಿದ.

ಮುನಿಕುಮಾರ, "ಮಹಾರಾಜಾ! ನಮ್ಮ ಗುರುವಿಗೆ ಒಬ್ಬ ಮಗನಿದ್ದಾನೆ. ಅವನು ಬಾಲಕನಾದರೂ ಅವನ ತೇಜೋಶಕ್ತಿ ಬಹಳ ತೀಕ್ಷ್ಣವಾದುದು. ಅವನು ತಂದೆಯನ್ನೇ ದೈವವೆಂದು ತಿಳಿದವನು. ತಂದೆಯ ಯೋಗಕ್ಷೇಮ ಗೌರವಗಳೇ ಅವನ ಮುಖ್ಯ ಗುರಿ. ಶೃಂಗಿ ಎಂದು ಅವನ ಹೆಸರು.

ನೀವು ಆಶ್ರಮಕ್ಕೆ ಬಂದು, ಯಾವ ಕಾರಣದಿಂದಲೋ ಏನೋ ನಿಮಗೆ ಅಂಥ ಬುದ್ಧಿ ಬಂದು, ಶೃಂಗಿಯ ತಂದೆ ಶಮೀಕ ಮಹರ್ಷಿಯ, ಅಂದರೆ ನಮ್ಮ ಗುರುವಿನ, ಕಂಠಕ್ಕೆ ಮೃತಸರ್ಪವನ್ನು ಹಾಕಿ ಬಂದಿರಿ. ಅದನ್ನು ಕೆಲವು ಋಷಿಕುಮಾರರು ನೋಡಿ, ಓಡಿಹೋಗಿ ಇತರ ಋಷಿಕುಮಾರರೊಂದಿಗೆ ಆಡುತ್ತಿದ್ದ ಶೃಂಗಿಗೆ ಹೇಳಿದರು. ಶೃಂಗಿ ಮೊದಲು ಇದನ್ನು ನಂಬಲಿಲ್ಲ. ತನ್ನ ಆಟದಲ್ಲೇ ಮಗ್ನನಾಗಿದ್ದ. ಆದರೆ ಆ ಋಷಿಕುಮಾರರು ಬಿಡದೆ ಮತ್ತೆ ಮತ್ತೆ ಅದನ್ನೇ ಹೇಳುತ್ತಾ ತಂದೆಗೆ ಇಂಥ ಅವಮಾನವಾದರೂ ನೀನು ಲೆಕ್ಕಿಸದೆ ಆಟವಾಡುತ್ತಿದ್ದೀಯಲ್ಲಾ ಎಂದು ಪರಿಹಾಸ್ಯ ಮಾಡಿದರು. ಶೃಂಗಿ ಉದ್ರೇಕಗೊಂಡು, ಓಡಿಬಂದು, ತಂದೆಯನ್ನು ನೋಡಿ, ಋಷಿಕುಮಾರರು ಹೇಳಿದ್ದು ಸತ್ಯವೆನ್ನುವುದನ್ನು ತಿಳಿದ. ಹಿಂತಿರುಗಿ ನೋಡಿ, ನೀವು ಹೋಗುತ್ತಿರುವುದನ್ನು ಕಂಡು, ನಿತ್ಯಾನಿತ್ಯ ವಿಚಾರಮಾಡದೆ, ಕ್ರೋಧೋದ್ರೇಕದಿಂದ, ಹುಡುಗು ಬುದ್ಧಿಯಿಂದ ನಿಮ್ಮನ್ನು ಶಪಿಸಿದ. ಅದೇ ನಮ್ಮ

ಗುರುವಿಗಾಗಿರುವ ತೀವ್ರ ಬಾಧೆ," ಎಂದ. ರಾಜ ಆತಂಕದಿಂದ, "ಮುನಿಕುಮಾರಾ! ಶೃಂಗಿ ನನ್ನನ್ನು ಏನೆಂದು ಶಪಿಸಿದ?" ಎಂದು ಕೇಳಿದ. "ಪ್ರಭೂ! ಅದನ್ನು ಹೇಗೆ ಹೇಳಲಿ? ಹೇಳಲು ನಾಲಗೆಯೇ ಬರುತ್ತಿಲ್ಲ. ಗುರುವಾಜ್ಞೆಯಾದ್ದರಿಂದ ಹೇಳಲೇ ಬೇಕಾಗಿದೆ. ಗುರುಕುಮಾರ ಕೌಶಿಕೀ ಜಲವನ್ನು ಹಿಡಿದು ತನ್ನ ತಂದೆಯ ಕೊರಳಿಗೆ ಸತ್ತ ಹಾವನ್ನು ಹಾಕಿದವನು ಇನ್ನು ಏಳು ದಿನಗಳೊಳಗಾಗಿ ತಕ್ಷಕ ಸರ್ಪ ಕಚ್ಚಿ ಸಾಯಲಿ ಎನ್ನುವ ಭಯಂಕರ ಶಾಪವಿತ್ತ," ಎಂದು ಋಷಿ ಕುಮಾರ ಕಣ್ಣೀರು ಹಾಕಿದ.

ರಾಜ ನಕ್ಕು, "ಮುನಿಶಿಷ್ಯಾ! ಇದೇನೇ ಆ ಶಾಪ! ತಕ್ಷಕ ಕಚ್ಚುವುದು ಅದೂ ಏಳು ದಿನಗಳ ನಂತರ! ಇದು ಮಹಾ ವರಪ್ರಸಾದವೇ ಹೊರತು. ಶಾಪವಲ್ಲ! ಇದು ಮುನಿಕುಮಾರನ ಅನುಗ್ರಹ! ಅದು ಹೇಗೆಂದರೆ, ನಾನು ನಿರಂತರವೂ ರಾಜಕಾರ್ಯದಲ್ಲಿ ಮಗ್ನನಾಗಿ, ಜೀವಿತ ಲಕ್ಷ್ಯವಾದ ದೈವಕಾರ್ಯದ ಬಗೆಗೆ ಆಲಸ್ಯದಿಂದಿದ್ದೆ. ಆದಕಾರಣ ಆ ಶ್ರೀಹರಿ ಋಷಿಕುಮಾರನ ನಾಲಗೆಯಲ್ಲಿ ಸೇರಿ ಹೀಗೆ ನುಡಿದಿದ್ದಾನೆ. ಅಲ್ಲದೆ ನಾನು ಈ ಏಳು ದಿನಗಳೂ ಒಂದು ನಿಮಿಷ ಕೂಡ ವ್ಯರ್ಥ ಮಾಡದೆ ಶ್ರೀಹರಿ ಚಿಂತನೆ ಮಾಡಬೇಕೆಂಬುದೇ ಭಗವದುದ್ದೇಶ ಆಗಿರಬೇಕು. ಆದ್ದರಿಂದ ನಾನು ಧನ್ಯನಾದೆ. ಈಗಿನಿಂದಲೇ ಆ ಶ್ರೀಹರಿಯ ಧ್ಯಾನದಲ್ಲಿ ಕಾಲವನ್ನೂ ಕಾಯವನ್ನೂ ಕಳೆದು ಅವನ ಚರಣಾಂಬುಜಗಳಲ್ಲಿ ಅರ್ಪಿತ ಮಾಡುತ್ತೇನೆ. ಮುನಿಶಿಷ್ಯಾ, ನಿಮ್ಮ ಗುರು ಮತ್ತಿನ್ನೇನು ಹೇಳಿದರೋ ತಿಳಿಸು. ಕೇಳುವ ಕುತೂಹಲವುಂಟಾಗಿದೆ," ಎಂದು ರಾಜ ಪ್ರಾರ್ಥಿಸಿದ.

ಅದಕ್ಕೆ ಮುನಿಶಿಷ್ಯ, "ಪ್ರಭೂ! ತಾವು ಧರ್ಮಾತ್ಮರೆಂದೂ ಹರಿಭಕ್ತರೆಂದೂ ಇಂಥ ತಮ್ಮನ್ನು ತನ್ನ ಮಗ ಕಠಿಣ ಮಾತುಗಳಿಂದ ಶಪಿಸಿದುದು ರಾಜದ್ರೋಹ ಎಂದು ಭಾವಿಸಿ, ತಾವು ಈ ಶಾಪಕ್ಕೆ ಗುರಿಯಾಗದಂತೆ ಮಾಡಲು ಅವರು ಅನೇಕ ಬಗೆಯಾಗಿ ಯೋಗದೃಷ್ಟಿಯಿಂದ ವಿಚಾರಮಾಡಿ ನೋಡಿದರು. ಆದರೂ ನೀವು ಭಗವಂತನ ಪರಂಧಾಮವನ್ನು ಹೊಂದುವಿರೆಂದೂ ಇದು ಸಾರ್ಥಕವಾದುದು ಎಂದೂ ಇಂಥ ಪ್ರಾಪ್ತಿಗೆ ತಾವು ಅಡ್ಡಿಯಾಗುವುದು ಪಾಪವೆಂದು ತಿಳಿದು, ನಿಮಗೆ ಭಗವತ್ಸಾನ್ನಿಧ್ಯ ಪ್ರಾಪ್ತಿಯಾಗಲಿ ಎಂದು ಆಶೀರ್ವದಿಸಿ, ಈ ವಿಷಯವನ್ನು ತಮಗೆ ತಿಳಿಸಿ ಬಾ ಎಂದು ನನ್ನನ್ನು ಕಳಿಸಿದರು. ನಾನು ಬಂದ ಕೆಲಸವಾಯಿತು. ಇನ್ನು ನಾನು ಹೊರಡುತ್ತೇನೆ," ಎಂದು ಹೇಳಿದ. ಮಹಾರಾಜ ಪರೀಕ್ಷಿತ್ ಮುನಿಶಿಷ್ಯನಿಗೆ ನಮಸ್ಕರಿಸಿ, ತಾನು ಧನ್ಯನೆಂದೂ ತನಗಿಂಥ ಪ್ರಾಪ್ತಿ ಕೈಗೂಡುವಂತೆ ಮಾಡಿದ ಮುನಿಕುಮಾರನಿಗೂ ಮುನಿಶ್ರೇಷ್ಠ ಶಮೀಕ ಮಹರ್ಷಿಗೂ ಧನ್ಯವಾದಗಳನ್ನು

ಅರ್ಪಿಸುವಂತೆ ಪ್ರಾರ್ಥಿಸಿದ. ಶಮೀಕನ ಶಿಷ್ಯ ಆಶ್ರಮಕ್ಕೆ ಹಿಂತಿರುಗಿ ಹೋಗಿ ನಡೆದ ಸಮಾಚಾರವನ್ನೆಲ್ಲಾ ಮುನಿಗೆ ತಿಳಿಸಿದ.

ಇತ್ತ ಮಹಾರಾಜ ಪರಮೋಲ್ಲಾಸದಿಂದ ಅಂತಃಪುರದ ದ್ವಾರಕ್ಕೆ ಬಂದು, ಹೊರಗೆ ನಿಂತು, ತನ್ನ ಕುಮಾರನಾದ ಜನಮೇಜಯನನ್ನು ಕರೆತರುವಂತೆ ಹೇಳಿ ಕಳಿಸಿದ. ತಂದೆ ಹೀಗೆ ಅನಿರೀಕ್ಷಿತವಾಗಿ ಹೇಳಿ ಕಳಿಸಿದ್ದನ್ನು ನೋಡಿ, ಜನಮೇಜಯ ಆತಂಕದಿಂದ, ಎಲ್ಲಿದ್ದನೋ ಅಲ್ಲಿಂದಲೇ ಹೊರಟು ಬಂದ. ಪರೀಕ್ಷಿತ್ ಒಬ್ಬ ವೃದ್ಧ ಬ್ರಾಹ್ಮಣನನ್ನು ಕರೆದು, ಒಳಗೆ ತನ್ನ ಮಂಚದ ಮೇಲೆ ಹಾಸಿಗೆಯ ಬಳಿ ಇದ್ದ ಕಿರೀಟವನ್ನು ತರುವಂತೆ ಹೇಳಿ ಕಳಿಸಿದ. ಅವನು ಕಿರೀಟವನ್ನು ತಂದೊಡನೆ, ಆ ಕ್ಷಣವೇ ಅದನ್ನು ಜನಮೇಜಯನ ಶಿರಸ್ಸಿನ ಮೇಲಿಟ್ಟು, ಆ ಬಾಲಕನನ್ನು ವೃದ್ಧ ಬ್ರಾಹ್ಮಣನ ವಶಕ್ಕೊಪ್ಪಿಸಿ, ಉಟ್ಟ ಬಟ್ಟೆಯಲ್ಲೇ ಬರಿಗಾಲಿನಲ್ಲಿ ಗಂಗಾನದೀ ತೀರಕ್ಕೆ ಹೊರಟ.

ಈ ವಾರ್ತೆ ಕ್ಷಣದಲ್ಲಿ ಅಂತಃಪುರದೊಳಗೂ ಪಟ್ಟಣದ ಮೂಲೆ ಮೂಲೆಗಳಿಗೂ ಹರಡಿ, ಪ್ರಜೆಗಳೂ ಬ್ರಾಹ್ಮಣರೂ ಸ್ತ್ರೀಯರೂ ರಾಣಿಯರೂ ಮಂತ್ರಿಗಳೂ ಗುಂಪು ಗುಂಪಾಗಿ ಬಂದು ಎಷ್ಟು ಪ್ರಾರ್ಥಿಸಿದರೂ ಪರೀಕ್ಷಿತನ ನಿರ್ಧಾರವನ್ನು ತಪ್ಪಿಸಲು ಸಾಧ್ಯವಾಗದೆ ಹೋಯಿತು. ಎಲ್ಲರೂ ಪರಿಪರಿಯಾಗಿ ದುಃಖಿಸಿದರು. ಪಾದಗಳ ಮೇಲೆ ಬಿದ್ದರು. ರಸ್ತೆಯಲ್ಲಿ ಹೊರಳಿದರು. ಏನಾದರೂ ರಾಜ ಕಣ್ಣೆತ್ತಿ ನೋಡಲಿಲ್ಲ. ಹರಿನಾಮ ಸ್ಮರಣೆ ಮಾಡುತ್ತಾ ತನ್ನ ಉದ್ದೇಶ ಕೈಬಿಡದೆ, ಯಾರು ಏನೇ ಕೇಳಿದರೂ ಉತ್ತರ ಹೇಳದೆ, ಭಾಗೀರಥೀ ತೀರಕ್ಕೆ ಹೊರಟ. ಜೊತೆಯಲ್ಲೇ ಆನೆ, ಕುದುರೆ, ರಥ, ಪಲ್ಲಕ್ಕಿಗಳು ಬರುತ್ತಿದ್ದರೂ ಮಹಾರಾಜ ಯಾವುದನ್ನೂ ಗಮನಿಸಲಿಲ್ಲ. ಆಹಾರ ಪಾನೀಯಗಳಿಲ್ಲದೆ ನಿರಾಹಾರ ದೀಕ್ಷೆಯಿಂದ, ನಿಮಿಷವೂ ಬಿಡುವಿಲ್ಲದೆ ಶ್ರೀಹರಿ ಸ್ಮರಣೆ ಮಾಡುತ್ತಿದ್ದ. ಅವನನ್ನು ನೋಡಿದ ಪ್ರತಿಯೊಬ್ಬರೂ ಪರಮಾಶ್ಚರ್ಯ ಪಟ್ಟು, ಇಂಥ ತೀವ್ರ ವೈರಾಗ್ಯಕ್ಕೆ ಕಾರಣವೇನೆಂದು ತಿಳಿಯದೆ, ತಮತಮಗೆ ತೋಚಿದಂತೆ ಊಹಿಸಿಕೊಳ್ಳುತ್ತಾ ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು.

ಹೀಗಿರುವಲ್ಲಿ, ಇದಕ್ಕೆ ಮೊದಲು ಮುನಿಶಿಷ್ಯ ಬಂದುದು, ಅವನು ಋಷಿಯ ಆಶ್ರಮದಲ್ಲಿ ನಡೆದುದನ್ನು ಮಹಾರಾಜನಿಗೆ ತಿಳಿಸಿದ್ದು, ತಮ್ಮ ಮಹಾರಾಜ ಇನ್ನು ಏಳು ದಿನಗಳು ಮಾತ್ರವೇ ಜೀವಿಸಿರುವರೆನ್ನುವುದು, ಈ ಎಲ್ಲ ಸಂಗತಿಗಳನ್ನೂ ತಿಳಿದ ಕೆಲವರು, ಅದನ್ನು ಇತರರಿಗೂ ತಿಳಿಸಿದರು. ಮಾಡಬೇಕಾದ ಏರ್ಪಾಟು ಗಳನ್ನೆಲ್ಲಾ ಮಾಡಿ, ತಾವೂ ಸಹ ಆ ನದೀ ತೀರದಲ್ಲೇ ರಾಜನೊಂದಿಗೆ ಇದ್ದು, ತಮ್ಮ ರಾಜನನ್ನು ರಕ್ಷಿಸೆಂದು ಭಗವಂತನನ್ನು ಪ್ರಾರ್ಥಿಸಲು ಮೊದಲು ಮಾಡಿದರು.

ಇಷ್ಟರಲ್ಲಿ, ಈ ವಾರ್ತೆ ಅಡವಿಯನ್ನೂ ಮುಟ್ಟಿತು. ಅಲ್ಲಿಂದ ಸಹಸ್ರಾರು ಋಷಿಗಳು ದಂಡಕಮಂಡಲಗಳೊಂದಿಗೆ ಭಾಗೀರಥೀ ತೀರಕ್ಕೆ ಬಂದರು. ನದೀ ತೀರವೆಲ್ಲಾ ಒಂದು ಉತ್ಸವ ಸಂಭ್ರಮದಿಂದ ಕಂಗೊಳಿಸಿತು. ಎಲ್ಲಿ ನೋಡಿದರೂ ಓಂಕಾರ, ನಾಮಸ್ಮರಣೆ, ವೇದಘೋಷ ಕೇಳಿಸುತ್ತಿತ್ತು. ಕೆಲವರು ಶಾಪಕೊಟ್ಟ ಋಷಿಕುಮಾರ ನನ್ನು ನಿಂದಿಸುತ್ತಿದ್ದರು. ಹೀಗೆ ಭಾಗೀರಥೀ ನದಿ, ಮರಳು, ನೀರುಗಳಿಲ್ಲದೆ ಮನುಷ್ಯ ರಿಂದಲೇ ತುಂಬಿದೆಯೆನೋ ಎನ್ನುವಂತೆ ಕಾಣಿಸುತ್ತಿತ್ತು.

ಆಗ, ಮಹಾರಾಜನ ಮೇಲೆ ಅಪಾರ ದಯಾಭಿಮಾನವುಳ್ಳ ಒಬ್ಬ ವೃದ್ಧ ಋಷಿ ಮಹಾರಾಜನ ಬಳಿಗೆ ಬಂದು ಪ್ರೇಮಾಶ್ರುಗಳನ್ನು ಸುರಿಸುತ್ತಾ, "ಮಹಾರಾಜಾ! ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳುತ್ತಿದ್ದ ಗಾಳಿ ವಾರ್ತೆಗಳನ್ನು ಕೇಳಿ, ಸತ್ಯಸಂಗತಿ ತಿಳಿದುಕೊಳ್ಳುವ ಸಲುವಾಗಿ ನಡೆಯಲಾರದ ನಾನು ನಿಮ್ಮ ಮೇಲಿನ ದಯೆಯಿಂದ, ಇಷ್ಟು ದೂರ ಬಂದಿದ್ದೇನೆ. ನಿಜ ಸಂಗತಿ ಏನು? ನೀವು ಇಷ್ಟು ವೈರಾಗ್ಯ ತಾಳಲು ಕಾರಣವೇನು? ನಿಮ್ಮಂಥ ಧರ್ಮಾತ್ಮರಿಗೆ ಮುನಿಕುಮಾರ ಶಾಪಕೊಟ್ಟಿರುವುದರ ಅಂತರಾರ್ಥವೇನು? ತಿಳಿಸಿ ನಮ್ಮನ್ನು ತೃಪ್ತಿಪಡಿಸಬೇಕು. ರಾಜ್ಯದಲ್ಲಿ ಪ್ರಜೆಗಳು ಪಡುತ್ತಿರುವ ಬಾಧೆಯನ್ನು ನಾನು ನೋಡಲಾರೆ. ತಂದೆ ಸಮಾನನಾದ ಪ್ರಭು, ಸರ್ವಸಂಗ ಪರಿತ್ಯಾಗಿಯಾಗಿ, ಪ್ರಜೆಗಳ ಮೊರೆಯನ್ನು ಎಳ್ಳಷ್ಟೂ ಆಲಿಸದೆ, ಅವರಿಗೆ ಸಮಾಧಾನವನ್ನೂ ಹೇಳದೆ, ಹೀಗೆ ಮೌನವ್ರತನಾಗಿ ನದೀ ತೀರದಲ್ಲಿ ತಿಂಡಿ ತೀರ್ಥಗಳಿಲ್ಲದೆ, ತೀವ್ರ ತಪಸ್ಸನ್ನು ಆಚರಿಸುತ್ತಿರುವುದ ರಿಂದ, ಅಂತಃಪುರದ ಸ್ತ್ರೀಯರೂ ರಾಣಿಯರೂ ಮಂತ್ರಿಗಳೂ ನೀರಿನಿಂದ ಬೇರ್ಪಟ್ಟ ಮೀನಿನಂತೆ ಚಡಪಡಿಸುತ್ತಿದ್ದಾರೆ. ರಾಜ್ಯದಲ್ಲಿ ಇಂಥ ಘೋರ ಅಶಾಂತಿ ಉಂಟುಮಾಡಿದ ಆ ಮುನಿಕುಮಾರ ನಿಜಕ್ಕೂ ಮುನಿಕುಮಾರನೇ? ನಮಗೇನೂ ತಿಳಿಯದಂತಾಗಿದೆ," ಎಂದು ಆ ವೃದ್ಧ ಮುನಿ ಬಹು ಶಾಂತ ವಚನಗಳಿಂದ ಮಹಾರಾಜನನ್ನು ಪ್ರಶ್ನಿಸಿದ.

ಮಹಾರಾಜ ಪರೀಕ್ಷಿತ್ ಆ ವೃದ್ಧಮುನಿಗೆ ನಮಸ್ಕರಿಸಿ, "ಮಹಾತ್ಮಾ! ನಿಮ್ಮಂಥ ಮಹರ್ಷಿಗಳ ಹತ್ತಿರ ನಾನು ಮರೆಮಾಚುವುದಾದರೂ ಏನಿದೆ? ಮರೆಮಾಚ ಬೇಕೆಂದರೂ ಅದು ಮರೆಮಾಚಲಾಗದಂಥದ್ದು. ನಾನು ಬೇಟೆಗಾಗಿ ಅರಣ್ಯಕ್ಕೆ ಹೋದೆ. ಅಲ್ಲಿ ಅನೇಕ ಮೃಗಗಳು ಕಾಣಿಸಿಕೊಂಡು ಚೆಲ್ಲಾಪಿಲ್ಲಿಯಾಗಿ ದಿಕ್ಕುದಿಕ್ಕಿಗೆ ಚದುರಿ ಹೋದವು. ನನ್ನ ಜೊತೆಯಲ್ಲಿ ಕೆಲವೇ ಮಂದಿ ಪರಿಚಾರಕರು ಬಂದಿ ದ್ದುದರಿಂದ ಅವರೆಲ್ಲರೂ ಒಬ್ಬೊಬ್ಬರು ಒಂದು ಮೃಗವನ್ನು ಬೆನ್ನಟ್ಟಿ ಒಂದೊಂದು ದಿಕ್ಕಿಗೆ ಹೋದರು. ನಾನೂ ಕೂಡ ಒಂದು ಮೃಗವನ್ನು ಬೇಟೆಯಾಡುತ್ತಾ ಅದನ್ನು ಬೆನ್ನಟ್ಟಿ ಹೊರಟೆ. ಆ ಮೃಗ ಕೊನೆಗೂ ನನಗೆ ಸಿಕ್ಕಲಿಲ್ಲ. ನಾನು ಹಸಿವು

ಬಾಯಾರಿಕೆಗಳಿಂದ ಬಳಲಿ ಹೋದೆ. ಜೊತೆಗೆ ಉರಿಯುವ ಬಿಸಿಲು ಬೇರೆ. ಅಂತೂ ನಾನು ಹೇಗೋ ಹೋಗಿ ಒಂದು ಆಶ್ರಮ ಸೇರಿದೆ. ಅದು ಶಮೀಕ ಮಹರ್ಷಿಯ ಆಶ್ರಮವೆಂದು ಆಮೇಲೆ ತಿಳಿಯಿತು. ಹಸಿವು ಬಾಯಾರಿಕೆಗಳಿಂದ ಬಾಧೆ ಪಡುತ್ತಿದ್ದ ನಾನು, ಆಶ್ರಮದ ಒಳಗಿರುವವರು ಯಾರಾದರೂ ಹೊರಗೆ ಬರುತ್ತಾರೋ ನೋಡೋಣವೆಂದು ಗಟ್ಟಿಯಾಗಿ ಕೂಗ ತೊಡಗಿದೆ. ಎಷ್ಟು ಹೊತ್ತಾದರೂ ಒಳಗಿನಿಂದ ಯಾವ ಉತ್ತರವೂ ಬರಲಿಲ್ಲ. ಯಾವ ಮನುಷ್ಯನೂ ಹೊರಬರಲಿಲ್ಲ. ಒಳಗೆ ಹೋಗಿ ನೋಡಿದೆ. ಅಲ್ಲಿ ಯಾರೂ ಇರಲಿಲ್ಲ. ಒಬ್ಬ ಮಹರ್ಷಿ ಮಾತ್ರ ತಪಸ್ಸಿನಲ್ಲಿ ಮೈಮರೆತು ಕುಳಿತಿದ್ದುದು ಕಾಣಿಸಿತು. ಹಿಂತಿರುಗಿ ಬರುತ್ತಿದ್ದಾಗ ನನ್ನ ಕಾಲಿಗೆ ಹಗ್ಗದಂಥ ಮೆತ್ತನೆಯದೇನೊ ಸೋಕಿತು. ಹಗ್ಗವೆಂದು ತಿಳಿದು ನೋಡಿದೆ. ಆದರೆ ಅದು ಹಗ್ಗವಾಗಿರಲಿಲ್ಲ, ಸತ್ತ ಹಾವಾಗಿತ್ತು. ಅದನ್ನು ನೋಡಿದ ತಕ್ಷಣವೇ ನನ್ನ ಬುದ್ಧಿ ಭ್ರಷ್ಟವಾಯಿತು. ಆ ಸತ್ತ ಹಾವನ್ನು ಎತ್ತಿಕೊಂಡು ಹೋಗಿ ತಪಸ್ಸನ್ನಾಚರಿಸುತ್ತಿದ್ದ ಆ ತೇಜಸ್ವಿಯ ಕೊರಳಿಗೆ ಹಾಕಿ ಅಲ್ಲಿಂದ ಹಿಂತಿರುಗಿ ರಾಜಧಾನಿಯ ಮಾರ್ಗ ಹಿಡಿದೆ. ಅದು ಹೇಗೋ ಆ ಮುನಿಕುಮಾರನಿಗೆ ತಿಳಿಯಿತು. ಅದನ್ನು ಸಹಿಸಲಾರದೆ, ತನ್ನ ತಂದೆಯ ಕೊರಳಲ್ಲಿದ್ದ ಹಾವೆ ತಕ್ಷಕನಾಗಿ, ಅಂದಿಗೆ ಏಳನೇ ದಿನಕ್ಕೆ ಸರಿಯಾಗಿ, ಅದನ್ನು ತನ್ನ ತಂದೆಯ ಕೊರಳಲ್ಲಿ ಹಾಕಿದ ವ್ಯಕ್ತಿಯನ್ನು ಕಚ್ಚಿ ಕೊಲ್ಲಲಿ ಎಂದು ಶಪಿಸಿದನಂತೆ. ಆ ಆಶ್ರಮದಿಂದ ನನಗೆ ಈ ವಾರ್ತೆ ಬರುತ್ತಲೇ ನಾನು ಮಾಡಿದ ಅಪರಾಧವನ್ನು ತಿಳಿದು, ಸರ್ವಸಂಗ ಪರಿತ್ಯಾಗಿಯಾಗಿ ಈ ಏಳು ದಿನಗಳಾದರೂ ಶ್ರೀಹರಿಯ ಚಿಂತನೆಯಲ್ಲಿ ಕಾಲ ಕಳೆಯುವುದು ಮಹಾಭಾಗ್ಯವೆಂದು ತಿಳಿದು ಇಲ್ಲಿಗೆ ಬಂದೆ," ಎಂದು ನಡೆದದ್ದನ್ನೆಲ್ಲಾ ಮಹಾರಾಜ ಹೇಳಲು, ಅಲ್ಲಿ ಸೇರಿದ್ದ ಸಹಸ್ರಾರು ಜನ ಪ್ರಜೆಗಳೂ ಮುನಿಗಳೂ ಋಷಿಗಳೂ ರಾಜರೂ ಮಂತ್ರಿಗಳೂ ನಿಜ ಸಂಗತಿ ತಿಳಿದು, ಬಗೆ ಬಗೆಯ ಊಹಾಪೋಹಗಳನ್ನು ಬಿಟ್ಟು ಮಹಾರಾಜನಿಗೆ ಆ ಶಾಪ ಏನೂ ಕೇಡು ಮಾಡದಿರಲೆಂದು ಪ್ರಾರ್ಥನೆ ಮಾಡಲಾರಂಭಿಸಿದರು.

# ೨೬ ಶುಕಾಗಮನ

ರಾಜನ ಮಾತುಗಳನ್ನು ಕೇಳುತ್ತಿದ್ದ ಕೆಲವು ಮುನಿಗಳು, ಆ ಋಷಿಕುಮಾರ ಋಷಿಕುಮಾರನೇ ಅಲ್ಲ, ಋಷಿಕುಮಾರನಾಗಿದ್ದರೆ ಇಷ್ಟು ಸಣ್ಣ ಅಪರಾಧಕ್ಕೆ ಇಂಥ ಘೋರ ಶಾಪ ಕೊಡುತ್ತಿದ್ದನೇ? ಅವನೊಬ್ಬ ಕೇವಲ ಅಜ್ಞಾನಿಯೋ ಇಲ್ಲವೇ ಉನ್ಮತ್ತನೋ ಆಗಿರಬೇಕು. ಅಂಥವನ ಮಾತು ಹೇಗೆ ಸತ್ಯವಾದೀತು? ಅದರಿಂದ ಯಾವ ಕೇಡೂ ಆಗದು. ತಾವು ಯೋಚಿಸುವ ಅಗತ್ಯವಿಲ್ಲ ಎಂದು ಹೇಳುತ್ತಿದ್ದರು. ಅವರು ಒಬ್ಬೊಬ್ಬರು ಒಂದೊಂದು ವಿಧವಾಗಿ ಆ ಶಾಪವನ್ನು ಅಲಕ್ಷ್ಯಮಾಡುತ್ತಾ ಮಾತನಾಡುತ್ತಿದ್ದುದನ್ನು ಕೇಳಿ, ಮಹಾರಾಜ ಕೈಜೋಡಿಸಿ, "ಮಹಾನುಭಾವರೇ! ನನ್ನ ಮೇಲೆ ತಮಗಿರುವ ದಯಾನುಗ್ರಹದಿಂದ ತಾವೆಲ್ಲರೂ ಹೀಗೆ ಹೇಳುತ್ತಿದ್ದೀರಲ್ಲದೆ, ನನ್ನ ಅಪರಾಧ ನಿಜಕ್ಕೂ ಸಾಮಾನ್ಯವಾದುದೇನಲ್ಲ ಮಹನೀಯರನ್ನು ಅಪಮಾನಗೊಳಿಸುವುದಕ್ಕಿಂತ ಹೆಚ್ಚಿನ ಪಾಪ ಬೇರೊಂದು ಇಲ್ಲ ಅಲ್ಲವೇ? ಅದರಲ್ಲೂ, ಪ್ರಭುವಾದ ನಾನು, ಅವರ ಯೋಗಕ್ಷೇಮ ನೋಡಿಕೊಳ್ಳಬೇಕಾದ ನಾನೇ ಇಂಥ ಪಾತಕಕ್ಕೆ ತೊಡಗಿದರೆ, ಅದನ್ನು ಕ್ಷಮಿಸಲು ಸಾಧ್ಯವೇ ಇಲ್ಲ. ನಿಜವಾಗಿಯೂ ಆ ಮುನಿಕುಮಾರ ಕೊಟ್ಟಿದ್ದು ಶಾಪವಲ್ಲ, ಮಹಾ ವರದಾನ. ಅದು ಹೇಗೆಂದರೆ, ಈ ರಾಜ್ಯರೂಪದ ಪಾಪಕೂಪದಲ್ಲಿ ಬಿದ್ದು, ಕೇವಲ ಭೋಗಗಳೇ ಜೀವಿತಲಕ್ಷ್ಯವೆಂದು ಭ್ರಮಿಸಿ, ಭಗವಂತನನ್ನೇ ಮರೆತು ಪಶುವಿನ ಹಾಗೆ ವರ್ತಿಸಿದ ನನಗೆ ಸಾಕ್ಷಾತ್ ಭಗವಂತನೇ ಆ ಋಷಿಕುಮಾರನನ್ನು ನಿಮಿತ್ತ ಮಾಡಿಕೊಂಡು, ನನ್ನನ್ನು ಅನುಗ್ರಹಿಸುವ ಸಲುವಾಗಿ ಹೀಗೆ ನನಗೆ ಮಾರ್ಗದರ್ಶನ ಮಾಡಿದ್ದಾನೆ. ಆದ್ದರಿಂದ, ಇದು ನನ್ನ ಜನ್ಮಾಂತರ ಪುಣ್ಯ ಪರಿಪಾಕವೇ ವಿನಾ, ಪಾಪ ಫಲವಲ್ಲ," ಎಂದು ಆನಂದಾಶ್ರುಗಳನ್ನು ಸುರಿಸಿದ. ಭಕ್ತಿಭಾವೋದ್ರೇಕಿತನಾಗಿ ಹೇಳುತ್ತಿದ್ದ ಅವನ ಶಾಂತವಚನಗಳು ನೆರೆದಿದ್ದ ಮುನಿಗಳಿಗೂ ಪ್ರಜೆಗಳಿಗೂ ಜ್ಞಾನೋದಯವಾಗುವಂತೆ ಮಾಡಿ, ಅವನು ಹೇಳುವುದು ಸತ್ಯವೆನಿಸಿತು.

ಮಹಾರಾಜನ ದೃಢ ನಿಶ್ಚಯವನ್ನು ಕಂಡು ಆ ವೃದ್ಧ ಮುನಿ ಎದ್ದು ನಿಂತು, ಆ ಜನಸಮೂಹದ ಪರವಾಗಿ ಹೀಗೆ ನುಡಿದ, "ಓ ರಾಜಶ್ರೇಷ್ಠಾ! ನೀನಾಡಿದ ಮಾತುಗಳು ಮುನಿಗಳ ಹೃದಯಕ್ಕೆ ಸೂರ್ಯಕಿರಣವಾಯಿತು. ನಿನಗಿವು ಅನುರೂಪವಾದ ಮಾತುಗಳು, ಏಕೆಂದರೆ ನಿನ್ನ ಜನನ ಪಾಂಡವರ ವಂಶದಲ್ಲಾಗಿದೆ. ಪಾಂಡವರು ಎಂಥ ದುರ್ಘಟನೆಯಲ್ಲಿ ಸಿಕ್ಕರೂ ಅವರ ಚಿತ್ತವೃತ್ತಿ ಅಧರ್ಮದಲ್ಲಿ ಪ್ರವೇಶಿಸುತ್ತಿರಲಿಲ್ಲ. ಅವರು ಯಾವಾಗಲೂ ಶ್ರೀಹರಿಯ ಚರಣಗಳನ್ನು ಆಶ್ರಯಿಸಿ, ಅವನ ಆಜ್ಞೆಯನ್ನೇ ಪಾಲಿಸುತ್ತಿದ್ದವರು. ಕಡೆಗೆ ಆ ಶ್ರೀಹರಿ ಸ್ವಧಾಮ ಸೇರಿದನೆನ್ನುವ

ವಾರ್ತೆ ಕೇಳಿದೊಡನೆ ರಾಜ್ಯವನ್ನು ತ್ಯಜಿಸಿ, ತೀವ್ರ ವೈರಾಗ್ಯ ಹೊಂದಿ, ಉತ್ತರ ಖಂಡಕ್ಕೆ ಹೋದರು. ಅಂಥವರ ಉತ್ತರಾಧಿಕಾರಿಯಾದುದರಿಂದಲೇ ನೀನೂ ಅಂಥ ಪವಿತ್ರ ಮಾರ್ಗವನ್ನೇ ಅನುಸರಿಸುತ್ತಿದ್ದೀಯೆ," ಎಂದು ರಾಜನ ವಂಶ ಪರಂಪರೆಯನ್ನು ವರ್ಣಿಸುತ್ತಾ ರಾಜನ ಸಂಕಲ್ಪ ನೆರವೇರಲಿ ಎಂದು ಆಶೀರ್ವದಿಸಿದನು.

ಆಗ ಮಹಾರಾಜ, "ಮುನಿಶ್ರೇಷ್ಠರೇ! ನನಗೀಗ ಒಂದೇ ಒಂದು ಸಂದೇಹ. ಅದನ್ನು ನಿವಾರಿಸಿ ನನ್ನನ್ನು ಧನ್ಯನನ್ನಾಗಿ ಮಾಡಿ," ಎಂದು ಕೈಜೋಡಿಸಿ ಪ್ರಾರ್ಥಿಸಿದ. ಅದೇನೆಂದು ತಿಳಿಸುವಂತೆ ಮುನಿ ಕೋರಲು, "ಮೃತ್ಯು ಸನ್ನಿಹಿತವಾದವನು ಏನು ಕರ್ಮ ಮಾಡಬೇಕೋ ತಿಳಿಸಬೇಕು," ಎಂದು ಮಹಾರಾಜ ಪ್ರಾರ್ಥಿಸಿದ. ಆಗ, ಒಬ್ಬ ಮುನಿ ಎದ್ದು ನಿಂತು, "ಕಾಲಾವಕಾಶ ಇದ್ದರೆ, ಯಜ್ಞ, ಯಾಗ, ಜಪ, ತಪ, ಧ್ಯಾನ, ವ್ರತ, ತೀರ್ಥಯಾತ್ರೆ, ದಾನ, ಪೂಜಾದಿಗಳನ್ನು ಮಾಡುತ್ತಿರುವುದೊಳ್ಳೆಯದು," ಎಂದ. ಮತ್ತೊಬ್ಬರು, "ಜ್ಞಾನಾದೇವತು ಕೈವಲ್ಯಂ," ಎಂದರು. ಮತ್ತೆ ಕೆಲವರು, "ಕರ್ಮಣ್ಯೇವ ಹಿ ಸಂಸಿದ್ಧಿಃ," ಎಂದರು. ಇನ್ನು ಕೆಲವರು, "ಭಕ್ತಿವಶಃ ಪುರುಷಃ," ಎಂದರು. ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳುತ್ತಿರಲು, ಮಹಾರಾಜನಿಗೆ ತೃಪ್ತಿಯಾಗದೆ, ಅವನು ಇನ್ನೂ ಸತ್ಸಂದೇಶದ ನಿರೀಕ್ಷಣೆಯಲ್ಲಿರುವುದನ್ನು ಕಂಡು ಮುನಿಗಳು ಏನೂ ತೋಚದೆ ನಿಂತಿದ್ದರು.

ಆಗ ಮಹಾ ತೇಜೋವಂತನಾದ ಒಬ್ಬ ದಿಗಂಬರ ಮುನಿಕುಮಾರ ತನ್ನ ದಿವ್ಯ ಕಾಂತಿಯಿಂದ ಆ ಸಭೆಯನ್ನು ಬೆಳಗಿಸಿದ. ಮಿಂಚಿನಂತೆ ಬಂದು, ಮುನಿಗಳ ಮಧ್ಯೆ ಸೇರಿ, ಎಲ್ಲರನ್ನೂ ಆಚೆ ಈಚೆ ಸರಿಸಿ, ಮಹಾರಾಜನ ಪಕ್ಕದಲ್ಲಿದ್ದ ಉನ್ನತಾಸನದಲ್ಲಿ ಬಂದು ಕುಳಿತ. ಇದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ರೂಪ ನೋಡಿದರೆ, ಮುನಿಕುಮಾರ; ಅಧಿಕಾರ ನೋಡಿದರೆ, ಸರ್ವಾಧಿಕಾರ; ವಯಸ್ಸಿನಲ್ಲಿ ಅತಿ ಕಿರಿಯ; ಕಾಂತಿಯಾದರೋ ದಿವ್ಯ ಕಾಂತಿ. ಇವನು ಯಾರು ಎಂದು ಸಂದೇಹ ಪಟ್ಟರು. ಆಗ, ಸರ್ವಜ್ಞನಾದ ಒಬ್ಬ ವೃದ್ಧ ಮುನಿ ಇವನು ಯಾರೆನ್ನುವುದನ್ನು ತಿಳಿದು, ಮುಂದೆ ಬಂದು ನಿಂತು, ಕೈಜೋಡಿಸಿ, "ಧನ್ಯರಾದೆವು, ಈ ಕಣ್ಣು ಕೋರೈಸುವ ಪ್ರಕಾಂತಿ ಕಿರಣನು ವ್ಯಾಸ ಭಗವಾನರ ಪುತ್ರರತ್ನ ಶ್ರೀ ಶುಕನು," ಎಂದು ಸಭಿಕರಿಗೆ ಪರಿಚಯ ಮಾಡಿಕೊಟ್ಟ. "ಈತನು ಹುಟ್ಟುವಾಗಲೇ ಸರ್ವಸಂಗ ಪರಿತ್ಯಾಗಿ, ಮಹಾಜ್ಞಾನಿ," ಎಂದು ಹೇಳಿದ. ಇದನ್ನು ಕೇಳುತ್ತಿದ್ದ ಮಹಾರಾಜ, ತನಗೆ ತಿಳಿಯದಂತೆಯೇ ಆನಂದಬಾಷ್ಪ ಸುರಿಸುತ್ತಾ ಧಾವಿಸಿ ಶುಕನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಸ್ತಂಭೀಭೂತನಾಗಿ, ದೇಹ ಅಲುಗಿಸದೆ ನಿಂತು, ಆನಂದದಲ್ಲಿ ಮುಳುಗಿಹೋದ. ಶುಕನ ಆ ಸುಂದರ ವಿಗ್ರಹ ಅವನಿಗೆ ಸಾಕ್ಷಾತ್ ಕೃಷ್ಣಸ್ವರೂಪವಾಗಿ

ಕಾಣಿಸಿತು. ಅವನ ತೇಜಸ್ಸು ಕಣ್ಣು ಕೋರೈಸುವಂತೆ ಪ್ರಕಾಶಿಸಿತು. ಸಾಕ್ಷಾತ್ ಮನ್ಮಥನಂತೆ ಕಾಣಿಸಿತು. ಆ ಬಾಲಕನ ಹಣೆಯ ಮೇಲಿನ ಮಿರುಗುವ ಕಪ್ಪು ಮುಂಗುರುಳುಗಳು ಹಾವಿನ ಹೆಡೆಯಂತೆ ಆಡುತ್ತಿದ್ದುವು. ಮೋಡಗಳ ಮಧ್ಯೆ ಮಿನುಗುವ ನಕ್ಷತ್ರಗಳಂತೆ ಅವನ ಕಣ್ಣುಗಳು ತಂಪು ಕಿರಣಗಳಿಂದ ಪ್ರಕಾಶಿಸುತ್ತಿದ್ದವು. ಮುಗುಳುನಗೆ ಅವನ ತುಟಿಗಳಿಂದ ಆನಂದದ ಹನಿಗಳನ್ನು ಸುರಿಸುತ್ತಿದ್ದವು.

ಮಹಾರಾಜ ಕೈಜೋಡಿಸಿ, ಗದ್ಗದ ಕಂಠದಿಂದ, "ಸ್ವಾಮೀ! ನಿಮ್ಮ ಕೃಪಾ ವಿಶೇಷವನ್ನು ವರ್ಣಿಸಲು ನನಗೆ ಶಕ್ತಿ ಸಾಲದು. ನೀವು ಮಾಡುವ ಕೆಲಸವೆಲ್ಲಾ ಲೋಕ ಕಲ್ಯಾಣಕ್ಕಾಗಿಯೇ. ಎಷ್ಟು ಪ್ರಯತ್ನಪಟ್ಟರೂ ಸಿಕ್ಕದ ನಿಮ್ಮ ದರ್ಶನ, ಇಂದು ನನಗೆ ಇಷ್ಟು ಸುಲಭವಾಗಿ ಸಿಕ್ಕಿದೆಯೆಂದರೆ ನನ್ನ ಅದೃಷ್ಟವೇ ಅದೃಷ್ಟ. ಇದು ನಮ್ಮ ತಾತಂದಿರ ಪುಣ್ಯಫಲ," ಎಂದು ತನ್ನ ಪ್ರಾಪ್ತಿಗೆ ತಾನೇ ಹಿಗ್ಗಿ, ಆನಂದಬಾಷ್ಪ ಸುರಿಸುತ್ತಾ ನಿಂತಿರಲು, ಶುಕ ಮುಗುಳ್ನಕ್ಕು ರಾಜನಿಗೆ ಕುಳಿತುಕೊಳ್ಳುವಂತೆ ಹೇಳಿ, "ರಾಜಾ! ನೀನು ಧರ್ಮಾತ್ಮ. ಸಾಧು ಸಂರಕ್ಷಕ. ನಿನ್ನ ಪುಣ್ಯ ಪ್ರಭಾವದಿಂದಲೇ ಇಂದು ಇಷ್ಟೊಂದು ಮಹಾಮುನಿಗಳು ಇಲ್ಲಿ ಸೇರಿದ್ದಾರೆ. ಇಲ್ಲದಿದ್ದರೆ ನಿರಂತರವೂ ನಿಷ್ಠ ಆಚರಣೆಯಲ್ಲಿ ಮಗ್ನರಾದ ಋಷಿಗಳು ತಮ್ಮ ಎಲ್ಲ ಸಾಧನೆಗಳಿಗೂ ಸ್ವಸ್ತಿ ಹೇಳಿ, ಇಲ್ಲಿಗೆ ಬಂದು ರಾಜನಿಗೆ ಪವಿತ್ರ ಪ್ರಾಪ್ತಿ ಕೈಗೂಡಲೆಂದು ಪ್ರಾರ್ಥಿಸುವುದು ಸಾಮಾನ್ಯವಲ್ಲ. ಇವೆಲ್ಲವೂ ಜನ್ಮಾಂತರ ಪುಣ್ಯವಲ್ಲದೆ ಕೇವಲ ಸಹಜವಾದುದಲ್ಲ," ಎಂದ.

ಮಹಾರಾಜ ಪರೀಕ್ಷಿತ್, "ಪ್ರಭೂ! ನಾನು ಅಂಥ ಪುಣ್ಯಾತ್ಮನೂ ಧನ್ಯಾತ್ಮನೂ ಧರ್ಮಾತ್ಮನೂ ಆಗಿದ್ದಲ್ಲಿ, ನನಗೇಕೆ ವಿಪ್ರಶಾಪ ಬಂತು? ನನಗೆ ಅಂಥ ವಿಪರೀತ ಬುದ್ಧಿ ಏಕೆ ಹುಟ್ಟಿತು? ಈ ಎಲ್ಲ ಮಹನೀಯರ ದರ್ಶನ ನನ್ನ ಪುಣ್ಯಫಲದಿಂದ ಆದದ್ದಲ್ಲ, ನನ್ನ ಪೂರ್ವಿಕರ ಪುಣ್ಯಫಲದಿಂದ. ಇದು ನನಗೆ ಚೆನ್ನಾಗಿ ಗೊತ್ತು. ನಿಮ್ಮ ಅತ್ತೆಯ ಮಗನಾದ ಶ್ಯಾಮಸುಂದರನೇ ನಮ್ಮ ತಾತಂದಿರ ಎಲ್ಲ ಕಾರ್ಯವನ್ನೂ ನೆರವೇರಿಸುತ್ತಿದ್ದನಂತೆ. ಅವರು ಅಂಥ ಭಾಗ್ಯಶಾಲಿಗಳಾಗಿದ್ದುದರಿಂದಲೇ, ಅವರ ಆನಂದಕ್ಕಾಗಿಯೇ ಈ ದಿನ ನೀವು ನನ್ನನ್ನು ಅನುಗ್ರಹಿಸಲು ಸಾಕ್ಷಾತ್ಕರಿಸಿದ್ದೀರಿ. ಆದ್ದರಿಂದ ಇದರಲ್ಲಿ ನನ್ನ ಪ್ರಾಪ್ತಿ ಏನೂ ಇಲ್ಲ ಪ್ರಭೂ!" ಎಂದು ಪಾದಗಳ ಮೇಲೆ ಬಿದ್ದ ರಾಜನನ್ನು ಹಿಡಿದೆತ್ತಿ ಶುಕ, "ರಾಜಾ! ಹಾಗೆ ತಿಳಿಯಬೇಡ. ಪ್ರಾಪ್ತಿ, ಅಪ್ರಾಪ್ತಿಗಳು ಹೇಳಿ ಬರುವುದಿಲ್ಲ, ಹೇಳಿ ಹೋಗುವುದಿಲ್ಲ. ಅವರವರ ಪ್ರಾಪ್ತಿ ಅವರದೇ. ಒಬ್ಬರ ಪ್ರಾಪ್ತಿಗೂ ಮತ್ತೊಬ್ಬರಿಗೂ ಸಂಬಂಧ ಇರುವುದಿಲ್ಲ. ಕಾಯ ಸಂಬಂಧಗಳು ತಾತ್ಕಾಲಿಕ ಅನುಬಂಧಗಳು ಮಾತ್ರ. ಪ್ರಾಪ್ತಿಸಂಬಂಧ ಜನ್ಮಾಂತರ ಪುಣ್ಯ ಪಾಪಗಳ ಶೇಷ. ಅವುಗಳನ್ನು ಕುರಿತು ಚಿಂತೆ ಮಾಡುವುದಾಗಲೀ ಸಂತೋಷಿಸುವುದಾಗಲೀ

ಸಾರ್ಥಕವೆನಿಸಿಕೊಳ್ಳುವುದಿಲ್ಲ. ಆದ್ದರಿಂದ ಪ್ರಸ್ತುತ ಕಾಲವನ್ನು ಪವಿತ್ರ ಮಾಡಿ ಕೊಳ್ಳುವ ಪ್ರಯತ್ನದಲ್ಲಿ ತೊಡಗು," ಎಂದು ಶಾಂತಿ ವಾಕ್ಯಗಳಿಂದ ರಾಜನ ಶಿರಸ್ಸನ್ನು ಮುಟ್ಟಿ ಆಶೀರ್ವದಿಸಿದುದನ್ನು ನೋಡಿ ಅಲ್ಲಿದ್ದ ಮುನಿಗಳಿಗೆ ಅಪಾರ ತೃಪ್ತಿಯಾಯಿತು. ಶುಕನ ಸ್ಪರ್ಶ ಅಷ್ಟು ಸುಲಭವಾಗಿ ಸಿಕ್ಕುವುದಿಲ್ಲ. ಅವನೊಡನೆ ಸಂಭಾಷಣೆ ಮಾಡುವುದು ಸಾಮಾನ್ಯವಲ್ಲ. ಆ ಮಹಾಭಾಗ್ಯ ಮಹಾರಾಜನಿಗೆ ಇಷ್ಟು ಸುಲಭವಾಗಿ ದೊರಕಿತೆಂದರೆ, ನಮಗೆ ತಿಳಿಯದ ಅವನ ಜನ್ಮಾಂತರ ಪುಣ್ಯವೇ ಇದಕ್ಕೆ ಆಧಾರವಾಗಿರಬೇಕು ಎಂದು ಮುನಿಗಳು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತಾ ಸಂತೋಷಿಸುತ್ತಿದ್ದರು.

ಆಗ ಮಹಾರಾಜ ತಲೆಯೆತ್ತಿ, "ಪ್ರಭೂ! ನನ್ನದೊಂದು ಸಂಶಯವಿದೆ. ಅದನ್ನು ನಿವಾರಿಸಿ ನನ್ನ ಹೃದಯಕ್ಕೆ ಶಾಂತಿ ನೀಡಬೇಕು. ಅದನ್ನೇ ನಾನು ಈ ಮೊದಲು ಇಲ್ಲಿ ಸೇರಿದ ಮುನಿಶ್ರೇಷ್ಠರಲ್ಲಿ ನಿವೇದಿಸಿಕೊಂಡಿದ್ದೆ, ಅಷ್ಟರಲ್ಲಿ ನೀವೇ ಬಂದಿರಿ. ನನ್ನ ಅದೃಷ್ಟ ಫಲಿಸಿತು. ನೀವು ಅದನ್ನು ಲೀಲಾಜಾಲವಾಗಿ ನಿವಾರಿಸಬಲ್ಲಿರಿ," ಎಂದು ಕೈಜೋಡಿಸಿ ಪ್ರಾರ್ಥಿಸುತ್ತಿದ್ದ ರಾಜನನ್ನು ನೋಡಿ, ಶುಕಮುನಿ, "ಪರೀಕ್ಷಿತ್! ನಿನ್ನ ಪ್ರಶ್ನೆಗೆ ಸಮಾಧಾನ ಹೇಳಲೆಂದೇ ನಾನಿಲ್ಲಿಗೆ ಬಂದಿರುವುದು. ನೀನು ಏನು ಬೇಕಾದರೂ ಕೇಳು. ತಪ್ಪದೆ ಸಂಶಯ ನಿವಾರಣೆ ಮಾಡಿ ನಿನ್ನನ್ನು ಸಂತೋಷಪಡಿಸುತ್ತೇನೆ," ಎಂದೊಡನೆ ನೆರೆದಿದ್ದ ಮುನಿಗಳು, "ಧನ್ಯರಾದೆವು, ಧನ್ಯರಾದೆವು," ಎನ್ನುತ್ತಾ ಮಾಡಿದ ಕರತಾಡನ ಮುಗಿಲು ಮುಟ್ಟಿತು.

ನಂತರ ರಾಜ ದೈನ್ಯದಿಂದ, "ಪ್ರಭೂ! ಮರಣ ಸನ್ನಿಹಿತವಾದವನು, ತಾನು ಶೀಘ್ರದಲ್ಲೇ ಸಾಯುತ್ತೇನೆ ಎನ್ನುವುದನ್ನು ತಿಳಿದವನು ಮಾಡಬೇಕಾದ ಕಾರ್ಯ ಯಾವುದು? ಚಿಂತಿಸಬೇಕಾದ ವಿಚಾರ ಯಾವುದು? ಮರಣಾನಂತರ ಜನನ ಇಲ್ಲದಂತಾಗಲು ಮರಣ ಸಮಯದಲ್ಲಿ ಯಾವ ಮಾರ್ಗ ಅನುಸರಿಸಬೇಕು ಎನ್ನುವದನ್ನು ತಿಳಿಸಬೇಕು," ಎಂದು ಪ್ರಾರ್ಥಿಸಿದ. ಆಗ, ಶುಕ ಮಹರ್ಷಿ, "ರಾಜಾ! ಪ್ರಾಪಂಚಿಕ ವಿಷಯಗಳಿಂದ ನಿನ್ನ ಚಿತ್ತವನ್ನು ಹೊರತಂದು, ಅದು ಜಗನ್ಮೋಹನನಾದ ಶ್ರೀಹರಿಯಲ್ಲಿ ನೆಲೆಸುವಂತೆ ಮಾಡು. ನಾನು ಭಾಗವತ ತತ್ವವನ್ನು ಹೇಳುತ್ತೇನೆ. ಹೃದಯ ಪೂರ್ವಕವಾಗಿ ಶ್ರವಣ ಮಾಡು. ಇದಕ್ಕಿಂತ ದೊಡ್ಡ ತಪಸ್ಸು ಬೇರೊಂದಿಲ್ಲ. ನರನ ದೇಹವೇ ನಾವೆ, ಶ್ರೀಹರಿ ಕಥನವೇ ಚುಕ್ಕಾಣಿ, ಸಂಸಾರವೇ ಭವಸಾಗರ, ನಾರಾಯಣನೇ ನಾವಿಕ. ಇಂದು ಈ ಎಲ್ಲ ಪವಿತ್ರ ಸಾಮಗ್ರಿಗಳು ನಿನಗೆ ಪ್ರಾಪ್ತವಾಗಿ ನಿನ್ನ ಸಮೀಪಕ್ಕೆ ಬಂದಿವೆ. ನೀನು ಕೇಳಿದ ಪ್ರಶ್ನೆ ಲೋಕ ಹಿತಾರ್ಥವಾದುದೇ ಹೊರತು, ಒಬ್ಬ ವ್ಯಕ್ತಿಗೆ ಸಂಬಂಧಿಸಿದುದಲ್ಲ. ವಿಚಾರ ಮಾಡಬೇಕಾದ ವಿಷಯಗಳಲ್ಲೆಲ್ಲಾ ಶ್ರೇಷ್ಠವಾದುದು

ಆತ್ಮತತ್ವ. ಸಮಸ್ತ ಪ್ರಾಣಿಕೋಟಿಗೂ ಅಂತ್ಯಕಾಲ ಇದೆ ಎನ್ನುವುದು ಪರಮ ಸತ್ಯ. ಅದು ತಪ್ಪಿದ್ದಲ್ಲ. ಅಂಥ ಸಮಯದಲ್ಲಿ ಯಾವ ಪುರುಷಾರ್ಥದಲ್ಲಿ ನಿರತನಾಗಬೇಕೆನ್ನುವುದು ಪ್ರತಿ ಪ್ರಾಣಿಗೂ ಕೂಡ ಪ್ರಧಾನವಾದ ವಿಷಯ. ಅದನ್ನು ಅನುಸರಿಸಿಯೇ ಪುನರ್ಜನ್ಮವಿರುವುದು. ಆದ್ದರಿಂದ ನೀನು ಕೇಳಿದ ಪ್ರಶ್ನೆ, ನಿನಗೆ ಬಂದಿರುವ ಸಂಶಯ ಲೋಕಕಲ್ಯಾಣ ನಿಮಿತ್ತವಾದುವೇ ಹೊರತು, ನಿನ್ನೊಬ್ಬನ ನಿಮಿತ್ತವಾದುದಲ್ಲ."

## ೨೭ ಮನಮೋಹಕ ಕಥೆ

ಶುಕನು, "ಮಹಾರಾಜ! ಕೇಳು, ಭಾಗವತ ಮಹಾವೃಕ್ಷ ಬಹು ಭವ್ಯವಾದುದು. ಸಮಸ್ತ ಶುಭಗಳೂ ಸುಖಗಳೂ ಅದರಲ್ಲಿ ಅಡಗಿವೆ. ಈ ಪವಿತ್ರ ವೃಕ್ಷಕ್ಕೆ ಶ್ರೀಮನ್ನಾರಾಯಣನೇ ಬೀಜ, ಬ್ರಹ್ಮನೇ ಮೊಳಕೆ, ನಾರದನೇ ಕಾಂಡ, ವ್ಯಾಸನೇ ಶಾಖೆ. ಅದರ ಮಧುರ ಫಲವೇ ಕೃಷ್ಣ ಕಥಾಮೃತ. ಈ ಅಮೃತಕ್ಕಾಗಿ ದೇಹದ ಬಾಧೆ ಲೆಕ್ಕಿಸದೆ, ಕಾಲವನ್ನು ಲೆಕದ್ಕಿಸದೆ ಕತ್ತುಚಾಚಿ ಕಾಯುತ್ತಿದ್ದು, ಅದನ್ನು ಕುಡಿಯುವವರೇ ಪವಿತ್ರ ಮುನಿಗಳು, ಯೋಗಿಗಳು, ಎಲೈ ಮುನಿಗಳೇ! ನಾನಿಂದು ಆ ಕಮನೀಯ ಕೃಷ್ಣಕಥೆಯನ್ನು, ಭಾಗವತ ಶಾಸ್ತ್ರವನ್ನು ನಿಮ್ಮೆಲ್ಲರಿಗೂ ಶ್ರವಣ ಮಾಡಿಸುತ್ತೇನೆ, ಸ್ಮರಣೆ ತಂದುಕೊಡುತ್ತೇನೆ. ಸಮಸ್ತ ಶಾಸ್ತ್ರಗಳನ್ನೂ ಶ್ರವಣ ಮಾಡಿದ್ದೀರಿ. ನೀವು ಸರ್ವ ಸಾಧನ ಸಂಪನ್ನರು. ಎಲ್ಲದಕ್ಕೂ ಮಿಗಿಲೆನಿಸಿ ಯಾವುದು ಅತ್ಯಂತ ಶ್ರೇಷ್ಠವಾದುದೋ ಅದು ನಿಮಗೆ ತಿಳಿಯದೆ ಇಲ್ಲ. ಯಾವ ವಸ್ತುವು ಅತ್ಯಂತ ರುಚಿಕರವಾದುದೋ ಯಾವುದನ್ನು ಕೇಳಿದಾಕ್ಷಣ ಹೃದಯ ಹರ್ಷಗೊಳ್ಳುವುದೋ ಯಾವುದನ್ನು ಸ್ಮರಣೆ ಮಾಡಿದ ಮಾತ್ರದಿಂದ ಮನಸ್ಸಿನಲ್ಲಿ ಹುದುಗಿದ ಪ್ರೇಮ ತರಂಗಗಳು ಮೇಲೆ ಏಳುವುವೋ ಅಂಥ ಪವಿತ್ರ ಕೃಷ್ಣ ನಾಮವನ್ನೂ ಅದರ ಮಾಧುರ್ಯವನ್ನೂ ನಿಮಗೆ ತಿಳಿಸುತ್ತೇನೆ. ಅಂಥ ಪವಿತ್ರ ಕೃಷ್ಣಭಕ್ತಿಗೆ ಸಹಾಯಕವಾದುದ್ದು ಈ ಭಾಗವತ. ಅಜನೂ ಅವ್ಯಕ್ತನೂ ಅನಂತನೂ ಆದ ಪರಮಾತ್ಮ ಸಗುಣ, ಸಾಕಾರನಾಗಿ ಅನೇಕ ಅವತಾರಗಳನ್ನೆತ್ತಿ ಅಂತ್ಯವಿಲ್ಲದ ಲೀಲೆಗಳನ್ನು ಪ್ರಕಟಿಸಿದ್ದಾನೆ. ಅವನ ನಾಮ, ರೂಪ, ಗುಣ, ಧಾಮಗಳು ಜಗತ್ತಿನ ಜೀವಿಗಳನ್ನು ತಣಿಸುವುವು. ಇವುಗಳನ್ನು ಯಾವನು ಗಾನಮಾಡುವವನೋ ಶ್ರವಣಮಾಡು

ವನೋ ಸೇವಿಸುವನೋ ಅಂಥವನೇ ಭಕ್ತನೆಂದು ಕರೆಯಲ್ಪಡುವುದು; ಅವನೇ ಭಾಗವತ.

ಅಂದರೆ, ಭಕ್ತ ಭಗವಂತನ ಸಂಬಂಧದ ಕಥೆಯೇ ಭಾಗವತ. ಅವತಾರ ಕಥೆಗಳಲ್ಲಿರುವುದು ಕೇವಲ ಭಕ್ತ ಭಗವಂತನ ಸಂಬಂಧವೇ. ಭಗವದವತಾರಗಳು ದುಷ್ಟ ಸಂಹಾರಕ್ಕಾಗಿಯೇ ಆಗದಲ್ಲವುವು. ಅದೂ ಒಂದು ಕಾರಣ, ಅಷ್ಟೆ. ನಿಜಕ್ಕೂ ಭಗವದವತಾರಗಳಾಗುವುದು ಭಕ್ತರಿಗಾಗಿಯೇ. ಗೋವು ಹಾಲು ಕೊಡುವುದು ತನ್ನ ಕರುವಿಗಾಗಿಯೇ. ಆದರೆ ಜನರು ಹೇಗೆ ತಾವೂ ಅವನ್ನು ಉಪಯೋಗಿಸಿಕೊಳ್ಳುವರೋ ಹಾಗೇ ಭಕ್ತರಿಗಾಗಿಯೇ ಭಗವಂತ ಅವತರಿಸಿದಾಗ ಆ ಭಕ್ತರು ಕೂಡ ಅದನ್ನು ಬೇರೆ ಬೇರೆ ರೀತಿಯಲ್ಲಿ ಉಪಯೋಗಿಸಿಕೊಳ್ಳುವರು. ಆದ್ದರಿಂದಲೇ ಭಕ್ತರಿಗೂ ಭಗವಂತನಿಗೂ ಮಧ್ಯೆ ಬರುವ ಕೆಲವು ದುಷ್ಟರ ಚರಿತ್ರೆಯೂ ಇಂಥ ಅವತಾರ ಕಥೆಗಳಲ್ಲಿ ಸೇರಿರುವುದು. ಅಷ್ಟರಿಂದಲೇ ಭಾಗವತ ಪವಿತ್ರವಲ್ಲ ಎನ್ನಲಾಗದು. ಸಿಹಿಯಾದ ರಸದಿಂದ ಕೂಡಿದ ಕಬ್ಬಿನಲ್ಲಿ, ರಸ ಕುಡಿದು, ಸಿಪ್ಪೆಯನ್ನು ಬಿಸಾಡುವಂತೆ, ಭಕ್ತ ಭಗವಂತನ ಸಂಬಂಧದ ಮಧುರ ಸಾರವನ್ನು ತೆಗೆದುಕೊಂಡ ಮೇಲೆ ದುಷ್ಟ ವ್ಯಕ್ತಿಗಳೆನ್ನುವ ಸಿಪ್ಪೆಯನ್ನು ಎಸೆಯಬೇಕು. ಸಿಪ್ಪೆ ಇಲ್ಲದೆ ರಸ ಸಿಕ್ಕದು. ಹಾಗೇ ಅಭಕ್ತರಿಲ್ಲದೆ ಭಕ್ತರಾಗುವುದಕ್ಕೆ ಸಾಧ್ಯವಿಲ್ಲ.

ಭಗವಂತ ದೇಶ ಕಾಲಗಳ ಬಂಧನದಿಂದ ವಿಮುಕ್ತನಾದವನು. ಅವನಿಗೆ ಜೀವಿಗಳೆಲ್ಲರೂ ಸಮಾನರೇ. ಅವನು ಚರಾಚರಗಳಿಗೆ ಸ್ವಾಮಿ. ಅವನು ಬ್ರಹ್ಮ ರೂಪವನ್ನು ಧರಿಸಿ, ಪ್ರಳಯದಲ್ಲಿ ಲೀನವಾಗಿ ಪ್ರಜೆಗಳನ್ನು ಸೃಷ್ಟಿಸುವನು. ಅವನೇ ವಿಷ್ಣು ರೂಪ ಧರಿಸಿ, ಎಲ್ಲರಿಗೂ ತನ್ನ ಶಕ್ತಿ ಪ್ರಸಾದಿಸಿ, ನಾನಾವತಾರಗಳನ್ನು ಧರಿಸಿ ಈ ಚರಾಚರ ಪ್ರಪಂಚವನ್ನು ಪಾಲಿಸುವನು. ಕೊನೆಗೆ ಅವನೇ ಸಾಕ್ಷಾತ್ ಶಿವರೂಪವನ್ನು ಧರಿಸಿ ಸಮಸ್ತವನ್ನೂ ಸಂಹಾರ ಮಾಡುವನು. ಅವನ ಶಕ್ತಿಗೆ ಅಂತ್ಯವಿಲ್ಲ. ಅದಕ್ಕೊಂದು ಎಲ್ಲೆಯೇ ಇಲ್ಲ. ಅವನ ಪುರುಷಾರ್ಥಕ್ಕೆ ಮಿತಿ ಇಲ್ಲ. ಅವನ ಅವತಾರಗಳೋ ಲೆಕ್ಕವಿಲ್ಲ. ಎಲ್ಲ ಕಳಾವತಾರಗಳೂ ಅವನೇ; ಯುಗಾವತಾರಗಳೂ ಅವನೇ. ಅಂಥ ಅವತಾರಗಳ ಕಥೆಯೇ ಭಾಗವತ.

ಒಬ್ಬನೇ ಭಗವಂತ ಸೃಷ್ಟಿ ತಂತ್ರ ನಡೆಸುವುದಕ್ಕೆ ಅನುಕೂಲವಾಗುವಂತೆ ತನ್ನ ಶಕ್ತಿಯನ್ನು ಬ್ರಹ್ಮ, ವಿಷ್ಣು, ಮಹೇಶ್ವರ ಎನ್ನುವ ಮೂರು ರೂಪಗಳಾಗಿ ವಿಭಾಗಿಸಿದ. ತತ್ವಶಃ ಈ ಮೂರರಲ್ಲಿ ಯಾವ ಭೇದವೂ ಇಲ್ಲ. ಆ ಪ್ರಭುವೇ ಸೃಷ್ಟಿ ಮಾಡುವಾಗ ಬ್ರಹ್ಮನೆಂದೂ ಪಾಲನೆಮಾಡುವಾಗ ವಿಷ್ಣುವೆಂದೂ ಸಂಹಾರ ಸಮಯದಲ್ಲಿ ಶಿವನೆಂದೂ ತನ್ನ ಕೆಲಸಕ್ಕಾಗಿಯೇ ಅವನು ವಿಶೇಷ ಸಂದರ್ಭಗಳಲ್ಲಿ ವಿಶಿಷ್ಟರೂಪ

ತಳೆದಾಗ ಅವತಾರವೆಂದೂ ಕರೆಯಲ್ಪಡುವನು. ನಿಜಕ್ಕೂ ಯೋಚಿಸಿದರೆ, ಮನ್ವಾದಿ ಪ್ರಜಾಪತಿಗಳು ಸೃಷ್ಟಿಯನ್ನು ವೃದ್ಧಿಮಾಡಲು ಬಂದ ಬ್ರಹ್ಮ ಅವತಾರಗಳೇ ಎಂದು ಹೇಳಬಹುದು. ಭಗವಂತನ ಸಂಕಲ್ಪದಿಂದಲೇ ಸೃಷ್ಟಿ ನಡೆಯುವುದಾದ್ದರಿಂದ, ಸೃಷ್ಟಿಯಲ್ಲಿಯ ಮುನಿಗಳು, ಋಷಿಗಳು, ಮನುಷ್ಯರು, ದಾನವರು, ಇವರೆಲ್ಲರೂ ವಿಷ್ಣುವಿನ ಅವತಾರವೆಂದು ಹೇಳುವುದರಲ್ಲಿ ಏನೂ ತಪ್ಪಿಲ್ಲ. ಜೀವಿಗಳು ಹೇಗೆ ಅನಂತವೋ ಹಾಗೇ ಅವತಾರಗಳೂ ಅನಂತ. ಆದರೆ, ಯುಗಾವತಾರಗಳ ಕಥೆಯೇ ಪವಿತ್ರ ಚರಿತ್ರೆಗಳು, ಮಿಕ್ಕವು ಪ್ರಧಾನವಲ್ಲ. ಎಲ್ಲ ಅವತಾರಗಳಿಗೂ ಧರ್ಮಸ್ಥಾಪನೆಯೇ ಉದ್ದೇಶ.

ಪ್ರಜಾಪತಿಯಾದ ಮನುವಿಗೆ ಬ್ರಹ್ಮದೇವನು ಭೂಮಿಗೆ ಹೋಗಿ ಸೃಷ್ಟಿಯನ್ನು ಮಾಡೆಂದು ಆಜ್ಞಾಪಿಸಲು, ಮನುವು ಧ್ಯಾನಪೂರ್ವಕವಾಗಿ ನೋಡಿ ಸೃಷ್ಟಿಗೆ ಅಧಿಷ್ಠಾತ್ರಿಯಾದ ಭೂದೇವಿಯನ್ನು ಅಸುರರು ಪಾತಾಳಕ್ಕೆ ಹಾಕಿದ್ದನ್ನು ತಿಳಿದನು. ಸೃಷ್ಟಿಮಾತ್ರವೇ ಬ್ರಹ್ಮನ ಕರ್ತವ್ಯವೆಂದು ಅವನು ತಿಳಿದಿದ್ದುದರಿಂದ, ಭೂಮಿಯನ್ನು ರಕ್ಷಿಸುವುದಕ್ಕೆ ತಾನು ವಿಷ್ಣುವನ್ನೇ ಕೋರಬೇಕೆಂದು ತಿಳಿದು ಭೂಮಿಯನ್ನು ರಕ್ಷಿಸುವಂತೆ ಮನಸ್ಸಿನಲ್ಲಿ ಶ್ರೀಹರಿಯನ್ನು ಕೋರಿದನು. ಕೂಡಲೇ ಭೂಮಿಯನ್ನು ರಕ್ಷಿಸಲು ಭಗವಂತ ಸಾಕಾರ ರೂಪವನ್ನು ಧರಿಸಿ, ಪಾತಾಳದಿಂದ ಭೂಮಿಯನ್ನು ಮೇಲೆತ್ತಿ ರಕ್ಷಿಸಿದ. ಅದನ್ನು ಜಲದಲ್ಲಿ ಸ್ಥಾಪಿಸಿದ.

ವೇನನೆಂಬ ಚಕ್ರವರ್ತಿಯ ಅಧರ್ಮಾಚರಣೆಗಳಿಗೆ ರೋಸಿಹೋದ ಭೂಮಿಯು, ಬಿತ್ತಿದ ಸಮಸ್ತ ಬೀಜಗಳನ್ನೂ ತನ್ನಲ್ಲೇ ಅಡಗಿಸಿಕೊಂಡುಬಿಟ್ಟಳು. ಬಿತ್ತಿದ ಬೀಜಗಳು ಹುಟ್ಟಲೇ ಇಲ್ಲ. ಪ್ರಪಂಚವೆಲ್ಲಾ ಹಸಿವಿನಿಂದ ಹಾಹಾಕಾರ ಪಟ್ಟು ದುಃಖಿಸಿತು. ಇದು ಸೃಷ್ಟಿಯ ಆರಂಭಕಾಲ, ಯಾವ ಸಸ್ಯ ಪ್ರಾಣಿ ರೂಪಗಳೂ ಇನ್ನೂ ಸೃಷ್ಟಿಯಲ್ಲಿರಲಿಲ್ಲ. ಭೂಮಿಯು ಹಳ್ಳ ತಿಟ್ಟುಗಳಿಂದ ಬಂಜರಾಗಿತ್ತು. ಪರಮಾತ್ಮ ಪೃಥು ರೂಪ ಧರಿಸಿ, ಭೂಮಿಯನ್ನು ತನ್ನ ಶಕ್ತಿಯಿಂದ ಮಟ್ಟಮಾಡಿದ. ಅದರಲ್ಲಿ ಅನ್ನೌಷಧಗಳನ್ನು ಬೆಳೆದು ಪ್ರಜಾಪಾಲನೆ ಮಾಡಿದ. ಭೂಮಿಯು ಸಾರವತ್ತಾದ ಪ್ರದೇಶವಾಯಿತು. ಪೃಥು ಮಹಾರಾಜ ಭೂಮಿಯನ್ನು ತನ್ನ ಮಗುವಿನಂತೆ ಪಾಲಿಸಿ ಪೋಷಿಸಿದ್ದರಿಂದ ಅದಕ್ಕೆ ಪೃಥ್ವಿ ಎಂದು ಹೆಸರಾಯಿತು. ಭೂಮಿಯ ಮೇಲೆ ಪಟ್ಟಣಗಳನ್ನು ನಿರ್ಮಿಸಿದವನೂ ಅವನೇ. ಅಂದರೆ, ಈ ಧರಣಿ ನಿರ್ಮಾಣಕ್ಕೆ ಭಗವತ್ ಸಂಕಲ್ಪವೇ ಕಾರಣ. ಇದನ್ನು ಪಾಲಿಸುವುದಕ್ಕಾಗಿ ಭಗವಂತ ವೇದಗಳನ್ನು ಸೃಷ್ಟಿಸಿ ಅವುಗಳಲ್ಲಿ ಮಾನವರಿಗೆ, ಅಂದರೆ ಜೀವಿಗಳಿಗೆ ಅಗತ್ಯವಾದ ನಿಯಮಗಳನ್ನು ಗೊತ್ತುಪಡಿಸಿದ. ಪೃಥ್ವಿಗೆ ಆಧಾರವಾದ ವೇದಗಳನ್ನು ಅಸುರರು ಅಪಹರಿಸಿ ಜಲವನ್ನು ಸೇರುತ್ತಲೇ ಶ್ರೀಹರಿ ಜಲಚರ ರೂಪ ಧರಿಸಿ ಸಪ್ತರ್ಷಿಗಳನ್ನೂ

ಮನುವನ್ನೂ ಪ್ರಳಯದಿಂದ ರಕ್ಷಿಸಿದ. ಅಂಥ ರೂಪ ಧರಿಸಿದ್ದರಿಂದಲೇ ಮತ್ಸ್ಯಾವತಾರವೆನ್ನುವ ಹೆಸರು ಪ್ರಸಿದ್ಧವಾಯಿತು.

ಮುನಿಗಳೇ! ಪರೀಕ್ಷಿತ್ ಮಹಾರಾಜಾ! ಭಗವದವತಾರಗಳು ಮತ್ತು ಸೃಷ್ಟಿಯ ಆದಿ ನಿಮ್ಮಲ್ಲಿ ಸ್ವಲ್ಪ ಸಂಶಯ ಹುಟ್ಟಿಸಬಹುದು. ಭಗವಲ್ಲೀಲೆಗಳು ಮಹಾದ್ಭುತಗಳು, ಅವು ಸಾಮಾನ್ಯ ಪ್ರಪಂಚ ರೀತಿಯ ಭಾವನೆಗಳಿಗೆ ಎಟುಕವು. ಒಂದೊಂದು ಸಾರಿ, ಇವುಗಳಿಗೆ ಆಧಾರವಿಲ್ಲವೆಂದು ಅನಿಸಬಹುದು, ಕಾಣಿಸಬಹುದು. ಹಾಗೇ ತೋರುವುದು. ಆದರೆ ಕಾರಣವಿಲ್ಲದ ಕಾರ್ಯವನ್ನು ಆ ಪರಮಾತ್ಮ ಸಂಕಲ್ಪಿಸುವುದಿಲ್ಲ. ಅವನ ಸಂಕಲ್ಪಕ್ಕೆ ಒಂದು ಆಧಾರ ಇರಬೇಕೆಂದಿಲ್ಲ. ಎಲ್ಲವುದಕ್ಕೂ ಅವನ ಸಂಕಲ್ಪವೇ ಆಧಾರ. ಸೃಷ್ಟಿ ಕಾರ್ಯದಲ್ಲಿ ಪ್ರವರ್ತಿಸಲು ಏನಾದರೊಂದು ಮೋಹ ವಸ್ತು ಇರಬೇಕು. ಆದ್ದರಿಂದ ಬ್ರಹ್ಮ ತನ್ನ ಸಂಕಲ್ಪ ಮಾತ್ರದಿಂದಲೇ ಇಬ್ಭಾಗವಾದ. ಇದುವರೆಗೆ ಅವನು ಕೇವಲ ಸಂಕಲ್ಪದಿಂದಲೇ ದ್ವೈತವಾಗಿ ಸೃಷ್ಟಿ ಕಾರ್ಯದಲ್ಲಿ ಪ್ರವರ್ತಿಸುತ್ತಿದ್ದ. ಈಗ ಅವನು ಕರ್ಮದಿಂದಲೂ ಶರೀರದಿಂದಲೂ ಎರಡಾದ. ಇಬ್ಬರೂ ಒಂದೇ ಆಗಿದ್ದವರು, ಒಂದೇ ಶರೀರವಾಗಿದ್ದವರು ಈಗ ಎರಡು ಶರೀರಗಳಾಗಿ ಮಾರ್ಪಟ್ಟರು. ಅದರಿಂದ ಎರಡು ಸಂಕಲ್ಪಗಳು ಹುಟ್ಟಿದವು. ಒಂದು ಮೋಹ ಹುಟ್ಟಿಸುವಂಥದ್ದು, ಇನ್ನೊಂದು ಸೃಷ್ಟಿ ವೃದ್ಧಿಮಾಡುವುದು. ಈ ಕಾರಣದಿಂದ ಎರಡೂ ಬೇರೆ ಬೇರೆ, ಎರಡು ಲಿಂಗಗಳಾದವು: ಒಂದು ಪುಲ್ಲಿಂಗ, ಮತ್ತೊಂದು ಸ್ತ್ರೀಲಿಂಗ.

ಒಂದೇ ಅಂಗದಿಂದ ಇಬ್ಬರು ಹುಟ್ಟಿದರು. ಅದರಲ್ಲಿ ಒಂದು ರೂಪ ಇನ್ನೊಂದು ರೂಪವನ್ನು ಶತ ಶತ ರೂಪಗಳಿಂದ ಆಕರ್ಷಿಸುವುದರಿಂದ ಅದು ಶತರೂಪ ಎಂದು ಬ್ರಹ್ಮನಿಂದ ಕರೆಯಲ್ಪಟ್ಟಿತು. ಎರಡನೆಯ ರೂಪಕ್ಕೆ ಮನು ಎಂದು ಹೆಸರಾಯಿತು. ಶತರೂಪ–ಮನು ಇವರೇ ಸೃಷ್ಟಿಗೆ ಆದಿ ಜೋಡಿಯಾದರು.

## ೨೮ ಸಂವಾದಾರಂಭ

"ಆ ಇಬ್ಬರೂ ತಮ್ಮ ತಮ್ಮ ಕರ್ತವ್ಯವೇನೆಂದು ತಿಳಿಸಬೇಕೆಂದು ಸೃಷ್ಟಿಕರ್ತನನ್ನು ಪ್ರಾರ್ಥಿಸಲು, ಬ್ರಹ್ಮ ಮುಗುಳ್ನಗುತ್ತಾ, 'ನೀವಿಬ್ಬರೂ ಸತಿಪತಿ ಸಂಬಂಧದಿಂದ

ಸೃಷ್ಟಿಯನ್ನು ಬೆಳೆಸುತ್ತಾ ಹೋಗಿ,' ಎಂದು ಆಜ್ಞಾಪಿಸಿದ. ಆಗ ಆ ಇಬ್ಬರೂ ಬ್ರಹ್ಮನ ಆಜ್ಞಾನುಸಾರವಾಗಿ ಭೂಲೋಕದಲ್ಲಿ ಅಧಿಕಾರ ವಹಿಸಿ ಸೃಷ್ಟಿಯನ್ನು ವೃದ್ಧಿ ಮಾಡತೊಡಗಿದರು," ಎಂದು ಶುಕ ಹೇಳುತ್ತಿದ್ದಂತೆ, ಪರೀಕ್ಷಿತ್, "ಸ್ವಾಮೀ! ಈ ಲೋಕದ ಸಮಸ್ತ ಬಾಧೆಗಳಿಗೂ ಮೋಹವೇ ಕಾರಣವೆಂದು ನಾನು ಸ್ವಾನುಭವ ದಿಂದ ತಿಳಿದೆ. ಮತ್ತೆ ಅದನ್ನೇ ಕುರಿತು ನೀವು ಹೇಳುವ ಅಗತ್ಯವಿಲ್ಲ. ಅದ ರಿಂದ ವಿಮುಕ್ತಿ ಹೊಂದುವ ಮಾರ್ಗವನ್ನು ತಿಳಿಸಿ. ಈ ಅಂತ್ಯ ಸಮಯದಲ್ಲಿ ಮಾನವನು ಮಾಡಬೇಕಾದ್ದು ಯಾವುದೋ ಅದನ್ನು ತಾವು ತಿಳಿಸಬೇಕು," ಎಂದು ಕಾತರತೆಯಿಂದ ಪ್ರಾರ್ಥಿಸಿದ.

ಆ ಮಾತಿಗೆ ಶುಕ ಸಂತೋಷಪಟ್ಟು, "ರಾಜಾ! ನೀನು ಮಹಾಧರ್ಮಾತ್ಮ, ಸಾಧು ಸೇವಕ. ನಿನ್ನ ಪುಣ್ಯ ಪ್ರಭಾವದಿಂದಲೇ ಇಲ್ಲಿ ಇಷ್ಟೊಂದು ಋಷಿಗಳು, ಮುನಿಗಳು ಸೇರಿದ್ದಾರೆ. ಇಲ್ಲದಿದ್ದರೆ ಈ ಮಹನೀಯರು ಸಾಮಾನ್ಯವಾಗಿ ಒಂದು ಸ್ಥಳದಲ್ಲಿ ಸೇರುವುದಿಲ್ಲ," ಎನ್ನಲು ಪರೀಕ್ಷಿತ್, "ಪ್ರಭೂ! ನಾನು ಮಹಾ ಪಾಪಿ, ಧರ್ಮ ಶೂನ್ಯನು. ನಿಜಕ್ಕೂ ನಾನು ಅಂಥ ಧರ್ಮಾತ್ಮನೂ ಸಾಧುಸೇವಕನೂ ಆಗಿದ್ದರೆ ನನಗೆ ಇಂಥ ವಿಪ್ರ ಶಾಪ ಬರುತ್ತಿರಲಿಲ್ಲ ಅಲ್ಲವೇ? ನನ್ನ ಬುದ್ಧಿ ಅಧರ್ಮ ಕಾರ್ಯದಲ್ಲಿ ತೊಡಗಿದ್ದರಿಂದಲ್ಲವೇ ಇಂಥ ಶಾಪಕ್ಕೆ ಗುರಿಯಾದೆ? ಈ ಮಹಾ ಋಷಿಗಳ ಸಂದರ್ಶನ, ತಮ್ಮ ಪಾದಸೇವಾ ಭಾಗ್ಯ ನನ್ನ ಪೂರ್ವಿಕರು ಮಾಡಿದ ಪುಣ್ಯ ಪ್ರಭಾವದಿಂದ ಲಭಿಸಿತೇ ಹೊರತು, ನನ್ನ ಪುರುಷಾರ್ಥದಿಂದ ಅಲ್ಲವೆನ್ನು ವುದು ನನಗೆ ಚೆನ್ನಾಗಿ ಗೊತ್ತು.

ಶ್ಯಾಮಸುಂದರನಿಗೆ ನನ್ನ ಪಿತಾಮಹರ ಮೇಲೆ ಇದ್ದ ಅನುಗ್ರಹದ ಪ್ರಭಾವವೇ ನನ್ನ ಈ ಪವಿತ್ರತೆಗೆ ಕಾರಣ. ಇಲ್ಲದಿದ್ದರೆ ಸದಾ ಕಾಲವೂ ಅಡವಿಯಲ್ಲಿ ತಿರುಗುತ್ತಾ ಮಾನವ ಮಾತ್ರರಿಗೆ ಗೋಚರಿಸದಂತೆ ಸಂಚರಿಸುವ ತಮ್ಮನ್ನು ಸಾಕ್ಷಾತ್ಕರಿಸಿಕೊಳ್ಳು ವುದು, ಸಾಮಾನ್ಯ ಮಾನವರಂತೆ ಸಂಸಾರ ಕೂಪದಲ್ಲಿ ಬಿದ್ದು, ವಿಷಯಾನಂದದಲ್ಲಿ ಮುಳುಗಿ, ಸತ್ಯ-ನಿತ್ಯ-ನಿರ್ಮಲಗಳ ವಿಚಾರವೇ ತಿಳಿಯದೆ ಇರುವ ನನ್ನಂಥವರಿಗೆ ಸಾಧ್ಯವಾದುದಲ್ಲ.

ಎಲ್ಲಕ್ಕೂ ನನ್ನ ಪಿತಾಮಹರ ಆಶೀರ್ವಾದ ಬಲ, ಶ್ಯಾಮಸುಂದರನ ಅನುಗ್ರಹ ಬಲವೇ ಕಾರಣವಲ್ಲದೆ ಬೇರೆ ಅಲ್ಲ. ಇದು ನನ್ನ ದೃಢನಂಬಿಕೆ. ತಾವು ನನ್ನ ವಿಷಯದಲ್ಲಿ ಹೊಂದಿರುವ ತುಂಬು ವಾತ್ಸಲ್ಯದಿಂದ ಹೀಗೆ ಹೇಳುತ್ತಿರುವಿರೇ ಹೊರತು, ನನ್ನ ಒಳ್ಳೆಯದು ಕೆಟ್ಟದು ನನಗೆ ತಿಳಿದಿದೆ. ಆದ್ದರಿಂದ ಇದೇ ವಾತ್ಸಲ್ಯ ದಿಂದ ನನ್ನ ಸಂಶಯ ನಿವಾರಣೆ ಮಾಡಿ, ನಾನು ಮರಣೋನ್ಮುಖವಾಗಿ ಇರುವ

ಈ ಸಮಯದಲ್ಲಿ ಮುಖ್ಯವಾಗಿ ಬಿಡಬೇಕಾದವು ಯಾವುವು, ಮಾಡಬೇಕಾದವು ಯಾವುವು ಎನ್ನುವುದನ್ನು ಪರಿಹರಿಸುವ ಸಾಮರ್ಥ್ಯ ತಮಗಲ್ಲದೆ ಅನ್ಯರಿಗಿಲ್ಲ. ತಾವು ಶ್ರವಣ ಮಾಡಿಸುತ್ತೇನೆಂದು ತಿಳಿಸಿದ ಭಾಗವತವನ್ನು ಹೇಳಬೇಕು. ಅದೇ ಎಲ್ಲದಕ್ಕೂ ಆಧಾರವೆಂದು ಹೇಳಿದಿರಲ್ಲವೇ? ಸರ್ವ ಪಾಪ ನಿರ್ಮೂಲನವೂ ಸರ್ವ ಶುಭ ಪ್ರಾಪ್ತಿಯೂ ಆಗುವಂಥ ಆ ದಿವ್ಯ ಕೃಷ್ಣ ನಾಮಾಮೃತವನ್ನು ನನಗೆ ಕುಡಿಸಿ, ನನ್ನ ತಾಪವನ್ನು ನಿವಾರಿಸಿ," ಎಂದು ವಿನಯದಿಂದ ಪ್ರಾರ್ಥಿಸಿದ.

ಮಹಾರಾಜನನ್ನು ನೋಡಿ, ಶುಕಮುನಿ ನಗುತ್ತಾ, "ಮಹಾರಾಜಾ! ಭಾಗವತ ಶಾಸ್ತ್ರ ವೇದಗಳಂತೆ ಮನನೀಯವಾದುದು, ನಾದ ರಮಣೀಯವಾದುದು. ದ್ವಾಪರ ಯುಗದ ಅಂತ್ಯದಲ್ಲಿ ನಾನು ನಮ್ಮ ತಂದೆ, ವ್ಯಾಸರ, ಆಶ್ರಮದಲ್ಲಿ, ಅಂದರೆ ಗಂಧಮಾದನ ಪರ್ವತದಲ್ಲಿ, ನನ್ನ ತಂದೆಯಿಂದಲೇ ಕೇಳಿದೆ. ಅದನ್ನೇ ನಿನಗೆ ಹೇಳುತ್ತೇನೆ, ಕೇಳು," ಎಂದು ಹೇಳಲು ಪ್ರಾರಂಭಿಸಿದ. ಪರೀಕ್ಷಿತ್ ಮಹಾರಾಜ ಮತ್ತೆ ಕೈ ಮುಗಿದು, "ಸ್ವಾಮೀ! ನೀವು ಹುಟ್ಟಿದೊಡನೆಯೇ ತ್ಯಾಗಿಗಳಾಗಿ, ವಿರಾಗಿಗಳಾಗಿ, ಜಾತಕರ್ಮ, ನಾಮಕರ್ಮ, ಉಪನಯನಾದಿ ಸಂಸ್ಕಾರಗಳು ನಡೆಯದೆಯೇ ಸರ್ವಸಂಗ ಪರಿತ್ಯಾಗಿಗಳಾಗಿ ಅಡವಿಯಲ್ಲಿ ಸಂಚರಿಸಲು ಆರಂಭಿಸಿದಿರಿ ಎಂದು ಕೇಳಿದ್ದೇನೆ. ಆದ್ದರಿಂದ ನೀವು ಈ ಭಕ್ತಿ ಪ್ರಧಾನವಾದ ಭಾಗವತ ಶಾಸ್ತ್ರದ ಶ್ರವಣ ಮಾಡಿದ್ದು ಮಹದಾಶ್ಚರ್ಯಕರವಾಗಿ ಇದೆ. ಇದರಲ್ಲಿ ನಿಮಗೆ ಆಸಕ್ತಿಯುಂಟಾಗಲು ಕಾರಣವೇನು ಎನ್ನುವುದನ್ನು ವಿವರಿಸುವಿರಾ?" ಎಂದು ಪ್ರಾರ್ಥಿಸಲು, ಶುಕ ಶಾಂತವದನನಾಗಿ, "ಮಹಾರಾಜಾ! ನಾನು ವಿಧಿನಿಷೇಧಗಳಿಗೆ ಅತೀತನು. ನಾನು ನಿರಂತರವೂ ನಿರ್ಗುಣ ಬ್ರಹ್ಮದಲ್ಲಿ ಲೀನನಾಗಿ ಇರುವುದು ಪರಮ ಸತ್ಯ. ಆದರೂ ಭಗವದ್ ಲೀಲಾ ಗುಣಗಾನದಿಂದ ಆಕರ್ಷಿತನಾಗಲು ಅದರಲ್ಲಿ ಅಂಥ ಮಾಧುರ್ಯವಿದೆ.

ಅಷ್ಟೇ ಅಲ್ಲ, ಮಹಾರಾಜಾ! ನನ್ನ ತಂದೆಯಾದ ವ್ಯಾಸಮಹರ್ಷಿಯ ಶಿಷ್ಯನ ಮುಖದಿಂದ ಕೂಡ ಭಗವಂತನ ಸೌಂದರ್ಯ ಮಾಧುರ್ಯಗಳನ್ನು ಕೇಳಿದ್ದೆ. ಆದ್ದರಿಂದ ಆತನ ಮಹಿಮೆಯನ್ನು ಶ್ರವಣ ಮಾಡಿ, ಪಠಿಸಿ ಆನಂದಸಾಗರದಲ್ಲಿ ಮುಳುಗಿ ಅಲೆದಾಡುತ್ತಿದ್ದೆ. ಅವನ ಮಧುರಲೀಲೆಗಳು ನನ್ನನ್ನು ಉನ್ಮತ್ತ ಚಿತ್ತನನ್ನಾಗಿ ಮಾಡಿದವು.

ಇಂದು ಅಂಥ ಮಧುರಾಮೃತವನ್ನು ಹತ್ತು ಮಂದಿಗೆ ಹಂಚುವ ಸುಸಮಯ ಸಂಪ್ರಾಪ್ತವಾದ್ದರಿಂದ, ಅದಕ್ಕೆ ಅರ್ಹತೆವುಳ್ಳವರು ಲಭಿಸಿರುವುದನ್ನು ಗ್ರಹಿಸಿಯೇ ಹೀಗೆ ಬಂದೆ. ಆ ಪವಿತ್ರ ಭಾಗವತವನ್ನು ಇಂದು ನಿನಗೂ ನಿನ್ನ ಮೂಲಕ ಈ

ಮಹನೀಯರುಗಳಿಗೂ ಹೇಳುತ್ತೇನೆ. ಇದನ್ನು ಶ್ರವಣ ಮಾಡುವ ಸಾಮರ್ಥ್ಯ ನಿನಗಿದೆ. ನೀನು ಪರಮ ಪುರುಷಾರ್ಥದ ದೀಕ್ಷೆ ಹೊಂದಿರುವೆ. ಯಾರು ಈ ಕಥೆಯನ್ನು ಶ್ರದ್ಧಾಭಕ್ತಿಯಿಂದ ಕೇಳುವರೋ, ಕೇಳುವುದು ಮಾತ್ರವಲ್ಲ, ಹೃದಯ ಪೂರ್ವಕವಾದ ವಿಶ್ವಾಸದಿಂದ ಮನನ ಮಾಡುವರೋ ಅಂಥವರು ಅತಿ ಶೀಘ್ರ ಕಾಲದಲ್ಲಿ ವಾಸುದೇವನ ಆನಂದಸ್ವರೂಪದಲ್ಲಿ ಐಕ್ಯವಾಗುವರು. ಅವರ ಹೃದಯ ಗಳು ಮದನಮೋಹನನ ಮಾಧುರ್ಯರಸದಲ್ಲಿ ಮುಳುಗಿ ಅದ್ವೈತಾನಂದವನ್ನು ಅನುಭವಿಸುವುದು.

ಭಗವತ್ ಕಥೆಯನ್ನು ಕೇಳುವುದು, ಮನೋವಾಕ್ಕಾಯಗಳಿಂದ ಸದಾ ನಾಮ ಸಂಕೀರ್ತನೆ ಮಾಡುವುದು ಇವೆರಡನ್ನೂ ಮೀರಿದ ಶ್ರೇಷ್ಠಕಾರ್ಯ ಉತ್ತಮೋತ್ತಮ ಸಾಧನೆ ಯಾವುದೂ ಇಲ್ಲ. ಮಹಾರಾಜಾ! ಕಾಲಾವಕಾಶ ಅಲ್ಪವೆಂದು ಚಿಂತಿಸದೆ ಇರು. ಕಟಾಕ್ಷಕ್ಕೆ ಅಧಿಕಕಾಲ ಬೇಕಿಲ್ಲ. ಕಣ್ರೆಪ್ಪೆ ಆಡಿಸುವುದರಲ್ಲಿ ಆ ಕರುಣಾನಿಧಿ ಶ್ಯಾಮಸುಂದರನ ಅನುಗ್ರಹ ಕಿರಣ ನಿನ್ನ ಮೇಲೆ ಪಸರಿಸಬಹುದು. ಈ ಏಳು ದಿನಗಳೂ ಒಂದು ನಿಮಿಷವೂ ವ್ಯರ್ಥವಾಗದಂತೆ ಅನೇಕ ಮಹಾಪುರುಷರ ಚರಿತ್ರೆ ಹಾಗೂ ವಾಸುದೇವ ಅವರಿಗೆ ಯಾವ ವಿಧವಾಗಿ ಅನುಗ್ರಹವನ್ನು ಪ್ರಸಾದಿಸಿದನೆನ್ನುವ ಕಥಾಶ್ರವಣ ಮಾಡಿಸುತ್ತೇನೆ. ಪರಮ ಭಕ್ತರು ಭವಸಾಗರವನ್ನು ಹೇಗೆ ದಾಟಲು ಸಾಧ್ಯವಾಯಿತೆನ್ನುವುದನ್ನು ಹೇಳುತ್ತೇನೆ. ನಿನಗೆ ಆಯುಃ ಪ್ರಮಾಣ ಇನ್ನೂ ಏಳು ದಿನಗಳಿರುವುದರಿಂದ, ಅಂತ್ಯಕಾಲವು ಹತ್ತಿರದಲ್ಲಿದೆಯೆನ್ನುವುದನ್ನು ತಿಳಿದ ನೀನು ನಾಳೆಯಿಂದಲೇ ದೇಹ, ಮನೆಗಳ ವ್ಯಾಮೋಹ ಬಿಟ್ಟು ಮನಸ್ಸನ್ನು ಮಾಧವನ ಕಥೆಯಲ್ಲಿ ಲೀನಗೊಳಿಸಿ, ನಾನು ಹೇಳುವ ಆ ಮಧುರ ಕಥಾಮೃತ ಪಾನಮಾಡು. ಒಬ್ಬರು ಒಂದು ಕಥೆ ಹೇಳುವುದು, ಸಾವಿರಾರು ಜನ ಅದನ್ನು ಕೇಳುವುದು ಲೋಕಸಾಮಾನ್ಯವಾದುದು. ಆದರೆ ಸಂಪೂರ್ಣ ವಿಶ್ವಾಸವನ್ನಿಟ್ಟು ಕೇಳಿದರೇನೇ ಜ್ಞಾನ ಸಿದ್ಧಿಸುವುದು ವಿನಾ, ಚಿತ್ತಶುದ್ಧಿ ಇಲ್ಲದೆ ಜ್ಞಾನ ಸಿದ್ಧಿಸದು.

ಮಹಾರಾಜಾ! ಮತ್ತೊಂದು ವಿಷಯ. ಲೋಕದಲ್ಲಿ ಸಾಧನೆ ಮಾಡದೆ, ಸ್ವಾನುಭವ ವಿಲ್ಲದೆ, ಕೇವಲ ಪಠನ ಮಾಡಿ ತಿಳಿದಿದ್ದನ್ನು ಪರರಿಗುಪದೇಶಿಸುವವರು ಲೆಕ್ಕಕ್ಕೆ ಮೀರಿದಷ್ಟು ಜನರಿದ್ದಾರೆ. ತಮ್ಮ ಸಾಧನೆಯಲ್ಲೂ ಆ ಪವಿತ್ರ ಪರಮಾತ್ಮ ಲೀಲಾ ಗುಣಗಾನದಲ್ಲೂ ವಿಶ್ವಾಸವಿಡದೆ, ಆಚರಣೆಯಲ್ಲಿ ಅವುಗಳನ್ನು ತರದೆ, ಇತರರಿಗೆ ಮಾತ್ರ ಅವುಗಳನ್ನು ಆಚರಿಸಿರೆಂದು ಹೇಳುವವರ ಉಪದೇಶ ನೀರಿನಲ್ಲಿ ಮಾಡಿದ ಹೋಮವಿದ್ದಂತೆ. ಅದರಿಂದ ಯಾವ ಪ್ರಯೋಜನವೂ ಇಲ್ಲ. ಮನಃ ಶುದ್ಧಿ ಆಗುವುದಿಲ್ಲ. ಅದು ಕೇವಲ ಅರಣ್ಯ ರೋದನವಾಗುವುದು. ಪ್ರಭಾವಹೀನ ಆಗುವುದು. ಆದರೆ ನನ್ನ ವಿಷಯದಲ್ಲಿ ಅಂಥದಕ್ಕೆ ಅವಕಾಶವಿಲ್ಲ. ನನ್ನ ಹೃದಯವು

ನಿರಂತರವೂ ಆ ನೀಲಮೇಘಶ್ಯಾಮನ ಮೇಲಿನ ತುಂಬು ಪ್ರೇಮದಲ್ಲಿ ಮುಳುಗಿ ತೇಲುತ್ತಿದೆ. ನಿರಂತರಾನಂದದಿಂದ, ಸಂಪೂರ್ಣ ವಿಶ್ವಾಸದಿಂದ ಉತ್ಸಾಹಪೂರಿತ ಹೃದಯದಿಂದ ಉಕ್ಕಿಬರುವ ಈ ಶ್ರವಣರಸವನ್ನು ಕುಡಿಯುವವರಿಗೆ ತಪ್ಪದೆ ಸಾಕ್ಷಾತ್ಕಾರ ಪ್ರಾಪ್ತಿ ಲಭಿಸುವುದು, ಇದರಲ್ಲಿ ಸಂದೇಹವಿಲ್ಲ. ಮಹಾರಾಜಾ! ನಿನ್ನಂಥ ಉತ್ತಮಾಧಿಕಾರಿಗೆ ತಕ್ಕ ಪವಿತ್ರ ಅನುಭವಜ್ಞನೇ ಲಭಿಸಿದ್ದಾನೆ. ನಿನ್ನ ಭಾಗ್ಯವೇ ಭಾಗ್ಯ," ಎಂದು ತಲೆಯಮೇಲೆ ಕೈ ಆಡಿಸುತ್ತಾ ಆಶೀರ್ವದಿಸಿದ.

ಮಹಾರಾಜ ಕರಗಳನ್ನು ಜೋಡಿಸಿ, "ಸ್ವಾಮೀ! ಕಾಲಾವಧಿ ತುಂಬ ಕಡಿಮೆ ಇದೆಯೆನ್ನುವ ಸಂಗತಿ ನಿಮಗೆ ತಿಳಿದಿದೆ. ಆದ್ದರಿಂದ ಸರ್ವೋತ್ತಮವಾದ ಉಪ ದೇಶವನ್ನು ಅನುಗ್ರಹಿಸಬೇಕು. ಅದನ್ನು ಏಳು ದಿನಗಳೂ ಬಿಡದೆ ಜಪಿಸುತ್ತೇನೆ, ಸ್ಮರಿಸುತ್ತೇನೆ," ಎಂದು ಪ್ರಾರ್ಥಿಸಲು, ಶುಕ ನಕ್ಕು, "ಪರೀಕ್ಷಿತ್! ಪ್ರಪಂಚದಲ್ಲಿ ವಿಷಯಾಸಕ್ತ ಆದವರು ಚಿರಕಾಲ ಜೀವಿಸುವರು, ತಮ್ಮ ಜೀವಿತದ ದಿನಗಳನ್ನು ಚಿಂತೆ, ನೋವು, ದುಃಖ, ಕಣ್ಣೀರಿನಿಂದ ಕಳೆಯುವರು. ಪಶುಪಕ್ಷಿ ಮೃಗಾದಿಗಳಂತೆ ಸಂತಾನ ಪಡೆದು, ಪವಿತ್ರ ಪದಾರ್ಥಗಳನ್ನು ತಿಂದು, ಮಲಮೂತ್ರರೂಪದಲ್ಲಿ ವಿಸರ್ಜಿಸುವ ಮಾನವರ ಜೀವಿತ ಜೀವಿತವೇ? ಅವರ ಬದುಕು ಬದುಕೇ? ಲೋಕದಲ್ಲಿ ಎಷ್ಟು ಜೀವರಾಶಿಗಳು ಬದುಕುತ್ತಿಲ್ಲ? ಬದುಕಿದರೆ ಬರಲಿಲ್ಲ ಭಾಗ್ಯ, ಭಾವದಲ್ಲಿದೆ ಭಾಗ್ಯರಾಶಿ. ಭಗವತ್ ಭಾವ ಇದ್ದವನು ಸತ್ತರೂ ಬದುಕಿದ್ದಂತೆ. ವಿಷಯಾಸಕ್ತನಾಗಿ ನಿರಂತರವೂ ಪವಿತ್ರ ಕಾಲವನ್ನು ಅಪವಿತ್ರ ಕರ್ಮಗಳಲ್ಲಿ ತೊಡಗಿಸಿ, ಕ್ಷಣಕಾಲದ ಸುಖಕ್ಕಾಗಿ, ಸರ್ವಜ್ಞತ್ವ, ಸರ್ವಶಕ್ತತ್ವ ಹೊಂದಿರುವ ಸರ್ವೇಶ್ವರನನ್ನು ಮರೆಯುವುದು ಮಾನವತ್ವಕ್ಕೇ ಅಪಚಾರ ಮಾಡಿದಂತೆ.

ಹಾಗಲ್ಲದೆ, ಶ್ರೀಹರಿಯ ಚರಣಾರವಿಂದಗಳಲ್ಲಿ ಚಿತ್ತವನ್ನು ಲಗ್ನಗೊಳಿಸಿದವನ ಜೀವಿತ ಒಂದೆ ಮುಹೂರ್ತವಾದರೂ ಸಾಕು. ಆ ಅಲ್ಪ ಅವಧಿಯಲ್ಲೇ ಅವರು ತಮ್ಮ ಜೀವಿತ ಕಲ್ಯಾಣ ಸಾಧಿಸಿಕೊಳ್ಳುವರು. ಮಹಾರಾಜಾ! ನಿನ್ನ ಸಂದೇಹ ಕಳೆಯಲು ಒಬ್ಬ ರಾಜರ್ಷಿಯ ಒಂದು ಸುಂದರವಾದ ಕಥೆ ಹೇಳುತ್ತೇನೆ ಕೇಳು.

ಸೂರ್ಯವಂಶದಲ್ಲಿ ಮಹಾ ಪ್ರತಾಪನೂ ಶೂರನೂ ವೀರನೂ ದಾತನೂ ಧರ್ಮ ಪರಾಯಣನೂ ಆದ ಒಬ್ಬ ಅವನೀಪತಿ ಇದ್ದ. ಅವನ ಹೆಸರು ಖಟ್ವಾಂಗ. ಅವನ ಸಮಾನರಾದವರೇ ಯಾರೂ ಇರಲಿಲ್ಲ. ಹೀಗಿರುವಲ್ಲಿ, ಒಂದು ದಿನ ದೈತ್ಯ ದಾನವರು ದೇವತೆಗಳ ಮೇಲೆ ದಂಡೆತ್ತಿ ಹೋಗಲು, ದೇವತೆಗಳ ಪಕ್ಷದಲ್ಲಿ ಸ ರಿಯಾದ ಬಲ ಇಲ್ಲದಿದ್ದುದರಿಂದ, ಅವರು ನಿರ್ಬಲರಾಗಿ ಚಿಂತಿಸುತ್ತಾ, ಮರ್ತ್ಯ ಲೋಕಕ್ಕೆ ಬಂದು ಖಟ್ವಾಂಗನಿಗೆ ತಮ್ಮ ಬಲಹೀನತೆಯನ್ನು ಹೇಳಿಕೊಂಡು,

ತಮಗೆ ಸಹಾಯ ಮಾಡಬೇಕೆಂದು ಕೋರಿದರು. ಆ ರಾಜನೂ ಕೂಡ ಯುದ್ಧ ಆಸಕ್ತನಾದವನಾದ್ದರಿಂದ ಮರುಮಾತಾಡದೆ ಧನುರ್ಬಾಣಗಳನ್ನು ಧರಿಸಿ ರಥಾ ರೋಹಣನಾಗಿ ದೇವತೆಗಳೊಂದಿಗೆ ಸಮರಸ್ಥಳ ಸೇರಿದ. ದೈತ್ಯರೆದೆ ಅದುರುವಂತೆ ಘೋರ ಯುದ್ಧ ಮಾಡಿದ. ಖಟ್ವಾಂಗನ ಆ ಭಯಂಕರವಾದ ಹೋರಾಟವನ್ನು ಎದುರಿಸಲಾರದೆ, ದಾನವರೆಲ್ಲರೂ ಅಲ್ಲಿಂದ ಓಡಿದರು. ಹಾಗೆ ಓಡುವವರನ್ನು ಬೆನ್ನಟ್ಟಿ ಹೋಗುವುದು ಧರ್ಮವಿರುದ್ಧವೆಂದು ತಿಳಿದ ಮಹಾರಾಜ ಯುದ್ಧವನ್ನು ಅಷ್ಟಕ್ಕೇ ನಿಲ್ಲಿಸಿದ. ಆಗ ದೇವತೆಗಳು ವಿಜಯಿಗಳಾದೆವೆಂದು ಆನಂದದಿಂದ ಖಟ್ವಾಂಗನ ಬಗೆಗೆ ಪ್ರಸನ್ನ ಹೃದಯಿಗಳಾಗಿ ಆತನನ್ನು ಪ್ರಶಂಸಿಸುತ್ತಾ, 'ರಾಜಾ! ನಿನಗೆ ಸಾಟಿಯಾದವರು ಈ ಲೋಕದಲ್ಲಿಲ್ಲ. ಈ ಘೋರ ಸಂಗ್ರಾಮದಲ್ಲಿ ನಮಗೆ ವಿಜಯ ಗಳಿಸಿಕೊಟ್ಟೆ. ಆದ್ದರಿಂದ ನಮ್ಮಿಂದ ನಿನಗೆ ಏನು ಸಹಾಯ ಬೇಕೋ ಕೇಳು,' ಎಂದರು.

ಅದಕ್ಕೆ ಖಟ್ವಾಂಗ, 'ದೇವತೆಗಳೇ! ಯಜ್ಞ ಯಾಗಾದಿ ಸರ್ವ ಶುಭಕರ್ಮಗಳನ್ನು ನಿಮ್ಮ ಪ್ರಸನ್ನತೆಗೇ ಅಲ್ಲವೇ ಮಾಡುವುದು? ಆದ್ದರಿಂದ ನಿಮ್ಮನ್ನು ಪ್ರಸನ್ನ ಮಾಡಿ ಕೊಂಡ ಈ ಯುದ್ಧವನ್ನು ಕೂಡ ಒಂದು ಮಹಾ ಯಜ್ಞವೆಂದೇ ಭಾವಿಸುತ್ತೇನೆ. ನನ್ನಲ್ಲಿ ನೀವು ಪ್ರಸನ್ನರಾಗಿದ್ದೀರಿ, ಆದ್ದರಿಂದ ಇದಕ್ಕಿಂತ ಹೆಚ್ಚಿನ ವರ ಕೇಳುವುದು ಆದರೂ ಏನಿದೆ? ಇದೇ ಮಹಾಭಾಗ್ಯ,' ಎಂದು ಅವರಿಗೆ ನಮಸ್ಕರಿಸಿದ. ಆದರೂ ದೇವತೆಗಳಿಗೆ ತೃಪ್ತಿಯಾಗಲಿಲ್ಲ. ಏನಾದರೂ ವರವನ್ನು ಕೇಳಲೇಬೇಕೆಂದು ಮಹಾರಾಜನನ್ನು ಬಲವಂತಪಡಿಸಲು, ಮಹಾರಾಜ ಯಾವ ವರವನ್ನೂ ಕೇಳಲು ಇಷ್ಟಪಡದೆ, ಅವರ ಪ್ರತ್ಯುಪಕಾರವನ್ನು ಪಡೆಯಲೊಲ್ಲದೆ ಇದ್ದರೂ ಅವರು ನಿರ್ಬಂಧಪಡಿಸುತ್ತ ಇದ್ದುದರಿಂದ, ಏನಾದರೂ ಕೇಳದೆ ಗತ್ಯಂತರವಿಲ್ಲವೆಂದು ನಿರ್ಣಯಿಸಿ, ಚೆನ್ನಾಗಿ ಆಲೋಚಿಸಿ, ಕಡೆಗೆ, 'ದೇವತೆಗಳೇ! ನನ್ನ ಆಯಸ್ಸು ಇನ್ನೂ ಎಷ್ಟಿದೆಯೋ ತಿಳಿಸಿ. ಆಯುಶ್ಶೇಷ ಎಷ್ಟಿದೆಯೆನ್ನುವುದನ್ನು ತಿಳಿದ ಮೇಲೆಯೇ ನಾನು ನಿಮ್ಮಲ್ಲಿ ವರ ಕೇಳುತ್ತೇನೆ,' ಎಂದು ಪ್ರಾರ್ಥಿಸಿದ. ಆಗ, ಸರ್ವಜ್ಞನಾದ ಪುರಂದರ ತಡಮಾಡದೆ ಮರುಕ್ಷಣವೆ, 'ರಾಜಾ! ನಿನ್ನ ಆಯಸ್ಸು ಮುಗಿಯುತ್ತಿದೆ. ಇನ್ನೊಂದು ಮುಹೂರ್ತಕಾಲ ಮಾತ್ರ ಇದೆ,' ಎಂದು ಹೇಳಿದ. ಖಟ್ವಾಂಗನು ಸಾವಧಾನ ಚಿತ್ತವುಳ್ಳವನಾಗಿ, 'ನಾನಿನ್ನು ಕೋರುವಂಥದ್ದು ಯಾವುದೂ ಇಲ್ಲ. ನಾನು ಇಹಪರದ ಭೋಗಗಳನ್ನೆಲ್ಲಾ ತುಚ್ಛವಾಗಿ ಭಾವಿಸಿದ್ದೇನೆ. ಇಂದ್ರಿಯ ಸುಖಗಳೆನ್ನುವ ಕೊಚ್ಚೆಯಲ್ಲಿ ನಾನಿನ್ನು ಇಳಿಯುವುದಿಲ್ಲ. ತಿರುಗಿ ಇಲ್ಲಿಗೆ ಬರದಂತೆ ಮಾಡುವ ಜನ್ಮಸಾರ್ಥಕ ಮಾಡುವ ಭಗವಂತನ ಪರಮಧಾಮವನ್ನು

ಕೋರುತ್ತಿದ್ದೇನೆ.' ಎಂದು ಕಣ್ಣುಗಳನ್ನು ಮುಚ್ಚಿಕೊಂಡು ಭಗವನ್ನಾಮವನ್ನು ಸ್ಮರಿಸು ತ್ತಿರಲು, ಮುಹೂರ್ತಕಾಲ ಸನ್ನಿಹಿತವಾಗಿ ಅವನು ಶ್ರೀಹರಿಯ ಪಾದ ಸೇರಿದ.

ಒಂದೇ ಒಂದು ಮುಹೂರ್ತ ಆಯಸ್ಸು ಇರುವಾಗಲೇ ಸಮಸ್ತ ವಿಷಯ ಭೋಗಾ ಭಿಲಾಷೆಯನ್ನೂ ಮಾನಸಿಕವಾಗಿ ತ್ಯಜಿಸಿ, ಶ್ರೀಹರಿಯ ನಿರ್ಭಯ ಪಾದವನ್ನು ಖಟ್ವಾಂಗ ಹೊಂದಿದ. ಅಂದಮೇಲೆ ನಿನಗೆ ಇನ್ನೂ ಏಳು ದಿನಗಳ ಅವಧಿ ಇದೆ. ನಿನ್ನನ್ನು ಉದ್ಧರಿಸುವ ಏಳು ದಿನಗಳು ಇರುವಾಗ ನೀನು ಯೋಚಿಸುವುದಾದರೂ ಏಕೆ? ಅಷ್ಟರೊಳಗೆ ಪರಮ ಪದವಿ ಪಡೆಯಲಗತ್ಯವಾದ ಉತ್ತಮ ಶ್ರವಣ ಮಾಡಿ, ಚಿತ್ತವನ್ನು ಶುದ್ಧಮಾಡಿಕೊ," ಎಂದು ಶುಕ ಹೇಳಿದ. ಪವಿತ್ರ ಮಹನೀಯನೊಬ್ಬನ ಚರಿತ್ರೆಯನ್ನು ಕೇಳಿದ ಪರೀಕ್ಷಿತ್ ಆನಂದಾಶ್ರುಗಳನ್ನು ಸುರಿಸುತ್ತಾ, "ಪ್ರಭೂ! ನಾನೀಗ ಏನು ಮಾಡಬೇಕೋ ತಿಳಿಸಿ, ನನ್ನ ಬಾಯಲ್ಲಿ ಮಾತೇ ಹೊರಡದಾಗಿದೆ. ಹೃದಯ ಆನಂದದಲ್ಲಿ ಮುಳುಗಿದೆ," ಎಂದು ಸ್ತಂಭೀಭೂತನಾಗಿ ನಿಂತ. ಆಗ ಶುಕ, "ರಾಜಾ! ವೈರಾಗ್ಯವೆನ್ನುವ ಖಡ್ಗ ಹಿಡಿದು ಮೋಹವೆನ್ನುವ ದೇಹಭ್ರಾಂತಿಯನ್ನು ಚೂರು–ಚೂರು ಮಾಡಿ ತುಂಡರಿಸಿ, ಸಂಬಂಧಿಗಳೆಲ್ಲರ ಮಮಕಾರ ತ್ಯಜಿಸಿ, ಈ ಪವಿತ್ರ ನದೀ ತೀರದಲ್ಲಿ ಆಸನವನ್ನು ಸ್ಥಿರಪಡಿಸಿಕೊಂಡು ಹರಿ ಚಿಂತನೆ ಮಾಡು," ಎಂದು ಹೇಳಿ ಕಥೆಯನ್ನು ಪ್ರಾರಂಭಿಸುವುದರಲ್ಲಿರಲು, ಪರೀಕ್ಷಿತ್ ಇನ್ನೂ ಏನೋ ಕೇಳಬಯಸಿ ಬಾಯಿ ತೆರೆದಿದ್ದನ್ನು ಗಮನಿಸಿ ಶುಕ ಮಹರ್ಷಿ, "ರಾಜಾ! ಏನನ್ನೋ ಕೇಳಬೇಕೆಂದಿದ್ದೀಯೆ. ತಪ್ಪದೆ ಕೇಳಿ ಸಂಶಯ ಪರಿಹರಿಸಿಕೋ," ಎಂದ. ತಕ್ಷಣವೇ ಮಹಾರಾಜ, "ಸ್ವಾಮೀ! ನೀವು ಕೃಪಾಸಾಗರರು. ಹಸಿದವನಿಗೆ ಅತ್ಯಂತ ರುಚಿಕರ ವಾದ ತಿಂಡಿ ಪದಾರ್ಥಗಳು ದೊರೆತರೆ ಅವನು ಹೇಗೆ ಆನಂದಿಸುವನೋ ಹಾಗೇ ನೀವು ಆಡುವ ಒಂದೊಂದು ಮಾತೂ ನನ್ನ ಹೃದಯ ಬೇಗೆಯನ್ನು ತಣಿಸುತ್ತಿದೆ. ಪ್ರಭೂ! ಈ ಸೃಷ್ಟಿಯ ಉತ್ಪತ್ತಿಯನ್ನು ಕುರಿತು ಈ ಮೊದಲು ಸ್ವಲ್ಪ ಹೇಳಿದಿರಿ. ಅದು ನನಗೆ ಅಷ್ಟೊಂದು ಅರ್ಥವಾಗಲಿಲ್ಲ. ನಿರ್ಗುಣ ಪರಮಾತ್ಮ ಸಗುಣ ಹೇಗಾದನು? ಅದಕ್ಕೆ ಕಾರಣವೇನು ತಿಳಿಸಬೇಕು," ಎಂದು ವಿಕಸಿತವದನನಾಗಿ, ಉತ್ಸಾಹಪೂರಿತನಾಗಿ, ವಿನಯದಿಂದ ಪ್ರಾರ್ಥಿಸಿದ.

# ೨೯ ಭಾಗವತ ಪಥ

ಶುಕ ತನ್ನ ಆಸನವನ್ನು ಸರಿಪಡಿಸಿಕೊಂಡು, "ರಾಜಾ! ಪರಮೇಶ್ವರನು ಬ್ರಹ್ಮ ವಿಷ್ಣು ಮಹೇಶ್ವರ ಸ್ವರೂಪನಾಗಿ ಜಗತ್ತನ್ನು ಸೃಷ್ಟಿಸಿ, ಪಾಲಿಸಿ, ನಾಶಮಾಡುತ್ತಿರುವನು. ಹಾಗೆ ಸೃಷ್ಟಿಸಿದ ಅವನ ಸೃಷ್ಟಿಯಲ್ಲೇ ದ್ವಂದ್ವರೂಪಗಳುಂಟು. ಒಂದಕ್ಕೊಂದು ಪರಸ್ಪರ ಭೇದ ದ್ವೇಷಗಳು ಸೃಷ್ಟಿಯಲ್ಲಿವೆ. ಜೀವಿಗಳು ಸಕ್ರಮ ಮಾರ್ಗ ಅವಲಂಬಿಸಿದರೆ ಲೋಕ ಸುಖ ಶಾಂತಿಯಿಂದಿರುವುದು.

ಹಾಗಲ್ಲದೆ, ಸೃಷ್ಟಿಯಲ್ಲಿ ಜೀವಿಗಳು ವಕ್ರಮಾರ್ಗ ಅವಲಂಬಿಸಿದರೆ ಸೃಷ್ಟಿಯು ಅಶಾಂತಿ ಅವ್ಯವಸ್ಥೆಗಳ ಪಾಲಾಗುವುದು. ಹಾಗಾಗದಂತೆ ರಕ್ಷಣೆ ಮತ್ತು ಶಿಕ್ಷಣ ನೀಡುವುದಕ್ಕಾಗಿಯೇ ಶ್ರೀಹರಿ ಆಗಾಗ ತಾನೇ ಅನೇಕ ರೂಪಗಳಿಂದ ಅವತರಿಸಿ ಬಂದಿದ್ದಾನೆ. ಕಂಗೆಟ್ಟ ಲೋಕವನ್ನು ಉದ್ಧರಿಸಿ ಮಾಲಿನ್ಯವನ್ನು ದೂರ ಮಾಡಿ ಒಳ್ಳೆಯದನ್ನು ಅಭಿವೃದ್ಧಿಪಡಿಸುವ ವಿಧಾನವನ್ನು ಬೋಧಿಸುತ್ತಾ ಬಂದಿದ್ದಾನೆ.

ಭಗವಂತನಿಗೆ ಇಂಥದೇ ನಿರ್ದಿಷ್ಟ ಆಕಾರವೆಂದು ನಿರ್ಣಯಿಸಲು ಸಾಧ್ಯವಿಲ್ಲ. ಭೂಮಿಯನ್ನು ಕಾಪಾಡಿ, ಜೀವಿಗಳನ್ನು ಉದ್ಧಾರ ಮಾಡುವ ನಿಮಿತ್ತವಾಗಿ ಆಯಾ ಸಮಯ ಸಂದರ್ಭದ ಅವಶ್ಯಕತೆಗನುಗುಣವಾಗಿ ವಿವಿಧ ಆಕಾರ ಧರಿಸಿ ಅವತರಿಸುತ್ತಿರುವನು. ತನ್ನದೇ ಆದ ಸೃಷ್ಟಿಯಲ್ಲಿ ಅವನ ಮೊದಲ ಅವತಾರವಾದುದು ವರಾಹ ರೂಪದಲ್ಲಿ, ಹಿರಣ್ಯಾಕ್ಷನ ದೆಸೆಯಿಂದ ಧರಣಿ ಧರ್ಮರಹಿತವಾಗಿ ಪರಿತಪಿಸುತ್ತಿದ್ದಾಗ, ಧರಣಿಯನ್ನು ಕಾಪಾಡಲು ನಿರ್ಗುಣ ನಿರಾಕಾರನು ಸಾಕಾರ ರೂಪ ತಾಳಿ ಬರಬೇಕಾಯಿತು. ಭಗವತ್ಸಂಕಲ್ಪ ಅಪಾರವಾದುದು. ಮನುಷ್ಯ ವಿಚಾರ ಮಾಡುವುದರಿಂದ ಅದು ಅರ್ಥವಾಗುವುದೇ ಹೊರತು, ಬುದ್ಧಿಗೆ ಸಂಬಂಧಿಸಿದ ವಿದ್ಯೆಯಿಂದ ಅದನ್ನು ತಿಳಿಯಲು ಸಾಧ್ಯವಿಲ್ಲ. ಅವನಿಗೆ ಅವನೇ ಸಾಟಿ. ಕಾರಣವಿಲ್ಲದೆ ಕಾರ್ಯ ಜರುಗುವುದಿಲ್ಲ, ಕಾರಣ ಕಾರ್ಯಗಳಿಗೆ ಅವಿನಾಭಾವ ಸಂಬಂಧವಿದೆ.

ಒಂದು ದಿನ ಬ್ರಹ್ಮ ಆಸನದಲ್ಲಿ ಆಸೀನನಾಗಿರುವಾಗ ಆತನ ಮೂಗಿನಿಂದ ಹೆಬ್ಬೆರಳು ತುದಿಯಷ್ಟು ಗಾತ್ರದ ಸಣ್ಣದೊಂದು ಹಂದಿ ಕೆಳಗೆ ಬಿದ್ದಿತು. ಲೀಲಾಮಾನುಷ ವಿಗ್ರಹನಾದ ಬ್ರಹ್ಮ ತನಗೆ ಸಕಲವು ತಿಳಿದಿದ್ದರೂ ತಿಳಿಯದವನಂತೆ ನಟಿಸುತ್ತಾ ಆ ಹಂದಿಯನ್ನು ಆಶ್ಚರ್ಯದಿಂದ ನೋಡಿದ. ಅದು ಅವನು ನೋಡುತ್ತಿದ್ದಂತೆಯೇ ಕಪ್ಪೆಯಷ್ಟಾಗಿ ಭೂಮಿಯ ಮೇಲೆ ಓಡಾಡಲಾರಂಭಿಸಿತು. ನಂತರ ಇಲಿಯಷ್ಟಾ

ಯಿತು. ಹಾಗೇ ಬೆಳೆದು, ಬೆಕ್ಕಿನಷ್ಟಾಗಿ ನಂತರ ಹಂದಿಯ ಸಹಜ ಗಾತ್ರದಷ್ಟಾಯಿತು. ಕ್ಷಣದಲ್ಲೇ ಮತ್ತೆ ಬೆಳೆಯುತ್ತಾ ಬೆಳೆಯುತ್ತಾ ಮದಗಜದ ಗಾತ್ರ ತಾಳಿತು. ಇದರ ಚೇಷ್ಟೆಯನ್ನು ನೋಡುತ್ತಿದ್ದ ಬ್ರಹ್ಮ ತನ್ನಲ್ಲೇ ತನ್ನ ಲೀಲಾ ನಾಟಕಕ್ಕೆ ನಗುತ್ತಿದ್ದ. ಇಷ್ಟರಲ್ಲಿ ಹಂದಿಯು ಭೂಮಿ ಆಕಾಶಗಳು ಏಕವಾಗುವಂತೆ ಬೃಹದಾಕಾರ ತಾಳಿ, ಭಯಂಕರ ಶಬ್ದ ಮಾಡುತ್ತಾ ಸಮುದ್ರದಲ್ಲಿ ಬಿದ್ದು, ಅದರಲ್ಲಿ ಮುಳುಗಿದ್ದ ಭೂದೇವಿಯನ್ನು ತನ್ನ ಕೋರೆದಾಡೆಗಳಿಂದ ಎತ್ತಿಕೊಂಡು ಬಂದಿತು.

ಇಷ್ಟರಲ್ಲಿ, ಹಿಂದಿನಿಂದ, 'ಎಲವೋ ವರಾಹಾಧಮಾ, ಎಲ್ಲಿಗೆ ಓಡುವೆ? ನಿಲ್ಲು,' ಎನ್ನುವ ಕೂಗು ಕೇಳಿಸಿತು. ಹಂದಿ ಆ ಕೂಗಿಗೆ ಲಕ್ಷ್ಯ ಕೊಡದೆ ಮುಂದೆ ಮುಂದೆ ಹೋಗುತ್ತಿರಲು, ಒಂದು ದೊಡ್ಡ ಭೂತದಂತೆ ಹಿರಣ್ಯಾಕ್ಷ ರಕ್ಕಸ ಅದರ ಎದುರಿಗೆ ಬಂದು ನಿಂತು ತನ್ನ ಭುಜಬಲ ತೋರಿಸಲು ಪ್ರಾರಂಭಿಸಿದನು.

ಆಗ, ಇಬ್ಬರ ಪ್ರತಾಪವನ್ನೂ ನೋಡುತ್ತಿದ್ದ ಭೂದೇವಿ ಭಯ ಭ್ರಾಂತಳಾಗಿ ಹೆದರಿ ನಡುಗುತ್ತಿದ್ದುದನ್ನು ಕಂಡು, ಹಂದಿಯು, 'ಭೂದೇವೀ! ಹೆದರದಿರು. ಕ್ಷಣದಲ್ಲಿ ಈ ರಾಕ್ಷಸನನ್ನು ಅಂತ್ಯಗೊಳಿಸಿ, ನಿನಗೆ ಶಾಂತಿಯಾಗುವಂತೆ ಮಾಡುತ್ತೇನೆ,' ಎಂದು ರೌದ್ರಾಕಾರ ತಾಳಿತು. ಭೂದೇವಿ ಮುಂದೇನಾಗುವುದೋ ಎಂದು ಭಯದಿಂದ ತತ್ತರಿಸುತ್ತಾ ಹಿರಣ್ಯಾಕ್ಷನ ಮೇಲೆ ರೋಷದಿಂದ ಬೀಳುತ್ತಿದ್ದ ಹಂದಿಯ ಘೋರ ರೂಪವನ್ನು ನೋಡಲಾರದೆ ಕಣ್ಣುಗಳನ್ನು ಮುಚ್ಚಿಕೊಂಡಳು. ಹಂದಿಗೂ ಹಿರಣ್ಯಾಕ್ಷನಿಗೂ ಘೋರ ದ್ವಂದ್ವ ಯುದ್ಧ ನಡೆಯಿತು. ಹಂದಿ ಹಿರಣ್ಯಾಕ್ಷನನ್ನು ಸೀಳಿ ಭೂಮಿಯ ಮೇಲೆ ಎಸೆಯಿತು.

ಹೀಗೆ, ತನ್ನ ಸೃಷ್ಟಿಯಲ್ಲಿ ಧರ್ಮಕ್ಕೆ ಹಾನಿ ಉಂಟುಮಾಡುವ ರಾಕ್ಷಸರನ್ನು ಕೊಲ್ಲುವುದಕ್ಕಾಗಿಯೂ ಭಕ್ತ ರಕ್ಷಣೆಗಾಗಿಯೂ ದೇವರು ದೇಶ ಕಾಲ ಪಾತ್ರಗಳನ್ನು ಅನುಸರಿಸಿ ತಕ್ಕ ಸ್ವರೂಪಗಳನ್ನು ಧರಿಸಿ ಧರ್ಮರಕ್ಷಣೆ, ವೇದರಕ್ಷಣೆ ಮಾಡುತ್ತಾ ಇದ್ದಾನೆ. ಹಾಗೆ ಸೃಷ್ಟಿ ಸಂರಕ್ಷಣಾರ್ಥವಾಗಿಯೇ ಭಗವಂತ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನಾವತಾರಗಳನ್ನು ತಾಳಿದ್ದು. ಎಲ್ಲದಕ್ಕಿಂತಲೂ ಹೆಚ್ಚು ಆನಂದ ಮಯವೂ ಪರಮೋತ್ಕೃಷ್ಟವೂ ಆದ ಅವತಾರ ಕೃಷ್ಣಾವತಾರ ಮಾತ್ರವೇ. ಅಂತೂ, ಎಲ್ಲ ಅವತಾರಗಳ ಮುಖ್ಯೋದ್ದೇಶವು ಧರ್ಮರಕ್ಷಣೆಯೇ ಎನ್ನುವುದನ್ನು ಮಾತ್ರ ಮರೆಯಬಾರದು.

ಶ್ರೋತೃವಿನ ಯೋಗ್ಯತೆ ತಿಳಿದೇ ಹೇಳುವವನು ಉಪದೇಶಿಸಬೇಕು. ಹೀನ ಮಟ್ಟದ ಶ್ರೋತೃಗಳಿಗೆ ಉಚ್ಚ ಜ್ಞಾನವನ್ನು ಒಮ್ಮೆಲೇ ತಿಳಿಸುವುದು ವ್ಯರ್ಥ. ಏಕೆಂದರೆ

ಅದನ್ನು ಗ್ರಹಿಸಲಾರರು. ಹಾಗೇ, ಉಚ್ಚಮಟ್ಟದ ಶ್ರೋತೃಗಳಿಗೆ ಕೀಳುಮಟ್ಟದ ವಿಷಯಗಳನ್ನು ಹೇಳಿದರೆ ಅವರಿಗೆ ತೃಪ್ತಿ ಇಲ್ಲ. ಇದಕ್ಕೊಂದು ಆಧಾರವಿದೆ. ಬ್ರಹ್ಮನಿಗೂ ನಾರದನಿಗೂ ನಡೆದ ವಾದ ಹೇಳುತ್ತೇನೆ. ಸಾವಧಾನದಿಂದ ಕೇಳು," ಎಂದು ಶುಕ ನಾರದನ ವಿಷಯವನ್ನು ಹೇಳತೊಡಗಿದ.

"ಬ್ರಹ್ಮನು ನಾರದನಿಗೆ, 'ಮಾನಸ ಪುತ್ರಾ! ಸೃಷ್ಟಿರಚನೆಯೇ ನನ್ನ ತಪಸ್ಸು. ಸೃಷ್ಟಿಯೆಲ್ಲವೂ ಕೇವಲ ನನ್ನ ಸಂಕಲ್ಪದಿಂದ ನಡೆಯುವುದು. ಆದರೆ ಆಯಾ ಜೀವರಾಶಿಗಳಿಗೆ ಕೆಲ ಕೆಲವು ನಿಯಮಗಳನ್ನು ಗೊತ್ತು ಪಡಿಸುತ್ತೇನೆ. ಅವುಗಳನ್ನು ಸಕ್ರಮ ಮಾರ್ಗದಲ್ಲಿ ನಡೆಸಿಕೊಂಡು ಹೋಗುತ್ತಿದ್ದರೆ ಸೃಷ್ಟಿಚಕ್ರ ಧರ್ಮದಿಂದ ತಿರುಗುತ್ತದೆ. ಹಾಗಲ್ಲದೆ ನಿಯಮಗಳನ್ನುಲ್ಲಂಘಿಸಿ ವಕ್ರಮಾರ್ಗದಲ್ಲಿ ನಡೆದರೆ ಧರ್ಮ ನಶಿಸಿ, ಲೋಕದಲ್ಲಿ ನಾನಾ ಬಾಧೆಗಳನ್ನು ಅನುಭವಿಸಬೇಕಾಗುವುದು. ರಾತ್ರಿ ಹಗಲುಗಳೂ ನನ್ನ ಸಂಕಲ್ಪವೇ. ಪ್ರಜಾಪತಿಗಳೆಲ್ಲರೂ ನನ್ನ ಅಂಶವೇ. ಪ್ರಜೆಗಳಲ್ಲಿರುವ ಪ್ರಜಾಭಿವೃದ್ಧಿ ಭಾವನೆ ನನ್ನ ಭಾವನೆಯೇ ಎಂದು ತಿಳಿಯಬೇಕು.

ಒಂದೊಂದು ಸಮಯದಲ್ಲಿ, ಸೃಷ್ಟಿಸಿದ ಜಗತ್ತನ್ನು ರಕ್ಷಿಸುವುದಕ್ಕಾಗಿ ನಾನೇ ಮನ್ವಂತರದಲ್ಲಿ ಮನುರೂಪ ಧರಿಸಿ ಅವತರಿಸಿದವನು. ಅದಕ್ಕೆ ಬೇಕಾದ ತಕ್ಕ ದೇವತೆಗಳನ್ನೂ ಋಷಿಗಳನ್ನೂ ಹುಟ್ಟಿಸಿ, ಅವರು ಪ್ರಜೆಗಳಿಗೆ ಮಾರ್ಗದರ್ಶಕವಾಗಿ ತಮ್ಮ ಪ್ರವರ್ತನೆಗಳನ್ನು ಆದರ್ಶಪ್ರಾಯವಾದ ರೀತಿಯಲ್ಲಿ ಇಟ್ಟುಕೊಳ್ಳುವಂತೆ ಮಾಡುತ್ತೇನೆ. ಮಿತಿ ಮೀರಿ ಬೆಳೆಯುವ ಸೃಷ್ಟಿಯನ್ನು ಅಂತ್ಯಗೊಳಿಸುತ್ತೇನೆ. ಅದಕ್ಕಾಗಿ ರುದ್ರರೂಪವನ್ನು ಕೂಡ ತಾಳುತ್ತೇನೆ.

ಒಳ್ಳೆಯದನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ, ಕಾಪಾಡುವುದಕ್ಕಾಗಿ, ಕೆಟ್ಟದನ್ನು ಕೂಡ ಸೃಷ್ಟಿಸುತ್ತೇನೆ. ಒಳ್ಳೆಯದಕ್ಕಾಗಲೀ ಕೆಟ್ಟದ್ದಕ್ಕಾಗಲೀ ಒಂದು ಮಿತಿ ಗೊತ್ತು ಪಡಿಸುತ್ತೇನೆ. ಇಲ್ಲದಿದ್ದರೆ ಅವು ಕೆಟ್ಟಮಾರ್ಗ ಹಿಡಿದು ಜನರನ್ನು ಬಾಧಿಸುವುವು. ಎಲ್ಲರಲ್ಲೂ ನಾನು ವ್ಯಾಪಿಸಿದ್ದೇನೆ. ಸರ್ವವ್ಯಾಪಿಯಾದ, ಸರ್ವ ಭೂತಾಂತರಾತ್ಮನಾದ ನನ್ನನ್ನು ಜನರು ಮರೆತು, ಪ್ರಕೃತಿಯೇ ಸ್ಥಿರವೆಂದು ಭಾವಿಸಿ, ಅದನ್ನೇ ಮೋಹಿಸಿ, ಬಾಧೆಗೆ ಗುರಿಯಾಗುತ್ತಿದ್ದಾರೆ. ಹಾಗಲ್ಲದೆ ನನ್ನ ಮೇಲೆ ಲಕ್ಷ್ಯವಿಟ್ಟು, ಎಲ್ಲಕ್ಕೂ ಹರಿಯೇ ಕರ್ತನೆಂದೂ ಮಿಕ್ಕವುಗಳೆಲ್ಲ ಅವನ ಸಂಕಲ್ಪಮಾತ್ರದ ಸಾಮಗ್ರಿಗಳೆಂದೂ ಭಾವಿಸಿದರೆ, ಅಂಥವರನ್ನು ಅನುಗ್ರಹಿಸಿ ಅವರೇ ನಾನು, ನಾನೇ ಅವರು ಎನ್ನುವ ಸತ್ಯವನ್ನು ಅವರಿಗೆ ತಿಳಿಸುತ್ತೇನೆ.

ಹಾಗೆ ಅನುಗ್ರಹೀತರಾದವರು ಸಹಸ್ರಾರು ಮಂದಿ ಇದ್ದಾರೆ. ಅವರುಗಳು ಲೋಕ ದಲ್ಲಿ ಸಾಧಕರಾಗಿಯೂ ಮಹನೀಯರುಗಳಾಗಿಯೂ ಋಷಿಗಳಾಗಿಯೂ ದೈವಾಂಶರಾಗಿಯೂ ಮಾರ್ಗದರ್ಶಕರಾಗಿಯೂ ಧರ್ಮವನ್ನು ಸತ್ಯಸ್ವರೂಪದಲ್ಲಿ ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆ. ಅವರಲ್ಲಿ ಕೆಲವರನ್ನು ಹೇಳುತ್ತೇನೆ. ಸಗರ, ಇಕ್ಷ್ವಾಕು, ಪ್ರಾಚೀನಬರ್ಹಿ, ಋಭು, ಧ್ರುವ, ರಘುಮಹಾರಾಜ, ಯಯಾತಿ, ಮಾಂಧಾತ, ಅಲರ್ಕ, ಶತಧನ್ವ, ದಿಲೀಪ, ಬಲಿ, ಭೀಷ್ಮ, ಶಿಬಿ, ಪಿಪ್ಪಲಾದ, ಸಾರಸ್ವತ, ವಿಭೀಷಣ, ಹನುಮಂತ, ಮುಚುಕುಂದ, ಜನಕ, ಶತರೂಪ, ಪ್ರಹ್ಲಾದ, ಇವರೆಲ್ಲಾ ಭಾಗವತರೆಂದೇ ಹೇಳಬಹುದು. ಇವರು ದೀಕ್ಷೆಯನ್ನು ಸಾಧಿಸಿ ಭಗವತ್ ಕಥಾ ಶ್ರವಣ ಮಾಡಿದರು. ಅವರಲ್ಲಿ ಸ್ತ್ರೀ, ದ್ವಿಜ, ಶೂದ್ರ, ಚಂಡಾಲಾದಿ ಲಿಂಗ, ವರ್ಣ, ಆಶ್ರಮ ಭೇದಗಳಿಲ್ಲದೆ ಎಲ್ಲರೂ ಅನುಗ್ರಹಕ್ಕೆ ಪಾತ್ರರಾದರು.

ನಾನೇ ಕಾರಣಗಳಿಗೆಲ್ಲಾ ಕಾರಣನು, ನಿತ್ಯನು, ಸಚ್ಚಿದಾನಂದ ಸ್ವರೂಪನು. ನಾನೇ ಹರಿ, ಹರ, ಬ್ರಹ್ಮ ರೂಪಗಳೂ ಸಹ. ಆಯಾ ಸಮಯ ಸಂದರ್ಭ ಅನುಸರಿಸಿ ಬದಲಾವಣೆ ಹೊಂದುತ್ತೇನೆ. ಪ್ರಪಂಚವೆಲ್ಲಾ ನನ್ನ ಸಂಕಲ್ಪ ಕಲ್ಪನೆಯೇ ಹೊರತು, ಸಾಕಾರ ರೂಪವಲ್ಲ.

ವತ್ಸಾ! ಈ ವಿಷಯವನ್ನು ನಿನ್ನ ಮೇಲಿನ ಪ್ರೇಮದಿಂದ ನಿನಗೆ ತಿಳಿಸಿದೆನೇ ಹೊರತು, ಅನ್ಯರಿಗೆ ನನ್ನ ಸೃಷ್ಟಿ ರಹಸ್ಯ ತಿಳಿಯಲು ಸಾಧ್ಯವಿಲ್ಲ. ಈಗ ನಾನು ತಿಳಿಸಿದ ವಿಷಯವನ್ನು ಭಾಗವತ ಸಂಕ್ಷೇಪವೆನ್ನುವರು. ಅವತಾರ ಲೀಲೆಗಳನ್ನು, ಭಕ್ತರಾದವರ ಹೆಸರುಗಳು, ಭಗವಂತನಿಗೂ ಭಕ್ತರಿಗೂ ಇರುವ ಸಂಬಂಧ, ಈ ಮೂರೂ ಸೇರಿದ್ದನ್ನೇ ಭಾಗವತ ಎನ್ನುವರು. ಕಾಣುವುದು ಯಾವುದೂ ಭಗವಂತನ ಹೊರತಾದುದಲ್ಲ. ಅದ್ದರಿಂದ ಸಂಕ್ಷೇಪವಾಗಿ ಹೇಳಬೇಕಾದರೆ ಎಲ್ಲವೂ ಭಾಗವತವೇ ಎಂದು ಹೇಳಬಹುದು,' ಎಂದು ಆನಂದವಾಗಿ ಬ್ರಹ್ಮ ನಾರದನಿಗೆ ಬೋಧಿಸುತ್ತಿರಲು, ನಾರದ ಆಶ್ಚರ್ಯ ಆತಂಕದಿಂದ, 'ಸ್ವಾಮೀ! ನಿನ್ನ ಆಜ್ಞೆ ಪ್ರಕಾರ ನಾನು ನಿರಂತರವೂ ಗಾನ ಮಾಡುತ್ತಾ ಲೋಕಕ್ಕೆ ಶ್ರವಣಾನಂದ ಉಂಟುಮಾಡುತ್ತಿದ್ದೇನೆ. ಆದರೆ, ಯಾವ ರೂಪದಲ್ಲಾದರೂ ಮಾಯೆ ಬಂದು ನನ್ನನ್ನು ಆವರಿಸಿ ಭ್ರಷ್ಟನನ್ನಾಗಿ ಮಾಡಿದರೆ, ಆ ನನ್ನ ಪವಿತ್ರ ಕೆಲಸಕ್ಕೆ ಅಡಚಣೆ ತಂದೊಡ್ಡಿದರೆ, ಆಗ ನಾನು ಮಾಡಬೇಕಾದ ಕರ್ತವ್ಯವೇನು? ಮಾಯೆ ಆವರಿಸದೆ ಇರಲು ಏನಾದರೂ ಮಾರ್ಗ ಇದ್ದರೆ ಅದನ್ನೂ ಸಹ ನನಗೆ ತಿಳಿಸಿ ನಿನ್ನ ಪುತ್ರವಾತ್ಸಲ್ಯ ಪೂರ್ತಿ ಮಾಡಿಕೋ,' ಎಂದು ಬ್ರಹ್ಮನನ್ನು ಪ್ರಾರ್ಥಿಸಿದ.

ಬ್ರಹ್ಮನು ಗೊಳ್ಳನೆ ನಕ್ಕು, 'ವತ್ಸಾ! ನಿನ್ನ ಮಾತುಗಳು ಅವಿವೇಕಿಯಾದ ಬಾಲಕನ ಮಾತುಗಳಂತಿವೆ. ಭಾಗವತ ತತ್ವ ವರ್ಣನೆ ಮಾಡುವವರ, ಸಚ್ಚಿಂತನೆ ಮಾಡುವ ವರ, ಶ್ರದ್ಧಾ ಭಕ್ತಿಗಳಿಂದ ಸತ್ಕರ್ಮಗಳನ್ನು ಮಾಡುವವರ, ಸತ್ಯ ಧರ್ಮಗಳಿಗಾಗಿ ಬಾಧೆಪಡುವವರ ಚಿತ್ತ ಮಾಯಾರಹಿತವಾಗುವುದು. ಆದ್ದರಿಂದ ನೀನು ವೀಣೆ ಯನ್ನು ಹಿಡಿದು ಹರಿನಾಮವನ್ನು ಗಾನ ಮಾಡುತ್ತಾ ಮೂರುಲೋಕಗಳಲ್ಲೂ ನಿರಂತರ ಸುತ್ತುತ್ತಿರು.

ಭಾಗವತ ತತ್ವವನ್ನು ಶ್ರವಣ ಮಾಡಿ ಮೂರ್ಲೋಕ ವಾಸಿಗಳೂ ಭವಸಾಗರ ದಾಟುವರು. ಕರ್ಮಗಳು ಬಂಧ ಕಾರಣ. ಆದರೆ ಹರಿಸಂಬಂಧದ ಕರ್ಮಗಳು ಅತಿ ಲಲಿತವಾದುವುಗಳು. ಜಗತ್ತಿನ ವಿಷಯಗಳಿಂದ ಮನಸ್ಸನ್ನು ಮರಳಿಸಿ ಜಗತ್ಪತಿಯಾದ ಹರಿಯಲ್ಲಿ ಅದನ್ನು ಲೀನಗೊಳಿಸಲು ಹರಿಚಿಂತನೆಯಲ್ಲದೆ ಅನ್ಯ ಮಾರ್ಗವೇ ಇಲ್ಲ,' ಎಂದು ಹೇಳಿದ.

ಪರೀಕ್ಷಿತ್ ಮಹಾರಾಜಾ, ಈ ಪವಿತ್ರ ದೈವ ಸೃಷ್ಟಿಯ ವಿಷಯವನ್ನು ಬ್ರಹ್ಮ ಎಲ್ಲರಿಗೂ ಹೇಳಲು ಸಾಧ್ಯವಿಲ್ಲ ಅಲ್ಲವೇ? ಉಚ್ಚ ಶ್ರೇಣಿಗೆ ಸೇರಿದ ಶ್ರೋತೃವಾದ್ದರಿಂದಲೇ ನಾರದನಿಗೆ ಉತ್ತಮ ಜ್ಞಾನಸಾರ ಕುಡಿಸಿದ. ಅದನ್ನು ಕುಡಿದ ನಾರದನೂ ಸಹ, ಆ ಪವಿತ್ರ ರಸವನ್ನು ಕೆಟ್ಟ ಮಾರ್ಗದಲ್ಲಿ ದುರ್ವಿನಿಯೋಗ ಮಾಡದೆ ಬ್ರಹ್ಮನ ಆಜ್ಞಾನುಸಾರವಾಗಿ ಮೂರು ಲೋಕಗಳಲ್ಲೂ ಗಾನ ಮಾಡುತ್ತಾ ಲೋಕವನ್ನು ಉದ್ಧಾರಮಾಡುತ್ತಿದ್ದಾನೆ. ನೀನೂ ಇಂಥ ಉಚ್ಚ ಶ್ರೇಣಿಯ ಶ್ರೋತೃವಾದ್ದರಿಂದಲೇ ಯಾರಿಗೂ ದೊರೆಯದ ನಾನು, ನಿನ್ನ ಬಳಿಗೆ ನಾನಾಗಿ ಬಂದು ಪವಿತ್ರ ಭಾಗವತ ವನ್ನು ಶ್ರವಣ ಮಾಡಿಸಲು ಮೊದಲು ಮಾಡಿದೆ. ನಾನು ಸಾಮಾನ್ಯ ವಕ್ತಾರನಲ್ಲ. ಶ್ರೋತೃಗಳ ಯೋಗ್ಯತೆ ತಿಳಿಯದೆ ಅವರ ಬಳಿ ಸೇರುವವನೇ ಅಲ್ಲ. ನಿರ್ಗುಣ ರೂಪಿಯಾದ ಭಗವಂತನ ಗುಣಗಳನ್ನು ಬ್ರಹ್ಮನು ನಾರದನಿಗೆ ಹೇಳಿದನೆಂದರೆ, ನಾರದ ಎಂಥ ಉಚ್ಚಶ್ರೇಣಿಗೆ ಸೇರಿದ ಶ್ರೋತೃವೋ ಯೋಚಿಸು," ಎಂದು ಗಂಭೀರವಾಗಿ, ಭಾವಪೂರಿತವಾಗಿ ಶುಕ ಹೇಳಿದುದನ್ನು ಕೇಳಿ, ಪರೀಕ್ಷಿತ್, "ಪ್ರಭೂ! ಲೋಕಪಿತಾಮಹನಾದ ಚತುರ್ಮುಖನ ಆಜ್ಞಾನುಸಾರವಾಗಿ ನಾರದನು ಪವಿತ್ರ ಭಾಗವತವನ್ನು ಯಾರು ಯಾರಿಗೆ ಹೇಳಿದನೋ ಅಂಥ ಉಚ್ಚಶ್ರೇಣಿಗೆ ಸೇರಿದ ಧನ್ಯ ಶ್ರೋತೃಗಳನ್ನು ಕುರಿತು ವಿಸ್ತಾರವಾಗಿ ತಿಳಿಸಬೇಕು," ಎಂದು ಪ್ರಾರ್ಥಿಸಿದ.

ಆಗ ಶುಕ, "ರಾಜಾ! ನೀನೇಕೆ ಇಷ್ಟು ಆತಂಕ ಪಡುತ್ತಿದ್ದೀಯೆ? ಈ ವಿಷಯದಲ್ಲಿ ಆತಂಕ ಪಡುವುದು ಒಳ್ಳೆಯದಲ್ಲ. ಧೈರ್ಯ ತಂದುಕೊಂಡು, ಆನಂದ ಚಿತ್ತನಾಗಿ ಕೇಳು. ನಾನು ಎಲ್ಲವನ್ನೂ, ನಿನಗೆ ಹೇಳುತ್ತೇನೆ," ಎನ್ನಲು, ಮಹಾರಾಜ ಮತ್ತೆ

ಕೈ ಜೋಡಿಸಿಕೊಂಡು, "ಸ್ವಾಮೀ! ಖಂಡಿತವಾಗಿಯೂ ಆತಂಕಪಡುತ್ತಿಲ್ಲ. ಅಂತ್ಯ ಕಾಲದಲ್ಲಿ ನನ್ನ ಮನಸ್ಸು ಆ ಶ್ಯಾಮಸುಂದರನ ಮಂದಹಾಸ ಮುಖವನ್ನು ನೋಡುತ್ತಾ ಅವನ ಪಾದಪದ್ಮದ ಮಕರಂದವನ್ನು ಪಾನ ಮಾಡುತ್ತಾ ಈ ಕಾಯವನ್ನು ಬಿಡಬೇಕೆನ್ನುವ ಆಕಾಂಕ್ಷೆಯೊಂದಲ್ಲದೆ ಬೇರೆ ಆಶೆ ನನಗಿಲ್ಲ. ಯಾವ ಕ್ಷಣದಲ್ಲಿ ಅಂತ್ಯಕಾಲ ಬರುವುದೋ ಆ ಕ್ಷಣದಲ್ಲಿ ಮನಸ್ಸು ಮದನಮೋಹನನನ್ನು ಸ್ಮರಿಸದಿದ್ದರೆ, ಮತ್ತೆ ಎಂಬತ್ತುನಾಲ್ಕುಲಕ್ಷ ಜೀವರಾಶಿಗಳಲ್ಲಿ ಯಾವುದೋ ಒಂದು ಜೀವಿಯಾಗಿ ಜನ್ಮವೆತ್ತಬೇಕಾಗುವುದಲ್ಲವೆ? ಹಾಗಾಗದಂತೆ, ಪ್ರಾಣಬಿಡುವ ಸಮಯದಲ್ಲಿ ಪ್ರಾಣೇಶನ ಚಿಂತೆ ಇರುವುದಕ್ಕಾಗಿ, ಆತನ ಲೀಲಾಗುಣಗಣಗಳನ್ನು ಹೇಳಿ ಧನ್ಯನನ್ನಾಗಿ ಮಾಡಿ," ಎಂದು ಪ್ರಾರ್ಥಿಸಿದ.

ಶುಕ ನಕ್ಕು, "ಮಹಾರಾಜಾ! ಕಿವಿಯಲ್ಲಿ ಭಗವತ್ ಕಥೆಯನ್ನು ಕೇಳಿದ ಮಾತ್ರಕ್ಕೆ ಮನಸ್ಸು ಭಗವಚ್ಚರಣಾರವಿಂದಗಳಲ್ಲಿ ಹೇಗೆ ನಿಲ್ಲವುದು?" ಎಂದು ಪ್ರಶ್ನಿಸಲು, ರಾಜ, "ಪ್ರಭೂ! ಭಗವಂತನಿಗೂ ಅವನ ನಾಮಕ್ಕೂ ಅವನ ಗುಣಗಳಿಗೂ ಯಾವ ಭೇದವೂ ಇಲ್ಲ ಅಲ್ಲವೇ? ಕಥೆಯನ್ನು ಶ್ರವಣ ಮಾಡುತ್ತಿರುವಾಗ ಕಥೆಯೊಳಗಿನ ರೂಪ, ನಾಮ, ಗುಣಗಳು ಕರ್ಣ ರಂಧ್ರದ ಮೂಲಕ ಹೃದಯವನ್ನು ಪ್ರವೇಶಿಸಿ, ಒಳಗಿರುವ ಅಜ್ಞಾನಾಂಧಕಾರವನ್ನು ನಾಶಮಾಡಿ ಪ್ರಕಾಶ ನೀಡುವುದಲ್ಲವೇ? ಸಿಂಹವು ಅರಣ್ಯವನ್ನು ಪ್ರವೇಶಿಸುತ್ತಿದ್ದಂತೆಯೇ ನರಿ ಹಂದಿಗಳು ಬಾಲ ಮುದುರಿಕೊಂಡು ಓಡಿ ಹೋಗುವುದಲ್ಲವೇ? ಹಾಗೆ, ಶ್ರದ್ಧೆಯಿಂದ ಶ್ರವಣ ಮಾಡುವವರು ಮನಸ್ಸನ್ನು ಅದರಲ್ಲಿ ಸೇರಿಸದೆ ಶ್ರವಣ ಮಾಡುವುದಿಲ್ಲ. ಅಂಥ ಮಧುರ, ಮಂದಹಾಸ ವದನ ಸುಂದರನ ಗುಣಗಾನವನ್ನು ಮನಸಾರೆ ಶ್ರವಣ ಮಾಡಿದ ಮನಸ್ಸು ಮಾಲಿನ್ಯಪೂರಿತ ವಿಷಯಗಳಲ್ಲಿ ಮತ್ತೆ ಸೇರುವುದಿಲ್ಲ ಅಲ್ಲವೇ? ಶ್ರವಣ, ಮನಸ್ಸು, ಎರಡೂ ಏಕವಾಗಬೇಕು. ಆಗಲೇ ಆನಂದ ಲಭಿಸುವುದು," ಎಂದು ಉತ್ಸಾಹದಿಂದ, ವಿಕಸಿತ ವದನನಾಗಿ, ಹೇಳುತ್ತಿರಲು, ಶುಕ ಮಧ್ಯೆ ಮಾತನಾಡಿ, "ಮಹಾರಾಜಾ! ಅತ್ತಿತ್ತ ತಿರುಗುವುದೇ ಚಿತ್ತದ ಸ್ವಭಾವವಲ್ಲವೇ? ತನ್ನ ಸ್ವಭಾವ ಬಿಟ್ಟು ಅದು ಭಗವಚ್ಚರಣದಲ್ಲಿ ಹೇಗೆ ಸೇರಿ ಹೋಗುವುದು? ಅದು ಅಸಾಧ್ಯವಲ್ಲವೇ?" ಎಂದು ಪರೀಕ್ಷಿತನ ಮನಸ್ಸನ್ನು ತಿಳಿಯುವ ಸಲುವಾಗಿ ಕೇಳಿದ.

ಮಹಾರಾಜ ಮುಗಳ್ನಕ್ಕು, "ಪ್ರಭೂ! ಅಪ್ಪಣೆಯಾದರೆ ಇದನ್ನು ವಿವರಿಸುತ್ತೇನೆ. ಪುಷ್ಪದಲ್ಲಿನ ಮಕರಂದವನ್ನು ಹೀರುವವರೆಗೆ ಭ್ರಮರವು ಅತ್ತಿತ್ತ ಶಬ್ದಮಾಡುತ್ತಾ ತಿರುಗುವುದು. ಒಂದು ಸಾರಿ ಪುಷ್ಪವನ್ನು ಪ್ರವೇಶಿಸಿ ಮಕರಂದವನ್ನು ಹೀರಿತೆಂದರೆ, ಆಮೇಲೆ ಅದನ್ನು ಬಿಡದಿರುವುದು ಮಾತ್ರವಲ್ಲ, ಹಿಂದು ಮುಂದು ಚಿಂತೆಯಿಲ್ಲದೆ ನಿರಾತಂಕವಾಗಿ, ಆನಂದದಿಂದ ಪುಷ್ಪದಲ್ಲಿ ಸೇರಿಕೊಂಡುಬಿಡುವುದು. ಪುಷ್ಪವು

ಮುಚ್ಚಿಕೊಂಡರೂ ಪ್ರಾಣಾಪಾಯವನ್ನೂ ಲೆಕ್ಕಿಸದೆ, ಅದು ಉನ್ಮತ್ತವಾಗುವವರೆಗೆ ಮಕರಂದವನ್ನು ಹೀರುವುದು. ಹಾಗೇ, ಒಮ್ಮೆ ಆ ದಿವ್ಯಸುಂದರನ ಪಾದಪದ್ಮಗಳಲ್ಲಿ ಮನಸ್ಸು ಸೇರಿತೆಂದರೆ, ಆ ಮಕರಂದದ ರುಚಿ ನೋಡಿತೆಂದರೆ, ತಿರುಗಿ ಅದು ಬೇರೆ ಏನನ್ನೂ ಆಶಿಸದು. ಬೇರೆ ಎಲ್ಲ ವೃತ್ತಿಗಳನ್ನೂ ಬಿಟ್ಟುಬಿಡುವುದು," ಎಂದು ಹೇಳಿದ.

## ೩೦ ಪ್ರಶ್ನಾನುಮಾನಗಳು

ಪರೀಕ್ಷಿತನನ್ನು ನೋಡಿ ಶುಕ, "ರಾಜಾ! ನಿನ್ನ ಹೃದಯ ಆ ಶ್ಯಾಮಸುಂದರನಲ್ಲಿ ಲೀನವಾಗಿದೆಯಾದ್ದರಿಂದ, ಇನ್ನು ನೀನೇ ಏನು ಪ್ರಶ್ನೆ ಕೇಳಬೇಕೋ ಕೇಳು. ಇವುಗಳಿಗೆ ತಕ್ಕ ಉತ್ತರ ಕೊಡುತ್ತೇನೆ. ಶ್ಯಾಮಸುಂದರನ ಸ್ಮರಣೆಯಲ್ಲಿ ನಿನ್ನನ್ನು ಉನ್ಮತ್ತನನ್ನಾಗಿ ಮಾಡುತ್ತೇನೆ," ಎಂದು ಹೇಳಿದ.

ಪರೀಕ್ಷಿತ್ ಆನಂದವದನನಾಗಿ, "ಸ್ವಾಮೀ! ಪ್ರಶ್ನಿಸುವ ಅರ್ಹತೆ ನನಗೆಲ್ಲಿದೆ? ನನಗೆ ಈ ಸಮಯದಲ್ಲಿ ಯಾವುದು ಯೋಗ್ಯವೋ ಯಾವುದು ಅವಶ್ಯಕವೋ ಅದನ್ನು ನಿಮ್ಮಷ್ಟಕ್ಕೆ ನೀವೇ ಹೇಳಬೇಕು. ನಾನು ಮಾಯಾ ಮೋಹಿತನಾದ್ದರಿಂದ ಮಧ್ಯೆ ಮಧ್ಯೆ ಸಂಶಯಗಳನ್ನು ತಿಳಿಸಿ ನಿಮ್ಮಿಂದ ತಕ್ಕ ಉತ್ತರ ಪಡೆಯುತ್ತೇನೆ. ಆಗ, ನೀವು ಬೇರೆ ರೀತಿ ಭಾವಿಸದೆ, ನನ್ನ ಯೋಗ್ಯತೆ, ಅಯೋಗ್ಯತೆಗಳನ್ನು ಯೋಚಿಸದೆ, ಪುತ್ರ ಭಾವದಿಂದ ನನ್ನನ್ನು ಶಾಂತಚಿತ್ತನನ್ನಾಗಿಸಬೇಕು," ಎಂದು ಹೇಳಿದನು.

ಪರೀಕ್ಷಿತ್, "ಸ್ವಾಮೀ! ಕೆಲವು ಸಂದೇಹಗಳು ನನ್ನನ್ನು ಬಹಳ ಕಾಲದಿಂದ ಪೀಡಿಸುತ್ತಿವೆ. ಅವೇನೆಂದರೆ:

೧. ಜೀವಿಯು ಈ ದೇಹವನ್ನು ಸ್ವಾಭಾವಿಕವಾಗಿ ಪಡೆಯುತ್ತಾನೋ ಇಲ್ಲವೇ ಕರ್ಮಾಧೀನನಾಗಿ ಪಡೆಯುತ್ತಾನೋ?

೨. ಪುರಾಣ ಪುರುಷನ ನಾಭಿಯಿಂದ ಒಂದು ಕಮಲ ಉತ್ಪನ್ನವಾಯಿತೆಂದೂ ಅದರಿಂದಲೇ ಸೃಷ್ಟಿ ಉಂಟಾಯಿತೆಂದೂ ತಿಳಿಸಿದಿರಿ. ಪರಮಾತ್ಮನು ಜೀವಿಯ ಹಾಗೇ ಪರಿಮಿತ ಅವಯವಗಳಿಂದ ಕೂಡಿದವನೋ ಇಲ್ಲವೇ ಜೀವ ಬ್ರಹ್ಮರಿಗೆ ಭೇದವೇನಾದರೂ ಇದೆಯೋ?

೩. ಭೂತಕಾಲ, ವರ್ತಮಾನಕಾಲ, ಭವಿಷ್ಯತ್ತು ಎಂದು ಯಾವ ಆಧಾರದಿಂದ ಹಾಗೆ ತಿಳಿಯಲ್ಪಡುತ್ತಿದೆ?

೪. ಜೀವಿಗಳು ಯಾವ ಯಾವ ಕರ್ಮ ಮಾಡಿದರೆ ಯಾವ ಯಾವ ಗತಿ ಪ್ರಾಪ್ತವಾಗುವುದು?

೫. ಮಹಾಪುರುಷರ ಆಚರಣೆ ಹೇಗಿರಬೇಕು?

೬. ಪರಮಾತ್ಮನ ಪರಮಾಶ್ಚರ್ಯಕರವಾದ, ಕಮನೀಯವಾದ, ಅವತಾರ ಕಥೆಗಳನ್ನು ಕುರಿತು ತಿಳಿಸಬೇಕು.

೭. ಕೃತ, ತ್ರೇತ, ದ್ವಾಪರ, ಕಲಿಯುಗಗಳ ಭೇದ ಕುರಿತು ಹೇಳಬೇಕು. ಈಗ ಯಾವ ಯುಗ ಎಂದು ತಿಳಿಯುವುದು ಹೇಗೆ?

೮. ರಾಜ ಋಷಿಯ ಧರ್ಮಗಳನ್ನು ಕುರಿತು ಹೇಳಬೇಕು.

೯. ಆಧ್ಯಾತ್ಮ ಯೋಗವನ್ನು ಕುರಿತು ಹೇಳಬೇಕು.

೧೦. ವೇದಗಳ ಸ್ವರೂಪ ಯಾವುದು? ಉಪವೇದಗಳೆಂದು ಯಾವುದನ್ನು ಕರೆಯುತ್ತಾರೆ? ಯಾವ ವೇದಕ್ಕೆ ಯಾವುದು ಉಪವೇದ ಎನ್ನುವುದನ್ನು ತಿಳಿಸಬೇಕು.

ನನ್ನ ಈ ಪ್ರಶ್ನೆಗಳಿಗೆ ಉತ್ತರಗಳನ್ನೂ ನಾನು ಇದುವರೆಗೆ ತಿಳಿಯುವ ಇನ್ನಿತರ ವಿಷಯಗಳನ್ನೂ ಕುರಿತು ತಿಳಿಯಬಯಸುತ್ತೇನೆ. ಸ್ವಾಮೀ! ನಾನು ನಿಮ್ಮಲ್ಲಿ ಶರಣು ಹೋಗಿದ್ದೇನೆ. ಈ ಸಂದೇಹಗಳನ್ನು ಪರಿಹಾರ ಮಾಡುವವರು ನೀವಲ್ಲದೆ ಲೋಕದಲ್ಲಿ ಬೇರೆ ಯಾರೂ ಇಲ್ಲ. ಇವುಗಳನ್ನು ನಿವಾರಿಸುವ ಸಮರ್ಥರು, ಸರ್ವಶಕ್ತಿ ಸಂಪನ್ನರು ನೀವೇ ಆಗಿರುವುದರಿಂದ ನನ್ನನ್ನು ಅನುಗ್ರಹಿಸಿ ನನ್ನ ಜನ್ಮವನ್ನು ಉದ್ಧರಿಸಿ," ಎಂದು ಶುಕನ ಪಾದಗಳ ಮೇಲೆ ಬಿದ್ದು ಪ್ರಾರ್ಥಿಸಿದ.

ಶುಕ ವಾತ್ಸಲ್ಯದಿಂದ, "ರಾಜಾ! ಏಳು! ಒಂದೇ ಸಾರಿಗೆ ಇಷ್ಟೊಂದು ಪ್ರಶ್ನೆಗಳನ್ನು ಹಾಕಿದರೆ, ಎಲ್ಲವನ್ನೂ ಒಮ್ಮೆಲೇ ನೀನು ತಿಳಿದುಕೊಳ್ಳುವುದಾದರೂ ಹೇಗೆ? ನೀನು ಇನ್ನೂ ಏನೂ ಆಹಾರ ಪಾನೀಯಗಳನ್ನು ತೆಗೆದುಕೊಂಡಿಲ್ಲ. ಸ್ವಲ್ಪ ಫಲ ಆಹಾರವನ್ನಾದರೋ ಹಾಲನ್ನಾದರೋ ತೆಗೆದುಕೊ. ಆಹಾರ ಪಾನೀಯಗಳನ್ನು ತೆಗೆದುಕೊಳ್ಳುವುದು ಕಾಯ ಧರ್ಮ. ಅವುಗಳಿಲ್ಲದೆ ಕರ್ತವ್ಯಗಳನ್ನು ಮಾಡುವುದಾದರೂ ಹೇಗೆ? ದೇಹ ಕೃಶವಾಗಿ ಮಧ್ಯದಲ್ಲಿ ಏನಾದರೂ ಆಗಿ ಹೋದರೆ, ನಿನ್ನ ಎಲ್ಲ ಸಂದೇಹಗಳೂ ನಿನ್ನೊಂದಿಗೇ ಇದ್ದುಬಿಡುವುವು. ಆದ್ದರಿಂದ, ಏನಾದರೂ ಆಹಾರ ತೆಗೆದುಕೊ," ಎಂದು ಆಜ್ಞಾಪಿಸಿದ.

ಅದನ್ನು ಕೇಳಿ, ಮಹಾರಾಜ, "ಸ್ವಾಮೀ! ಅಮೃತಪಾನ ಮಾಡುವುದನ್ನು ಬಿಟ್ಟು ಅನೃತಪಾನಮಾಡುವುದು ಅಂತ್ಯಕಾಲ ಸನ್ನಿಹಿತವಾದವರಿಗೆ ಧರ್ಮವಲ್ಲ, ಅಲ್ಲವೆ? ಅದು ಮಾಡಬಾರದ ಕೆಲಸವೆಂದೇ ನನ್ನ ಭಾವನೆ. ನನ್ನ ಕರ್ಣದ್ವಾರಗಳ ಮೂಲಕ ಸುಧಾರಸ ಪಾನ ಮಾಡಿಸುತ್ತಿದ್ದೀರಿ. ಅಮೃತ ಸಂಜೀವಿನೀ ಸುಧೆಯನ್ನು ಶರೀರದ ತುಂಬ ತುಂಬುತ್ತಿದ್ದೀರಿ. ಅಂದಮೇಲೆ ನಾನು ಸಾಯುವುದಾದರೂ ಹೇಗೆ? ಅದು ಅಸಾಧ್ಯ! ಶೃಂಗಿ ಮಹರ್ಷಿ ಕುಪಿತನಾಗಿ ನನ್ನ ಮೃತ್ಯುಕಾಲವನ್ನು ಗೊತ್ತುಮಾಡಿದ್ದರೂ ತಕ್ಷಕನಿಂದ ಏಳು ದಿನಗಳೊಳಗಾಗಿ ಸಾಯಬೇಕಾಗಿದ್ದರೂ ನಾನು ನಿರಂತರವೂ ಹೀಗೇ ನಿರಾಹಾರ ದೀಕ್ಷಿತನಾಗಿ ಕಥಾ ಶ್ರವಣ ಮಾಡುತ್ತಲೇ ಇರುತ್ತೇನೆ. ನನಗೆ ಶ್ಯಾಮಸುಂದರನ ಕಥಾಮೃತವೇ ಆಹಾರ ಪಾನೀಯಗಳು. ಆದ್ದರಿಂದ, ನನ್ನ ಆಹಾರ ಪಾನೀಯಗಳ ಚಿಂತೆಯನ್ನು ಬಿಟ್ಟು, ನನ್ನನ್ನು ಪರಮಪದಕ್ಕೆ ಅಧಿಕಾರಿಯಾಗಿ ಮಾಡಿ, ದುರ್ಗತಿಯಿಂದ ನನ್ನನ್ನು ರಕ್ಷಿಸಿ. ನಿಮ್ಮನ್ನೇ ಶರಣು ಹೋಗುತ್ತಿದ್ದೇನೆ," ಎಂದು ಕಣ್ಣೀರು ಸುರಿಸುತ್ತಾ ದೀನನಾಗಿ ಪ್ರಾರ್ಥಿಸಿದ.

ಶುಕ ಅವನ ತಲೆ ಸವರುತ್ತಾ, "ರಾಜಾ! ಶುಭ ಮಾರ್ಗವನ್ನು ಕುರಿತು ಹೇಳುತ್ತೇನೆ, ಮೊದಲು ಅದನ್ನು ಕೇಳು. ಬ್ರಹ್ಮನು ಮಾಯಾ ಜಗತ್ತಿಗೆ ಪ್ರಕಾಶವನ್ನು ಚೆಲ್ಲಿದ. ನಂತರ ಅವನು ಸೃಷ್ಟಿ ಕಾರ್ಯದಲ್ಲಿ ತೊಡಗುವುದರಲ್ಲಿ ಇರಲು, ಆಕಾಶದಿಂದ, 'ಎಲ್ಲದಕ್ಕೂ ತಪಸ್ಸೇ ಸಾರ,' ಎನ್ನುವ ಮಾತು ಕೇಳಿಸಿತು. ಆದ್ದರಿಂದ ನೀನು ತಪಸ್ಸು ಮಾಡು. ತಪಸ್ಸಿನಿಂದ ಭ್ರಮೆ ತೊಲಗುವುದು," ಎಂದು ಶುಕ ಹೇಳಿದ್ದನ್ನು ಕೇಳಿ, ಪರೀಕ್ಷಿತ್, "ಸ್ವಾಮೀ! ತಪಸ್ಸೆಂದರೆ ಏನೆಂದು ತಿಳಿಸಬೇಕು," ಎಂದು ಕೋರಿದ. ಶುಕ ಮಹರ್ಷಿ, "ವತ್ಸಾ! ತಪಸ್ಸೆಂದರೆ ಸಾಧನೆ. ತಪಸ್ಸಿನಿಂದಲೇ ಸೃಷ್ಟಿ ಸ್ಥಿತಿ ಲಯಗಳು ಜರುಗುತ್ತಿವೆ. ತಪಸ್ಸೇ ಆತ್ಮ ಸಾಕ್ಷಾತ್ಕಾರಕ್ಕೆ ಕಾರಣ. ಮನೋ ಬುದ್ಧೀಂದ್ರಿಯಗಳನ್ನು ತಪಿಸುವಂತೆ ಮಾಡಿದರೆ ತಪ್ಪದೆ ಸಾಕ್ಷಾತ್ಕಾರ ಲಭಿಸುವುದು. ತಪಿಸುವುದೆಂದರೆ ಏನೆಂದು ಹೇಳುತ್ತೇನೆ ಕೇಳು! ಈ ಮನೋ ಬುದ್ಧೀಂದ್ರಿಯಗಳು ಯಾವಾಗಲೂ ಸ್ಥೂಲ ವಸ್ತುಗಳ ಮೂಲಕ ಬಾಹ್ಯ ಸುಖವನ್ನು ಹೊಂದುವುದರಲ್ಲಿ ನಿರತವಾಗುವುವು. ಯಾವುದಾದರೂ ಶಬ್ದ ಬಂತೆಂದರೆ ಶ್ರೋತ್ರೇಂದ್ರಿಯವಾದ ಕಿವಿ ಅದನ್ನು ಕೇಳುವುದು. ಕಿವಿ ಕೇಳಿದೊಡನೆಯೇ ಕಣ್ಣು ನೋಡಲು ಪ್ರಯತ್ನಿಸುವುದು. ಕಣ್ಣು ನೋಡಿದೊಡನೆಯೇ ಆ ವಸ್ತು ತನಗೆ ಬೇಕೆಂದು ಮನಸ್ಸು ಆಶಿಸುವುದು. ಬುದ್ಧಿ ಕೂಡಲೇ ಸರಿ, ಆಗಲಿ, ಎಂದು ಅದನ್ನು ಹೊಂದುವುದಕ್ಕೆ ಬೇಕಾದ ಪ್ರಯತ್ನಗಳನ್ನು ತೀವ್ರವಾಗಿ ಆಲೋಚಿಸುವುದು.

ಈ ಸರ್ವೇಂದ್ರಿಯಗಳು, ಒಂದಾದ ನಂತರ ಒಂದು ಬಾಹ್ಯ ವಸ್ತುಗಳ ಸಂಬಂಧ ಇಟ್ಟುಕೊಂಡು, ಯಾವಾಗಲೂ ಅಲೆಯುತ್ತಾ ಶಾಂತಿ ಸೌಖ್ಯ ಕಾಣದೆ, ಸ್ವೇಚ್ಛೆಯಾಗಿ

ಬೀದಿಯ ನಾಯಿಗಳಂತೆ ತಿರುಗುತ್ತಿರುವುವು. ಯಾರಾದರೂ ಏನು ಅಂದಾರು ಎನ್ನುವ ನಾಚಿಕೆ, ಎಗ್ಗಿಲ್ಲದೆ ತಿರುಗುತ್ತಿರುವುವು. ಹಾಗೆ ಸ್ವೇಚ್ಛೆಯಾಗಿ ತಿರುಗುತ್ತಿರುವ ಮನೋ ಬುದ್ಧೀಂದ್ರಿಯಗಳ ಪ್ರವರ್ತನೆಯನ್ನು ಜೀವಿ ಸರಿಯಾದ ಬೋಧನೆ ಯಿಂದ ತಿದ್ದಿ ಅವುಗಳ ಪ್ರವರ್ತನೆಯನ್ನು ಸೀಮಿತಗೊಳಿಸುವನು. ಒಂದು ಉತ್ತಮ ಮಾರ್ಗದಲ್ಲಿ ಅವು ಹೋಗುವಂತೆ ಮಾಡುವನು.

ಈ ರೀತಿಯಾಗಿ ಸ್ವೇಚ್ಛಾ ಪ್ರವೃತ್ತಿಯನ್ನು ಹೋಗಲಾಡಿಸಿ, ಇಂದ್ರಿಯಗಳನ್ನು ಪವಿತ್ರವಾದ ಪರಮಾತ್ಮ ವಿಷಯದಲ್ಲಿ ಮಗ್ನಮಾಡಿ, ಜಪವೋ ಧ್ಯಾನವೋ ಸತ್ಕರ್ಮವೋ ಇಲ್ಲವೇ ಇನ್ನು ಯಾವುದಾದರೂ ಪವಿತ್ರ ಕರ್ಮವೋ ಮಾಡುತ್ತಾ ಒಂದೇ ಮಾತು, ಒಂದೇ ಭಾವ ಒಂದೇ ಕಾರ್ಯದಿಂದ ಮನೋ ಬುದ್ಧೀಂದ್ರಿಯ ಗಳನ್ನು ಪವಿತ್ರ ಮಾಡುವುದಕ್ಕೆ ತಪಸ್ಸೆನ್ನುವರು. ಅದರ ಮೂಲಕ ಸರ್ವಪಾಪಗಳು ನಶಿಸುವುವು. ಅಂತಃಕರಣ ಶುದ್ಧಿಯಾಗುವುದು. ಅಗ ಭಗವಂತ ಅಲ್ಲೇ ವಾಸ ಮಾಡುವನು! ತಪಸ್ಸಿನ ಮೂಲಕ ಸರ್ವಮಂಗಳಗಳೂ ಸಿದ್ಧಿಸುವುವು. ಕಡೆಗೆ ಸರ್ವೇಶ್ವರನೇ ಸಾಕ್ಷಾತ್ಕರಿಸುವನು. ಇದಕ್ಕಿಂತ ಹೆಚ್ಚಿನದೇನಿದೆ? ರಾಜಾ! ಋಷೀ ಶ್ವರರು, ಮಹಾತ್ಮರು ಈ ತಪಸ್ಸಿನ ಮೂಲಕವಾಗಿಯೇ ಅಲ್ಲವೇ ಅಖಂಡವಾದ ಅಪೂರ್ವವಾದ ತೇಜಸ್ಸನ್ನು ಸಂಪಾದಿಸಿ, ಎಷ್ಟೋ ಘನ ಕಾರ್ಯಗಳನ್ನು ಮಾಡಿದ್ದು? ರಾವಣ, ಹಿರಣ್ಯಕಶಿಪು ಮೊದಲಾದ ರಾಕ್ಷಸರು ಸಹಿತ ರಾಜಸಿಕ ಭಾವದಿಂದ ತಪಸ್ಸನ್ನು ಆಚರಿಸಿ, ಭೌತಿಕವಾದ ಶಕ್ತಿ ಸಾಮರ್ಥ್ಯಗಳನ್ನು ಪಡೆದದ್ದು? ಅವರ ಬಲ ಶೌರ್ಯಗಳೆಲ್ಲಾ ತಪಃಪ್ರಭಾವವೇ. ಆದರೆ, ಅದೇ ತಪಸ್ಸನ್ನು ಸಾತ್ವಿಕ ಮಾರ್ಗದಲ್ಲಿ ನಡೆಸಿದ್ದೇ ಆದರೆ ಪರಾತ್ಪರನನ್ನೇ ಪಡೆಯುವಂಥ ಪ್ರಾಪ್ತಿ ಲಭಿಸುವುದು.

ತಪಸ್ಸು, ಆಚರಿಸುವವನ ಭಾವನೆ ಅನುಸರಿಸಿ ರಾಜಸಿಕ, ತಾಮಸಿಕ, ಸಾತ್ವಿಕ ಎನ್ನುವ ಮೂರು ವಿಧವಾಗಿರುವುದು. ಆದರೆ, ದೈವ ಪ್ರಾಪ್ತಿಗೆ ಸಾತ್ವಿಕ ಭಾವವೇ ಪ್ರಧಾನ. ವಸಿಷ್ಠ, ವಿಶ್ವಾಮಿತ್ರಾದಿ ಮಹರ್ಷಿಗಳು ಸಾತ್ವಿಕ ಮಾರ್ಗದಲ್ಲಿ ಅದ್ಭುತ ಶಕ್ತಿ ಸಾಧಿಸಿದರು. ಕಡೆಗೆ ಬ್ರಹ್ಮರ್ಷಿ ಸ್ಥಾನವನ್ನೂ ಹೊಂದಿದರು. ಅಲ್ಲದೆ, ತಪಸ್ಸಿನಲ್ಲಿ ಮಾನಸಿಕ, ಕಾಯಿಕ, ವಾಚಿಕಗಳೆನ್ನುವ ಮೂರು ಬಗೆಯು. ಈ ಮೂರರಲ್ಲಿ ಯಾವುದು ಪ್ರಧಾನವೆಂದು ನೀನು ಸಂಶಯಪಡಬಹುದು. ಮೂರೂ ಪ್ರಧಾನವೇ ಆದರೂ ಮಾನಸಿಕ ತಪಸ್ಸನ್ನು ಆಧಾರ ಮಾಡಿಕೊಂಡರೆ ಮಿಕ್ಕ ಕಾಯಿಕ ವಾಚಿಕ ಗಳು ಅದರಲ್ಲೇ ಸೇರಿಹೋಗುವುವು.

ವಿಷಯಾಧೀನನಾದವನು ತನ್ನ ಆಸೆ ನೆರವೇರಿಸಿಕೊಳ್ಳುವ ಸಲುವಾಗಿ ಹಲವು ವಿಧವಾಗಿ ಪ್ರಯತ್ನ ಮಾಡುವನು. ಅಂಥ ಅಪಮಾರ್ಗ ಹಿಡಿಯಲು ಬಿಡದೆ, ಸಮಸ್ತ ಇಂದ್ರಿಯಗಳನ್ನೂ ವಿಷಯಗಳಿಂದ ದೂರ ಇರುವಂತೆ ಮಾಡಿ, ಮನಸ್ಸನ್ನು ತಪಸ್ಸಿನಲ್ಲಿ ಲೀನಗೊಳಿಸಿದರೆ ಅಂಥವನು ಸ್ವಾರಾಜ್ಯಕ್ಕೆ ಅಧಿಕಾರಿಯಾಗಬಲ್ಲನು. ಅವನು ಎಲ್ಲವನ್ನೂ ನಿರ್ವಹಿಸಬಲ್ಲನಾಗುವನು. ವಿಷಯಗಳೊಂದಿಗೆ ಮನಸ್ಸನ್ನು ಸೇರಿಸುವುದೇ ಬಂಧನವೆಂದೂ ಮನಸ್ಸನ್ನು ಬಂಧನದಿಂದ ತಪ್ಪಿಸಿ ತಪಸ್ಸಿನಲ್ಲಿ ಸೇರಿಸುವುದೇ (ಅಂದರೆ ಆತ್ಮಕ್ಕೆ ತಿರುಗಿಸುವುದೇ) ಮೋಕ್ಷವೆಂದೂ ಹೇಳಬಹುದು.

ಮಹಾರಾಜಾ! ಕಣ್ಣಿಗೆ ಕಾಣಿಸುವ ಪದಾರ್ಥಗಳೆಲ್ಲವೂ ಅನಿತ್ಯವಾದವುಗಳು. ಹರಿಯೊಬ್ಬನೇ ಸತ್ಯ. ಭೌತಿಕ ವಸ್ತುಗಳ ಸಂಬಂಧ ಅಂತ್ಯದಲ್ಲಿ ದುಃಖದಾಯಕವಾದುದು. ಭಗವಂತ ಸರ್ವದಾ ಸುಖಸ್ವರೂಪಿ. ರಾಜಾ! ಈ ಸಾಂಸಾರಿಕ ಪದಾರ್ಥಗಳೊಂದಿಗೆ ಆ ವಿಶುದ್ಧ ಜ್ಞಾನ ಸ್ವರೂಪನಿಗೆ ಯಾವ ಸಂಬಂಧವೂ ಇಲ್ಲ. ಒಂದು ವೇಳೆ ಹಾಗೆ ಅವನಿಗೆ ಸಂಬಂಧವಿದೆಯೆಂದು ಕಂಡರೆ, ಅದು ಸ್ವಪ್ನದಲ್ಲಿ ನೋಡಿದ ಪದಾರ್ಥಕ್ಕೂ ಸ್ವಪ್ನ ಕಂಡವನಿಗೂ ಯಾವ ಸಂಬಂಧವೋ, ಅಂಥ ಸಂಬಂಧವೇ ಪ್ರಪಂಚದ ವಸ್ತುಗಳಿಗೂ ಪರಮಾತ್ಮನಿಗೂ ಇರುವ ಸಂಬಂಧ," ಎಂದು ಶುಕ ಹೇಳಿದುದನ್ನು ಕೇಳಿ, ಪರೀಕ್ಷಿತ್ ಮಹಾರಾಜ, "ಪ್ರಭೂ! ಈ ವಿಷಯದಲ್ಲಿ ನನಗೊಂದು ಸಂಶಯ ಉಂಟು. ಏನೆಂದರೆ, ಮೊದಲು ಪ್ರತ್ಯಕ್ಷವಾಗಿ ನೋಡಿದ ವಸ್ತುಗಳನ್ನೇ ನಂತರ ಕನಸಿನಲ್ಲಿ ನಾವು ಕಾಣುತ್ತೇವೆ. ಆದ್ದರಿಂದ, ಕನಸಿನಲ್ಲಿ ಕಾಣುವ ಪದಾರ್ಥಗಳಿಗೆ ಆಧಾರವಾಗಿ ಸತ್ಯ ಪದಾರ್ಥಗಳು ಇರಲೇಬೇಕಲ್ಲವೇ? ಸ್ವಪ್ನದೃಷ್ಟನು ತಾನು ಸ್ವಪ್ನದಲ್ಲಿ ಕಾಣುವ ಪದಾರ್ಥಗಳನ್ನೆಲ್ಲಾ ಸತ್ಯವೆಂದೇ ತಿಳಿಯುವನು. ನಿದ್ರೆಯಿಂದ ಎದ್ದ ನಂತರ ಅವೆಲ್ಲವೂ ಬುದ್ಧಿಯ ವಿಕಾರವೆಂದು ತಿಳಿಯುವನು. ಇದು ಮಾನವರ ಪರಿಸ್ಥಿತಿಯೇ ಹೊರತು, ಭಗವಂತನಿಗೆ ಭ್ರಮೆ ಉಂಟೆ? ಪದಾರ್ಥಗಳೆಲ್ಲವೂ ಒಂದೇ ರೂಪದವುಗಳಾಗಿದ್ದರೆ ಮಾಯೆಯಿಂದ ಅವು ಹಾಗೆ ಗೋಚರವಾಗುತ್ತಿವೆ ಎನ್ನಬಹುದು. ಆದರೆ ಪದಾರ್ಥಗಳು ನಾನಾ ರೂಪದವುಗಳಾಗಿರುವುದರಿಂದ ಅವೆಲ್ಲವೂ ಸತ್ಯವಾದುವುಗಳಾಗಿಯೇ ತೋರುವುವು. ಅಂಥವುಗಳನ್ನು ಸ್ವಪ್ನದ ವಸ್ತುಗಳೊಂದಿಗೆ ಹೇಗೆ ಹೋಲಿಸುವುದು?" ಎಂದು ಕೇಳಿದ.

ಶುಕ ನಕ್ಕು, "ಮಹಾರಾಜಾ! ಈ ಮಾಯೆಯೇ ನಾನಾ ರೂಪದ್ದಾಗಿದೆ. ಇದು ಬಹು ವೇಷಧಾರಿ. ಹಲವು ರೂಪ ಧರಿಸಿದಂಥದ್ದು. ಪ್ರಕೃತಿ ಮಾಯೆಯಿಂದ, ಅವಿದ್ಯಾ ಕಾರಣದಿಂದ, ಕಾಲ ಹೋದಂತೆ ಗುಣ ಕ್ಷೋಭೆ ಉಂಟಾಗಿ ಈ ಪ್ರಪಂಚ ನಿರ್ಮಾಣವಾಗುವುದು. ಆದ್ದರಿಂದ ಯಾರು ಮಾಯಾಪತಿಯೋ

ಯಾರು ಕಾಲನಿಯಂತ್ರಕನೋ ಯಾರು ಸ್ವಭಾವ ಪ್ರವರ್ತಕನೋ ಅಂಥವನನ್ನು ಜೀವಿಯು ಶರಣು ಹೋದರೆ, ಅವನೇ ಸಮಸ್ತ ಪ್ರಪಂಚದ ಜನಕ, ಯೋಜಕ, ಶಾಸನ ಕರ್ತ ಎಂದು ಗ್ರಹಿಸಿದರೆ, ಅವನ ಮಹಿಮೆಯನ್ನು ಗುರುತಿಸಿದರೆ, ಅಂಥವನು ಅಕ್ಷರ ಬ್ರಹ್ಮದಲ್ಲಿ ರಮಿಸುತ್ತಾ, ಅಜ್ಞಾನರಹಿತನಾಗಿ ಈ ಮಾಯಾ ಪದಾರ್ಥಗಳನ್ನು ದೂರಮಾಡಿ ಅವುಗಳ ಬಗೆಗೆ ಉದಾಸೀನನಾಗಬಲ್ಲ," ಎಂದ.

ಮಹಾರಾಜ ಆಶ್ಚರ್ಯಚಕಿತನಾಗಿ, "ಪ್ರಭೂ! ಈ ಸೃಷ್ಟಿ ಮೊದಲು ಹೇಗೆ ಆಯಿತು? ಈ ಮಾಯಾ ಪದಾರ್ಥಗಳಿಗೆ ಮೂಲ ಕಾರಣ ಯಾವುದು?" ಎಂದು ಪ್ರಶ್ನಿಸಿದ. ಶುಕ, "ಮಹಾರಾಜ! ಸೃಷ್ಟಿಯು ಅನಾದಿಕಾಲದಿಂದ ಉತ್ಪನ್ನವಾಗುತ್ತಿದೆ. ಸೃಷ್ಟಿಯ ಆದಿಯಲ್ಲಿ ನಾರಾಯಣನ ನಾಭಿಯಿಂದ ಒಂದು ಕಮಲ ಉದ್ಭವಿಸಿತು. ಆ ಕಮಲದಲ್ಲೇ ನಾರಾಯಣನು ಬ್ರಹ್ಮರೂಪದಲ್ಲಿ ಹುಟ್ಟಿದ. ಹಾಗೆ ಹುಟ್ಟಿದ ಬ್ರಹ್ಮ ನಾಲ್ಕುದಿಕ್ಕುಗಳನ್ನೂ ಏಕಕಾಲದಲ್ಲಿ ನೋಡಬೇಕೆಂದು ಸಂಕಲ್ಪಿಸಿದ. ಆಗ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಮುಖಗಳನ್ನು ಪಡೆದ ನಂತರ ಎಂಟು ದಿಕ್ಕುಗಳನ್ನು ನೋಡಬೇಕೆಂದು ಸಂಕಲ್ಪಿಸಿ, ಚತುರಾನನನಾದನು. ಹತ್ತು ದಿಕ್ಕುಗಳು ಇದ್ದ ಕಾರಣ ಐದು ಮುಖಗಳಿದ್ದುವು. ಆದರೆ, ಐದನೆಯ ಮುಖವನ್ನು ತಾನೇ ಶಿವರೂಪದಿಂದ ತೆಗೆದು ಹಾಕಿದ. ತಪಸ್ಸಿಲ್ಲದೆ ಯಾವ ಕೆಲಸವೂ ಆಗುವುದಿಲ್ಲವೆಂದು ತಿಳಿದು, ಪದ್ಮಾಸನನಾಗಿ ಕುಳಿತು ಹೃತ್ಪದ್ಮದಲ್ಲಿ ಸಮಸ್ತ ಸೃಷ್ಟಿಯನ್ನೂ ಕಲ್ಪಿಸಿಕೊಂಡು, ಸೃಷ್ಟಿಮಾಡಿದ. ಸೃಷ್ಟಿ ರಹಸ್ಯ ಅಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಭಗವತ್ ಸಂಕಲ್ಪಕ್ಕೆ ಕಾರಣ ಕಾರ್ಯದ ಕ್ರಮ ಇರುವುದಿಲ್ಲ. ಸರ್ವ ಸಮರ್ಥನೂ ಸರ್ವಜ್ಞನೂ ಆದ ಸರ್ವೇಶ್ವರನ ಸೃಷ್ಟಿಯನ್ನು ಲೌಕಿಕ ರೀತಿಗಳಿಂದ ಪರಿಶೋಧಿಸು ವುದಕ್ಕೆ, ವಿಚಾರ ಮಾಡುವುದಕ್ಕೆ, ಊಹಿಸುವುದಕ್ಕೆ, ಎಂಥವರಿಗೂ ಸಾಧ್ಯವಿಲ್ಲ. ರಾಜಾ! ನೀನು ಇದುವರೆಗೆ ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರ ಕೊಡಲು ಉಪಕ್ರಮಿಸುತ್ತಿರುವಂತೆಯೇ ನೀನು ಮತ್ತೊಂದು ಪ್ರಶ್ನೆ ಕೇಳ ಹೊರಟೆ. ನೀನು ಕೇಳಿದ ಎಲ್ಲ ಪ್ರಶ್ನೆಗಳಿಗೆ ನಾನು ಸಮಾಧಾನ ಕೊಡಲು ಮರೆತೆನೆಂದು ತಿಳಿದೆ ಯೇನೋ? ಮುಂದೆ ನೀನು ಕೇಳಲಿರುವ ಭಾಗವತ ಕಥೆಯಲ್ಲಿ ಅವೆಲ್ಲವುಗಳಿಗೂ ತಕ್ಕ ಸಮಾಧಾನ ಪಡೆಯುವೆ. ನೀನು ಕೇಳಿದ ಪ್ರಶ್ನೆಗಳೆಲ್ಲವೂ ಪುರಾಣ ಸಮ್ಮತವಾ ದುವುಗಳಾದ್ದರಿಂದ ಪುರಾಣಗಳ ಮೂಲಕವಾಗಿಯೇ ಉತ್ತರ ಪಡೆಯುವೆ," ಎಂದು ಶಾಂತವಚನ ಹೇಳಿದ.

# ೩೧ ಪುರಾಣಗಳು ಮತ್ತು ಅವತಾರಗಳು

ಪರೀಕ್ಷಿತ್ ಪುನಃ ಪ್ರಶ್ನಿಸತೊಡಗಿದ. "ಸ್ವಾಮೀ! ಪುರಾಣಗಳೆಂದರೇನು? ಅವುಗಳ ಲಕ್ಷಣಗಳೇನು? ಅವು ಎಷ್ಟಿವೆ?" ಎಂದು ಕೇಳಿದ. ಶುಕ, "ರಾಜಾ! ವೇದಗಳ ಸಂಕ್ಷಿಪ್ತ ವಚನಗಳಿಗೆ ವ್ಯಾಖ್ಯಾನ ಮಾಡುವುವುಗಳನ್ನು ಪುರಾಣಗಳೆನ್ನುವರು. ಪುರಾಣಗಳು ಅಸಂಖ್ಯಾತವಾಗಿವೆ. ಆದರೂ ಈ ಕಾಲದಲ್ಲಿ ಹದಿನೆಂಟು ಪುರಾಣಗಳು, ಹದಿನೆಂಟು ಉಪಪುರಾಣಗಳು, ಹದಿನೆಂಟು ಉಪೋಪ ಪುರಾಣಗಳು ಮಾತ್ರವೇ ಪ್ರಸಿದ್ಧವಾಗಿವೆ. ಇವೆಲ್ಲವನ್ನೂ ನನ್ನ ತಂದೆಯಾದ ವ್ಯಾಸರೇ ಸಂಗ್ರಹಿಸಿದವರು.

ಪುರಾಣಗಳಿಗೆ ದಶಲಕ್ಷಣಗಳು, ಉಪ ಪುರಾಣಗಳಿಗೆ ಪಂಚಲಕ್ಷಣಗಳು ಇರುವುವು. ಆ ದಶಲಕ್ಷಣಗಳು ಯಾವುವೆಂದು ನೀನು ಪ್ರಶ್ನಿಸಬಹುದು. ನೀನು ಕೇಳುವ ಮೊದಲೇ ನಾನು ಹೇಳುತ್ತೇನೆ ಕೇಳು. ಸರ್ಗ, ವಿಸರ್ಗ, ಸ್ಥಾನ, ಪೋಷಣ, ಊತಿ, ಮನ್ವಂತರ, ಈಶಾನುಚರಿತ, ನಿರೋಧ, ಮುಕ್ತಿ, ಆಶ್ರಮ—ಇವು ಹತ್ತು ಪುರಾಣ ಲಕ್ಷಣಗಳು, ಇವುಗಳಲ್ಲಿ ಆಶ್ರಮ ಎನ್ನುವುದು ಪ್ರಧಾನವಾದುದು.

ಪುರಾಣದ ಈ ಹತ್ತು ಲಕ್ಷಣಗಳನ್ನೂ ಸಂಕ್ಷಿಪ್ತವಾಗಿ ವಿವರಿಸಬೇಕಾದರೆ, ಹಾಲು ಕರೆಯುವುದರಿಂದ ಹಿಡಿದು ಬೆಣ್ಣೆ ಮುದ್ದೆ ಮಾಡುವವರೆಗೆ ಮಾಡಬೇಕಾದ ಪ್ರತಿಯೊಂದು ಕಾರ್ಯವನ್ನು ಹಂತಹಂತವಾಗಿ ವಿವರಿಸುವುದು ಅಗತ್ಯವಾಗುತ್ತದೆ. ಆಯಾ ಹಂತಕ್ಕೆ ಇರುವ ಹೆಸರೇ ಈ ಹತ್ತು ಹೆಸರುಗಳು. ಆದರೆ ಎಲ್ಲಕ್ಕಿಂತ ಮುಖ್ಯವಾದದ್ದು ಬೆಣ್ಣೆ ಮುದ್ದೆ! ಆ ಬೆಣ್ಣೆಗಾಗಿಯೇ ಈ ಹತ್ತು ಬಗೆಯ ಕೆಲಸಗಳನ್ನು ಮಾಡಬೇಕಾಗಿರುವುದು. ಹಾಗೇ, ಆಶ್ರಮ ತತ್ವ ಸಿದ್ಧಿಗಾಗಿಯೇ ಸರ್ಗ ವಿಸರ್ಗ ಆದಿಗಳು. ಶ್ರುತಿಯಲ್ಲಿ ಒಂದೊಂದು ಕಡೆ ಒಂದೊಂದು ವಾಕ್ಯದಿಂದ ಇದರ ಸಾಕ್ಷಾದ್ರೂಪ ವರ್ಣಿತವಾಗಿದೆ," ಎಂದು ಶುಕ ಹೇಳಲು, ಪರೀಕ್ಷಿತ್ ಮಹಾರಾಜ ತಿರುಗಿ ಮತ್ತೊಂದು ಪ್ರಶ್ನೆ ಕೇಳಬಯಸಿ, "ಪ್ರಭೂ! ನನ್ನ ಪ್ರಶ್ನೆ ಪುರಾಣ ಸಂಬಂಧ ವಾದುವುಗಳೆಂದು ತಿಳಿಸಿದಿರಿ. ಹಾಗಾದರೆ ತಾವು ನನಗೆ ಯಾವ ಪುರಾಣ ಹೇಳಹೊರಟಿದ್ದೀರಿ? ಹೇಳಲಿರುವ ಪುರಾಣದ ದಶಲಕ್ಷಣಗಳನ್ನೂ ತಿಳಿಸಿ ನನ್ನನ್ನಾನಂದಪಡಿಸಿ," ಎಂದು ಪ್ರಾರ್ಥಿಸಿದ. ಶುಕ ಅದನ್ನೇ ವಿವರಿಸಲಾರಂಭಿಸಿದ: "ಮಹಾರಾಜಾ! ಕೇಳು! ನಾನು ನಿನಗೆ ಶ್ರೀಮದ್ಭಾಗವತ ಪುರಾಣವನ್ನು ಹೇಳಬೇಕು ಎಂದಿದ್ದೇನೆ. ಅದರಲ್ಲಿ ನೀನು ಕೇಳಿದ ಎಲ್ಲ ಪ್ರಶ್ನೆಗಳಿಗೂ ಉತ್ತರವಿದೆ. ಇದಕ್ಕೆ ಮಿಗಿಲಾದ ಪುರಾಣ ಮತ್ತೊಂದಿಲ್ಲ. ಹತ್ತು ಲಕ್ಷಣಗಳಲ್ಲಿ ಮೊದಲನೆಯದಾದ ಸರ್ಗಕ್ಕೆ ಸರಿಯಾದ ಅರ್ಥ ಹೇಳುತ್ತೇನೆ. ಸಾವಧಾನ ಮನಸ್ಕನಾಗಿ ಕೇಳು.

ಸತ್ವ ರಜಸ್ತಮೋಗುಣಗಳು ಸಮಾನವಾಗಿರುವುದನ್ನು ಪ್ರಕೃತಿ ಎನ್ನುತ್ತಾರೆ. ಮೂಲ ಪ್ರಕೃತಿಯಿಂದ ಪೃಥ್ವಿ, ಜಲ, ತೇಜಸ್ಸು, ವಾಯು, ಆಕಾಶ ಎನ್ನುವ ಪಂಚಭೂತಗಳು, ಶಬ್ದ, ಸ್ಪರ್ಶ, ರೂಪ, ರಸ, ಗಂಧವೆನ್ನುವ ಪಂಚ ತನ್ಮಾತ್ರಗಳು ಉತ್ಪನ್ನವಾಗುವುವು. ಹಾಗೂ ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೆನ್ನುವ ಪಂಚ ಕರ್ಮೇಂದ್ರಿಯ ಗಳು, ಕಿವಿ, ಚರ್ಮ, ಕಣ್ಣುಗಳು, ನಾಲಿಗೆ, ಮೂಗು ಎನ್ನುವ ಪಂಚ ಜ್ಞಾನೇಂದ್ರಿಯ ಗಳು, ಮನಸ್ಸು, ಮಹದಹಂಕಾರ ಎನ್ನುವ ಎರಡೂ ಉತ್ಪನ್ನವಾಗುವುವು. ಈ ತತ್ವಗಳು ಯಾವಾಗ ಉತ್ಪನ್ನವಾಗುವುವೋ ಆಗ ಅದನ್ನು ಸರ್ಗ ಎನ್ನುವರು.

ಇನ್ನು ಎರಡನೆಯದಾದ ವಿಸರ್ಗ ಎಂದರೆ, ವಿಶೇಷ ರೂಪದ ಸರ್ಗಕ್ಕೇ ವಿಸರ್ಗ ಎನ್ನುವರು. ಚಿತ್ರ ವಿಚಿತ್ರ ಕರ್ಮ ಸಂಯೋಗದಿಂದ ಅಸಂಖ್ಯಾತ ಜೀವಿಗಳನ್ನು ಸೃಷ್ಟಿಸುವುದೇ ವಿಸರ್ಗ ಎಂದು ಕರೆಯಲ್ಪಡುವುದು. ಇದು ವಿರಾಟ್ ಪುರುಷ ಸಂಬಂಧವಾದುದು.

ಮೂರನೆಯದಾದ ಸ್ಥಾನ ಎಂದರೆ ಲೋಕದಲ್ಲಿ ಯಾವ ವಸ್ತು ಹುಟ್ಟಿದರೂ ಅದಕ್ಕೆ ಮಿತಿ ಗೊತ್ತುಪಡಿಸದಿದ್ದರೆ ಅದು ವ್ಯರ್ಥವಾಗಿ ಹೋಗುವುದು. ಆದ್ದ ರಿಂದ, ಸೃಷ್ಟಿಯಾದ ವಸ್ತುಗಳಿಗೆ ಮಿತಿ ಗೊತ್ತುಪಡಿಸಿ, ಆ ವಸ್ತುಗಳು ಆಯಾ ಮಿತಿಯನ್ನು ಮೀರದ ಹಾಗೆ ಮಾಡುವುದಕ್ಕೇ ಸ್ಥಾನ ಎನ್ನುವರು. ಉದಾಹರಣೆಗೆ, ಒಂದು ಯಂತ್ರ ಇದೆ ಎಂದಿಟ್ಟುಕೊಳ್ಳೋಣ. ಅದನ್ನು ನಡೆಸುವುದಕ್ಕೆ ಒಂದು 'ಕೀಲಿಕೈ' ಇರುತ್ತದೆ. ಆ ಯಂತ್ರವನ್ನು ಒಂದು ಹದ್ದಿನೊಳಗೇ ನಡೆಸಿದರೇನೇ ಅದು ಸರಿಯಾಗಿ ನಡೆಯುವುದು. ಇಲ್ಲದಿದ್ದರೆ ಅಪಾಯಕ್ಕೆ ಗುರಿಯಾಗುವುದು, ಗುರಿಮಾಡುವುದು. ಹದ್ದಿನಲ್ಲಿಡುವ ವಿಧಾನ ಕುರಿತದ್ದೇ ಸ್ಥಾನ.

ಪೋಷಣವೇನು ಎನ್ನುವುದನ್ನು ಸುಲಭವಾಗಿ ಹೇಳಬೇಕಾದರೆ ದೈವಾನುಗ್ರಹವೇ ಪೋಷಣ. ಸೃಷ್ಟಿ ಕಾರ್ಯವೆಲ್ಲವೂ ಪೋಷಣದ ಮುಲಕವೇ ನಡೆಯುತ್ತಿದೆ. ಬೀಜ ನೆಟ್ಟು ತಕ್ಕ ಪೋಷಣೆ ಮಾಡದಿದ್ದರೆ ಅದು ಬೆಳೆಯುವುದಿಲ್ಲ, ಅಲ್ಲವೇ?

ಇನ್ನು ಮನ್ವಂತರ ಎಂದರೆ, ಎಂಟು ಜಾವಗಳುಳ್ಳ ರಾತ್ರಿ ಹಗಲುಗಳನ್ನು ದಿನ ಎನ್ನುವರು. ಇಂಥ ಮೂವತ್ತು ದಿನಗಳಿಗೆ ಒಂದು ಮಾಸ. ಇಂಥ ಹನ್ನೆರಡು ಮಾಸಗಳಿಗೆ ಒಂದು ಸಂವತ್ಸರ. ಈ ಲೋಕದ ಒಂದು ಸಂವತ್ಸರ ದೇವತೆಗಳಿಗೆ ಒಂದು ದಿನ. ದೇವತೆಗಳ ಇಂಥ ೩೬೦ ದಿನಗಳಿಗೆ ಒಂದು ವರ್ಷ. ಕಲಿಯುಗದಲ್ಲಿ ಇಂಥ ೧,೦೦೦ ದಿವ್ಯ ಸಂವತ್ಸರಗಳು, ದ್ವಾಪರದಲ್ಲಿ ೨,೦೦೦ ಸಂವತ್ಸರಗಳು, ತ್ರೇತಾಯುಗದಲ್ಲಿ ೩,೦೦೦ ಸಂವತ್ಸರಗಳು, ಕೃತಯುಗದಲ್ಲಿ ೪,೦೦೦ ಸಂವತ್ಸರ

ಗಳು ಇವೆ. ಪ್ರತಿ ಯುಗಕ್ಕೂ ೨೦೦, ೪೦೦, ೬೦೦ ಮತ್ತು ೮೦೦ ವರ್ಷಗಳ ಸಂಧಿ ಕಾಲಗಳಿರುವುವು. ಇಂಥ ೧೨,೦೦೦ ದಿವ್ಯ ವರ್ಷಗಳು ಒಂದು ಮಹಾಯುಗ ಎಂದು ಕರೆಯಲ್ಪಡುವುದು. ಇಂಥ ೧,೦೦೦ ಮಹಾಯುಗಗಳು ಬ್ರಹ್ಮನಿಗೆ ಒಂದು ದಿನ! ಬ್ರಹ್ಮನ ಒಂದೊಂದು ದಿನದಲ್ಲೂ ೧೪ ಮನುಗಳು ಲೋಕದಲ್ಲಿ ಅಧಿಕಾರ ಮಾಡುವರು. ಆದ್ದರಿಂದ ಪ್ರತಿ ಮನುವೂ ೭೦ ಮಹಾಯುಗಗಳಿಗಿಂತಲೂ ಮಿಗಿಲಾದ ಅವಧಿಯಲ್ಲಿ ಅಧಿಪತಿಯಾಗಿರುವನು. ಈ ಮನುಗಳ, ಅವರ ವಂಶಸ್ಥರ ಕಥೆಗೆ ಮನ್ವಂತರ ಎಂದು ಹೆಸರು.

ಊತಿ ಎಂದರೆ ಕರ್ಮವಾಸನೆ. ಅಂದರೆ ಪೂರ್ವ ಕರ್ಮವಾಸನೆಗಳನ್ನು ಅನುಸರಿಸಿ ಆಯಾ ಜನ್ಮಗಳನ್ನು ಎತ್ತಬೇಕಾಗುವುದು. ಭಗವಂತನೇ ಆ ಜನ್ಮವೆತ್ತು, ಈ ಜನ್ಮವೆತ್ತು ಎಂದು ಆಜ್ಞಾಪಿಸುವುದಿಲ್ಲ. ಅವನಿಗೆ ಎಲ್ಲರೂ ಸಮಾನರೇ, ಭೇದಗಳೆಲ್ಲವೂ ಅವರವರ ಕರ್ಮಗಳನ್ನನುಸರಿಸಿ ಉಂಟಾಗುವುದು.

ಈಶ್ವರನ ಗುಣಲೀಲೆಗಳನ್ನು, ಆತನ ಭಕ್ತರುಗಳ ಅನುಭವ ಕಥೆಯನ್ನು ಈಶಾನು ಕಥೆ ಎನ್ನುವರು.

ಭಗವಂತ ತನ್ನ ಸಮಸ್ತ ಶಕ್ತಿಯನ್ನು ಉಪಸಂಹಾರ ಮಾಡಿಕೊಂಡು ತನ್ನಲ್ಲಿ ಲೀನಗೊಳಿಸಿಕೊಂಡಾಗ ಅವನು ಯೋಗನಿದ್ರೆಯಲ್ಲಿ ಇರುತ್ತಾನೆ. ಆ ಸ್ಥಿತಿಯನ್ನೇ ನಿರೋಧ ಎಂದು ಕರೆಯುವರು.

ಅಜ್ಞಾನದಿಂದ ಬಂಧಿಸಲ್ಪಟ್ಟ ಜೀವಿಯನ್ನು ಬಂಧ ಮುಕ್ತಗೊಳಿಸುವುದು. ಅಂದರೆ ಜೀವಿ ಅನಾತ್ಮ ಭಾವವನ್ನು ತೊರೆದು ಆತ್ಮಭಾವದಲ್ಲಿ ನೆಲೆಸುವುದೇ ಮುಕ್ತಿ.

ಆಶ್ರಮ ಎಂದರೆ ಮುಕ್ತಿ ಕೂಡ ಯಾರೋ ಒಬ್ಬನನ್ನು ಆಶ್ರಯಿಸಿರಬೇಕು ಅಲ್ಲವೇ? ಆಶ್ರಮವಿಲ್ಲದೆ ಯಾವುದೂ ಇರಲಸಾಧ್ಯ. ವಿಶ್ವಕ್ಕೆಲ್ಲಾ ಪರಮಾತ್ಮನೇ ಆಶ್ರಮ. ಚರಾಚರ ಪ್ರಪಂಚವೆಲ್ಲಾ ಯಾರಿಂದ ಹುಟ್ಟಿ, ಯಾರಿಂದ ಬೆಳೆದು, ಯಾರಿಂದ ನಶಿಸುವುದೋ ಅಂಥ ಪರಮಾತ್ಮನೇ ಮುಕ್ತಿಗೆ ಆಧಾರ. ಆದ್ದರಿಂದ ಆಶ್ರಮವೆಂದರೆ ಪರಮಾತ್ಮನೆ. ಯಾರು ಆದಿಭೌತಿಕ, ಆದಿದೈವಿಕ, ಆಧ್ಯಾತ್ಮಿಕಗಳನ್ನು ತಿಳಿದಿರುವನೋ ಅವನು ಆತ್ಮಸಮಸ್ತಕ್ಕೂ ಆಶ್ರಮವೆಂದು ತಿಳಿಯಲ್ಪಡುವನು," ಎಂದು ಶುಕ ವಿವರಿಸಿದ.

ಇದನ್ನು ಕೇಳಿ, ಪರೀಕ್ಷಿತ್ ಮಹಾರಾಜ, "ಪ್ರಭೂ! ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕಗಳೆಂದರೇನು ಎನ್ನುವುದನ್ನು ತಿಳಿಸಬೇಕು," ಎಂದು ಪ್ರಾರ್ಥಿಸಿದ.

ಶುಕ ಆನಂದದಿಂದ ಅವುಗಳನ್ನು ಕುರಿತು ಹೇಳಲು ಸಿದ್ಧನಾದ. "ಮಹಾರಾಜಾ! ನಾನೊಂದು ಪದಾರ್ಥ ನೋಡುತ್ತಿದ್ದೇನೆ. ಆ ಪದಾರ್ಥ ಆದಿಭೌತಿಕ. ಆದರೆ ನೋಡುತ್ತಿರುವುದು ಯಾವುದೆಂದು ನೀನು ತಿಳಿದಿರುವೆ? ಕಣ್ಣುಗಳೆಂದು ನೀನು ಭಾವಿಸಬಹುದು. ಆದರೆ ಕಣ್ಣುಗಳಿಗೆ ನೋಡುವ ಶಕ್ತಿ ಎಲ್ಲಿಂದ ಬಂದಿತು? ಕಣ್ಣುಗಳಿಗೆ ಅಧಿಷ್ಠಾನ ದೇವತೆಯಾದ ಸೂರ್ಯನಿಂದ ಆ ಶಕ್ತಿ ಬಂದಿತು. ಸೂರ್ಯನಿಲ್ಲದೆ ಕಣ್ಣುಗಳು ನೋಡಲಾರವು ಅಲ್ಲವೇ? ಕತ್ತಲೆಯಲ್ಲಿ ಸೂರ್ಯನ ಪ್ರಕಾಶವಿರುವುದಿಲ್ಲ. ಆದ್ದರಿಂದಲೆ ಕತ್ತಲೆಯಲ್ಲಿ ಕಣ್ಣುಗಳಿಗೆ ಏನೂ ಕಾಣಿಸುವುದಿಲ್ಲ. ಎಂತಲೇ ಕಣ್ಣುಗಳಿಗೆ ಅಧಿದೇವತೆ ಸೂರ್ಯ. ಜೀವಿಯೂ ಇಂದ್ರಿಯ ಅಧಿಷ್ಠಾತೃ ದೇವತೆಗಳಾದ ಸೂರ್ಯಾದಿ ದೇವತೆಗಳೂ ಈ ಆದಿಭೌತಿಕವನ್ನು ನೋಡುವ ವಸ್ತುಗಳು. ಇವುಗಳಲ್ಲಿ ಯವುದೊಂದು ಇಲ್ಲದಿದ್ದರೂ ಇನ್ನೊಂದನ್ನು ತಿಳಿಯಲು ಸಾಧ್ಯವಿಲ್ಲ. ವಸ್ತುವನ್ನು ಕಣ್ಣುಗಳು ನೋಡುವುದು ಜೀವಾತ್ಮನ ಮೂಲಕ. ವಸ್ತು ಇಲ್ಲದಿದ್ದರೆ ನೇತ್ರಾದಿ ದೇವತೆಗಳು ಮತ್ತು ಜೀವಿ ಇದ್ದರೂ ನೋಡಲಾರವು. ಈ ಮೂರಕ್ಕೂ ಪರಸ್ಪರ ಸಂಬಂಧ ಅನ್ಯೋನ್ಯತೆ ಉಂಟು. ಈ ಮೂರಕ್ಕೂ ಸಾಕ್ಷಿಯಾಗಿ ಯಾರಿದ್ದಾರೋ ಅವನೇ ಆತ್ಮ. ಇವುಗಳೇ ಭಾಗವತಾದಿ ಪುರಾಣಗಳಲ್ಲಿರುವ ದಶಲಕ್ಷಣಗಳು. ನೀನು ಇನ್ನೇನು ತಿಳಿದುಕೊಳ್ಳುವುದಿದೆಯೋ ಹೇಳು, ನಿನ್ನ ಆನಂದಕ್ಕಾಗಿ ತಿಳಿಸಲು ಸಿದ್ಧನಾಗಿದ್ದೇನೆ," ಎಂದ.

# ೩೨ ರಾಮಾವತಾರ

ಪರೀಕ್ಷಿತ್, "ಪ್ರಭೂ! ಪುರಾಣಗಳ ದಶಲಕ್ಷಣಗಳನ್ನು ಅರ್ಥಮಾಡಿಕೊಂಡೆ. ಆತ್ಮ ಸ್ವರೂಪನಾದ ಪರಮಾತ್ಮ ಎಲ್ಲಕ್ಕೂ ಸಾಕ್ಷೀಭೂತನೆನ್ನುವುದನ್ನು ಕೂಡ ತಿಳಿದು ಕೊಂಡೆ. ಆ ಸಾಕ್ಷೀಭೂತನಾದ ಪರಮಾತ್ಮ ಅನೇಕ ಅವತಾರಗಳನ್ನೆತ್ತಿ ಲೋಕವನ್ನು ಸಂರಕ್ಷಿಸಿ ಧರ್ಮವನ್ನು ಬೋಧಿಸಿ, ತನ್ನ ಜನ್ಮ ಕರ್ಮಗಳ ಮರ್ಮವನ್ನು ತಿಳಿಸುವನಲ್ಲವೆ? ಅಂಥ ಲೀಲಾಮಾನುಷ ವಿಗ್ರಹರಾದ ರಾಮ ಕೃಷ್ಣಾದಿಗಳ ಅವತಾರ ರಹಸ್ಯವನ್ನು ಕೇಳಲು ಅಪೇಕ್ಷಿಸುತ್ತೇನೆ. ಕಾಲಾವಕಾಶ ಕಡಿಮೆಯೆಂದು ಭಾವಿಸದೆ, ಇರುವ ಅಲ್ಪ ಕಾಲವನ್ನೇ ಕಥಾ ಶ್ರವಣದಿಂದ ನಾನು ಪವಿತ್ರ ಮಾಡಿ

ಕೊಳ್ಳುವಂತೆ, ಆ ದಿವ್ಯಾವತಾರ ಲಕ್ಷಣಗಳನ್ನು ತಿಳಿಸಿ, ನನ್ನ ದಾಹ ತೀರಿಸಿ, ತೃಪ್ತಿ ನೀಡಿ,'' ಎಂದು ಪ್ರಾರ್ಥಿಸಿದ.

ಉತ್ತರವಾಗಿ ಶುಕನು, ''ಮಹಾರಾಜಾ! ನಾನೂ ಆ ದಿವ್ಯಾವತಾರಗಳನ್ನು ಕುರಿತೇ ಹೇಳಬೇಕೆಂದಿದ್ದೇನೆ. ಕೇಳು. ರಾಜಾ! ಭಗವದವತಾರಗಳು ಎಲ್ಲವೂ ಶ್ರೇಷ್ಠವಾದವುಗಳೇ; ಪವಿತ್ರ ಚರಿತ್ರೆಗಳೇ; ಪೂರ್ಣವಾದವುಗಳೇ. ಇವು ಕೇಳುವುದಕ್ಕೆ ಒಂದಕ್ಕಿಂತ ಮತ್ತೊಂದು ಅಧಿಕ ಪ್ರತಾಪದವುಗಳಾಗಿ, ಪವಿತ್ರವಾದವುಗಳಾಗಿ ಕಾಣುವುವು. ಆನಂದ ಕೊಡುವುವು. ಇವೆಲ್ಲವುಗಳ ಅಂತರ್ ತತ್ವ ಏಕತ್ವವೇ, ಭಿನ್ನತ್ವವಲ್ಲ. ಆಯಾ ಸಮಯ ಸಂದರ್ಭಾನುಸಾರ, ಆಯಾ ಕಾರ್ಯಕ್ಕೆ ಬೇಕಾದ ಕಾಯ ಧರಿಸಿ ಆ ಏಕಮೇವಾದ್ವಿತೀಯನು ಅವತರಿಸುವನು.

ಅಂದರೆ, ಮಾನವರಿಗೆ ಆಚರಣೆಗೆ ಯೋಗ್ಯವಾದ ನಡವಳಿಕೆಗಳನ್ನು ಹೇಳಿ ಕೊಟ್ಟು, ಆನಂದವನ್ನು ಕೊಟ್ಟು, ಆತ್ಮ ತತ್ವವನ್ನು ತಿಳಿಸುವ ಸಲುವಾಗಿ ಬಂದ ರಾಮ, ಕೃಷ್ಣ ಅವತಾರಗಳು ಮಾತ್ರ ಲೋಕಕ್ಕೆ ಮುಕುಟ ಪ್ರಾಯವಾದವುಗಳು ಎನ್ನುವುದರಲ್ಲಿ ಸಂದೇಹವಿಲ್ಲ. ಆ ಎರಡು ಅವತಾರಗಳೇ ಇಂದು ಲೋಕದಲ್ಲಿ ಆರಾಧನಾ ರೂಪ, ಸ್ಥಾನಗಳನ್ನು ಪಡೆದಿವೆ. ಮಿಕ್ಕವು ಆಯಾ ಕಾರ್ಯ ನಿಮಿತ್ತವಾಗಿ ಬಂದು, ಆಗಿಂದಾಗಲೇ ಹೊರಟು ಹೋಗಿವೆ.

ಈ ಎರಡು ಅವತಾರಗಳು ಅತಿ ಸುಂದರವೂ ಪುರುಷರನ್ನು ಕೂಡ ಮೋಹಗೊಳಿಸುವಂಥ ದಿವ್ಯಕಾಂತಿ ಅವತಾರಗಳು. ಈ ರೂಪಗಳಲ್ಲಿ ಲಾವಣ್ಯ ಲಾಸ್ಯ ಆಡುತ್ತಿತ್ತು. ಎಂಥ ಶಿಲಾಹೃದಯಿಯಾದರೂ ಆ ರೂಪಗಳನ್ನು ಕಂಡು ಮೋಹಿತನಾಗಿ ಬಿಡುತ್ತಿದ್ದ. ಋಷಿಗಳು, ರಾಕ್ಷಸರು ಸಹಿತ, ಸರ್ವೇಂದ್ರಿಯಗಳನ್ನೂ ನಿಗ್ರಹಿಸಿ, ಸರ್ವಸಂಗ ಪರಿತ್ಯಾಗಿಗಳಾಗಿ, ತಮ್ಮ ಕಾಯವನ್ನೇ ಮರೆತವರು ಸಹಿತ, ಈ ಶ್ಯಾಮಲವರ್ಣರನ್ನು ಕಂಡು ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಲಾರದೆ ಹೋಗುತ್ತಿದ್ದರು. ಅಂಥ ದಿವ್ಯಾವತಾರಗಳ ಚರಿತ್ರೆ ಅದೆಷ್ಟು ದಿವ್ಯವೂ ಮಧುರವೂ ಆದುದೋ ನನಗೆ ವರ್ಣಿಸಲಸಾಧ್ಯ,'' ಎಂದು ಆನಂದಬಾಷ್ಪಗಳನ್ನು ಸುರಿಸಿದ. ಸ್ವಲ್ಪ ಹೊತ್ತು ಕಣ್ಣುಗಳನ್ನು ಮುಚ್ಚಿಕೊಂಡು ಆ ದಿವ್ಯ ರೂಪಗಳನ್ನು ಸ್ಮರಿಸುತ್ತ, ''ರಾಜಾ! ಕೇಳು! ರಾಮ ಚರಿತೆಯನ್ನು ಹೇಳ ಹೊರಟರೆ, ಕೃಷ್ಣ ಚರಿತೆಗೆ ಕಾಲ ಸಾಲದು. ಆದ್ದರಿಂದ ಅದನ್ನು ಸಂಕ್ಷೇಪವಾಗಿ ಹೇಳುತ್ತೇನೆ. ಅದರ ಪ್ರಧಾನ ವಿಷಯಗಳನ್ನು ಮಾತ್ರ ಹೇಳಬೇಕೆಂದಿದ್ದೇನೆ.

ಸರಯೂ ನದೀ ತೀರದಲ್ಲಿ ಅಯೋಧ್ಯಾ ನಗರದಲ್ಲಿ ದಶರಥ ಕೌಸಲ್ಯೆಯರಲ್ಲಿ ಅವತರಿಸಿದ ಆ ರಾಮಚಂದ್ರ, ಮಿಥಿಲಾಧಿಪತಿಯಾದ ಜನಕ ಮಹಾರಾಜನ ಪುತ್ರಿಯಾದ ಸೀತೆಯನ್ನು ಮದುವೆಯಾದದ್ದು, ಪಿತ್ರಾಜ್ಞೆ ಪರಿಪಾಲನೆಗಾಗಿ ತಮ್ಮನಾದ ಲಕ್ಷ್ಮಣನೊಂದಿಗೆ ಮತ್ತು ಪ್ರಾಣಪ್ರಿಯೆಯಾದ ಸೀತೆಯೊಂದಿಗೆ ವನಕ್ಕೆ ತೆರಳಿದ್ದು, ಅಲ್ಲಿ ದಶಮುಖನಾದ ರಾವಣ ಸೀತೆಯನ್ನು ಅಪಹರಿಸಿದ್ದು, ನಂತರ ಸೀತಾನ್ವೇಷಣೆ, ವಾಲಿ ಸಂಹಾರ, ಸುಗ್ರೀವ ಹನುಮಂತರ ಸಹಾಯದಿಂದ ಸೀತೆ ಯನ್ನು ಹುಡುಕಿದ್ದು, ರಾವಣನನ್ನು ಕೊಂದು ಸೀತೆಯನ್ನು ಅಯೋಧ್ಯಗೆ ಕರೆ ತಂದದ್ದು, ಇದರಲ್ಲಿ ಪ್ರಧಾನವಾದ ಕೆಲವು ಘಟ್ಟಗಳನ್ನು ಮಾತ್ರ ವಿವರವಾಗಿ ಹೇಳುತ್ತೇನೆ.

ಶ್ರೀರಾಮಚಂದ್ರನ 'ಸೌಮ್ಯತೆ'ಯನ್ನು ವಿವರಿಸುತ್ತೇನೆ ಕೇಳು. ರಾಜಾ! ಶ್ರೀ ರಾಮ, ಎಲೆಹಸಿರು ಬಣ್ಣದ ವಸ್ತ್ರ ಧರಿಸಿ, ರೇಷ್ಮೆ ಪೀತಾಂಬರ ಉಟ್ಟು, ಬಂಗಾರದ ಕಿರೀಟ ಧರಿಸಿ, ಸಂತೋಷದಿಂದ ನೆಲವನ್ನು ನೋಡುತ್ತಾ ನಡೆಯುತ್ತಿದ್ದುದನ್ನು ನೋಡಿದರೆ ಹೃದಯ ಅರಳುತ್ತಿತ್ತು. ರಾಜಾ! ಶ್ರೀ ರಾಮಚಂದ್ರ ತಲೆಯೆತ್ತಿ ಇತರ ರನ್ನು ನೋಡಿದ್ದನ್ನೇ ಯಾರೂ ಕಂಡಿರಲಿಲ್ಲ. ಅವನದು ಯಾವಾಗಲೂ ಒಳದೃಷ್ಟಿ, ಹೊರದೃಷ್ಟಿಯಲ್ಲ. ಯಾರಾದರೂ ಅವನಿಗೇನನ್ನಾದರೂ ಅರ್ಪಿಸಿದರೆ, ಅದನ್ನು ಪೂರ್ತಿಯಾಗಿ ತೆಗೆದುಕೊಳ್ಳದೆ ಅವರ ತೃಪ್ತಿಗಾಗಿ ಸ್ವಲ್ಪ ತೆಗೆದು ಕೊಳ್ಳುತ್ತಿದ್ದ. ಇಲ್ಲವೆ, ಕೈಗಳಿಂದ ಮುಟ್ಟಿ ಹಿಂದಕ್ಕೆ ಕೊಟ್ಟು ಬಿಡುತ್ತಿದ್ದ. ಅತ್ತೆ ಮಾವಂದಿರೊಂದಿಗೆ ಸಹಿತ ಅಳಿಯನಂತಿರದೆ ಮಗನಂತೆ ವರ್ತಿಸುತ್ತಿದ್ದ. ತನ್ನ ತಮ್ಮಂದಿರ ಹೆಂಡತಿ ಯರೊಂದಿಗೆ, ಅವರ ದಾಸಿಯರೊಂದಿಗೆ ಕೂಡ ತಲೆಯೆತ್ತಿ ಮಾತನಾಡುತ್ತಿರಲಿಲ್ಲ. ಅವರನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ.

ತನಗಿಂತ ಹಿರಿಯ ಹೆಂಗಸರನ್ನೆಲ್ಲಾ ಕೌಸಲ್ಯೆಯಂತೆ ತಾಯಿಯರೆಂದು ತಿಳಿ ಯುತ್ತಿದ್ದ. ಕಿರಿಯರನ್ನು ತಂಗಿಯರಂತೆ, ಸಮವಯಸ್ಕರನ್ನು ಚಿಕ್ಕ ತಾಯಿಯರಂತೆ ಕಾಣುತ್ತಿದ್ದ. ಅವನು ಸತ್ಯ ವಾಕ್ಯ ಪರಿಪಾಲಕ. ತನ್ನ ತಂದೆಯ ಮಾತುಗಳನ್ನು ನಡೆಸದಿದ್ದರೆ ವಂಶಕ್ಕೇ ಅಪಕೀರ್ತಿ ಬರುವುದೆಂದು ಭಾವಿಸಿದ. ತಂದೆಯ ಗೌರವ ವನ್ನು ಕಾಪಾಡುವುದಕ್ಕಾಗಿ, ಅವನ ಮಾತುಗಳನ್ನು ನಡೆಸುವುದಕ್ಕಾಗಿ, ಅವನು ಕಾಡಿಗೆ ಹೋಗೆಂದು ಹೇಳುವ ಮೊದಲೇ ಚಿಕ್ಕಮ್ಮನಿಂದ ವಿಷಯವನ್ನು ತಿಳಿದು, ಮರುಮಾತಾಡದೆ, ರಾಜ್ಯಭಾರದ ಅಧಿಕಾರವನ್ನು ತ್ಯಾಗಮಾಡಿ ಅರಣ್ಯಕ್ಕೆ ಹೊರಟ. ಆಡುವ ಮಾತಿಗೂ ಮಾಡುವ ಕೆಲಸಕ್ಕೂ ಯಾವ ವ್ಯತ್ಯಾಸವೂ ಇಲ್ಲದಂತೆ ವರ್ತಿಸುತ್ತಿದ್ದ.

ಶ್ರೀರಾಮಚಂದ್ರ ದಯಾರ್ದ್ರ ಹೃದಯಿ, ಶರಣಾಗತ ವತ್ಸಲ. ರಾಮ ರಾವಣ ಯುದ್ಧ ಸಮಯದಲ್ಲಿ, ವಾನರರೂ ರಾಕ್ಷಸರೂ ಯುದ್ಧ ಮಾಡುತ್ತಿದ್ದಾಗ, ವಾನರರ ಹೊಡೆತ ತಾಳಲಾರದೆ ರಾವಣನ ದೂತರು ಕೋತಿಗಳಾಗಿ ವಾನರರ ಗುಂಪಿನಲ್ಲಿ ಸೇರಿಕೊಂಡಿರುವುದನ್ನು ವಾನರರು ಪತ್ತೆಹಚ್ಚಿ, ಅವರನ್ನು ಅನೇಕ ವಿಧವಾಗಿ ಹಿಂಸಿಸಿ, ರಾಮನ ಬಳಿಗೆ ಕರೆತಂದಾಗ, ಅವರನ್ನು ಹತ್ತಿರಕ್ಕೆ ಬರಮಾಡಿಕೊಂಡು, 'ವಾನರರೇ! ಇವರನ್ನು ಹಿಂಸಿಸಬೇಡಿ. ಕಪಟ ವೇಷ ಧರಿಸಿದ್ದರೂ ನನಗೆ ಶರಣು ಹೋಗಿದ್ದಾರೆ. ಅವರು ಯಾರೇ ಇರಲಿ, ಶರಣು ಬಂದವರನ್ನು ರಕ್ಷಿಸುವುದೇ ನನ್ನ ದೀಕ್ಷೆ. ಅವರನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ. ನನ್ನಲ್ಲಿ ಶರಣು ಬಂದ ನೀವು ಅದೆಷ್ಟು ಧನ್ಯರೋ, ಅವರೂ ಅಷ್ಟೇ ಧನ್ಯರು. ನೀವು ನನಗೆಷ್ಟು ಪ್ರಿಯರೋ ಅವರೂ ನನಗೆ ಅಷ್ಟೇ ಪ್ರಿಯರು,' ಎಂದ. ತನ್ನ ಶತ್ರುವಾದ ರಾವಣನ ಸ್ವಂತ ಸೋದರ ವಿಭೀಷಣನನ್ನು ಸಹ ತನ್ನ ಸೋದರ ಲಕ್ಷ್ಮಣನಂತೆ ಹತ್ತಿರ ಇಟ್ಟುಕೊಂಡು ಆದರಿಸಿದ. ನಾನು ನಿನ್ನವನು ಎಂದು ಯಾರಾದರೂ ಒಮ್ಮೆ ಹೇಳಿದರೆ, ಎಂದೆಂದಿಗೂ ಸರಿಯೆ, ಅವನನ್ನು ನಾನು ಆಳುವೆನು ಎಂದು ರಾಮನು ಹೇಳಿದನು.

ಶ್ರೀರಾಮಚಂದ್ರ ಧರ್ಮವನ್ನು ಆಚರಿಸಿ, ಬೋಧಿಸಿ, ಧರ್ಮವನ್ನು ಸ್ಥಾಪಿಸಿದ. ಸಾಧು ಸಂರಕ್ಷಣೆ ಮಾಡಿದ. ಭಕ್ತರ ಬಾಧೆ ನಿವಾರಿಸಿ ಅವರನ್ನು ಹತ್ತಿರ ಕರೆದು ಕೊಂಡು ಧನ್ಯರನ್ನಾಗಿ ಮಾಡಿದ. ಶ್ರೀರಾಮಚಂದ್ರನಿಗೆ ಉಚ್ಚ, ನೀಚ ಭೇದಗಳಿಲ್ಲ. ಅವನು ಸರ್ವಶಾಸ್ತ್ರ ವಿಶಾರದ, ವೇದಶಾಸ್ತ್ರ ಪಾರಂಗತ.

ಅನೇಕ ಕರ್ಮಾಚರಣೆಗಳಿಂದ ಲೋಕವನ್ನು ಧರ್ಮಭೂಮಿಯಾಗಿ ಮಾರ್ಪಡಿ ಸಿದ ಪುಣ್ಯಪುರುಷ, ಶ್ರೀರಾಮಚಂದ್ರ. ಅಶ್ವಮೇಧಯಾಗವನ್ನು ಮಾಡಿ ಸಮಸ್ತ ಋಷಿಗಳಿಂದಲೂ ಸನ್ಮಾನಿತನಾದವನು. ಅವನ ದಯಾ ಪ್ರೇಮಗಳು ವರ್ಣನಾ ತೀತ. ನೀಚ ಪಕ್ಷಿಯೆನಿಸಿದ ಹದ್ದಿನ ಜಾತಿಗೆ ಸೇರಿದ ಜಟಾಯುವನ್ನು ತೊಡೆಯ ಮೇಲೆ ಹಾಕಿಕೊಂಡು ತನ್ನ ನೀಳವಾದ ಕೂದಲಿನ ರಾಶಿಯಿಂದ ಅದರ ಮೈಗೆ ಹತ್ತಿದ ಧೂಳನ್ನು ಒರೆಸಿ, ಮಗನಾದವನು ತನ್ನ ತಂದೆಯ ಅಂತ್ಯಕ್ರಿಯೆ ನಡೆಸು ವಂತೆ ಆ ಪಕ್ಷಿಯ ಅಂತ್ಯಕ್ರಿಯೆಗಳನ್ನು ನಡೆಸಿದ. ಕೋಮಲತೆ, ಸುಶೀಲತೆ, ಸೌಂದರ್ಯ, ಪ್ರೇಮಗಳು ರಾಮನ ಸ್ವರೂಪದಲ್ಲಿ ಹಾಸುಹೊಕ್ಕಾಗಿ ಬೆರೆತಿದ್ದುವು. ತನ್ನ ತಮ್ಮಂದಿರಾದ ಭರತ ಲಕ್ಷ್ಮಣ ಶತ್ರುಘ್ನರನ್ನು ಹೇಗೆ ಹತ್ತಿರ ಇಟ್ಟುಕೊಂಡು ಪ್ರೇಮದಿಂದ ಆದರಿಸುತ್ತಿದ್ದನೋ ಹಾಗೇ ವಾನರರನ್ನು ಕೂಡ ಪ್ರೇಮದಿಂದ ಆದರಿಸುತ್ತಿದ್ದ.

ರಾಮ, ಸಾಕ್ಷಾತ್ ಧರ್ಮದೇವಾವತಾರ. ಧರ್ಮವೇ ಆ ರೂಪವನ್ನು ಧರಿಸಿ ರುವುದೆಂದು ಋಷಿಗಳು ಕೂಡ ವರ್ಣಿಸಿದರು. ಲೋಕದಲ್ಲಿ ಸಾಮಾನ್ಯ ಗೃಹಸ್ಥ ರಾದವರೆಲ್ಲರಿಗೂ ಶ್ರೀ ರಾಮಚಂದ್ರನ ಆಚರಣೆ ಮಾರ್ಗದರ್ಶಿಯೆನ್ನಬಹುದು. ಲೋಕೋದ್ಧಾರಕ್ಕೆ ಅವತರಿಸಿದ ಆ ರಾಮಚಂದ್ರ ತಮ್ಮಂದಿರೊಂದಿಗೆ ಅದೆಷ್ಟು ಅನ್ಯೋನ್ಯತೆಯಿಂದ ವ್ಯವಹರಿಸುತ್ತಿದ್ದ! ಪಟ್ಟಾಭಿಷೇಕಕ್ಕೆ ಸಿದ್ಧನಾಗಿದ್ದ ಶ್ರೀರಾಮ ಚಂದ್ರನನ್ನು ಅರಣ್ಯಕ್ಕೆ ಕಳಿಸುವ ಸಮಯದಲ್ಲಿ ಅಯೋಧ್ಯಾವಾಸಿಗಳು ಅಷ್ಟೊಂದು ದುಃಖಪಟ್ಟರೇ ವಿನಾ, ಶ್ರೀರಾಮಚಂದ್ರನು ಪಟ್ಟಾಭಿಷೇಕಕ್ಕೆ ಎಷ್ಟು ಆನಂದದಿಂದ ಸಿದ್ಧನಾಗಿದ್ದನೋ ಅಷ್ಟೇ ಆನಂದದಿಂದ ಅರಣ್ಯಕ್ಕೆ ಹೋಗಲು ಸಿದ್ಧನಾದ. ಅವನ ಸ್ಥಿತಪ್ರಜ್ಞತೆಗೆ ಇದಕ್ಕಿಂತ ಬೇರೆ ಏನು ಆಧಾರ ಬೇಕು.

ಕೊಟ್ಟ ಮಾತು ಪ್ರಾಣಕ್ಕಿಂತ ಪ್ರಧಾನವೆಂದು ಭಾವಿಸಿ, ತಂದೆಯ ಮಾತನ್ನು ನಡೆಸಿಕೊಡುವುದಕ್ಕಾಗಿ ಎಂಥ ಬಾಧೆಯನ್ನೂ ಲೆಕ್ಕಿಸದೆ ಅದನ್ನು ನಡೆಸಿಕೊಟ್ಟ. ರಾಮನ ಪಿತೃವಾಕ್ಯ ಪರಿಪಾಲನೆ ಲೋಕದಲ್ಲಿ ಮಕ್ಕಳಿಗೆ ಆದರ್ಶ. ಮಗನಾದವನ ಕರ್ತವ್ಯ ಏನು ಎನ್ನುವುದನ್ನು ಅದು ತೋರಿಸುತ್ತದೆ.

ಪತಿಯೊಂದಿಗಿರುವುದೇ ಪತ್ನಿಯ ಜೀವಿತವೆಂದು ತಿಳಿದ ಆ ಭೂಜಾತೆ, ಎಂದೂ ಬಿಸಿಲು ಮಳೆ ಅನುಭವಿಸದಿದ್ದವಳು, ಆ ಭಯಂಕರ ಅರಣ್ಯದಲ್ಲಿ ಪತಿಯೊಂದಿಗೆ ಕಾಲ ಕಳೆದಳೆನ್ನುವುದು ಭಾರತ ನಾರೀಮಣಿಯರಿಗೆ ಎಂಥ ಆದರ್ಶ!

ಒಡಹುಟ್ಟಿದವರು ಪ್ರಧಾನವೇ ವಿನಾ, ಮಧ್ಯದಲ್ಲಿ ಬಂದ ಹೆಂಡತಿ ಅಲ್ಲ ಎಂದು ತಿಳಿದು ಲಕ್ಷ್ಮಣ ಊರ್ಮಿಳೆಯನ್ನು ಸಹ ಬಿಟ್ಟು ಶ್ರೀರಾಮನೊಂದಿಗೆ ಅರಣ್ಯಕ್ಕೆ ಹೋದ.

ಅಣ್ಣನ ಮಾತನ್ನು ಮೀರಲೊಲ್ಲದೆ ಭರತ ಭಾರವಾದ ಹೃದಯದಿಂದ ಅಯೋಧ್ಯೆಗೆ ಬಂದು ಪರೋಕ್ಷ ಅರಣ್ಯವಾಸವನ್ನು ಅನುಭವಿಸಿದ.

ಇನ್ನು ತಂದೆಯಾದ ದಶರಥನಿಗೂ ಮಗನಾದ ಶ್ರೀರಾಮಚಂದ್ರನಿಗೂ ಇರುವ ವ್ಯತ್ಯಾಸ ಭೂಮಿ ಆಕಾಶದಷ್ಟು. ದಶರಥ ಹೆಂಡತಿಯನ್ನು ಸಂತೋಷಪಡಿಸುವ ನಿಮಿತ್ತವಾಗಿ, ತೃಪ್ತಿಪಡಿಸುವ ಸಲುವಾಗಿ ಎಂಥ ಬಾಧೆಯನ್ನಾದರೂ ಸಹಿಸಲು ಸಿದ್ಧನಾದ. ಕೊನೆಗೆ ಸ್ವಂತ ಮಗನಾದ ರಾಮನನ್ನು ಸಹಿತ ಕಾಡಿಗೆ ಕಳಿಸಿದ. ರಾಮಚಂದ್ರನಾದರೋ ಸಾಮಾನ್ಯನಾದೊಬ್ಬ ಅಗಸರವನ ಮಾತಿಗೆ ಪ್ರಾಮುಖ್ಯತೆ ಕೊಟ್ಟು ಹೆಂಡತಿ ಸೀತೆಯನ್ನು ಕಾಡಿಗೆ ಕಳಿಸಿದ. ಪ್ರಜಾಧರ್ಮದ ವಿಷಯದಲ್ಲಿ ರಾಜರಾದ ಆ ತಂದೆ ಮಕ್ಕಳಿಬ್ಬರಲ್ಲಿ ಎಷ್ಟು ವ್ಯತ್ಯಾಸವಿತ್ತೆನ್ನುವುದನ್ನು ಯೋಚಿಸು.

ರಾಜಾ! ತಾನೇ ದೇಹವೆಂಬ ಭ್ರಾಂತಿಯಿಂದ ದಶರಥನು ಕುಗ್ಗಿದರೆ, ಆತ್ಮಜ್ಞಾನದಿಂದ ರಾಮನು ನಿರ್ಲಿಪ್ತನಾಗಿದ್ದ. ಅಬ್ಬಾ! ಶ್ರೀರಾಮಚಂದ್ರನ ಗುಣಗಳನ್ನು ವರ್ಣಿಸಲು ಸಾಧ್ಯವಿಲ್ಲ. ಅಂಥ ಪರಮಪುರುಷನ ಚಿಂತನೆಗಿಂತ ಹೆಚ್ಚಿನ ಪುರುಷಾರ್ಥ ಮತ್ತೊಂದಿದೆಯೇ? ಅವತಾರ ಪುರಷರ ಲೀಲೆಗಳನ್ನು ಶ್ರವಣ ಮಾಡಿದರೆ ಸಾಕು, ಸರ್ವ ಪಾಪಗಳೂ ನಾಶವಾಗುವುವು," ಎಂದು ಶುಕ ಆನಂದ ಬಾಷ್ಪಗಳನ್ನು ಸುರಿಸಿದ.

ಪರೀಕ್ಷಿತ್ ಮಹಾರಾಜ ವಿಕಸಿತ ವದನನಾಗಿ, "ಸ್ವಾಮೀ! ಧರ್ಮಸ್ವರೂಪನಾದ ರಾಮಚಂದ್ರನ ಗುಣಗಳೇ ಇಷ್ಟು ಆನಂದ ಉಂಟುಮಾಡುತ್ತಿರುವಲ್ಲಿ, ಪೂರ್ತಿ ಲೀಲಾಮಾನುಷ ವಿಗ್ರಹನಾದ ಆ ಶ್ಯಾಮಸುಂದರನ ಹುಡುಗಾಟಿಕೆಯ ಚೇಷ್ಟೆ ಗಳಿಂದ ಕೂಡಿದ, ಅಂತರಾರ್ಥದಿಂದ ಕೂಡಿದ ಆ ಆಟಪಾಟ ಮಾತುಗಳಿನ್ನೆಷ್ಟು ಮಧುರವಾಗಿರುವುವೋ! ಆ ಗೋಪಾಲನ ಲೀಲಾಗುಣ ವಿಶೇಷಗಳನ್ನು ತಿಳಿಸಿ ನನ್ನ ಉಳಿದಿರುವ ಆಯುಷ್ಕಾಲವನ್ನು ಆ ಶ್ಯಾಮಸುಂದರನಲ್ಲಿ ಲಯಗೊಳಿಸಿ, ಜನ್ಮ ಸಾರ್ಥಕ ಮಾಡಿ!" ಎಂದು ಪ್ರಾರ್ಥಿಸಿದ. ಶುಕ ನಗುತ್ತಾ, "ಮಹಾರಾಜಾ! ಆ ಗೋಪಾಲ ಬಾಲನ ಲೀಲೆಗಳು ನಿಜವಾಗಿ ನೀನು ಹೇಳಿದಂತೆ ಮಹಾದ್ಭುತಗಳು. ಮಾಧುರ್ಯದಿಂದ, ಭಾವ ಗಾಂಭೀರ್ಯದಿಂದ ಕೂಡಿದವುಗಳೇ ಹೊರತು, ಬಾಹ್ಯಾಡಂಬರದಿಂದ ಕೂಡಿದವುಗಳಲ್ಲ. ಲೋಕದ ಜನ ಬರೀ ಬಾಹ್ಯವನ್ನೇ ನೋಡುವರು. ಆದ್ದರಿಂದ ಕೃಷ್ಣನ ಚೇಷ್ಟೆಗಳನ್ನು ಸರ್ವಸಾಮಾನ್ಯವಾದುವೆಂದೂ ಕೆಲವನ್ನು ಅಸಭ್ಯವಾದುವೆಂದೂ ಭಾವಿಸುವರು. ಅವತಾರಗಳ ಅಂತರಾರ್ಥಗಳು ಎಲ್ಲರಿಗೂ ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ. ಅವತಾರಗಳು ಅರ್ಥ ಇಲ್ಲದ ಕಾರ್ಯಗಳನ್ನು ಮಾಡುವುದಿಲ್ಲ. ಲೋಕೋದ್ಧಾರ ನಿಮಿತ್ತವಾಗಿ ವೇದೋದ್ಧರಣ ನಿಮಿತ್ತವಾಗಿ, ಅವರವರ ಪೂರ್ವಜನ್ಮ ಪುಣ್ಯಪರಿಪಾಕಗಳನ್ನು ಗಣನೆಗೆ ತೆಗೆದು ಕೊಂಡು, ಆಯಾ ಕಾಲ ದೇಶ ಪಾತ್ರಗಳನ್ನನುಸರಿಸಿ ಅನುಗ್ರಹಿಸುವ ಅವತಾರಗಳ ಲೀಲಾ ವಿಶೇಷಗಳಿಗೆ ಯಾರು ಸರಿಯಾದ ಅರ್ಥ ಊಹಿಸಬಲ್ಲರು?

ಹರಿಯ ವಿಚಿತ್ರ ಲೀಲೆ ಹರಿಗೇ ಗೊತ್ತು ಎನ್ನುವಂತೆ, ಅವನದು ಅವನಿಗೇ ಹೊರತು ಅನ್ಯರಿಗೆ ಅರ್ಥವಾಗುವುದಿಲ್ಲ. ಆದರೆ ಒಂದು ಮಾತ್ರ ನಿಜ. ಅವತಾರ ಪುರುಷರು ತಮ್ಮ ಸ್ವಂತ ಅಭೀಷ್ಟ ಪೂರೈಕೆಗಾಗಿ ಯಾವ ಕೆಲಸವನ್ನೂ ಮಾಡು ವುದಿಲ್ಲ! ಸಮಸ್ತ ಕರ್ಮಗಳನ್ನೂ ಲೋಕ ನಿಮಿತ್ತವಾಗಿಯೇ ಸಂಕಲ್ಪಿಸುವರು! ತಮಗೂ ಲೋಕಕ್ಕೂ ಯಾವ ಸಂಬಂಧವೂ ಇಲ್ಲ ಎನ್ನುವಂತೆ ಪ್ರವರ್ತಿಸುವರು. ತಾವು ಇಲ್ಲದೆ ಲೋಕವೇ ಇಲ್ಲ! ಸರ್ವಸಾಮಾನ್ಯವಾಗಿ ಅವರು ಮಾಡುವ ಎಲ್ಲ ಕೆಲಸಗಳಲ್ಲೂ ಕೂಡ ಸ್ವಾರ್ಥರಹಿತ ಉದ್ದಿಶ್ಯವೇ ಇರುತ್ತದೆ. ಲೋಕವನ್ನೇ ತಮ್ಮ

ಹಸ್ತದಲ್ಲಿಟ್ಟುಕೊಂಡ ಮಹಾನುಭಾವರಿಗೆ ಲೋಕದಿಂದ ಆಗಬೇಕಾದದ್ದಾದರೂ ಏನಿದೆ?

ಮೂರ್ಖರು, ವಿಶ್ವಾಸಹೀನರು, ನಾಸ್ತಿಕರು, ಅಜ್ಞಾನಿಗಳು, ತಿಳಿವಳಿಕೆ ಇಲ್ಲದೆ ಇರುವವರು ಅವರ ಕರ್ಮಗಳನ್ನು ಸ್ವಾರ್ಥಕರ್ಮಗಳೆಂದು, ವ್ಯಾಮೋಹ ಕೃತ್ಯಗಳು ಎಂದು ತಿಳಿಯುವರೇ ವಿನಾ, ನಿಜವಾದ ಭಕ್ತರು ಅವುಗಳನ್ನು ಲೀಲೆಗಳೆಂದು ಭಾವಿಸುವರು. ಅಮೇಯನಾದವನ ಅಳತೆಯನ್ನು ಅವರು ಹೇಗೆ ತಾನೆ ತಿಳಿಯ ಬಲ್ಲರು?

ಮಹಾರಾಜ! ಕೋಸಲೇಂದ್ರನ ಲೀಲೆಗಳಿಗೂ ಕೃಷ್ಣನ ಚರ್ಯೆಗಳಿಗೂ ಪೂರಾ ವಿರುದ್ಧ! ದೈತ್ಯದಾನವರಿಂದ ಲೋಕ ಪೀಡಿಸಲ್ಪಟ್ಟ ಸಮಯದಲ್ಲಿ ಲೋಕದ ಭಾರ ಇಳಿಸಲು, ತಲೆಯಲ್ಲಿನ ಕಪ್ಪು ಬಿಳುಪು ಕೂದಲಿನಂತೆ, ಕೃಷ್ಣ ಬಲರಾಮರು ಕಪ್ಪು ಬಿಳುಪು ರೂಪ ಧರಿಸಿ ಬಂದು ನಮ್ಮ ಬುದ್ಧಿಗೆ ಅತೀತವಾದ ಕರ್ಮಗಳನ್ನೆಸಗಿದರು.

# ೩೩ ಕೃಷ್ಣಾವತಾರ

ಕೃಷ್ಣನ ಲೀಲೆಗಳನ್ನು ಯಾರೂ ತಿಳಿಯಲಾರರು! ಅವನ ನಡೆ, ನುಡಿ, ನಗೆ, ಹಾವ, ಭಾವ, ಹಾಡು ಎಲ್ಲವೂ ವಿಚಿತ್ರ ಕಳೆಯಿಂದ ಕೂಡಿರುತ್ತಿತ್ತು. ಅವು ಕೃತ್ರಿಮವಾಗಿ, ಕೆಲವೊಮ್ಮೆ ಪೋಕರಿ ಕೃತ್ಯಗಳಾಗಿ ಕಾಣುತ್ತಿದ್ದುವು. ಅವನು ಪೂರ್ವ ದಿಕ್ಕನ್ನು ನೋಡುತ್ತಿರುವವನಂತೆ ತೋರಿಸಿಕೊಳ್ಳುತ್ತಾ ಪಶ್ಚಿಮ ದಿಕ್ಕನ್ನು ನೋಡುತ್ತಿದ್ದ! ಕಣ್ಣುಗಳಲ್ಲೇ ಮಾತನಾಡುತ್ತಿದ್ದ. ಕಣ್ಸನ್ನೆಯಲ್ಲೇ ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದ. ಮನುಷ್ಯರ ಇತಿ ಮಿತಿಗಳ ಪರಿವೆ ಇರುತ್ತಿರಲಿಲ್ಲ. ಹಳತು ಹೊಸದೆನ್ನುವ ಭೇದವಿರುತ್ತಿರಲಿಲ್ಲ. ಎಲ್ಲಿ ಹೋದರೂ ಏನಾದರೊಂದು ವಿಚಿತ್ರ ಪರಿಸ್ಥಿತಿಯನ್ನು ಉಂಟುಮಾಡುತ್ತಿದ್ದ. ಸಮುದ್ರದಲ್ಲಿ ಅಲ್ಲಕಲ್ಲೋಲ ಎಬ್ಬಿಸುವ ಚಂಡಮಾರುತದಂತೆ ಅವನು ಹೋದಲ್ಲೆಲ್ಲಾ ಕೋಲಾಹಲ, ಕಲಹ, ಕಣ್ಣೀರುಗಳನ್ನು ಹುಟ್ಟಿಸುತ್ತಿದ್ದ.

ಯಾವ ಮನೆಗೆ ಹೋಗಲಿ, ಮನೆಯವರು ಮಣೆ ಹಾಕಿ ಅವನನ್ನು ಒಳಗೆ ಕರೆಯಬೇಕಾದದ್ದೇ ಇಲ್ಲ. ತನ್ನ ಸ್ವಂತ ಮನೆ ಎನ್ನುವಂತೆ ಹೋಗಿ, ಒಳಗೆ

ಓಡಾಡಿ ಬುಟ್ಟಿಯೊಳಗೋ ಮಡಕೆಯಲ್ಲೋ ಎಲ್ಲಿ ತಿಂಡಿ ಬಚ್ಚಿಟ್ಟಿದ್ದರೂ ಸರಿ, ನಿರ್ಭಯವಾಗಿ ಹುಡುಕಿ ತಿಂದು ಹೊರಡುತ್ತಿದ್ದ.

ಎಲ್ಲರಿಗೂ ಅವನು ಪ್ರೀತಿಯ ಬಂಧುವೇ! ತಾನು ತಿನ್ನುವುದಲ್ಲದೆ ತನ್ನ ಜೊತೆ ಬಂದ ಹುಡುಗರೆಲ್ಲರಿಗೂ ಹಂಚುವುದು ಬೇರೆ! ಮನೆಯವರು ಬೊಬ್ಬೆ ಇಡುತ್ತಿದ್ದರೂ ಲೆಕ್ಕಿಸದೆ ದಾನ ಧರ್ಮ ಮಾಡುತ್ತಿದ್ದುದು ಬೇರೆ! ಅವನ ಆಟ ಪಾಟಗಳಿಗೆ ಅಡ್ಡಿಯೇ ಇಲ್ಲ. ಯಾರಾದರೂ ಧೈರ್ಯಮಾಡಿ ಅವನನ್ನು ಬೈದರೆ, ಅವರಿಗೆ ಕೊಡುತ್ತಿದ್ದ ಹಿಂಸೆ ಅಷ್ಟಿಷ್ಟಲ್ಲ.

ಆದರೆ, ಅವನು ಮಾಡುತ್ತಿದ್ದ ಪ್ರತಿ ಸಣ್ಣ ಕೆಲಸದಲ್ಲೂ ಮಾಧುರ್ಯ ತುಂಬಿರುತ್ತಿತ್ತು. ಇತರರಿಗೆ ಕೊಡುತ್ತಿದ್ದ ಶಿಕ್ಷೆ ಕೂಡ ಅವರಿಗೆ ಅದೇನೋ ಒಂದು ಬಗೆಯ ಸಿಹಿಯಾಗಿಯೇ ಇರುತ್ತಿತ್ತು. ಯಾರಿಗೂ ಅವನ ಮೇಲೆ ಕೋಪವೇ ಬರುತ್ತಿರಲಿಲ್ಲ. ಎಲ್ಲರಿಗೂ ಇನ್ನಷ್ಟು ಅವನೊಂದಿಗೆ ಆಡಬೇಕು, ಮಾತಾಡಬೇಕು, ಇರಬೇಕೆಂದೇ ಅನಿಸುತ್ತಿತ್ತು. ಆದ್ದರಿಂದ ಅವನು ಎಷ್ಟೇ ಬಾಧೆ ಕೊಡಲಿ, ಹಾಸ್ಯ ಮಾಡಲಿ ಅವನ ಮೇಲೆ ಕೋಪ ಬರುತ್ತಿರಲಿಲ್ಲ.

ಇದಕ್ಕೆ ಕಾರಣ, ಅವನಲ್ಲಿದ್ದ ಪ್ರೇಮ. ಬಹು ಕೋಪದಿಂದ ಅವನನ್ನು ಹೊಡೆಯಲು ಹೋದ ಗೋಪಿಯರು ಕೂಡ, ಅವನನ್ನು ನೋಡಿದಾಕ್ಷಣ ಪ್ರೇಮ ಹೃದಯಿಗಳಾಗಿ ಅವನನ್ನು ಸ್ತುತಿಸುತ್ತಾ ಹಿಂತಿರುಗುತ್ತಿದ್ದರು. ಅವನು ಏನೇ ಮಾಡಲಿ ಅದೊಂದು ಲೀಲೆಯೇ ಆಗುತ್ತಿತ್ತು.

ಇನ್ನು, ಅವನ ಮಾತುಗಳೋ ಎಲ್ಲಾ ಠಕ್ಕು! ಎಲ್ಲರ ಎದುರಿಗೆ ಮಣ್ಣು ತಿಂದು, ಅಮ್ಮ ಗದರಿಸಿದಾಗ ಇಲ್ಲ ಎನ್ನುತ್ತಾ ನಾಲಿಗೆ ಚಾಚುವನು. ಎಲ್ಲರ ಮಾತನ್ನೂ ಅಸತ್ಯ ಮಾಡಿ, ತನ್ನ ಅಸತ್ಯವನ್ನು ಸತ್ಯಮಾಡುವನು. ಪ್ರತಿ ದಿನವೂ ವೃಷಭಾಪುರಕ್ಕೆ (ರಾಧೆ ಇರುವ ಗ್ರಾಮ) ಹೋಗುತ್ತಿದ್ದ. ಅದನ್ನು ದಾರಿಯಲ್ಲಿ ಎಷ್ಟೋ ಜನ ನೋಡುತ್ತಿದ್ದರು. ತಾಯಿ ಕರೆದು, ಯಾಕೋ ದಿನವೂ ಅಷ್ಟು ದೂರ ನಡೆದು ಹೋಗುವುದು? ಆಟ ಆಡಬೇಕಾದರೆ ಇಲ್ಲಿ ಹುಡುಗರಿಲ್ಲವೇನೋ ಎಂದು ಗದರಿಸಿದರೆ, ಆ ಗ್ರಾಮದ ದಾರಿಯೇ ತನಗೆ ತಿಳಿಯದೆನ್ನುವನು. ಎಲ್ಲರ ಮನೆಯಲ್ಲೂ ಏನಾದರೂ ಗೊಂದಲ ಎಬ್ಬಿಸಿ, ಅತ್ತೆ ಸೊಸೆಯರ ನಡುವೆ ಜಗಳ ತಂದಿಟ್ಟು ತಾನು ಮಧ್ಯೆ ನಗುತ್ತಿದ್ದ. ಬೆಳಿಗ್ಗೆಯಿಂದ ರಾತ್ರಿ ಮಲಗುವವರೆಗೆ, ಒಂದು ನಿಮಿಷ ಕೂಡ ಕಾಲುಗಳು ಒಂದು ಕಡೆ ಇರುತ್ತಿರಲಿಲ್ಲ. ನಿರಂತರವೂ ಮನೆ ಮನೆ ತಿರುಗುವುದೇ ಅವನ ಕೆಲಸ.

ಇಷ್ಟಾದರೂ ಗ್ರಾಮವಾಸಿಗಳಿಗೆ ಕೃಷ್ಣನನ್ನು ನೋಡದೆ ಒಂದು ನಿಮಿಷ ಕೂಡ ಇರಲಾಗುತ್ತಿರಲಿಲ್ಲ. ತಮ್ಮ ಮನೆಯ ಕಡೆ ಕೃಷ್ಣ ಬರದಿದ್ದರೆ ಆ ದಿನವೆಲ್ಲಾ ಗೋಪಿಯರು ಕಿಟಕಿಯಲ್ಲಿ ನೋಡುತ್ತಾ ಅವನ ನಿರೀಕ್ಷಣೆಯಲ್ಲಿರುತ್ತಿದ್ದರು. ಇದೇ ಭಗವಂತನ ಮಧುರ ಪ್ರೇಮದ ಮರ್ಮ. ಅವನ ಚೇಷ್ಟೆಗಳು ಅತಿ ಮಧುರ. ಅಂತರಾರ್ಥದಿಂದ ತುಂಬಿದವು.

ನಿಜವಾದ ಯುಕ್ತಿಶಾಲಿ ಆ ನೀಲವರ್ಣ ಕೃಷ್ಣ. ಮೇಲು ಮೇಲಿನ ಕಪಟದ ಮಾತುಗಳಿಗೆ ಮರುಳಾಗದವನು, ಬಗ್ಗದವನು. ಹಾಗಲ್ಲದಿದ್ದರೆ, ಹಾಲು ಕೊಡುವ ನೆಪದಿಂದ ತಾಯಿ ರೂಪದಲ್ಲಿ ಬಂದ ಪೂತನಿಯೊಂದಿಗೆ ಮಗನಂತೆ ನಟಿಸಿ, ಅವಳ ಪ್ರಾಣ ಹೀರಿ ನೆಲಕ್ಕುರುಳಿಸುತ್ತಿರಲಿಲ್ಲ. ರಾಕ್ಷಸರು ಅನೇಕ ಕಪಟ ರೂಪಗಳನ್ನು ಧರಿಸಿ, ಗೋಪಿಕಾ ಗೋಪಾಲರ ರೂಪಗಳನ್ನು ಧರಿಸಿ ಬಂದರೂ, ಅವರ ನಿಜ ರೂಪವನ್ನು ಗುರ್ತಿಸಿ ಕ್ಷಣದಲ್ಲಿ ಯಮಪುರಿಗೆ ಕಳಿಸುತ್ತಿದ್ದ. ಒಬ್ಬ ರಾಕ್ಷಸ, ಕರುವಿನ ರೂಪ ಧರಿಸಿ ಕೃಷ್ಣನ ದನಕರುಗಳ ಮಧ್ಯೆ ಸೇರಿಕೊಂಡು ಅವನನ್ನು ಕೊಲ್ಲಲು ಹೊಂಚುಹಾಕುತ್ತಾ ತಿರುಗುತ್ತಿದ್ದಾಗ, ಮೂರು ವರ್ಷದ ದಿವ್ಯ ಹಸುಳೆ, ಕೃಷ್ಣ, ಅದನ್ನು ಗುರುತಿಸಿ, ಗಿರ್ರನೆ ತಿರುಗಿಸಿ, ಒಂದೇ ಏಟಿನಿಂದ ಹೊಡೆದು ಕೊಂದ.

ಇಂಥ ಶಕ್ತಿ ಸಾಮರ್ಥ್ಯ ಆ ಬಾಲ ರೂಪಕ್ಕೆ ಅದೆಷ್ಟು ವಿರುದ್ಧವಾದುದು. ಆದರೂ ಇಂಥ ಅಮಾನುಷ ಕೃತ್ಯಗಳನ್ನು ಕೋಟಿ ವಿಧಗಳಲ್ಲಿ ಪ್ರಕಟಿಸುತ್ತಿದ್ದ, ಕಪಟ ಹೃದಯಿಗಳನ್ನು ಅವರು ಸ್ತ್ರೀ ಬಾಲ ವೃದ್ಧರಾಗಲೀ ತನ್ನವರೇ ಆಗಲೀ ಲೆಕ್ಕಿಸದೆ ಸಂದಿಗ್ಧದಲ್ಲಿ ಸಿಕ್ಕಿಸಿ, ಅವರ ಬೆನ್ನು ಮೂಳೆ ಪಕ್ಕೆಲುಬು ಮುರಿಯುತ್ತಿದ್ದ, ಬುದ್ಧಿ ಕಲಿಸುತ್ತಿದ್ದ. ಮಹಾ ಪರಾಕ್ರಮ ಶಕ್ತಿ ಸಂಪನ್ನನಾದ ತನ್ನ ಮಾವನನ್ನು ಕ್ಷಣಾರ್ಧ ದಲ್ಲಿ ಜುಟ್ಟು ಹಿಡಿದು ಕೆಳಕ್ಕೆ ಹಾಕಿ, ಕೊಂದು, ಯಮುನಾ ತೀರದವರೆಗೂ ಪೇಟೆಯಲ್ಲಿ ಎಳೆದುಕೊಂಡು ಹೋದ. ಮಥುರಾಪುರ ವಾಸಿಗಳಿಗೆ ಈ ಬಾಲಕನ ಚರ್ಯೆಗಳು ಆಶ್ಚರ್ಯಾದ್ಭುತವಾಗಿ, ಮಧುರ, ಸುಂದರ, ಸುಲಲಿತ, ಸಾಹಸಗಳಾಗಿದ್ದವು.

ಬಾಲ್ಯದಲ್ಲೇ ಪೂತನಿ, ತೃಣಾವರ್ತ ಮತ್ತು ಶಕಟಾಸುರರನ್ನು ಹತಮಾಡಿದ. ಆಗಿನ್ನೂ ಬೆಣ್ಣೆ ಕದ್ದು ತಿನ್ನುತ್ತಿದ್ದ ಬಾಲಕ ಅವನು! ಕೋಪದಿಂದ ತಾಯಿ ಒರಳಿಗೆ ಕಟ್ಟಿಹಾಕಿದಾಗ ಯಮಳಾರ್ಜುನ ವೃಕ್ಷಗಳ ಮಧ್ಯೆ ಹೋಗಿ ಅವುಗಳನ್ನು ಉರುಳಿಸಿದ. ಯಮುನಾ ನದಿಯನ್ನು ವಿಷಮಯವಾಗಿ ಮಾಡಿದ ಕಾಳಿಂಗನ ಮರ್ದನ ಮಾಡಿದ; ಗೋಪಿಯರನ್ನು ರಕ್ಷಿಸಿದ; ತಾಯಿ ಸೊಂಟಕ್ಕೆ ಹಗ್ಗ ಕಟ್ಟಿದಾಗ, ತನ್ನ ಬ್ರಹ್ಮಾಂಡಾಕಾರವನ್ನು ತೋರಿಸಿ, ತಂದೆಗೂ ತಾಯಿಗೂ ಗೋಕುಲವಾಸಿಗ

ಳಿಗೂ ಪರಮಾಶ್ಚರ್ಯವುಂಟು ಮಾಡಿದ; ಆಕಳಿಸಿದಾಗ ಅಂಡಾಂಡ, ಪಿಂಡಾಂಡ, ಬ್ರಹ್ಮಾಂಡ ಬಾಯಲ್ಲಿ ತೋರಿಸಿದ.

ತನ್ನ ಪ್ರಿಯ ಗೋಪ ಗೋಪಿಯರಿಗೆ ತನ್ನ ದಿವ್ಯ ಗೋಲೋಕ ವೈಕುಂಠ ತೋರಿಸಿದ. ನಂದನಿಂದ ಗಿರಿಪೂಜೆ ಮಾಡಿಸಿ, ಇಂದ್ರಪೂಜೆ ಮಾಡದಂತೆ ತಡೆದು, ಇಂದ್ರನಿಗೆ ಕೋಪಬರುವಂತೆ ಮಾಡಿದ. ಇಂದ್ರ ಕೋಪಗೊಂಡು ಸುರಿಸಿದ ಕಲ್ಲು ಮಳೆಯಿಂದ ಗೋಕುಲವಾಸಿಗಳನ್ನು ರಕ್ಷಿಸಲು ತನ್ನ ಕಿರುಬೆರಳಿನಿಂದ ಪರ್ವತವನ್ನು ಎತ್ತಿ ಗೋಕುಲವಾಸಿಗಳನ್ನೂ ಗೋಪುರಗಳನ್ನೂ ರಕ್ಷಿಸಿದ.

ಗೋಪ ಗೋಪಿಯರೊಂದಿಗೆ ವಿಧವಿಧದ ಆಟಗಳನ್ನು ಆಡಿ, ಹಾಡುಗಳನ್ನು ಹಾಡಿ, ಅವರನ್ನು ಪ್ರೇಮೋನ್ಮತ್ತರನ್ನಾಗಿ ಮಾಡುತ್ತಿದ್ದ. ಇವೆಲ್ಲವನ್ನು ನೀಚವೃತ್ತಿ ಎಂದು ಭಾವಿಸುವುದು ಬುದ್ಧಿ ಹೀನತೆಯಲ್ಲವೇ?

ಗೋಪಿಯರೊಂದಿಗೆ ರಾಸಕ್ರೀಡೆಯನ್ನು ಆಡಿದ್ದು ಜಾರತ್ವವೆಂದು ತಿಳಿಯಲು ಆಧಾರವೇ ಇಲ್ಲ. ಮೂರು ವರ್ಷಗಳ ಕಾಯದ ಬಾಲಕ, ಗೋಪಿಯರೊಂದಿಗೆ ಹೇಗೆ ಆಡಿದರೂ ಅದು ಲೋಕವಿರುದ್ಧವಾದ ನಡವಳಿಕೆಯಾಗದು. ಹಾಗೆ ತಿಳಿಯುವುದು ಅರ್ಥವಿಲ್ಲದ ಊಹೆ! ಗುಣಾತೀತನಾದ ಗೋಪಾಲನಿಗೆ ಗುಣವು ಇದ್ದರೆ ತಾನೆ ಈ ಕೃತ್ಯಗಳನ್ನು ಅನುಭವಿಸುವುದು. ಗುಣವೇ ಇಲ್ಲದ ಅನಂತ ಸ್ವರೂಪನಿಗೆ ಅಣು ಮಾತ್ರದ ಈ ಲೀಲೆಗಳು, ಗೋಪ ಗೋಪಿಯರನ್ನು ತೃಪ್ತಿ ಪಡಿಸುವ ನೆಪದ ಕೃತ್ಯಗಳೆಂದೇ ಅನ್ನಬಹುದು. ಅವರ ಜನ್ಮಾಂತರ ಪುಣ್ಯ ವಿಶೇಷಗಳ ವರಪ್ರಸಾದವೆನ್ನುವಂತೆ ಅವರ ಆಸೆಗಳನ್ನು ತೀರಿಸುತ್ತಿದ್ದನೇ ವಿನಾ ಬೇರೆಯಲ್ಲ.

ಮಾಯಾ ಮಾನುಷ ರೂಪಿಯಾದ ಆ ಗೋಪಾಲ ಮಾನವ ಮಾತ್ರನೆಂದು ತಿಳಿದರಲ್ಲವೇ ಈ ಎಲ್ಲ ಕೃತ್ಯಗಳನ್ನೂ ಜಾರತ್ವ, ಚೋರತ್ವ ಎನ್ನುವುದು? ಹೋಗಲಿ, ಮಾನವನೆಂದೇ ತಿಳಿದರೂ, ಸಾಮಾನ್ಯ ಮನುಷ್ಯ ಈ ಅಮಾನುಷ ಚರ್ಯೆಗಳನ್ನು ಮಾಡಬಲ್ಲನೇ?

ಇಷ್ಟೇ ಅಲ್ಲದೆ, ಪ್ರಲಂಬ, ಧೇನುಕ, ಬಕ, ಕೇಶಿ, ಚಾಣೂರ, ಅರಿಷ್ಟ, ಮುಷ್ಟಿಕ, ಕುವಲಯಾಪೀಡ, ಕಂಸ, ನರಕ, ಪೌಂಡ್ರಕ, ದ್ವಿವಿಧ, ಜರಾಸಂಧ, ದಂತವಕ್ತ್ರ, ಶಂಬರ, ಕಾಂಭೋಜ, ಕುರು, ಮತ್ಸ್ಯ, ಕೈಕಯ ಇತ್ಯಾದಿ ಮಹಾ ಪರಾಕ್ರಮ ಶಕ್ತಿ ಸಂಪನ್ನರ ಪ್ರಾಣವನ್ನು ಕ್ಷಣದಲ್ಲಿ ತೆಗೆದು ಲೋಕವನ್ನು ರಕ್ಷಿಸಿದ. ಇವು ಮಾನವ ಕೃತ್ಯಗಳೆನ್ನುವುದಕ್ಕೆ ಸಾಧ್ಯವೇ ?

ಈ ವಿಲಕ್ಷಣಾವತಾರದಲ್ಲಿ ಲೀಲೆಗಳೆಲ್ಲವೂ ಮಹಾದ್ಭುತ. ಕೋಪದಲ್ಲಿ ಸಹಿತ ಅವನ ಪ್ರೇಮ ಪ್ರಕಟವಾಗುತ್ತಿತ್ತು. ಶೃಂಗಾರದಲ್ಲಿ ಅವನು ಕರುಣಾ ಪ್ರವಾಹವನ್ನೇ ಹರಿಸುತ್ತಿದ್ದ. ಅವನ ದರ್ಶನ, ಸ್ಪರ್ಶನ, ಸಂಭಾಷಣೆಗಳೇ ಸಂಸಾರ ಬಂಧನದಿಂದ ವಿಮುಕ್ತಿಗೊಳಿಸುತ್ತಿದ್ದುವು. ಅವನ ನಾಮವನ್ನು ಸ್ಮರಿಸುವವರಿಗೆ ಅದೇ ಅಮರತ್ವ ಅನುಗ್ರಹಿಸುತ್ತಿತ್ತು. ಮೇಲ್ನೋಟಕ್ಕೆ ವಿಚಿತ್ರವೆನಿಸುತ್ತಿದ್ದ ಚರ್ಯೆಗಳಲ್ಲಿ ದಿವ್ಯರಸದ ಆಸ್ವಾದನೆಯಾಗುತ್ತಿತ್ತು.

ಮಹಾರಾಜಾ! ಭಾಗವತವೆಂದರೆ ಕೇವಲ ಮಥುರೆ, ಬೃಂದಾವನ, ರೇಪಲ್ಲೆ, ಯಮುನಾತೀರ, ಯಶೋದೆ, ನಂದ, ದೇವಕಿ ವಸುದೇವರಿಂದ ಕೂಡಿದ ಕಥೆ ಮಾತ್ರವಲ್ಲ. ಅವತಾರಗಳ ಕಥೆಗಳೆಲ್ಲವನ್ನೂ ಭಾಗವತ ಕಥೆಯೆಂದೇ ಹೇಳಬಹುದು. ಅಂದರೆ, ಭಗವಂತ ಭಕ್ತರುಗಳ ಸಂಬಂಧದ ಕಥೆಗಳೆಲ್ಲವೂ ಭಾಗವತವೇ. ಎಲ್ಲಾವತಾರಗಳೂ ಗೋಲೋಕವಾಸಿಯಾದ ಗೋಪಾಲನಿಂದಲೇ ಬಂದವು. ಎಲ್ಲಾವತಾರಗಳಿಗೂ ಸಾಮಾನ್ಯನಾದವನೇ ವಾಸುದೇವನಾದ ಶ್ರೀಕೃಷ್ಣ. ಎಲ್ಲ ಅವತಾರ ಕಥೆಗಳಿಗೂ ವಾಸುದೇವನಿಂದಲೇ ಹುಟ್ಟಿ, ವಾಸುದೇವನಲ್ಲೇ ಲಯವಾಗುತ್ತವೆ, ಸಮಸ್ತ ಅವತಾರಗಳಿಗೇ ಅಲ್ಲದೆ. ಸಮಸ್ತ ಜೀವರಾಶಿಗಳಿಗೂ ಆ ದಿವ್ಯ ಶಕ್ತಿಯೇ ಆಧಾರ.

ಮಹಾರಾಜಾ! ಭಗವಂತ ಸರ್ವಸಮರ್ಥನು, ಅವನಿಗೆ ಸಂಭವ ಅಸಂಭವ ಎನ್ನುವುದೇ ಇಲ್ಲ. ಅವನ ಮಾಯೆ, ಕ್ರೀಡೆ, ಲೀಲೆ, ವಿನೋದಗಳನ್ನು ಮಾತಿನಲ್ಲಿ ಹೇಳಲಸಾಧ್ಯ. ಅವನು ಅರೂಪನಾದರೂ ವಿರಾಡ್ರೂಪವನ್ನು ಧರಿಸಬಲ್ಲ. ಅವನು ಒಬ್ಬನೇ ಆದರೂ ಅನೇಕ ರೂಪಗಳಲ್ಲಿ ಸೇರಿ ಇರಬಲ್ಲ.

ರಾಜಾ! ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಅವತಾರಗಳೇ ಅವನ ದಿವ್ಯಾವತಾರಗಳೆಂದು ಲೋಕದಲ್ಲಿ ಭಾವಿಸುವರು. ಅದು ಅಷ್ಟು ವಿಶಾಲವಾದ ವರ್ಣನೆಯಲ್ಲ. ಸಮಸ್ತ ಆಕಾರಗಳೂ ಅವನದೇ! ಸರ್ವ ಜೀವಿಗಳಲ್ಲಿನ ಉಸಿರೂ ಅವನ ಶ್ವಾಸವೇ. ಹೆಚ್ಚೇಕೆ, ಗೋಚರಿಸುತ್ತಿರುವ ಸಮಸ್ತ ಪ್ರಪಂಚವೂ ಅವನ ಸಂಕಲ್ಪ ಸ್ವರೂಪವೇ. ಅವನು ಅಲ್ಲದ್ದು ಯಾವುದೂ ಇಲ್ಲವೇ ಇಲ್ಲ. ಆದರೆ ಲೋಕ ಸಂರಕ್ಷಣಾರ್ಥವಾಗಿ, ಧರ್ಮಸಂಸ್ಥಾಪನಾರ್ಥವಾಗಿ, ಭಕ್ತರ ಅಭೀಷ್ಟಾರ್ಥವಾಗಿ, ತಾನೇ ಸ್ವತಃ ಸಂಕಲ್ಪಿಸಿ ಒಂದು ಪ್ರತ್ಯೇಕ ಆಕಾರ ಧರಿಸಿ, ಲೋಕದಲ್ಲಿ ಸಂಚರಿಸಿ, ದಿವ್ಯ ವಿಭೂತಿಗಳನ್ನು ಪ್ರದರ್ಶಿಸಿ, ಭಕ್ತರಿಗೆ ದಿವ್ಯಾನುಗ್ರಹಗಳನ್ನು ಅನುಗ್ರಹಿಸಿ ಉದ್ಧರಿಸಿದ ದಿವ್ಯ ಸ್ವರೂಪಗಳಾದುದರಿಂದ

ರಾಮಕೃಷ್ಣಾದಿ ಸ್ವರೂಪಗಳು ಮಾತ್ರವೇ ಅವತಾರಗಳೆಂದು ಜನರು ಭಾವಿಸಿ, ಪೂಜಿಸಿ ಮುಕ್ತರಾಗುತ್ತಿದ್ದಾರೆ.

ಕೆಲಕೆಲವು ಸಂದರ್ಭಗಳಲ್ಲಿ, ಕೆಲವು ಅತ್ಯಗತ್ಯವಾದ ಕಾರ್ಯ ನಿಮಿತ್ತವಾಗಿ ಅವತರಿಸಿ, ಲೋಕಪಾಲನೆಯ ದೃಷ್ಟಿಯಿಂದ ದಿವ್ಯಶಕ್ತಿಗಳನ್ನು ಹೊಂದಿ, ಅಂಶ ರೂಪದಿಂದ ಕೂಡ ಎಷ್ಟೋ ಸಾರಿ ಅವತರಿಸಿದ್ದುಂಟು," ಎಂದು ಶುಕ ಮಹರ್ಷಿ ಹೇಳುತ್ತಲೇ, ಪರೀಕ್ಷಿತ್ ಮಹಾರಾಜ ತನ್ನ ಆನಂದವದನವನ್ನು ಮೇಲೆತ್ತಿ, "ಆಹಾ! ಆ ಸುಂದರಮೂರ್ತಿ ಆಂಶರೂಪಗಳನ್ನೂ ಧರಿಸಿದನೇ? ಆ ಲೀಲಾವತಾರಿ ಲೋಕಪಾಲನೆಗಾಗಿ ಯಾವ ಯಾವ ರೂಪಧಾರಿಯಾದನೋ ಅದೆಲ್ಲವನ್ನೂ ತಿಳಿಸಿ ನನ್ನನ್ನು ಆನಂದ ಪಡಿಸಬೇಕೆಂದು ಪ್ರಾರ್ಥಿಸುತ್ತೇನೆ?" ಎಂದು ಶುಕನಿಗೆ ನಮಸ್ಕರಿಸಿದ.

ಶುಕ, "ರಾಜಾ! ಕೇಳು. ಕಪಿಲ, ದತ್ತಾತ್ರೇಯ, ಸನಕ, ಸನಂದನ, ಸನಾತನ, ಸನತ್ಸುಜಾತ ಮೊದಲಾದ ಋಷಿರೂಪಗಳಿಂದಲೂ ನರನಾರಾಯಣ, ಋಷಭ, ವಿಷ್ಣು, ಧ್ರುವ, ಹಯಗ್ರೀವ, ಪೃಥು, ಕಚ್ಛಪ, ಧನ್ವಂತರಿ, ಹಂಸ, ಮನು, ಬಲರಾಮ, ವ್ಯಾಸ ಮೊದಲಾದ ರೂಪನಾಮಗಳಿಂದಲೂ ಭಕ್ತರ ಅಭೀಷ್ಟವನ್ನು ನೆರವೇರಿಸಿ, ಲೋಕಪಾಲನೆಮಾಡಿ ಧರ್ಮಕರ್ಮಗಳನ್ನು ಸ್ಥಾಪಿಸಿ, ಪುನರುದ್ಧರಿಸಿದ. ಇವಲ್ಲದೆ ಇನ್ನೂ ಅನೇಕ ಅವತಾರಗಳಿವೆ. ಅವೆಲ್ಲವನ್ನೂ ಕುರಿತು ಹೇಳುವುದಕ್ಕೆ ಇನ್ನು ಕಾಲಾವಧಿ ಸ್ವಲ್ಪವೇ ಇರುವುದರಿಂದಲೂ ಅವು ಅಷ್ಟು ಪ್ರಧಾನವುಗಳು ಅಲ್ಲವಾದ್ದರಿಂದಲೂ ಅವುಗಳನ್ನು ನಿನಗೆ ಹೇಳಲಿಲ್ಲ," ಎಂದ.

ಆಗ ಪರೀಕ್ಷಿತ್ ಮಹಾರಾಜ, "ಸ್ವಾಮೀ! ಕಪಿಲ, ಧ್ರುವ, ದತ್ತಾತ್ರೇಯ, ಹಯಗ್ರೀವ, ಧನ್ವಂತರಿ ಮೊದಲಾದ ಅವತಾರಗಳ ಕಾರಣ, ಅವುಗಳ ಪ್ರಧಾನ ತತ್ವಗಳನ್ನು ಸೂತ್ರರೂಪವಾಗಿಯಾದರೂ ಸಂಕ್ಷೇಪವಾಗಿ ತಿಳಿಸಿ ನನ್ನನ್ನು ಪುನೀತನನ್ನಾಗಿ ಮಾಡಬೇಕು," ಎಂದು ಪ್ರಾರ್ಥಿಸಿದ. ಶುಕ ಹೇಳಲು ಮೊದಲು ಮಾಡಿದ. "ರಾಜಾ! ಕರ್ದಮ ಪ್ರಜಾಪತಿಯ ಭಾರ್ಯೆಯಾದ ದೇವಹೂತಿಗೆ ಒಂಬತ್ತು ಜನ ಹೆಣ್ಣು ಮಕ್ಕಳು ಹುಟ್ಟಿದ ನಂತರ, ಹತ್ತನೆಯ ಗರ್ಭದಲ್ಲಿ ಭಗವಂತ ಕಪಿಲ ರೂಪದಲ್ಲಿ ಅವತರಿಸಿ, ತಾಯಿಗೇ ಗುರುವಾಗಿ, ತಾಯಿಯನ್ನು ಶಿಷ್ಯೆಯನ್ನಾಗಿ ಮಾಡಿಕೊಂಡು ಮೋಕ್ಷಪ್ರದವಾದ ತತ್ವವನ್ನು ಕುರಿತು ಬೋಧಿಸಿ, ಅವಳಿಗೆ ಆತ್ಮಜ್ಞಾನವನ್ನು ಅನುಗ್ರಹಿಸಿದ.

ಇನ್ನು, ಅತ್ರಿಯ ಪತ್ನಿಯಾದ ಅನುಸೂಯೆ ತನ್ನ ಗರ್ಭದಲ್ಲಿ ಪುತ್ರರೂಪದಿಂದ ಹುಟ್ಟಬೇಕೆಂದು ಕೋರಲು, ಅವಳನ್ನು ಅನುಗ್ರಹಿಸಿ, ದತ್ತನಾಗಿ (ದತ್ತ ಎಂದರೆ 'ಕೊಟ್ಟೆ' ಎಂದು ಮಾತು ಕೊಟ್ಟು) ಭಗವಂತ ಅತ್ರಿ ಅನುಸೂಯರಿಗೆ ಮಗನಾಗಿ ಹುಟ್ಟಿ ಆನಂದವನ್ನಿತ್ತ. ಭಗವಂತನ ಮೊದಲ ಅನುಗ್ರಹದ ನುಡಿ 'ದತ್ತ' ಎಂದು ಆದುದರಿಂದ, ಅದಕ್ಕೆ ತಂದೆಯ ಹೆಸರನ್ನೂ ಸೇರಿಸಿ 'ದತ್ತಾತ್ರೇಯ' ಎನ್ನುವ ಹೆಸರಿನಿಂದ ಕರೆಯಲ್ಪಟ್ಟ.

ಕಾರ್ತವೀರ್ಯಾರ್ಜುನ, ಯದು ಚಕ್ರವರ್ತಿಗಳು ರಾಜ್ಯಸುಖಾದಿಗಳನ್ನು ಅನುಭವಿಸುತ್ತಿದ್ದರೂ ಅವರಿಗೆ ಸಮಸ್ತ ಯೋಗ ಸಂಪತ್ತನ್ನು ಅನುಗ್ರಹಿಸಿದ. ಪರಮಾತ್ಮ ಈ ರೂಪದಲ್ಲೇ ಈ ಕಲ್ಪಾದಿಯಲ್ಲಿ ಸನಕ, ಸನಂದನ, ಸನಾತನ, ಸನತ್ಸುಜಾತ ಎನ್ನುವ ಹೆಸರಿನಿಂದ ದಿಗಂಬರ ರೂಪಧಾರಿಯಾಗಿ ಸಂಚರಿಸಿದ. ಈ ನಾಲ್ವರು ಯಾವಾಗ ನೋಡಿದರೂ ಐದು ವರ್ಷದ ಕಾಯದವರಾಗಿಯೇ ಕಾಣುತ್ತಿದ್ದರು.

ಇನ್ನು ಧರ್ಮಪತ್ನಿ ಮೂರ್ತಿದೇವಿಯಲ್ಲಿ ನರನಾರಾಯಣ ಎನ್ನುವ ಅವಳಿ ರೂಪದಲ್ಲಿ ಹುಟ್ಟಿ, ಬೆಳೆದು, ಬದರಿವನದಲ್ಲಿ ವಾಸಮಾಡುತ್ತಾ, ಬಾಲಕನಾದ ಧ್ರುವನ ತಪಸ್ಸಿಗೆ ಮೆಚ್ಚಿ, ಅವನಿಗೆ ದರ್ಶನವಿತ್ತು ಅವನ ತಂದೆತಾಯಿಗಳನ್ನು ಪುನೀತಗೊಳಿಸಿದ. ಧ್ರುವನನ್ನು ಧ್ರುವಲೋಕಾಧಿಪತಿಯಾಗಿ ಮಾಡಿದ. ಉತ್ಪಥ ಗಾಮಿಯಾದ ವೇನನನ್ನು ಮುನಿಗಳು ಅನೇಕ ವಿಧವಾಗಿ ಶಪಿಸಿ, ನಾಶಪಡಿಸಲು, ಅವನ ಶರೀರ ಮಥನವಾದಾಗ ಪೃಥ್ವೀಶ್ವರನಾದ ಪೃಥು ಚಕ್ರವರ್ತಿ ಹುಟ್ಟಿ, ನರಕದಲ್ಲಿ ಬಿದ್ದು ಪರಿತಪಿಸುತ್ತಿದ್ದ ತನ್ನ ತಂದೆಯನ್ನು ಉದ್ಧರಿಸಿದ. ಅಷ್ಟೇ ಅಲ್ಲದೆ, ಭೂಮಿಯಲ್ಲಿ ನೀತಿಧರ್ಮಗಳನ್ನು ನೆಲೆಗೊಳಿಸಿದ. ನಗರ, ಪಟ್ಟಣ, ಗ್ರಾಮಗಳನ್ನು ನಿರ್ಮಿಸಿ, ಅವು ತಮ್ಮತಮ್ಮ ಕಾರ್ಯಗಳನ್ನು ಸಕ್ರಮವಾಗಿ ನಿರ್ವಹಿಸುವಂತೆ ಶಾಸನ ಮಾಡಿದ.

ನಾಭಿ, ಸುದೇವಿ ಎನ್ನುವ ದಂಪತಿಗಳಿಗೆ ಪರಮಹಂಸನಾಗಿ ಜನಿಸಿ, ತ್ಯಾಗವನ್ನು ಬೋಧಿಸಿ, ತ್ಯಾಗ ಮಹಿಮೆಯನ್ನು ಪ್ರಕಟಿಸಿದ.

ನಂತರ, ಬ್ರಹ್ಮಯಜ್ಞದಲ್ಲಿ ಯಜ್ಞರೂಪದಿಂದ ಅವತರಿಸಿದ. ಅವನ ತಲೆಯ ಭಾಗ ಹಯದ (ಕುದುರೆ) ಆಕಾರವಾಗಿದ್ದುದರಿಂದ ಅವನಿಗೆ ಹಯಗ್ರೀವನೆಂದು ಹೆಸರಾಯಿತು. ಅವನು ಉಸಿರಾಡುವಾಗ ನಾಸಿಕದಿಂದ ವೇದ ವಾಕ್ಯಗಳು ಪ್ರಕಟ ಆಗುತ್ತಿದ್ದುವು! ಹಾಗೆ ಹೊರಟ ವೇದಗಳನ್ನು ಸೋಮಕಾಸುರನೆನ್ನುವ ರಾಕ್ಷಸ ವೀರನು ಅಪಹರಿಸಿ ಪ್ರಳಯ ಸಾಗರದಲ್ಲಿ ಬಚ್ಚಿಡಲು, ವೇದಸಂರಕ್ಷಣ ನಿಮಿತ್ತವಾಗಿ

ಭಗವಂತ ಮತ್ಸ್ಯ ರೂಪವನ್ನು ಧರಿಸಿ, ಸಾಗರವನ್ನು ಶೋಧಿಸಿ, ರಾಕ್ಷಸನನ್ನು ಕೊಂದು, ವೇದಗಳನ್ನು ತಂದು ಬ್ರಹ್ಮನಿಗೆ ಕೊಟ್ಟು, ಲೋಕದಲ್ಲಿ ವೇದವಿಹಿತ ಧರ್ಮಕರ್ಮಗಳನ್ನು ಉದ್ಧರಿಸಿದ.

ಮಹಾರಾಜಾ! ಇಂಥ ಸಮಯೋಚಿತ ಅವತಾರಗಳನ್ನು ಲೆಕ್ಕವಿಲ್ಲದಷ್ಟು ಧರಿಸಿ, ಭೂಮಿಯನ್ನು ವರಿಸಿ, ಬಾಧೆ ಹರಿಸಿ, ಭಕ್ತರನ್ನನುಗ್ರಹಿಸಿದ ಕಥೆಗಳು ಎಷ್ಟೋ ಇವೆ. ಎಲ್ಲವೂ ಅವನ ಸಂಕಲ್ಪವೇ ವಿನಾ, ಅವುಗಳಿಗೆ ಕಾರಣ ಹುಡುಕುವುದು ಕೇವಲ ಅಜ್ಞಾನ! ಭಗವಂತನ ಸಂಕಲ್ಪಕ್ಕೆ ಕಾರಣಗಳನ್ನು ವಿಚಾರಮಾಡುವವರೂ ಅವನ ಶಕ್ತಿಯುಕ್ತಿಗಳಿಗೆ ಮಿತಿಯನ್ನು ಗೊತ್ತುಪಡಿಸುವವರೂ ದೈವವನ್ನು ಈ ರೀತಿಯಾಗಿಯೇ ನಿರ್ಣಯಿಸುವವರೂ, ಕೇವಲ ಮೂರ್ಖರೆಂದೇ ಹೇಳಬಹುದು. ಆವನ ಇಚ್ಛೆಗೆ ಅಡ್ಡಿಯೇ ಇಲ್ಲ! ಅವನ ಶಕ್ತಿಗೆ ಮಿತಿಯೇ ಇಲ್ಲ! ಸಂಕಲ್ಪಿಸಿದ ಏನನ್ನಾದರೂ ಮಾಡಬಲ್ಲ! ಯಾವ ರೂಪವನ್ನಾದರೂ ತಾಳಬಲ್ಲ! ಅವನಿಗೆ ಅವನೇ ಸಾಟಿ! ಅವನಿಗೆ ಅವನೇ ಸಾಕ್ಷಿ!.

ಒಂದಾನೊಂದು ಸಮಯದಲ್ಲಿ ನಾರದನ ಭಕ್ತಿಭಾವಕ್ಕೆ ಮೆಚ್ಚಿ, ಹರಿಯು ಹಂಸ ರೂಪದಿಂದ ಅವತರಿಸಿ, ಭಕ್ತರು ಭವಸಾಗರವನ್ನು ದಾಟುವ ಭಾಗವತ ತತ್ತ್ವೋಪದೇಶವನ್ನು ಅನುಗ್ರಹಿಸಿ, ಮನ್ವಂತರಾಂತ್ಯದವರೆಗೆ ಸುದರ್ಶನವನ್ನು ಧರಿಸಿ, ನಿಷ್ಕಂಟಕ ಶಾಸನಮಾಡಿದ, ಹಾಗೂ ತನ್ನ ಕಮನೀಯ ಕೀರ್ತಿಯಿಂದ ಸಪ್ತ ಲೋಕಗಳನ್ನು ಪರಿಶುದ್ಧಮಾಡಿದ.

ಸಮುದ್ರ ಮಂಥನ ಸಮಯದಲ್ಲಿ ಕೂರ್ಮಾವತಾರ ಧರಿಸಿದನಲ್ಲವೆ? ಅದೇ ಸಮಯದಲ್ಲಿ ಅಮೃತ ಭಾಂಡವನ್ನು ಹೊತ್ತು ಭಗವಂತ ಧನ್ವಂತರಿಯಾಗಿ ಅವತರಿಸಿ, ರೋಗ ನಿವಾರಣೋಪಾಯವನ್ನು ಜನರಿಗೆ ತಿಳಿಸಿ, ಜನರನ್ನು ಚಿಕಿತ್ಸಕರನ್ನಾಗಿ ಮಾಡಿದ. ವೈದ್ಯರೆಂದೂ ಭಿಷಗ್ವರುಗಳೆಂದೂ ಚಿಕಿತ್ಸಕರೆಂದೂ ಅವರು ಲೋಕದಲ್ಲಿ ಪ್ರಸಿದ್ಧಿ ಹೊಂದುವಂತೆ ಮಾಡಿದ. ಇಷ್ಟೇ ಅಲ್ಲ. ವೈದ್ಯರಿಗೆ ಪೂರ್ವದಲ್ಲಿ ಯಜ್ಞಭಾಗ ಸಲ್ಲುತ್ತಿರಲಿಲ್ಲ, ಧನ್ವಂತರಿಯೇ ಅವರಿಗೆ ಯಜ್ಞಭಾಗ ದೊರೆಯುವಂತೆ ಮಾಡಿದ. ನೋಡಿದೆಯಾ ದೈವಲೀಲೆ! ಹರಿಯ ವಿಚಿತ್ರ ಲೀಲೆ ಹರಿಗೇ ಗೊತ್ತು. ಅನ್ಯರಿಗೆ ಅದು ಅರ್ಥವಾಗದು, ಊಹಿಸಲೂ ಅಸಾಧ್ಯ. ಮಾನವರು ಅಜ್ಞಾನ ಪಶುಗಳಾದ್ದರಿಂದ, ಅವರವರ ಬುದ್ಧಿಶಕ್ತಿ ಅನುಸರಿಸಿ ವಾಗ್ವಾದಮಾಡಿ, ಇಲ್ಲದ ಪಾಪಕ್ಕೆ ಗುರಿಯಾಗುವರು. ದೈವಕಾರ್ಯಗಳ ಬಗೆಗೆ ಸಂಶಯಪಡದೆ, ಅವುಗಳನ್ನು ತಮ್ಮ ತಮ್ಮ ಊಹೆಗಳಿಗೆ ಸರಿಹೋಗುವಂತೆ ಹೊಂದಿಸಿಕೊಳ್ಳದೆ, ತಮ್ಮ ಭಾವನೆಯನ್ನೇ ಆ ದೈವಕಾರ್ಯಕ್ಕೆ ಹೊಂದುವಂತೆ ಪರಿವರ್ತಿಸಿಕೊಂಡರೆ ಅಂಥ ಮಾನವರು

ದೈವಾನುಗ್ರಹ ಹೊಂದಬಲ್ಲರು. ಇಲ್ಲದೆ ಇದ್ದರೆ ಅನುಗ್ರಹ ಹೊಂದಲಾರರು, ಆನಂದ ಅನುಭವಿಸಲಾರರು.

ಆ ಮಧುರ ಕೃಷ್ಣಾವತಾರ ಚಿತ್ತಾಕರ್ಷಕವಾದುದು. ಸೌಂದರ್ಯ, ಮಾಧುರ್ಯ, ಪ್ರೇಮಗಳು ಘನೀಭೂತವಾದ ವಿಗ್ರಹ, ಆನಂದರಾಶಿ, ಗುಣಸಾಗರ ಅವನು. ಆಹಾ! ಅವನ ಮುಗ್ಧತೆ ಎಂಥದ್ದು! ಆ ಅಮಾನುಷ ವ್ಯಕ್ತಿತ್ವ ಎಷ್ಟು ದೊಡ್ಡದು! ಅವನನ್ನು ನೋಡಿದರೆ ಸಾಕು, ಅವನ ಮಾತು ಕೇಳಿದರೆ ಸಾಕು, ಅವನ ಸ್ಪರ್ಶವಾದರೆ ಸಾಕು, ಜನ್ಮ ಸಾರ್ಥಕವಾಗುತ್ತಿತ್ತು. ಎಲ್ಲ ಯಜ್ಞಯಾಗಾದಿ ಕರ್ಮಗಳ ಗುರಿಯೂ ಈ ದರ್ಶನ, ಸ್ಪರ್ಶನ, ಸಂಭಾಷಣೆಗಳೇ. ಈ ಫಲ ಯಜ್ಞ ಯಾಗಾದಿ ಕರ್ಮಗಳಲ್ಲೂ ಇಲ್ಲ. ಎಷ್ಟು ಮಾತ್ರಕ್ಕೂ ಇಲ್ಲ! ಆಹಾ! ಮಧುರಮೂರ್ತಿ!" ಎಂದು, ಶುಕ ಕಣ್ಣೀರು ಸುರಿಸುತ್ತಾ, ತನ್ಮಯನಾಗಿ ಉನ್ಮತ್ತ ಚಿತ್ತನಾಗಿ ಕೃಷ್ಣರೂಪದಲ್ಲಿ ಲೀನನಾದ. ಆ ದೃಶ್ಯವನ್ನು ನೋಡುತ್ತಿದ್ದ ಮುನಿಗಳಿಗೂ ಪರೀಕ್ಷಿತ್ ಮಹಾರಾಜನಿಗೂ ಪರಮಾಶ್ಚರ್ಯವಾಯಿತು. ಎಲ್ಲರೂ ಸ್ತಂಭೀಭೂತರಾದರು. ಸ್ವಲ್ಪಹೊತ್ತು ಹೀಗಿದ್ದ ಮೇಲೆ, ಶುಕ ಕಣ್ಣು ತೆರೆದು, "ರಾಜಾ! ಆಗಿನ ಆ ಗೋಪಗೋಪಿಯರು ಅದೆಷ್ಟು ಅದೃಷ್ಟವಂತರು, ಅಲ್ಲವೆ? ಅವನೊಡನೆ ಕೂಡಿ, ಆಡಿ, ಹಾಡಿ ನಲಿದ ಅವರ ಕಾಯಗಳು ಅದೆಷ್ಟು ಕಾಂತಿಯುತವೋ! ದೇವತೆಗಳಿಗೂ ಸಹ ಲಭ್ಯವಿಲ್ಲದ ಅವನ ಸನ್ನಿಧಿ ಆ ಬೆಣ್ಣೆಗೊಲ್ಲರಿಗೆ ಲಭಿಸಿತೆಂದರೆ ಅದು ಅವರ ಜನ್ಮಾಂತರ ಸುಕೃತವೆಂದೇ ಅನ್ನಬೇಕು. ಗೋಪಗೋಪಿಯರೇನು ಸಾಮಾನ್ಯರಲ್ಲ. ನೋಡುವುದಕ್ಕೆ ಬೆಣ್ಣೆಗೊಲ್ಲರಂತೆ ಕಾಣಿಸುತ್ತಿದ್ದರು, ಅಷ್ಟೆ! ಅವರ ಜ್ಞಾನ ಭಂಡಾರ ಆ ಕೃಷ್ಣನಿಗಲ್ಲದೆ ಅನ್ಯರಿಗೆ ಅಗೋಚರ. ಅಷ್ಟೇ ಅಲ್ಲದೆ ಕೃಷ್ಣನ ಸ್ಪರ್ಶನ ರುಕ್ಮಿಣಿ, ಸತ್ಯಭಾಮೆಯರಿಗೂ ಅಷ್ಟು ಸುಲಭವಾಗಿ ದೊರಕಲಿಲ್ಲ. ಗೋಪಗೋಪಾಲರಿಗೆ ಲಭಿಸಿತೆಂದರೆ ಅವರು ಮಹಾ ಭಾಗ್ಯಶಾಲಿಗಳೆಂದೇ ಅನ್ನಬೇಕು. ಮೂರು ಜನ್ಮಗಳ ತಪಃ ಫಲ ಇದು," ಎಂದು ಕಣ್ಣುಗಳನ್ನು ಮುಚ್ಚಿಕೊಂಡ. ತುಟಿಗಳ ಮೇಲೆ ಮುಗುಳ್ನಗೆ ಲಾಸ್ಯವಾಡುತ್ತಿರಲು, ಶುಕ ತಿರುಗಿ ಸಮಾಧಿಯಲ್ಲಿ ಮುಳುಗಿದ. ಹೀಗೆ ಕೃಷ್ಣರೂಪವನ್ನು ವರ್ಣಿಸುವ ಸಮಯದಲ್ಲಿ ಪದೇ ಪದೇ ಶುಕ ಸಮಾಧಿ ಸ್ಥಿತಿ ಹೊಂದುತ್ತಿದ್ದುದು ಪರೀಕ್ಷಿತ್ ಮಹಾರಾಜನಿಗೆ ಪರಮಾಶ್ಚರ್ಯ ಉಂಟು ಮಾಡುತ್ತಿತ್ತು. ಅವನೂ ಕೂಡ ಕೃಷ್ಣಚರ್ಯೆಯನ್ನು ತೀವ್ರ ಉತ್ಸಾಹ, ಆಸಕ್ತಿಗಳಿಂದ ಕಿವಿಗೊಟ್ಟು ಕೇಳುತ್ತಿದ್ದ.

ಮಧ್ಯೆ ಮಧ್ಯೆ ಅವನೂ ಕೃಷ್ಣಲೀಲೆಯಲ್ಲಿ ಪರವಶನಾಗುತ್ತಿದ್ದ. ಕೆಲವನ್ನಂತೂ ನಂಬಲಾರದೆ ಹೋಗುತ್ತಿದ್ದ! ಅಂಥ ಸಂಶಯಗಳೇನಾದರೂ ಹೃದಯವನ್ನು ಸೇರಿದರೆ ಬಾಧೆಪಡುತ್ತಿದ್ದ. ನಿಜ ಸಂಗತಿಯನ್ನು ತಾನೇ ನಿರ್ಣಯಿಸಲಾರದ

ಸಂದರ್ಭದಲ್ಲಿ ಶುಕನನ್ನು ಕೇಳಿ ಅವುಗಳಿಗೆ ತಕ್ಕ ಸಮಾಧಾನ ದೊರಕಿಸಿಕೊಂಡು ತೃಪ್ತಿಪಟ್ಟುಕೊಳ್ಳುತ್ತಿದ್ದ. ಹೀಗೆ ಕಥಾಶ್ರವಣ ಮುಂದುವರಿಯುತ್ತಿದ್ದಾಗ, ಒಂದು ಸಾರಿ ಗೋಪಿಯರ ಬಗೆಗೆ ತೀವ್ರ ಸಂಶಯ ಬಂದು, ತನಗೆ ತಾನೇ ಏನೇನೋ ಸಮಾಧಾನ ಹೇಳಿಕೊಂಡರೂ ತೃಪ್ತಿಯಾಗದೆ, ಶುಕ ಮಹರ್ಷಿಯನ್ನು ಪ್ರಶ್ನಿಸಲು ಧೈರ್ಯಸಾಲದೆ ಒಳಗೊಳಗೇ ಬಾಧೆಪಡುತ್ತಿದ್ದ.

ಅವನ ಸ್ಥಿತಿಯನ್ನು ಗಮನಿಸಿದ ಶುಕ ಮಹರ್ಷಿ ನಗುತ್ತಾ, "ಮಹಾರಾಜಾ! ನಿನ್ನ ಮನಸ್ಸಿನಲ್ಲಿ ಯಾವುದೋ ದುಗುಡ ತಲೆಯೆತ್ತಿರುವಂತೆ ಕಾಣುತ್ತಿದೆ. ಈ ಸಮಯದಲ್ಲಿ ಹಾಗೆ ಬಾಧೆಪಡುವುದು ಎಷ್ಟು ಮಾತ್ರಕ್ಕೂ ಶುಭವಲ್ಲ. ನಿನಗೆ ತಿಳಿಯದೆಹೋದ ವಿಷಯ ಏನಾದರೂ ಇದ್ದರೆ ನನ್ನನ್ನು ಕೇಳು, ಖಂಡಿತವಾಗಿ ಹೇಳುತ್ತೇನೆ," ಎಂದು ಪರೀಕ್ಷಿತನಿಗೆ ಧೈರ್ಯ ಹೇಳಲು, ಪರೀಕ್ಷಿತ್ ಮಹಾರಾಜ, "ಸ್ವಾಮೀ! ತಾವು ತ್ರಿಕಾಲಜ್ಞಾನಿಗಳು. ನನ್ನ ಅಂತರಂಗದ ಸಮಸ್ಯೆಗಳನ್ನು ತೀರಿಸಲು ಸರ್ವ ಸಮರ್ಥರು. ಆದ್ದರಿಂದ, ನನ್ನ ಬಗೆಗೆ ಬೇರೆ ಭಾವಿಸದೆ, ಅವುಗಳಿಗೆ ತಕ್ಕ ಸಮಾಧಾನವಿತ್ತು ನನ್ನ ತಾಪವನ್ನು ಪರಿಹರಿಸಿ," ಎಂದು ನಮಸ್ಕರಿಸಿ, "ಸ್ವಾಮೀ! ಗೋಪಿಕಾ ಕೃಷ್ಣರ ರಾಸಕ್ರೀಡೆಗಳನ್ನು, ಬೃಂದಾವನ ಲೀಲೆಗಳನ್ನು ಅನೇಕ ವಿಧವಾಗಿ ಕೇಳಿದ್ದೆ. ಅವೆಲ್ಲವೂ ಸಾಮಾನ್ಯ ಮಾನವರ ವಿಷಯಾನಂದ ಕ್ರೀಡೆಗಳಾಗಿ ನನಗೆ ತೋಚುತ್ತದೆ. ಇವು ನಿಜವಾಗಿಯೂ ನಡೆದಿದ್ದರೆ, ಇವುಗಳನ್ನು ದೈವಲೀಲೆಗಳೆಂದು ಹೇಳಲು ಹೇಗೆ ಸಾಧ್ಯ? ಇವು ಲೋಕ ವಿರುದ್ಧವಾದ ನಡವಳಿಕೆಗಳಲ್ಲವೆ? ಅಲ್ಲದೆ, ಬೃಂದಾವನದಲ್ಲೂ ಯಮುನಾ ತೀರದಲ್ಲೂ ಸ್ವೇಚ್ಛೆಯಾಗಿ ವಿಹರಿಸುತ್ತಾ ವಿಷಯ ಸಂಬಂಧವಾದ, ಮೋಹ ಸಂಬಂಧವಾದ ಕಾಮ ಸಂಬಂಧವಾದ ಈ ಚರ್ಯೆಯಲ್ಲಿ ತೊಡಗಿದ್ದು ಕೃಷ್ಣನ ಭಗವತ್ ಸ್ವರೂಪಕ್ಕೆ ಸ್ವಲ್ಪ ಕಳಂಕವಲ್ಲವೆ? ಗುಣಾತೀತರಿಗೇ ಮೋಕ್ಷ ಪ್ರಾಪ್ತಿ ಆಗುವುದು ಎಂದು ಹೇಳುತ್ತಾ ಗುಣಗಳ ಮೂಲಕವೇ ಇಂದ್ರಿಯಾನಂದವನ್ನೂ ಪಡೆದುಕೊಳ್ಳುತ್ತಿದ್ದ ಗೋಪಿಯರಿಗೆ ಮೋಕ್ಷ ಲಭಿಸಿತೆಂದರೆ ಆಶ್ಚರ್ಯ ಮಾತ್ರವಲ್ಲ, ಹಾಸ್ಯಾಸ್ಪದವಾಗಿಯೂ ಕಾಣುವುದಿಲ್ಲವೇ? ಇಂಥ ಧರ್ಮವಿರುದ್ಧ ಚರ್ಯೆಗಳಲ್ಲಿ ಅಂತರಾರ್ಥವೇನಾದರೂ ಇದ್ದರೆ ತಿಳಿಸಿ ನನ್ನನ್ನು ಆನಂದಪಡಿಸಿ," ಎಂದು ಪ್ರಾರ್ಥಿಸಿದ.

ಶುಕ ನಸುನಕ್ಕು, "ಮಹಾರಾಜಾ! ಇದು ನಿನಗೆ ಬಂದ ಸಂದೇಹವಲ್ಲ. ಕೃಷ್ಣ ಸಾಕ್ಷಾತ್ ಭಗವಂತನೆಂದು ತಿಳಿದವರಿಗೆ ಇಂಥ ಸಂದೇಹ ಬರಲು ಅವಕಾಶವಿಲ್ಲ. ಕೇವಲ ಇದು ದ್ವಾಪರ ಯುಗಾಂತ್ಯವೂ ಕಲಿಕಾಲ ಪ್ರಾರಂಭದ ಕಾಲವೂ ಆದ್ದ ರಿಂದ ಕಲಿ ನಿನ್ನಲ್ಲಿ ಸೇರಿ ಇಂಥ ಸಂಶಯಗಳನ್ನು ಹುಟ್ಟಿಸುತ್ತಿದ್ದಾನೆಂದು ಕಾಣುತ್ತದೆ. ಏಕೆಂದರೆ, ಕೃಷ್ಣ ಸಾಕ್ಷಾತ್ ಸರ್ವೇಶ್ವರನೆನ್ನುವ ವಿಶ್ವಾಸ ನಿನ್ನಲ್ಲಿ ಸಂಪೂರ್ಣವಾಗಿದೆ.

ಅವನ ಪ್ರತಿ ಚರ್ಯೆಯೂ ನಿನ್ನ ಚಿತ್ತದಲ್ಲಿ ದಿವ್ಯ ಕಾಂತಿಯಿಂದ ಪ್ರಕಾಶಿಸುತ್ತಿದೆ. ಅವನ ನಾಮವನ್ನು ಸ್ಮರಿಸಿದರೆ ಸಾಕು, ತನ್ಮಯನಾಗುತ್ತೀಯೆ. ಇಂಥ ನಿನ್ನಲ್ಲಿ ಹುಟ್ಟುವ ಸಂಶಯಗಳಲ್ಲ ಇವು. ಈ ವಿಷಯ ಹಾಗಿರಲಿ, ನಾನು ಎಂಥವನು ಎನ್ನುವುದು ನಿನಗೆ ಗೊತ್ತು. ಅಂಥ ನಾನೇ ಕೃಷ್ಣ ಗೋಪಿಕೆಯರ ಲೀಲೆಗಳನ್ನು ಸ್ಮರಿಸುತ್ತಾ ಆನಂದದಲ್ಲಿ ಲೀನನಾಗಿ ಆ ಗೋಪಿಕೆಯರ ಅದೃಷ್ಟವನ್ನು ಕೊಂಡಾಡುತ್ತಿರುವೆನೆಂದ ಮೇಲೆ ಅವು ಸಾಮಾನ್ಯ ಕಾಮುಕ ಚರ್ಯೆಗಳೊ, ದೈವ ಉನ್ನತ್ತವಾದ ಚರ್ಯೆಗಳೊ ಸ್ವಲ್ಪ ನೀನೇ ಯೋಚಿಸು. ವಿಷಯಾನಂದ ಹಾಗೂ ವಿಶ್ವೇಶ್ವರಾನಂದ ಚರ್ಯೆಗಳು ನೋಡುವವರಿಗೆ ಬಾಹ್ಯ ರೂಪದಲ್ಲಿ ಒಂದೇ ಆಗಿ ಕಾಣುವುವು. ಚರ್ಯೆಗಳನ್ನು ಗುಣಕಾರಣವಾದುವುಗಳೆನ್ನುವುದು ಅಜ್ಞಾನದ ಲಕ್ಷಣ. ಹಂತಕನ ಹಸ್ತದಲ್ಲಿರುವ ಕತ್ತಿ ಎಲ್ಲರಿಗೂ ಪ್ರಮಾದವೇ. ಆದರೆ ವೈದ್ಯನ ಹಸ್ತದಲ್ಲಿರುವ ಕತ್ತಿಯಿಂದ ದುಃಖ ನಿವೃತ್ತಿ. ಹಾಗೇ, ದೇಹಾತ್ಮ ಭಾವದಿಂದ ಕೂಡಿದ ಚರ್ಯೆಗಳು ಲೋಕಚರ್ಯೆಗಳು. ದೈವಾತ್ಮಭಾವದಿಂದ ಕೂಡಿದ ಚರ್ಯೆಗಳು ನಿವೃತ್ತಿಚರ್ಯೆಗಳು," ಎಂದು ಹೇಳಿದ.

# ೩೪ ಗೋಪಾಲ ಮತ್ತು ಗೋಪಗೋಪಿಯರು

ಶುಕ, "ಮಹಾರಾಜಾ! ಮೂರ್ತಿಮಂತನಾದ, ಮಾಧುರ್ಯ ಸ್ವರೂಪನಾದ ಆ ಕೃಷ್ಣನ ಲೋಕೋತ್ತರ ಲಾವಣ್ಯವನ್ನು ಯಾರು ತಾನೆ ಹೇಳಬಲ್ಲರು? ಹೇಗೆ ತಾನೆ ಹೇಳಬಲ್ಲರು? ನೀನಾದರೋ ನನಗೆ ಕೃಷ್ಣನ ವಿಷಯ ಹೇಳಿ ಎನ್ನುತ್ತಿ. ಆದರೆ, ಅದು ವಾಗತೀತ! ಹೇಳುವುದು ಹೇಗೆ? ಅವನು ಅನೇಕ ಅವತಾರಗಳನ್ನು ಎತ್ತಿ ಅನೇಕ ಚಮತ್ಕಾರಗಳನ್ನು ಮೆರೆದ. ಆದರೆ ಈ ಕೃಷ್ಣಾವತಾರದಲ್ಲಿ ಒಂದು ವಿಲಕ್ಷಣವಾದ ಸ್ವಾರಸ್ಯವನ್ನು ಪ್ರದರ್ಶಿಸಿದ.

ಮುತ್ತಿನ ಸಾಲಿನಂಥ ಅವನ ಹಲ್ಲುಗಳು ಕಾಣುವಂತೆ ಒಮ್ಮೆ ಅವನು ನಕ್ಕನೆಂದರೆ ಪ್ರೇಮಿಗಳ, ಭಾಗವತರ, ಅಷ್ಟೇಕೆ ಜಿತೇಂದ್ರಿಯರ ಹೃದಯದಲ್ಲಿ ಕೂಡ ಒಂದು ಬಗೆಯ ವಿಕಲತೆ ಉಂಟಾಗುತ್ತಿತ್ತು. ಅವನ ಸುಕೋಮಲ ಕರಗಳಿಂದ ಅವರನ್ನು ಒಮ್ಮೆ ಮುಟ್ಟಿದನೆಂದರೆ, ಅವರು ತಮ್ಮ ಕಾಯಗಳನ್ನೇ ಮರೆತು ಆನಂದ ತನ್ಮಯ

ರಾಗಿ ಅವನ ಚಿತ್ತದಲ್ಲಿ ಸೇರಿಹೋಗುತ್ತಿದ್ದರು. ಒಂದೊಂದು ಸಾರಿ ವಿನೋದ ಮಾಡುವವನು. ಒಮ್ಮೊಮ್ಮೆ ಮೌನದಿಂದಿರುವವನು. ಪರಿಹಾಸ್ಯದ ಕಥೆಗಳನ್ನು ಹೇಳು ವನು. ಅಂಥ ಸಮಯದಲ್ಲಿ ಅವರು, ನಮಗಿಂತ ಭಾಗ್ಯವಂತರು, ನಮಗಿಂತ ಶ್ರೇಷ್ಠರು ಈ ಲೋಕದಲ್ಲಿಯೇ ಯಾರೂ ಇಲ್ಲ ಎಂದುಕೊಳ್ಳುವರು.

ಗೋಪಗೋಪಾಲರು, ವ್ರಜವನಿತೆಯರು ಏನೇ ಮಾಡುತ್ತಿದ್ದರೂ ಸರಿ, ಒಂದು ಸಾರಿ ಕೃಷ್ಣನನ್ನು ನೋಡಿದರೆಂದರೆ ಚಿತ್ರಪ್ರತಿಮೆಗಳಂತೆ ನಿಶ್ಚೇಷ್ಟಿತರಾಗುತ್ತಿದ್ದರು. ಪ್ರೇಮಮಯನೂ ಸಹೃದಯನೂ ಆದ ಶ್ರೀಕೃಷ್ಣನಲ್ಲಿ ತಮ್ಮ ಮನೋಪ್ರಾಣಗಳನ್ನು ಅರ್ಪಿಸಿದ ವ್ರಜರ ವಿಷಯವನ್ನು ಎಂಥ ಪಾಂಡಿತ್ಯವುಳ್ಳವನು ವರ್ಣಿಸಬೇಕಾದರೂ ಭಾಷೆಯ ಮೂಲಕ ತಾನೆ? ಆದರೆ, ಅದನ್ನು ವರ್ಣಿಸುವುದಕ್ಕೆ ಭಾಷೆಯೇ ಇಲ್ಲ. ಭಾವ ಗಂಭೀರವಾದ ಗೋಪಿಕೆ, ಗೋಪಾಲನ ಭಕ್ತಿ ಪ್ರಪತ್ತಿಗೆ ಮೇರೆಯೇ ಇಲ್ಲ.

ಉದ್ಧವನಂಥವನು ಬೃಂದಾವನದ ಗೋಪಿಯರನ್ನು ನೋಡಿ, 'ಅಯ್ಯೋ! ಇಷ್ಟು ಕಾಲ ನನ್ನ ಜೀವಿತವನ್ನು ವೃಥಾ ಕಳೆದನಲ್ಲಾ! ಕೃಷ್ಣಚಂದ್ರನ ಹತ್ತಿರವೇ ಇದ್ದು, ಅವನ ಶಕ್ತಿ ಪ್ರೇಮಗಳ ವ್ಯಾಪ್ತಿಯಲ್ಲಿ ಪ್ರವೇಶಿಸದೆ ಹೋದೆನಲ್ಲಾ! ಗೋಪಿಯರ ಭಕ್ತಿಪ್ರೇಮದಲ್ಲಿ ಅಣುಮಾತ್ರದಷ್ಟಾದರೂ ನನ್ನ ಹೃದಯಾಂತರಾಳದಲ್ಲಿ ಮೆರೆಯ ಲಿಲ್ಲವಲ್ಲಾ! ಹುಟ್ಟಿದರೆ ಗೋಪಿಗೋಪಾಲರಾಗಿ ಹುಟ್ಟಬೇಕು. ಇಲ್ಲದಿದ್ದರೆ ಏಕೆ ಈ ನಿರರ್ಥಕ ಜೀವನ! ಅಂಥ ಪ್ರಾಪ್ತಿ ನನಗಿಲ್ಲದಿದ್ದರೆ, ಬೃಂದಾವನದಲ್ಲಿ ಒಂದು ಪೊದೆಯಾಗಿಯಾದರೂ ಸರಿ, ಒಂದು ಜಾಜಿಮಲ್ಲಿಗೆ ಗಿಡವಾಗಿಯಾದರೂ ಸರಿ, ಅದೂ ಲಭ್ಯವಿಲ್ಲದಿದ್ದರೆ, ಗೋಪಿ ಗೋಪಾಲಕೃಷ್ಣರು ಸಂಚರಿಸುವ ಜಾಗದಲ್ಲಿ ಅವರ ಪಾದಗಳ ಕೆಳಗಿನ ಗರಿಕೆ ಹುಲ್ಲಾಗಿಯಾದರೂ ಹುಟ್ಟಿದರೆ ಸಾಕು,' ಎಂದು ಎಷ್ಟೆಷ್ಟೋ ವಿಧವಾಗಿ ಹಂಬಲಿಸಿದ. ಅದೇ ಚಿಂತೆಯಲ್ಲಿ ಕಾಲ ಕಳೆದ.

ಅಂಥ ಕೃಷ್ಣಗೋಪಿಯರ ಸಂಬಂಧ ಕುರಿತು ಹಗುರವಾಗಿ ಮಾತನಾಡುವುದು ಅಲ್ಪಮತಿಗಳ ಮೂರ್ಖತನವೇ ಹೊರತು, ತೂಕದ ಮಾತಲ್ಲ. ಮಹಾರಾಜಾ! ಚಿತ್ತಶುದ್ಧಿ ಇದ್ದವರಿಗಷ್ಟೇ ಕೃಷ್ಣಲೀಲೆ ಅರ್ಥವಾಗುವುದು," ಎಂದ.

ಪರೀಕ್ಷಿತ್, "ಸ್ವಾಮೀ! ಉದ್ಧವ ಬೃಂದಾವನಕ್ಕೆ ಯಾವಾಗ ಹೋದ? ಏಕೆ ಹೋದ? ಕೃಷ್ಣನನ್ನು ಬಿಟ್ಟು ಅಲ್ಲಿಗೆ ಹೋಗಲು ಕಾರಣ ಏನು? ಹೇಳುವಿರಾ?" ಎಂದು ಕೇಳಲು, ಶುಕ ಹೇಳಲಾರಂಭಿಸಿದ. "ರಾಜಾ! ಉದ್ಧವ ಶ್ರೀ ಕೃಷ್ಣನನ್ನು ಒಂದು ನಿಮಿಷವೂ ಬಿಟ್ಟಿರುತ್ತಿರಲಿಲ್ಲ. ಬಿಟ್ಟಿರಲು ಅವನಿಗೆ ಆಗುತ್ತಿರಲಿಲ್ಲ. ಆದರೆ, ಕೃಷ್ಣನೇ ತನ್ನ ಸಂದೇಶವನ್ನು ಬೃಂದಾವನದ ಗೋಪಿಯರಿಗೆ ಮುಟ್ಟಿಸಿ ಬಾ ಎಂದು

ಕಳಿಸಿದ್ದರಿಂದ ವಿಧಿಯಿಲ್ಲದೆ ಅವನು ಹೋಗಬೇಕಾಗಿ ಬಂದಿತು. ಅದೂ, ಕೃಷ್ಣ ಒಂದೇ ದಿವಸದ ಅವಕಾಶ ಕೊಟ್ಟು ಕಳಿಸಿದ್ದ! ಅದಕ್ಕಿಂತ ಹೆಚ್ಚು ಕಾಲ ಅಲ್ಲಿರಲು ಅವಕಾಶವಿಲ್ಲ ಎಂದು ಆಜ್ಞಾಪಿಸಿಯೇ ಕಳಿಸಿದ್ದ.

ಉದ್ಧವನಿಗೆ ಹೊರಡುವಾಗ ಆ ಒಂದು ದಿನವೇ ಯುಗವಾಗಿ ತೋಚಿತು. ಆದರೆ ಬೃಂದಾವನ ಸೇರಿದ ಮೇಲೆ, 'ಅಯ್ಯೋ! ದಿನಗಳೆದು ಹೋಗುತ್ತಿದೆಯಲ್ಲಾ! ಇವರನ್ನು ಬಿಟ್ಟು ಹೋಗಬೇಕಾಗಿ ಬಂದಿತಲ್ಲಾ! ನನ್ನ ಜೀವಿತವೆಲ್ಲಾ ಗೋಪ ಗೋಪಿಯರೊಂದಿಗೇ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಅಂತಹ ಪ್ರಾಪ್ತಿ ಪಡೆದು ಕೊಳ್ಳದೆ ಹೋದೆನಲ್ಲಾ,' ಎಂದು ಕೊರಗಿದ. ಮಹಾರಾಜಾ! ನೋಡಿದೆಯಾ ಭಕ್ತರಿಗೂ ಭಗವಂತನಿಗೂ ಭೇದವಿಲ್ಲ. ಕೃಷ್ಣನ ಬಳಿ ಎಷ್ಟು ಆನಂದವಿತ್ತೋ ಕೃಷ್ಣವಿಯೋಗ ಎಷ್ಟು ಬಾಧೆ ಉಂಟುಮಾಡಿತೋ ಕೃಷ್ಣಭಕ್ತರಾದ ಗೋಪಿಯರ ವಿಯೋಗ ಅದಕ್ಕಿಂತ ಹೆಚ್ಚು ಬಾಧೆ ಹುಟ್ಟಿಸಿತು. ಗೋಪಿ ಗೋಪಾಲರಲ್ಲಿ ಭೇದವಿಲ್ಲ. ಗೋಪಿಯರ ಹೃದಯ ಗೋಪಾಲನ ಆಟದ ಸ್ಥಳವಾಗಿತ್ತು. ಅಧಿಷ್ಠಾನ ಪೀಠ ವಾಗಿತ್ತು. ಅವರ ಭಾವ ಕೃಷ್ಣ ರಸಾಮೃತ ಪಾನಮಾಡಿತ್ತು. ಗೋಪಿಯರು ಕೃಷ್ಣ ವಿಯೋಗಕ್ಕೆ ಎಷ್ಟು ದುಃಖಿಸುತ್ತಿದ್ದರು ಎನ್ನುವುದನ್ನು, ಕೃಷ್ಣನ ಕಡೆಯವರೆಂದರೆ ಅವರಿಗೆ ಅದೆಷ್ಟು ಪ್ರೇಮ, ಸ್ನೇಹ, ಆಸಕ್ತಿ ಅದೆಷ್ಟು ಅನುರಕ್ತಿ ಎನ್ನುವುದನ್ನು ಉದ್ಧವ ಗ್ರಹಿಸಲು ಸಾಧ್ಯವಾಯಿತು.

ಗೋಪಿ ಗೋಪಾಲರು ನಿರಂತರ ಕೃಷ್ಣನ ಕಥೆ, ಕೃಷ್ಣನ ಚರ್ಯೆ, ಕೃಷ್ಣನ ವರ್ಣನೆಯ ಲ್ಲದೆ ಬೇರೊಂದು ಚಿಂತೆ ತಮ್ಮನ್ನು ಸೇರಲು ಬಿಡುತ್ತಿರಲಿಲ್ಲ. ಕೃಷ್ಣ ಮಾಧುರ್ಯ, ಕೃಷ್ಣ ಪ್ರಭೆಯ ಪರಿಣಾಮವಾಗಿ ವ್ರಜೆಯಲ್ಲಿ ಸಜೀವರು ನಿರ್ಜೀವರಾಗಿಯೂ, ನಿರ್ಜೀವರು ಸಜೀವರಾಗಿಯೂ ಕಾಣಿಸುತ್ತಿದ್ದರು. ಗೋವರ್ಧನ ಗಿರಿಯ ಕಲ್ಲು ಕರಗುತ್ತಿದ್ದುದನ್ನು ಉದ್ಧವ ಕಣ್ಣಾರೆ ನೋಡಿದ! ಆನಂದದಿಂದ ಕಲ್ಲು ಕರಗುವು ದನ್ನು, ಗೋಪಿಯರು ಕಲ್ಲಾಗುವುದನ್ನು ಕಂಡ ಉದ್ಧವ ಎಂಥ ವಿಚಿತ್ರ, ಮಹಾದ್ಭುತ ಎಂದುಕೊಂಡ."

ಹೀಗೆ ಗೋಪಿಯರ ಭಕ್ತಿಯನ್ನು ವರ್ಣಿಸುತ್ತಾ ಶುಕ ಮಧ್ಯೆ ಮಧ್ಯೆ ಸಮಾಧಿ ಸ್ಥಿತಿಯನ್ನು ಹೊಂದಿ, ಆನಂದದ ಕಣ್ಣೀರಿನ ಹನಿಗಳು ಅವನ ಕಣ್ಣು ತುಂಬುತ್ತ ಇದ್ದುದನ್ನು ನೋಡಿ ಆ ಋಷಿಗಳು ತನ್ಮಯರಾಗುತ್ತಿದ್ದರು. ಆನಂದ ಶ್ರವಣದಿಂದ ಪುಲಕಿತರಾಗಿ ಕೃಷ್ಣಚಂದ್ರನನ್ನು ನೋಡಲು ತವಕ ಪಡುತ್ತಿದ್ದರು.

ನಂತರ, ಶುಕ ಕಣ್ಣು ತೆರೆದು, "ರಾಜಾ! ಉದ್ಧವ ಅದೆಷ್ಟು ಅದೃಷ್ಟವಂತ! ಗೋಪಿಯರು ತಾವು ಕೃಷ್ಣನೊಂದಿಗೆ ಆಡುತ್ತಿದ್ದ ಸ್ಥಳವನ್ನು ತೋರಿಸುವುದಕ್ಕೆ ಎಂದೇ ಉದ್ಧವನನ್ನು ಗೋವರ್ಧನಗಿರಿಯ ಹತ್ತಿರ ಕರೆದುಕೊಂಡು ಹೋದರು. ಅಲ್ಲಿ ಹೋಗಿ ನೋಡಿದಾಗ ಉದ್ಧವನಿಗೆ ಮತ್ತಷ್ಟು ಆಶ್ಚರ್ಯವಾಯಿತು. ಏಕೆಂದರೆ, ಅಂದು ಶ್ರೀಕೃಷ್ಣ ಗೋಪ ಗೋಪಿಯರೊಂದಿಗೆ ತಿರುಗಾಡಿದ ಹೆಜ್ಜೆ ಗುರುತುಗಳು ಅಳಿಸದೆ ಶಿಲೆಗಳ ಮಾಲೆ ಹಾಗೇ ಕಂಗೊಳಿಸುತ್ತಿದ್ದವು!

ಗೋವರ್ಧನಗಿರಿಯ ಬಳಿ ಹೋದೊಡನೆ ಗೋಪಗೋಪಿಯರು ಕೃಷ್ಣ ವಿಯೋಗವನ್ನು ನೆನೆದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ಕೃಷ್ಣ ಚಿಂತನೆಯಲ್ಲೇ ತನ್ಮಯರಾದ ಅವರು ಎಲ್ಲರೂ ಒಟ್ಟಿಗೆ 'ಕೃಷ್ಣಾ!' ಎಂದು ಅವನನ್ನು ಕೂಗಿ ಕರೆದಾಗ ಸುತ್ತಲಿನ ಮರಗಿಡಗಳೂ ರೋಮಾಂಚನಗೊಂಡು ರೆಂಬೆಗಳನ್ನು ಚಾಚಿ ಕರೆದವು, ರೋದಿಸಿದವು. ಕೃಷ್ಣ ವಿಯೋಗವನ್ನು ಬೃಂದಾವನದ ಗೋಪಗೋಪಿಯರು ಮಾತ್ರವೇ ಅಲ್ಲದೆ, ಬೆಟ್ಟ, ಮರಗಿಡಗಳೂ ಅನುಭವಿಸುತ್ತಿದ್ದುದನ್ನು ಉದ್ಧವ ಕಣ್ಣಾರೆ ನೋಡಿದ. ರಾಜಾ! ಏನೆಂದು ಹೇಳಲಿ. ನಂಬಲಸಾಧ್ಯವಾದಂಥ ದೃಶ್ಯಗಳನ್ನು ನೋಡಿದ ಉದ್ಧವನಿಗೆ ಆಶ್ಚರ್ಯವಾಯಿತು. ನಾಚಿಕೆಯಾಯಿತು," ಎನ್ನಲು, ಮಹಾರಾಜ ಉತ್ಸುಕನಾಗಿ, "ಸ್ವಾಮೀ! ಅದೇನು ಅಂಥದ್ದು? ಅಭ್ಯಂತರ ಇಲ್ಲದಿದ್ದರೆ ಈ ಜೀವಕ್ಕೂ ತಿಳಿಸಿ ಧನ್ಯನನ್ನಾಗಿ ಮಾಡಿ," ಎಂದು ಪ್ರಾರ್ಥಿಸಿದ.

"ರಾಜಾ! ಗೋಪಿಯರ ಚಿತ್ತ ಕೃಷ್ಣನ ಹೃದಯದಲ್ಲಿ ಲೀನವಾಗಿದ್ದುದರಿಂದ ಉನ್ಮತ್ತರಂತೆ ಸಂಚರಿಸುತ್ತಾ ಕಂಡಕಂಡ ಕಲ್ಲುಗಳನ್ನೂ ಪ್ರಾಣಿಗಳನ್ನೂ 'ಕೃಷ್ಣಾ! ಕೃಷ್ಣಾ!' ಎಂದು ತಬ್ಬಿಕೊಳ್ಳುತ್ತಿದ್ದರು. ಮರಗಿಡಗಳೂ ಕಲ್ಲುಬಂಡೆಗಳೂ ಸಹ ವಿಯೋಗದಿಂದ ದುಃಖಪಡುತ್ತಿರುವಂತೆ, ಎಲೆಗಳ ತುದಿಯಿಂದ ಮರಗಿಡಗಳು ಕಣ್ಣೀರು ಸುರಿಸುತ್ತಿದ್ದವಂತೆ! ಕಲ್ಲುಬಂಡೆಗಳು ತಮ್ಮ ಕಣ್ಣೀರಿನಿಂದ ತೊಯ್ದು ಹೋದಂತೆ ಕಾಣುತ್ತಿದ್ದವಂತೆ. ಎಂಥ ವಿಚಿತ್ರ ದೃಶ್ಯ ಇದು ನೀನೇ ಯೋಚಿಸು. 'ಸರ್ವಂ ಸಜೀವಂ' ಎನ್ನುವುದು ನಿದರ್ಶನ ಎನ್ನುವಂತಿತ್ತು ಆ ದೃಶ್ಯ. ಚೈತನ್ಯವಿಲ್ಲದ ಪದಾರ್ಥ ಸೃಷ್ಟಿಯಲ್ಲಿ ಯಾವುದೂ ಇಲ್ಲ ಎನ್ನುವುದನ್ನು ಬೃಂದಾವನದ ಶಿಲೆಗಳು ವೃಕ್ಷಗಳು ಉದ್ಧವನಿಗೆ ಬೋಧಿಸಿದವು.

ಕಲ್ಲನ್ನೂ ಕರಗಿಸಿದ, ಗಿಡಮರಗಳೂ ಕಣ್ಣೀರು ಹಾಕುವಂತೆ ಮಾಡಿದ ಆ ಗೋಪಿಯರ ಭಕ್ತಿಯನ್ನು ಲೋಕದ ಜನರು ಅರ್ಥಮಾಡಿಕೊಳ್ಳದೆ ವಿಮರ್ಶೆಗೆ ತೊಡಗುವರೆಂದರೆ, ಅಂಥವರು ಜಡವಸ್ತುಗಳಾದ ಗುಂಡು ಬಂಡೆಗಳಿಗಿಂತಲೂ ಜಡವಾದ ಬುದ್ಧಿಯವರೆನ್ನಬೇಕು. ಜಗದೀಶನೂ ಜಗನ್ಮೋಹನನೂ ಆದ ಕೃಷ್ಣಚಂದ್ರನನ್ನು

ಅರಿತುಕೊಳ್ಳಲು ಜಡ ಬುದ್ಧಿಯವರಿಗೆ ಸಾಧ್ಯವಿಲ್ಲ. ನಿಜ ಬುದ್ಧಿ ಉಳ್ಳವರಿಗೆ ಮಾತ್ರ ಅದು ವಿದಿತ.

ಇದೇ ರೀತಿಯಲ್ಲಿ ಆ ದಿನ ಸಾಯಂಕಾಲ ವ್ರಜದಲ್ಲಿ ಒಂದು ಹೊಸ ಪದ್ಧತಿಯನ್ನು ಉದ್ಧವ ಕಂಡ. ಬ್ರಾಹ್ಮಣರು ಸಾಯಂಕಾಲ ಅಗ್ನಿಕಾರ್ಯ ಮಾಡುವಂತೆ, ಅಲ್ಲಿ ಗೋಪಿಯರು ಅವರವರ ಮನೆಯಲ್ಲಿ ಒಲೆಗಳಲ್ಲಿ ಬೆಂಕಿ ಉರಿಸುತ್ತಿದ್ದರು. ಒಬ್ಬರ ಮನೆಯಿಂದ ಮತ್ತೊಬ್ಬರ ಮನೆಯವರು ಬೆಂಕಿಯನ್ನು ತವೆಯಲ್ಲೋ ಮಡಕೆ ಮುಚ್ಚಳಗಳಲ್ಲೋ ತೆಗೆದುಕೊಂಡು ತಮ್ಮ ತಮ್ಮ ಮನೆಗಳಲ್ಲಿ ಬೆಂಕಿ ಉರಿಸುತ್ತಿದ್ದರು. ಹಾಗೇ ಮೊದಲು ನಂದನ ಮನೆಯಲ್ಲಿ ದೀಪ ಹತ್ತಿಸಿದರೆ, ಎಲ್ಲರೂ ಅವನ ಮನೆಗೆ ಹೋಗಿ ತಮ್ಮ ತಮ್ಮ ಹಣತೆಗಳನ್ನು ಹತ್ತಿಸಿಕೊಂಡು ಹೋಗುತ್ತಿದ್ದರು. ಗ್ರಾಮದ ವೇದಿಕೆಯ ಮೇಲೆ ಕುಳಿತು ಉದ್ಧವ ಇದನ್ನೆಲ್ಲಾ ನೋಡುತ್ತಿದ್ದ.

ಕೃಷ್ಣನ ಮನೆಗೆ ತನ್ನ ಹಣತೆ ಹತ್ತಿಸಿಕೊಳ್ಳಲು ಹೋದ ಒಬ್ಬಳು ಗೋಪಿ, ಆ ದೀಪದ ಮುಂದೆ ಹಾಗೇ ಕಣ್ಣುಮುಚ್ಚಿಕೊಂಡು ನಿಂತು, ಕದಲದೆ, ಬೇರೆಯವರಿಗೂ ಅವಕಾಶ ಕೊಡದೆ, ಬಹಳ ಹೊತ್ತು ನಿಂತಿದ್ದುದನ್ನು ನೋಡಿ, ಯಶೋದೆ ಒಳಗಿನಿಂದ ಬಂದು, 'ಅಯ್ಯೋ! ಏನಮ್ಮಾ ಇದು?' ಎಂದು ಗೋಪಿಯ ಮೈ ಕುಲುಕಿ ಎಚ್ಚರಿಸಲು ಪ್ರಯತ್ನಿಸಿದಳು. ಆದರೂ ಆ ಗೋಪಿ ಕಣ್ಣು ತೆರೆಯಲಿಲ್ಲ. ಸುತ್ತಲೂ ಸೇರಿದವರು ಅವಳನ್ನು ದೀಪದ ಬಳಿಯಿಂದ ಆಚೆಗೆ ಕರೆದುಕೊಂಡು ಹೋಗಿ ಸ್ವಲ್ಪ ವಿಶ್ರಮಿಸುವಂತೆ ಮಾಡಿದರು. ಅಷ್ಟು ಹೊತ್ತಿಗಾಗಲೇ ಅವಳ ಕೈ ಬೆರಳುಗಳು ಸುಟ್ಟು ಬೊಬ್ಬೆ ಬಂದಿತ್ತು. ಬಹಳ ಪ್ರಯತ್ನ ಮಾಡಿದ ಸ್ವಲ್ಪ ಹೊತ್ತಿನ ನಂತರ ಆ ಗೋಪಿ ಕಣ್ಣು ತೆರೆದಳು.

ವಿಷಯ ಏನೆಂದು ವಿಚಾರಿಸಿದಾಗ, ದೀಪದಲ್ಲಿ ಅವಳು ಕೃಷ್ಣನನ್ನು ಕಂಡುದಾಗಿಯೂ ಅವನನ್ನೇ ಆನಂದದಿಂದ ನೋಡುತ್ತಿದ್ದ ಅವಳಿಗೆ ದೀಪದ ಉರಿಯೇ ಕಾಣಲಿಲ್ಲವೆಂದು, ಬೆರಳುಗಳು ಸುಡುತ್ತಿದ್ದುದು ಅರಿವಾಗಲಿಲ್ಲವೆಂದು ಹೇಳಿದಳು. ಇದು ಉದ್ಧವನಿಗೆ ಮತ್ತಷ್ಟು ವಿಚಿತ್ರವಾಗಿ ಕಂಡಿತು," ಎಂದು ಶುಕ ಉದ್ಧವನಿಗೆ ಬೃಂದಾವನದಲ್ಲಾದ ಅನುಭವವನ್ನು ಹೇಳಿದ.

# ೩೫ ಸಖ ಮತ್ತು ಪ್ರಭು

ಪರೀಕ್ಷಿತ್ ಮತ್ತೆ ಪ್ರಶ್ನಿಸಿದ, "ಸ್ವಾಮೀ! ಮಥುರೆಯ ಕಾರಾಗೃಹದಿಂದ ರೇಪಲ್ಲೆಗೆ ಬಂದಾಗಿನಿಂದ ಹನ್ನೊಂದು ವರ್ಷಗಳ ಕಾಲ ಗೋಪಾಲ ಅಡವಿ ಗೊಲ್ಲರೊಡನೆ ಕೂಡಿ ಹೇಗೆ ಆಡಿದ, ವ್ರಜ ಜನ ಸಮೂಹದಲ್ಲಿ, ವನೋಪವನಗಳಲ್ಲಿ ತನ್ನ ಬಾಲ ಲೀಲೆಗಳನ್ನು ಹೇಗೆ ತೋರಿಸಿದನೆನ್ನುವುದನ್ನು ತಿಳಿಯಲು ಕುತೂಹಲವಾಗುತ್ತಿದೆ," ಎಂದು ಪ್ರಾರ್ಥಿಸಿದ. ಶುಕ ಮುಗುಳ್ನಕ್ಕು, "ಮಹಾರಾಜಾ! ಅಪ್ರಾಕೃತಿಕ ದಿವ್ಯ ಬಾಲಕನಾದ ಆ ಗೋಪಾಲನ ಮನೋಹರವೂ ಚಿತ್ತಾಕರ್ಷಕವೂ ಆದ ಲೀಲೆ ಗಳನ್ನೆಲ್ಲಾ ಹೇಳಲು ನನಗೆ ಸಾಧ್ಯವಿಲ್ಲ. ಅವುಗಳನ್ನು ಅನುಭವಿಸಿ, ಆನಂದಿಸಿದ ವ್ರಜಗೋಪರೇ ಧನ್ಯರು. ಭಗವಂತ ನಾಮ, ಜಾತಿ, ಕುಲ, ಕರ್ಮ, ಭಾವಗಳನ್ನು ನೋಡುವುದಿಲ್ಲ. ಯಾವ ಭಾವನೆಯಿಂದ ಸೇರಿದರೂ ಸರಿಯೇ, ಆದರಿಸಿ, ಆಸರೆಯಿತ್ತು, ಅಶಾಂತಿ ನಿವಾರಿಸಿ ಆನಂದವನ್ನು ಕೊಡುತ್ತಿದ್ದ. ವಸುದೇವ ಅವ ನನ್ನು ನಂದನನ ಮನೆಯಲ್ಲಿ ಬಿಟ್ಟು ಬಂದಾಗಿನಿಂದ ನಿತ್ಯವೂ ನಂದಾನಂದ ಕೃಷ್ಣನಿಗೆ 'ಜಯ ಜಯ' ಎನ್ನುವ ಘೋಷ ಕೇಳಿಬರುತ್ತಿತ್ತು.

ದಿನದಿನಕ್ಕೆ ಬೆಳೆಯುತ್ತಾ ಅಮ್ಮನೊಂದಿಗೆ ಅಕ್ಕರೆಯಿಂದ ಆಡುತ್ತಾ ಅಂಬೆ ಕಾಲಿಟ್ಟು ಹೊಸಲು ದಾಟುತ್ತಾ ಒಂದೊಂದು ಸಾರಿ ಅಮ್ಮ ಅಥವಾ ಅಪ್ಪನ ಕೈಹಿಡಿದು ತಪ್ಪು ತಪ್ಪು ಹೆಜ್ಜೆಹಾಕುತ್ತಾ ತೂರಾಡುತ್ತಾ ನಡೆಯುತ್ತಿದ್ದ. ತಂದೆ ತಾಯಿಗಳು ಕಂಸನು ಕಳುಹಿಸುತ್ತಿದ್ದ ದೂತರ ಕಣ್ಣಿಗೆ ಅವನು ಬೀಳದಂತೆ ಎಷ್ಟೆಷ್ಟು ಮರೆಯಲ್ಲಿಡಲು ಪ್ರಯತ್ನಿಸಿದರೂ ಇರುತ್ತಿರಲಿಲ್ಲ! ಬಂದವರನ್ನೆಲ್ಲಾ ತಾನೇ ಮುಂದೆ ಹೋಗಿ ಪರಿಚಯ ಮಾಡಿಕೊಳ್ಳುತ್ತಿದ್ದ. ಲೋಕಕ್ಕೇ ಶ್ರೀಕರನಾದ ಆ ಗೋಪಾಲನನ್ನು ಯಾರು ಮುಚ್ಚಿಡಬಲ್ಲರು? ಮುಚ್ಚಿಟ್ಟರೆ ಇರುವವನಾದರೂ ಯಾರು? ಎಲ್ಲಾ ಒಂದು ಲೀಲೆ, ರಾಜಾ!

ಹೀಗೆ ಬೆಳೆಯುತ್ತಾ ಬೆಳೆಯುತ್ತಾ ತಂದೆ ತಾಯಿಗಳು ಎಷ್ಟು ತಡೆದರೂ ನಿಲ್ಲದೆ ಗೋಪಬಾಲರೊಂದಿಗೆ ಪುಣ್ಯ ಯಮುನಾ ನದಿಯ ಮರಳು ದಂಡೆಗೆ ಆಡಲು ಹೋಗುತ್ತಿದ್ದ. ಗೋವುಗಳನ್ನು ಮೇಯಿಸಲು ಹೋಗುತ್ತಿದ್ದ. ಸ್ವಚ್ಛವಾದ ಶೋಭಾ ಯಮಾನವಾದ ಆ ಹಸುಕರುಗಳ ಮಧ್ಯೆ ಆಟವಾಡುತ್ತಾ ಅವನು ಮನೋಹರ ವಾಗಿ ಇರುತ್ತಿದ್ದುದನ್ನು ನೋಡಿದ ಕಣ್ಣುಗಳೇ ಕಣ್ಣುಗಳು!

ಕರುಗಳು ಅಚ್ಚ ಬಿಳುಪು! ಗೋಪಾಲ ಕಪ್ಪು! ಎಷ್ಟು ಅಂದವೋ ನೀನೇ ಯೋಚಿಸು! ಅವು ಕೃಷ್ಣನನ್ನು ಬಿಟ್ಟು ಹೋಗುತ್ತಿರಲಿಲ್ಲ. ಅವನೂ ಅಷ್ಟೆ, ಅವುಗಳನ್ನು ಸೋದರರಂತೆ, ಮಕ್ಕಳಂತೆ ಪ್ರೀತಿಸುತ್ತಿದ್ದ. ಗೋಪಾಲನ ಕೈ ಆ ಕರುಗಳ ಮೈಮೇಲೆ ಬಿದ್ದರೆ ಸಾಕು, ಅವು ಮೈ ಮರೆತು ಬಾಯಿ ತೆರೆದು, ಬಾಲ ಎತ್ತಿ, ನಾಲಿಗೆ ಚಾಚಿ ಕೃಷ್ಣನ ಮುಖವನ್ನೂ ಕೈಯನ್ನೂ ನೆಕ್ಕುತ್ತಿದ್ದವು. ಗೋಪಾಲನೂ ಒಂದೊಂದು ಸಾರಿ ಆ ಕರುಗಳ ಕುತ್ತಿಗೆಯನ್ನು ಗಟ್ಟಿಯಾಗಿ ಅಪ್ಪಿಕೊಂಡು, ಕಣ್ಣು ಮುಚ್ಚಿಕೊಂಡು ಮಂದಹಾಸದಿಂದ ತೂಗುತ್ತಿದ್ದ.

ಪ್ರೇಮದಿಂದ ಕರುಗಳು ತಮ್ಮ ಎಳೆಯ ಕೊಂಬುಗಳಿಂದ ಗೋಪಾಲನನ್ನು ಗುದ್ದುತ್ತಿದ್ದವು. ಹೀಗೆ ನಿತ್ಯ ವಸಂತ ವಿಹಾರ ಸ್ಥಾನವಾದ ಬೃಂದಾವನದಲ್ಲಿ ಯಮುನಾ ತೀರದ ಮರದ ಮೇಲೆ ಗೋ ಸಮೂಹದೊಂದಿಗೆ, ಗೋಪಾಲರೊಂದಿಗೆ ಹಗಲು ರಾತ್ರಿ ಎನ್ನದೆ ವಿಹರಿಸುತ್ತಿದ್ದ. ಕಡೆಗೆ ನಂದ ಯಶೋದೆಯರು ಪರಿಚಾರಕರನ್ನು ಕಳಿಸಿ ಬಲವಂತದಿಂದ ಮನೆಗೆ ಕರೆದೊಯ್ಯುತ್ತಿದ್ದರು.

ಈ ರೀತಿಯಾಗಿ ಮನೆಯನ್ನೂ ತಿಂಡಿತೀರ್ಥವನ್ನೂ ಮರೆತು ಗೊಲ್ಲಬಾಲಕರೊಂದಿಗೆ ಕೂಡಿ ಬೆಳೆಯುತ್ತಾ ದೊಡ್ಡವನಾದ. ತಂದೆ ತಾಯಿ ಹೇಳದಿದ್ದರೂ, ಹಸುಗಳನ್ನೂ ಕರುಗಳನ್ನೂ ಬಿಚ್ಚಿ, ಊರಿನ ದನಕರುಗಳು ಹೋಗುವತ್ತ ತನ್ನ ಹಸು ಕರುಗಳನ್ನೂ ಹೊಡೆದುಕೊಂಡು ಹೋಗುತ್ತಿದ್ದ, ಗೋಪಬಾಲರಂತೆ ತಾನೂ ಕೂಡ ಭುಜದ ಮೇಲೊಂದು ಕೋಲನ್ನಿಟ್ಟುಕೊಂಡು, ತಲೆಗೆ ತುಂಡು ಸುತ್ತಿಕೊಂಡು, ಅವರ ಮಧ್ಯೆ ನಡೆದುಹೋಗುತ್ತಿದ್ದರೆ ರಾಜ ಮರಿ ಸಿಂಹದಂತೆ ಕಾಣಿಸುತ್ತಿದ್ದ. ಹುಡುಗರೊಂದಿಗೆ ವಿನೋದವಾಗಿ ಆಡುತ್ತಾ ತನ್ನ ಎಡಗೈಯಿಂದ ಕಿವಿಯನ್ನು ಮುಚ್ಚಿಕೊಂಡು, ಗಟ್ಟಿಯಾಗಿ ಪ್ರೇಮ ಗೀತೆಗಳನ್ನು ಹಾಡುತ್ತಿದ್ದ! ಅಂಥ ಸಮಯದಲ್ಲಿ, ಪ್ರೀತಿಯಿಂದ ಹುಲ್ಲು ತಿನ್ನುತ್ತಿದ್ದ ಗೋವುಗಳು ಮೇಯುವುದನ್ನು ನಿಲ್ಲಿಸಿ, ಕತ್ತು ಚಾಚಿ ಸ್ತಂಭೀಭೂತವಾದಂತೆ ನಿಲ್ಲುತ್ತಿದ್ದವು. ಕಿವಿಯನ್ನು ನೆಟ್ಟಗೆ ಮಾಡಿಕೊಂಡು, ಅವನ ದಿವ್ಯ ಕರೆಗೆ ಸಿದ್ಧವಾದಂತೆ, ಇಲ್ಲವೆ ಧ್ಯಾನಾವಸ್ಥೆಯಲ್ಲಿ ಇರುವಂತೆ ಕಾಣಿಸುತ್ತಿದ್ದವು. ಹಾಲು ಕುಡಿಯಲು ತಾಯಿಯ ಕೆಚ್ಚಲಿಗೆ ಬಾಯಿಟ್ಟ ಕರುಗಳು ಹಾಲು ಕುಡಿಯದೆ ಕಣ್ಣು ಮುಚ್ಚಿಕೊಂಡು ಕೃಷ್ಣಗಾನವನ್ನೇ ಆಲೈಸುತ್ತಿರುವಂತೆ ಕಾಣಿಸುತ್ತಿದ್ದವು! ನೋಡಿದವರಿಗೆ ಮಹದಾಶ್ಚರ್ಯ ಉಂಟುಮಾಡುತ್ತಿದ್ದವು.

ರಾಜಾ! ಗೋಪಾಲನ ಲೀಲೆಗಳನ್ನು ಎಷ್ಟೆಂದು ಹೇಳಲಿ, ಏನೆಂದು ಹೇಳಲಿ! ಎಲ್ಲವೂ ಅದ್ಭುತವಾದುವೇ! ಎಲ್ಲವೂ ಆನಂದಮಯವಾದುವೇ!

ಒಂದೊಂದು ಸಾರಿ ಹುಡುಗರೊಂದಿಗೆ ಪೈಪೋಟಿಯಿಂದ ದೊಣ್ಣೆ ತಿರುಗಿಸುತ್ತಿದ್ದರೆ ಕೈಯಲ್ಲಿದ್ದ ದೊಣ್ಣೆಯೇ ಕಾಣಿಸುತ್ತಿರಲಿಲ್ಲ. ಅಷ್ಟು ವೇಗದಿಂದ ತಿರುಗಿಸುತ್ತಿದ್ದ. ಆ ದೊಣ್ಣೆ ವರಸೆ ನಮಗೂ ಕಲಿಸು ಎಂದು ಎಷ್ಟೋ ಜನ ಬಾಲಕರು ಅವನನ್ನು ಕೇಳಿಕೊಳ್ಳುತ್ತಿದ್ದರು. ಲೋಕವನ್ನೇ ಕೈಯಲ್ಲಿಟ್ಟುಕೊಂಡು ಚೆಂಡಿನಂತೆ ತಿರುಗಿಸುವ ಗೋಪಾಲನಿಗೆ ದೊಣ್ಣೆ ತಿರುಗಿಸುವುದು ಏನು ಮಹಾ! ಇದು ಕಲಿತರೆ ಬರುವಂತ ಹುದಲ್ಲ ಎನ್ನುವುದು ಗೋಪಾಲಕರಿಗೆ ತಿಳಿಯದು, ಪಾಪ.

ಒಂದೊಂದು ಸಾರಿ ಮರದ ಮೇಲೆ ಆಟವಾಡುತ್ತಿದ್ದರು. ಕಳ್ಳ ತನ್ನನ್ನು ಹಿಡಿಯಲು ಬಂದಾಗ ಮರದ ತುಟ್ಟ ತುದಿಗೆ ಹೋಗಿ, ಕಾಲಿಟ್ಟರೆ ಮುರಿದು ಬೀಳುವಂಥ ಸಣ್ಣ ರೆಂಬೆಯ ಮೇಲೆ ಕುಳಿತುಕೊಳ್ಳುತ್ತಿದ್ದ. ಅವನನ್ನು ಹಿಡಿಯಲೇ ಆಗುತ್ತಿರಲಿಲ್ಲ. ಅವನನ್ನು ಹಿಡಿಯ ಬಹುದು, ನಿಜ, ಆದರೆ ಅದು ಸಾಮಾನ್ಯರಿಗೆ ಅಸಾಧ್ಯ. ಸತ್ ಹೃದಯಿಗಳಿಗೇ ಸಾಧ್ಯ.

ಅಡವಿಯಲ್ಲಿ ಗೊಲ್ಲಬಾಲಕರೊಂದಿಗೇ ಇರುತ್ತಿದ್ದವನು, ಅವರ ಭುಜದ ಮೇಲೆ ಕೈ ಹಾಕಿಕೊಂಡು ಪರಿಹಾಸ್ಯ ಮಾಡುತ್ತಾ ಲಗ್ಗೆ ಹಾಕುತ್ತಾ ತಿರುಗುತ್ತಿದ್ದವನು, ಕ್ಷಣ ಮಾತ್ರದಲ್ಲಿ ಕಾಣಿಸದೆ ಹೋಗುತ್ತಿದ್ದ. ತಟ್ಟನೆ, ಯಾವುದೋ ಬೇರೆ ವೇಷದಿಂದ ಎದುರಿಗೆ ನಡೆದು ಬರುತ್ತಿದ್ದ. ಗೋಪಾಲಕರು ಅವನು ಯಾರೋ ಹೊಸಬನೆಂದು ಭಾವಿಸಿ ಮಾತಾಡಿಸುತ್ತಿರಲಿಲ್ಲ. ಆಗ ಅವನೇ ಫಕ್ಕನೆ ನಕ್ಕು, 'ನಾನೇ, ನಾನೇ, ನೀವು ಗುರುತಿಸದೆ ಹೋದಿರಿ,' ಎಂದು ಕೇಕೆ ಹಾಕಿದಾಗ ಗೊಲ್ಲಬಾಲಕರು ಆಶ್ಚರ್ಯಪಡುತ್ತಿದ್ದರು. ಒಮ್ಮೊಮ್ಮೆ ಭಯಭ್ರಾಂತಿಗೊಳ್ಳುತ್ತಿದ್ದರು.

ಹಗಲೆಲ್ಲ ಈ ರೀತಿಯಾಗಿ ಕಳೆದು, ಸಾಯಂಕಾಲ ಏನೂ ಅರಿಯದ ಬಾಲಕನ ಹಾಗೆ ಗೋವುಗಳೊಂದಿಗೆ, ಹುಡುಗರೊಂದಿಗೆ ಹಳ್ಳಿ ಸೇರುತ್ತಿದ್ದ. ಒಂದೊಂದು ದಿನ ತಾಯಿ ಅವನನ್ನು ಕಾಡಿ ಬೇಡಿ ಅಡವಿಗೆ ಹೋಗದೆ ಮನೆಯಲ್ಲೇ ಇರುವಂತೆ ಮಾಡುತ್ತಿದ್ದಳು. ಅಂಥ ಸಮಯದಲ್ಲಿ, ಅಡವಿಯಲ್ಲಿ ಗೊಲ್ಲ ಬಾಲಕರೂ ಗೋವು ಗಳೂ ಚಿಂತೆಯಲ್ಲಿ ಮುಳುಗಿ ಹೋಗುತ್ತಿದ್ದವು. ಹಸುಗಳ ಪಕ್ಕೆಗಳು ಒಳಗೆ ಹೋಗಿ, ಒಂದರ ಮೇಲೊಂದು ತಲೆ ಹಾಕಿಕೊಂಡು, ಮರದ ನೆರಳಲ್ಲಿ ಮಲಗಿ, ಆಹಾರ ನೀರು ಇಲ್ಲದೆ, ಆನಂದಕೃಷ್ಣನು ಬಾರದೆ ಇದ್ದುದಕ್ಕಾಗಿ ದುಃಖಿಸುತ್ತಿರುವಂತೆ, ಚಿಂತಿಸುತ್ತಿರುವಂತೆ ಕಾಣುತ್ತಿದ್ದವು.

ಒಂದೊಂದು ದಿನ, ಮಾವನಾದ ಕಂಸನು ವಿವಿಧ ವೇಷ ಧರಿಸಿದ ರಾಕ್ಷಸರನ್ನು ಆಟದ ಬೊಂಬೆಗಳೊಂದಿಗೆ, ತಿಂಡಿತಿನಸುಗಳೊಂದಿಗೆ ರೇಪಲ್ಲೆಗೆ ಕಳುಹಿಸುತ್ತಿದ್ದ.

ಆ ಬೊಂಬೆಗಳ ಸುತ್ತ ಹಳ್ಳಿಯ ಬಾಲಕರು ಸೇರಿ, ಬೆಲೆಗಳನ್ನು ವಿಚಾರಿಸಿ ಕೊಳ್ಳುತ್ತಿದ್ದರೆ, ಕೃಷ್ಣ ಬರುವನೇನೋ ಎಂದು ಆ ವೇಷ ಮರೆಸಿಕೊಂಡು ಬಂದ ಕಂಸ ದೂತರು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದರು. ಆದರೆ ಕೃಷ್ಣ ಬೊಂಬೆಗಳನ್ನು ಕಣ್ಣೆತ್ತಿ ಸಹ ನೋಡುತ್ತಿರಲಿಲ್ಲ.

ಅವರು ಸಾಯಂಕಾಲದವರೆಗೂ ಹೊಂಚು ಹಾಕಿ ಕೃಷ್ಣನನ್ನು ಎತ್ತಿಕೊಂಡು ಹೋಗಲು ನೋಡಿದರೆ, ಆ ದುರ್ಮಾರ್ಗಿಗಳನ್ನು ಗುರುತಿಸಿ, ಕೃಷ್ಣ ಅವರ ಕೈಯಲ್ಲಿ ಸಿಕ್ಕಿಕೊಂಡ ಹಾಗೆ ಮಾಡಿ, ಅವರನ್ನು ಸೀಳಿ ಚೂರು ಚೂರು ಮಾಡಿ ಎಸೆಯುತ್ತಿದ್ದ. ಅದು ರೇಪಲ್ಲೆಯ ಜನರಿಗೆ ವಿಚಿತ್ರವಾಗಿಯೂ ಭಯಾನಕವಾಗಿಯೂ ಆಶ್ಚರ್ಯ ಕರವಾಗಿಯೂ ಆನಂದದಾಯಕವಾಗಿಯೂ ಇರುತ್ತಿತ್ತು.

ಒಂದು ದಿನ ಮಾವಿನ ಹಣ್ಣಿನ ಗಾಡಿಗಳು ಹಳ್ಳಿಯ ತುಂಬ ತುಂಬಿಹೋದವು. ಇದು ರಾಕ್ಷಸ ಕೃತ್ಯವೆಂದು ಗಮನಿಸಿ, ಕೃಷ್ಣ ಮೊದಲೇ ಹೋಗಿ ಹಣ್ಣುಗಳನ್ನು ತೆಗೆದುಕೊಂಡು, ತಂದಿದ್ದವರನ್ನು ಯಮಪುರಿಗೆ ಅಟ್ಟಿದ. ಮಾವ ಕಳಿಸಿದ ವಸ್ತುಗ ಳನ್ನು ಹಿಂದಕ್ಕೆ ಕಳಿಸುವುದು ಶಿಷ್ಟಾಚಾರ ವಿರುದ್ಧವೆಂದು, ತಂದಿದ್ದೆಲ್ಲವನ್ನೂ ತೆಗೆದುಕೊಳ್ಳುತ್ತಿದ್ದ. ಆದರೆ, ತಂದವರನ್ನು ಮಾತ್ರ ತಿರುಗಿ ಕಳಿಸದೆ, ಸುದ್ದಿಯನ್ನೂ ತಿಳಿಸದೆ ಇರುತ್ತಿದ್ದ.

ಮಹಾರಾಜಾ! ಭಗವಂತ ವ್ರಜೆಯನ್ನು ಸೇರಿದಾಗಿನಿಂದ ವ್ರಜಮಂಡಲವೆಲ್ಲಾ ಲಕ್ಷ್ಮಿಯ ಕ್ರೀಡಾ ಸ್ಥಳವಾಯಿತು. ನಿಜವಾಗಿಯೂ ಲಕ್ಷ್ಮೀದೇವಿ ವ್ರಜಮಂಡಲದಲ್ಲಿ ಬಹಿರಂಗವಾಗಿ ಅಡಗಿಕೊಂಡಿರುವಳೇನೋ ಎನಿಸುವಂತಿತ್ತು. ಊರಿನಲ್ಲಿ ಸಹಸ್ರ ಸಹಸ್ರ ಗೋವುಗಳು, ಹಾಲು ಮೊಸರಿಗೆ ಏನೂ ಕೊರತೆಯಿಲ್ಲ. ಇಡುವುದಕ್ಕೆ, ಕುಡಿಯುವುದಕ್ಕೆ, ತಿನ್ನುವುದಕ್ಕೆ ಸಾಧ್ಯವೇ ಇಲ್ಲದಷ್ಟು ಯಥೇಚ್ಛ ಹಾಲು, ಮೊಸರು, ಬೆಣ್ಣೆ. ಅವುಗಳನ್ನು ಏನು ಮಾಡಬೇಕೆನ್ನುವುದೇ ತಿಳಿಯದು. ಅದನ್ನು ನೋಡಿ, ಗೋಪಾಲ ತನ್ನ ಪ್ರೀತಿಪಾತ್ರವಾದ ಗೋವುಗಳ ಸಾರವನ್ನು ಬಿಸಾಡಗೊಡದೆ ತನ್ನ ಹೊಟ್ಟೆಯಲ್ಲೇ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಇದರಿಂದಲೇ ಅವನಿಗೆ ಹಾಲು ಮೊಸರು ಕಳ್ಳ ಎನ್ನುವ ಹೆಸರು ಬಂದದ್ದು.

ಈ ಭೋಗಗಳನ್ನು ಗಮನಿಸಿ, ಕೃಷ್ಣನು ಪರಮಾತ್ಮನೆಂದು ಲೋಕಕ್ಕೆ ತಿಳಿಸುವ ಸಲುವಾಗಿ ಇಂದ್ರ ಒಂದು ಯುಕ್ತಿ ಹೂಡಿದ. ತನಗೆ ಕೋಪ ಬರುವುದಕ್ಕೆ ಒಂದು ನೆಪ ಮಾಡಿಕೊಂಡ. ವ್ರಜೆಯ ಜನರು ಇಂದ್ರಪೂಜೆಯನ್ನು ನಿರಾಕರಿಸಿದಂತೆಯೂ ಇಂದ್ರ ಕಲ್ಲು ಮಳೆಗರೆದಂತೆಯೂ ಅದರ ಹೊಡೆತದಿಂದ ರಕ್ಷಿಸುವುದಕ್ಕಾಗಿ

ಕೃಷ್ಣ ಗೋವರ್ಧನಗಿರಿ ಎತ್ತಿದಂತೆಯೂ ನಾಟಕ ಹೂಡಿದ. ನಿಜಕ್ಕೂ ಇಂದ್ರನಿಗೆ ಕೋಪವಿಲ್ಲ.

ಅಲ್ಲದೆ, ಇಂದ್ರ ಕೃಷ್ಣ ಪೂಜೆಯನ್ನು ತಪ್ಪಿಸುವವನಲ್ಲ. ಸಾಮಾನ್ಯ ಮಾನವರಿಗೆ ದೈವತ್ವ ಅರ್ಥವಾಗುವುದು ಕಷ್ಟವಾದ್ದರಿಂದ ಇಂಥ ಅಮಾನುಷ ಚರ್ಯೆಗಳಿಂದ ದೈವತ್ವವನ್ನು ಗುರುತಿಸಲೆಂದು ಕೃಷ್ಣ ಈ ಲೀಲೆಗಳನ್ನು ಸಂಕಲ್ಪಿಸಿದ. ಕಾರಣವಿಲ್ಲದೆ ಕಾರ್ಯ ಇರದು ಎನ್ನುವುದಕ್ಕೆ ಇಂಥ ಚರ್ಯೆಗಳು ನಿದರ್ಶನ," ಎಂದು ಶುಕ ನುಡಿದುದನ್ನು ಕೇಳಿ, ಪರೀಕ್ಷಿತ್ ಮಹಾರಾಜ, "ಆಹಾ! ಗೋಪಾಲನ ಲೀಲೆಗಳು ಎಷ್ಟು ಮಧುರ! ಕೇಳಿ ಕೇಳಿದಷ್ಟೂ ಮತ್ತೂ ಕೇಳಬೇಕೆನ್ನುವ ದಾಹ ಹುಟ್ಟಿಸುತ್ತಿದೆ. ಸ್ವಾಮೀ! ಇನ್ನೂ ಕೆಲವು ಅವನ ಬಾಲ ಲೀಲೆಗಳನ್ನು ಶ್ರವಣ ಮಾಡಿಸಿ ನನ್ನನ್ನು ಧನ್ಯನನ್ನಾಗಿ ಮಾಡಿ," ಎಂದು ಪ್ರಾರ್ಥಿಸಿದ.

## ೩೬ ದೈತ್ಯರಿಗಾದ ಗತಿ

ಕೃಷ್ಣನ ಬಾಲಲೀಲೆಗಳನ್ನು ಸ್ಮರಿಸುವುದೂ ಹೇಳುವುದೂ ಶುಕರಿಗೆ ಕೂಡ ಅಮಿತ ಪ್ರೀತಿಯದಾದ್ದರಿಂದ, ಪರೀಕ್ಷಿತ್ ಕೇಳಿದ್ದೇ ತಡ, ಶುಕ, "ಮಹಾರಾಜಾ! ಉಳಿದು ಇರುವ ಈ ಶೇಷ ಕಾಲವನ್ನು ಭಗವತ್ ಕಥಾಶ್ರವಣದಿಂದ ಪವಿತ್ರಗೊಳಿಸುವುದಕ್ಕಿಂತ ಹೆಚ್ಚಿನದು ಬೇರೆ ಏನಿದೆ? ಭಗವತ್ ಲೀಲೆಗಳೆಲ್ಲವೂ ಅಮೃತ ಬಿಂದುಗಳೇ. ಎಲ್ಲವೂ ಆನಂದಮಯವಾದುವುಗಳೇ. ನೀನು ಏನನ್ನು ಕೇಳಲು ಬಯಸುತ್ತಿಯೋ ಹೇಳು, ಅದನ್ನು ಕುರಿತು ಸತ್ಯಾಂಶವನ್ನೂ ಮಹಾತ್ಮ್ಯವನ್ನೂ ಹೇಳುತ್ತೇನೆ," ಎನ್ನಲು, ಪರೀಕ್ಷಿತ್ ಮಹಾರಾಜ, "ಸ್ವಾಮೀ! ಗೋಪಾಲ ಆ ಗೋಪಾಲರುಗಳೊಂದಿಗೆ, ಇನ್ನೇನು ವಿನೋದಗಳನ್ನಾಡುತ್ತಿದ್ದ ಎನ್ನುವುದನ್ನು ಕೇಳಬೇಕೆನಿಸಿದೆ," ಎಂದ.

ಶುಕ ಹೇಳಲಾರಂಭಿಸಿದ, "ಮಹಾರಾಜಾ! ಗೋಪಾಲ ಬ್ರಹ್ಮ ಮುಹೂರ್ತದಲ್ಲಿ ಎದ್ದು, ಕಾಲಕೃತ್ಯಗಳನ್ನು ತೀರಿಸಿಕೊಂಡು, ದನಗಳ ಕೊಟ್ಟಿಗೆಗೆ ಹೋಗಿ, ಆ ದಿನ ಯಾವ ಯಾವ ದನಗಳನ್ನು ಮೇವಿಗೆ ಹೊಡೆದುಕೊಂಡು ಹೋಗಬೇಕೋ

ಅವುಗಳಿಗೆ ನೀರು ಕುಡಿಸಿ, ಮಿಕ್ಕವುಗಳಿಗೆ ಹುಲ್ಲು ಹಾಕಿ, ಮೇವಿಗೆ ಹೊಡೆದು ಕೊಂಡು ಹೋಗಬೇಕಾದುವುಗಳ ಹಗ್ಗ ಬಿಚ್ಚಿ, ಹೊರಕ್ಕೆ ಹೊಡೆಯುತ್ತಿದ್ದ.

ಒಳಗೆ ಹೋಗಿ ತಂಗಳನ್ನ, ಉಪ್ಪಿನಕಾಯಿಯ ಬುತ್ತಿ ಕಟ್ಟಿಕೊಂಡು, ಅಣ್ಣನನ್ನು ಎಬ್ಬಿಸಿ, ಬೀದಿಗೆ ಹೋಗಿ, ಊರಿನ ಗೊಲ್ಲಬಾಲಕರಿಗೆ ತಾನು ಸಿದ್ಧವಾಗಿದ್ದೇನೆಂದು ತಿಳಿಸಲು ಕೊಂಬು ಊದುತ್ತಿದ್ದ. ಆ ಧ್ವನಿ ಕೇಳುತ್ತಲೇ ಗೊಲ್ಲಬಾಲಕರು ಒಮ್ಮೆಲೇ ಗಡಿಬಿಡಿಯಿಂದ ತಮ್ಮ ತಮ್ಮ ಕೆಲಸಗಳನ್ನು ಮುಗಿಸಿ, ತಂಗಳು ಬುತ್ತಿ ಗಂಟನ್ನು ಹೆಗಲ ಮೇಲೆ ಹಾಕಿಕೊಂಡು, ಯಶೋದಮ್ಮನ ಮನೆಯ ಮುಂದೆ ಸಿದ್ಧವಾಗಿ ಬಂದು ನಿಲ್ಲುತ್ತಿದ್ದರು.

ಎಲ್ಲರೂ ಸೇರಿ ವೇಣುವನ್ನೂದಿಕೊಳ್ಳುತ್ತಾ ಕೆಲವರು ಕೋಗಿಲೆ ಕೂಗಿದೊಡನೆ ತಾವೂ ಅದರಂತೆ ಮರುಕೂಗು ಕೂಗುತ್ತಾ ಆಕಾಶದಲ್ಲಿ ಪಕ್ಷಿಗಳು ಹಾರುವಾಗ ಭೂಮಿಯ ಮೇಲೆ ಬಿದ್ದ ಅವುಗಳ ನೆರಳನ್ನೇ ಅನುಸರಿಸಿ ಓಡುತ್ತಾ ದನಗಳ ಮೇಲೆ ಮಲಗಿಕೊಂಡು ತಮತಮಗೆ ಬೇಕಾದ ಹಾಡನ್ನು ರಾಗವಾಗಿ ಕಿರುಚುತ್ತಾ ಮಧ್ಯೆ ಮಧ್ಯೆ ಗೋಪಾಲ ಏನು ಮಾಡುತ್ತಿದ್ದಾನೋ ಎಲ್ಲಿದ್ದಾನೋ ಎಂದು ನೋಡುತ್ತಾ ಹೋಗಿ ಅರಣ್ಯವನ್ನು ಸೇರುತ್ತಿದ್ದರು.

ಕೃಷ್ಣ ತನ್ನ ಮುರಳಿಯನ್ನು ಸೊಂಟದಲ್ಲಿ ಸಿಕ್ಕಿಸಿ, ಬಲಗೈಯಲ್ಲಿ ಕೋಲನ್ನೂ ಎಡಗೈಯಲ್ಲಿ ಬುತ್ತಿಗಂಟನ್ನೂ ಹಿಡಿದು, ತನ್ನ ಮಧುರ ಮನೋಹರ ಕಂಠದಿಂದ ಏರಿದ ಧ್ವನಿಯಲ್ಲಿ ಹಾಡುತ್ತಾ ನಡೆದು ಹೋಗುತ್ತಿದ್ದ.

ಗೋವುಗಳು ಆನಂದದಿಂದ ಅವನ ಹಾಡನ್ನು ಕೇಳುತ್ತಿದೆಯೋ ಎನ್ನುವಂತೆ, ಕಿವಿಗಳನ್ನು ನೆಟ್ಟಗೆ ಮಾಡಿಕೊಂಡು, ಕತ್ತುಗಳನ್ನು ಎತ್ತಿಕೊಂಡು, ಗೋಪಾಲನ ಗಾನಕ್ಕೆ ತಾಳವೋ ಎನ್ನುವಂತೆ ಹೆಜ್ಜೆ ಹಾಕುತ್ತಾ ಹೋಗಿ, ಕೊಳವನ್ನು ಸೇರುತ್ತಿದ್ದವು. ಆ ಹೊತ್ತಿಗೆ ಊಟದ ಸಮಯವಾಗುತ್ತಿದ್ದುದರಿಂದ, ಎಲ್ಲರೂ ಆ ಕೊಳದ ದಂಡೆಯ ಮೇಲೆ ಕುಳಿತು, ಮೊಸರೂ ಹಾಲೂ ಸೇರಿಸಿ ಕಲಸಿದ ಅನ್ನ, ಹಾಗೂ ಬಗೆ ಬಗೆಯ ಅಡಿಗೆಯ ತಮ್ಮ ಬುತ್ತಿ ಗಂಟನ್ನು ಬಿಚ್ಚಿಟ್ಟುಕೊಂಡು, ಗೋಪಾಲ ತನ್ನ ಗಂಟನ್ನು ಬಿಚ್ಚಿ ಉಣ್ಣಲು ಪ್ರಾರಂಭಿಸುವವರೆಗೂ ಕಾಯುತ್ತಾ ಕುಳಿತಿರುತ್ತಿದ್ದರು. ಗೋಪಾಲ ತುತ್ತನ್ನು ಬಾಯಿಗೆ ಹಾಕಿಕೊಳ್ಳುತ್ತಲೇ ಎಲ್ಲರೂ ತಿನ್ನಲು ಮೊದಲು ಮಾಡುತ್ತಿದ್ದರು.

ಒಂದೊಂದು ಸಾರಿ ಗೋಪಾಲ ತನ್ನ ಮೊಸರನ್ನವನ್ನು ತುತ್ತು ತುತ್ತು ಮಾಡಿ ಎಲ್ಲರಿಗೂ ಹಂಚಿ, ಅವರನ್ನವನ್ನು ತಾನು ಒಂದೊಂದು ಉಂಡೆ ಕೈಗೆ ಹಾಕಿಸಿ ಕೊಂಡು ತಿನ್ನುತ್ತಿದ್ದ.

'ಗೋಪಾಲಾ, ಇದು ನಮ್ಮ ಎಂಜಲು. ಹೇಗೆ ನಿನಗೆ ಕೊಡುವುದು, ಅಪರಾಧ ಅಲ್ಲವೇ?' ಎಂದು ಆ ಬಾಲಕರು ಹೆದರಿ, ಹಿಂದೆ ಹಿಂದಕ್ಕೆ ಸರಿಯುತ್ತಿದ್ದರು. ಆಗ ಗೋಪಾಲ, 'ಎಲ್ಲರಲ್ಲೂ ಇರುವವನು ಒಬ್ಬನೇ ಆದ್ದರಿಂದ ಭೇದವೇಕೆ? ಎಂಜಲು ಹೇಗಾಗುವುದು?' ಎನ್ನುತ್ತಾ, ಅವರು ನೆಂಚಿಕೊಳ್ಳಲು ಇಟ್ಟುಕೊಂಡಿದ್ದ ನೆಲ್ಲಿಕಾಯಿ ಉಪ್ಪಿನಕಾಯಿಯನ್ನು ಫಕ್ಕನೆ ತೆಗೆದುಕೊಂಡು ಚಪ್ಪರಿಸಿಬಿಡುತ್ತಿದ್ದ. ಅಂದು ಶಬರಿಯ ಎಂಜಲು ತಿಂದ ಸ್ವಾಮಿಗೆ ಇಂದು ಗೋಪಬಾಲರ ಎಂಜಲು ಬೇರೆ ಹೇಗಾದೀತು?

ಒಂದು ದಿನ ಹೀಗೆ ಗುಡ್ಡದ ನೆರಳಲ್ಲಿ ಕುಳಿತು ಬುತ್ತಿ ತಿಂದು, ಕೊಳದಲ್ಲಿ ಕೈ ತೊಳೆದ ಮೇಲೆ, ಇದ್ದಕ್ಕಿದ್ದಂತೆ ಗೋಪಾಲ ಮಂದೆಯ ಬಳಿಗೆ ಓಡಿ ಹೋದದ್ದನ್ನು ನೋಡಿ ಮಿಕ್ಕ ಗೋಪಾಲರುಗಳು ಆಶ್ಚರ್ಯದಿಂದ ನೋಡಲು, ಮಂದೆಯಲ್ಲಿ ಅಂದವಾದ ಯಾವುದೋ ಹೊಸ ಕರುವೊಂದು ಕಾಣಿಸಿತು. ಗೋಪಾಲ ನೇರವಾಗಿ ಆ ಕರುವಿನ ಬಳಿ ಹೋಗಿ, ಅದರ ಹಿಂದಿನ ಎರಡು ಕಾಲುಗಳನ್ನೂ ಹಿಡಿದು, ಎತ್ತಿ ಗಿರಗಿರನೆ ತಿರುಗಿಸಿ ಒಂದು ಬಂಡೆಯ ಮೇಲೆ ಅಪ್ಪಳಿಸಿದ, ತಕ್ಷಣವೇ ಅದು ರಾಕ್ಷಸ ರೂಪ ಧರಿಸಿ ವಿಕಾರಸ್ವರದಿಂದ ವಿಚಿತ್ರವಾಗಿ ಕಿರುಚುತ್ತಾ, ಬಾಯಲ್ಲಿ ರಕ್ತ ಕಾರುತ್ತಾ ಪ್ರಾಣಬಿಟ್ಟಿತು. ಗೋಪಾಲರು ಅದನ್ನು ನೋಡಿ ಆಶ್ಚರ್ಯಪರವಶರಾಗಿ ಗೋಪಾಲನ ಬಳಿಗೆ ಓಡಿ ಬಂದು, 'ಏನಿದು ವಿಚಿತ್ರ?' ಎಂದು ಕೇಳಲು, ಗೋಪಾಲ ಮುಗುಳ್ನಗೆ ಸೂಸುತ್ತಾ, 'ಕಂಸ ದೂತನಾದ ಒಬ್ಬ ರಾಕ್ಷಸ ಈ ರೂಪ ಧರಿಸಿ ಬಂದು ನಮ್ಮ ಗೋವುಗಳ ಮಂದೆಯಲ್ಲಿ ಸೇರಿದ್ದ. ಅವನಿಗೆ ತಕ್ಕ ಶಾಸ್ತಿ ಮಾಡಿದೆ,' ಎಂದು ಹೇಳಿದ. ಹುಡುಗರೆಲ್ಲಾ ಗೋಪಾಲನನ್ನು ಕೊಂಡಾಡುತ್ತಾ, 'ಒಳ್ಳೆಯ ಕೆಲಸ ಮಾಡಿದೆ, ಗೋಪಾಲಾ,' ಎಂದು ಅವನ ಸುತ್ತ ಕುಣಿದು ಕುಪ್ಪಳಿಸಿದರು. ಮಂದೆಯಲ್ಲಿ ಇನ್ನೂ ಯಾವುದಾದರೂ ಹೊಸ ದನಕರುಗಳು ಬಂದು ಸೇರಿವೆಯೋ ತಮ್ಮ ದನಕರುಗಳನ್ನೇನಾದರೂ ನುಂಗಿವೆಯೋ ಎಂದು ಆತಂಕದಿಂದ ನೋಡಿದರು. ತಮ್ಮ ತಮ್ಮ ದನಕರುಗಳನ್ನು ಹುಡುಕಿ, ಅವು ಇರುವುದನ್ನು ಕಂಡು ಸಮಾಧಾನಪಟ್ಟರು. ಆಮೇಲೆ, ಮಧ್ಯಾಹ್ನದ ಹೊತ್ತಿಗೆ ಒಂದು ಗುಡ್ಡದ ಬಳಿಗೆ ಬಂದರು. ಬಿಸಿಲು ತಾಪ ಜಾಸ್ತಿಯಾಗಿದ್ದುದರಿಂದ ದನಗಳನ್ನು ಬಂಡೆಗಳ ನೆರಳಿಗೆ ಹೊಡೆದು, ತಾವೂ ಆ ಗುಡ್ಡದ ನೆರಳಿನಲ್ಲಿ ವಿಶ್ರಾಂತಿ ತೆಗೆದುಕೊಂಡರು.

ಇಷ್ಟರಲ್ಲಿ ಹೊತ್ತು ಇಳಿಯಿತು. ದನಗಳನ್ನು ಮನೆಗೆ ಹೊಡೆದುಕೊಂಡು ಹೋಗೋಣವೆಂದು ಒಬ್ಬ ಬಾಲಕ ಎದ್ದು ನೋಡಿದರೆ, ಕೊಕ್ಕರೆಯಾಕಾರದ ಒಂದು ಭಯಂಕರ ಪ್ರಾಣಿಯು ದನಕರುಗಳನ್ನು ನುಂಗುತ್ತಿದ್ದುದನ್ನು ನೋಡಿ, 'ಕೃಷ್ಣಾ! ಗೋಪಾಲಾ!' ಎಂದು ಕೂಗಿಕೊಂಡ. ಆ ಕೂಗು ಕೇಳುತ್ತಲೇ ಗೋಪಾಲ ಒಂದೇ ಕ್ಷಣದಲ್ಲಿ ಹೋಗಿ, ಬಕಪಕ್ಷಿ ಆಕಾರದಲ್ಲಿದ್ದ ಆ ಬಕಾಸುರನ ಕೊಕ್ಕನ್ನು ಇಬ್ಭಾಗವಾಗಿ ಸೀಳಿ ಬಿಸಾಡಿ, ಹೊಟ್ಟೆಯಲ್ಲಿದ್ದ ಗೋವುಗಳನ್ನು ರಕ್ಷಿಸಿದ.

ಹೀಗೆ ನಿತ್ಯವೂ ಒಂದು ಅದ್ಭುತವಾದ ವಿಚಿತ್ರ ರೀತಿಯಲ್ಲಿ ಕಂಸ ಕಳಿಸಿದ ರಾಕ್ಷಸ ದೂತರನ್ನು ಕೊಲ್ಲುವುದು ಗೋಪಾಲನಿಗೆ ಒಂದು ಆಟವಾಗಿ ಪರಿಣಮಿಸಿತು. ಗೊಲ್ಲಬಾಲಕರಿಗೆ ಗೋಪಾಲನ ಚರ್ಯೆಯಿಂದ ಆಶ್ಚರ್ಯವಾಗುತ್ತಿರಲಿಲ್ಲ. ಏಕೆ ಅಂದರೆ ಗೋಪಾಲನ ಶಕ್ತಿ ಸಾಮರ್ಥ್ಯಗಳು ಮಾನವಾತೀತವಾದುವೆಂದು ಅವರಿಗೆ ಹೃದಯದಲ್ಲಿ ನಾಟಿ ಹೋಗಿತ್ತು. ಆದ್ದರಿಂದಲೇ ಗೋಪಾಲಕರುಗಳು ಯಾವ ಭಯವೂ ಇಲ್ಲದೆ, ಯಾವಾಗ ಎಂದರೆ ಆಗ, ಎಲ್ಲೆಂದರಲ್ಲಿಗೆ ಗೋಪಾಲನೊಂದಿಗೆ ಹೋಗಲು ಸಿದ್ಧರಿರುತ್ತಿದ್ದರು.

ಹಿಂದಿನ ದಿನ ಬಕಾಸುರ ರಾಕ್ಷಸ ಬಕಪಕ್ಷಿ ರೂಪದಲ್ಲಿ ಬಂದು ಗೋಪಾಲನಿಂದ ಹತನಾದ ವಾರ್ತೆ ಕೇಳಿದ ಅವನ ರಾಕ್ಷಸ ತಮ್ಮ ಕೋಪೋದ್ರಿಕ್ತನಾಗಿ, ಭೂತಾಕಾರದ ಹೆಬ್ಬಾವಿನ ರೂಪದಿಂದ ಬಂದು, ಗೋವುಗಳನ್ನೂ ಗೋಪಾಲರನ್ನೂ ಕಡೆಗೆ ರಾಮಕೃಷ್ಣಾದಿಗಳನ್ನೂ ಸಹಿತ ಬಿಡದಂತೆ ನುಂಗುವ ಉದ್ದಿಶ್ಯದಿಂದ ದಾರಿಗೆ ಅಡ್ಡಲಾಗಿ ಬಾಯಿ ತೆರೆದುಕೊಂಡು ಅವರು ಬರುವುದನ್ನೇ ಕಾಯುತ್ತಾ ಬಿದ್ದುಕೊಂಡಿದ್ದ.

ಗೋಪಾಲರು ಇದನ್ನು ತಿಳಿಯದೆ ಗೋವುಗಳನ್ನು ಹೊಡೆದುಕೊಂಡು ಹೋದರು. ಗೋಪಾಲರೂ ಗೋವುಗಳೂ ಗುಹೆಯಂತಿದ್ದ ಅದರ ಬಾಯೊಳಗೆ ನೇರವಾಗಿ ಹೋಗಿ ಹೊಟ್ಟೆಯೊಳಕ್ಕೆ ಇಳಿದರು. ಇದನ್ನು ಕಂಡ ಗೋಪಾಲ, ಇದು ರಾಕ್ಷಸನೇ ಎನ್ನುವುದನ್ನು ತಿಳಿದು, ಅದರ ಬಾಯಿಯ ಎರಡು ದವಡೆಗಳನ್ನೂ ಹಿಡಿದು ಬಾಲದವರೆಗೂ ಸೀಳಿ, ಹೊಟ್ಟೆಯಲ್ಲಿದ್ದ ಗೋವುಗಳನ್ನೂ ಮತ್ತು ಗೋಪಾಲರನ್ನೂ ರಕ್ಷಿಸಿದ. ನಡೆದ ಸಂಗತಿಯನ್ನು ಗೋಪಾಲರಿಗೆ ಹೇಳಿ, ಅವರ ಭಯ ಹೋಗಲಾಡಿಸಿದ.

ಅಂದಿನಿಂದ ಗೋಪಾಲರುಗಳಲ್ಲಿದ್ದ ಅಷ್ಟಿಷ್ಟು ಭಯಭ್ರಾಂತಿ ಕೂಡ ಹೋಗಿ, ಏನೇ ಬರಲಿ, ಸರ್ವಶಕ್ತಿವಂತನಾದ ನಮ್ಮ ಗೋಪಾಲನು ಇದ್ದಾನೆ, ಎಂದು

ನಿರ್ಭಯದಿಂದ ಯಾವುದನ್ನೂ ಲೆಕ್ಕಿಸದೆ, ಅತ್ತಿತ್ತ ನೋಡದೆ ಕೃಷ್ಣ ಹೋದ ದಾರಿಯಲ್ಲೇ ಹೋಗುತ್ತಿದ್ದರು. ಮಹಾರಾಜಾ! ಹೀಗೆ ಗೋಪಾಲನ ಬಾಲ ಲೀಲೆಗಳು ನಿಮಿಷ ನಿಮಿಷಕ್ಕೂ ಅದ್ಭುತವೇ; ವಿಚಿತ್ರವೇ; ವಿನೋದವೇ. ನಾನು ಏನೆಂದು ಹೇಳಲಿ? ಅಮಾನುಷವಾದ ಈ ಅದ್ಭುತ ಚರ್ಯೆಗಳು ಸಾಮಾನ್ಯರಿಗೆ ಸಾಧ್ಯವೇ?

ಇಂಥ ಅದ್ಭುತಗಳನ್ನು ನೋಡಿಯೂ ದೈವವನ್ನು ನಂಬದಿರುವಂಥವರು ಭೂಮಿಗೆ ಭಾರವೇ ಸರಿ. ಅವರ ಜನ್ಮ ಬೂರುಗದ ಕಾಯಿಯೇ ಸರಿ," ಎಂದು, ಶುಕ ಮಂದಸ್ಮಿತ ವದನನಾಗಿ, ಕಣ್ಣುಗಳನ್ನು ತೆರೆದು, ಚಿನ್ಮಯ ಮೂರ್ತಿಯ ರೂಪವನ್ನು ದರ್ಶನ ಮಾಡುತ್ತಿರುವನಂತೆ ನೆಟ್ಟ ದೃಷ್ಟಿಯಿಂದ ಒಂದೇ ಕಡೆ ನೋಡುತ್ತಾ ಮಾತು ನಿಲ್ಲಿಸಿದುದನ್ನು ನೋಡಿ, ಪರೀಕ್ಷಿತ್ ಮಹಾರಾಜ, "ಸ್ವಾಮೀ! ದಾನವರು ಸಹ ದೈವವನ್ನು ನಂಬದಿರಲು ಕಾರಣವೇನು? ಕಣ್ಣಾರೆ ಕಂಡದ್ದನ್ನು ನಂಬುವುದಿಲ್ಲ. ಕಿವಿಯಲ್ಲಿ ಕೇಳಿದ್ದನ್ನು ಮಾತ್ರ ನಂಬುತ್ತಾರೆ. ಇದು ಕೇವಲ ಅವರ ಪಾಪ ಫಲವೇ ಎಂದು ನನ್ನ ಭಾವನೆ. ಅಥವಾ, ಶಾಪವಿದ್ದರೂ ಇರಬಹುದು," ಎಂದು ಹೇಳುತ್ತಲೇ, ಶುಕ, "ಮಹಾರಾಜಾ! ನಿನ್ನ ಮಾತು ಪರಮಸತ್ಯ. ಕಂಸ, ಜರಾಸಂಧ, ಶಿಶುಪಾಲ, ಸಾಲ್ವ ಮೊದಲಾದ ರಾಕ್ಷಸರು ಕೃಷ್ಣನ ಸಾಮರ್ಥ್ಯಗಳನ್ನು ಎಷ್ಟೇ ಕಣ್ಣಾರೆ ನೋಡಿದ್ದರೂ ಗೊಲ್ಲ ಬಾಲಕನೆನ್ನುವ ಭಾವನೆ ಅವರ ಕಿವಿಗಳಲ್ಲಿ ಗುಮ್ಮಿಡುತ್ತಿದ್ದುದರಿಂದಲೇ ಕಣ್ಣಲ್ಲಿ ಕಂಡದ್ದನ್ನು ನಂಬದೆ, ಅಶರೀರವಾಣಿಯನ್ನು ನಂಬಿದ್ದರಿಂದಲೇ ಅಲ್ಲವೆ ಪ್ರಾಣಗಳನ್ನು ಒಪ್ಪಿಸಿದುದು? ಕೃಷ್ಣನ ಅಮಾನುಷ ಚರ್ಯೆಗಳೂ ಅತ್ಯದ್ಭುತ ಶಕ್ತಿಗಳೂ ನಿತ್ಯವೂ ತಾವು ಕಳಿಸಿದ ದೂತರ ಮುಖಾಂತರ ತಿಳಿಯುತ್ತಿದ್ದರೂ ಅವುಗಳನ್ನು ಅಲಕ್ಷ್ಯ ಮಾಡಿ, ಭಗವಂತ ಎನ್ನುವುದನ್ನು ಮರೆಯುವುದು ಶಾಪವಲ್ಲದೆ ಮತ್ತೇನು? ಅಷ್ಟೇ ಅಲ್ಲ, ಅದು ಪಾಪದ ಫಲವೂ ಹೌದು.

ಗೋಪಾಲ ಲೋಕಪಾಲಕನೇ ಹೊರತು ಗೊಲ್ಲ ಬಾಲಕನಲ್ಲ. ರೂಪದಲ್ಲಿ ಮಾನವಾಕಾರದ ಬಾಲಕನೇ ಹೊರತು, ಶಕ್ತಿ ಯುಕ್ತಿಗಳಲ್ಲಿ, ಮುಕ್ತಿಯನ್ನು ಕೈಯಲ್ಲಿರಿಸಿಕೊಂಡು, ಬಂಧ ವಿಮುಕ್ತಿ ಮಾಡುವ ಭದ್ರಮೂರ್ತಿ ಅವನು. ಅವನೇ ನಾರಾಯಣ ಮೂರ್ತಿ," ಎಂದು ಶುಕ ಹೇಳಿದ ಮಾತುಗಳನ್ನು ಕೇಳಿ, ಪರೀಕ್ಷಿತ್ ಸಂತೋಷಭರಿತನಾಗಿ, "ನಮ್ಮ ತಾತಂದಿರು ಆ ಗೋಪಾಲನೊಂದಿಗೆ ಕೂಡಿ ಆಡಿ ಆನಂದಿಸಿದ ಭಾಗ್ಯದಲ್ಲಿ ಅಣುಮಾತ್ರವಷ್ಟಾದರೂ ಕೇಳಿ ಆನಂದಿಸುವ ಭಾಗ್ಯ ನನಗೆ ಸಿಕ್ಕಿದ್ದು, ಇದೂ ನನ್ನ ಭಾಗ್ಯವೇ. ಅವರ ಪುಣ್ಯಫಲದಿಂದಲೇ ನಾನು ಇಂಥ ಮಹಾಋಷಿಗಳ ಬಾಯಿಂದ ಮಾಧವ ಸ್ವರೂಪನ ಲೀಲೆಗಳನ್ನು ಕೇಳಲು

ಸಾಧ್ಯವಾಯಿತು. ಹಾಗಲ್ಲದಿದ್ದರೆ ಇದು ಸಾಮಾನ್ಯರಿಗೆ ಸಿಕ್ಕುವಂಥದ್ದೇ?" ಎಂದು ಆನಂದಬಾಷ್ಪಗಳನ್ನು ಸುರಿಸುತ್ತಾ ಹಸ್ತಗಳನ್ನು ಜೋಡಿಸಿದ.

# ೩೭ ಕಾಳಿಂಗಮರ್ದನ

ಪರೀಕ್ಷಿತ್ ಶುಕ ಮಹರ್ಷಿಯ ಆನಂದವದನವನ್ನು ನೋಡುತ್ತಾ, "ಸ್ವಾಮೀ! ಗೋಪಾಲ ಕಾಳಿಂಗನ ಮರ್ದನ ಮಾಡಿದನೆಂದು ಕೇಳಿದೆ. ಅದರ ಅಂತರಾರ್ಥ ಏನು? ಅದರಿಂದ ಜನರಿಗೆ ಆದ ಆಶ್ಚರ್ಯವೇನು? ಅದರಲ್ಲಿ ಅಡಕವಾದ ಮಹತ್ತರ ವಿಷಯ ಯಾವುದೋ ತಿಳಿಸಿ, ನನ್ನ ಸಂಶಯ ಪರಿಹರಿಸಬೇಕು," ಎಂದು ಪ್ರಾರ್ಥಿಸಿದ.

ಶುಕ ಹೇಳತೊಡಗಿದ, "ಲೀಲಾಮಾನುಷ ವಿಗ್ರಹನಾದ ಆ ಬಾಲಗೋಪಾಲ ಹೀಗೆ ಬೆಳೆಯುತ್ತಾ ಐದು ವರ್ಷದವನಾದ. ಅವನು ತನ್ನ ಲೀಲೆಗಳನ್ನು ಮೊದಲೇ ಆಗಲಿ, ಅನಂತರವೇ ಆಗಲಿ, ಯಾರಿಗೂ ತಿಳಿಸುತ್ತಿರಲಿಲ್ಲ. ಅವನ ಲೀಲೆಗಳನ್ನು ನೋಡಿ, ಉದ್ದೇಶವನ್ನು ಗುರುತಿಸಿ ಅದಕ್ಕನುಗುಣವಾಗಿ ನಡೆಯಬೇಕಾಗಿತ್ತೇ ವಿನಾ, ಅವನು ಇಂಥದೇ ಕೆಲಸ ಮಾಡುವನೆನ್ನುವುದನ್ನು ಯಾರಿಗೂ ಅವರು ಎಂಥವನೇ ಆಗಲಿ ಊಹಿಸಲೂ ಸಾಧ್ಯವಾಗುತ್ತಿರಲಿಲ್ಲ. ಅವನು ನಿತ್ಯವೂ ತನ್ನ ಅಣ್ಣನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದನು. ಒಂದು ದಿನ ಏನು ಆಲೋಚಿಸಿದನೋ ಏನೋ, ಅಣ್ಣನಿಗಾಗಲೀ ನಂದ ಯಶೋದೆಯರಿಗಾಗಲೀ ಹೇಳದೆ, ಗೊಲ್ಲಮಕ್ಕಳೊಡನೆ ರಹಸ್ಯವಾಗಿ ಗೋವುಗಳನ್ನು ಹೊಡೆದುಕೊಂಡು ಯಮುನಾ ನದಿಯ ಒಂದು ಮಡುವಿನ ಸಮೀಪಕ್ಕೆ ಹೋದ.

ಆ ಮಡುವಿನ ಚರಿತ್ರೆ ಬಹಳ ವಿಚಿತ್ರ. ಸಾಮಾನ್ಯವಾದ ಮಡುಗಳಲ್ಲಿನ ನೀರು ಸ್ವಲ್ಪ ಮಲಿನವಾಗಿರುವುದು ಸಹಜ. ಆದರೆ, ಈ ಮಡುವಿನಲ್ಲಿ ನೀರು ನೀಲವರ್ಣ, ಅಲ್ಲದೆ, ಸದಾ ಕುದಿಯುತ್ತಿತ್ತು! ಅದರ ಆವಿ ಆಕಾಶಕ್ಕೇರುತ್ತಿತ್ತು! ಆ ಗಾಳಿ ಸೋಕಿದ ಪ್ರಾಣಿಗಳು ಪ್ರಾಣಗಳನ್ನು ಬಿಡುತ್ತಿದ್ದುದು ಎಲ್ಲರಿಗೂ ಬಹಳ ಆಶ್ಚರ್ಯವಾಗಿತ್ತು! ಆ ಮಡುವಿನ ಮೇಲೆ ಹಾರುತ್ತಿದ್ದ ಪಕ್ಷಿಗಳೂ ಸಹ ಆ ಗಾಳಿ ಸೋಂಕಿದೊಡನೆ ರಪರಪ ರೆಕ್ಕೆ ಬಡಿದುಕೊಳ್ಳುತ್ತಾ ಸತ್ತು, ಆ ಮಡುವಿನಲ್ಲಿ ಬೀಳುತ್ತಿದ್ದವು.

ಈ ಸಂಗತಿ ರೇಪಲ್ಲೆಯವರೆಲ್ಲರಿಗೂ ಚೆನ್ನಾಗಿ ಗೊತ್ತಿದ್ದುದರಿಂದ ಯಾರೂ ಆ ಮಡುವಿನ ಸುತ್ತಮುತ್ತ ಹೋಗುತ್ತಿರಲಿಲ್ಲ. ಅಲ್ಲದೆ, ತಮ್ಮ ಮಕ್ಕಳೂ ದನ ಕರುಗಳೂ ಹೋಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ಆ ದಿನ, ಗೋಪಾಲರು ಆ ಮಡುವಿನ ಕಡೆ ಹೋಗುವುದು ಬೇಡ ಎಂದು ಎಷ್ಟು ವಾದಿಸಿದರೂ ಕೇಳದೆ, ಕೃಷ್ಣ ಅಲ್ಲಿಗೇ ಹೋಗಬೇಕೆಂದು ಹಟ ಹಿಡಿದ. ಎಲ್ಲರೊಂದಿಗೆ ಮಡುವಿನ ಬಳಿಗೆ ಹೋದ. ಗೋಪಾಲರು ಎಷ್ಟು ವಿಧವಾಗಿ ತಡೆದರೂ ನಿಲ್ಲದೆ, ಬಿಡಿಸಿಕೊಂಡು, ಆ ಮಡುವಿನಲ್ಲಿ ಈಜಬೇಕು ಎಂದು ಬಟ್ಟೆಗಳನ್ನು ಕಳಚಿದ.

ಆ ಬಾಲಕರು, 'ಅಯ್ಯೋ! ಮಡುವಿನ ಸುತ್ತಲ ಗಾಳಿಯೇ ಇಷ್ಟು ವಿಷವಾಗಿ ಇರಬೇಕಾದರೆ, ಅದರ ನೀರು ಇನ್ನೆಷ್ಟು ವಿಷವೋ!' ಎಂದು ತಮ್ಮೊಳಗೇ ಮೆಲ್ಲಗೆ ಮಾತಾಡಿಕೊಂಡರು. ಗಟ್ಟಿಯಾಗಿ ಹೇಳಲು ಧೈರ್ಯಸಾಲದು. ಅವರ ಮಾತನ್ನು ಕೃಷ್ಣ ಕಿವಿಗೆ ಹಾಕಿಕೊಳ್ಳದೆ, ತನ್ನ ನಿರ್ಧಾರ ಬದಲಿಸದೆ, ದಡದಲ್ಲಿದ್ದ ಒಂದು ಮರವನ್ನು ಹತ್ತಿ ಮಡುವಿನೊಳಗೆ ಧುಮುಕಿದ.

ನೀರಿನೊಳಗೆ ಧುಮುಕಿದ ಗೋಪಾಲ ಎಷ್ಟು ಹೊತ್ತಾದರೂ ಮೇಲಕ್ಕೆ ಬರಲಿಲ್ಲ. ಕೃಷ್ಣನೇ ತಮ್ಮ ಪ್ರಾಣವೆಂದು ಭಾವಿಸಿ ಜೀವಿಸುತ್ತಿದ್ದ ಗೋಪಾಲರಿಗೆ ಅದು ಬಹಳ ಭಯಂಕರ ಸ್ಥಿತಿಯಾಗಿ ಪರಿಣಮಿಸಿತು. ಎಲ್ಲರೂ ದಡದಲ್ಲಿ ಸೇರಿ, ನಾನಾ ವಿಧವಾಗಿ ಅವನನ್ನು ಕೂಗಿ ಕರೆದರು, ಅತ್ತರು.

ಅಷ್ಟರಲ್ಲಿ, ಗೋಪಾಲ ನೀರಿನ ಮೇಲೆ ತೇಲುತ್ತಾ ಭೂಕಂಪದ ಹಾಗೆ ಅಲ್ಲೋಲ ಕಲ್ಲೋಲ ಉಂಟುಮಾಡುತ್ತಾ ಮಡುವಿನಲ್ಲಿ ಈಜುತ್ತಿದ್ದುದನ್ನು ನೋಡಿದರು. ಅವನ ಹಿಂದೆ, ಅವನನ್ನು ಹಿಡಿಯಲು ಒಂದು ಘೋರ ಸರ್ಪ ವಿಷ ಕಾರುತ್ತಾ ಕಣ್ಣುಗಳಿಂದ ಬೆಂಕಿ ಕಾರುತ್ತಾ ಗೋಪಾಲನನ್ನು ಅಟ್ಟಿಸಿಕೊಂಡು ಬರುತ್ತಿತ್ತು. ಆ ದೃಶ್ಯವನ್ನು ನೋಡಿದ ಬಾಲಕರು ತಾಳಲಾರದ ದುಃಖದಿಂದ, 'ಕೃಷ್ಣಾ! ಬಾ! ದಡಕ್ಕೆ ಬಾ! ಹೀಗೆ ಬಾ!' ಎಂದು ಒಂದೇ ಸಮನೆ ಕೂಗಿಕೊಳ್ಳಲಾರಂಭಿಸಿದರು.

ಗೋಪಾಲ ಅವರ ಮಾತೇ ಕೇಳಿಸದವನಂತೆ, ತನ್ನ ಸಂತೋಷವನ್ನು ವಿಚಿತ್ರವಾಗಿ ಪ್ರಕಟಿಸುತ್ತಾ, ಆ ಸರ್ಪದ ಬಾಲ ಹಿಡಿದುಕೊಂಡು, ಅವನು ಮುಂದೆ, ಅದು ಹಿಂದೆ, ಹೀಗೆ ಇಬ್ಬರೂ ಸುತ್ತುತ್ತಾ ಮಹಾ ರೋಷದಿಂದ ಕಾದಾಡುತ್ತಾ ಸಮುದ್ರದ ಅಲೆಗಳಂತೆ ಕೊಳದ ನೀರನ್ನು ಮೇಲಕ್ಕೆ ಹಾರಿಸುತ್ತಿದ್ದರು. ಕೊನೆಗೆ ಸರ್ಪ ಗೋಪಾಲನನ್ನು ಪೂರ್ತಿಯಾಗಿ ಸುತ್ತಿಕೊಂಡು ಹಿಂಸಿಸುತ್ತಿದ್ದುದನ್ನು ನೋಡಿ, ಕೆಲವು ಬಾಲಕರು ಗೋಕುಲಕ್ಕೆ ಓಡಿ ಹೋಗಿ, ನಡೆದ ಸಂಗತಿಯನ್ನೆಲ್ಲಾ ದುಃಖ

ದಿಂದ ನಂದ ಯಶೋದೆಯರಿಗೆ ತಿಳಿಸಿದರು. ಆ ವಾರ್ತೆ ಕೇಳಿದ ನಂದಯಶೋದೆಯರು, ಗೋಕುಲದ ಗೋಪಗೋಪಿಯರು ಗೋಪಾಲನಿಗೆ ಏನೋ ಕೇಡು ಸಂಭವಿಸಿದೆ ಎಂದುಕೊಂಡು ರೋದಿಸುತ್ತಾ ಓಡೋಡಿ ಬಂದರು. ಊರಿಗೆ ಊರೇ ಆ ಮಡುವಿನ ಬಳಿಗೆ ಧಾವಿಸಿತು.

ಬಲರಾಮನೂ ಅವರೊಂದಿಗಿದ್ದ. ಗೋಪಾಲನ ಶಕ್ತಿ ಸಾಮರ್ಥ್ಯವನ್ನು ಅವನು ಬಲ್ಲವನಾದ್ದರಿಂದ, ನಂದ ಯಶೋದೆಯರನ್ನು ಸಮಾಧಾನ ಪಡಿಸುತ್ತಾ ಗೋಪಾಲನಿಗೆ ಯಾವ ಕೇಡೂ ಬಾರದೆಂದೂ ಗಾಬರಿಯಾಗುವ ಅಗತ್ಯವಿಲ್ಲವೆಂದೂ ಅನೇಕ ವಿಧವಾಗಿ ಅವರನ್ನು ಸಂತೈಸುತ್ತಾ ಕರೆದುಕೊಂಡು ಬರುತ್ತಿದ್ದ.

ಆ ನದಿಯ ದಡವೆಲ್ಲಾ ಜನರಿಂದ ತುಂಬಿ ಹೋಯಿತು. ಎಲ್ಲಿ ನೋಡಿದರೂ, 'ಕೃಷ್ಣಾ! ಕೃಷ್ಣಾ,' ಎನ್ನುವ ಕೂಗು. ಜನರ ರೋದನ ದಿಕ್ಕುದಿಕ್ಕಿನಲ್ಲಿ ಪ್ರತಿಧ್ವನಿಸುತ್ತಿತ್ತು. ಕೂಗುತ್ತಾ ರೋದಿಸುತ್ತಾ ಎಲ್ಲರೂ ಆ ಮಡುವಿನ ಬಳಿ ಬಂದು ನೋಡಿದರು. ಅಬ್ಬಾ! ಆ ದೃಶ್ಯ ನೋಡಿ ಅವರಿಗೆ ಪ್ರಜ್ಞೆ ತಪ್ಪುವಂತಾಯಿತು. ತಪ್ಪುವಂತೆ ಆಗುವುದೇನು, ಆ ಮಡುವಿನಲ್ಲಿ ಘೋರ ಸರ್ಪದಿಂದ ಬಂಧಿಸಲ್ಪಟ್ಟ ಕೃಷ್ಣನನ್ನು ನೋಡಿ, ಆ ಸರ್ಪ ಕಾರುತ್ತಿದ್ದ ವಿಷದ ಜ್ವಾಲೆಯನ್ನು ನೋಡಿ, ಕೊಳವೆಲ್ಲಾ ರಕ್ತಮಯವಾಗಿ, ಇಬ್ಬರೂ ಹೋರಾಡುತ್ತಿದ್ದುದನ್ನು ನೋಡಿ ಯಶೋದೆಯೂ ಕೆಲವು ಗೋಪಿಯರೂ ಪ್ರಜ್ಞೆತಪ್ಪಿ ಬಿದ್ದೇ ಬಿಟ್ಟರು. ಕೆಲವರು ಅವರನ್ನು ಉಪಚರಿಸಿ ತಿರುಗಿ ಪ್ರಜ್ಞೆಬರುವಂತೆ ಮಾಡಿದರು. ಎಚ್ಚರವಾದ ಮೇಲೆ ಮತ್ತೆ ಅದೇ ದೃಶ್ಯವನ್ನು ನೋಡುತ್ತಾ ಯಶೋದೆ, 'ಕೃಷ್ಣಾ, ಕೃಷ್ಣಾ! ಈ ಹಾಳು ಸರ್ಪ ಎಲ್ಲಿಂದ ಬಂತಪ್ಪಾ, ಮೃತ್ಯುವಾಗಿ?' ಎಂದು ಗೋಳಾಡಿದಳು.

ಕೆಲವು ಗೋಪಬಾಲಕರು, 'ಆ ಸರ್ಪ ನಮ್ಮ ಗೋಪಾಲನನ್ನು ಬಿಟ್ಟು ನಮ್ಮನ್ನಾದರೂ ಕಚ್ಚಬಾರದೆ?' ಎಂದು ರೋದಿಸಿದರು. ಕೆಲವು ಗೋಪಿಯರು, ತಮ್ಮ ಪ್ರಾಣವನ್ನಾದರೂ ಕೊಟ್ಟು ಗೋಪಾಲನನ್ನು ರಕ್ಷಿಸೋಣವೆಂದು ನಿಶ್ಚಯಿಸಿ, ತಾವು ಆ ಮಡುವಿನಲ್ಲಿ ಹಾರಿದರೆ, ಸರ್ಪ ತಮ್ಮನ್ನು ಹಿಡಿದುಕೊಳ್ಳುವ ಸಲುವಾಗಿ ಗೋಪಾಲನನ್ನು ಬಿಟ್ಟು ಬರುವುದೆಂದು ಯೋಚಿಸಿ, ಹಾರಲು ಸಿದ್ಧವಾಗುತ್ತಿರಲು, ಬಲರಾಮ ಅವರನ್ನು ತಡೆದು, ಗೋಪಾಲನಿಗೆ ಎಂಥ ಕೇಡೂ ಸಂಭವಿಸದೆಂದು ಧೈರ್ಯ ಹೇಳಿದ. 'ಕೃಷ್ಣಾ, ಬೇಗ ಬಿಡಿಸಿಕೊಂಡು ಬಾ,' ಎಂದು ಕೂಗಿ ಹೇಳುತ್ತಿದ್ದ.

ಇನ್ನು ಕೆಲವು ಗೋಪಿಯರು ಪ್ರಾರ್ಥನೆಯಲ್ಲಿ ಮಗ್ನರಾದರು. 'ಗೋಪಾಲ ಕ್ಷೇಮವಾಗಿದ್ದರಲ್ಲವೇ ಲೋಕವು ಕ್ಷೇಮವಾಗಿರುವುದು. ಲೋಕವನ್ನೆಲ್ಲಾ ಆಳುವ ಏಕೈಕ

ರಾಜನಲ್ಲವೇ ನಮ್ಮ ಗೋಪಾಲ. ಆದ್ದರಿಂದ, ಗೋಪಾಲಾ! ನೀನೇ ಬೇಗ ಆ ವಿಷ ಸರ್ಪದ ಹಿಡಿತದಿಂದ ಬಿಡಿಸಿಕೊ,' ಎಂದು ಅವನನ್ನೇ ಪ್ರಾರ್ಥಿಸುತ್ತಾ ಮಧ್ಯೆ ಮಧ್ಯೆ ಕಣ್ಣು ತೆರೆದು, ಸರ್ಪ ಅವನನ್ನು ಬಿಟ್ಟಿತೇ ಎಂದು ನೋಡುತ್ತಿದ್ದರು. ಹೀಗೆ ಎಲ್ಲರೂ ಭಯ ಭ್ರಾಂತರಾಗಿ, ಯಾವ ನಿಮಿಷದಲ್ಲಿ ಏನು ಸಂಭವಿಸುವುದೋ ಎಂದು ಎವೆಯಿಕ್ಕದೆ ನೋಡುತ್ತಾ ಆ ಕೊಳದ ಸುತ್ತಲೂ ಕಿಕ್ಕಿರಿದು ಸೇರಿದ್ದರು.

ಆಹಾ! ಗೋಪಾಲನ ವಿಚಿತ್ರ ಲೀಲೆ ಏನೆಂದು ಹೇಳಲಿ, ರಾಜಾ!" ಎಂದು ಶುಕ ಉಕ್ಕಿಬರುತ್ತಿದ್ದ ದುಃಖ, ಆನಂದ, ಆಶ್ಚರ್ಯ, ಉದ್ರೇಕಗಳನ್ನು ತಡೆದುಕೊಳ್ಳಲಾರದೆ ಎರಡು ಕೈಗಳನ್ನೂ ಮುಖಕ್ಕೆ ಅಡ್ಡಮಾಡಿಕೊಂಡು, ಕಣ್ಣೀರು ಸುರಿಸುತ್ತಿದ್ದುದನ್ನು ನೋಡಿ, ಪರೀಕ್ಷಿತ್ ಮಹಾರಾಜನಿಗೆ ಭಯವಾಯಿತು. "ಸ್ವಾಮೀ! ಸ್ವಾಮೀ! ಏನಿದು ವಿಚಿತ್ರ? ಆಮೇಲೆ ಏನಾಯಿತು? ಹೇಳಿ, ತಾವು ಇಷ್ಟು ವಿಚಾರಮಗ್ನರಾಗುವಂಥ ಪ್ರಮಾದ ಗೋಪಾಲನಿಗೆ ಏನು ಸಂಭವಿಸಿತು? ಬೇಗ ತಿಳಿಸಿ ನನ್ನ ಭಯವನ್ನು ಪರಿಹರಿಸಿ," ಎಂದು ಪರಿಪರಿ ವಿಧದಿಂದ ಪ್ರಾರ್ಥಿಸಿದ.

ಶುಕ ತನ್ನ ಕಾಷಾಯದ ಅಂಗವಸ್ತ್ರದಿಂದ ಕಣ್ಣೀರು ಒರೆಸಿಕೊಳ್ಳುತ್ತಾ, "ಮಹಾ ರಾಜಾ! ಪ್ರಮಾದವೇನೂ ಸಂಭವಿಸಲಿಲ್ಲ. ಕೃಷ್ಣನ ದೇಹ ನಿಮಿಷ ನಿಮಿಷಕ್ಕೂ ದೊಡ್ಡದಾಗುತ್ತಾ ಹೋಯಿತು. ಅವನನ್ನು ಸುತ್ತಿಕೊಂಡಿದ್ದ ಸರ್ಪದ ಒಂದೊಂದು ಸುತ್ತೂ ಬಿಚ್ಚಿಕೊಳ್ಳುತ್ತಾ ಹೋಯಿತು. ಪುಟ್ಟ ಬಾಲಕನಾದ ಆ ಗೋಪಾಲ ಘನ ಸ್ವರೂಪನಾಗುತ್ತಿರುವುದನ್ನು ನೋಡಿ ಗೋಪಗೋಪಿಯರಿಗೆ ಆಶ್ಚರ್ಯ ಆಗುವು ದರ ಜೊತೆಗೆ ಆನಂದವೂ ಆಯಿತು. ಕಡೆಗೆ ಸರ್ಪ ಕೃಷ್ಣನನ್ನು ಬಿಟ್ಟು ಅವನು ತನಗೆ ದಕ್ಕದೆ ಹೋದನಲ್ಲಾ ಎನ್ನುವ ಕ್ರೋಧದಿಂದ ವಿಷವನ್ನು ಕಾರುತ್ತಾ ಸೋತು ಸಾಕಾಗಿದ್ದರೂ ಮತ್ತೆ ಮತ್ತೆ ಹೆಡೆಯೆತ್ತಿ ಕೃಷ್ಣನನ್ನು ಹಿಡಿಯಲು ಹವಣಿಸಿತು. ಕೃಷ್ಣ ಅದರ ಬಾಲ ಹಿಡಿದು ಗಿರಗಿರನೆ ತಿರುಗಿಸಿ ನೀರಿನ ಮೇಲೆ ಅಪ್ಪಳಿಸಿದ. ಅದು ಮತ್ತೆ ನೀರಿನ ಮೇಲೆ ಹೆಡೆ ಅರಳಿಸಿತು. ಅದರ ಹೆಡೆಯಮೇಲೆ ಕೃಷ್ಣ ನೆಗೆದು, ಅದರ ಬಾಲವನ್ನು ಒಂದು ಕೈಯಲ್ಲಿ ಹಿಡಿದು ನಾಟ್ಯವಾಡಲಾರಂಭಿಸಿದ.

ಬಾಧೆಯನ್ನು ತಾಳಲಾರದೆ ಸರ್ಪವು ಮೂಗು ಬಾಯಲ್ಲಿ ರಕ್ತ ಕಾರುತ್ತಾ ಪ್ರಾಣ ಬಿಡುವ ಸ್ಥಿತಿಯಲ್ಲಿರುವುದನ್ನು ನೋಡಿ ಸುತ್ತಲಿದ್ದ ವ್ರಜರಿಗೆ ಸ್ವಲ್ಪ ಧೈರ್ಯ ಬಂದಿತು. 'ಕೃಷ್ಣಾ! ಇನ್ನು ದಡಕ್ಕೆ ಬಾ, ತಂದೆ! ನೀನು ನಮ್ಮನ್ನು ರಕ್ಷಿಸಿದೆ. ಇಂದು ನಿನ್ನ ಗಂಡಾಂತರ ತೀರಿತು. ರೇಪಲ್ಲೆಯ ಪುಣ್ಯ ಚೆನ್ನಾಗಿದೆ,' ಎಂದು ಅನೇಕ ಬಗೆಯಾಗಿ ಅವನನ್ನು ಕರೆದರು. ಮಡುವಿನೊಳಗಿಂದ ಆ ಸರ್ಪದ ಪತ್ನಿಯರಾದ ನಾಗಕಾಂತೆಯರು ಗೊಳೋ ಎಂದು ಅಳುತ್ತಾ ಬಂದು ಕೃಷ್ಣನ

ಪಾದಗಳ ಮೇಲೆ ಬಿದ್ದರು. 'ದುಷ್ಟ ಶಿಕ್ಷಣಕ್ಕಾಗಿ ಅವತರಿಸಿರುವ ನೀನು ಕ್ರೂರ ಸರ್ಪವನ್ನು ದಂಡಿಸಿದ್ದು ಅನ್ಯಾಯವೇನಲ್ಲ. ನಿನ್ನ ಕರ್ತವ್ಯ ನೀನು ಮಾಡಿದೆ, ತಂದೆ. ನಮ್ಮ ಪತಿ ಎಂಥ ಕ್ರೂರನಾದರೂ ಕಡೆಗೆ ಅವನ ತಲೆಯ ಮೇಲೆ ನಿನ್ನ ಪಾದಗಳನ್ನು ಇಟ್ಟೆಯಾದ್ದರಿಂದ ಆತನ ಪಾಪಗಳೆಲ್ಲಾ ನಾಶವಾದುವು. ಅವನನ್ನು ಮನ್ನಿಸಿ, ನಮಗೆ ಪತಿ ಭಿಕ್ಷೆ ಕೊಡು. ಅವನಿಗೆ ಮತ್ತೆ ಅಂಥ ಕ್ರೂರಬುದ್ಧಿ ಕೊಡದೆ ಕಾಪಾಡು,' ಎಂದು ಪ್ರಾರ್ಥಿಸಿದರು. ಕೃಷ್ಣ ಕಾಳಿಂಗನನ್ನು ಮನ್ನಿಸಿ, 'ಇನ್ನು ನೀನು ಸಾತ್ವಿಕನಾಗಿದ್ದು, ಯಾರಿಗೂ ನಿಷ್ಕಾರಣವಾಗಿ ಹಿಂಸೆ ಕೊಡದೆ, ಇತರ ರಿಂದ ನಿನಗೆ ಹಿಂಸೆಯಾಗದಂತೆ ಇರು. ನಿನ್ನ ಶಿರಸ್ಸಿನ ಮೇಲೆ ನನ್ನ ಪಾದ ಮುದ್ರೆಗಳಿರುವುದರಿಂದ ಗರುಡನೂ ಕೂಡ ನಿನ್ನನ್ನೇನೂ ಮಾಡುವುದಿಲ್ಲ,' ಎಂದು ಆಶೀರ್ವದಿಸಿದ," ಎಂದು ಹೇಳಿದ.

# ೩೮ ಛಾತ್ರನಾದ ಸರ್ವಜ್ಞ

ಪರೀಕ್ಷಿತ್ ಮಹಾರಾಜ ಶುಕನನ್ನುದ್ದೇಶಿಸಿ, "ಮಹಾನುಭಾವಾ! ಕೃಷ್ಣನ ಮಧುರ ಬಾಲ ಲೀಲೆಗಳನ್ನು ಎಷ್ಟು ಕೇಳಿದರೂ ಆಸೆ ತೀರುವುದಿಲ್ಲ. ಇನ್ನು ಅವುಗಳನ್ನು ಕಣ್ಣಾರೆ ಕಂಡ ನಮ್ಮ ತಾತಂದಿರು ಅದೆಷ್ಟು ಧನ್ಯರೋ! ಕೃಷ್ಣ ಸಾಮಾನ್ಯ ಮಾನವ ರಂತೆ ಸಂಚರಿಸುತ್ತಾ ಸರ್ವವನ್ನೂ ತನ್ನಲ್ಲೇ ಅಡಗಿಸಿಕೊಂಡಿದ್ದ ದಿವ್ಯ ಮೂರ್ತಿ. ಅಬ್ಬಾ! ನಿಜವಾಗಿಯೂ ನನ್ನ ಜೀವಿತದ ಈ ಶೇಷ ದಿನಗಳನ್ನು ಆ ಶೇಷಶಯನನ ಲೀಲಾ ಶ್ರವಣದಲ್ಲಿ ಕಳೆಯುತ್ತಿರುವುದು ನನ್ನ ಯಾವ ಜನ್ಮದ ಸುಕೃತವೋ! ಆದ್ದ ರಿಂದಲೇ, ಆ ಮಹಾ ಋಷಿಯ ಶಾಪ ನನ್ನ ಪಾಪಗಳನ್ನು ತೊಳೆಯುತ್ತಿದೆ. ಇಂಥ ಸದವಕಾಶವನ್ನು ಮಾಡಿಕೊಟ್ಟ ಆ ಋಷಿ ಕುಮಾರನಿಗೆ ಮತ್ತೊಮ್ಮೆ ನನ್ನ ಸಹಸ್ರ ಪ್ರಣಾಮಗಳು.

ಅಂತ್ಯಕಾಲ ಸನ್ನಿಹಿತವಾಗುತ್ತಿರವಂತೆ ನನ್ನ ಭಾವನೆಗಳು ಕೃಷ್ಣನ ಮಧುರ ಲೀಲೆ ಗಳನ್ನು ಹೀರುವುದರಲ್ಲಿ ಲೀನವಾಗುತ್ತಿವೆ, ಮತ್ತೇರಿಸುತ್ತಿವೆ, ಉನ್ಮತ್ತನನ್ನಾಗಿ ಮಾಡು ತ್ತಿವೆ. ಇನ್ನುಳಿದ ಅವಧಿಯಲ್ಲಿ ನಮ್ಮ ಗೋಪಾಲನ ಲೀಲಾ ಪಾನಕದಿಂದ ನನ್ನ ಚಿತ್ತದಲ್ಲಿರುವ ಕೃಷ್ಣರೂಪದ ದಾಹವನ್ನು ಅಡಗಿಸಿ," ಎಂದು ಪ್ರಾರ್ಥಿಸಿದ. ಶುಕ

ಕರುಣಾರಸ ಸೂಸುತ್ತಾ, "ರಾಜಾ! ಇನ್ನೂ ಏನನ್ನು ಹೇಳಬೇಕು ಎನ್ನುತ್ತೀ? ಯುಗಯುಗಗಳು ಹೇಳಿದರೂ ತೀರದು ಕೃಷ್ಣನ ಲೀಲೆಗಳು. ಇನ್ನು ಎಲ್ಲವುಗಳನ್ನೂ ಅಲ್ಪಾವಧಿಯಲ್ಲಿ ಹೇಳುವುದು ಎಂಥವರಿಗೂ ಸಾಧ್ಯವಿಲ್ಲ," ಎನ್ನಲು, ಪರೀಕ್ಷಿತ್ ಮಹಾರಾಜ, "ಸ್ವಾಮೀ! ನಮ್ಮ ಕೃಷ್ಣ, ಬಲರಾಮ ಸಹಿತನಾಗಿ ಸಾಂದೀಪನಿ ಎನ್ನುವ ಭಾಗ್ಯಶಾಲಿಯ ಬಳಿ ವಿದ್ಯೆ ಕಲಿತನೆಂದು ಕೇಳಿದ್ದೆ. ಸರ್ವ ವಿದ್ಯಾ ಪಾರಂಗತನಾದ ಸರ್ವೇಶ್ವರನಿಗೆ ವಿದ್ಯೆ ಕಲಿಸುವ ಅವಿದ್ಯಾವಂತರೂ ಇರುವರೇ? ಎಲ್ಲಾ ಅವನ ಲೀಲೆ. ಯಾರು ಯಾರನ್ನು ಯಾವ ಯಾವ ವಿಧದಲ್ಲಿ ಉದ್ಧರಿಸಬೇಕೆನ್ನುವುದು ಆ ಲೀಲಾ ನಾಟಕ ಸೂತ್ರಧಾರಿಯಾದ ಗೋಪಾಲನಿಗೇ ಗೊತ್ತು. ಸಾಂದೀಪನಿಯನ್ನು ಉದ್ಧರಿಸುವ ಸಲುವಾಗಿ ಈ ನಾಟಕವಾಡಿರಬೇಕು. ಸಾಂದೀಪನಿಯೊಂದಿಗೆ ಆಡಿದ ನಾಟಕವನ್ನು ಸ್ವಲ್ಪ ತಿಳಿಸಿದರೆ, ಕೇಳಿ ಕೃತಾರ್ಥನಾಗುತ್ತೇನೆ, ಪ್ರಭೂ!" ಎಂದು ಪ್ರಾರ್ಥಿಸಿದ. ಶುಕ ಗಹಗಹಿಸಿ ನಕ್ಕು, "ರಾಜಾ! ನೀನು ಹೇಳಿದ್ದು ಪರಮ ಸತ್ಯ. ಹೌದು, ಎಲ್ಲಾ ನಾಟಕವೇ. ಕೃಷ್ಣನ ಈ ನಾಟಕಕ್ಕೆ ಜಗತ್ತೇ ವೇದಿಕೆ. ಎಷ್ಟೋ ತೆರೆಗಳನ್ನು, ರಂಗಸಜ್ಜಿಕೆಗಳನ್ನು, ಸನ್ನಿವೇಶಗಳನ್ನು ಸೃಷ್ಟಿಸಿ ಪಾತ್ರಧಾರಿಗಳನ್ನು ಉದ್ಧಾರ ಮಾಡುವ ಸನ್ನಾಹ ಇದೆಲ್ಲಾ. ಸಾಂದೀಪನಿಯ ಅದೃಷ್ಟ ಚೆನ್ನಾಗಿದ್ದುದ ರಿಂದ ಅವನಿಗೆ ಅಂಥ ಅವಕಾಶ ಕಲ್ಪಿಸಿಕೊಟ್ಟು, ಕೃತಾರ್ಥನನ್ನಾಗಿ ಮಾಡಿದ. ಆ ಲೀಲಾ ನಾಟಕ ಕುರಿತು ಹೇಳುತ್ತೇನೆ ಕೇಳು.

ಬಲರಾಮ ಕೃಷ್ಣರು ದಿನದಿನಕ್ಕೆ ಪ್ರವರ್ಧಮಾನರಾಗಿ ದಿನಕರನಂತೆ ತೇಜೋ ವಂತರಾಗಿ ಪ್ರಕಾಶಿಸುತ್ತಿರಲು, ನಂದ ಯಶೋದೆಯರು ಆ ಬಾಲಕರ ಭವಿಷ್ಯತ್ತನ್ನು ಯೋಚಿಸಿ, ಮಾಯೆಗೆ ಬದ್ಧರಾಗಿ, ಅವರಿಗೆ ವಿದ್ಯೆ ಕಲಿಸಬೇಕೆಂದು ನಿಶ್ಚಯಿಸಿದರು. ಕುಲ ಗುರುಗಳಾದ ಗರ್ಗರನ್ನು ಕರೆಸಿ, ಶುಭ ಮುಹೂರ್ತವನ್ನು ನಿರ್ಣಯಿಸಿ, ಅತ್ಯಂತ ವೈಭವದಿಂದ ಉಪನಯನ ಸಂಸ್ಕಾರವನ್ನು ನಡೆಸಿ, ಅನೇಕ ದಾನ ಧರ್ಮಗಳನ್ನು ಮಾಡಿದರು. ಕೇವಲ ರೇಪಲ್ಲೆಯವರಿಗೆ ಮಾತ್ರವಲ್ಲದೆ ಆ ಪ್ರಾಂತ ದವರಿಗೆಲ್ಲಾ ಆನಂದವಾಗುವಂತೆ ಉತ್ಸವ ನಡೆಸಿದರು. ಪಂಡಿತರನ್ನು ಆಹ್ವಾನಿಸಿ, ಗರ್ಗರೊಂದಿಗೆ ಸಮಾಲೋಚನೆ ಮಾಡಿ, ತಮ್ಮ ಮಕ್ಕಳಿಗೆ ಉತ್ತಮ ವಿದ್ಯೆ ಕಲಿಸುವ ಪಂಡಿತೋತ್ತಮರೊಬ್ಬರನ್ನು ಸೂಚಿಸಬೇಕೆಂದು ಕೇಳಿಕೊಂಡರು. ಕುಲ ಗುರುಗಳಾದ ಗರ್ಗರು ಆಲೋಚಿಸಿ ಕಾಶೀನಗರವಾಸಿಯಾದ, ಗಂಗಾತೀರದಲ್ಲಿ ಇರುವ ಅವಂತೀಪುರದ ಸಾಂದೀಪನಿ ಎನ್ನುವ ಪಂಡಿತೋತ್ತಮನು, ಪವಿತ್ರ ಹೃದಯನೆಂದೂ ಬಲರಾಮ ಕೃಷ್ಣರನ್ನು ಅವನ ಹತ್ತಿರ ಬಿಡುವುದು ಒಳ್ಳೆಯದು ಎಂದೂ ತಿಳಿಸಿದರು. ನಂದ ಯಶೋದೆಯರಿಗೆ ಮಕ್ಕಳನ್ನು ಅಷ್ಟು ದೂರ ಕಳಿಸಲು ಇಷ್ಟವಿಲ್ಲದಿದ್ದ ಗುರುವಿಲ್ಲದ ವಿದ್ಯೆ ಕುರುಡು ವಿದ್ಯೆ ಎನ್ನುವ ಸತ್ಯವನ್ನು

ತಿಳಿದವರಾದ್ದರಿಂದ ಒಪ್ಪಿಕೊಂಡರು. ನಂದ, ತಾನೇ ಸ್ವತಃ ತನ್ನ ಮಕ್ಕಳಾದ ಬಲರಾಮ ಕೃಷ್ಣರನ್ನು ಕರೆದುಕೊಂಡು ಕಾಶೀನಗರವನ್ನು ಸೇರಿ, ಸಾಂದೀಪನಿಗೆ ಮಕ್ಕಳನ್ನು ಒಪ್ಪಿಸಿ, ಬೇಕಾದ ಏರ್ಪಾಟುಗಳನ್ನು ಮಾಡಿ ಭಾರವಾದ ಹೃದಯ ದಿಂದ ರೇಪಲ್ಲೆಗೆ ಹಿಂದಿರುಗಿದ.

ಅಂದಿನಿಂದಲೂ ನಮ್ಮ ಬಲರಾಮ ಕೃಷ್ಣರು ಸಾಂದೀಪನಿಯ ಬಳಿ ಭಯ ಭಕ್ತಿಯಿಂದ ಇರುತ್ತಾ ವಿದ್ಯಾಭ್ಯಾಸ ಮಾಡುತ್ತಿದ್ದರು. ಲೋಕದಲ್ಲಿ ಹುಡುಗರು ಸಾವಿರಗಟ್ಟಲೆ, ಲಕ್ಷಗಟ್ಟಲೆ, ಕೋಟಿಗಟ್ಟಲೆ ಇರುವವರಾದರೂ ಗುರುವಿಗೆ ತೃಪ್ತಿ ಉಂಟುಮಾಡುವ ವಿದ್ಯಾರ್ಥಿಗಳು ಮಾತ್ರ ನೂರಕ್ಕೆ ಒಬ್ಬರೂ ಇಲ್ಲ. ಗುರುವನ್ನು ತೃಪ್ತಿಪಡಿಸಿ, ಗುರುವು ಹೇಳಿಕೊಟ್ಟ ವಿದ್ಯೆಯನ್ನು ಸಕ್ರಮವಾಗಿ ಕಲಿತು, ವಿಷಯ ಅರ್ಥಿಗಳಾಗದೆ, ವಿದ್ಯಾರ್ಥಿಗಳೆಂದು ಭಾವಿಸಿ, ಅದರಂತೆ ವರ್ತಿಸಿದವರು ನಮ್ಮ ಬಲರಾಮ ಕೃಷ್ಣರು. ಗುರುವಿಗೆ ಎದರು ಹೇಳುವುದಾಗಲಿ, ಗುರುವಿನ ಆಜ್ಞೆಯನ್ನು ಮೀರುವುದಾಗಲಿ, ಅವಿಧೇಯತೆಯಿಂದ ವರ್ತಿಸುವುದಾಗಲಿ ಎಂದೂ ಮಾಡಿ ದವರಲ್ಲ. ಸ್ವತಃ ಸರ್ವಶಕ್ತಿ ಸಂಪನ್ನರಾಗಿಯೂ ಆಯಾ ಸ್ಥಾನಕ್ಕನುಗುಣವಾದ ವರ್ತನೆಯನ್ನು ಇಟ್ಟುಕೊಂಡವರು.

ಶ್ರದ್ಧಾ ಭಕ್ತಿ, ವಿನಯ ವಿಧೇಯತೆಗಳಿಂದ, ಹೇಳಿಕೊಟ್ಟ ಪಾಠಗಳನ್ನು ಕಲಿತು ಒಪ್ಪಿಸುವುದೊಂದಲ್ಲದೆ ಅನ್ಯ ವಿಚಾರಗಳನ್ನು ತಲೆಯಲ್ಲಿ ಹಾಕಿಕೊಳ್ಳದೆ ವಿದ್ಯಾಭ್ಯಾಸ ಮಾಡುತ್ತಿದ್ದ ಆ ಬಾಲಕರನ್ನು ನೋಡಿ ಸಾಂದೀಪನಿ ತನ್ನಲ್ಲೇ ತಾನು ಆನಂದದಿಂದ ಹಿಗ್ಗುತ್ತಿದ್ದ. ಅವರ ಮೇಲೆ ಅಮಿತ ಪ್ರೇಮ ಉಂಟಾಗಿ ಹೊಸ ಹೊಸ ತರ್ಕ, ವ್ಯಾಕರಣ, ಧರ್ಮಶಾಸ್ತ್ರ, ಅರ್ಥಶಾಸ್ತ್ರಾದಿ ಪಾಠಗಳನ್ನೆಲ್ಲಾ ಹೇಳಿಕೊಟ್ಟ. ರಾಜಾ! ಏನೆಂದು ವರ್ಣಿಸಲಿ, ತಿಂಗಳಿಗೊಂದು ವಿದ್ಯೆ, ಸಂವತ್ಸರಕ್ಕೊಂದು ವಿದ್ಯೆ, ಐದು ವರ್ಷಕ್ಕೊಂದು ವಿದ್ಯೆ ಕಲಿಸುವವರು ಲೋಕದಲ್ಲಿ ಇರಬಹುದು. ಆದರೆ, ನಮ್ಮ ಬಲರಾಮ ಕಷ್ಣರು ಸಾಂದೀಪನಿಯ ಮನೆಯಲ್ಲಿ ಅರವತ್ತುನಾಲ್ಕು ವಿದ್ಯೆಗಳನ್ನೂ ಕಲಿತರು. ಇದು ಅವನ ಲೀಲೆಗಳಲ್ಲೊಂದಲ್ಲದೆ ಮತ್ತಿನ್ನೇನು? ಹೀಗೆ ಕಲಿಯುವುದು ಎಲ್ಲರಿಗೂ ಸಾಧ್ಯವೇ? ಈ ಹುಡುಗರ ವಿನಯ ವಿಧೇಯತೆಗಳನ್ನು ನೋಡುತ್ತಾ ಅವರಿಂದ ಸೇವೆ ಮಾಡಿಸಿಕೊಳ್ಳುತ್ತಾ ಅವರೊಂದಿಗೆ ಸಂಭಾಷಿಸುತ್ತಾ ಇರುವಾಗ, ಮಧ್ಯೆ ಮಧ್ಯೆ ಸಾಂದೀಪನಿ ಉಕ್ಕಿ ಬರುತ್ತಿದ್ದ ದುಃಖವನ್ನು ಅದುಮಿಕೊಳ್ಳಲಾಗದೆ ಕಣ್ಣೀರು ಸುರಿಸುತ್ತಿದ್ದ.

ಇದಕ್ಕೆ ಕಾರಣವೇನೋ ಶೋಧಿಸಬೇಕೆಂದು ಬಲರಾಮ ಕೃಷ್ಣರ ಆಸೆ. ಹೀಗಿರುವಲ್ಲಿ, ಒಂದು ದಿನ ಗೋಪಾಲ ಗುರುಗಳೆದುರು ವಿನಯದಿಂದ ಕೈ ಕಟ್ಟಿ ನಿಂತು,

'ಗುರೋತ್ತಮ! ನಮ್ಮೊಂದಿಗೆ ಮಾತನಾಡುವಾಗ ಮಧ್ಯೆ ಮಧ್ಯೆ ತಾವು ಯಾವುದೋ ವಿಷಯವನ್ನು ನೆನೆ ನೆನೆದು ಕಣ್ಣೀರು ಸುರಿಸುತ್ತೀರಿ. ಇದಕ್ಕೆ ಕಾರಣವೇನೆನ್ನುವುದನ್ನು ನಮಗೆ ತಿಳಿಸಬಹುದಾದರೆ ದಯಮಾಡಿ ತಿಳಿಸಬೇಕು,' ಎಂದು ಪ್ರಾರ್ಥಿಸಿದ. ಅದನ್ನು ಕೇಳಿ ಸಾಂದೀಪನಿಯ ಸಂಕಟ ಉಕ್ಕಿ ಬಂದು, ಸಹಿಸಲಾರದ ದುಃಖದಿಂದ ಗೋಪಾಲನನ್ನು ಬಿಗಿದಪ್ಪಿಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ.

ಗೋಪಾಲನಿಗೆ ಎಲ್ಲ ತಿಳಿದಿದ್ದರೂ ಏನೂ ತಿಳಿಯದವನಂತೆ ನಟಿಸುತ್ತಾ, 'ಗುರುವರ್ಯಾ! ನಿಮ್ಮ ದುಃಖಕ್ಕೆ ಕಾರಣ ತಿಳಿಸಬೇಕು. ಅದನ್ನು ನಿವಾರಿಸಲು ನಮ್ಮ ಸರ್ವ ಶಕ್ತಿಯನ್ನೂ ವಿನಿಯೋಗಿಸಿ, ಪ್ರಯತ್ನಿಸುವೆವು. ಗುರುವನ್ನು ಸಂತೋಷಪಡಿಸುವುದಕ್ಕಿಂತ ಬೇರೊಂದು ಪವಿತ್ರ ಕಾರ್ಯ ನಮಗಿಲ್ಲ. ನೀವು ಶಂಕಿಸದೆ, ನಾವು ಹುಡುಗರೆಂದು ಭಾವಿಸದೆ ಹೇಳಬೇಕು,' ಎಂದು ಸಾಂದೀಪನಿಯನ್ನು ಪ್ರಾರ್ಥಿಸಿದ. ಸಾಂದೀಪನಿಯು ಅದಕ್ಕೆ ಸಮ್ಮತಿಸಿ, ಬಲರಾಮ ಕೃಷ್ಣರಿಬ್ಬರನ್ನೂ ಹತ್ತಿರ ಕೂರಿಸಿಕೊಂಡು, 'ಮಕ್ಕಳೇ, ಇಂಥ ಶಿಷ್ಯರು ಸಿಕ್ಕಿರುವುದು ನನ್ನ ಭಾಗ್ಯ. ನಿಮ್ಮ ಮಾತೇ ನನ್ನ ಕಾರ್ಯ ಸಾಧಿಸಿ ಕೊಟ್ಟಷ್ಟು ಆನಂದ ಉಂಟುಮಾಡಿದೆ. ನೀವು ಸಾಮಾನ್ಯ ಬಾಲಕರಲ್ಲವೆಂದು ನನ್ನ ಅಂತರಾತ್ಮ ನನಗೆ ಹೇಳುತ್ತಿದೆ. ಈ ಕಾರ್ಯವನ್ನು ನೀವು ಸಾಧಿಸಬಲ್ಲಿರೆನ್ನುವ ದೃಢ ವಿಶ್ವಾಸ ನನ್ನಲ್ಲಿ ಉಂಟಾಗಿದೆ. ಆದ್ದರಿಂದಲೇ ಹೇಳಲು ಹಿಂದು ಮುಂದು ನೋಡುತ್ತಿದ್ದೇನೆ. ನನ್ನ ಪ್ರಾಪ್ತಿ ಹೇಗಿದೆಯೋ,' ಎಂದು ಮತ್ತೆ ಕಣ್ಣೀರು ಹಾಕಿದ. ಅದನ್ನು ಕಂಡು ಬಲರಾಮ ತಿರುಗಿ ಗುರುವಿನ ಪಾದಗಳನ್ನು ಹಿಡಿದು, 'ಗುರುವೇ! ಪುತ್ರ ಸಮಾನರಾದ ನಮ್ಮ ಮೇಲೆ ನಿಮಗೇಕೆ ಇಷ್ಟು ಸಂಶಯ? ನಿಮ್ಮನ್ನು ಆನಂದಪಡಿಸಲು ನಮ್ಮ ಪ್ರಾಣವನ್ನಾದರೂ ಅರ್ಪಿಸುವೆವು. ಹೇಳಿ,' ಎಂದು ಪ್ರಾರ್ಥಿಸಿದ.

ಬಲರಾಮ ಕೃಷ್ಣರ ಸತ್ಯವಚನ ಸಾಂದೀಪನಿಯನ್ನು ನಾಚುವಂತೆ ಮಾಡಿತು. ವಿಷಯವನ್ನು ತಿಳಿಸುವುದೇ ಒಳ್ಳೆಯದೆಂದು, 'ಕುಮಾರರೇ! ನನಗೆ ಬಹುಕಾಲ ಮಕ್ಕಳೇ ಇಲ್ಲದೆ ಕೊನೆಗೊಬ್ಬ ಮಗ ಹುಟ್ಟಿದ. ಅವನನ್ನು ಪ್ರಾಣ ಸಮಾನವಾಗಿ ಪ್ರೇಮಿಸಿ ಸಾಕುತ್ತಿದ್ದೆವು. ಒಂದು ದಿನ ಅವನು ಸಾಗರ ಸಂಗಮವಾದ ಪ್ರಭಾಸ ತೀರ್ಥದಲ್ಲಿ ಸ್ನಾನ ಮಾಡಲು ಹೋಗಿ ಸಮುದ್ರದಲ್ಲಿ ಮುಳುಗಿ ಹೋದ. ನಿಮ್ಮನ್ನು ನೋಡಿದಾಗಲೆಲ್ಲಾ ನಿಮ್ಮ ವಿನಯ ವಿಧೇಯತೆಗಳನ್ನು ಅನುಭವಿಸಿದಾಗಲೆಲ್ಲಾ ಆ ಕುಮಾರ ನನ್ನ ಕಣ್ಣ ಮುಂದೆ ಬರುತ್ತಿದ್ದ. ನಿಮ್ಮನ್ನು ನೋಡುತ್ತಾ ದುಃಖವನ್ನು ಮರೆತು ಆನಂದವಾಗಿ ಇರುತ್ತಿದ್ದೆ. ನೀವು ಕಲಿಯಬೇಕಾಗಿದ್ದ ವಿದ್ಯೆಗಳನ್ನೆಲ್ಲಾ ಅತಿ ಶೀಘ್ರವಾಗಿಯೇ ಕಲಿತಿರಿ. ಇನ್ನು ನೀವು ನನ್ನ ಬಳಿ ಇರಲು ಅವಕಾಶವಿಲ್ಲ.

ಇನ್ನು ಮುಂದೆ ನಾನು ಯಾರನ್ನು ನೋಡಿ ಆನಂದಿಸಲಿ,' ಎಂದು ಗಟ್ಟಿಯಾಗಿ ಅಳಲಾರಂಭಿಸಿದ.

ಆಗ ಗೋಪಾಲ ಗಂಭೀರ ಧ್ವನಿಯಲ್ಲಿ, 'ಗುರೋತ್ತಮಾ! ಅಪೂರ್ವವಾದ ಇಷ್ಟು ವಿದ್ಯೆಗಳನ್ನು ನಮಗೆ ಕಲಿಸಿದ್ದಕ್ಕೆ ತಕ್ಕ ಕೃತಜ್ಞತೆ ತೋರಿಸಬೇಕಾದ ನಮ್ಮ ಧರ್ಮ ಕೂಡ ಒಂದು ಇದೆಯಲ್ಲವೇ? ಆದ್ದರಿಂದ, ನಾವೀಗಲೇ ಹೋಗಿ, ಸಮುದ್ರನೊಂದಿಗೆ ಹೋರಾಡಿ, ತಮ್ಮ ಪುತ್ರ ರತ್ನವನ್ನು ತಂದು ಅದನ್ನೇ ಗುರು ದಕ್ಷಿಣೆಯೆಂದು ಭಾವಿಸಿ ತಮಗರ್ಪಿಸಿ ತಮ್ಮ ಶಿಷ್ಯರಾದುದಕ್ಕೆ ಸಾರ್ಥಕವಾಯಿತು ಎಂದುಕೊಳ್ಳುತ್ತೇವೆ. ಆಶೀರ್ವದಿಸಿ, ಅಪ್ಪಣೆ ಕೊಡಬೇಕು,' ಎಂದು ಬಲರಾಮ ಕೃಷ್ಣರು ಗುರುಗಳ ಪಾದಗಳಿಗೆ ನಮಸ್ಕರಿಸಿ ಎದ್ದು ನಿಂತರು. ಇವರು ಸಾಮಾನ್ಯ ಬಾಲಕರಲ್ಲವೆಂದೂ ತಪ್ಪದೆ ಈ ಕಾರ್ಯ ಸಾಧಿಸಿಕೊಂಡು ಬರುವವರೆನ್ನುವ ಸಂಪೂರ್ಣ ವಿಶ್ವಾಸ ಇದ್ದುದರಿಂದಲೇ ಸಾಂದೀಪನಿಯು ಇವರ ತಲೆಗಳನ್ನು ಮುದ್ದಾಡಿ, ಆಶೀರ್ವದಿಸಿ ಕಳಿಸಿದ.

ಮಹಾರಾಜಾ! ಗುರುವಾಜ್ಞೆ ಪಡೆದು ಬಲರಾಮ ಕೃಷ್ಣರು ಸಾಗರ ಸಂಗಮಕ್ಕೆ ಬಂದು, ದಡದಲ್ಲಿ ನಿಂತು, ಗಂಭೀರ ಸ್ವರದಿಂದ, 'ಸಾಗರಾ! ನಮ್ಮ ಗುರುವಾದ ಸಾಂದೀಪನಿಯ ಪುತ್ರ ರತ್ನವನ್ನು ನಮಗೆ ಕೊಡುವೆಯೋ ಇಲ್ಲವೇ ನಮ್ಮ ಶಿಕ್ಷೆಗೆ ಗುರಿಯಾಗುವಿಯೋ?' ಎಂದು ಗರ್ಜಿಸಿದೊಡನೆ, ಸಮುದ್ರ ತತ್ತರಿಸಿ ಹೋಗಿ, ಬಲರಾಮ ಕೃಷ್ಣರ ಪಾದಗಳನ್ನು ಮುಟ್ಟಿ, 'ಸ್ವಾಮೀ! ಕ್ಷಮಿಸಬೇಕು. ಇದು ನನ್ನ ತಪ್ಪಲ್ಲ. ಸ್ನಾನ ಮಾಡುತ್ತಿದ್ದ ಬಾಲಕ ಕಾಲು ಜಾರಿ ಸುಳಿಯಲ್ಲಿ ಬಿದ್ದು, ನನ್ನ ಗರ್ಭಕ್ಕೆ ಕಾಲನಿಂದ ಎಳೆತರಲ್ಪಟ್ಟ. ಆಗ, ನನ್ನಲ್ಲಿ ಎಷ್ಟೋ ಕಾಲದಿಂದ ವಾಸವಾಗಿದ್ದ ಪಂಚಜನ ಎನ್ನುವ ರಾಕ್ಷಸ ಆ ಬಾಲಕನನ್ನು ನುಂಗಿ ಹೊಟ್ಟೆಯಲ್ಲಿಟ್ಟುಕೊಂಡ. ಇದು ನಡೆದ ವಿಷಯ. ಇನ್ನು ನಿಮ್ಮ ಇಷ್ಟ ಬಂದಂತೆ ಮಾಡಬಹುದು,' ಎಂದು ಸತ್ಯ ಸಂಗತಿಯನ್ನು ಬಿನ್ನವಿಸಿಕೊಳ್ಳಲು, 'ಹಾಗಾದರೆ ಸರಿ,' ಎಂದು ಹೇಳಿ ಕೃಷ್ಣ ಸಮುದ್ರ ಗರ್ಭವನ್ನು ಪ್ರವೇಶಿಸಿದ. ರಾಕ್ಷಸನಾದ ಪಂಚಜನನೊಂದಿಗೆ ಹೋರಾಡಿ, ಕ್ಷಣದಲ್ಲಿ ಅವನನ್ನು ಯಮನಿಗೊಪ್ಪಿಸಿ, ಅವನ ಹೊಟ್ಟೆಯನ್ನು ಸೀಳಿದ. ಹೊಟ್ಟೆಯನ್ನು ಹೊಕ್ಕು ಎಷ್ಟು ಹುಡುಕಿದರೂ ಗುರುಪುತ್ರ ಸಿಕ್ಕದಿರುವುದನ್ನು ನೋಡಿ, ಕೃಷ್ಣ ಕ್ರೋಧದಿಂದ ಅವನ ಕರುಳನ್ನು ಶೋಧಿಸುತ್ತಿದ್ದಾಗ ಅದರಲ್ಲಿ ಒಂದು ಶಂಖ ಸಿಕ್ಕಿತು. ಅದನ್ನವನು ಕೈಯಲ್ಲಿ ಹಿಡಿದು, ಗುರುಪುತ್ರನನ್ನು ಪತ್ತೆ ಹಚ್ಚಬೇಕೆಂದು ನೇರವಾಗಿ ಯಮಪುರಿಗೆ ಹೋಗಿ, ಸಂಯಮವೆನ್ನುವ ನಗರ ದ್ವಾರದಲ್ಲಿ ನಿಂತು ಸಮುದ್ರದಲ್ಲಿದ್ದ ಪಂಚಜನನ ಹೊಟ್ಟೆಯಿಂದ ತಂದ ಶಂಖವನ್ನು ಊದಿದ. ಸಿಡಿಲಿನಂಥ ಆ ಧ್ವನಿ ಯಮನ ಕಿವಿಗೆ ಕಾಯಿಸಿದ ಕಬ್ಬಿಣ ಹುಯ್ದಂತಾಯಿತು.

ಯಮನು ಉಗ್ರನಾಗಿ ಆ ದ್ವಾರದ ಬಳಿಗೆ ಬಂದು, ಬಲರಾಮ ಕೃಷ್ಣರನ್ನು ನೋಡಿ ನಮಸ್ಕರಿಸಿದ. ಅವರು ಬರಲು ಕಾರಣವೇನೆಂದು ಪ್ರಾರ್ಥಿಸಲಾಗಿ ಅವರು ಗುರುಪುತ್ರನನ್ನು ತಂದೊಪ್ಪಿಸಬೇಕೆಂದು ಆಜ್ಞಾಪಿಸಿದರು, 'ತಮ್ಮ ಚಿತ್ತ,' ಎನ್ನುತ್ತಾ ಯಮ ಕೈ ಜೋಡಿಸಿ, ಒಡನೆಯೇ ತನ್ನ ಪರಿವಾರದವರಿಗೆ ಗುರುಪುತ್ರನನ್ನು ತರುವಂತೆ ಆಜ್ಞಾಪಿಸಿ, ಅವನನ್ನು ಬಲರಾಮ ಕೃಷ್ಣರಿಗೆ ಒಪ್ಪಿಸಿದ.

ಕೂಡಲೇ ಬಲರಾಮ ಕೃಷ್ಣರು ಆ ಬಾಲಕನನ್ನು ತಮ್ಮೊಂದಿಗೆ ಕರೆದುಕೊಂಡು ಬಂದು, ಗುರುವಾದ ಸಾಂದೀಪನಿಗೆ ಒಪ್ಪಿಸಿದರು. 'ಇದು ನಮ್ಮ ಗುರುದಕ್ಷಿಣೆ, ಸ್ವೀಕರಿಸಬೇಕು,' ಎಂದು ಗೋಪಾಲ ಪ್ರಾರ್ಥಿಸಿದ. ಆ ಬಾಲಕನನ್ನು ನೋಡಿದ ತಾಯಿತಂದೆಯರಾದ ಸಾಂದೀಪನಿ ಸತಿಪತಿಯರು ಎಷ್ಟು ಆನಂದಿಸಿದರೋ ಹೇಳಲಸಾಧ್ಯ. ಇಂಥ ಮಹತ್ತರವಾದ ಕಾರ್ಯವನ್ನು ಸಾಧಿಸಿ, ಗತಿಸಿದ ಗುರು ಪುತ್ರನನ್ನು ಬದುಕಿಸಿ ತಂದು ಗುರುವಿಗೆ ದಕ್ಷಿಣೆಯಾಗಿತ್ತ ಆ ಗೋಪಾಲನ ಶಕ್ತಿ ಸಾಮರ್ಥ್ಯ ಸಾಮಾನ್ಯವಾದುದೆಂದು ಎಂಥ ಮೂರ್ಖನೂ ತಿಳಿಯುವುದಿಲ್ಲ ಅಲ್ಲವೇ?

ಸಾಂದೀಪನಿ ಇವರಿಬ್ಬರೂ ನಿಜವಾಗಿಯೂ ನರನಾರಾಯಣರೇ ಎಂದು ನಂಬಿ, ಇಂಥವರು ನನಗೆ ಶಿಷ್ಯರಾದರಲ್ಲಾ ಅವರಿಗೆ ನಾನು ಗುರುವಾದೆನಲ್ಲಾ ಎಂದು ತನ್ನೊಳಗೇ ಹಿಗ್ಗಿ, ಜನ್ಮ ಸಾರ್ಥಕವಾಯಿತೆಂದು ಅವರಿಗೆ ಮನಸ್ಸಿನಲ್ಲೇ ನಮಸ್ಕಾರ ಮಾಡಿದ. ಆನಂದಬಾಷ್ಪಗಳಿಂದ ಬಲರಾಮ ಕೃಷ್ಣರನ್ನು ಆಲಂಗಿಸಿ, ಶಿರಸ್ಸನ್ನು ಮುದ್ದಾಡಿ ಬೀಳ್ಕೊಟ್ಟ.

ಬಲರಾಮ ಕೃಷ್ಣರೂ ಕೂಡ ಗುರು ಮತ್ತು ಗುರು ಪತ್ನಿಯ ಅಪ್ಪಣೆ ಪಡೆದು, ರಥವೇರಿ ಮಥುರಾಪುರವನ್ನು ಸೇರಿದರು. ಗುರುವಿಗೆ ಮಾಡಿದ ಉಪಕಾರ ಮಹಾಕಾರ್ಯವನ್ನು ಮಥುರಾಪುರ ವಾಸಿಗಳು ಕೇಳಿ ಕೃಷ್ಣನನ್ನು ಕೊಂಡಾಡಿದರು, ಆನಂದಿಸಿದರು. ಹೀಗೆ, ಗೋಪಾಲನ ವಿದ್ಯಾರ್ಜನೆಯ ಸಮಯದಲ್ಲಿನ ಅವನ ವಿನಯ ವಿಧೇಯತೆಗಳು ಬಾಲಕರಿಗೆ ಎಷ್ಟು ಮಾರ್ಗದರ್ಶಕವಾದುವೋ ದೊಡ್ಡ ವರಿಗೆ ಎಷ್ಟು ಆನಂದದಾಯಕವಾದುವೋ ಯೋಚಿಸು. ರಾಜಾ! ಗೋಪಾಲ ಪ್ರತಿಯೊಂದು ಸಣ್ಣ ಕೆಲಸದಲ್ಲೂ ಒಂದು ಅಂತರಾರ್ಥವನ್ನು ಲೋಕಕ್ಕೆ ಬೋಧಿಸಿ ಇದ್ದಾನೆ. ಮಂದಮತಿಗಳಾದ ಮಾನವರು ಅದನ್ನು ತಿಳಿಯದೆ ಅಪಾರ್ಥಗಳನ್ನು ಮಾಡುವರು.

ಮೀನಿಗೆ ಈಜು ಕಲಿಸುವವರು ಲೊಕದಲ್ಲುಂಟೇ? ಹಾಗೇ ದೈವಕ್ಕೆ ವಿದ್ಯೆ ಕಲಿಸುವವರುಂಟೆ? ಇಲ್ಲದಿದ್ದರೂ ದೈವಕ್ಕೆ ಸರ್ವ ವಿದ್ಯೆಗಳೂ ತನ್ನೊಳಗೇ ಇದ್ದರೂ, ಗುರುವನ್ನು ಪಡೆಯುವ ವಿಧಾನ, ಗುರು ಋಣವನ್ನು ತೀರಿಸುವ ವಿಧಾನ, ವಿದ್ಯೆಯಿಂದ ಪಡೆಯುವ ವಿನಯ ಸಂಪತ್ತನ್ನು ಹೇಗೆ ಅನುಭವಿಸಬೇಕು ಎನ್ನುವ ಪಾಠವನ್ನು ಇಂದಿನ ವಿದ್ಯಾರ್ಥಿಗಳಿಗೆ ಕಲಿಸುವ ಸಲುವಾಗಿಯೇ ಅವನು ವಿದ್ಯಾರ್ಥಿಯಂತೆ ನಟಿಸಿ, ಆಚರಿಸಿ, ಆದರ್ಶವನ್ನು ಬೋಧಿಸಿದ. ಆಹಾ! ದೈವ ರಹಸ್ಯ ಎಷ್ಟು ಸೂಕ್ಷ್ಮ," ಎಂದು ಶುಕ ಆನಂದ ಬಾಷ್ಪ ಸುರಿಸಿದ.

ಕೃಷ್ಣನ ಗುರುಭಕ್ತಿಯನ್ನು ಕೇಳುತ್ತಿದ್ದ ಪರೀಕ್ಷಿತ್ ಮಹಾರಾಜ, ಆಶ್ಚರ್ಯದಿಂದ ಕಣ್ಣರಳಿಸಿ, ಮಹಾ ಋಷಿಯನ್ನು ನೋಡಿ, "ಸ್ವಾಮೀ! ಗೋಪಾಲನ ಲೀಲೆಗಳು ಒಂದಕ್ಕಿಂತ ಒಂದು ವಿಚಿತ್ರ. ಮಹಾದ್ಭುತ! ಲೋಕವನ್ನು ತಿದ್ದಲು ದೈವ ಎಷ್ಟು ಶ್ರಮವನ್ನಾದರೂ ಸಹಿಸಿ, ತನ್ನ ಶಕ್ತಿ ಪ್ರದರ್ಶನ ಮಾಡುವುದು. ಆದರೆ ಮಾನವನ ಕಣ್ಣಿಗೆ ಮಾಯೆಯ ದಟ್ಟವಾದ ಹೊಗೆ ಕವಿದು, ದೈವತ್ವವನ್ನು ಗುರುತಿಸದಂತೆ ಮಾಡುವುದರಿಂದ, ಮಾನವ ಈ ದಿವ್ಯ ಲೀಲೆಗಳ ಅಂತರಾರ್ಥ ತಿಳಿಯದೆ ಹೋಗುತ್ತಾನೆ," ಎಂದು ತನ್ನ ವ್ಯಥೆಯನ್ನು ವ್ಯಕ್ತಪಡಿಸಲು, ಶುಕ ತಟ್ಟನೆ ಅದಕ್ಕೆ ಉತ್ತರವಾಗಿ, "ಮಹಾರಾಜಾ! ಅದೇ ಜನ್ಮಾಂತರದ ಪಾಪಪುಣ್ಯಗಳ ಫಲ. ಜನ್ಮಾಂತರದಲ್ಲಿ ಮಾಡಿದ ಪುಣ್ಯಫಲದಿಂದ ಪಾಪ ನಶಿಸಿ, ದೈವತ್ವವನ್ನು ಗುರುತಿಸಿ, ಮಾನವರು ದೈವ ಶಕ್ತಿಯನ್ನು ಆಶ್ರಯಿಸಿ ಅದನ್ನೇ ಆಧಾರ ಮಾಡಿಕೊಂಡು ಜೀವಿಸುವರು. ಹಾಗಲ್ಲದೆ, ಜನ್ಮಾಂತರದಲ್ಲಿ ಘೋರ ಕೃತ್ಯಗಳನ್ನು ಮಾಡಿದವರಿಗೆ ಪಾಪ ಫಲದಿಂದ ಕಣ್ಣುಗಳಿಗೆ ಕತ್ತಲು ಕವಿದು, ದೈವವನ್ನೇ ಸ್ಮರಿಸದೆ, ಒಳ್ಳೆಯದನ್ನು ಆಶಿಸದೆ, ಭ್ರಾಂತಿಗೆ ವಶರಾಗಿ, ದಾನವತ್ವವೇ ತಮ್ಮ ವ್ಯಕ್ತಿತ್ವವೆಂದು ತಿಳಿದು ಕ್ರೂರ ಕೃತ್ಯಗಳಲ್ಲಿ ತೊಡಗುವರು. ದೈವ ವಿಶ್ವಾಸ ಜನ್ಮಾಂತರದ ಒಂದು ಪುಣ್ಯವೆಂದೇ ಹೇಳಬೇಕು. ಅದೇನೂ ಆಗಿಂದಾಗಲೇ ಆಯಾ ಕಾಲದಲ್ಲೇ ಹುಟ್ಟುವಂಥದ್ದಲ್ಲ," ಎಂದು ಹೇಳಿದ.

# ೩೯ ಮೃತದಿಂದ ಅಮೃತಕ್ಕೆ

ಪರೀಕ್ಷಿತ್ ಮಹಾರಾಜ, ಪಾಪ ಪುಣ್ಯಗಳ ಫಲವನ್ನು ತಿಳಿದುಕೊಳ್ಳಬೇಕೆನ್ನುವ ಆಕಾಂಕ್ಷೆಯಿಂದ, "ಕೃಷ್ಣನ ಲೀಲೆಗಳಿಗೆ ಸಂಬಂಧಿಸಿದ ಮತ್ತೊಂದು ಶಾಪ ವಿಮೋಚನೆಯ ಕಥೆಯನ್ನು ಹೇಳಬೇಕು," ಎಂದು ಪ್ರಾರ್ಥಿಸಿದ. ಶುಕ ನಕ್ಕು, "ಮಹಾರಾಜ! ಗೋಪಾಲ ವಿಮೊಚನೆ ಮಾಡಿದ ಶಾಪಗಳು ಎಷ್ಟೋ ಇವೆ! ಇದುವರೆಗೂ ಹೇಳಿದ ಬಾಲ ಲೀಲೆಗಳು ಎಲ್ಲವೂ ಆಯಾ ರಾಕ್ಷಸರ ಶಾಪ ವಿಮೋಚನೆಗಳೇ ಅಲ್ಲವೇ?" ಎಂದ. ಪರೀಕ್ಷಿತ್ ಅದನ್ನು ಗ್ರಹಿಸಿ, "ಅವನ ಲೀಲೆಗಳಲ್ಲಿ, ಒಮ್ಮೆ ಮರವನ್ನು ಬುಡಮೇಲು ಮಾಡಿದ್ದು ಒಂದು ಮಹಾ ವಿಚಿತ್ರ ಘಟನೆಯೆಂದು ಕೇಳಿದ್ದೇನೆ. ಅದನ್ನು ಕುರಿತು ವಿವರವಾಗಿ ತಿಳಿಸಿದರೆ ಕೇಳಿ ಆನಂದಿಸುತ್ತೇನೆ," ಎಂದು ಪ್ರಾರ್ಥಿಸಿದ.

ಏನು ಕೇಳಿದರೂ ಹೇಳಲು ಸಿದ್ಧನಾಗಿದ್ದ ಶುಕ, ಆ ಘಟನೆ ಕುರಿತು ಹೇಳಲಾರಂಭಿಸಿದ. "ರಾಜಾ! ಯಶೋದಳ ಮನೆಯಲ್ಲಿ ಬೇಕಾದಷ್ಟು ಜನ ಪರಿಚಾರಕರು ಇದ್ದಾಗ್ಯೂ ಮನೆಯ ಸಂಪ್ರದಾಯವನ್ನು ಅನುಸರಿಸಿ ಮನೆಯ ಯಜಮಾನಿಯೇ ಎಲ್ಲಾ ವಿಷಯದಲ್ಲಿ ಶ್ರದ್ಧೆ ವಹಿಸುತ್ತಿದ್ದಳು. ಹಾಲು ಕರೆಯುವುದು, ಅದನ್ನು ಭದ್ರಮಾಡುವುದು, ಇವುಗಳನ್ನೆಲ್ಲಾ ಅವಳೇ ಮಾಡುತ್ತಿದ್ದಳು.

ಒಂದು ದಿನ ಬ್ರಹ್ಮ ಮುಹೂರ್ತದಲ್ಲೆದ್ದು, ಕಾಲ ಕೃತ್ಯಗಳನ್ನು ತೀರಿಸಿಕೊಂಡು, ಸ್ನಾನಾದಿಗಳನ್ನು ಮಾಡಿ, ನೆಲುವಿನ ಮೇಲಿಟ್ಟಿದ್ದ ಮಡಕೆಯನ್ನು ತೆಗೆದು ಕೆಳಗಿರಿಸಿ, ಯಾವುದೋ ದೇವರನಾಮ ಹಾಡಿಕೊಳ್ಳುತ್ತಾ ಯಶೋದೆ ಮೊಸರು ಕಡೆಯುತ್ತಿದ್ದಳು. ಇಷ್ಟರಲ್ಲಿ ಗೋಪಾಲನು ಧುಮುಕುತ್ತ ಯಶೋದೆ ಮೊಸರು ಕಡೆಯುತ್ತಿದ್ದ ಸ್ಥಳಕ್ಕೆ ಬಂದು ಅಮ್ಮನ ಸೀರೆಯನ್ನು ಜಗ್ಗತೊಡಗಿದನು. ಯಶೋದೆ ಭಯಪಟ್ಟು ತಿರುಗಿ ನೋಡಲು, ಗೋಪಾಲನು ನಿಂತಿದ್ದಾನೆ! ಮೊಸರು ಕಡೆಯುವುದನ್ನು ನಿಲ್ಲಿಸಿ, 'ಮಗೂ! ಇನ್ನೂ ಬೆಳಕಾಗಿಲ್ಲ. ಹೋಗು ಸ್ವಲ್ಪ ಹೊತ್ತು ಮಲಗಿರು,' ಎನ್ನಲು, ಗೋಪಾಲ ತೊದಲು ನುಡಿಯಲ್ಲಿ, ಹಸಿವು ಎಂದು ಅಳಲಾರಂಭಿಸಿದ. ಯಶೋದೆಯ ಮನಸ್ಸು ಕರಗಿ, ಕಡಗೋಲನ್ನು ಪಕ್ಕದಲ್ಲಿಟ್ಟು ಮೊಸರಿನ ಮಡಕೆಯ ಮೇಲೆ ಮುಚ್ಚಳವಿಟ್ಟು, ಅಲ್ಲೇ ಕುಳಿತು, ಗೋಪಾಲನನ್ನು ತೊಡೆಯ ಮೇಲೆ ಹಾಕಿಕೊಂಡು ಎದೆ ಹಾಲು ಕುಡಿಸುತ್ತಾ ಕೈಯಿಂದ ಅವನ ತಲೆ ನೇವರಿಸುತ್ತಾ ಇರುವಾಗ, ಒಳಗೆ ಹಾಲಿನ ಮಡಕೆಗಳ ಶಬ್ದ ಕೇಳಿಸಿತು. ಬೆಕ್ಕು ಮಡಕೆಗಳನ್ನು ಉರುಳಿಸಿತೋ ಏನೋ ಎಂದು, ಮಗುವನ್ನು ತೊಡೆಯಿಂದಿಳಿಸಿ ಕೆಳಗೆ ಕೂರಿಸಿ,

ಒಳಗೆ ಓಡಿದಳು. ತನ್ನನ್ನು ತೊಡೆಯಿಂದ ಕೆಳಗೆ ಹಾಕಿದಳಲ್ಲಾ ಎನ್ನುವ ಕೋಪ ದಿಂದ, ಹೊಟ್ಟೆ ತುಂಬ ಹಾಲು ಕುಡಿಸಲಿಲ್ಲ ಎನ್ನುವ ಅಸಮಾಧಾನದಿಂದ, ಎದುರಿಗಿದ್ದ ಮಡಕೆಯನ್ನು ಕೃಷ್ಣ ಕಡಗೋಲಿನಿಂದ ಒಡೆದ. ಮಡಕೆ ಒಡೆದು, ಮೊಸರು ನೆಲದ ಮೇಲೆ ಹರಿಯಿತು. ಮೇಲೆ ತೇಲಿದ ಬೆಣ್ಣೆಯನ್ನು ಚೆನ್ನಾಗಿ ತಿಂದು ಕೃಷ್ಣ ಹೊರಕ್ಕೆ ಓಡಿದ.

ಯಶೋದೆ ಬಂದು ನೋಡಿದಳು. ಮೊಸರಿನ ಮಡಕೆ ಹೋಳಾಗಿತ್ತು. ಮೊಸರು ನೆಲದ ಮೇಲೆ ಹರಿಯುತ್ತಿತ್ತು. ಬೆಣ್ಣೆ ಸಾಸಿವೆಯಷ್ಟೂ ಇಲ್ಲ! ಕೃಷ್ಣನೂ ಇಲ್ಲ. ಇದೆಲ್ಲಾ ಕೃಷ್ಣನ ಕೆಲಸವೇ ಎಂದು ಅತ್ತಿತ್ತ ಹುಡುಕಿದಳು. ಗೋಪಾಲ ಎಲ್ಲೂ ಇಲ್ಲ! ಹೊರಗೆ ಬಂದು ಪಕ್ಕದ ಮನೆಯವರನ್ನು ಕೇಳಿದಳು. ಎಲ್ಲರೂ ತಮಗೆ ತಿಳಿಯದೆಂದರು. ತಾವು ಅವನನ್ನು ನೊಡಲಿಲ್ಲವೆಂದರು. ಯಶೋದೆಗೆ ಭಯವಾಯಿತು. ಮಡಕೆ ಒಡೆದದ್ದಕ್ಕೆ ಅಮ್ಮನೆಲ್ಲಿ ಹೊಡೆಯುವಳೋ ಎನ್ನುವ ಭಯದಿಂದ, ಮಗು ಈ ಕತ್ತಲೆಯಲ್ಲಿ ಎಲ್ಲಿಗೆ ಹೋಯಿತೋ ಏನೋ ಎಂದು ಅವಳಿಗೆ ಗಾಬರಿಯಾಯಿತು. ಮನೆ ಮನೆಯೆಲ್ಲಾ ಹುಡುಕುತ್ತಾ ಹೋದಳು. ಕೊನೆಗೊಂದು ಮನೆಯಲ್ಲಿ, ಒರಳಿನ ಮೇಲೆ ಹತ್ತಿ ನೆಲುವಿನ ಮೇಲಿದ್ದ ಬೆಣ್ಣೆಯ ಮಡಕೆಯನ್ನು ತೆಗೆಯುತ್ತಿದ್ದ ಗೋಪಾಲನನ್ನು ಕಂಡಳು.

'ಎಲೋ ಕಳ್ಳ! ಎಲ್ಲರ ಮನೆಯಲ್ಲೂ ಇದೇ ಕೆಲಸವೇನು ನಿನ್ನದು? ಗೋಪಿಯರು ಎಷ್ಟು ಹೇಳಿದರೂ ನಾನು ಅವರ ಮಾತನ್ನು ನಂಬದೆ, ಅವರನ್ನೇ ಅಂದು ಕಳಿಸುತ್ತಿದ್ದೆ. ಇವೊತ್ತು ನಾನೇ ಕಣ್ಣಾರೆ ನೋಡಿದೆ. ನನ್ನ ಕಣ್ಣುಗಳನ್ನು ನಾನೇ ನಂಬಲಾರೆ. ಇಷ್ಟು ದಿವಸ ನಾನು ಅದೆಷ್ಟು ತಪ್ಪು ಮಾಡಿದೆ! ಇನ್ನು ನಿನ್ನನ್ನು ಹೊರಕ್ಕೆ ಬಿಡಬಾರದು. ಮಕ್ಕಳಲ್ಲವೇ ಎಂದು ಸುಮ್ಮನೆ ಬಿಟ್ಟರೆ, ಕೊನೆಗೆ ಪ್ರಮಾದಕರವಾದ ಕರ್ಮಗಳಿಗೆ ಕೈ ಹಾಕುತ್ತಾರೆ. ಇನ್ನು ನಿನ್ನನ್ನು ಚೆನ್ನಾಗಿ ಶಿಕ್ಷಿಸಬೇಕಲ್ಲದೆ, ಕ್ಷಮಿಸ ಬಾರದು. ದೊಡ್ಡವರ ಮನೆಯ ಹುಡುಗ ಹೀಗೆ ಕಳ್ಳನಾದ ಎಂದರೆ, ತಂದೆ ತಾಯಿಗಳಿಗೆ ಮಾತ್ರವಲ್ಲದೆ ವಂಶಕ್ಕೇ ಅಪಕೀರ್ತಿ. ನಮ್ಮ ಮನೆತನದ ಘನತೆಗೆ ಕಳಂಕ,' ಎನ್ನುತ್ತಾ ಅವಳು ಎಂದೂ ಇಲ್ಲದ ಕೋಪದಿಂದ ಕೈಯಲ್ಲಿ ಒಂದು ಹಗ್ಗ ಹಿಡಿದು ಒರಳು ಕಲ್ಲಿನತ್ತ ಧಾವಿಸಿದಳು.

ಗೋಪಾಲ ಅವಳ ಕೈಗೆ ಸಿಕ್ಕದೆ, ಅಲ್ಲಿ ತೂರಿ, ಇಲ್ಲಿ ತೂರಿ, ಊರಲ್ಲೆಲ್ಲಾ ತಾಯಿಯನ್ನು ಓಡಾಡಿಸಿದ. ಯಶೋದೆ ಸ್ಥೂಲ ದೇಹದವಳಾದ್ದರಿಂದ, ಎಂದೂ ಅಷ್ಟೊಂದು ಓಡಾಡಿದವಳಲ್ಲವಾದ್ದರಿಂದ ತುಂಬ ಆಯಾಸಗೊಂಡು, ಬುಸು ಗುಟ್ಟುತ್ತಾ ನಿಧಾನವಾಗಿ ನಡೆಯುತ್ತಿದ್ದುದನ್ನು ನೋಡಿ ಹುಡುಗರು, ದೊಡ್ಡವರು,

ಹೆಂಗಸರು ಎಲ್ಲರಿಗೂ ನಗು. ಗೋಪಾಲನ ಈ ತುಂಟತನ ನೋಡಿ ಅವರಿಗೆ ಆನಂದ.

ಜಗದ್ವ್ಯಾಪಕನಾದ ಗೋಪಾಲನಾದ್ದರಿಂದ ತಾಯಿಗಾಯಾಸವಾಗಿರುವುದನ್ನು ಗಮನಿಸಿ, ತಾನಾಗಿ ಅಮ್ಮನ ಕೈಗೆ ಸಿಕ್ಕಿದ. ಯಶೋದೆ ಕುಮಾರನನ್ನು ಹೊಡೆಯಲು ಕೈ ಬರದೆ, ಗಟ್ಟಿಯಾಗಿ, 'ಮನೆಗೆ ಬಾ. ನಿನ್ನ ಆಟ ನಿಲ್ಲಿಸುತ್ತೇನೆ,' ಎನ್ನುತ್ತಾ ಅವನನ್ನು ಮನೆಗೆ ಕರೆದುಕೊಂಡು ಹೋಗಿ, ಒಂದು ದೊಡ್ಡ ಹಗ್ಗ ತೆಗೆದುಕೊಂಡು ಒರಳು ಕಲ್ಲಿಗೆ ಕಟ್ಟಿಹಾಕಲು ಪ್ರಯತ್ನಿಸಿದಳು. ಹಗ್ಗ ಸಾಲದಾಯಿತು. ಒಳಗೆ ಹೋಗಿ ಮತ್ತೊಂದು ಹಗ್ಗ ತಂದು ನೋಡಿದಳು. ಅದೂ ಸಾಲದಾಯಿತು. ಹೀಗೆ ಹಲವು ಬಾರಿ ಬೇರೆ ಬೇರೆ ಎಷ್ಟು ದೊಡ್ಡ ಹಗ್ಗ ತಂದು ಕಟ್ಟಿದರೂ ಇನ್ನೂ ಸ್ವಲ್ಪ ಸಾಲದಾಗುತ್ತಿದ್ದುದನ್ನು ನೋಡಿ, ಇದು ಅವನ ಮಾಯೆಯೆಂದು ತಿಳಿಯದೆ, ಭ್ರಾಂತಿಗೆ ವಶಳಾಗಿ, ಹಗ್ಗಗಳನ್ನು ಸೇರಿಸಿ ಗಂಟು ಹಾಕಿ, ಅಂತೂ ಅವನನ್ನು ಒರಳು ಕಲ್ಲಿಗೆ ಕಟ್ಟಿಹಾಕಿ, ಒಳಗೆ ಹೋಗಿ ತನ್ನ ಮನೆಗೆಲಸದಲ್ಲಿ ನಿರತಳಾದಳು.

ಇಷ್ಟರಲ್ಲಿ, ಕೃಷ್ಣ ಒರಳು ಕಲ್ಲನ್ನು ಉರುಳಿಸಿಕೊಂಡು ಹೋಗಿ, ಹಿತ್ತಲಲ್ಲಿದ್ದ ಒಂದು ದೊಡ್ಡ ಮರದ ನೆಲಮಟ್ಟದ ಎರಡು ಕೊಂಬೆಗಳ ಮಧ್ಯೆ ನುಗ್ಗಿ, ಆ ಕೊಂಬೆಗಳ ಮಧ್ಯೆ ಒರಳು ಕಲ್ಲನ್ನು ಸಿಕ್ಕಿಸಿ ಎಳೆದನೋ ಇಲ್ಲವೋ ಆ ಮರ ಸಿಡಿಲಿನ ಶಬ್ದದಿಂದ ನೆಲಕ್ಕುರುಳಿತು. ಆ ಶಬ್ದ ಕೇಳಿದ ರೇಪಲ್ಲೆವಾಸಿಗಳೆಲ್ಲರೂ ಮಳೆ ಗಾಳಿ ಇಲ್ಲದಿದ್ದರೂ ಯಶೋದೆಯ ಮನೆಯಲ್ಲಿ ಮರ ಬಿದ್ದ ಶಬ್ದ ಕೇಳಿಸಿತೆಂದು ಓಡೋಡಿ ಬಂದರು.

ಈ ಶಬ್ದ ಕೇಳಿ ಯಶೋದೆಯೂ ಧಾವಿಸಿ ಬಂದು ನೋಡಿದಳು. ಅವಳ ಎದೆ ಝಲ್ಲೆಂದಿತು. ಆ ಬಿದ್ದ ಮರದ ಕೊಂಬೆಗಳ ಮಧ್ಯೆ ಪುಟ್ಟ ಗೋಪಾಲ ಇರುವುದನ್ನು ನೋಡಿ ಕಿಟಾರನೆ ಕಿರುಚಿಕೊಂಡಳು. ಓಡಿ ಹೋಗಿ ಕಟ್ಟಿದ್ದ ಹಗ್ಗವನ್ನು ಬಿಚ್ಚಿ, ಮಗುವನ್ನು ಕೊಂಕುಳಲ್ಲಿ ಎತ್ತಿಕೊಂಡಳು. ನನ್ನ ಗೋಪಾಲನಿಗೆ ಒಂದು ದೊಡ್ಡ ಗಂಡಾಂತರ ತಪ್ಪಿತು ಎಂದುಕೊಂಡು, 'ಗೋಪಾಲಾ! ಭಯವಾಯಿತೆ? ಅಯ್ಯೋ! ನಾನೆಂಥ ಕೆಟ್ಟ ಕೆಲಸ ಮಾಡಿಬಿಟ್ಟೆ,' ಎಂದು ಅಳುತ್ತಿರಲು, ಆ ಮರದಿಂದ ಇಬ್ಬರು ದಿವ್ಯ ಪುರುಷರು ಹೊರಬಂದು, ಗೋಪಾಲನಿಗೆ ನಮಸ್ಕರಿಸಿ, 'ಸ್ವಾಮೀ! ನಾವು ನಲಕೂಬರ, ಮಣಿಗ್ರೀವ ಎನ್ನುವ ಹೆಸರಿನ ಕುಬೇರನ ಅವಳಿ ಮಕ್ಕಳು. ನಾರದರ ಶಾಪದಿಂದ ನಾವಿಬ್ಬರೂ ಈ ವೃಕ್ಷರೂಪದಲ್ಲಿದ್ದೆವು. ಇಂದು ನಮ್ಮ ಶಾಪ ವಿಮೋಚನೆಯಾಯಿತು,' ಎಂದರು. ವಿಚಿತ್ರ ರೂಪಧಾರಿಗಳನ್ನು ನೋಡಿ ಗೋಕುಲ ವಾಸಿಗಳು ದಿಗ್ಭ್ರಾಂತರಾಗಿ ಆಶ್ಚರ್ಯಾನಂದ ಹೊಂದಿದರು.

ಗೋಪಾಲನ ದೈವತ್ವವನ್ನು ಆ ದಿವ್ಯ ಪುರುಷರ ಮೂಲಕ ತಿಳಿದೂ ಗೋಕುಲ ವಾಸಿಗಳು, ಬೂದಿ ಆವರಿಸಿದ ಕೆಂಡದಂತೆ, ಮಾಯೆಗೆ ವಶರಾಗಿ, ಮತ್ತೆ ಗೋಪಾಲ ನಮ್ಮ ನಂದ ಯಶೋದೆಯ ಮಗ, ನಮ್ಮ ಗೊಲ್ಲ ಬಾಲಕ, ನಮ್ಮ ಮಿತ್ರ ಎಂದು ಭ್ರಾಂತಿಯಿಂದ ವರ್ತಿಸಲಾರಂಭಿಸಿದರು," ಎಂದು ಶುಕ ನುಡಿದದ್ದನ್ನು ಕೇಳಿ, ಪರೀಕ್ಷಿತ್, "ಸ್ವಾಮೀ! ಮಾಯೆಗೆ ಅಂಥ ಶಕ್ತಿ ಎಲ್ಲಿಂದ ಬಂತು? ಮಾಧವನನ್ನೇ ಮರೆಸುವಂಥ ಗುಣವನ್ನು ಮಾಯೆಗೆ ಯಾರು ಕೊಟ್ಟರು? ಅದರ ಸ್ವರೂಪ ವೇನು?" ಎಂದು ಪ್ರಾರ್ಥಿಸಿದ.

ಶುಕ ಮಹರ್ಷಿ, "ರಾಜಾ! ಮಾಯೆಗೆ ಒಂದು ರೂಪ ಎನ್ನುವುದಿಲ್ಲ. ಭಗವಂತ ಮಾಯೋಪಾಧಿ, ಮಾಯೆಯನ್ನೇ ಉಪಾಧಿಯಾಗಿ ಧರಿಸಿದವನು. ಅಂದರೆ, ಭಗವಂತನನ್ನು ಮರೆಮಾಡುವುದೇ ಮಾಯೆ ಎನ್ನುವುದು ಇದರ ಅಂತರಾರ್ಥ. ಅದರ ಗುಣವೇ ಅಂಥದ್ದು. ಅದನ್ನು ಯಾರು ತೆಗೆದೊಗೆಯುವರೋ ತೊಲಗಿ ಸುವರೋ ಕಿತ್ತು ಬಿಸಾಡುವರೋ ಭೇದಿಸುವರೋ ಅಂಥವರೇ ದೈವವನ್ನು ದರ್ಶಿಸುವರು, ದೈವವನ್ನು ಪಡೆಯುವರು. ಹಾಗಲ್ಲದೆ, ಅದಕ್ಕೆ ಅಸ್ತಿತ್ವ ಇದೆಯೆಂದು ಭ್ರಮಿಸುವುದೇ ಮಾಯೆ. ಮರೀಚಿಕೆಯನ್ನು ನೋಡಿ ನೀರೆಂದು ಭ್ರಮಿಸಿದ ಹಾಗೆ, ಅಂಥವರು ಕಾಲ್ಪನಿಕವಾದುದನ್ನು ಪ್ರತ್ಯಕ್ಷವೆಂದು ಭ್ರಮಿಸುವರು. ನಿಜಕ್ಕೂ ಕಲ್ಪ ನೆಯೇ ಇಲ್ಲದಿದ್ದರೆ ಇನ್ನು ಪ್ರತ್ಯಕ್ಷವೆಂದುಕೊಳ್ಳುವ ಭ್ರಾಂತಿಗೆ ಅವಕಾಶವಾದರೂ ಎಲ್ಲಿ ಬರಬೇಕು?

ಇಲ್ಲದಿದ್ದರೆ, ಯಶೋದೆ ಎಷ್ಟೋ ಸಾರಿ ಗೋಪಾಲನ ದಿವ್ಯ ಶಕ್ತಿಗಳನ್ನು ಕಣ್ಣಾರೆ ಕಂಡು ದಿಗ್ಭ್ರಾಂತಳಾಗಿದ್ದರೂ ತಿರುಗಿ ಅವನೊಬ್ಬ ಬಾಲಕನೆನ್ನುವ ಭಾವನೆಗೆ ಅವಕಾಶ ಮಾಡಿಕೊಂಡರೆ, ಅದಕ್ಕೆ 'ನನ್ನ ಮಗ' ಎನ್ನುವ ಕಲ್ಪನೆಯೇ ಮೂಲ ಕಾರಣ. ದೇಹವು ಮಾತೃದೇಹಕ್ಕೆ ಮಗನಾಗಬಹುದೇ ವಿನಾ ದೇಹಿಗೆ ದೇಹಿಯು ಯಾವ ಸಂಬಂಧಿಯೂ ಅಲ್ಲ. ಏಕಸ್ವರೂಪಿಯೇ. ಈ ಸತ್ಯವನ್ನು ವಿಚಾರ ಮಾಡಿ ತಿಳಿದುಕೊಂಡರೆ, ವಿಷಯಗಳ ಮೇಲೆ ಭ್ರಾಂತಿ ಏಕಿರುತ್ತೆ. ವಿಚಾರ ಮಾಡದೆ, ವಿಷಯಗಳನ್ನು ತಿಳಿದುಕೊಳ್ಳದಿರುವುದರಿಂದಲೇ ಭ್ರಾಂತಿ ಬೆಳೆದು, ಮತ್ತಷ್ಟು ಬೆಳೆದು, ಮಾನವನ ಬುದ್ಧಿಯನ್ನು ಕುಂಠಿತಗೊಳಿಸುತ್ತೆ," ಎನ್ನಲು, ಪರೀಕ್ಷಿತ್ ಮಹಾರಾಜ, "ಆಹಾ! ದೈವೋಪಾಧಿ ಎಂಥ ಕೆಲಸ ಮಾಡುತ್ತದೆ! ಉಪಾಧಿಯ ಭ್ರಾಂತಿ ಬಿಟ್ಟು ಉಪಾಸನೆ ಮಾಡೆಂದು ಬೋಧಿಸಿದ ವೇದಾಂತ ತತ್ವಗಳ ಅಂತರಾರ್ಥ ಇದೇ ಅಲ್ಲವೇ? ಉಪಾಧಿ ಭ್ರಾಂತಿ ಎಂದರೆ ಮಾಯಾ ಮೋಹವೇ. ಉಪಾಧಿ ಅಥವಾ ದೇಹ ಭ್ರಾಂತಿಯುಳ್ಳವರು ಮಾಯಾಮೋಹಿತರು

ಎನ್ನುವುದು ವಿದಿತ. ದೇಹವನ್ನೇ ಲಕ್ಷ್ಯದಲ್ಲಿಟ್ಟುಕೊಂಡವರಿಗೆ ದೇಹಿ ಕಾಣುವುದಿಲ್ಲ ಅಲ್ಲವೆ?

ಬೂದಿ ಮುಚ್ಚಿಕೊಂಡಿದ್ದರೆ ಬೆಂಕಿ ಕಾಣಿಸದಿರುವಂತೆ, ಕಣ್ಣುಗಳಿಗೆ ಪೊರೆ ಬಂದರೆ ದೃಷ್ಟಿ ಹೋಗುವಂತೆ, ದೇಹ ಭ್ರಾಂತಿ ಎನ್ನುವ ಮಾಯೆ ಆವರಿಸಿದಾಗ ದೇಹಿ ಕಾಣಿಸುವುದಿಲ್ಲವೆನ್ನುವುದರಲ್ಲಿ ಎಷ್ಟು ಮಾತ್ರಕ್ಕೂ ಸಂಶಯವಿಲ್ಲ. ಸ್ವಾಮೀ! ಈ ದಿನ ನಿಜವಾಗಿಯೂ ನನ್ನ ದೃಷ್ಟಿಗಿದ್ದ ಪೊರೆ ಹೋಯಿತು. ತಮ್ಮ ಬೋಧಾಮೃತ ಎನ್ನುವ ಗಾಳಿಯಿಂದ ನನ್ನನ್ನು ಆವರಿಸಿದ್ದ ಬೂದಿ ಹಾರಿತು. ಈ ಪಾಂಚಭೌತಿಕವಾದ ದೇಹದ ಭ್ರಾಂತಿ ನುಚ್ಚುನೂರಾಯಿತು. ನಾನು ಧನ್ಯ, ಧನ್ಯ," ಎಂದು ಶುಕನ ಪಾದಗಳ ಮೇಲೆ ಬಿದ್ದು ನಮಸ್ಕರಿಸಿದ.

ಆಗ, ಅಲ್ಲಿ ಸೇರಿದ್ದ ಋಷಿಗಳಲ್ಲಿ, ಜನರಲ್ಲಿ ಗುಸು ಗುಸು ಪ್ರಾರಂಭವಾಯಿತು. "ಕಾಲ ಸಮೀಪಿಸಿದಾಗ ಕಾಯವನ್ನು ಎಷ್ಟಾದರೂ ಬಿಡಲೇ ಬೇಕಲ್ಲವೇ? ಪ್ರಾಣ ವಾಯು ಕಾಯವನ್ನು ಬಿಡುವುದೇ ವಿನಾ ಮನಸ್ಸು ಬಿಡುವುದಿಲ್ಲ. ಆದ್ದರಿಂದಲೇ ಅಂತ್ಯಕಾಲದಲ್ಲಿ ಮನೋಭಾವ ಮಾಯಾಮಯವಾಗುವುದರಿಂದಲೇ ಮರುಜನ್ಮ ಪಡೆಯುತ್ತಿರುವರು ಸಾಮಾನ್ಯ ಮಾನವರು. ಈ ದಿನ ನಮ್ಮ ಮಹಾರಾಜ ಮನಸ್ಸನ್ನು ಕಾಯದಿಂದ ಬೇರ್ಪಡಿಸಿದ. ಇನ್ನು ಪ್ರಾಣವಿದ್ದರೂ ಪ್ರಯೋಜನವಿಲ್ಲ. ಮನಸ್ಸನ್ನು ಸದಾ ಮಾಧವನಲ್ಲಿ ಲೀನಗೊಳಿಸಿದ್ದರೆ ಮಾನವತ್ವದ ಗುರುತೇ ಸಿಕ್ಕುವು ದಿಲ್ಲ. ಈ ದಿನ ಶುಕ ಮಹರ್ಷಿ ಹೇಳಿದ ಸುಬೋಧೆ ಒಬ್ಬ ಪರೀಕ್ಷಿತನಿಗೆ ಮಾತ್ರವೇ ಅಲ್ಲ. ದೇಹಭ್ರಾಂತಿಯುಳ್ಳ ಪ್ರತಿ ಮಾನವರಿಗೂ ಅನ್ವಯಿಸುವುದು.

ದೇಹಭ್ರಾಂತಿಯು ಬಂಧಕಾರಣ, ಆತ್ಮಭ್ರಾಂತಿಯೆ ಮೋಕ್ಷಕಾರಣ ಎಂದು ವೇದ ಶಾಸ್ತ್ರಗಳು ಹೇಳುವಂತೆ, ಮನಸ್ಸೇ ಈ ಎರಡಕ್ಕೂ ಮೂಲ ಕಾರಣವೆಂದು ಸ್ಪಷ್ಟವಾಗುವುದು. ಮನಯೇವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ' ಎನ್ನುವ ಶ್ರುತಿವಾಕ್ಯ ಸತ್ಯ," ಎಂದು ಎಲ್ಲರೂ ಕಣ್ಣುಗಳನ್ನು ಮುಚ್ಚಿಕೊಂಡು ಸ್ವಲ್ಪ ಹೊತ್ತು ದೇವರ ಧ್ಯಾನ ಮಾಡಿದರು. ಸೂರ್ಯಾಸ್ತ ಸಮಯವಾದುದರಿಂದ, ಕೆಲವರು ದಂಡ ಕಮಂಡಲಗಳನ್ನು ಹಿಡಿದು ಸಂಧ್ಯಾವಂದನೆಗಾಗಿ ಗಂಗಾತೀರಕ್ಕೆ ಹೋದರು.

# ೪೦ ಕೃಷ್ಣಾವತರಣ ಸಂದೇಶ

ಹೀಗೆ ಮನೋಲಯ ಸಾಧಿಸಿಕೊಂಡ ಪರೀಕ್ಷಿತ್ ಮಹಾರಾಜ, ಮಾಧವನ ಜನ್ಮ ವೃತ್ತಾಂತವನ್ನು ಕೇಳಬಯಸಿ, ಕೈ ಜೋಡಿಸಿಕೊಂಡು, "ಸ್ವಾಮೀ! ಕಾಯಕ್ಕೆ ಕಾಲ ಸನ್ನಿಹಿತವಾಗುತ್ತಿದೆ. ಮಹಾ ಋಷಿಯ ಶಾಪ ನೆರವೇರುವ ಸಮಯ ಹತ್ತಿರವಾಗುತ್ತಿದೆ. ಅದಕ್ಕೆ ನಾನೂ ಸಂತೋಷದಿಂದ ಸಂಸಿದ್ಧನಾಗಿದ್ದೇನೆ. ಆದರೆ, ಕಾಯದಲ್ಲಿ ಜೀವ ಇರುವವರೆಗೆಗೂ ಸತ್ ಚಿಂತನೆ, ಸತ್ ಸ್ಮರಣೆ, ಸತ್ ಶ್ರವಣ ಮಾಡಬೇಕೆನ್ನುವ ದೀಕ್ಷಾಬದ್ಧನಾಗಿ ಇರುವುದರಿಂದ, ದೀಕ್ಷೆಗೆ ಯಾವ ಬಗೆಯ ಭಂಗವೂ ಉಂಟಾಗದಿರುವಂತೆ, ಈ ಮಿಕ್ಕ ಸಮಯದಲ್ಲೂ ಕೂಡ ಆ ನಂದ ನಂದನನ ಸುಂದರ ವದನಾರವಿಂದ ನನ್ನ ಹೃದಯದಲ್ಲಿ ಅಚ್ಚಳಿಯದೆ ಉಳಿಯಲಿ, ಅವನ ಲೀಲಾ ರೂಪ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿರಲಿ ಎಂದು ಆಶಿಸುತ್ತಿದ್ದೇನೆ. ಗೋಪಾಲನ ಜನ್ಮ ಶುಭ ಸಮಯ ಎಂಥದೋ ಜನ್ಮ ಕಾಲದಲ್ಲಿ ಎಂಥ ಚಿತ್ರ ವಿಚಿತ್ರ ಶುಭಗಳು ಲೋಕದಲ್ಲಿ ಕಾಣಿಸಿದುವೋ ಕಂಸನಿಗೆ ಆ ಬಾಲಕನನ್ನು ಕೊಲ್ಲಬೇಕು ಎನ್ನುವ ಕ್ರೋಧ ಏತಕ್ಕೋಸ್ಕರ ದಿನ ದಿನಕ್ಕೂ ಅಭಿವೃದ್ಧಿಯಾಯಿತೋ ಆ ಕಂಸನ ಮತ್ತು ಆ ಗೋಪಾಲನ ಜನ್ಮ ವೃತ್ತಾಂತಗಳನ್ನು ನನ್ನ ಅಂತ್ಯಕಾಲದಲ್ಲಿ ಕೇಳುವಂತೆ ಮಾಡಿ, ನನ್ನ ಪ್ರಾಣವೂ ಸಹ ಗೋಪಾಲನಲ್ಲಿ ಸೇರಿ ಹೋಗುವಂತೆ ಮಾಡಿ," ಎಂದು ಪ್ರಾರ್ಥಿಸಿದ.

ಶುಕ ಇದನ್ನು ಕೇಳಿ ಮತ್ತಷ್ಟು ಆನಂದಿತನಾಗಿ, "ಮಹಾರಾಜಾ! ನೀನು ಈ ಮಿಕ್ಕ ಸ್ವಲ್ಪ ಸಮಯವನ್ನೂ ಗೋಪಾಲನ ಲೀಲಾ ಶ್ರವಣದಿಂದ ಕಳೆಯುವುದೇ ನನಗೂ ಅತ್ಯಂತ ಆನಂದದಾಯಕವಾದುದು. ಗೋಪಾಲನ ಜನ್ಮ ಧರ್ಮ ಸ್ಥಾಪನೆಯ ನಿಮಿತ್ತವಾಗಿ ಆದದ್ದು. ಅದೊಂದು ಮಹಾ ಮರ್ಮ. ಕರ್ಮ ಪರಿಪಕ್ವವಾದವರಿಗೇ ಆ ಜನ್ಮ ರಹಸ್ಯ ಗ್ರಾಹ್ಯವಾಗುವುದು. ಅದಿಲ್ಲದವರಿಗೆ ಲೋಕವೇ ಒಂದು ಪಾಪ ಕೂಪ, ಅದರಲ್ಲೇ ಮುಳುಗಿ, ಅದರಲ್ಲೇ ತೇಲಿ, ಅದರಲ್ಲೇ ಲಯವಾಗುವರು. ಅಂಥವರ ಚಿಂತೆ ನಮಗೆ ಬೇಕಾಗಿಲ್ಲ. ಉದ್ಧಾರವಾಗಬೇಕು ಎನ್ನುವವರಿಗೆ ತಕ್ಕ ವರಪ್ರಸಾದ ಕೊಡೋಣ.

ಮಹಾರಾಜಾ! ಪೂರ್ವದಲ್ಲಿ ಯದುವಂಶದ ಅಹುಕ ಎನ್ನುವ ರಾಜನು ಲೋಕ ವನ್ನು ಪಾಲಿಸುತ್ತಿದ್ದ. ಅನೇಕ ಸಾಮಂತ ರಾಜರು ಅವನಿಗೆ ಶರಣಾಗಿ, ಅವನನ್ನು ಅನುಸರಿಸುತ್ತಾ ಅವನ ಆಜ್ಞೆಗೆ ಕಾಯುತ್ತಾ ಅವನ ಪರಿಪಾಲನೆಯಲ್ಲಿ ಕಾಲ ಕಳೆಯುತ್ತಿದ್ದರು. ಅವನಿಗೆ ದೇವಕ, ಉಗ್ರಸೇನ ಎನ್ನುವ ಇಬ್ಬರು ಮಕ್ಕಳಿದ್ದರು.

ಅವರು ಬೆಳೆದು ದೊಡ್ಡವರಾಗಿ ರಾಜ್ಯಾಧಿಪತ್ಯ ನೋಡಿಕೊಳ್ಳುವ ವಯಸ್ಕರಾದ ಮೇಲೆ, ಅವರಿಗೆ ಲಗ್ನ ಮಾಡಿ ತಕ್ಕ ಜವಾಬ್ದಾರಿಯನ್ನು ರಾಜ ಅವರ ತಲೆಯ ಮೇಲೆ ಹೊರಿಸಿದ. ಅವರು ರಾಜ್ಯ ಪರಿಪಾಲನೆ ಮಾಡುತ್ತಾ ಎಷ್ಟೋ ಕಾಲ ಕಳೆದರು. ದೇವಕನಿಗೆ ಏಳು ಜನ ಹೆಣ್ಣು ಮಕ್ಕಳೂ ಉಗ್ರಸೇನನಿಗೆ ಒಂಬತ್ತು ಜನ ಗಂಡು ಮಕ್ಕಳೂ ಹುಟ್ಟಿದರು. ದೇವಕನ ಹಿರಿಯ ಮಗಳೇ ದೇವಕಿ. ಉಗ್ರಸೇನನ ಹಿರಿಯ ಮಗನೇ ಕಂಸ. ಈ ಇಬ್ಬರೂ ನಮ್ಮ ಕಥೆಗೆ ಪ್ರಧಾನವಾದವರು. ಪೂರ್ವದಲ್ಲಿ ಯಾದವ ರಾಜರೆಲ್ಲರಿಗೂ ಮಥುರಾ ಪಟ್ಟಣವೇ ರಾಜಧಾನಿಯಾಗಿತ್ತು.

ಶೂರಸೇನ ದೇಶವನ್ನು ಪಾಲಿಸುತ್ತಿದ್ದ ದೇವಖದು ಎನ್ನುವ ರಾಜ ಕೂಡ ಮಥುರಾ ಪುರವನ್ನೇ ತನ್ನ ನಿವಾಸ ಸ್ಥಾನವನ್ನಾಗಿ ಮಾಡಿಕೊಂಡಿದ್ದ. ಅವನಿಗೆ ಹತ್ತು ಜನ ಗಂಡು ಮಕ್ಕಳೂ ಐದು ಜನ ಹೆಣ್ಣು ಮಕ್ಕಳೂ ಇದ್ದರು. ಅವರಲ್ಲಿ ಹಿರಿಯ ಮಗನೇ ವಸುದೇವ. ಹಿರಿಯ ಮಗಳೇ ಕುಂತಿ. ಹೀಗೆ ಅವರ ಕುಟುಂಬ ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಗಂಡು ಮಕ್ಕಳೂ ಹೆಣ್ಣು ಮಕ್ಕಳೂ ಬೆಳೆದು ದೊಡ್ಡವರಾಗುತ್ತಿದ್ದರು.

ಕಾಲವು ತೀವ್ರಗತಿಯಲ್ಲಿ ಸುತ್ತಿಕೊಂಡು ಬಂದು ಕಾರ್ಯವನ್ನೂ ಕಾರಣವನ್ನೂ ಒಂದೆಡೆ ಕಟ್ಟಿಹಾಕಿತ್ತು. ಕಂಸನ ಚಿಕ್ಕಪ್ಪನಾದ ದೇವಕನ ಮಗಳು ದೇವಕಿಯನ್ನು, ಶೂರಸೇನ ರಾಜನ ಮಗನಾದ ವಸುದೇವನಿಗೆ ಕೊಟ್ಟು ಮದುವೆ ಮಾಡಲು ಸರ್ವ ಸಿದ್ಧತೆಗಳನ್ನೂ ಮಾಡಿದರು. ಅತ್ಯಂತ ವೈಭವದಿಂದ ವಿವಾಹ ನೆರವೇರಿಸಿದರು. ರಾಜರು, ಸಾಮಂತರು, ಸರ್ವಾಧಿಕಾರಿಗಳು, ಪಂಡಿತೋತ್ತಮರು ಮದುವೆಗೆ ಕಿಕ್ಕಿರಿದು ನೆರೆದಿದ್ದರು. ಎಲ್ಲದರಲ್ಲೂ ಕಂಸ ಅತ್ಯಂತ ಶ್ರದ್ಧೆ ವಹಿಸಿ, ತನಗೆ ಸ್ವಂತ ಅಕ್ಕ ತಂಗಿಯರು ಇಲ್ಲದ್ದರಿಂದ ಚಿಕ್ಕಪ್ಪನ ಮಗಳಾದ ದೇವಕಿಯನ್ನೇ ತನ್ನ ಸ್ವಂತ ಸೋದರಿಯಂತೆ ಭಾವಿಸಿ, ಅವಳಿಗೆ ಬೇಕಾದ ಸರ್ವ ಸಾಮಗ್ರಿಗಳನ್ನೂ ಸಮಸ್ತ ಆಭರಣಗಳನ್ನೂ ತಾನೇ ಕೊಟ್ಟು, ಕಣ್ಣುಗಳಿಗೆ ಹಬ್ಬವಾಗುವಂತೆ ಮದುವೆ ಮಾಡಿದ.

ಮೂರನೆಯ ದಿನ ಮಡಿಲು ತುಂಬಿ ಅತ್ತೆಯ ಮನೆಗೆ ಕಳಿಸುವಾಗ ತಾನೇ ರಥದ ಸಾರಥಿಯಾಗಿ, ತಂಗಿಯನ್ನೂ ಭಾವನನ್ನೂ ರಥದಲ್ಲಿ ಕುಳ್ಳಿರಿಸಿಕೊಂಡು ಪುರದ ಬೀದಿಗಳಲ್ಲಿ ಮಹಾ ವೈಭವದಿಂದ ಹೋಗುತ್ತಿರುವಾಗ, ಆಕಾಶದಲ್ಲಿ ಮಿಂಚಿನಂಥ ಕಣ್ಣು ಕೋರೈಸುವ ಪ್ರಕಾಶವೊಂದು ಕಾಣಿಸಿತು. ಜೊತೆಗೆ ಅದರಿಂದ ಒಂದು ದೊಡ್ಡ ಪ್ರಳಯರೂಪದ ಶಬ್ದ ಕೇಳಿಸಿತು. ಈ ಪ್ರಕಾಶವನ್ನೂ ಪ್ರಳಯ ಶಬ್ದವನ್ನೂ ನೋಡಿದ, ಕೇಳಿದ, ಪ್ರಜೆಗಳೂ ರಾಜರೂ ಎಲ್ಲಿದ್ದವರು ಅಲ್ಲೇ ಸ್ತಂಭೀಭೂತರಾದರು. ವಾದ್ಯಗಳೆಲ್ಲ ನಿಂತು ಹೋದವು. ಪುರ ಬೀದಿಗಳೆಲ್ಲಾ

ನಿಶ್ಶಬ್ದವಾಗಿದ್ದ ಆ ಸಮಯದಲ್ಲಿ ಆಕಾಶದಿಂದ, 'ಏ ಕಂಸ ಭೂಪಾಲಾ! ಮುಂದಿನ ಸಂಗತಿ ತಿಳಿಯದೆ ಮೂರ್ಖನಾದೆ. ಯಾವ ತಂಗಿಯನ್ನು ಪ್ರಾಣ ಸಮಾನವಾಗಿ ಪ್ರೇಮಿಸಿ, ರಥದಲ್ಲಿ ಕೂರಿಸಿಕೊಂಡು ಅತ್ಯಂತ ವೈಭವದಿಂದ ರಥವನ್ನು ಓಡಿಸಿ ಕೊಂಡು ಹೋಗುತ್ತಿದ್ದೀಯೋ ಆ ತಂಗಿಯ ಅಷ್ಟಮ ಗರ್ಭದಲ್ಲಿ ನಿನ್ನನ್ನು ಕೊಲ್ಲುವವನು ಹುಟ್ಟುವನು. ಮುಂದಿನ ಸಂಗತಿ ಯೋಚಿಸು,' ಎಂದು ಸ್ಪಷ್ಟವಾದ ಮಾತುಗಳು ಕೇಳಿಸಿತು. ನಂತರ ಪ್ರಕಾಶಮಾನವಾದ ಒಂದು ದಿವ್ಯರೂಪ ಕಾಣಿಸಿ ಕೊಂಡು ಅಂತರ್ಧಾನವಾಯಿತು.

ಆ ಮಾತನ್ನು ಕೇಳಿದ ರಾಜರೂ ಪ್ರಜೆಗಳೂ ಭಯಭ್ರಾಂತರಾದರು. ಉಲ್ಲಾಸ ವೈಭವಗಳೆಲ್ಲಾ ಒಮ್ಮೆಲೇ ಮಾಯವಾದುವು. ರಥದಲ್ಲಿದ್ದ ಕಂಸನಿಗೆ ಹೊಟ್ಟೆಯಲ್ಲಿ ಬೆಂಕಿ ಇಟ್ಟಂತಾಯಿತು. ತತ್ತರಿಸುತ್ತಾ ದಿಕ್ ಭ್ರಾಂತನಾಗಿ ಕೈಯಲ್ಲಿದ್ದ ಕುದುರೆಗಳ ಲಗಾಮನ್ನು ಕೆಳಗೆ ಹಾಕಿದ. ಹೃದಯದಲ್ಲಿ ರೌದ್ರ ಉಕ್ಕಿತು. ಆಲೋಚನೆಗಳು ಅತಿ ವೇಗದಿಂದ ವಿಕಾರ ಸ್ವರೂಪ ತಾಳಿದವು. ಕಡೆಗೊಂದು ನಿರ್ಣಯಕ್ಕೆ ಬಂದು, ತಂಗಿ ಇದ್ದರಲ್ಲವೇ ಆಕೆಯ ಗರ್ಭದಲ್ಲಿ ನನ್ನನ್ನು ಕೊಲ್ಲುವವನು ಹುಟ್ಟುವುದು? ಅವಳನ್ನೇ ಇಲ್ಲದಂತೆ ಮಾಡಿದರೆ ಆ ಹಂತಕ ಹುಟ್ಟುವುದೇ ಇಲ್ಲ, ಅಲ್ಲವೆ? ಎಂದುಕೊಂಡು ಹಿಂದೆ ಕುಳಿತಿದ್ದ ತಂಗಿಯ ಕುರುಳು ಹಿಡಿದು ಮುಂದಕ್ಕೆಳೆದು ಖಡ್ಗವನ್ನು ಕೈಗೆತ್ತಿಕೊಂಡ. ಆ ಘೋರ ದೃಶ್ಯವನ್ನು ನೋಡುವುದಕ್ಕೆ ಎಂಥವರಿಗೂ ಮನಸ್ಸೊಪ್ಪಲಿಲ್ಲ. ಪ್ರಾಣ ಸಮಾನವಾಗಿ ಪ್ರೇಮಿಸಿ, ಎಲ್ಲ ವೈಭವಗಳನ್ನೂ ತಾನೇ ಕೈಯಾರ ಮಾಡಿ, ಕೊನೆಗೆ ತನ್ನ ಕೈಯಿಂದಲೇ ಕೊಲ್ಲುವುದು, ವಿಪರ್ಯಾಸವಾಗಿಯೂ ವಿಚಿತ್ರವಾಗಿಯೂ ಘೋರವಾಗಿಯೂ ಕಂಡಿತು. ಆದರೆ ಯಾರೂ ಏನೂ ಮಾಡದಾದರು.

ಇಷ್ಟರಲ್ಲಿ ದೇವಕೀನಾಥನಾದ ವಸುದೇವ ಭಾವನ ಕೈ ಹಿಡಿದು, 'ಭಾವಾ! ಅಶರೀರ ವಾಣಿ ಆಡಿದ ಮಾತುಗಳನ್ನು ನಾನೂ ಕೂಡ ಕೇಳಿದೆನಲ್ಲವೆ? ನಿನ್ನ ಕೇಡು ನಮಗಾದರೂ ಇಷ್ಟವಾದೀತೆ? ನಿರಂತರವೂ ನಿನ್ನ ಕ್ಷೇಮವನ್ನೇ ಆಶಿಸುವ ನಾವು ನಿನಗೆಂದಿಗೂ ಕೇಡನ್ನು ಕೋರೆವು. ಈ ಮಂಗಳ ಸಮಯದಲ್ಲಿ ಅಮಂಗಳ ಕೃತ್ಯ ಮಾಡುವುದು ನಿನ್ನಂಥ ಸೋದರನಿಗೆ ನ್ಯಾಯವಲ್ಲ. ನಿನ್ನ ತಂಗಿಯನ್ನು ಬಿಡು. ಅವಳಿಂದ ಹುಟ್ಟುವ ಮಕ್ಕಳಿಂದ ನಿನಗೆ ಅಂಥ ಪ್ರಮಾದ ಸಂಭವಿಸುವುದೆಂದು ಅಶರೀರವಾಣಿಯು ಹೇಳಿದ ಮಾತಿನಲ್ಲಿ ನಿನಗಷ್ಟು ವಿಶ್ವಾಸವಿದ್ದರೆ, ಹುಟ್ಟಿದ ಪ್ರತಿ ಒಂದು ಮಗುವನ್ನೂ ನಿನಗೊಪ್ಪಿಸುವೆನು. ಇದು ನನ್ನ ಪ್ರಮಾಣ. ಈ ವಚನಕೊಟ್ಟ ಮೇಲೂ ನೀನು ಅವಳ ಪ್ರಾಣ ತೆಗೆಯುವುದು ನಿನಗೂ ರಾಜ್ಯಕ್ಕೂ ಕ್ಷೇಮವಲ್ಲ,' ಎಂದು ಪ್ರಾರ್ಥಿಸಿದ.

ಅವನು ಹೇಳಿದ್ದು ಕಂಸನಿಗೆ ಸತ್ಯವೆನಿಸಿ, ತೃಪ್ತಿಹೊಂದಿ, ದೇವಕಿಯನ್ನು ಬಿಟ್ಟು, 'ಭಾವಾ! ನಿನ್ನ ವಾಗ್ದಾನದಂತೆ ನಡೆಯುವುದನ್ನು ಮರೆತೀಯೆ,' ಎಂದು ಹೇಳಿ, ರಥ ನಡೆಸಲು ತನ್ನ ಸೋದರನನ್ನು ನೇಮಿಸಿ, ತಾನು ಅರಮನೆಗೆ ಹಿಂತಿರುಗಿದ. ಹಿಂತಿರುಗಿ ಹೋದನೇನೋ ನಿಜ. ಆದರೆ, ಒಂದು ಕಡೆ ತನ್ನ ಪ್ರಾಣದ ಆಸೆ, ಇನ್ನೊಂದು ಕಡೆ ತನ್ನ ಸೋದರಿಯ ಮೇಲಿನ ಪ್ರೇಮ. ಯಾವುದನ್ನೂ ಬಿಡಲು ಸಾಧ್ಯವಿಲ್ಲದೆ, ಹಂಸತೂಲಿಕಾ ತಲ್ಪದ ಮೇಲೆ ಮಲಗಿದ್ದನಾದರೂ ಬೆಂಕಿಯಲ್ಲಿ ಬೇಯುವವನಂತಿತ್ತು ಅವನ ಸ್ಥಿತಿ. ಆಹಾರ ನಿದ್ರೆಗಳು ದಿನದಿನಕ್ಕೆ ಕಡಿಮೆಯಾ ಗುತ್ತಾ ಬಂತು. ನಿರಂತರವೂ ಸಾವಿನ ಚಿಂತೆಯಲ್ಲಿ ಮುಳುಗಿಹೋದ. ಹೀಗೆ ಒಂದು ಸಂವತ್ಸರ ಕಳೆಯಿತು. ಭಾವ ಮೈದುನರ ನಡುವೆ ಉತ್ತರ ಪ್ರತ್ಯುತ್ತರಗಳು ನಡೆಯುತ್ತಲೇ ಇದ್ದುವು. ಕಡೆಗೆ, ದೇವಕಿಗೆ ನವಮಾಸಗಳು ತುಂಬಿ, ಗಂಡು ಶಿಶು ಹಡೆದಳು. ಕಂಸನಿಗೆ ಮಾತು ಕೊಟ್ಟಿದ್ದರಿಂದಲ್ಲವೇ ನಿನ್ನ ಪ್ರಾಣವನ್ನು ನಾನು ಉಳಿಸಿಕೊಂಡದ್ದು, ಎಂದು ದೇವಕೀ ದೇವಿಗೆ ಹೇಳಿ, ವಸುದೇವ ಆ ಹಸುಗೂಸನ್ನು ಬೆಚ್ಚನೆಯ ಬಟ್ಟೆಯಲ್ಲಿ ಸುತ್ತಿಕೊಂಡು ಹೋಗಿ, ಕೊಟ್ಟ ಮಾತಿನ ಪ್ರಕಾರ ಕಂಸನಿಗೆ ಒಪ್ಪಿಸಿದ. ಕಂಸ ಆ ಹಸುಗೂಸನ್ನು ಕೊಲ್ಲಲು ಮನಸ್ಸಾಗದೆ ಮಾತಿನಂತೆ ವಸುದೇವ ನಡೆದಿದ್ದಾನೆಂದು ಅವನ ಸತ್ಯವ್ರತಕ್ಕೆ ಸಂತೋಷಪಟ್ಟು, 'ಭಾವಾ! ಈ ಶಿಶುವಿನಿಂದ ನನಗೆ ಯಾವ ಕೇಡೂ ಇಲ್ಲ. ಅಶರೀರವಾಣಿ ಅಷ್ಟಮ ಗರ್ಭವೆಂದು ಹೇಳಿದೆಯಾದ್ದರಿಂದ ಈ ಶಿಶುವನ್ನು ನೀನೇ ತೆಗೆದುಕೊಂಡು ಹೋಗು,' ಎಂದು ಆ ಶಿಶುವನ್ನು ಅವನಿಗೇ ಕೊಟ್ಟು ಕಳುಹಿಸಿದ.

ವಸುದೇವ ಸಂತೋಷಗೊಂಡು ತಿರುಗಿ ಆ ಶಿಶುವನ್ನು ದೇವಕಿಗೆ ಒಪ್ಪಿಸಲು, ಏನೇ ಆಗಲಿ, ಚೊಚ್ಚಲು ಮಗವನ್ನು ಅಂತೂ ಇಂತೂ ದಕ್ಕಿಸಿಕೊಂಡೆನಲ್ಲಾ ಎಂದು ಅವಳು ದೈವವನ್ನು ಅನೇಕ ಬಗೆಯಾಗಿ ಕೊಂಡಾಡುತ್ತಾ ಹೇಳಲಾರದಷ್ಟು ಆನಂದ ಅನುಭವಿಸುತ್ತಿದ್ದಳು. ಹೀಗಿರುವಲ್ಲಿ, ಎರಡನೆ ಗರ್ಭ ಪ್ರಾರಂಭವಾಯಿತು. ಆ ದಂಪತಿಗಳಿಗೆ ಮಕ್ಕಳು ಬೇಕೆನ್ನುವ ಆಸೆ ಒಂದು ಕಡೆ ಇದ್ದರೂ ಹುಟ್ಟಿದ ಮಗು ದಕ್ಕುವುದೋ ಇಲ್ಲವೋ ಎನ್ನುವ ಭೀತಿ ಮತ್ತೊಂದು ಕಡೆ ಅವರನ್ನು ಬಾಧಿಸುತ್ತಲೇ ಇತ್ತು. ಇಷ್ಟರಲ್ಲಿ, ತ್ರಿಲೋಕ ಸಂಚಾರಿಯಾದ ನಾರದ ತಿರುಗುತ್ತಾ ಒಮ್ಮೆ ಕಂಸನ ಬಳಿಗೆ ಬಂದ. ಅವನೊಂದಿಗೆ ಕ್ಷೇಮ ಸಮಾಚಾರವನ್ನೂ ರಾಜ್ಯದ ಸ್ಥಿತಿಗಳನ್ನೂ ವಿಚಾರಿಸುತ್ತಾ ಮಧ್ಯೆ, ಒಂದು ಸಂದರ್ಭದಲ್ಲಿ, 'ಯಾದವರೆಲ್ಲರೂ ದೇವತೆಗಳು. ನೀನು ಕಾಲನೇಮಿ ಎನ್ನುವ ಅಸುರನ ಅಂಶದಿಂದ ಹುಟ್ಟಿದವನು. ಈ ಯಾದವರೆಲ್ಲರಿಗೂ ದೇವಕೀ ದೇವಿಯ ಅಷ್ಟಮ ಗರ್ಭದಲ್ಲಿ ಹುಟ್ಟುವ ಮಗನಿಂದಲೇ ಅಂತ್ಯಸಂಭವಿಸುವುದು. ಆ ಬಾಲಕನಿಂದಲೇ ನೀನೂ ಮರಣ

ಹೊಂದುವೆ,' ಎಂದು ಹೇಳಿ, ಉರಿಯುವ ಬೆಂಕಿಗೆ ಎಣ್ಣೆ ಹುಯ್ದಂತೆ ಕ್ರೋಧವನ್ನು ಮತ್ತಷ್ಟು ಉದ್ರೇಕಗೊಳಿಸಿದ. ಅಷ್ಟಕ್ಕೇ ಸುಮ್ಮನಾಗದೆ, ಹೊರಡುವಾಗ ಕಂಸನನ್ನು ಕುರಿತು, 'ಕಂಸಾ! ಒಂದೊಂದು ದಿನ ಕಳೆದುದನ್ನೂ ಒಂದೊಂದು ಯುಗವೆಂದು ಭಾವಿಸು. ಎಂದು ಮರಣವೋ ಎನ್ನುವುದನ್ನು ಮರೆಯದಿರು,' ಎಂದು ಸಹ ಎಚ್ಚರಿಸಿದ.

ಇದರಿಂದ ಕಂಸ ಮತ್ತಷ್ಟು ಕಂಗಾಲಾಗಿ, ಈ ಹುಟ್ಟಿರುವ ಮಕ್ಕಳಲ್ಲಿಯೂ ಯಾರಾದರೂ ತನ್ನನ್ನು ಕೊಲ್ಲುವವರಿದ್ದಾರೋ ಏನೋ ಎಂದು ಶಂಕಿಸಿ ವಸುದೇವನಿಗೆ ಹೇಳಿ ಕಳುಹಿಸಿದ. ವಸುದೇವ ಮತ್ತೇನು ಗಂಡಾಂತರ ಬಂದಿತೋ ಎಂದು ಭಯಪಡುತ್ತಾ ಕಂಸನೆದುರು ಬಂದು ನಿಂತ. ಕಂಸ ಅತಿ ಉಗ್ರನಾಗಿ, ಕೆಂಗಣ್ಣು ಮಾಡಿಕೊಂಡು ಗರ್ಜಿಸುತ್ತಾ, 'ಈಗ ನಿನಗೆ ಎಷ್ಟು ಮಂದಿ ಮಕ್ಕಳು?' ಎಂದು ಪ್ರಶ್ನಿಸಿದ. ವಸುದೇವನಿಗೆ ಹೇಳಲು ಬಾಯಿ ಬರದೆ, ಹೇಳಿದರೆ ಏನು ಆಗುವುದೋ ಎನ್ನುವ ಭಯ ಹೇಳಲು ಅಡ್ಡಿಪಡಿಸುತ್ತಿರಲು, ತುಟಿ ಅದುರುತ್ತಿರಲು, 'ಈಗ ಆರು ಮಕ್ಕಳಿದ್ದಾರೆ,' ಎಂದು ಹೇಳಲಾರದೆ ಹೇಳಿದ. 'ಹಾಗಾದರೆ, ಆ ಆರು ಮಕ್ಕಳನ್ನೂ ನಾಳೆ ಬೆಳಗಾದೊಡನೆ ನನಗೆ ತಂದೊಪ್ಪಿಸು,' ಎಂದು ಕಂಸ ಆಜ್ಞಾಪಿಸಿದ.

ವಸುದೇವ ಮರುಮಾತನಾಡದೆ, ಕೊಟ್ಟ ಮಾತನ್ನು ಮೀರಲಾರದೆ, ಪುತ್ರ ಪ್ರೇಮವನ್ನು ಮರೆಯಲಾಗದೆ, ಜೀವಚ್ಛವದಂತೆ ತೂರಾಡುತ್ತಾ ದೇವಕೀ ದೇವಿಯ ಬಳಿಗೆ ಹೇಗೋ ನಡೆದು ಬಂದು, ಅವಳಿಗೆ ನಡೆದ ವಿಷಯವನ್ನು ತಿಳಿಸಿದ. ಅವಳು ಆ ಆರು ಮಂದಿ ಮಕ್ಕಳನ್ನೂ ಎದೆಗೆ ಅವುಚಿಕೊಂಡು ಎಷ್ಟು ಬಾಧೆ ಪಟ್ಟಳೋ ಅದು ವರ್ಣನಾತೀತ, ಊಹಾತೀತ. ಮಹಾರಾಜಾ! ಕಂಸ ತನ್ನ ಒಂದು ಪ್ರಾಣಕ್ಕಾಗಿ ಇಷ್ಟೊಂದು ನಿರಪರಾಧಿಗಳ ಪ್ರಾಣಗಳನ್ನು ತೆಗೆಯುವುದು ಎಂಥ ಪಾತಕವೋ ನೀನೇ ಯೋಚಿಸು. ಆದರೆ ಭಗವತ್ ಲೀಲೆ ಅರ್ಥವಾಗುವುದಿಲ್ಲ. ಬಾಹ್ಯ ದೃಷ್ಟಿಯಲ್ಲಿ ಚಿಕ್ಕಮಕ್ಕಳ ಪ್ರಾಣಗಳನ್ನು ತೆಗೆದನೆಂದು ಭಾವಿಸಬಹುದು. ಅಂತರಾರ್ಥದಲ್ಲಿ ಅವರ ಶಾಪ, ಪಾಪಗಳು ನಿವಾರಣೆಯಾಗಿ ಉತ್ತಮ ಜನ್ಮ ಬರಬಹುದು. ಅವರ ಪೂರ್ವ ಜನ್ಮ ರಹಸ್ಯವೇನೋ ಮುಂದೆ ಬರುವ ಜನ್ಮದ ಪವಿತ್ರತೆಯೇನೋ ಯಾರಿಗೆ ಗೊತ್ತು. ಲೋಕದ ಜನರು ಈ ಎರಡರ ಮಧ್ಯದ, ಕಣ್ಣಿಗೆ ಕಾಣುವುದನ್ನು ಮಾತ್ರ, ವಿಚಾರ ಮಾಡುವರು. ಆದರೆ, ಲೋಕೇಶ ಹಾಗಲ್ಲ, ಅಲ್ಲವೇ? ಅವನು ತ್ರಿಕಾಲ, ತ್ರಿಗುಣಗಳ ದೃಷ್ಟಿಯಿಂದ ಯೋಚಿಸುವನು, ಆಶಿಸುವನು. ನಮಗಿಂತಲೂ ಮಾಧವನಿಗೇ ದಯೆ ಅಧಿಕ ಎಂದು ತಿಳಿ. ನಮ್ಮ ವಿಷಯ ನಮಗಿಂತ ಮಾಧವನಿಗೇ ಚೆನ್ನಾಗಿ ತಿಳಿದಿದೆಯಾದ್ದರಿಂದ, ಎಲ್ಲವೂ

ಭಗವದಿಚ್ಛೆ ಎಂದು, ನಿಶ್ಚಿಂತೆಯಿಂದ ದೈವ ಚಿಂತನೆ ಮಾಡುವುದು ಉತ್ತಮೋತ್ತಮ ವಾದುದು.

ಮಹಾರಾಜಾ! ಮಾರನೆ ದಿನ ಸೂರ್ಯೋದಯವಾದೊಡನೆ, ವಸುದೇವ ಆರು ಮಂದಿ ಮಕ್ಕಳನ್ನು ಬಿಡಲಾರದೆ, ಒಪ್ಪಿಸಲಾರದೆ, ಪರಿಚಾರಕರನ್ನು ಜೊತೆಯಲ್ಲಿಟ್ಟು ಕೊಂಡು ಬಂದು, ಕಣ್ಣುಗಳನ್ನು ಮುಚ್ಚಿಕೊಂಡು, ಮಕ್ಕಳನ್ನು ಕಂಸನಿಗೆ ಒಪ್ಪಿಸಿ, ಗೊಳ್ಳೆಂದು ಅಳಲಾರಂಭಿಸಿದ. ಸ್ವಾರ್ಥಪರನಾದ ಕಂಸ ನಿರ್ದಾಕ್ಷಿಣ್ಯವಾಗಿ ಆ ಹಸುಳೆಗಳ ಕಾಲುಗಳನ್ನು ಹಿಡಿದು ನೆಲಕ್ಕೆ ಅಪ್ಪಳಿಸಿದ. ಒಂದೊಂದು ಸಾರಿ ನೆಲಕ್ಕೆ ಬಡಿದಾಗಲೂ ಅವುಗಳ ರೂಪ ಬದಲಾಯಿಸುತ್ತಿತ್ತು. ಏನು ಮಾಡುವುದಕ್ಕೂ ಸಾಧ್ಯವಿಲ್ಲದೆ, ವಸುದೇವನು ಭಾರವಾದ ಹೃದಯದಿಂದ ತನ್ನ ವಿಧಿಯನ್ನು ಬೈಯುತ್ತಾ ಯಾವ ಪಾಪದ ಫಲವೋ ಎಂದುಕೊಂಡು, ಮನೆ ಸೇರಿದ. ಈ ಪುತ್ರ ಶೋಕದಿಂದ ದೇವಕೀ ವಸುದೇವರು ಕ್ಷಣ ಕ್ಷಣವೂ ಸವೆಯತೊಡಗಿದರು. ಅವರ ಜೀವಿತವೇ ಅವರಿಗೆ ಭಾರವಾಯಿತು. ದೈವೇಚ್ಛೆ! ಆಯಸ್ಸು ಇರುವವರೆಗೂ ಬದುಕದೆ ವಿಧಿಯಿಲ್ಲ ಎಂದು ಮೊಂಡು ಜೀವಿಗಳಾಗಿ ಕಣ್ಣೀರಿನಿಂದ ತಮ್ಮ ಕಾಯಗಳನ್ನು ಕರಗಿಸಿಕೊಳ್ಳುತ್ತಿದ್ದರು. ಹೀಗಿರುವಲ್ಲಿ, ಏಳನೇ ಗರ್ಭ ತನ್ನಷ್ಟಕ್ಕೇ ಮಾಯವಾಯಿತು. ಕಂಸನಿಗೆ ಏನು ಹೇಳಬೇಕೆನ್ನುವುದೇ ಅವರಿಗೆ ತೋಚಲಿಲ್ಲ. ಈ ವಿಷಯವನ್ನು ಹೇಗೋ ಅವನಿಗೆ ತಿಳಿಸಿದರು. ತಂಗಿ ಮತ್ತು ಭಾವ ಏನೋ ಮೋಸ ಮಾಡಿದ್ದಾರೆಂದು ಕಂಸ ಅನುಮಾನಿಸಿ, ಆ ದಿನದಿಂದ ಅವರಿಬ್ಬರನ್ನೂ ಭದ್ರವಾದ ಕಾವಲು ಹಾಕಿ, ಕಾರಾಗೃಹದಲ್ಲಿರಿಸಿದ. ಮಕ್ಕಳ ಸಾವಿನ ದುಃಖದಿಂದ ಸೊರಗಿದ ವಸುದೇವ ದೇವಕಿಯರಿಗೆ ಕಾರಾಗೃಹವಾಸ ಮತ್ತೊಂದು ಬಾಧೆಯಾಗಿ ಪರಿಣಮಿಸಿತು.

## ೪೧ ನಂದನಂದನನಲ್ಲಿ ಫಲಿತ

ಕಾರಾಗೃಹದಲ್ಲಿ ವಾಸಮಾಡುತ್ತಿದ್ದ ದೇವಕೀ ವಸುದೇವರು ಹುಚ್ಚರಂತೆ ಕಾಣಿಸುತ್ತ ಇದ್ದರು. ಕೂದಲಿನ ಸಂಸ್ಕಾರ ಮಾಡಿಕೊಳ್ಳದೆ, ಕಾಯಕ್ಕೆ ಬೇಕಾದ ಆಹಾರ ತೆಗೆದುಕೊಳ್ಳದೆ, ನಿರಂತರವೂ ಪುತ್ರಶೋಕದಲ್ಲೇ ಮುಳುಗಿ ಹೋದರು. ಎರಡನೆ

ವರ್ಷದ ಕಾರಾಗೃಹ ವಾಸ ಪ್ರಾರಂಭವಾಗುತ್ತಲೇ ದೇವಕಿಯ ಅಷ್ಟಮ ಗರ್ಭ ಪ್ರಾರಂಭವಾಯಿತು. ಅದೊಂದು ಮಹದಾಶ್ಚರ್ಯ ಸಂಗತಿಯಾಗಿ ಪರಿಣಮಿಸಿತು. ಬಾಡಿ ಹೋದ ದೇವಕೀ ವಸುದೇವರ ಮುಖ ಕಮಲಗಳು ಒಮ್ಮಿಂದೊಮ್ಮೆಲೇ ಅರಳಿದ ಹೊಚ್ಚಹೊಸ ಕಮಲದ ಹಾಗೆ ತೇಜಸ್ಸಿನಿಂದ ತುಂಬಿದುವು. ಒಣಗಿ ಕಾಷ್ಠವಾಗಿದ್ದ ಅವರ ಮೈಗಳು ತುಂಬಿಕೊಂಡು ಬಂಗಾರದ ಬಣ್ಣದಿಂದ ಪ್ರಕಾಶಿಸ ತೊಡಗಿದವು. ದೇವಕಿ ಇದ್ದ ಕೋಣೆ ಯಾವಾಗಲೂ ಸುವಾಸನೆಯಿಂದ, ಒಂದು ಬಗೆಯ ಪ್ರಕಾಶದಿಂದ ತುಂಬಿರುವುದನ್ನೂ, ಆಗಾಗ ನೃತ್ಯ ಗೀತೆಗಳು ಕಾಣುತ್ತಾ ಕೇಳುತ್ತಾ ಇರುವುದನ್ನೂ ದೇವಕೀ ವಸುದೇವರು ಗಮನಿಸಿದರು. ಈ ವಿಚಿತ್ರವನ್ನು ಕಂಸನಿಗೆ ತಿಳಿಸಿದರೆ ಮತ್ತಷ್ಟು ಹಿಂಸಿಸಿ, ಎಲ್ಲಿ ಆ ಗರ್ಭವನ್ನೇ ನಾಶ ಮಾಡಿ ಬಿಡುವನೋ ಎನ್ನುವ ಭಯದಿಂದ, ತಮ್ಮಷ್ಟಕ್ಕೆ ತಾವು ಅದನ್ನು ಅನುಭವಿಸುತ್ತಾ ಹುಟ್ಟಲಿರುವ ಅಷ್ಟಮ ಪುತ್ರನ ಭವಿಷ್ಯ ಹೇಗಾಗುವುದೋ ಎನ್ನುವ ಊಹೆಯಲ್ಲಿ ಕಾಲವನ್ನು ಕಳೆಯುತ್ತಿದ್ದರು.

ಇತ್ತ ಕಂಸ ತನ್ನ ಅಂತ್ಯ ಸಮೀಪಿಸುತ್ತಿದೆ ಎನ್ನುವುದನ್ನು ತಿಳಿದು, ಅದನ್ನು ಹೇಗಾದರೂ ತಪ್ಪಿಸಿಕೊಂಡು, ದೇಶವನ್ನು ಏಕೈಕ ಚಕ್ರಾಧಿಪತಿಯಾಗಿ ಆಳಬೇಕು ಎನ್ನುವ ದುರಾಶೆ ಹೃದಯವನ್ನಾವರಿಸಿ, ದುರಾಲೋಚನೆಗೆ ದಾಸನಾಗಿ, ಯದು, ವೃಷ್ಣಿ, ಬೋಜ, ಅಂಧಕನೆನ್ನುವ ಯಾದವ ರಾಜರುಗಳಲ್ಲಿ ಉಳಿದವರನ್ನು ಅನ್ಯಾಯ, ಅಕ್ರಮ, ಅನಾಚಾರಗಳಿಂದ ಜಯಿಸಿ ನಾಲ್ಕು ರಾಜ್ಯಗಳನ್ನೂ ತನ್ನ ಹಸ್ತಗತ ಮಾಡಿಕೊಂಡು, ತನ್ನ ಸ್ವೇಚ್ಛೆಯ ಆಡಳಿತಕ್ಕೆ ಅಡ್ಡಿಯಾಗದಿರುವಂತೆ ಸ್ವಂತ ತಂದೆಯಾದ ಉಗ್ರಸೇನನನ್ನು ಕೂಡ ಕಾರಾಗೃಹದಲ್ಲಿಟ್ಟು ತನ್ನ ಇಷ್ಟಾನುಸಾರ ರಾಜ್ಯಭಾರ ಮಾಡುತ್ತಿದ್ದ," ಎಂದು ಶುಕ ನುಡಿಯಲು, ಪರೀಕ್ಷಿತ್ ಮಹಾರಾಜ, ಆಶ್ಚರ್ಯದಿಂದ, "ಏನು? ಅಂತ್ಯಕಾಲ ಸನ್ನಿಹಿತವಾಗುತ್ತಿದೆಯೆನ್ನುವುದು ತಿಳಿದೂ ಅಷ್ಟಮ ಗರ್ಭದಲ್ಲಿ ತನ್ನನ್ನು ಹತಮಾಡುವವನು ಬೆಳೆಯುತ್ತಿರುವನೆಂದು ಅಶರೀರ ವಾಣಿ ಕಿವಿಯಲ್ಲಿ ಪ್ರತಿಧ್ವನಿ ಮಾಡುತ್ತಿದ್ದರೂ ಅಶರೀರವಾಣಿ ಸುಳ್ಳಲ್ಲ ಎನ್ನವುದು ತಿಳಿದಿದ್ದರೂ ಕಂಸ ಇಂಥ ದುರಾಸೆಗೆ, ದುರ್ಮಾರ್ಗಕ್ಕೆ ಕಂಕಣ ಕಟ್ಟಿದನೆ? ಇದು ಮಹಾ ವಿಚಿತ್ರವಾಗಿದೆ ಸ್ವಾಮಿ," ಎಂದ.

ಶುಕ ಮಹರ್ಷಿ ನಕ್ಕು, "ಮಹಾರಾಜಾ! ಎಲ್ಲರೂ ನಿನ್ನಂತೆ ಅಂತ್ಯಕಾಲ ಸಮೀಪಿಸು ತ್ತಿದೆ ಎನ್ನುವುದನ್ನು ತಿಳಿದು, ಕಾಲಸ್ವರೂಪನನ್ನು ದರ್ಶನ ಮಾಡಲು ಪರಿತಪಿಸುವ ರೆಂದು ಭಾವಿಸುತ್ತ ಇದ್ದೀಯೆ. ಆದರೆ, ಅವರವರು ಮಾಡಿದ ಪುಣ್ಯ ಪಾಪಗಳನ್ನನು ಸರಿಸಿಯೇ ಇಂಥ ಭಾವಗಳು ಹುಟ್ಟುವುವು. ಅಂತ್ಯಕಾಲ ಸಮೀಪಿಸುತ್ತಿರುವುದನ್ನು ತಿಳಿದು ನೀನು ಮಾಡುತ್ತಿರುವ ಕೆಲಸಕ್ಕೂ ಅಂತ್ಯಕಾಲ ಸಮೀಪಿಸುತ್ತಿರುವುದನ್ನು

ತಿಳಿದು ಕಂಸ ಮಾಡಿದ ಕೆಲಸಕ್ಕೂ ಎಷ್ಟು ವ್ಯತ್ಯಾಸವೋ ನೀನೇ ಯೋಚಿಸು. ಇವುಗಳನ್ನೇ ದೇವಾಸುರ ಭಾವಗಳು ಎನ್ನವುದು. ಪುಣ್ಯ ಕಾರ್ಯಗಳನ್ನು ಮಾಡಿದ ವರಿಗೆ, ಒಳ್ಳೆಯ ಆಲೋಚನೆಗಳು. ಭೂತ ದಯೆ, ಪಶ್ಚಾತ್ತಾಪ, ಸತ್ಯ, ಅಹಿಂಸೆ, ಪ್ರೇಮ, ದೈವ ವಿಶ್ವಾಸ—ಇವುಗಳು ಇರುವವರಿಗೆ ಅಂತ್ಯಕಾಲದಲ್ಲಿ ದೈವ ಚಿಂತನೆ ಯಂತ ಪವಿತ್ರ ಕರ್ಮವೇ ಚಿತ್ತದಲ್ಲಿ ಮೂಡುವುದು. ಹಾಗಲ್ಲದೆ ಸ್ವಾರ್ಥ, ಅಹಂ ಕಾರ, ದುರಾಶೆ, ದುರ್ಗುಣ, ಹಿಂಸೆ, ಅಧರ್ಮಗಳಲ್ಲೇ ಇರುವವರಿಗೆ ಕಡೆಗಾಲದಲ್ಲಿ ಇಂಥ ಕಠಿಣ ಬುದ್ಧಿ ಹುಟ್ಟಿ, ಕಡೆಗೆ ನಾಶವಾಗುವರು. ಇವುಗಳನ್ನೇ ಒಂದನ್ನು ಕೈವಲ್ಯ ಪ್ರಾಪ್ತಿ, ಇನ್ನೊಂದನ್ನು ನರಕ ಪ್ರಾಪ್ತಿ ಎನ್ನುವರು. ಪ್ರಾಣವು ಕಾಯಗಳನ್ನು ಬಿಡುವುದು ನಮ್ಮ ಕಣ್ಣಿಗೆ ಒಂದೇ ಆಗಿ ಕಂಡರೂ ಆಯಾ ಪ್ರಾಣಗಳ ಪ್ರಾಪ್ತಿ ಸ್ಥಾನಗಳು ಮಾತ್ರ ಅಗೋಚರ ಸ್ಥಿತಿಯಲ್ಲಿರುವುವು. ಅದಕ್ಕೆ ಅಂತ್ಯಕಾಲದಲ್ಲಿ ಉದ್ಭವಿ ಸುವ ಅಲೋಚನೆಗಳೇ ಪ್ರತ್ಯಕ್ಷ ಪ್ರಮಾಣಗಳು; ಒಂದು ನಿರಾಶೆ, ಇನ್ನೊಂದು ವಿಷ್ಣು ದರ್ಶನ. ಅದಕ್ಕೇ ಲೋಕದಲ್ಲಿ 'ವಿನಾಶಕಾಲೇ ವಿಪರೀತ ಬುದ್ಧಿಃ' ಎನ್ನುವರು. ವಿನಾಶ ತಂದುಕೊಳ್ಳುವವರಿಗೇ ಇಂಥ ವಿಪರೀತ ಬುದ್ಧಿ ಹುಟ್ಟುವುದು. ವಿಷ್ಣು ದರ್ಶನ ಪಡೆದುಕೊಳ್ಳುವವರಿಗೇ ಇಂಥ ವಿಜ್ಞಾನ ಬುದ್ಧಿ ಹುಟ್ಟುವುದು," ಎಂದು ಶುಕ ಹೇಳಿದನು.

ಪರೀಕ್ಷಿತ್ ಮಹಾರಾಜ, "ಸ್ವಾಮೀ! ಇದು ನನ್ನ ಪ್ರಾಪ್ತಿಯಲ್ಲ. ನಮ್ಮ ತಾತಂದಿರು, ತಂದೆ ಪಡೆದ ಮಹದ್ಭಾಗ್ಯವೇ ನನ್ನನ್ನು ಇಂಥ ಉತ್ತಮ ಗತಿಗೆ ಒಯ್ಯುತ್ತಿದೆ. ಎಲ್ಲಕ್ಕೂ ಮಿಗಿಲಾಗಿ ನಿಮ್ಮಂಥ ಜ್ಞಾನ ರತ್ನಗಳ ಪ್ರಕಾಶ, ಮತ್ತು ಕೃಷ್ಣಮೂರ್ತಿಯ ಅನುಗ್ರಹ ನನ್ನಲ್ಲಿ ಭಕ್ತಿರಸ ಉಕ್ಕುವಂತೆ ಮಾಡಿದೆ. ಸಂಘ ಬಲವೂ ಕೂಡ ಸ್ವಲ್ಪ ಮಟ್ಟಿಗೆ ಊರ್ಧ್ವಗತಿ ಅಧೋಗತಿಗೆ ಕಾರಣವಾಗುವುದು. ನನ್ನ ಜೀವಿತಕ್ಕೆ ಹುಟ್ಟಿದಂದಿನಿಂದ ಇದುವರೆಗೂ ದೈವ ಕಟಾಕ್ಷವೆ ರಕ್ಷೆಯಾಗಿದ್ದು ರಕ್ಷಿಸಿದೆ. ಸತ್ ಪುರುಷರ ಸಹವಾಸ, ಧರ್ಮಾತ್ಮರ ಸ್ನೇಹ, ಪಂಡಿತೋತ್ತಮರ ಪರಿಚಯ, ಪವಿತ್ರ ತಾತಂದಿರ ಕೀರ್ತಿ ನನ್ನನ್ನು ಇಂಥ ವ್ಯಕ್ತಿಯನ್ನಾಗಿ ಮಾಡಿವೆ. ಬುದ್ಧಿವಂತರಾದ ಮಂತ್ರಿಗಳು ಕೂಡ ನನಗೆ ಬಲಗೈಯಾಗಿದ್ದು ಪವಿತ್ರ ಪ್ರಜೆಗಳ ಅಭಿಮಾನವನ್ನು ನಾನು ಇಷ್ಟೊಂದು ಸಂಪಾದಿಸಲು ಸಾಧ್ಯವಾಯಿತೇ ವಿನಾ ನನ್ನ ಪ್ರಯತ್ನವಷ್ಟೇ ಕಾರಣವಲ್ಲ. ಬೀಜ ಎಷ್ಟೇ ಉತ್ತಮ ಜಾತಿಯದಾದರೂ ಭೂಮಿ ಸಾರವತ್ತಾಗಿರ ದಿದ್ದರೆ ಉತ್ತಮ ಬೆಳೆ ಪಡೆಯಲು ಅಸಾಧ್ಯವಲ್ಲವೇ?

ನನ್ನ ರಾಜ್ಯದಲ್ಲಿ ನನ್ನ ಪೂರ್ವಿಕರು, ಋಷಿಗಳು ಪಂಡಿತರು, ಮಂತ್ರಿಗಳು, ಪ್ರಜೆಗಳು ಸರಿಯಾದವರಾಗಿರದಿದ್ದರೆ ನನ್ನಲ್ಲಿ ಎಷ್ಟು ಉತ್ತಮ ಭಾವನೆಗಳಿದ್ದಾಗ್ಯೂ ಪಾತ್ರೆ ತುಂಬ ಪವಿತ್ರವಾದ ಹಾಲಿದ್ದರೂ ಒಂದು ತೊಟ್ಟು ಮಜ್ಜಿಗೆ ಅದರೊಳಗೆ ಬಿದ್ದರೆ

ಹಾಲೆಲ್ಲಾ ಗಡ್ಡೆಕಟ್ಟಿ ಹೋಗುವಂತೆ, ನನ್ನ ಉತ್ತಮ ಭಾವನೆಗಳೆಲ್ಲಾ ಹೋಗಿ, ಸುತ್ತಲೂ ಇರುವವರ ಭಾವನೆಗಳೇ ನನ್ನಲ್ಲೂ ಸೇರಿ, ನಾನೂ ಕಂಸನಂತೆ ಕಠಿಣ ಹೃದಯವವನಾಗುತ್ತಿದ್ದೆ. ಆದ್ದರಿಂದ, ಕಂಸನ ಪಾಪ ಕಾರ್ಯಕ್ಕೆ ಆ ರಾಜ್ಯದಲ್ಲಿದ್ದ ಹಿರಿಯರೂ ಪಂಡಿತರೂ ಪ್ರಜೆಗಳೂ ಮಂತ್ರಿಗಳೂ ದುರ್ಗುಣವಂತರಾಗಿ, ದಯಾ ದಾಕ್ಷಿಣ್ಯ ಇಲ್ಲದವರಾಗಿದ್ದುದೇ ಕಾರಣವೆಂದು ಭಾವಿಸುತ್ತೇನೆ. ನನ್ನ ಈ ಊಹೆ ಸರಿಯೋ ತಪ್ಪೋ ನಿರ್ಣಯಿಸಲು ತಾವೇ ಸಮರ್ಥರು. ಉಳಿದಿರುವ ಈ ಅಲ್ಪ ಕಾಲವನ್ನು ಪರರ ತಪ್ಪೊಪ್ಪುಗಳನ್ನು ನಿರ್ಣಯಿಸುವುದರಲ್ಲಿ ಹಾಳು ಮಾಡದೆ ಪವಿತ್ರ ಮಾಡುವುದೊಳ್ಳೆಯದಾದ್ದರಿಂದ, ನನ್ನ ಪ್ರಾಣ ಸಮಾನವಾದ ಗೋಪಾಲನ ಜನ್ಮ ಸಮಯ ಹೇಗೆ ಸಮೀಪಿಸಿತೆನ್ನುವುದನ್ನು ತಿಳಿಸಿಬೇಕು," ಎಂದು ಕೇಳಲು ತವಕಪಡುತ್ತಾ ಆಲೈಸುತ್ತಿದ್ದನು.

ಆಗ ಶುಕ, "ಮಹಾರಾಜಾ! ಏಳನೆಯ ಗರ್ಭದಲ್ಲಿದ್ದ ಪಿಂಡ ಎಂಟನೆಯ ಗರ್ಭವಾದ ಗೋಪಾಲನಿಗೆ ಸಂಗಾತಿಯಾಗಿರಲೆಂದು ಯೋಗ ಮಾಯೆ, ಅಂದರೆ ದೈವಶಕ್ತಿ, ಆ ಪಿಂಡವನ್ನು ತೆಗೆದುಕೊಂಡು ಹೋಗಿ, ನಂದನ ರಕ್ಷಣೆಯಲ್ಲಿದ್ದ ವಸುದೇವನ ಹೆಂಡತಿ ರೋಹಿಣಿಯ ಗರ್ಭವನ್ನು ಪ್ರವೇಶಿಸುವಂತೆ ಮಾಡಿತು. ಆ ಶಿಶುವು ರೋಹಿಣಿಯ ಗರ್ಭದಲ್ಲಿ ಹುಟ್ಟಿ ದಿನದಿನಕ್ಕೆ ಪ್ರವರ್ಧಮಾನಕ್ಕೆ ಬರುತ್ತಿತ್ತು. ಅತಿ ಬಲಶಾಲಿಯಾಗಿ ಇದ್ದುದರಿಂದಲೂ ಎಲ್ಲರನ್ನೂ ಸಂತೋಷಪಡಿಸುವಂಥ ಕಾಯದಿಂದ ಕಂಗೊಳಿಸುತ್ತಿದ್ದುದರಿಂದಲೂ ಆಚಾರ್ಯ ಗರ್ಗರು ಮಗುವಿಗೆ ಬಲರಾಮ ಎಂದು ನಾಮಕರಣ ಮಾಡಿದರು. ಅಲ್ಲದೆ ದೇವಕಿಯ ಗರ್ಭದಿಂದ ಸಂಕರ್ಷಿಸಲ್ಪಟ್ಟದವನಾದ್ದರಿಂದ ಸಂಕರ್ಷಣನೆಂದೂ ಹೀಗೆ ಎರಡು ಹೆಸರುಗಳಿಂದಲೂ ಅವನನ್ನು ಕರೆಯುತ್ತಿದ್ದರು.

ಹೀಗಿರುವಲ್ಲಿ, ದೇವಕಿಗೆ ನವಮಾಸಗಳು ತುಂಬಿತು. ದೇವಕೀ ವಸುದೇವರು ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು, ಯಾವ ನಿಮಿಷದಲ್ಲಿ ಪ್ರಸವವಾಗುವುದೊ, ಕಂಸ ಯಾವ ನಿಮಿಷದಲ್ಲಿ ಅದನ್ನು ಕೊಲ್ಲುವನೊ, ಏನು ಹಿಂಸೆ ಕೊಡುವನೊ ಎಂದು ಭಯಗ್ರಸ್ತರಾಗಿ, ನಿದ್ರಾಹಾರಗಳಿಲ್ಲದೆ, ಅದೇ ಚಿಂತೆಯಲ್ಲೇ ಇದ್ದರು. ನವಮಾಸ ತುಂಬಿತೆಂದು ಕಂಸನಿಗೆ ತಿಳಿಯುತ್ತಲೇ ಕಾರಾಗೃಹದಲ್ಲಿ ಮತ್ತಷ್ಟು ಭದ್ರವಾದ ಏರ್ಪಾಟು ಮಾಡಿದ. ದೇವಕೀ ವಸುದೇವರ ಕೈ ಕಾಲುಗಳಿಗೆ ಬೇಡಿ ಹಾಕಿಸಿ, ಬಾಗಿಲುಗಳಿಗೆ ಭದ್ರವಾದ ಬೀಗ ಹಾಕಿಸಿ, ಸುತ್ತಲೂ ಜಾಗೃತರಾದ ಪಹರೆಯವರನ್ನು ನೇಮಿಸಿದ. ಪ್ರತಿ ಐದು ನಿಮಿಷಕ್ಕೊಮ್ಮೆ ಒಳಗೆ ಹೋಗಿ ದೇವಕೀ ವಸುದೇವರನ್ನು ನೋಡುತ್ತಿರುವಂತೆ ಏರ್ಪಾಡು ಮಾಡಿ, ತಾನು ಕೂಡ ಏನು ಸಂಭವಿಸುವುದೋ ಎನ್ನುವ ಭಯದಿಂದ ನಿರಂತರ ಚಿಂತಿಸುತ್ತಾ ಇದ್ದ.

ದೈವಮಾಯೆಯನ್ನು ಗೆಲ್ಲಬಲ್ಲವರಾರು? ದೈವ ಸಂಕಲ್ಪಕ್ಕೆ ಅಡ್ಡಿ ಎನ್ನುವುದಿದೆಯೇ? ಸತ್ಯವನ್ನು ತಿಳಿಯಲಾರದ, ದೈವ ಶಕ್ತಿಯನ್ನು ಗುರುತಿಸಲಾರದ, ಅರಿಯಲಾರದ ಮೂರ್ಖರಕ. ತಮ್ಮ ಪ್ರಯತ್ನಗಳೇ ತಮ್ಮನ್ನು ರಕ್ಷಿಸುವುವೆಂದೂ ಜಯಿಸುವಂತೆ ಮಾಡುವುದೆಂದೂ ತಿಳಿಯುವರೇ ಹೊರತು, ದೈವದ ಆಜ್ಞೆ ಇಲ್ಲದೆ ಎಂಥ ಸಣ್ಣ ಕೆಲಸವನ್ನಾದರೂ ಯಾರೂ ಸಾಧಿಸಲಾರರು. ಹಾಗೆಂದು, ದೈವ ಸಂಕಲ್ಪವಿದ್ದರೆ ತನ್ನಷ್ಟಕ್ಕೆ ಆಗುವುದೆಂದು ಸುಮ್ಮನೆ ಕುಳಿತಿರಬಾರದು. ಪುರುಷಾರ್ಥ ಕೈಗೂಡಲು ಪ್ರಯತ್ನವೂ ಬೇಕು. ಇರುವ ಶಕ್ತಿ ಯುಕ್ತಿಗಳನ್ನು ಉಪಯೋಗಿಸಿ ದೈವದ ಮೇಲೆ ಭಾರ ಹಾಕಿ ಕಾರ್ಯಸಾಧನೆಗೆ ಕಂಕಣ ಕಟ್ಟಬೇಕು. ದೈವಾನುಗ್ರಹ ಇಲ್ಲದಿದ್ದರೆ ಎಲ್ಲವೂ ಶೂನ್ಯವೇ ಆಗುವುದು.

ಒಂದು ದಿನ ರಾತ್ರಿ, ದೇವಕೀ ವಸುದೇವರಿದ್ದ ಕೋಣೆಯಲ್ಲಿ ಪ್ರಸವ ವೇದನೆ ಅನುಭವಿಸುತ್ತಿದ್ದ ದೇವಕಿ, ದೈವವನ್ನು ಸ್ಮರಿಸುತ್ತಾ ಹಣತೆ ದೀಪವನ್ನು ನೋಡುತ್ತಾ, 'ಈಗ ನನಗೆ ಯಾರು ದಿಕ್ಕು? ನನ್ನ ಗತಿಯೇನು?' ಎಂದು ದುಃಖಿಸುತ್ತಿರುವಾಗ, ಇದ್ದಕ್ಕಿದ್ದಂತೆ ಆ ಹಣತೆ ದೀಪ ಆರಿ ಹೋಯಿತು. ಒಡನೆ, ಎದುರಿಗೆ ಒಂದು ದಿವ್ಯಕಾಂತಿಯುಳ್ಳ ಸ್ವರೂಪವು ಕಾಣಿಸಿತು. ಈತ ಯಾರೋ ಎಂದು ಚಿಂತಿಸಿ, ದೇವಕಿಯು ವಸುದೇವನನ್ನು ಕರೆದಳು. ಕಂಸನೇನಾದರೂ ಇವನನ್ನು ಕಳುಹಿಸಿ ಇರುವನೇ? ಈ ರಾಜಪುರುಷ ಯಾರಿರಬಹುದು ಎಂದು ಅವರು ಗಾಬರಿಗೊಂಡು ಇರಲು, ಆ ದಿವ್ಯ ಸ್ವರೂಪವು ಶಂಖ ಚಕ್ರ ಗದಾಧಾರಿಯಾಗಿ, ಅಭಯ ನೀಡುತ್ತಾ, 'ದುಃಖಿಸದಿರಿ. ನಾನು ನಾರಾಯಣ. ನಿಮ್ಮ ಬಾಧೆ ನಿವಾರಿಸಲೋಸುಗ ಬಂದಿದ್ದೇನೆ. ಅಂದು ನಿಮ್ಮ ತಪಃ ಫಲವಾಗಿ ಕೊಟ್ಟಿದ್ದ ವಾಗ್ದಾನದಂತೆ, ನಾನೇ ನಿಮ್ಮ ಗರ್ಭದಲ್ಲಿ ಇನ್ನು ಕೆಲವೇ ನಿಮಿಷಗಳಲ್ಲಿ ಬರುತ್ತೇನೆ. ನನಗಾಗಿ ನೀವು ಎಷ್ಟು ಮಾತ್ರಕ್ಕೂ ದುಃಖಿಸದೆ, ನಡೆಯುವ ನಾಟಕವನ್ನು ನೋಡುತ್ತಿರಿ. ನನಗೆ ಕೇಡು ಮಾಡುವವರು ಈ ಹದಿನಾಲ್ಕು ಲೋಕಗಳಲ್ಲಿ ಯಾರೂ ಹುಟ್ಟಿಲ್ಲ, ಮುಂದೆ ಹುಟ್ಟುವುದೂ ಇಲ್ಲ. ಪುತ್ರವಾತ್ಸಲ್ಯದಿಂದ, ಮಾಯೆ ಮುಸುಕಿದ ಮನಸ್ಸಿನಿಂದ ತಾತ್ಕಾಲಿಕವಾಗಿ ನಿಮಗೆ ಸ್ವಲ್ಪ ಆತಂಕವಾದರೂ ನಂತರ ವಿಚಿತ್ರವಾದ ಅದ್ಭುತಗಳನ್ನು ಕಾಣುವಿರಿ. ನಾನು ಹುಟ್ಟಿದೊಡನೆಯೇ ನಿಮ್ಮ ಸಂಕೋಲೆಗಳು ಕಡಿದು ಹೋಗುವುವು. ಬಾಗಿಲುಗಳು ತೆರೆದುಕೊಳ್ಳುವುವು. ಯಾರಿಗೂ ತಿಳಿಯ ದಂತೆ ನನ್ನನ್ನು ತೆಗೆದುಕೊಂಡು ಹೋಗಿ, ರೇಪಲ್ಲೆಯಲ್ಲಿ ನಂದನ ಯಶೋದೆಯ ಪಕ್ಕದಲ್ಲಿರಿಸಿ, ಅವಳಿಗೆ ಜನಿಸುವ ಹೆಣ್ಣು ಶಿಶುವನ್ನು ತಂದು ನಿಮ್ಮ ಬಳಿ ಇಟ್ಟು ಕೊಂಡು ಕಂಸನಿಗೆ ಹೇಳಿ ಕಳಿಸಿ. ಅಲ್ಲಿಯವರೆಗೂ ಮಥುರೆಯಲ್ಲಾಗಲೀ ರೇಪಲ್ಲೆಯಲ್ಲಾಗಲೀ ನಿಮ್ಮನ್ನಾರೂ ನೋಡದಂತೆ ನಾನು ನೋಡಿಕೊಳ್ಳುತ್ತೇನೆ,'

ಎಂದು ವಸುದೇವ ದೇವಕಿಯರನ್ನು ಆಶೀರ್ವದಿಸಿ, ಅವನು ಜ್ಯೋತಿರೂಪದಿಂದ ದೇವಕಿಯ ಗರ್ಭವನ್ನು ಸೇರಿದ.

ಅವನು ಗರ್ಭ ಸೇರಿದ ಕೆಲವು ನಿಮಿಷಗಳಲ್ಲೇ ಪ್ರಸವವಾಯಿತು. ಆಗ ನಡು ರಾತ್ರಿ ಮೂರುವರೆ ಗಂಟೆ, ಬ್ರಹ್ಮ ಮುಹೂರ್ತ. ವಿಷ್ಣು ಮಾಯೆಯಾದ್ದರಿಂದ, ಎಲ್ಲರಿಗೂ ಸಹಿಸಲಾರದಷ್ಟು ಗಾಢ ನಿದ್ರೆ ಆವರಿಸಿ, ಬಾಗಿಲು ಕಾಯುವವರು, ಸುತ್ತಲೂ ಪಹರೆ ತಿರುಗುವವರು, ಎಲ್ಲಿದ್ದವರು ಅಲ್ಲಲ್ಲೇ ಮಲಗಿ ನಿದ್ರಿಸಲು ಆರಂಭಿಸಿದರು. ವಸುದೇವನ ಕೈಕಾಲುಗಳಿಗೆ ಹಾಕಿದ ಬಲವಾದ ಕಬ್ಬಿಣದ ಸಂಕೋಲೆಗಳು ಬಿಚ್ಚಿ ಕೊಂಡವು. ಬಾಗಿಲುಗಳು ತೆರೆದುಕೊಂಡವು. ಅರ್ಧರಾತ್ರಿ ಆಗಿದ್ದರೂ ಹೊರಗೆ ಕೋಗಿಲೆಗಳು ಇಂಪಾಗಿ ಕೂಗುತ್ತಿದ್ದವು. ಗಿಳಿಗಳು ಚಿಲಿಪಿಲಿಗುಟ್ಟುತ್ತಿದ್ದವು. ನಕ್ಷತ್ರ ಗಳು ಫಳಫಳ ಹೊಳೆಯುತ್ತಾ ನಗುತ್ತಿದ್ದವು. ವರುಣನು ಪುಷ್ಪವರ್ಷ ಸುರಿಸುತ್ತಿ ದ್ದಾನೋ ಎನ್ನುವಂತೆ ಸಣ್ಣ ಸಣ್ಣ ಹನಿಗಳು ಬೀಳುತ್ತಿದ್ದವು. ಕಾರಾಗೃಹದ ಸುತ್ತಲೂ ತರತರದ ಪಕ್ಷಿಗಳು ಕಿಲಕಿಲ ಶಬ್ದ ಮಾಡುತ್ತಿದ್ದವು. ವಸುದೇವನಿಗೆ ಇವೆಲ್ಲಾ ದೈವ ಮಾಯೆ ಎನಿಸಿತು. ಹುಟ್ಟಿದ ಆ ಮಗುವನ್ನು ನೋಡಿ ಇವೆಲ್ಲಾ ಭ್ರಮೆಯೋ ನಿಜವೋ ಎನ್ನುವುದು ವಸುದೇವನಿಗೆ ತಿಳಿಯದಾಯಿತು.

ಮಹಾರಾಜಾ! ಆಗತಾನೆ ಹುಟ್ಟಿದ ಆ ಮಗುವಿನ ಸುತ್ತಲೂ ದಿವ್ಯ ಪ್ರಕಾಶ ಆವರಿಸಿತ್ತು. ಮಗು ಅಪ್ಪ ಅಮ್ಮನನ್ನು ನೋಡಿ ಫಕ್ಕನೆ ನಕ್ಕು, ಏನೋ ಹೇಳುತ್ತ ಇರುವಂತೆ ತೋರಿತು. 'ಇನ್ನು ಆಲಸ್ಯ ಮಾಡದೆ ನನ್ನನ್ನು ರೇಪಲ್ಲೆಗೆ ಕೊಂಡು ಒಯ್ಯಿರಿ,' ಎನ್ನುವ ಮಾತು ಕೇಳಿಸಿತು. ಒಡನೆಯೇ, ವಸುದೇವ ತಡ ಮಾಡದೆ ಒಂದು ಬಿದಿರು ತಟ್ಟೆಯಲ್ಲಿ ತನ್ನ ಹಳೆಯ ಪಂಚೆಯನ್ನು ಹಾಸಿ, ದೇವಕೀ ದೇವಿಯ ಸೀರೆಯ ತುಂಡನ್ನು ಮಗುವಿನ ಮೇಲೆ ಹೊದಿಸಿ, ಎತ್ತಿ ತಲೆಯ ಮೇಲಿಟ್ಟುಕೊಂಡು ಹೊರಟ. ದಾರಿಯಲ್ಲಿ ಸಣ್ಣ ಸಣ್ಣ ಮಳೆ ಹನಿ ಬೀಳುತ್ತಿರುವುದನ್ನು ನೋಡಿ ವಸುದೇವ, 'ಅಯ್ಯೋ! ಈ ಮಳೆ ಗಾಳಿಗೆ ಮಗು ಸಿಕ್ಕುವಂತಾಯಿತೇ?' ಎಂದು ಚಿಂತಿಸುತ್ತಾ, ಹಿಂತಿರುಗಿ ನೋಡಲು, ಆದಿಶೇಷ ತನ್ನ ಹೆಡೆಯನ್ನು ಮಗವಿನ ಮೇಲೆ ಮಳೆಗೆ ಅಡ್ಡಲಾಗಿ ಹಿಡಿದು, ತನ್ನೊಂದಿಗೆ ಹಿಂದೆಯೇ ಹರಿದು ಬರುತ್ತಾ ಇದ್ದುದನ್ನು ನೋಡಿದ. ದಾರಿಯುದ್ದಕ್ಕೂ ಶುಭ ಸೂಚನೆಗಳೇ ಕಾಣಿಸಿದವು. ಸೂರ್ಯ ಇನ್ನು ಉದಯಿಸದಿದ್ದರೂ ಸರೋವರದಲ್ಲಿ ಕಮಲಗಳು ಅರಳಿ ವಸುದೇವನ ಕಡೆಗೆ ವಾಲುತ್ತಾ ತೂಗುತ್ತಿದ್ದವು. ಅಂದು ಚಂದ್ರನಿಲ್ಲದ ರಾತ್ರಿ ಆದರೂ ಕೃಷ್ಣಮೂರ್ತಿಯನ್ನು ನೋಡಬೇಕೆನ್ನುವ ಅಪೇಕ್ಷೆಯಿಂದ, ಆಕಾಶದಲ್ಲಿ ಚಂದ್ರನು ಪೂರ್ಣ ತೇಜಸ್ವಿಯಾಗಿ, ತಂಪು ಕಿರಣಗಳನ್ನು ಚೆಲ್ಲುತ್ತಾ ಮೋಡಗಳ ಮಧ್ಯದಿಂದ

ತಟ್ಟೆಯಲ್ಲಿದ್ದ ಮಗುವನ್ನು ಇಣಿಕಿ ನೋಡುತ್ತಿರುವನೋ ಎನ್ನುವಂತೆ, ಬೆಳದಿಂಗಳು ಆ ತಟ್ಟೆಯ ಮೇಲೆ ಮಾತ್ರ ಬೀಳುತ್ತಿತ್ತು.

ಇಂಥ ವಿಚಿತ್ರ ಶುಭ ಸೂಚನೆಗಳೊಂದಿಗೆ ಹುಟ್ಟಿದ ಮಗುವನ್ನು ನಂದನ ಮನೆಯಲ್ಲಿ ಬಿಟ್ಟು, ಅಲ್ಲಿಂದ ಆಗತಾನೆ ಹುಟ್ಟಿದ ಹೆಣ್ಣು ಶಿಶುವನ್ನು ತಂದು, ದೇವಕಿಯ ಕೈಗೆ ಕೊಟ್ಟನೋ ಇಲ್ಲವೋ ವಸುದೇವ ಗೊಳ್ಳನೆ ಅಳಲಾರಂಭಿಸಿದ," ಎಂದು ಶುಕ ಹೇಳುತ್ತಿದ್ದಂತೆಯೇ, ಪರಿಕ್ಷಿತ್ ಮಹಾರಾಜ, "ಕೃಷ್ಣಾ! ಕೃಷ್ಣಾ!" ಎಂದು ಗಟ್ಟಿಯಾಗಿ ಕೂಗಿಕೊಳ್ಳಲಾರಂಭಿಸಿದ. ಏನಾಯಿತೋ ಎಂದು ಎಲ್ಲರೂ ಹತ್ತಿರ ಬಂದು ನೋಡಲು, ಒಂದು ಸರ್ಪ ಅವನ ಬಲಗಾಲು ಹೆಬ್ಬೆರಳನ್ನು ಕಚ್ಚಿ ಸರಸರನೆ ಹೋಗುತ್ತಿದ್ದುದನ್ನು ನೋಡಿದರು. ಮಹಾರಾಜನಿಗೆ ಇದು ಅಂತ್ಯಕಾಲವೆಂದು ತಿಳಿದು ಎಲ್ಲರೂ, "ಕೃಷ್ಣಾ! ದ್ವಾರಕಾವಾಸಾ! ಬೃಂದಾವನ ವಿಹಾರೀ," ಎಂದು ಸ್ಮರಣೆ ಮಾಡಲಾರಂಭಿಸಿದರು. "ಕೃಷ್ಣಾ! ಕೃಷ್ಣಾ! ಕೃಷ್ಣಾ!" ಎನ್ನುತ್ತಾ ಮಹಾರಾಜ ಕೆಳಗುರುಳಿದ. ಒಡನೆ, ಪಂಡಿತರು ವೇದಗಳನ್ನು ಪಠಿಸಿದರು. ಭಕ್ತರು ಭಜನೆ ಮಾಡಿದರು. ಋಷಿಗಳು ಜಪಧ್ಯಾನ ಪ್ರಾರಂಭಿಸಿದರು. ಶುಕ ಆನಂದ ಬಾಷ್ಪಗಳನ್ನು ಸುರಿಸುತ್ತಾ, "ಮಹಾರಾಜ ಗೋಪಾಲನನ್ನು ಸೇರಿದ," ಎಂದು ನೆರೆದಿದ್ದ ಎಲ್ಲ ಜನರಿಗೂ ತಿಳಿಸಿ, ಅವನ ಅಂತ್ಯಕ್ರಿಯೆಗಳ ಏರ್ಪಾಟು ಮಾಡುವಂತೆ ಹೇಳಿ, ಯಾರಿಗೂ ಕಾಣಿಸದಂತೆ ಹೊರಟುಹೋದ.

ವೇದವೆನ್ನುವ ವೃಕ್ಷದಿಂದ ಭಾಗವತವೆನ್ನುವ ಫಲವನ್ನು ಕಿತ್ತು ಜನರಿಗೆ ಕೊಟ್ಟ ಗಿಳಿಯೇ ಆ ಶುಕ. ದೊರೆತ ಈ ಫಲವನ್ನು ಎಲ್ಲರೂ ತಿಂದು ಅರಗಿಸಿಕೊಂಡು ಆತ್ಮಾನಂದ ಪಡೆಯಲಿ, ನಂದನಂದನನನ್ನು ಹೊಂದಲಿ.

✍ ಟಿಪ್ಪಣಿ

✍ ಟಿಪ್ಪಣಿ

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

'ಸಾಯಿ ಗೀತಾಂಜಲಿ', ಜೇ.ಪೀ. ನಗರ, ಬೆಂಗಳೂರು ೫೬೦೦೭೮ ✆ +91 94488 08670

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 1 | ಸತ್ಯಂ ಶಿವಂ ಸುಂದರಂ – ಭಾಗ ೧ | 120 | 38 | ಶ್ರೀ ಸಾಯಿ ಸಂಕೀರ್ತನ | 10 |
| 2 | ಸತ್ಯಂ ಶಿವಂ ಸುಂದರಂ – ಭಾಗ ೨ | 72 | 39 | ಶ್ರೀ ಸತ್ಯಸಾಯಿ ಎಜುಕೇರ್ | 10 |
| 3 | ಸತ್ಯಂ ಶಿವಂ ಸುಂದರಂ – ಭಾಗ ೩ | 25 | 40 | ಭಕ್ತರಿಗೆ ಶ್ರೀ ಸತ್ಯಸಾಯಿ ಎಜುಕೇರ್ | 10 |
| 4 | ಸತ್ಯಂ ಶಿವಂ ಸುಂದರಂ – ಭಾಗ ೪ | 26 | 41 | ಬಾಲ ವಿಕಾಸ – ೧ | 80 |
| 5 | ಸತ್ಯಂ ಶಿವಂ ಸುಂದರಂ – ಭಾಗ ೫ | 65 | 42 | ಬಾಲ ವಿಕಾಸ – ೨ | 55 |
| 6 | ಸತ್ಯಂ ಶಿವಂ ಸುಂದರಂ – ಭಾಗ ೬ | 105 | 43 | ಬಾಲ ವಿಕಾಸ – ೩ | 70 |
| 7 | ಸತ್ಯಂ ಶಿವಂ ಸುಂದರಂ – ಭಾಗ ೭ | 130 | 44 | ಬಾಲ ವಿಕಾಸ ೧–೩ರ ಅನುಬಂಧ | 20 |
| 8 | ಶ್ರೀ ಸತ್ಯಸಾಯಿ ವಾಣಿ – ಭಾಗ ೧ | 35 | 45 | ಬಾಲವಿಕಾಸ ಗುರುಗಳ ಕೈಪಿಡಿ | 15 |
| 9 | ಶ್ರೀ ಸತ್ಯಸಾಯಿ ವಾಣಿ – ಭಾಗ ೨ | 35 | 46 | ಈಶ್ವರಮ್ಮ | 40 |
| 10 | ಶ್ರೀ ಸತ್ಯಸಾಯಿ ವಾಣಿ – ಭಾಗ ೩ | 30 | 47 | ಶ್ರೀ ಕೃಷ್ಣ – ಶ್ರೀ ಸತ್ಯಸಾಯಿ | 40 |
| 11 | ಶ್ರೀ ಸತ್ಯಸಾಯಿ ವಾಣಿ – ಭಾಗ ೪ | 46 | 48 | ಸಾಧನಾ, ಅಂತರ್ಮುಖಿ ಯಾತ್ರೆ | 38 |
| 12 | ಶ್ರೀ ಸತ್ಯಸಾಯಿ ವಾಣಿ – ಭಾಗ ೫ | 53 | 49 | ಭರವಸೆಯ ಹೊಂಗಿರಣ | 32 |
| 13 | ಶ್ರೀ ಸತ್ಯಸಾಯಿ ವಾಣಿ – ಭಾಗ ೬ | 25 | 50 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | 30 |
| 14 | ಶ್ರೀ ಸತ್ಯಸಾಯಿ ವಾಣಿ – ಭಾಗ ೭ | 30 | 51 | ಪ್ರಶಾಂತಿ ನಿಲಯಂ | 8 |
| 15 | ಶ್ರೀ ಸತ್ಯಸಾಯಿ ವಾಣಿ – ಭಾಗ ೮ | 35 | 52 | ವಾಕ್ಯ–ವಿಭೂತಿ | 10 |
| 16 | ಸತ್ಯಸಾಯಿ ವಾಹಿನಿ | 55 | 53 | ಸ್ವಾಮಿಯೆಡೆಗೆ ತಡೆಯೋಟ | 8 |
| 17 | ವಿದ್ಯಾ ವಾಹಿನಿ | 20 | 54 | ಹೆತ್ತವರ–ಪಾಲಕತ್ವದ ಪಾತ್ರ | 10 |
| 18 | ಜ್ಞಾನ ವಾಹಿನಿ | 15 | 55 | ಶ್ರೀ ಗುರುಚರಣ | 15 |
| 19 | ಉಪನಿಷತ್ ವಾಹಿನಿ | 20 | 56 | ಸಾಯಿತ್ರೀ | 30 |
| 20 | ಧ್ಯಾನ ವಾಹಿನಿ | 20 | 57 | ಶ್ರೀ ಸತ್ಯಸಾಯಿ ಅಷ್ಟೋತ್ತರಶತ ರತ್ನಮಾಲೆ | 18 |
| 21 | ಪ್ರೇಮ ವಾಹಿನಿ | 20 | | | |
| 22 | ಪ್ರಶಾಂತಿ ವಾಹಿನಿ | 20 | 58 | ಜ್ಯೋತಿರ್ಧ್ಯಾನ | 13 |
| 23 | ಪ್ರಶ್ನೋತ್ತರ ವಾಹಿನಿ | 20 | 59 | ಭಗವಲ್ಲೀಲಾ | 35 |
| 24 | ಧರ್ಮ ವಾಹಿನಿ | 25 | 60 | ಚಮತ್ಕಾರ ವಾಣಿ | 15 |
| 25 | ಸಂದೇಹ ನಿವಾರಿಣಿ | 25 | 61 | ಕೋಽಹಂ ? ಸೋಽಹಂ ! | 15 |
| 26 | ಸೂತ್ರ ವಾಹಿನಿ | 20 | 62 | ನೀತಿ ಪಾಠಗಳು | 30 |
| 27 | ಲೀಲಾ ಕೈವಲ್ಯ ವಾಹಿನಿ | 10 | 63 | ಸಂಧ್ಯಾವಂದನ ವಿಧಿ | 10 |
| 28 | ಭಾಗವತ ವಾಹಿನಿ | 60 | 64 | ಭಜನೆಗಳು | 10 |
| 29 | ಗೀತಾ ವಾಹಿನಿ | 50 | 65 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ (ಸಾರ ಸಂಗ್ರಹ) | 11 |
| 30 | ರಾಮಕಥಾರಸ ವಾಹಿನಿ | 120 | | | |
| 31 | ಶ್ರೀ ಸತ್ಯಸಾಯಿ ಆನಂದದಾಯಿ | 50 | 66 | ಆತ್ಮಾವಲೋಕನ | 10 |
| 32 | ಶ್ರೀ ಸತ್ಯಸಾಯಿ ಆರಾಧನಾ ಸ್ತೋತ್ರ ಸೌರಭ | 12 | 67 | ಅವತಾರ ಘೋಷಣೆ | 12 |
| | | | 68 | ಶ್ರೀ ಸತ್ಯಸಾಯಿ ಪೂಜಾ ವಿಧಿ | 21 |
| 33 | ಶ್ರೀ ಸತ್ಯಸಾಯಿ ಸಂಸ್ಥೆ (ಭಾರತ) – ನಿಯಮ ಮತ್ತು ನಿಬಂಧನೆಗಳು | 40 | 69 | ರಸಪ್ರಶ್ನೆಗಳು ಶ್ರೀ ಸತ್ಯಸಾಯಿ ಬಾಬಾ | 20 |
| | | | 70 | ರಸಪ್ರಶ್ನೆಗಳು ರಾಮಾಯಣ | 16 |
| 34 | ಶ್ರೀ ಸತ್ಯಸಾಯಿ ದೃಷ್ಟಾಂತ ಸೌರಭ | 15 | 71 | ರಸಪ್ರಶ್ನೆಗಳು ಮಹಾಭಾರತ | 17 |
| 35 | ಸೂಕ್ತಿ ಸೌರಭ – ಭಾಗ ೧ | 10 | 72 | ರಸಪ್ರಶ್ನೆಗಳು ಭಾಗವತ | 17 |
| 36 | ಸೂಕ್ತಿ ಸೌರಭ – ಭಾಗ ೨ | 25 | 73 | ರಸಪ್ರಶ್ನೆಗಳು ಭಗವದ್ಗೀತೆ | 9 |
| 37 | ಸಾಯಿ ಭಜನೆಗೆ ಮಾರ್ಗದರ್ಶಿ ಸೂತ್ರಗಳು | 10 | 74 | ತ್ವಮೇವ ಮಾತಾ | 20 |
| | | | | ಮುಂದುವರಿದಿದೆ … | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

‘ಸಾಯಿ ಗೀತಾಂಜಲಿ’, ಜೇ.ಪೀ. ನಗರ, ಬೆಂಗಳೂರು ೫೬೦ ೦೭೮ ✆ +91 94488 08670

## ಪ್ರಕಟಣೆಗಳು

| # | ಶೀರ್ಷಿಕೆ | ₹ |
|---|---|---|
| 75 | ನನ್ನ ಆಧ್ಯಾತ್ಮಿಕ ದಿನಚರಿ | 10 |
| 76 | ಉತ್ಕೃಷ್ಟತೆಯೆಡೆಗೆ ನನ್ನ ವಿಕಾಸ | 8 |
| 77 | ಅಮರಪುರಿಯ ಆನಂದ ಯಾತ್ರೆ | 10 |
| 78 | ಪರಮ ವೈದ್ಯ | 28 |
| 79 | ಶ್ರೀ ಸತ್ಯಸಾಯಿ ಪರಮಸುಖದಾಯಿ | 45 |
| 80 | ಯುಗಾವತಾರಿ ಶ್ರೀ ಸತ್ಯಸಾಯಿ | 60 |
| 81 | ನನ್ನ ನೆಚ್ಚಿನ ಬಾಬಾ | 45 |
| 82 | ಸೇವೆಯೇ ಸಾಧನೆ | 31 |
| 83 | ಶ್ರೀ ಸತ್ಯಸಾಯಿ ಗೀತೆ | 36 |
| 84 | ವಿದ್ಯಾ ಸಂಸ್ಥೆಗಳಲ್ಲಿ ನೈತಿಕ ವಿದ್ಯೆಯ ಅವಶ್ಯಕತೆ | 10 |
| 85 | ವೇದ ಮಂಜರಿ | 60 |
| 86 | ವೇದ ಮಂತ್ರಗಳು (ಬಾಲವಿಕಾಸ ಮಕ್ಕಳಿಗಾಗಿ) | 30 |
| 87 | ಶ್ರೀ ಸತ್ಯಸಾಯಿ ಸಂಸ್ಥೆಗಳ ಮಾರ್ಗದರ್ಶಿ ಸೂತ್ರಗಳು | 25 |
| 88 | ಶ್ರೀ ಸತ್ಯಸಾಯಿ ಮಧುರ ಸ್ಮೃತಿ | 60 |
| 89 | ಭಾರತದ ಸಂತರು | 50 |
| 90 | ಶ್ರೀ ಸತ್ಯಸಾಯಿ ಮುರುಗನ ಕರುಣಾಮೃತ | 40 |
| 91 | ದಿವ್ಯ ಪಥ ಭಾಗ – ೧ | 50 |
| 92 | ಹರಿ ಭಜನ ಬಿನಾ | 30 |
| 93 | ಒಂದು ದಿವ್ಯ ಜೀವನ | 63 |
| 94 | ದಿವ್ಯ ತಪ | 40 |
| 95 | ಬಾಲ ವಿಕಾಸ ಮಕ್ಕಳ ನಾಟಕಗಳು | 65 |
| 96 | ಸತ್ಯಸಾಯಿ ಈಗಲೂ ಇದ್ದಾರೆ | 105 |
| 97 | Sri Sathya Sai, The Indweller | 15 |
| 98 | Guidelines for Sai Bhajans | 10 |
| 99 | Balavikas - 1 | 75 |
| 100 | Balavikas - 2 | 70 |
| 101 | Balavikas - 3 | * |
| 102 | Supplement to Balavikas 1 | 10 |
| 103 | Supplement to Balavikas 2 | 10 |
| 104 | Supplement to Balavikas 3 | 10 |
| 105 | Sri Sathya Sai Educare | 10 |
| 106 | Sai Educare for Devotees | 10 |
| 107 | Sandhyavandana Vidhi | 10 |
| 108 | Sainama Kirtana Kaliyuga Sadhana | 100 |
| 109 | Educare, Veda of Twenty First Century | 60 |
| 110 | Namo Namah Sri Guru Padukabyam | 60 |
| 111 | Sri Sathya Sai Balvikas: The Pathway to Excellence–2 | * |
| 112 | Brindamrutam | 225 |
| 113 | Sri Sathya Sai Madhura Smrithi | 90 |
| 114 | Bhagavallila | 35 |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.